ಎಂ.ಕೆ.ಇಂದಿರಾ – ಸಮಗ್ರ ಅಧ್ಯಯನ

ಡಾ.ಮಂದಾಕಿನಿ ಪುರೋಹಿತ

ಪ್ರಕಾಶಕರು:

ಹೇಮಂತ ಸಾಹಿತ್ಯ

ಬೆಂಗಳೂರು

ಎಂ. ಕೆ. ಇಂದಿರಾ–ಸಮಗ್ರ ಅಧ್ಯಯನ

ಡಾ|| ಮಂದಾಕಿನಿ ಪುರೋಹಿತ
ಎಂ.ಎ. ಪಿ.ಎಚ್.ಡಿ.

ಪ್ರಕಾಶಕರು :
ಹೇಮಂತ ಸಾಹಿತ್ಯ
೯೭೨. ಸಿ, ೪ನೇ ವಿಭಾಗ,
ರಾಜಾಜಿನಗರ, ಬೆಂಗಳೂರು – ೧೦

M. K. Indira–Samagra Adhyana: (Life and literature of Smt. M. K. Indira) by Dr. Mandhakini Purohit, M.A., Phd.
Published by: Hemanta Sahitya, 972 C, 4th 'E' Block,
Rajajinagar, Bangalore – 560 010

Pages: 376

ಮೊದಲ ಮುದ್ರಣ : ೧೯೯೧

ಬೆಲೆ : ೬೦ ರೂಪಾಯಿಗಳು.

ಮುದ್ರಕರು :
ಲೋಟಸ್ ಪ್ರಿಂಟರ್ಸ್
೩೨/೨೫, ೨ನೇ ಮುಖ್ಯ ರಸ್ತೆ,
ಕೈಗಾರಿಕಾ ನಗರ,
ಬೆಂಗಳೂರು – ೫೬೦ ೦೪೪.

ಅರ್ಪಣೆ

ನನ್ನ ವಿದ್ಯಾಗುರುಗಳಾದ
ಡಾ|| ಬಿ. ಸಿ. ಜವಳಿಯವರಿಗೆ

ಮುನ್ನುಡಿ

ಕೆಲವು ವರ್ಷಗಳ ಹಿಂದೆ ಡಾ॥ ಮಂದಾಕಿನಿ ಪುರೋಹಿತ ಅವರು ನನ್ನ ಮಾರ್ಗದರ್ಶನದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠದಲ್ಲಿ ಪಿ.ಎಚ್.ಡಿ. ಪದವಿಗೆ ಅಧ್ಯಯನ ಮಾಡಲು ಅಪೇಕ್ಷೆ ವ್ಯಕ್ತಪಡಿಸಿದಾಗ, ನಾನು ಅವರ ಸ್ವಭಾವ ಹಾಗೂ ಆಸಕ್ತಿಗಳಿಗನುಗುಣವಾಗಿ ಅವರಿಗೆ ಶ್ರೀಮತಿ ಎಂ. ಕೆ. ಇಂದಿರಾ ಅವರ ಕೃತಿಗಳ ಸಮಗ್ರ ಅಧ್ಯಯನ ಮಾಡಲು ಸೂಚಿಸಿದಾಗ ಅವರು ಅದನ್ನು ಸಂತೋಷದಿಂದ ಒಪ್ಪಿ, ಆ ಕಾರ್ಯವನ್ನುಅತ್ಯಂತ ಶ್ರದ್ಧೆಯಿಂದ ನೆರವೇರಿಸಿ, ನಮ್ಮ ವಿಶ್ವವಿದ್ಯಾನಿಲಯದಿಂದ ಪಿಎಚ್.ಡಿ. ಪದವಿ ಪಡೆದಿದ್ದಾರೆ. ಒಬ್ಬ ಲೇಖಕಿ ಇನ್ನೊಬ್ಬ ಲೇಖಕಿಯನ್ನು ಚೆನ್ನಾಗಿ ಅರಿತು ಅರ್ಥಮಾಡಿಕೊಳ್ಳಬಲ್ಲಳು ಎಂಬುದೇ ನನ್ನ ಉದ್ದೇಶ. ಆ ಉದ್ದೇಶ ಈ ಪ್ರಬಂಧದಲ್ಲಿ ಈಡೇರಿದೆ ಎಂದು ನಾನು ಭಾವಿಸುತ್ತೇನೆ. ಈ ವಿಷಯವನ್ನು ಆಯ್ಕೆಮಾಡಿಕೊಳ್ಳುವಾಗ, ಶ್ರೀಮತಿ ಎಂ. ಕೆ. ಇಂದಿರಾ ಅವರ ಕೃತಿ ಫಣಿಯಮ್ಮ, ಗೆಜ್ಜೆಯಪೂಜೆ ಮೊದಲಾದವು ನನ್ನ ಮೇಲೆ ಅಚ್ಚಳಿಯದ ಪ್ರಭಾವವನ್ನುಂಟುಮಾಡಿದ್ದವು. ಅಲ್ಲದೆ ಈ ಕಾಲದಲ್ಲಿ ಎಂದಿಗಿಂತ ಹೆಚ್ಚು ಸಂಖ್ಯೆಯಲ್ಲಿ ಮಹಿಳೆಯರು ಸಾಹಿತ್ಯದಲ್ಲಿ ಹಿರಿಯಸ್ಥಾನ ಪಡೆದುದರಿಂದ, ಅಂತಹರ ಸಾಧನೆಗಳನ್ನು ಇಂದಿನವರಿಗೆ ಮಾತ್ರವಲ್ಲ ಮುಂದಿನ ತಲೆಮಾರಿನವರಿಗೂ ತಿಳಿಯಪಡಿಸುವ ಸದುದ್ದೇಶದಿಂದ ಈ ವಿಷಯವನ್ನು ಅಧ್ಯಯನಕ್ಕೆ ಆರಿಸಲಾಯಿತು. ಶ್ರೀಮತಿ ಎಂ. ಕೆ. ಇಂದಿರಾ ತನ್ನ ಕಾಲದ ಸಮಾಜವನ್ನು, ಅದರಲ್ಲೂ ಮಲೆನಾಡಿನ ಜೀವನವನ್ನು, ಸ್ತ್ರೀಯರ ಕುಂದುಕೊರತೆಗಳನ್ನು ತೆರೆದಕಣ್ಣಿನಿಂದ ನೋಡಿ ಕನಿಕರ, ಕಳವಳಪಟ್ಟು, ಆ ಅನುಭವಗಳಿಗೆ ಕಾದಂಬರಿ, ಕಥಾ ಸ್ವರೂಪ ಕೊಟ್ಟಿದ್ದಾರೆ. ಅವರ ಕಾದಂಬರಿಗಳಲ್ಲಿರುವ ಅನುಭವಗಳೆಲ್ಲ ವಾಸ್ತವಿಕವಾದವುಗಳು. ಅವುಗಳಿಗೆ ನಮ್ಮ ಸಮಾಜ ತೋರುತ್ತಿದ್ದ ಅಸಡ್ಡೆ, ಅನಾದರ ಮೊದಲಾದವುಗಳನ್ನು ಎತ್ತಿತೋರಿಸಿದ್ದಾರೆ. ಅವರ ಕೃತಿಗಳು ಕೇವಲ ನಿರೂಪಣೆಯಾಗಿರದೆ ಕಲಾಕುಸುರಿನಿಂದ ಮೆರೆಯುತ್ತವೆ. ಸಮಕಾಲೀನ ಬರಹಗಾರ್ತಿಯ ಬದುಕು–ಬರಹಗಳನ್ನು ಪ್ರಾಮಾಣಿಕವಾಗಿ ಬೆಲೆಕಟ್ಟುವ ಪ್ರಯತ್ನವನ್ನಿಲ್ಲಿ ಮಾಡಲಾಗಿದೆ. ಶ್ರೀಮತಿ ಎಂ. ಕೆ. ಇಂದಿರಾ ಅವರ ಕೃತಿಗಳ ಅಧ್ಯಯನಕ್ಕೆ ಪೂರ್ವಭಾವಿಯಾಗಿ, ಅವರ ಜೀವನಚರಿತ್ರೆಯ ಹಲವು ಸಂಗತಿಗಳನ್ನು, ಲೇಖನ ಕೌಶಲಕ್ಕೆ ಪ್ರೇರಣೆ ನೀಡಿದ ಅಂಶಗಳನ್ನು, ಡಾ॥ ಮಂದಾಕಿನಿ ಪುರೋಹಿತ ಅವರು ಸುಮಾರು ಎರಡು ತಿಂಗಳು ಕಾಲ, ಶ್ರೀಮತಿ ಇಂದಿರಾ ಅವರ ಬಳಿಯೇ ಇದ್ದು, ಅವರ ತವರೂರು, ಗಂಡನ ಮನೆ ಎಲ್ಲವನ್ನೂ ಸಂದರ್ಶಿಸಿ, ಅವರೆಲ್ಲರಿಂದ ಮಾಹಿತಿ ಪಡೆದು ಬೇರೆಲ್ಲಿಯೂ ದೊರೆಯದ ಸಾಮಾಗ್ರಿಯನ್ನು ಮೊದಲಬಾರಿಗೆ ಈ ಅಧ್ಯಯನದ ಪ್ರಬಂಧದಲ್ಲಿ ತೋರಿದ್ದಾರೆ. ಡಾ॥ ಮಂದಾಕಿನಿ

ಅವರು ಪಟ್ಟ ಪರಿಶ್ರಮ ಸಾರ್ಥಕವಾಗಿದೆ. ಶ್ರೀಮತಿ ಎಂ. ಕೆ. ಇಂದಿರಾ ಅವರು ಪ್ರಬಂಧಕಾರರಿಗೆ ನೀಡಿದ ನೆರವು, ತೋರಿದವಾತ್ಸಲ್ಯ, ಉತ್ತಮಸಾಹಿತಿಯ ಯೋಗ್ಯ ಗುಣಗಳಾಗಿವೆ. ಕಾದಂಬರಿಗಳ ಅಧ್ಯಯನಕ್ಕೆ ಸರಿಯಾದ ಬೆಲೆಕಟ್ಟುವುದಕ್ಕೆ ಈ ಹಿನ್ನೆಲೆ ಬಹು ಉಪಯುಕ್ತ. ಸ್ವಾತಂತ್ರ್ಯಪೂರ್ವದ ಹಿನ್ನೆಲೆ, ಅದರ ಆದರ್ಶಗಳು, ಆ ಕಾಲದ ಬರಹಗಾರ್ತಿಯರನ್ನು ಇಲ್ಲಿ ಕೆಲವಮಟ್ಟಿಗೆ ಪರಿಚಯಿಸಲಾಗಿದೆ. ಇದು ಎಂ. ಕೆ. ಇಂದಿರಾ ಅವರ ಬದುಕಿನ ಹಿನ್ನೆಲೆ ಎತ್ತಿತೋರಿಸಲು ಸಹಾಯಕ.

ಎಂ. ಕೆ. ಇಂದಿರಾ ಅವರು ಕಾದಂಬರಿಗಳಲ್ಲಿ ವಿವಿಧ ಮನೋಧರ್ಮದ ವ್ಯಕ್ತಿಗಳ ಚಿತ್ರವನ್ನು ನೀಡುವುದರ ಮೂಲಕ, ಅವರ ವಿಲಾಸ, ಸರಳತೆ, ಕಲಾಭಿರುಚಿ, ದಿಟ್ಟತನ, ಮೊದಲಾದ ಗುಣಗಳನ್ನೂ, ಕೌಟುಂಬಿಕ ಕಾದಂಬರಿಗಳಲ್ಲಿ, ಸರಸದಾಂಪತ್ಯ, ಕುಟುಂಬದ ಸುಖ-ದುಃಖ, ಹೆಣ್ಣಿನ ಆಕಾಂಕ್ಷೆ, ಮಕ್ಕಳಿಲ್ಲದವರ ಕೊರಗು, ಭಗ್ನ ಪ್ರಣಯ, ಬಾಲ್ಯವಿವಾಹ, ಬಾಲ್ಯವಿಧವೆಯರ ಚಿತ್ರ, ಅಂತರ್ಜಾತೀಯ ವಿವಾಹದ ಸಮಸ್ಯೆ, ವೇಶ್ಯಾಸಮಸ್ಯೆ-ಇವೇ ಮೊದಲಾದ ಸ್ತ್ರೀ ಜೀವನದ ಹಲವು ಸಮಸ್ಯೆ ಗಳನ್ನು ಎಂ. ಕೆ. ಇಂದಿರಾ ಅವರು ಹೇಗೆ ಹೃದಯಂಗಮವಾಗಿ ಚಿತ್ರಿಸಿದ್ದಾರೆಂಬು ದನ್ನು ಈ ಕೃತಿಯಲ್ಲಿ ವಿವರಿಸಲಾಗಿದೆ. ಈ ಸಮಸ್ಯೆಗಳ ಬಗೆಗೆ ಅಧ್ಯಯನದಲ್ಲಿ ಸಹಾನುಭೂತಿ, ಗೌರವಗಳನ್ನು ತೋರಿಸಲಾಗಿದೆ. ಡಾ॥ ಮಂದಾಕಿನಿ ಪುರೋಹಿತ ಅವರು, ಕಾದಂಬರಿಕಾರ್ತಿಯ ಕೃತಿಗಳನ್ನು (ಕಥೆ ಮತ್ತು ಕಾದಂಬರಿ ಹಾಗೂ ಪ್ರವಾಸ ಬರಹ) ಸಮಗ್ರ ಅಧ್ಯಯನ ಮಾಡಿ, ಸೂಕ್ಷ್ಮವಾಗಿ ಅವಲೋಕಿಸಿ, ಶ್ರದ್ಧೆಯಿಂದ ಈ ಕೃತಿ ರಚಿಸಿದ್ದಾರೆ. ಲೇಖಕರಾದ ಡಾ॥ ಮಂದಾಕಿನಿ ಅವರು ಎಂ. ಕೆ. ಇಂದಿರಾ ಅವರ ಮಲೆನಾಡಿನ ಪ್ರೇಮ, ಜನಪದ ಕಲೆಗಳ ಪ್ರಭಾವ, ಅವರ ಶೈಲಿ ಇತ್ಯಾದಿ ಗಳನ್ನು ಸರಳ ಹಾಗೂ ಮನಹಿಡಿಯುವ ಶೈಲಿಯಲ್ಲಿ ನಿರೂಪಿಸಿದ್ದಾರೆ. ಈಗ ಈ ಕೃತಿ ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ಶ್ರೀಮತಿ ಎಂ. ಕೆ. ಇಂದಿರಾ ಅವರು ೭೫ನೆಯ ವರುಷದಲ್ಲಿ ಕಾಲಿಡುವ ಸಂದರ್ಭದಲ್ಲಿ ಪ್ರಕಟಗೊಳ್ಳುವ ಸುಯೋಗ ಪಡೆದುದು ಲೇಖಕರ ಪರಿಶ್ರಮಕ್ಕೆ ಸಾರ್ಥಕತೆ ಹಾಗೂ ತೃಪ್ತಿತಂದಿದೆ. ಡಾ॥ ಮಂದಾಕಿನಿ ಪುರೋಹಿತರ ಈ ಕೃತಿ ಓದುಗರ ಮೆಚ್ಚುಗೆಯನ್ನು ಪಡೆಯುವುದೆಂದು ಭಾವಿಸುತ್ತೇನೆ ; ಈ ಸಂದರ್ಭದಲ್ಲಿ ಡಾ॥ ಮಂದಾಕಿನಿ ಅವರಿಗೆ ಶುಭ ಹಾರೈಸುತ್ತೇನೆ.

ಶ್ರೀಮತಿ ಎಂ. ಕೆ. ಇಂದಿರಾ ಅವರು ನಿಡಿಬಾಳನ್ನು ಬಾಳಿ, ಕನ್ನಡ ವಾಗ್ದೇವತೆಗೆ ಇನ್ನೂ ಹಲವು ಹಾರಗಳನ್ನರ್ಪಿಸಲೆಂದು ಹಾರೈಸುತ್ತೇನೆ.

'ತೇಜಸ್ವಿ'-ಕಲ್ಯಾಣನಗರ
ಧಾರವಾಡ-೭ ಡಾ॥ ಬಿ. ಸಿ. ಜವಳಿ
೧೭-೪-೯೧

ನಿವೇದನೆ

ಶ್ರೀಮತಿ ಎಂ. ಕೆ. ಇಂದಿರಾ ಕನ್ನಡದ ಅಪರೂಪದ ಹಿರಿಯ ಲೇಖಕಿ. ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಇಂದಿರಾ ಅವರಿಗೆ ವಿಶಿಷ್ಟವಾದ ಸ್ಥಾನವಿದೆ.

ಮಾಧ್ಯಮಿಕ ಎರಡನೆಯ ತರಗತಿಯವರೆಗೆ ಓದಿದ ಇಂದಿರಾ ಗೃಹಿಣಿಯಾಗಿ ೭೫ ವರ್ಷಗಳ ತುಂಬು ಬಾಳನ್ನು ಬಾಳಿದವರು. ನಲವತ್ತಾರನೆಯ ವಯಸ್ಸಿನಲ್ಲಿ ಮೊಮ್ಮಗಳನ್ನು ಕಂಡ ನಂತರ ಕಾದಂಬರಿ ಕ್ಷೇತ್ರವನ್ನು ಪ್ರವೇಶಿಸಿದ ಇಂದಿರಾ ಅವರ ಕೃತಿಗಳಲ್ಲಿ ಪರಿಪಕ್ವವಾದ ಜೀವನಾನುಭವವಿದೆ.

ಮಲೆನಾಡಿನ ಪ್ರಾತಿನಿಧಿಕ ಲೇಖಕಿ ಇಂದಿರಾ ತಮ್ಮದೇ ಆದ ವಿಶಿಷ್ಟ ಶೈಲಿಯಿಂದ ಕನ್ನಡಿಗರಿಗೆ ಆತ್ಮೀಯರಾಗಿದ್ದಾರೆ. ಸ್ತ್ರೀಯರ ಆಶೆ–ಆಕ್ಷಾಂಕ್ಷೆಗಳಿಗೆ ನೋವು–ನಲಿವುಗಳಿಗೆ ಸ್ಪಂದಿಸಿದ್ದಾರೆ. ಸ್ತ್ರೀಯರ ಸಮಸ್ಯೆಗಳನ್ನು ತಮ್ಮ ಕೃತಿಗಳಲ್ಲಿ ವಿಶ್ಲೇಷಿಸಿದ್ದಾರೆ.

ಸಮಾಜದ ಆಗು–ಹೋಗುಗಳನ್ನು; ರೀತಿ ನೀತಿಗಳನ್ನು ತಮ್ಮ ಕೃತಿಗಳಲ್ಲಿ ಚಿತ್ರಿಸಿದ್ದಾರೆ. ಸಮಾಜದ ಗಂಭೀರ ಸಮಸ್ಯೆಗಳನ್ನು ಕುರಿತು ಚಿಂತನೆ ನಡೆಸಿದ್ದಾರೆ. ತಮ್ಮ ಕೃತಿಗಳ ಮೂಲಕ ಕನ್ನಡ ಸಾಹಿತ್ಯಕ್ಕೆ ಅವರು ನೀಡಿದ ಕೊಡುಗೆ ಅಮೂಲ್ಯವಾಗಿದೆ.

ಹೀಗಿದ್ದೂ ಅವರನ್ನು ಕುರಿತು ಒಂದಾದರೂ ಅಭ್ಯಾಸಪೂರ್ಣ ಕೃತಿ ಪ್ರಕಟವಾಗಿರಲಿಲ್ಲ. ಈ ಅಗತ್ಯವನ್ನು ಮನಗಂಡು ೧೯೮೧ರಲ್ಲಿ ಡಾ॥ ಬಿ. ಸಿ. ಜವಳಿಯವರ ಮಾರ್ಗದರ್ಶನದಲ್ಲಿ ಸಂಶೋಧನೆಯನ್ನು ಪ್ರಾರಂಭಿಸಿದೆನು. **"ಶ್ರೀಮತಿ ಎಂ. ಕೆ. ಇಂದಿರಾ ಅವರ ಕಾದಂಬರಿಗಳು"** ಈ ಮಹಾಪ್ರಬಂಧಕ್ಕೆ ೧೯೮೭ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಲಭಿಸಿತು. ಈ ಪ್ರಬಂಧವೇ ಹಲವು ಮಾರ್ಪಾಟುಗಳೊಡನೆ **"ಎಂ. ಕೆ. ಇಂದಿರಾ – ಸಮಗ್ರ ಅಧ್ಯಯನ"**ವಾಗಿ ಇದೀಗ ಬೆಳಕಿಗೆ ಬರುತ್ತಿದೆ. ೧೯೮೫ರವರೆಗೆ ಪ್ರಕಟವಾದ ಇಂದಿರಾ ಅವರ ಎಲ್ಲ ಕೃತಿಗಳ ವಿವೇಚನೆಯನ್ನು ಈ ಗ್ರಂಥದಲ್ಲಿ ಮಾಡಲಾಗಿದೆ.

ಪುರುಷ ಪ್ರಧಾನ ಸಮಾಜದಲ್ಲಿ ಬೆಳೆದು ಬಂದಿರುವ ಸ್ತ್ರೀ ಸಾಹಿತ್ಯಕ್ಕೆ ತನ್ನದೇ ಆದ ವಿಶಿಷ್ಟ ಸಂವೇದನೆಗಳಿರುತ್ತವೆ. ಆದ್ದರಿಂದ ಸ್ತ್ರೀ ಸಾಹಿತ್ಯವನ್ನು ವಿಮರ್ಶಿಸಿ; ವಿಶ್ಲೇಷಿಸಿ ಹೊಸ ಚಾಲನೆ ನೀಡುವ ಅಗತ್ಯವೂ ಇರುವದರಿಂದ ಈ ಅಧ್ಯಯನ ಕೈಗೊಂಡುದು ಹೆಚ್ಚು ಪ್ರಯೋಜನಕಾರಿಯಾಗಬಲ್ಲದು ಎಂದು ಭಾವಿಸಿದ್ದೇನೆ.

ಈ ಗ್ರಂಥದಲ್ಲಿ ಎಂ. ಕೆ. ಇಂದಿರಾ ಅವರ ಕಾದಂಬರಿಗಳ ಅಧ್ಯಯನಕ್ಕೆ ಹಿನ್ನೆಲೆಯಾಗಿ ಆಧುನಿಕ ಕಾಲದಲ್ಲಿ ಸ್ವಾತಂತ್ರ್ಯಪೂರ್ವದ ಸಮಾಜದಲ್ಲಿ ಮಹಿಳೆಯರಿಗಿದ್ದ ಸ್ಥಿತಿ–ಗತಿ ; ಅವರ ವಿದ್ಯಾಭ್ಯಾಸದ ಪ್ರಗತಿ ಹಾಗೂ ಕನ್ನಡ ಕಾದಂಬರಿಯ ಬೆಳವಣಿಗೆಯನ್ನು ಕುರಿತು ವಿವೇಚಿಸಲಾಗಿದೆ. ಸ್ವಾತಂತ್ರ್ಯದ ನಂತರ ಮಹಿಳೆಯರ ಸಾಮಾಜಿಕ ಸ್ಥಾನ–ಮಾನದಲ್ಲಾದ ಬದಲಾವಣೆ ; ಹಾಗೆಯೇ ಕನ್ನಡ ಲೇಖಕಿಯರ ಸಾಹಿತ್ಯ ರಚನೆಗೆ ಪ್ರೇರಣೆಗಳೇನು ! ಎಂಬುದನ್ನು 'ಆಧುನಿಕ ಕನ್ನಡದಲ್ಲಿ ಮಹಿಳಾ ಸಾಹಿತ್ಯ' ಎಂಬ ಮೊದಲನೆಯ ಅಧ್ಯಾಯದಲ್ಲಿ ಗುರುತಿಸಲಾಗಿದೆ.

ಇಂದಿರಾ ಅವರನ್ನು ಸಂದರ್ಶಿಸಿ ಅವರೊಡನೆ ಕೆಲಕಾಲ ಇದ್ದು ಅವರ ಮನೆತನ, ಬಾಲ್ಯಜೀವನ, ಶಿಕ್ಷಣ, ಮದುವೆ, ಸಾಂಸಾರಿಕ ಜೀವನ ಇವೇ ಮೊದಲಾದ ಜೀವನದ ಮಹತ್ವದ ಘಟ್ಟಗಳನ್ನು ಅವರ ಕೃತಿಗಳ ಅಧ್ಯಯನಕ್ಕೆ ಪೂರಕವಾಗಿ ತಿಳಿದುಕೊಳ್ಳುವ ಪ್ರಯತ್ನವನ್ನಿಲ್ಲಿ ಮಾಡಿದ್ದೇನೆ. ಕಥಾವಸ್ತುವಿಗನುಗುಣವಾಗಿ ಅವರ ಕಾದಂಬರಿಗಳನ್ನು ವರ್ಗೀಕರಿಸಿ ಪರಿಶೀಲಿಸಿದ್ದೇನೆ. ವಿವೇಚನೆ ಮಾಡಿದ್ದೇನೆ.

ಇದುವರೆಗೆ ಅವರು ಬರೆದ ಕಥಾಸಂಕಲನ ಹಾಗೂ ಮತ್ತಿತರ ಕೃತಿಗಳನ್ನು ಸಮೀಕ್ಷೆ ಮಾಡಿದ್ದೇನೆ.

ಅವರ ಕಾದಂಬರಿಗಳಲ್ಲಿಯ ಪಾತ್ರಗಳು ಹಾಗೂ ಅವರ ಶೈಲಿಯ ವೈಶಿಷ್ಟ್ಯ ಅವರ ಮನೋಧರ್ಮ ಹಾಗೂ ಜೀವನದೃಷ್ಟಿಯನ್ನು ಕುರಿತು ಅವರ ಕೃತಿಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿದ್ದೇನೆ.

ಅವರ ಕೃತಿಗಳಲ್ಲಿರುವ ಮಹತಿಯನ್ನು ಗುರುತಿಸಿ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಇಂದಿರಾ ಅವರ ಸ್ಥಾನವನ್ನು ನಿರ್ಧರಿಸುವ ಪ್ರಯತ್ನವನ್ನು **"ಎಂ. ಕೆ. ಇಂದಿರಾ–ಸಮಗ್ರ ಅಧ್ಯಯನ"** ಗ್ರಂಥದಲ್ಲಿ ಮಾಡಲಾಗಿದೆ.

ಈ ಅಧ್ಯಯನಕ್ಕೆ ಪ್ರೇರಣೆ ನೀಡಿದವರು ನನ್ನ ವಿದ್ಯಾಗುರುಗಳಾದ ಡಾ॥ ಬಿ.ಸಿ. ಜವಳಿ ಹಾಗೂ ಡಾ॥ ದೇವೇಂದ್ರಕುಮಾರ ಹಕಾರಿಯವರು. ಇವರಿಬ್ಬರಿಗೂ ನನ್ನ ವಿನಮ್ರ ನಮನಗಳು ಮತ್ತು ಕೃತಜ್ಞತೆಗಳು. ಇದೇ ರೀತಿ ನನ್ನ ಸಾಹಿತ್ಯಾಸಕ್ತಿಗೆ, ಅಧ್ಯಯನಕ್ಕೆ ಪ್ರೋತ್ಸಾಹ ನೀಡಿದವರು ಗುರುಗಳಾದ ಡಾ॥ ಎಂ. ಎಂ. ಕಲಬುರ್ಗಿ ಹಾಗೂ ಡಾ॥ ಎಸ್. ಎಂ. ವೃಷಭೇಂದ್ರಸ್ವಾಮಿಯವರು. ಅವರಿಗೆ ನನ್ನ ನಮನಗಳು ಹಾಗೂ ಕೃತಜ್ಞತೆಗಳು.

ನಾನು ಅಧ್ಯಯನ ಪ್ರಾರಂಭಿಸಿದಾಗಿನಿಂದ ಇಂದಿನವರೆಗೂ ಎಂ. ಕೆ. ಇಂದಿರಾ ಅವರು ತೋರಿದ ಅಪರೂಪದ ಅಂತಃಕರಣಕ್ಕೆ ಅವರು ನೀಡಿದ ಸಹಕಾರಕ್ಕೆ ನನ್ನ ಅನಂತ ನಮಸ್ಕಾರಗಳು.

ನಾನು ಪ್ರಬಂಧದ ಬರವಣಿಗೆಯನ್ನು ಪ್ರಾರಂಭಿಸಿದಾಗ ಕನ್ನಡದ ಹಿರಿಯ ಸಂಶೋಧಕರೂ, ವಿಮರ್ಶಕರೂ ಆಗಿರುವ ಡಾ॥ ರಂ॥ ಶ್ರೀ. ಮುಗಳಿ, ಪ್ರೊ॥ ಎಲ್. ಎಸ್. ಶೇಷಗಿರಿರಾವ್, ಪ್ರೊ॥ ಕೀರ್ತಿನಾಥ ಕುರ್ತಕೋಟಿ, ವಿ. ಗ. ನಾಯಕ್ ಇವರು ಇಂದಿರಾ ಅವರ ಸಾಹಿತ್ಯದ ಬಗೆಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ. ಲೇಖನಗಳನ್ನು ಕಳುಹಿಸಿ ಮಾಹಿತಿ ನೀಡಿದ್ದಾರೆ. ಈ ಎಲ್ಲ ಸಹೃದಯ ವಿದ್ವಾಂಸರಿಗೆ ನಾನು ಋಣಿಯಾಗಿದ್ದೇನೆ.

ಎಂ. ಕೆ. ಇಂದಿರಾ ಅವರ ಭಾವನವರ ಮಗ ಎಂ. ಎಸ್. ರಾಮಸ್ವಾಮಿಯವರೂ ಇಂದಿರಾ ಅವರ ಬಗ್ಗೆ ಕೆಲವು ಮಾಹಿತಿ ಒದಗಿಸಿದ್ದಾರೆ. ಅವರಿಗೂ ನನ್ನ ಕೃತಜ್ಞತೆಗಳು.

ಹಿರಿಯ ಲೇಖಕಿಯರಾದ ಡಾ॥ ಅನುಪಮಾ ನಿರಂಜನ, ವಾಣಿ, ಎ. ಪಂಕಜ, ಪ್ರೇಮಾಭಟ್, ಎಚ್. ಎಸ್. ಪಾರ್ವತಿ, ಶಾಂತಾದೇವಿ ಮಾಳವಾಡ ಇವರೆಲ್ಲರೂ ಇಂದಿರಾ ಅವರ ವ್ಯಕ್ತಿತ್ವ ಹಾಗೂ ಸಾಹಿತ್ಯವನ್ನು ಕುರಿತು ತಿಳಿದುಕೊಳ್ಳಲು ನೆರವಾಗಿದ್ದಾರೆ. ಇವರೆಲ್ಲರಿಗೂ ನಾನು ಕೃತಜ್ಞಳಾಗಿದ್ದೇನೆ.

ಎಂ. ಕೆ. ಇಂದಿರಾ ಅವರಿಗೆ ೭೫ ತುಂಬುವ ಸಂದರ್ಭದಲ್ಲಿ ಈ ಗ್ರಂಥವನ್ನು ಬೆಳಕಿಗೆ ತರಲು ಹೇಮಂತ ಸಾಹಿತ್ಯದ ಶ್ರೀ ಎಂ. ವೆಂಕಟೇಶ ಅವರು ಮುಂದಾಗಿದ್ದಾರೆ. "ಈ ಪುಸ್ತಕವು ಅಭಿನಂದನ ಸಮಾರಂಭದ ದಿನವೇ ಬಿಡುಗಡೆಯಾದರೆ ಬಹಳ ಅರ್ಥವತ್ತಾಗಿರುತ್ತದೆ. ಪುಸ್ತಕ ಬೇಗನೆ ಬರಲಿ" ಎಂದು ಹಾರೈಸಿ, ನನ್ನನ್ನು ಈ ದಿಶೆಯಲ್ಲಿ ಕಾರ್ಯಪ್ರವೃತ್ತಳನ್ನಾಗಿ ಮಾಡಿದ ಹಿರಿಯ ಸಾಹಿತಿಗಳಾದ ಡಾ॥ ಹಾ. ಮಾ. ನಾಯಕ, ಡಾ॥ ವರದರಾಜ ಹುಯಿಲಗೋಳ, ಹಾಗೂ ಡಾ॥ ವಾಮನ ಬೇಂದ್ರೆ ಇವರೆಲ್ಲ ನನ್ನ ಮೇಲಿಟ್ಟ ಅಂತಃಕರಣಕ್ಕೆ; ಪ್ರೀತಿ, ವಿಶ್ವಾಸಕ್ಕೆ ನಾನು ಅವರಿಗೆ ಋಣಿಯಾಗಿದ್ದೇನೆ.

ಹಿರಿಯ ವಿದ್ವಾಂಸರಾದ ಡಾ॥ ಹಂಪ ನಾಗರಾಜಯ್ಯ ಹಾಗೂ ಡಾ॥ ಬಿ. ರಾಮಚಂದ್ರರಾವ್ ಇವರು ಉಪಯುಕ್ತ ಸಲಹೆ ಸೂಚನೆಗಳನ್ನು ನೀಡಿ ಪ್ರೋತ್ಸಾಹಿಸಿದ್ದಾರೆ. ಇವರಿಗೆ ನನ್ನ ಕೃತಜ್ಞತೆಗಳು.

ನನ್ನ ಪತಿ ಶ್ರೀಕಾಂತ ಅವರೂ ಹಾಗೂ ನನ್ನ ಸಹೋದರಿ ಪುಷ್ಪಾ ಇವರು ನೀಡಿದ ಸಹಕಾರವನ್ನು ನೆನೆಯುವದು ನನ್ನ ಮೊದಲ ಕರ್ತವ್ಯವಾಗಿದೆ.

ಅಚ್ಚಿನ ಕಾರ್ಯ ತೀವ್ರಗತಿಯಿಂದ ನಡೆಯುತ್ತಿದ್ದಾಗ ಸೋದರ ಶ್ರೀ ಗಿರೀಶ ತೆಂಬದಮನಿ ಅಕಾರಾದಿ ಸೂಚಿಯನ್ನು ಸಿದ್ಧಪಡಿಸಲು ನೆರವಾಗಿದ್ದಾರೆ. ಅವರಿಗೆ ನನ್ನ ವಂದನೆಗಳು.

ನನ್ನ ಪ್ರಬಂಧವನ್ನು ಪುಸ್ತಕರೂಪದಲ್ಲಿ ಪ್ರಕಟಿಸಲು ಮುಂದಾದ ಹೇಮಂತ ಸಾಹಿತ್ಯದ ಶ್ರೀ ಎಂ. ವೆಂಕಟೇಶ ಅವರ ಸಾಹಸ ದೊಡ್ಡದು. ಅವರ ವಿಶ್ವಾಸಕ್ಕೆ ನಾನು ಕೃತಜ್ಞಳಾಗಿದ್ದೇನೆ.

ನಾನಿರುವದು ಧಾರವಾಡದಲ್ಲಿ. ಪುಸ್ತಕ ಅಚ್ಚಾಗುತ್ತಿರುವದು ಬೆಂಗಳೂರಲ್ಲಿ. ಹೀಗಿದ್ದಾಗ 'ಲೋಟಸ್ ಪ್ರಿಂಟರ್ಸ್' ಒಡೆಯರಾದ ಶ್ರೀ ಡಿ. ಎಸ್. ಪಾಟೀಲರು ತಮ್ಮದೇ ಪುಸ್ತಕ ಎನ್ನುವಷ್ಟು ಶ್ರದ್ಧೆಯಿಂದ ಅಚ್ಚಿನ ಕಾರ್ಯ ನಿರ್ವಹಿಸಿದ್ದಾರೆ. ಅವರ ಸಹನೆಗೆ ನನ್ನ ನಮಸ್ಕಾರಗಳು, ಅವರ ಪ್ರೆಸ್ಸಿನ ಸಿಬ್ಬಂದಿ ವರ್ಗದವರಿಗೂ ನನ್ನ ವಂದನೆಗಳು.

ತ್ವರಿತವಾಗಿ ಅಚ್ಚಾದ ನನ್ನ ಈ ಗ್ರಂಥದಲ್ಲಿ ಉಳಿದಿರುವ ಲೋಪ-ದೋಷ ಗಳನ್ನು ಮನ್ನಿಸಿ, ವಿದ್ವಾಂಸರು ಸಲಹೆ-ಸೂಚನೆ ನೀಡಬೇಕಾಗಿ ಕೋರುತ್ತೇನೆ. ಸಾಹಿತ್ಯಾಸಕ್ತರಿಗೆ ನನ್ನ ಈ ಗ್ರಂಥ ಉಪಯುಕ್ತವಾದರೆ ನನ್ನ ಶ್ರಮ ಸಾರ್ಥಕ.

ಏಪ್ರಿಲ್ ೨೮, ೧೯೯೧ ರಂದು ಎಂ. ಕೆ. ಇಂದಿರಾ ಅಭಿನಂದನ ಸಮಾರಂಭದಲ್ಲಿ ಅವರ ಅಭಿನಂದನ ಗ್ರಂಥ 'ಸುರಗಿ'ಯೊಂದಿಗೆ ನನ್ನ ಪ್ರೌಢ ಪ್ರಬಂಧ **"ಎಂ. ಕೆ. ಇಂದಿರಾ-ಸಮಗ್ರ ಅಧ್ಯಯನ"** ಬಿಡುಗಡೆಯಾಗುತ್ತಿರುವದು ಒಂದು ಸುಯೋಗ.

ಈ ಕಾರ್ಯಕ್ಕೆ ಸಹಕರಿಸಿದ ಎಲ್ಲ ಸಹೃದಯರಿಗೂ ನನ್ನ ನಮಸ್ಕಾರಗಳು.

ಏಪ್ರಿಲ್ ೨೫-೧೯೯೧
ಬೆಂಗಳೂರು.

ಮಂದಾಕಿನಿ ಪುರೋಹಿತ

ಪರಿವಿಡಿ

ಅಧ್ಯಾಯ-ಒಂದು ಪುಟ

ಆಧುನಿಕ ಕನ್ನಡದಲ್ಲಿ ಮಹಿಳಾ ಸಾಹಿತ್ಯ ೯/೩೪

ಕವಯಿತ್ರಿಯರ ಪರಂಪರೆ
ಆಧುನಿಕ ಕಾಲ ; ಸಾಮಾಜಿಕ ಮತ್ತು ರಾಜಕೀಯ ಹಿನ್ನೆಲೆ
ಸಮಾಜ ಸುಧಾರಕರು
ಸ್ತ್ರೀ ಶಿಕ್ಷಣ ಪ್ರಸಾರ ಮತ್ತು ಪ್ರಗತಿ
ಮಹಾತ್ಮಾಗಾಂಧೀಜಿ ಮತ್ತು ಸ್ವಾತಂತ್ರ್ಯ ಹೋರಾಟ
ಸಾಮಾಜಿಕ ಸ್ಥಿತ್ಯಂತರ
ಆಧುನಿಕ ಕನ್ನಡ ಸಾಹಿತ್ಯ
ಕಾದಂಬರಿ ಸಾಹಿತ್ಯದ ಬೆಳವಣಿಗೆ
ಮಹಿಳಾ ಸಾಹಿತ್ಯಕ್ಕೆ ಪ್ರೇರಣೆ
ಸ್ವಾತಂತ್ರ್ಯಪೂರ್ವದ ಲೇಖಕಿಯರು
ಸ್ವಾತಂತ್ರ್ಯೋತ್ತರ ಲೇಖಕಿಯರು
ಹಳೆಯ ತಲೆಮಾರಿನ ಕವಯಿತ್ರಿಯರು
ಮಹಿಳಾ ಸಾಹಿತ್ಯದ ಅವಲೋಕನ

ಅಧ್ಯಾಯ-ಎರಡು

ಎಂ. ಕೆ. ಇಂದಿರಾ ಅವರ ಜೀವನ ೩೫/೭೯

ಮನೆತನ, ಜನನ, ಬಾಲ್ಯ, ಗೃಹಿಣಿ ಇಂದಿರಾ
ತ್ರಿವೇಣಿಯವರೊಡನೆ ಸ್ನೇಹ, ಸಾಂಸಾರಿಕ ಜೀವನ,
ಅವರ ಜೀವನದ ಕೆಲವು ಘಟನೆಗಳು,
ಕಾದಂಬರಿಕಾರ್ತಿಯಾದ ವರ್ಷ ೧೯೬೩
ಅವರ ವ್ಯಕ್ತಿತ್ವ–ಸ್ವಭಾವ ; ಅವರ ಮಕ್ಕಳು.

ಅಧ್ಯಾಯ-ಮೂರು

ಕಾದಂಬರಿಗಳ ಪರಿಶೀಲನೆ

(ಅ) ವ್ಯಕ್ತಿಗಳ ಜೀವನ ಚಿತ್ರಣವೇ ಪ್ರಧಾನವಾದ ಕಾದಂಬರಿಗಳು, ೮೦/೧೧೪
ಜಾಲ ಹಾಗೂ ನಾಗವೀಣಾ, ಗಂಡ ಹಾಗೂ ಕೂಚುಭಟ್ಟ,
ಅಮರಾವತಿ, ಕಲಾದರ್ಶಿ ಮತ್ತು ಸೂತ್ರಧಾರಿ,
ಗಿರಿಬಾಲೆ, ಆತ್ಮಸಖಿ, ತಗ್ಗಿನಮನೆ ಸೀತೆ.

(ಬ) ಕೌಟುಂಬಿಕ ಕಾದಂಬರಿಗಳು ೧೧೫/೧೫೦
ರಸವಾಹಿನಿ ಹಾಗೂ ಮನ ತುಂಬಿದ ಮಡದಿ,
ಒಂದೇ ನಿಮಿಷ, ಹೆಣ್ಣಿನ ಆಕಾಂಕ್ಷೆ, ತಾಳಿದವರು,
ಶಾಂತಿಧಾಮ, ತುಂಗಭದ್ರ.

(ಕ) ಸಾಮಾಜಿಕ ಸಮಸ್ಯೆಯನ್ನೊಳಗೊಂಡ ಕಾದಂಬರಿಗಳು ೧೫೧/೨೪೮
ತಾಪದಿಂದ ತಂಪಿಗೆ, ವರ್ಣಲೀಲೆ, ಕತೆಗಾರ,
ಮನೋಮಂದಿರ, ಸುಖಾಂತ, ಹಸಿವು,
ಬಿದಿಗೆ ಚಂದ್ರಮ ಡೊಂಕು, ನೂರೊಂದು ಬಾಗಿಲು,
ಯಾರುಹಿತವರು, ಮುಸುಕು, ಹೂಬಾಣ, ಆಭರಣ,
ಪೂರ್ವಾಪರ, ಚಿದ್ವಿಲಾಸ, ಟುಲೆಟ್, ಮನೆ ಕೊಟ್ಟು ನೋಡಿ,
ಬ್ರಹ್ಮಚಾರಿ, ತಪೋವನದಲ್ಲಿ, ಜಾತಿಕೆಟ್ಟವಳು, ಗೆಜ್ಜೆ ಪೂಜೆ,
ಸದಾನಂದ, ಮಧುವನ, ಫಣಿಯಮ್ಮ.

ಅಧ್ಯಾಯ-ನಾಲ್ಕು
ಕಥಾ ಸಂಕಲನಗಳು ೨೪೯/೨೭೯
ನವರತ್ನ, ನವಜೀವನ, ಕವಲು,
ಸ್ಫೂರ್ತಿ, ಅಂಬರದ ಅಪ್ಸರೆ, ಕಲ್ಪನಾವಿಲಾಸ,
ಪವಾಡ, ಮೋಹನಮಾಲೆ, ಕನ್ಯಾಕುಮಾರಿಯರಿಗೆ,
ನಗಬೇಕು, ಅನುಭವಕುಂಜ (ಪ್ರವಾಸ ಕಥನ).

ಅಧ್ಯಾಯ-ಐದು
ಎಂ. ಕೆ. ಇಂದಿರಾ ಅವರ ಕಾದಂಬರಿಗಳಲ್ಲಿ ಮಲೆನಾಡಿನ ಜೀವನ ಚಿತ್ರ ೨೮೦/೨೯೫

ಅಧ್ಯಾಯ-ಆರು
ಇಂದಿರಾ ಅವರ ಕಾದಂಬರಿಗಳ ಪಾತ್ರಗಳು ೨೯೬/೩೦೧

ಅಧ್ಯಾಯ-ಏಳು
ಶೈಲಿ ೩೦೨/೩೨೬

ಅಧ್ಯಾಯ-ಎಂಟು
ಎಂ. ಕೆ. ಇಂದಿರಾ ಅವರ ಜೀವನದೃಷ್ಟಿ ೩೨೭/೩೩೪

ಅಧ್ಯಾಯ-ಒಂಬತ್ತು
ಸಮಾರೋಪ ೩೩೫/೩೪೫

ಅನುಬಂಧಗಳು
I ಇಂದಿರಾ ಅವರ ಜೀವನದ ಪ್ರಮುಖ ಘಟನೆಗಳು
II ಕೃತಿಗಳು
III ಸಹಾಯಕ ಸಾಹಿತ್ಯ
IV ಅಕಾರಾದಿ ಸೂಚಿ

ಅಧ್ಯಾಯ - ಒಂದು

ಆಧುನಿಕ ಕನ್ನಡದಲ್ಲಿ ಮಹಿಳಾ ಸಾಹಿತ್ಯ

ಕವಯಿತ್ರಿಯರ ಪರಂಪರೆ :

ಕನ್ನಡ ಸಾಹಿತ್ಯದ ಇತಿಹಾಸದುದ್ದಕ್ಕೂ ಕಣ್ಣು ಹಾಯಿಸಿದಾಗ ಹನ್ನೆರಡನೆಯ ಶತಮಾನದಷ್ಟು ಹಿಂದಿನಿಂದಲೇ ಮಹಿಳೆಯರು ಸಾಹಿತ್ಯ ರಚನೆಯಲ್ಲಿ ತೊಡಗಿದ್ದುದು ಕಂಡುಬರುತ್ತವೆ. 'ಕಂತಿ' ಎಂಬ 'ಕವಯಿತ್ರಿ' ಉಲ್ಲೇಖ ಹತಿಹಂಪನ ಸಮಸ್ಯಾ ಪೂರ್ತಿಯ ಪದ್ಯಗಳಿಂದ ತಿಳಿದುಬಂದಿರುತ್ತದೆ. ಅವಳ ಅಸ್ತಿತ್ವದ ಬಗೆಗೆ ಸಂಶೋಧಕರಲ್ಲಿ ವಿದ್ವಾಂಸರಲ್ಲಿ ಒಮ್ಮತವಿಲ್ಲ ;

ಧರ್ಮಶಾಸ್ತ್ರಗಳ ಸಂತತಿಯಲ್ಲಿ, ಸಾಮಾಜಿಕ ಕಟ್ಟುಪಾಡುಗಳಲ್ಲಿ ಬಂಧಿತಳಾದ ಮಹಿಳೆಗೆ, ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರ ಆಗಮನದಿಂದ ಜೀವನದ ಎಲ್ಲಾ ರಂಗಗಳೂ ಪುರುಷನಂತೆ ಗೌರವದ ಸ್ಥಾನ ಹಾಗೂ ಅವಕಾಶ, ಸೌಲಭ್ಯಗಳು ದೊರೆತ ಕಾರಣ, ಸಮಾಜದ ಎಲ್ಲ ವರ್ಗಗಳ, ವಿವಿಧ ವೃತ್ತಿಯ ಮಹಿಳೆಯರು ವಚನಕಾರ್ತಿಯರಾಗಿ ಬೆಳಕಿಗೆ ಬಂದರು. ಹನ್ನೆರಡನೆಯ ಶತಮಾನ ಸ್ತ್ರೀ ಸಾಹಿತ್ಯದ ಸುಗ್ಗಿಯಕಾಲ ವಚನಕಾರ್ತಿಯರಲ್ಲಿ ಅಕ್ಕಮಹಾದೇವಿ ಅಗ್ರಗಣ್ಯಳು. ಅವಳ ಬದುಕೇ ಸಂಪ್ರದಾಯದ ವಿರುದ್ಧ ನಡೆದ ಒಂದು ಹೋರಾಟ. ಹೀಗಾಗಿ ಅಕ್ಕಮಹಾದೇವಿ ಆ ಯುಗದ ಕ್ರಾಂತಿಕಾರಿಣಿ ವೀರ ವೀರಾಗಿಣಿ ಎನಿಸಿದ್ದಾಳೆ. 'ಮೋಳಿಗೆಯ ರಾಣಿ ಮಹಾದೇವಿ, ಹಡಪದ ಲಿಂಗಮ್ಮ, ಉರಿಲಿಂಗ ಪೆದ್ದಿಗಳ ಪತ್ನಿ ಕಾಳವ್ವೆ, ನೀಲಾಂಬಿಕೆ, ನಾಗಲಾಂಬಿಕೆ, ಗೊಗ್ಗವ್ವೆ ಕಿಮ್ಮವ್ವೆ, ವೀರಮ್ಮ, ಆಯ್ದಕ್ಕಿ ಲಕ್ಕಮ್ಮ, ರಾಯಮ್ಮ ಮುಕ್ತಾಯಕ್ಕ, ಬೊಂತಾದೇವಿ, ಲಕ್ಷ್ಮಮ್ಮ, ಕಲ್ಯಾಣಿಯಮ್ಮ, ಮಸಣ್ಣಮ್ಮ, ರೇಚವ್ವೆ, ಕಾಯಮ್ಮ, ಗುಡ್ಡವ್ವೆ, ಗಂಗಮ್ಮ, ಕನ್ನಡಿಕಾಯಕದ ರೆಮ್ಮವ್ವೆ ಇನ್ನೂ ಮುಂತಾದವರು ತಮ್ಮ ಅನುಭಾವದ ಸಂಪತ್ತನ್ನು ವಚನ ಮೂಲಕ ಅಭಿವ್ಯಕ್ತಿಸಿದ್ದಾರೆ.*

ಹನ್ನೆರಡನೆಯ ಶತಮಾನದ ವಚನಕಾರ್ತಿಯರ ನಂತರ ಮೈಸೂರೊಡೆಯರ ಕಾಲದವರೆಗೆ ಕವಯಿತ್ರಿಯರ ಹೆಸರು ಕೇಳಬರುವದಿಲ್ಲ. ಕರ್ನಾಟಕದಲ್ಲೂ ಪರಕೀಯರ ದಾಳಿಗಳಿಂದಾಗಿ ಸಾಮಾಜಿಕ ಜನಜೀವನದಲ್ಲಿ ಹಾಹಾಕಾರವುಂಟಾಗಿದ್ದರಿಂದ ಮಹಿಳೆಯ

---

* **ಹೆಚ್ಚಿನ ವಿವರಣೆಗಾಗಿ ನೋಡಿ : ಡಾ॥ ಸರೋಜಿನಿ ಮಹಿಷಿಯವರ 'ಕರ್ನಾಟಕದ ಕವಯಿತ್ರಿಯರು' 'ಕೌಮುದಿಮಹೋತ್ಸವ' ಎಂಬ ನಾಟಕ ಬರೆದಿರುವಳೆದು ಖ್ಯಾತಿ ಇರುವ 'ವಿಜಯಾಂಬಿಕೆ' (ವಿಜ್ಜಿಕೆ) ಪ್ರಾಚೀನಳು. ಆದರೆ ಅವಳ ಕಾಲ ದೇಶ ವ್ಯಕ್ತಿತ್ವದ ಬಗ್ಗೆ ನಿಶ್ಚಿತವಾದ ಅಭಿಪ್ರಾಯವಾವುದೂ ಇಲ್ಲ.**

ಜೀವನದ ಮೇಲಿದ್ದ ಕಟ್ಟುಪಾಡುಗಳು ಮತ್ತಷ್ಟು ಬಿಗಿಯಾದವು. ಹೀಗಾಗಿ ಮಹಿಳೆಯರು ಮೌನವಾಗಿಯೇ ಉಳಿದರೆಂದು ಹೇಳಬಹುದು.

ವಿಜಯನಗರ ರಾಜರ ಕಾಲಕ್ಕೆ ನಾಡಿಗೆಲ್ಲ ಮತ್ತೆ ಶಾಂತಿ ಸೌಖ್ಯ ನೆಲೆಸಿ, ಸಾಹಿತ್ಯ ಕಲೆಗಳಿಗೆ ಪ್ರೋತ್ಸಾಹ ದೊರೆತವು. ಈ ಕಾಲದಲ್ಲಿ ಹಿರಿಯ ಕಂಪಣನ ಪತ್ನಿ ಗಂಗಾದೇವಿ (ಕ್ರಿ. ಶ. ೧೩೬೦) 'ವೀರಕಂಪಣರಾಯ ಚರಿತ'ವನ್ನು ರಚಿಸಿದಳು. ಅಚ್ಯುತದೇವ ರಾಯನ ಪತ್ನಿ ತಿರುಮಲಾಂಬೆ ಕ್ರಿ. ೧೫೩೦ರಲ್ಲಿ 'ವರದಾಂಬಿಕಾ ಪರಿಣಯ' ಎಂಬ ಚಂಪೂ ಕಾವ್ಯವನ್ನು ರಚಿಸಿದ್ದಾಳೆ. ಇವರು ಸಂಸ್ಕೃತ ಸಾಹಿತ್ಯಕ್ಕೆ ತಮ್ಮ ಕೊಡುಗೆಯನ್ನಿತ್ತ ಕನ್ನಡತಿಯರು.

ಮೈಸೂರೊಡೆಯರ ಕಾಲದಲ್ಲಿ ಚಿಕ್ಕದೇವರಾಯನಿಂದ ಪ್ರೋತ್ಸಾಹಿತರಾದ ಹೊನ್ನಮ್ಮ, ಶೃಂಗಾರಮ್ಮ, ರಾಣಿ ಚೆಲುವಾಂಬೆ ಇವರು ಸಾಹಿತ್ಯ ರಚನೆ ಮಾಡಿದ್ದಾರೆ. ಹೊನ್ನಮ್ಮ 'ಹದಿಬದೆಯ ಧರ್ಮ'ವನ್ನು ಬರೆದಿದ್ದಾಳೆ. ಶೃಂಗಾರಮ್ಮ 'ಪದ್ಮಿನೀ ಕಲ್ಯಾಣವನ್ನೂ', ಚೆಲುವಾಂಬೆ 'ವರನಂದಿ ಕಲ್ಯಾಣಿ' ಹಾಗೂ 'ವೆಂಕಟಾಚಲ ಮಹಾತ್ಮೆ'ಯನ್ನು ಬರೆದಿದ್ದಾಳೆ.

ಹದಿನೆಂಟನೆಯ ಶತಮಾನದಲ್ಲಿ ಗಲಗಲಿ ಅವ್ವನವರು 'ಶೃಂಗಾರ ತಾರತಮ್ಯ' ಮೋರೆಗೆ ನೀರು ತಂದ ಹಾಡುಗಳನ್ನು ಬರೆದಿದ್ದಾರೆ. ಅವರ ಶಿಷ್ಯೆ 'ಭಾಗಮ್ಮ' ತೃತೀಯ ಸ್ಕಂದ ಭಾಗವತವನ್ನು ರಚಿಸಿದ್ದಾಳೆ.

ಹೆಳವನಕಟ್ಟೆ ಗಿರಿಯಮ್ಮ (೧೭೫೦) ಬ್ರಹ್ಮಕೊರವಂಜಿ, ಲವಕುಶರ ಕಾಳಗ, ಉದ್ದಾಲಿಕನ ಹಾಡು, ಶಂಕರಗಂಡನ ಕಥೆ, ಚಂದ್ರಹಾಸನ ಚರಿತೆ, ಸೀತಾಕಲ್ಯಾಣ ಇವುಗಳನ್ನು ರಚಿಸಿದ್ದಾಳೆ.

ಹತ್ತೊಂಬತ್ತನೆಯ ಶತಮಾನದಲ್ಲಿ ಹರಪನಹಳ್ಳಿ ಭೀಮವ್ವೆ ಕೃಷ್ಣದಾನಾಮೃತ, ನಳ ಚರಿತ್ರೆ, ಶುಕ್ರವಾರ ಶನಿವಾರದ ಹಾಡು, ಸುಧಾಮನ ಹಾಡುಗಳನ್ನು ರಚಿಸಿದ್ದಾಳೆ. ಜೆ. ರಾ. ಚೆಲ್ಲಮ್ಮ 'ರುಕ್ಮಿಣೀ ಪರಿಣಯ'ವನ್ನು ರಚಿಸಿದಳು. ಸಣ್ಣಭಡತಿ ಗಣಪಕ್ಕ 'ಗೋಕರ್ಣ-ಮಹಾತ್ಮ್ಯೆ'ಯನ್ನು ರಚಿಸಿದ ಕವಯಿತ್ರಿಯಾಗಿದ್ದಾಳೆ.

ಇವರೆಲ್ಲ ಸಂಪ್ರದಾಯದ ವಾತಾವರಣದಲ್ಲಿ ಹುಟ್ಟಿ ಸಂಸ್ಕಾರ ಭಕ್ತಿಯ ಬಲದಿಂದ ಸಂಪ್ರದಾಯದ ಹಾಡುಗಳನ್ನೂ, ಭಕ್ತಿಯ ಹಾಡುಗಳನ್ನೂ ಬರೆದವರು.[1]

---

1. ಜನಪದ ಸಾಹಿತ್ಯ ತೀರ ಪ್ರಾಚೀನವೂ ವಿಪುಲ, ವೈವಿಧ್ಯವೂ ಆಗಿದೆ.
ಅಜ್ಞಾತ ಜನಪದ ಕವಯಿತ್ರಿಯರ ಹೃದಯದ ಹಂಬಲ ಜಾನಪದ ಸಾಹಿತ್ಯದಲ್ಲಿ ಜೀವಂತವಾಗಿ ಮಿಡಿದಿದೆ.

ಆಧುನಿಕ ಕಾಲಕ್ಕೆ ಬಂದಂತೆ ಬ್ರಿಟಿಷರ ಆಗಮನದಿಂದ ಸಾಮಾಜಿಕ ರಾಜಕೀಯ ಹಿನ್ನೆಲೆಯಲ್ಲಿ ಸ್ತ್ರೀಯ ಸ್ಥಾನಮಾನದಲ್ಲೂ ಕ್ರಮೇಣ ಬದಲಾವಣೆಯಾಯಿತು. ಸಾಹಿತ್ಯ ರಂಗದಲ್ಲೂ ಬದಲಾವಣೆಯಾಗಿ ಸಾಂಪ್ರದಾಯಿಕ ಕಾವ್ಯಗಳು ಹಿಂದೆ ಬಿದ್ದು, ಪಾಶ್ಚಾತ್ಯ ಸಾಹಿತ್ಯದ ಹೊಸ ಪ್ರಕಾರಗಳು ಭಾರತದ ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿದವು. ಶ್ರೀಸಾಮಾನ್ಯನ ಬದುಕು ಸುತ್ತಲಿನ ಸಮಾಜ ಸಾಹಿತ್ಯದಲ್ಲಿ ಕಾಣಿಸಿಕೊಂಡಿತು. ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಸಾಹಿತ್ಯಕ ಹಿನ್ನೆಲೆಯಲ್ಲಿಯೇ ಆಧುನಿಕ ಕಾಲದಲ್ಲಿ ಮಹಿಳಾ ಸಾಹಿತ್ಯ ಹೊಸತನವನ್ನು ಪಡೆದು ಬೆಳವಣಿಗೆ ಹೊಂದತೊಡಗಿತು.

ಆಧುನಿಕ ಕಾಲ

ಸಾಮಾಜಿಕ ಮತ್ತು ರಾಜಕೀಯ ಹಿನ್ನೆಲೆ

ಬ್ರಿಟಿಷರ ಆಗಮನ :

ಭಾರತಕ್ಕೆ ಬ್ರಿಟಿಷರು ಬಂದು ಕಾಲೂರಿದ ವೇಳೆಗೆ ಭಾರತೀಯ ಸಮಾಜದಲ್ಲಿ ಅಜ್ಞಾನ, ಮೂಢನಂಬಿಕೆ, ಧರ್ಮದ ಹೆಸರಿನಲ್ಲಿ ಅನ್ಯಾಯ ಹೆಚ್ಚಾಗಿ ಕಂಡು ಬರುತ್ತಿದ್ದವು. ಸ್ತ್ರೀಯರ ಪರಿಸ್ಥಿತಿಯಂತೂ ಅತ್ಯಂತ ಶೋಚನೀಯವಾಗಿತ್ತು. ಬಾಲ್ಯ ವಿವಾಹ, ಸಹಗಮನ, ವೇಶ್ಯಾಪದ್ಧತಿಯಂತಹ ಅನಿಷ್ಟ ಪದ್ಧತಿಗಳು ರೂಢಿಯಲ್ಲಿದ್ದವು.

"ಒಂದು ಕೈಯಲ್ಲಿ ಬೈಬಲ್ ಅದರ ಬೆನ್ನಿಗೇ ಮುದ್ರಣಯಂತ್ರ ಇವನ್ನು ಹಿಡಿದುಕೊಂಡು ಬಂದ ಮಿಶನರಿಗಳು ಸ್ವಮತ ಪ್ರಸಾರಕಾರ್ಯದಲ್ಲಿ ತೊಡಗಿದರು. ಆ ನಿಮಿತ್ತದಿಂದ ಸಾಹಿತ್ಯ ಮತ್ತು ಶಿಕ್ಷಣಕ್ಷೇತ್ರದಲ್ಲಿ ನೇರವಾಗಿ ಪ್ರವೇಶಿಸಿದರು."[1]

ಪಾಶ್ಚಾತ್ಯ ಶಿಕ್ಷಣದ ಪ್ರಭಾವದಿಂದ ಭಾರತದ ಜನಜೀವನದ ಎಲ್ಲ ರಂಗಗಳಲ್ಲೂ, ಜನತೆಯಲ್ಲಿ ಸ್ವಾಭಿಮಾನ ಹಾಗೂ ಸ್ವತಂತ್ರ ವಿಚಾರಸರಣಿ ಕಾಣಿಸಿಕೊಂಡವು. ಎಲ್ಲ ವಿಚಾರಗಳಲ್ಲಿ ಚಿಕಿತ್ಸಕ ಮನೋವೃತ್ತಿ ಮೂಡಿತು. ಪಾಶ್ಚಾತ್ಯರ ವಿಚಾರಗಳು ನಮ್ಮ ನಾಡಿನ ವಿಚಾರವಂತರ ಮನಸ್ಸನ್ನು ತಟ್ಟಿದವು.

ಪಾಶ್ಚಾತ್ಯ ಶಿಕ್ಷಣದ ಪರಿಣಾಮವಾಗಿ ನಮ್ಮ ನಾಡಿನ ವಿಚಾರವಂತರು, ಸಮಾಜ ಸುಧಾರಕರು ಸಮಾಜದ ಓರೆ-ಕೋರೆಗಳನ್ನು ತಿದ್ದಲು ಮುಂದಾದರು. ಅದರಲ್ಲೂ ಮುಖ್ಯವಾಗಿ ಸ್ತ್ರೀಯರ ಸ್ಥಿತಿಗತಿಗಳನ್ನು ಸುಧಾರಿಸಲು ಕಂಕಣ ಕಟ್ಟಿದರು. ಇವರಲ್ಲಿ ರಾಜಾರಾಮಮೋಹನರಾಯರು ಪ್ರಮುಖರಾಗಿದ್ದಾರೆ.

---

1. ಡಾ॥ ಶ್ರೀನಿವಾಸ ಹಾವನೂರ 'ಹೊಸಗನ್ನಡದ ಅರುಣೋದಯ' ಪು. 14

ಸಮಾಜ ಸುಧಾರಕರು

ರಾಜಾರಾಮ್ ಮೋಹನರಾಯ್ :—(ಜನನ – ೧೭೭೨)

ಇವರು ಬಂಗಾಳದಲ್ಲಿ ಜನಿಸಿದಾಗ ಸಮಾಜದಲ್ಲಿ ಧರ್ಮ ಹಾಗೂ ಸಂಪ್ರದಾಯದ ಹೆಸರಿನಲ್ಲಿ ನಡೆಯುತ್ತಿದ್ದ ಅನ್ಯಾಯಗಳು ಮಿತಿಮೀರಿದ್ದವು.

"ಜಮೀನ್ದಾರಿ ಪದ್ಧತಿಯಿಂದ ರೈತ ಪಡುತ್ತಿದ್ದ ಕಷ್ಟ, ಸಾಮಾಜಿಕ ಕಟ್ಟಳೆಗಳಿಂದ ಸ್ತ್ರೀಯರು ಅನುಭವಿಸುತ್ತಿದ್ದ ಸಾವು – ನೋವುಗಳು ಹೇಳತೀರದವುಗಳಾಗಿದ್ದವು. ಇಂತಹ ಕಾಲದಲ್ಲಿ ಸಂಪ್ರದಾಯದ ನೊಗದಿಂದ ಕಳಚಿ ಮಾರ್ಗದರ್ಶನ ನೀಡಬಲ್ಲ ಆದರ್ಶವ್ಯಕ್ತಿಯ ನೆರವು ಅಗತ್ಯವಾಗಿದ್ದಿತು. ಇಂತಹ ಸಮಯದಲ್ಲಿ ರಾಜಾರಾಮ್ ಮೋಹನರಾಯರು ಭಾರತೀಯ ಸಮಾಜದಲ್ಲಿ ಬೆಳಕು ಸೂಸುವ ಸೂರ್ಯನಂತೆ ಕಾಣಿಸಿಕೊಂಡರು."[1]

ಸಂಪ್ರದಾಯಸ್ಥ ತಂದೆತಾಯಿಗಳ ವಿಚಾರಗಳು ಅವರ ಮನಸ್ಸಿನ ಮೇಲೆ ಪರಿಣಾಮವನ್ನುಂಟು ಮಾಡಿದವು. ಪ್ರತಿಭಾವಂತರಾದ ರಾಜಾರಾಮ್‌ಮೋಹನ ರಾಯರು ಉಚ್ಚ ಶಿಕ್ಷಣವನ್ನು ಪಡೆದರು. ಇದರಿಂದಾಗಿ ಅವರಲ್ಲಿ ಹೊಸ ದೃಷ್ಟಿಕೋನ ಬೆಳೆಯಿತು. ಮೋಹನರಾಯರು ಸ್ತ್ರೀಯರ ಹಕ್ಕು ಬಾಧ್ಯತೆಗಳಿಗಾಗಿ ಹೋರಾಟವನ್ನೇ ಪ್ರಾರಂಭಿಸಿದರು. ಕ್ರಿ. ಶ. ೧೮೨೮ರಲ್ಲಿ ಬ್ರಹ್ಮ ಸಮಾಜವನ್ನು ಸ್ಥಾಪಿಸಿದರು. ಸ್ತ್ರೀ ಏಳಿಗೆಯೇ ಅವರ ಪ್ರಮುಖ ಗುರಿಯಾಗಿದ್ದಿತು. ೧೮೨೯ರಲ್ಲಿ ಲಾರ್ಡ್‌ವಿಲಿಯಂ ಬೆಂಟಿಂಕನು ಸಹಗಮನ ಪದ್ಧತಿಯನ್ನು ವಿರೋಧಿಸಿದನು.

ಪತಿಯ ಶವದೊಡನೆ ಚಿತೆಯನ್ನೇರಿ ಪ್ರಾಣಬಿಡುತ್ತಿದ್ದ ಸತಿಯರನ್ನು ಸನಾತನಿಗಳು ಕೊಂಡಾಡುತ್ತಿದ್ದರು. ಸಮಾಜ ಸುಧಾರಣೆಯ ತೀವ್ರ ಕಳಕಳಿ ಹೊಂದಿದ್ದ ಬೆಂಟಿಂಕ್, ಶತಶತಮಾನಗಳಿಂದ ಬೇರು ಬಿಟ್ಟಿದ್ದ ಸಹಗಮನ ಪದ್ಧತಿಯನ್ನು ೧೮೨೯ರ ಡಿಸೆಂಬರ್ ೪ ರಂದು ಕಾಯಿದೆ ಮೂಲಕ ತೆಗೆದುಹಾಕಿದನು. ಈ ದಿಶೆಯಲ್ಲಿ ರಾಜಾರಾಮ್‌ಮೋಹನರಾಯರು ವಹಿಸಿದ ಪಾತ್ರ ಅಸಾಧಾರಣವೂ ಉಲ್ಲೇಖನಾರ್ಹವೂ ಆಗಿದೆ.

ಮಹಾದೇವ್ ಗೋವಿಂದ ರಾನಡೆ : (೧೮೪೨–೧೯೦೧)

ಇವರು ಪುಣೆಯಲ್ಲಿ ಪ್ರಾರ್ಥನಾ ಸಮಾಜವನ್ನು ಸ್ಥಾಪಿಸಿ ಪುರಾತನ ಹಿಂದೂ ಸಂಪ್ರದಾಯ ಮೂಢನಂಬಿಕೆಗಳ ವಿರುದ್ಧ ಹೋರಾಡಿದರು. ಸ್ತ್ರೀಯರ ಏಳಿಗೆಗಾಗಿ ಶ್ರಮಿಸಿದರು. ಬಾಲ್ಯವಿವಾಹ, ವರದಕ್ಷಿಣೆ, ಇವುಗಳನ್ನು ಖಂಡಿಸಿದರು. ಸ್ತ್ರೀ ಶಿಕ್ಷಣಕ್ಕಾಗಿ ಆಗ್ರಹ ಪಡಿಸಿದರು.

---

1. ಜಿ. ಎಸ್. ಭಟ್, 'ರಾಜಾರಾಮ್‌ಮೋಹನರಾಯ್'—ಪುಟ 2,

ಈಶ್ವರ ಚಂದ್ರವಿದ್ಯಾಸಾಗರ :

ಇವರು ಇನ್ನೊಬ್ಬ ಪ್ರಮುಖ ಸಮಾಜ ಸುಧಾರಕರು ವಿಧವಾವಿವಾಹ ಮತ್ತು ಸ್ತ್ರೀ ವಿದ್ಯಾಭ್ಯಾಸಕ್ಕಾಗಿ ಪ್ರಯತ್ನಿಸಿದರು.

"೧೮೪೯ರಲ್ಲಿ ಕಲ್ಕತ್ತೆಯಲ್ಲಿ ಮೊದಲನೆಯ ಬಾಲಿಕಾ ಪಾಠ ಶಾಲೆಯನ್ನು ಸ್ಥಾಪಿಸುವುದಕ್ಕೆ ಬಹುಮಟ್ಟಿಗೆ ಕಾರಣಕರ್ತರಾಗಿದ್ದಾರೆ. ತಮ್ಮ ಜೀವಿತ ಕಾಲದಲ್ಲಿ ಎಂದರೆ ೧೮೫೫ರಿಂದ ೧೮೫೮ನೆಯ ವರ್ಷಗಳ ಅವಧಿಯಲ್ಲಿ ಹೆಣ್ಣುಮಕ್ಕಳಿಗಾಗಿ ನಲ್ವತ್ತು ಶಾಲೆಗಳನ್ನು ಸ್ಥಾಪಿಸಿದರು. ವಿಧವಾ ವಿವಾಹವನ್ನು ೧೮೫೬ರ ಗೌರ್ನಮೆಂಟ್ ಆ್ಯಕ್ಟ್ ೧೫ರ ಮೂಲಕ ಜಾರಿಗೊಳಿಸುವುದರಲ್ಲಿ ಇವರು ವಹಿಸಿದ ಪಾತ್ರ ಗಮನಾರ್ಹವಾದದ್ದು."[1]

ಗೋಪಾಲಕೃಷ್ಣ ಗೋಖಲೆ :

1905ರಲ್ಲಿ ಗೋಖಲೆಯವರು 'ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ' ಯನ್ನು ಸ್ಥಾಪಿಸಿದರು. ಸ್ತ್ರೀ ವಿದ್ಯಾಭ್ಯಾಸ ಇವರ ಪ್ರಮುಖ ಗುರಿಯಾಗಿದ್ದಿತು.

ಕರ್ವೆ :

ಮಹರ್ಷಿ ಕರ್ವೆಯವರು ೧೮೯೬ರಲ್ಲಿ 'ಹಿಂದೂ ವಿಧವಾಶ್ರಮ' ಸ್ಥಾಪನೆ ಮಾಡಿದರು. ಸ್ತ್ರೀ ಏಳಿಗೆಗಾಗಿ ಶ್ರಮಿಸಿದವರಲ್ಲಿ ಇವರು ಅತ್ಯಂತ ಪ್ರಮುಖರು. ಸ್ತ್ರೀ ಶಿಕ್ಷಣ, ಬಾಲ್ಯ ವಿವಾಹ ನಿಷೇಧ, ವಿಧವಾ ಪುನರ್ ವಿವಾಹವನ್ನು ಪ್ರೋತ್ಸಾಹಿಸಿದರು.

ಪಂಡಿತೆ ರಮಾಬಾಯಿ :

ಇವರು ಪ್ರಗತಿಶೀಲ ಕುಟುಂಬದಲ್ಲಿ ಜನಿಸಿದರು. ಸಂಸ್ಕೃತದಲ್ಲಿ ಅಗಾಧವಾದ ಪಾಂಡಿತ್ಯವನ್ನು ಗಳಿಸಿದ್ದರು. ಭಾರತದ ನಾನಾ ಭಾಗಗಳಲ್ಲಿ ಸಂಚರಿಸಿ ಸ್ತ್ರೀ ಶಿಕ್ಷಣದ ಮಹತ್ವವನ್ನು ಒತ್ತಿ ಹೇಳಿದರು. ಸ್ತ್ರೀ ಶಿಕ್ಷಣಕ್ಕಾಗಿಯೇ ಪುಣೆಯಲ್ಲಿ ಆರ್ಯಮಹಿಳಾ ಸಮಾಜವನ್ನು ಸ್ಥಾಪಿಸಿದರು. ಬಾಲ್ಯ ವಿವಾಹ ನಿಷೇಧ, ವೈದ್ಯಕೀಯ ಜ್ಞಾನ ಶೈಕ್ಷಣಿಕ ಅಗತ್ಯಗಳಿಗೆ ಬಹುವಾಗಿ ಶ್ರಮಿಸಿದರು. ಇಂಗ್ಲೆಂಡ್‌ನಲ್ಲಿ ಇಂಗ್ಲೀಷ್ ಶಿಕ್ಷಣ ಪಡೆದು ಬಂದ ನಂತರ 'ಶಾರದಾಸದನ' ಎಂಬ ವಿಧವಾಶ್ರಮವನ್ನು ಸ್ಥಾಪಿಸಿದರು.

---

1. ಮೂಲ 'ಶ್ರೀದೇವಿ' — ಅನುವಾದ : ಕೆ. ಎಸ್. ಕೃಷ್ಣಮೂರ್ತಿ : 'ಭಾರತೀಯ ಮಹಿಳೆಯ ಮುನ್ನಡೆ' ಪುಟ 26.

'ಉಚ್ಚವರ್ಣದ ಹಿಂದೂ ನಾರಿ' ಎಂಬ ಪುಸ್ತಕ ಬರೆದು ಸ್ತ್ರೀ ಏಳಿಗೆಗಾಗಿ ದುಡಿಯು ತ್ತಿರುವುದರ ಕಾರಣವನ್ನು ವಿವರಿಸಿದರು ವಿಧವಾ ಶಿಕ್ಷಣಕ್ಕೆ ಇವರಿಂದಾಗಿ ಹೆಚ್ಚಿನ ಪ್ರೋತ್ಸಾಹ ದೊರೆಯಿತೆನ್ನಬಹುದು.

ಸ್ತ್ರೀ ಶಿಕ್ಷಣ ಪ್ರಸಾರ ಮತ್ತು ಪ್ರಗತಿ :

ದೇಶದ ಆಡಳಿತ ವಹಿಸಿಕೊಂಡ ಬ್ರಿಟಿಶರು ಅನೇಕ ಸುಧಾರಣೆಗಳನ್ನು ಕೈಗೊಂಡರು. ಅದರಲ್ಲಿ ಶಿಕ್ಷಣ ಸುಧಾರಣೆ ಬಹಳ ಮಹತ್ವದ್ದಾಗಿದೆ. ದೇಶೀ ಶಿಕ್ಷಣ ಪದ್ಧತಿಯ ಲೋಪದೋಷಗಳನ್ನು ತೆಗೆದುಹಾಕಿ ಶಿಕ್ಷಣವನ್ನು ಆಧುನೀಕರಿಸಲು ಮುಂದಾದರು. ಮಿಶನರಿಗಳು ಇಂಗ್ಲಿಷ್ ಶಾಲೆಗಳನ್ನು ತೆರೆಯುತೊಡಗಿದರು.

"ಪಾಶ್ಚಾತ್ಯ ಶಿಕ್ಷಣದ ವಿಚಾರದಲ್ಲಿ ಹಿಂದೂ ಜನತೆಯ ಆರಂಭದ ಪ್ರತಿಕ್ರಿಯೆ ನೋಡುವ ಹಾಗಿದೆ. ಶಾಲೆಗಳನ್ನು ತೆರೆದವರು ವಿದೇಶಿಯರು, ಮೇಲಾಗಿ ಮತಾಂ ತರಗೊಳಿಸಲು ಟೊಂಕ ಕಟ್ಟಿದರು. ಆದರೂ ಇಂಗ್ಲಿಷ್ ಶಿಕ್ಷಣದ ವ್ಯವಹರಿಕ ಪ್ರಯೋಜನದ ದೃಷ್ಟಿಯಿಂದ ಕ್ರೈಸ್ತ ಮತೀಯ ಪಾಠಗಳ ಕಹಿಯನ್ನು ಮರೆತು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸತೊಡಗಿದರು ಇದರ ಜೊತೆಗೆ ಮಿಶನರಿಗಳು ಸ್ತ್ರೀ ಶಿಕ್ಷಣದತ್ತಲೂ ಗಮನಹರಿಸಿದರು.

"ಈ ದಿಶೆಯಲ್ಲಿ ಲಂಡನ್ನಿನ ಮಿಶನರಿಯವರೇ ಮೊದಲಿಗರಾಗಿದ್ದಾರೆ. ಬಳ್ಳಾರಿ ಯಲ್ಲಿ ಇಂಥದೊಂದು ಶಾಲೆಯನ್ನು ಆರಂಭಿಸಿದ್ದರು. ಈ ಶಾಲೆಗಳಿಗೆ ಮಧ್ಯಮ ವರ್ಗದ ಸ್ತ್ರೀಯರಾರೂ ಹೋಗುತ್ತಿರಲಿಲ್ಲ ಅನಾಥರಾದ ಇಲ್ಲವೆ ಕ್ರಿಸ್ತೀಯರಾದ ಹೆಣ್ಣುಮಕ್ಕಳಿಗೆ ಅನ್ನಹಾಕಿ ಶಿಕ್ಷಣ ಕೊಡಬೇಕಾಗಿದ್ದಿತು. ಆ ಶಾಲೆಗಳನ್ನು ಮಿಶನರಿಗಳ ಹೆಂಡಂದಿರೇ ನೋಡಿಕೊಳ್ಳುತ್ತಿದ್ದರು."[2]

ಸ್ತ್ರೀಯರ ಏಳಿಗೆಗಾಗಿ ಅವರ ಶಿಕ್ಷಣಕ್ಕಾಗಿ ಇಷ್ಟೆಲ್ಲ ಚಟುವಟಿಕೆಗಳು ನಡೆದರೂ ಸಂಪ್ರದಾಯಸ್ತ ಹಿಂದೂಗಳು ತಮ್ಮ ಹೆಣ್ಣುಮಕ್ಕಳನ್ನು ಶಾಲೆಗೆ ಕಳುಹಿಸಲು ಹಿಂದೇಟು ಹಾಕುತ್ತಿದ್ದರು. ಇಂತಹ ಪರಿಸ್ಥಿತಿಯಲ್ಲಿ ಹೆಣ್ಣು ಮಕ್ಕಳು ಶಾಲೆಗೆ ಹೋಗುವಂತೆ ಮಾಡುವುದೂ ಒಂದು ದೊಡ್ಡ ಸಾಹಸವೇ ಆಗಿತ್ತು. ಈ ಕಾರ್ಯ ವನ್ನು ಕೆಲವರು ದೇಶೀಯರು ಮತ್ತು ಮಿಶನರಿಗಳು ಕೈಗೊಂಡರು,

"ಕ್ರಿ. ಶ. ೧೮೮೧ ರಲ್ಲಿ ಚಾಮರಾಜರು ರಾಜ್ಯ ಸೂತ್ರಗಳನ್ನು ವಹಿಸಿಕೊಂಡ ಮೇಲೆ ಮೈಸೂರಲ್ಲಿ ಪಾಶ್ಚಾತ್ಯ ಮತ್ತು ಪೌರ್ವಾತ್ಯ ಇವೆರಡೂ ವಿದ್ಯಾಭ್ಯಾಸಗಳಿಗೆ

---

1. ಶ್ರೀನಿವಾಸ ಹಾವನೂರ : 'ಹೊಸಗನ್ನಡದ ಅರುಣೋದಯ' ಪುಟ. 67
2. ಅದೇ ಪುಟ 68

ಪ್ರೋತ್ಸಾಹ ದೊರೆತು ಅವರ ಅಧಿಕಾರ ಸ್ವೀಕಾರದ ಮೊದಲ ವರ್ಷವೇ ಮಹಾರಾಣಿ ಗರ್ಲ್ಸ್ ಸ್ಕೂಲು ಸ್ಥಾಪಿತವಾಯಿತು. ಅರಮನೆಯ ಅಧಿಕಾರಿ ಅಂಬಿಲ್ ನರಸಿಂಹ ಅಯ್ಯಂಗಾರರ ಆಸ್ಥೆಯಿಂದಾಗಿ ಸ್ತ್ರೀ ವಿದ್ಯಾಭ್ಯಾಸವು ಇನ್ನಷ್ಟು ವೃದ್ಧಿಗೊಂಡಿತು."[1]

ಇದೇ ವೇಳೆಗೆ ಸ್ತ್ರೀ ಏಳಿಗೆಗಾಗಿ ಅನೇಕ ಲೇಖನಗಳು ಪುಸ್ತಕಗಳು ಪ್ರಕಟವಾಗ ತೊಡಗಿದವು. 'ಬಿ. ವೆಂಕಟಾಚಾರ್ಯರು ಹರಪ್ರಸಾದ ಶಾಸ್ತ್ರಿಯವರ 'ಭಾರತದ ಮಹಿಳೆ' ಪುಸ್ತಕವನ್ನು ಅನುವಾದಿಸಲು ಮುಂದೆ ಬಂದರು.

ವೆಂಕಟರಂಗೋ ಕಟ್ಟಿಯವರು : 'ವಿಧವಾವಪನ ಅನಾಚಾರ ಮಂಡನ' ಎಂಬ ಗ್ರಂಥವನ್ನು ೧೮೮೯ರಲ್ಲಿ ಬರೆದರು. ರೊದ್ದ ತಿರುಮಲರಾಯರು ೧೮೯೪ರಲ್ಲಿ ಸ್ತ್ರೀ ಶಿಕ್ಷಣದ ಅವಶ್ಯಕತೆಯನ್ನು ಒತ್ತಿ ಹೇಳಿ ಒಂದು ಪುಸ್ತಕವನ್ನು ಬರೆದರು.

ಮಹಾತ್ಮ ಗಾಂಧೀಜಿ ಮತ್ತು ಸ್ವಾತಂತ್ರ್ಯ ಹೋರಾಟ :

ರಾಷ್ಟ್ರಪಿತ ಗಾಂಧೀಜಿಯವರ ಆಗಮನ ಮಹಿಳೆಯರ ಬಾಳಿಗೆ ಹೊಸ ಚೈತನ್ಯ ವನ್ನು ತಂದುಕೊಟ್ಟಿತು. ದೇಶದ ಮೂಲೆ ಮೂಲೆಗಳಿಂದ ಮಹಿಳೆಯರು ಗಾಂಧೀಜಿ ಯವರ ಕರೆಗೆ ಓಗೊಟ್ಟು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಲು ಸಿದ್ಧರಾದರು. ಕಸ್ತೂರಬಾ, ವಿಜಯಲಕ್ಷ್ಮಿಪಂಡಿತ್, ಅಮೃತಕೌರ, ಸರೋಜಿನಿ ನಾಯಡು, ದುರ್ಗಾ ಬಾಯಿ ದೇಶಮುಖ ಇವರೆಲ್ಲ ಗಾಂಧೀಜಿಯವರ ನಿಕಟವರ್ತಿಗಳಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ಪಾತ್ರವಹಿಸಿದರು. ಆ್ಯನಿಬೆಸೆಂಟ್ ಸ್ತ್ರೀ ಶಿಕ್ಷಣಕ್ಕಾಗಿ ಆಗ್ರಹ ಪಡಿಸಿದಳು.

"ಸ್ತ್ರೀಯರ ಹಕ್ಕುಬಾಧ್ಯತೆಗಳ ವಿಷಯದಲ್ಲಿ ನಾನು ಸ್ವಲ್ಪವೂ ಸೋಲಲಾರೆ, ಪುರುಷ ನಿರ್ಮಿತವಾದ ಯಾವ ಬಗೆಯ ಶಾಸನಬದ್ಧ ಅಡ್ಡಿ ಆತಂಕಗಳಿಂದಲೂ ಆಕೆ ತೊಳಲಲಾರಳೆಂದು ನನ್ನ ಅಭಿಪ್ರಾಯ. ಸ್ತ್ರೀ ಪುರುಷರಲ್ಲಿ ಸ್ತ್ರೀ ಹೆಚ್ಚು ಘನತೆ ವೆತ್ತವಳು. ಏಕೆಂದರೆ ತ್ಯಾಗ, ಮೌನ, ವೇದನಾನುಭವ, ನಮ್ರತೆ, ನಂಬಿಕೆ, ಜ್ಞಾನ, ಇವುಗಳಿಗೆ ಆಕೆ ಇಂದಿಗೂ ಮೂರ್ತಿಸ್ವರೂಪವೆನಿಸಿದ್ದಾಳೆ." ಎಂದು ಗಾಂಧೀಜಿ ಯವರು ನುಡಿದು ಸ್ತ್ರೀಯರ ಘನತೆ ಗೌರವಗಳನ್ನು ಎತ್ತಿ ಹಿಡಿದರು. ಶಕ್ತಿಯ ಅರ್ಥ ನೈತಿಕ ಶಕ್ತಿ ಎನ್ನುವುದಾದರೆ ಸ್ತ್ರೀ ಪುರುಷನಿಗಿಂತ ಅಗಾಧ ಮೇಲ್ಮೆಯುವ

---

1. ಅದೇ, ಪುಟ–74.

1947ರ ಹೊತ್ತಿಗೆ ನಮ್ಮ ದೇಶದಲ್ಲಿ ಸುಮಾರು 61 ಅಧಿಕೃತ ಮಹಿಳಾ ಕಾಲೇಜುಗಳು ಅಸ್ತಿತ್ವಕ್ಕೆ ಬಂದವು.

ಳೆಂದು ಹೇಳಿದರು. ಗಾಂಧೀಜಿಯವರು, ವಿಶಾಲ ಮನೋಭಾವ, ಹಾಗೂ ಉದಾರ ವಿಚಾರಗಳಿಂದ ಮಹಿಳೆಯರಿಗೆ ಗೌರವದ ಸ್ಥಾನವನ್ನು ದೊರಕಿಸಿಕೊಟ್ಟರು.

ಸಾಮಾಜಿಕ ಸ್ಥಿತ್ಯಂತರ :

೧೮೫೭ಕ್ಕಿಂತ ಮೊದಲೇ ಸ್ವಾತಂತ್ರ್ಯ ಹೋರಾಟ ಭಾರತದ ರಾಜಕೀಯ ರಂಗದಲ್ಲಿ ಕಾಣಿಸಿಕೊಂಡರೂ ಗಾಂಧೀಜೀಯವರ ಪ್ರವೇಶದಿಂದ ಹೊಸದೊಂದು ತಿರುವು ದೊರೆಯಿತು. ೧೯೪೭ರಲ್ಲಿ ಗಾಂಧೀಜಿಯವರ ನೇತೃತ್ವದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟ ಪ್ರಪಂಚದ ಇತಿಹಾಸದಲ್ಲಿ ಮಹತ್ವದ ದಾಖಲೆಯಾಯಿತು. ನಮ್ಮ ದೇಶ ಸ್ವತಂತ್ರವಾಯಿತು. ಸ್ವಾತಂತ್ರ್ಯ ಹೋರಾಟ ಬ್ರಿಟಿಷರ ದಾಸ್ಯದಲ್ಲಿದ್ದ ಭಾರತೀಯರಲ್ಲಿ ರಾಷ್ಟ್ರ ಪ್ರಜ್ಞೆಯುಂಟುಮಾಡಿತು.

ಪಾಶ್ಚಾತ್ಯರ ಸಂಪರ್ಕದಿಂದಾಗಿ "ಯುರೋಪದ ಔದ್ಯೋಗಿಕ ಸುಧಾರಣೆಗಳು ಒಂದೊಂದಾಗಿ ಭಾರತದಲ್ಲಿ ಕಾಲಿಡತೊಡಗಿದವು. ಉದ್ಯಮ, ಕೈಗಾರಿಕೆಗಳಿಗೆ ಸಂಬಂಧಿಸಿದ ಯಂತ್ರಸಾಮಗ್ರಿ, ಆಧುನಿಕ ಸಂಚಾರ ಸಾಧನ ಇವುಗಳಲ್ಲಿ ಕೆಲವು ಭಾರತೀಯರ ಊಹೆಗೂ ನಿಲುಕದವುಗಳಾಗಿದ್ದವು. ಅದರಂತೆ ಅತ್ಯಂತ ಭಿನ್ನವಾದ ಪಾಶ್ಚಾತ್ಯ ನಾಗರಿಕತೆಯು ಜನಕ್ಕೆ ಆಕರ್ಷಕವಾಗಿ ತೋರಿತು. ಮುಖ್ಯವಾಗಿ ಅವರ ಚಿಕಿತ್ಸಕ ಮನೋವೃತ್ತಿ, ವ್ಯವಹಾರಿಕ ದೃಷ್ಟಿ, ಜಾತಿಗಳ ಮೇಲು ಕೀಳನ್ನೆಣಿಸದ ವ್ಯವಹರಣೆ ಇವು ಬಹುಜನ ಭಾರತೀಯರ ಬದುಕಿನಲ್ಲಿ ಹರಡುತ್ತ ನಡೆದು ಅವರ ಜೀವನ ದೃಷ್ಟಿಯನ್ನು ಬದಲಿಸತೊಡಗಿದವು."[1]

ಆಧುನಿಕ ವಿಚಾರಗಳಿಂದಾಗಿ ಭಾರತೀಯ ಸಮಾಜದಲ್ಲಿ ಸಂಘರ್ಷ ಕಾಣಿಸಿಕೊಳ್ಳ ತೊಡಗಿತು. ಪಾಶ್ಚಾತ್ಯ ಸಂಸ್ಕೃತಿ ಶ್ರೇಷ್ಠವೆಂಬ ಭಾವನೆ ಕೆಲವರಲ್ಲಿ, ಇದಕ್ಕೆ ವಿರೋಧಿಗಳಾದ ಸಂಪ್ರದಾಯಶೀಲರ ವರ್ಗವೊಂದು ಕಡೆ. ಇವೆರಡರ ನಡುವೆ ವಿಚಾರವಂತರ ಗುಂಪೊಂದು ಬೆಳೆಯಿತು.

ಭಾರತೀಯ ಪರಂಪರೆಯನ್ನು ಪುನರ್‌ಮೌಲೀಕರಣಕ್ಕೆ ಒಳಪಡಿಸಿ ನೋಡುವ ಸಂದರ್ಭವುಂಟಾಯಿತು. ಭಾರತೀಯ ಸಮಾಜದಲ್ಲಿದ್ದ ಅವೈಚಾರಿಕತೆ ಅಂಧಶ್ರದ್ಧೆ ಇತ್ಯಾದಿಗಳ ನಿವಾರಣೆಗೆ ವಿಚಾರವಂತರು ಕೈಹಾಕಿದರು.

ಜಾತಿ ವ್ಯವಸ್ಥೆ, ಮೇಲುಕೀಳೆಂಬ ಭಾವನೆ, ದೇವರ ಹೆಸರಿನಲ್ಲಿ ನಡೆಯುತ್ತಿದ್ದ ಮೋಸ, ಸುಲಿಗೆ, ಅನ್ಯಾಯಗಳ ವಿರುದ್ಧ ವಿಚಾರವಂತರು ದನಿ ಎತ್ತಿದರು. ಅವಿಭಕ್ತ ಕುಟುಂಬ ರೂಢಿಗತವಾಗಿ ಬಂದಿತ್ತು. ಈ ಕುಟುಂಬ ವ್ಯವಸ್ಥೆಯಲ್ಲಿ ಸ್ತ್ರೀ

1. 'ಶ್ರೀನಿವಾಸ ಹಾವನೂರ್ ಹೊಸಗನ್ನಡದ ಅರುಣೋದಯ', ಪುಟ 14.

ತನ್ನ ವ್ಯಕ್ತಿತ್ವವನ್ನೆಲ್ಲ ಕಳೆದುಕೊಂಡು ಪುರುಷನ ಅಧೀನದಲ್ಲಿ ಜೀವನ ಕಳೆಯ ಬೇಕಾಗಿತ್ತು. ಇಂತಹ ಸಮಾಜ ವ್ಯವಸ್ಥೆಯ ವಿರೋಧ, ಭಾರತೀಯ ಸಮಾಜ ದಲ್ಲಿ ಕಾಣಿಸಿಕೊಂಡಿತು.

"ಸಾಮಾಜಿಕ ಸ್ಥಿತ್ಯಂತರದ ಇನ್ನೊಂದು ವೈಶಿಷ್ಟ್ಯವೆಂದರೆ ಭಾರತೀಯರಲ್ಲಿ ಮೂಡಿ ಬಂದ ಲೌಕಿಕ ಹಾಗೂ ವ್ಯಕ್ತಿಗತ ದೃಷ್ಟಿಕೋನ ಪಾಶ್ಚಾತ್ಯ ಪ್ರಭಾವದಿಂದ ಮೂಡಿದ ಲೌಕಿಕ ವಿಚಾರಗಳಿಂದಾಗಿ ಜೀವನ ಕ್ರಮವು ಹೆಚ್ಚೆಚ್ಚು ವ್ಯಕ್ತಿಪರವಾಗುತ್ತ ನಡೆಯಿತು ಮತ್ತು ಇಹಲೋಕದ ನಡವಳಿಕೆಗೆ ಹೆಚ್ಚಿನ ಪ್ರಾಧಾನ್ಯವನ್ನೀಯಬೇಕಾದ ಪರಿಸ್ಥಿತಿಯು ತಲೆದೋರಿತು. ಈ ವೈಯಕ್ತಿಕ ಮನೋಭಾವವು ಜಿಜ್ಞಾಸಾ ಪ್ರವೃತ್ತಿಯು ಮಧ್ಯಮ ವರ್ಗೀಯದಲ್ಲಿಯೇ ಹೆಚ್ಚಾಗಿ ಕಾಣಿಸಿಕೊಂಡಿತು."[1]

ದೇಶ ಸ್ವತಂತ್ರವಾದೊಡನೆ ಆಹಾರ, ಅನಕ್ಷರತೆ, ಅಂಧಾನುಕರಣೆ, ಜನಸಂಖ್ಯಾ ಹೆಚ್ಚಳ, ನಿರುದ್ಯೋಗ ಬಡತನ ಈ ಮೊದಲಾದ ಆರ್ಥಿಕ, ಸಾಮಾಜಿಕ ಔದ್ಯೋಗಿಕ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಈ ಸಮಸ್ಯೆಗಳ ಪರಿಹಾರಕ್ಕಾಗಿ ದೇಶ ತನ್ನ ದೃಷ್ಟಿಯನ್ನು ಹರಿಸುವುದು ಅಗತ್ಯವಾಯಿತು. ೧೯೨೯ ರಲ್ಲಿ ಶಾರದಾ ಕಾಯಿದೆಯ ಮೂಲಕ ಬಾಲ್ಯವಿವಾಹವನ್ನು ತಡೆಗಟ್ಟಲು ಪ್ರಯತ್ನ ಪ್ರಾರಂಭ ವಾಗಿತ್ತು.

೧೯೫೫ರಲ್ಲಿ ಅಸ್ಪೃಶ್ಯತೆಯನ್ನು ಕಾಯಿದೆ ಮೂಲಕ ಅಲ್ಲಗಳೆಯಲಾಯಿತು. ಶಿಕ್ಷಣವು ಸಾರ್ವತ್ರಿಕವಾಯಿತು. ವೈಚಾರಿಕ ದೃಷ್ಟಿ, ವೈಜ್ಞಾನಿಕ ಸೌಲಭ್ಯ, ಶಿಕ್ಷಣ ಪ್ರಸಾರ ಇವೆಲ್ಲವುಗಳಿಂದ ಭಾರತೀಯ ಸಮಾಜ ಹೊಸ ಹುಟ್ಟನ್ನು ಪಡೆಯಿತು. ಎಲ್ಲ ರಂಗಗಳಲ್ಲಿ ಕಾಣಿಸಿಕೊಂಡ ಬದಲಾವಣೆ, ವ್ಯಕ್ತಿ ಕುಟುಂಬ ಸಮಾಜದಲ್ಲೂ ಬದಲಾವಣೆಯನ್ನುಂಟುಮಾಡಿತು.

ಆಧುನಿಕ ಕನ್ನಡ ಸಾಹಿತ್ಯ :

ಭಾರತೀಯ ಸಮಾಜದ ಸಂಧಿಕಾಲದಲ್ಲಿಯೇ ಆಂಗ್ಲ ಸಾಹಿತ್ಯ ಪ್ರಭಾವದಿಂದಾಗಿ ಹೊಸ ಸಾಹಿತ್ಯ ಪ್ರಕಾರಗಳೂ ಭಾರತೀಯ ಸಾಹಿತ್ಯವನ್ನು ಪ್ರವೇಶಿಸಿದವು. ಭಾರತೀಯ ಜನಜೀವನವಲ್ಲಿ ಹೊಸತನ ಕಾಣಿಸಿಕೊಂಡಂತೆ ಸಾಹಿತ್ಯ ಕ್ಷೇತ್ರದಲ್ಲೂ ಕಾಣಿಸಿಕೊಂಡಿತು.

ಭಾವಗೀತೆ, ಸಣ್ಣಕತೆ, ಕಾದಂಬರಿ, ವಿಮರ್ಶೆ, ಹರಟೆ ಇತ್ಯಾದಿ ಹೊಸ ಸಾಹಿತ್ಯ ಪ್ರಕಾರಗಳು ಇಂಗ್ಲಿಷ್ ಸಾಹಿತ್ಯದಿಂದಲೇ ಕನ್ನಡ ಸಾಹಿತ್ಯಕ್ಷೇತ್ರವನ್ನೂ ಪ್ರವೇಶಿಸಿದವು.

---

1. ಅದೇ ಪುಟ–15

ಕನ್ನಡಿಗರು ಕನ್ನಡ ಸಾಹಿತ್ಯವನ್ನು ಪುಷ್ಟೀಕರಿಸುವುದಕ್ಕೆ ಮುಂದಾದರು. ಬಸವಪ್ಪ ಶಾಸ್ತ್ರಿಗಳು ಶಾಕುಂತಲ ಮತ್ತಿತರ ಕೃತಿಗಳನ್ನು ಕನ್ನಡಕ್ಕೆ ಭಾಷಾಂತರ ಮಾಡಿದರು.

ಎಂ.ಎಲ್. ಶ್ರೀಕಂಠೇಗೌಡರು ಷೇಕ್ಸ್‌ಪಿಯರನ 'ಮ್ಯಾಕ್‌ಬೆತ್' ಮಿಡ್‌ಸಮರ್ ನೈಟ್ಸ್ ಡ್ರೀಮ್ ನಾಟಕಗಳನ್ನು ಕ್ರಮವಾಗಿ 'ಪ್ರತಾಪ ರುದ್ರದೇವ' ಪ್ರಮೀಳಾರ್ಜು ನೀಯ' ಎಂಬ ಹೆಸರಿನಿಂದ ಕನ್ನಡಕ್ಕೆ ಅನುವಾದ ಮಾಡಿದರು. ಎಂ ಎಸ್. ಪುಟ್ಟಣ್ಣ ನವರು 'ಕಿಂಗಲಿಯರ್' ನಾಟಕವನ್ನು ರೂಪಾಂತರಿಸಿದರು.

ಇಂಗ್ಲೀಷ್ ನಾಟಕಗಳಂತೆಯೇ ಕಾದಂಬರಿಗಳು ಭಾಷಾಂತರ ರೂಪಾಂತರಗಳಿಂದ ಕನ್ನಡಕ್ಕೆ ಬರತೊಡಗಿದವು. ಮರಾಠಿ, ಹಾಗೂ ಬಂಗಾಲಿ ಕಾದಂಬರಿಗಳನ್ನು ಗಳಗನಾಥರು ಹಾಗೂ ಬಿ. ವೆಂಕಟಾಚಾರ್ಯರು ಅನುವಾದಿಸತೊಡಗಿದರು. ೧೮೮೫ರಲ್ಲಿ ಬಿ. ವೆಂಕಟಾಚಾರ್ಯರು ಬಂಕಿಮಚಂದ್ರರ 'ದುರ್ಗೇಶನಂದಿನಿ' 'ಆನಂದಮಠ' 'ದೇವಿಚೌಧುರಾಣಿ' ಈ ಮೊದಲಾದ ಕಾದಂಬರಿಗಳನ್ನು ಭಾಷಾಂತರಿಸಿ ಅವುಗಳನ್ನು 'ನೋವೆಲ್ಸ್' (ಕಾದಂಬರಿ) ಎಂದೇ ಕರೆದರು.

ಸುಮಾರು ೧೮೫೭ ರಲ್ಲಿ ರಚಿತವಾದ 'ಆಲೇಲಾರ್ ಘರೇದುಲಾರ್' ('ಪ್ಯಾರಿ ಚಂದಮಿತ್ರಾ') ಎಂಬುದು ಬಂಗಾಲಿಯ ಪ್ರಥಮ ಸಾಮಾಜಿಕ ಕಾದಂಬರಿಯಾಗಿದೆ. ಇದೇ ವೇಳೆಗೆ ರಚಿತವಾದ ಬಾಬಾ ಪದಂಜೀಯವರ 'ಯಮುನಾ ಪರ್ಯಟನ' ಇದು ಮರಾಠಿಯ ಪ್ರಥಮ ಕಾದಂಬರಿ ಎನಿಸಿಕೊಂಡಿದೆ.

ಗಂ. ಮ. ತಿರುಮರಿಯವರು ೧೮೭೦ ರಲ್ಲಿ 'ಬಾಣ' ಕಾದಂಬರಿಯನ್ನು ಲಲಿತ ವಾದ ಗದ್ಯಶೈಲಿಯಲ್ಲಿ ಕನ್ನಡಕ್ಕೆ ಕೊಟ್ಟರು.

೧೮೯೮ ರಲ್ಲಿ ಗಳಗನಾಥರು ಪ್ರಥಮ ಕೃತಿ 'ಪದ್ಮನಯನೆ' ಪ್ರಕಟವಾಯಿತು. ಅದು ಆವರ ಪ್ರಥಮ ಸ್ವತಂತ್ರ ಕಾದಂಬರಿಯಾಗಿದೆ. ಲ.ಭೀ. ಗದಗಕರ ಎಂಬುವರು ತಮ್ಮ 'ಸೂರ್ಯಕಾಂತ' ಕಾದಂಬರಿ ಬರೆದು ಮೊಟ್ಟ ಮೊದಲು ಅದನ್ನು 'ಕಾದಂಬರಿ' ಎಂದು ಕರೆದರು. ಗಳಗನಾಥರು ಒಂದರ ಮೇಲೊಂದು ಕಾದಂಬರಿಗಳನ್ನು ಅನುವಾದಿಸಿ ಓದುಗರಲ್ಲಿ ಓದುವ ಅಭಿರುಚಿಯನ್ನು ಬೆಳೆಸಿದರು.

೧೮೯೫ರಲ್ಲಿ ರಚಿತವಾದ ಬಾಬೂರಾವ್ ಬೋಳಾರ ಅವರ 'ವಾಗ್ದೇವಿ' ೧೮೯೯ರಲ್ಲಿ ಗುಳವಾಡಿ ವೆಂಕಟರಾಯರಿಂದ ರಚಿತವಾದ 'ಇಂದಿರಾಬಾಯಿ' ಅಥವಾ 'ಸದ್ಧರ್ಮ ವಿಜಯ' ಇವು ಪ್ರಥಮ ಸಾಮಾಜಿಕ ಕಾದಂಬರಿಗಳೆಂದು ಕರೆಯಲ್ಪಟ್ಟಿವೆ ಹೊಸ ಗನ್ನಡ ಸಾಹಿತ್ಯದ ಮುಖ್ಯ ಲಕ್ಷಣವೆನಿಸಿದ ಸ್ವಾತಂತ್ರ್ಯ ಸಾಮಾಜಿಕ ಕಾದಂಬರಿಯು ೧೮೯೯ರಲ್ಲಿ ಹೊರಬಂದಿತು.

"೧೮೧೦-೧೮೪೦ ನಸುಕಿನ ಕಾಲ

೧೮೪೧–೧೮೮೦ ಮುಂಬೆಳಕಿನ ಕಾಲ

೧೮೮೧–೧೮೮೯ ಹೊಂಬೆಳಕಿನ ಕಾಲ"[1]

ಎಂದು ಡಾ॥ ಹಾವನೂರ ಅವರು ಗುರುತಿಸಿದ್ದಾರೆ.

ಅಂದಿನ ಸಮಾಜದಲ್ಲಿನ ಬಾಲ್ಯವಿವಾಹದ ಅನರ್ಥ, ಸ್ತ್ರೀ ಶಿಕ್ಷಣ, ಹಡಗಿನ ಪ್ರಯಾಣ ಇವುಗಳನ್ನು ಆ ಕಾದಂಬರಿಯಲ್ಲಿ ತಂದಿದ್ದಾರೆ. ೧೯೧೫ ರಲ್ಲಿ ಎಂ. ಎಸ್. ಪುಟ್ಟಣ್ಣನವರಿಂದ ರಚಿತವಾದ 'ಮಾಡಿದ್ದುಣ್ಣೊ ಮಹರಾಯ' —ಇದು ಕನ್ನಡದ ಸಾಮಾಜಿಕ ಕಾದಂಬರಿಗಳಿಗೆ ಒಂದು ಗಮನಾರ್ಹ ಭದ್ರವಾದ ಸ್ಥಾನವನ್ನು ಒದಗಿಸಿತು.

ಕಾದಂಬರಿ ಸಾಹಿತ್ಯದ ಬೆಳವಣಿಗೆ:

ಕಾರಂತರ ದೇವದೂತರು ೧೯೨೮ ರಲ್ಲಿ ಪ್ರಕಟವಾಯಿತು. 'ಸರಸಮ್ಮನ ಸಮಾಧಿ' ಚೋಮನದುಡಿ' 'ಜಾದಾರ್ಯದ ಉರುಳಲ್ಲಿ' ಮರಳಿ ಮಣ್ಣಿಗೆ' ಇನ್ನೂ ಮೊದಲಾದ ಕಾದಂಬರಿಗಳು ಪ್ರಕಟವಾದವು.

"ವಾಸ್ತವಮಾರ್ಗದ ಕಾದಂಬರಿ, ಭಾವನಾಪರವಶತೆಯ ಸೆಳವಿಗೆ ಸಿಕ್ಕು ತನ್ನ ಸ್ವರೂಪವನ್ನು ನಾಶಮಾಡಿಕೊಳ್ಳುವ ಹೊತ್ತಿನಲ್ಲಿ ಅದನ್ನು ಉದ್ಧರಿಸಿ ಅದರ ಗೌರವವನ್ನು ಕಾಯ್ದ ಶ್ರೇಯಸ್ಸು ಕಾರಂತರದು."

ಅವರ 'ಮೂಕಜ್ಜಿಯ ಕನಸು' ಕಾದಂಬರಿಗೆ ಜ್ಞಾನಪೀಠ ಪ್ರಶಸ್ತಿ ಬಂದಿದೆ. ಇತ್ತೀಚೆಗೆ 'ವ್ಯವಸನಗಳ ಸುಳಿಯಲ್ಲಿ' 'ಅದೇ ಊರು ಅದೇ ಮರ' 'ನಾವು ಕಟ್ಟಿದ ಸ್ವರ್ಗ' ಇನ್ನೂ ಅನೇಕ ಕಾದಂಬರಿಗಳನ್ನು ಕಾರಂತರು ಬರೆದಿದ್ದಾರೆ.

೧೯೩೪ರಲ್ಲಿ ಅ.ನ.ಕೃ. ಅವರ 'ಜೀವನಯಾತ್ರೆ' ಪ್ರಕಟವಾಯಿತು. 'ಗೃಹಲಕ್ಷ್ಮಿ', 'ಸಂಧ್ಯಾರಾಗ', 'ಉದಯರಾಗ', 'ನಟಸಾರ್ವಭೌಮ', 'ಮಂಗಳಸೂತ್ರ', ಇವಲ್ಲದೆ ವೇಶ್ಯಾಜೀವನವನ್ನು ಚಿತ್ರಿಸುವ 'ನಗ್ನಸತ್ಯ', 'ಶನಿಸಂತಾನ', 'ಸಂಜೆಗತ್ತಲು' ಈ ಕಾದಂಬರಿಗಳು ಪ್ರಕಟವಾಗತೊಡಗಿದವು. ಅ. ನ ಕೃ. ಅವರ ನೇತೃತ್ವದಲ್ಲಿ ೧೯೪೫ರ ಸುಮಾರಿಗೆ ಪ್ರಗತಿಶೀಲ ಚಳುವಳಿ ಪ್ರಾರಂಭವಾಯಿತು. ಶಿಷ್ಟಸಮಾಜದ ಮುಸುಕಿನಲ್ಲಿದ್ದ ಅನೇಕ ಸಮಸ್ಯೆಗಳನ್ನಾಯ್ದು ಅ.ನ.ಕೃ. ಅವರು ಸಮಾಜದ ಅನ್ಯಾಯವನ್ನು ಬಯಲಿಗೆಳೆದರು. ಕಾದಂಬರಿ ಕ್ಷೇತ್ರದ ಹರಹನ್ನು ಅ.ನ.ಕೃ. ವಿಸ್ತರಿಸಿದರು. ನಿರರ್ಗಳ ಸಂಭಾಷಣೆ, ಕಥನಗುಣದಿಂದ ಅವರ ಕಾದಂಬರಿಗಳು ಅತ್ಯಂತ ಜನಪ್ರಿಯವಾಗಿ ಪರಿಣಮಿಸಿದವು. ಓದುಗರ ಸಂಖ್ಯೆಯನ್ನು ಬೆಳೆಸಿದವರು ಅ.ನ.ಕೃ. ಕನ್ನಡ

---

1. **'ಹೊಸಗನ್ನಡದ ಅರುಣೋದಯ' : ಪುಟ–325-326.**
2. **ಕೆ.ಡಿ. ಕುರ್ತಕೋಟಿ 'ಯುಗಧರ್ಮ ಹಾಗೂ ಸಾಹಿತ್ಯದರ್ಶನ'—ಪು. 209.**

'ಕಾದಂಬರಿ ಸಾರ್ವಭೌಮ' 'ಕಾದಂಬರಿಯುಗ ಪ್ರವರ್ತಕರ' ಎಂದು ಪ್ರಸಿದ್ಧರಾದರು. ಅ. ನ. ಕೃ. ಅವರು ಓದುಗರನ್ನು ಬೆಳೆಸಿದಂತೆ ಲೇಖಕರನ್ನು ಬೆಳಸಿದರೆಂದು ಹೇಳಬಹುದು.

ತ. ರಾ. ಸು. ಕಟ್ಟೀಮನಿ, ನಿರಂಜನ ಇವರು ಪ್ರಗತಿಶೀಲ ಪರಂಪರೆಯ ಲೇಖಕರು.

ತ. ರಾ. ಸು. ಅವರು ಅ. ನ. ಕೃ. ಅವರ ಗರಡಿಯಲ್ಲೇ ತಯಾರಾದರೂ ಬಹುಬೇಗ ಸ್ವತಂತ್ರ ಮಾರ್ಗವನ್ನು ಹಿಡಿದರು. ಅವರ 'ಮಸಣದ ಹೂವು' 'ಚಂದನದ ಬೊಂಬೆ', 'ಬಿಡುಗಡೆಯ ಬೇಡಿ', 'ಹಂಸಗೀತೆ' ಈ ಕಾದಂಬರಿಗಳು ಪ್ರಕಟವಾದವು. 'ರಕ್ತರಾತ್ರಿ', 'ತಿರುಗುಬಾಣ', 'ಕಂಬನಿಯ ಕುಯಿಲು' ಇನ್ನೂ ಮುಂತಾದ ಐತಿಹಾಸಿಕ ಕಾದಂಬರಿಗಳು ಬಂದವು.

ಬಸವರಾಜ ಕಟ್ಟೀಮನಿ ಅವರ 'ಜರತಾರಿ ಜಗದ್ಗುರು' 'ಶಿವದಾರ–ಜನಿವಾರ' 'ಜ್ವಾಲಾಮುಖಿಯ ಮೇಲೆ' ಬೀದಿಗೆ ಬಿದ್ದವಳು. ಇನ್ನೂ ಹಲವಾರು ಕಾದಂಬರಿಗಳನ್ನು ಬರೆದರು. ಸಮಾಜದ ಅನ್ಯಾಯವನ್ನು ಖಂಡಿಸಿದರು.

ನಿರಂಜನ ಅವರ 'ರಂಗಮ್ಮನ ವಠಾರ', 'ಚಿರಸ್ಮರಣೆ', 'ಅಭಯಾಶ್ರಮ' ಈ ಮುಂತಾದ ಕಾದಂಬರಿಗಳು ಪ್ರಕಟವಾದವು.

"ನಿರಂಜನರದು ಪ್ರಗತಿಶೀಲರ ದಾರಿ. ಅದರ ಒಂದು ಕಣ್ಣು ಉತ್ಕಟತೆಯ ಕಡೆಗಿದ್ದರೆ ಇನ್ನೊಂದು ಸಮಾಜಸುಧಾರಣೆಯ ಕಡೆಗಿದೆ. ಅವರ ಮೊದಲಿನ ಕಾದಂಬರಿಗಳಂತೂ ಕಮ್ಯುನಿಸ್ಟ್ ಮನೋವೃತ್ತಿಯನ್ನು ಹಿನ್ನಲೆಗಿಟ್ಟುಕೊಂಡು ಬರೆದವುಗಳಾಗಿವೆ. ಕ್ರಮೇಣ ಅವರ ಮನಸ್ಸು ಮಾನವೀಯತೆಯ ಅಂತಃಕರಣದೆಡೆಗೆ ತಿರುಗಿದೆ. ನಿರಂಜನ ಅ. ನ. ಕೃ. ಸಂಪ್ರದಾಯದ ಎಲ್ಲ ಒಳ್ಳೆಯ ಗುಣಗಳನ್ನು ಪ್ರತಿನಿಧಿಸುವಂತಿದ್ದಾರೆ."[1]

ಮಾಸ್ತಿಯವರ 'ಸುಬ್ಬಣ್ಣ' 'ಚೆನ್ನಬಸವನಾಯಕ' 'ಚಿಕ್ಕವೀರರಾಜೇಂದ್ರ' ಈ ಮುಂತಾದ ಶ್ರೇಷ್ಠ ಕಾದಂಬರಿಗಳು ಬಂದವು.

ರಂ. ಶ್ರೀ. ಮುಗಳಿಯವರ 'ಬಾಳುರಿ' ಬೆಟಗೇರಿ ಕೃಷ್ಣಶರ್ಮರ 'ಸುದರ್ಶನ' ಗೋಕಾಕರ 'ಇಜ್ಜೋಡು', 'ಸಮರಸವೇ ಜೀವನ' ದೇವುಡು ಅವರ 'ಅಂತರಂಗ' 'ಮಹಾಬ್ರಾಹ್ಮಣ', 'ಮಹಾಕ್ಷತ್ರಿಯ' ಶ್ರೀರಂಗರ 'ವಿಶ್ವಾಮಿತ್ರನ ಸೃಷ್ಟಿ' ಈ ಕಾದಂಬರಿಗಳು ಕನ್ನಡ ಕಾದಂಬರಿ ಕ್ಷೇತ್ರದ ಹಿರಿಮೆಯನ್ನು ಸಾರುತ್ತವೆ.

---

1. ಕೆ. ಡಿ. ಕುರ್ತಕೋಟಿ 'ಯುಗಧರ್ಮ ಹಾಗೂ ಸಾಹಿತ್ಯದರ್ಶನ' ಪು. 97.

ಕುವೆಂಪು ಅವರ 'ಕಾನೂರು ಸುಬ್ಬಮ್ಮ ಹೆಗ್ಗಡತಿ' 'ಮಲೆಗಳಲ್ಲಿ ಮದು ಮಗಳು' ರಾವ್‌ಬಹದ್ದೂರರ 'ಗ್ರಾಮಾಯಣ' ಕನ್ನಡ ಕಾದಂಬರಿಯ ಮೈಲುಗಲ್ಲು ಗಳೆನಿಸಿವೆ. ಚದುರಂಗರ 'ಸರ್ವಮಂಗಳಾ' 'ಉಯ್ಯಾಲೆ' ಪ್ರಸಿದ್ಧ ಕಾದಂಬರಿಗಳು, ಇತ್ತೀಚೆಗೆ 'ವೈಶಾಖಿ' ಕಾದಂಬರಿಗೆ ಕೇಂದ್ರ ಸಾಹಿತ್ಯ ಪ್ರಶಸ್ತಿ ದೊರಕಿದೆ.

ಎನ್ಕೆ, ಕೃಷ್ಣಮೂರ್ತಿ ಪುರಾಣಿಕ ಇವರ ಕಾದಂಬರಿಗಳು ಜನ ಮೆಚ್ಚುಗೆ ಗಳಿಸಿದವು.

ಮಿರ್ಜಿ ಅಣ್ಣಾರಾವ್ ಅವರ ನಿಸರ್ಗ ಶಂಕರಮೊಖಾಶಿ ಪುಣೇಕರ ಅವರ 'ಗಂಗವ್ವ ಮತ್ತು ಗಂಗಾಮಾಯಿ' ವಿ. ಎಂ. ಇನಾಂದಾರ್ ತ್ರಿಶಂಕು, ಎರಡು ಧ್ರುವ ಕನಸಿನ ಮನೆ ಇವೆಲ್ಲ ಕನ್ನಡದ ಉತ್ತಮ ಕಾದಂಬರಿಗಳು.

ಈ ಹಿರಿಯ ಲೇಖಕರ ಕೈಯಲ್ಲಿ ಕಾದಂಬರಿ ಸತ್ವಯುತವಾಗಿ ತನ್ನ ವೈವಿಧ್ಯ ವನ್ನು ಬೆಳೆಸಿಕೊಂಡು ಸ್ಥಿರವಾದ ರೂಪವನ್ನು ಪಡೆದಿದೆ.

ಸಣ್ಣಕತೆ : ಕಾದಂಬರಿಯಂತೆಯೇ ಸಣ್ಣಕತೆಯೂ ಪಾಶ್ಚಾತ್ಯ ಸಾಹಿತ್ಯದ ಪ್ರಭಾವದಿಂದ ಬಂದಿದೆ. ಪಂಜೆ ಮಂಗೇಶರಾಯರು, ಕೆರೂರ ವಾಸುದೇವಾಚಾರ್ಯರು, ಎಂ. ಎನ್. ಕಾಮತರು ಕನ್ನಡದಲ್ಲಿ ಸಣ್ಣಕತೆಯನ್ನು ಬರೆದ ಪ್ರಥಮರೆಂದು ಕರೆಸಿಕೊಂಡಿದ್ದಾರೆ.

೧೯೦೦ರಲ್ಲಿ ಪಂಜೆ ಮಂಗೇಶರಾಯರ 'ನನ್ನ ಚಿಕ್ಕತಾಯಿ' 'ನನ್ನ ಚಿಕ್ಕತಂದೆ' ಪ್ರಕಟವಾದವು. ಮಾಸ್ತಿಯವರ ಕೈಯಲ್ಲಿ 'ಸಣ್ಣಕತೆ' ಕಲೆಗಾರಿಕೆಯನ್ನು ಪಡೆದು ಅರಳಿತು. ಆಧುನಿಕ ಕನ್ನಡದಲ್ಲಿ ಲೇಖಕಿಯರು ಕಾದಂಬರಿ ಹಾಗೂ ಸಣ್ಣಕತೆಗಳಿಂದಲೇ ಸಾಹಿತ್ಯರಂಗದಲ್ಲಿ ಪ್ರವೇಶಿಸಿದರು.

ಮಹಿಳಾ ಸಾಹಿತ್ಯಕ್ಕೆ ಪ್ರೇರಣೆ :

ಪಾಶ್ಚಾತ್ಯ ಸಂಸ್ಕೃತಿಯ ಸಂಪರ್ಕ, ಸ್ತ್ರೀ ಏಳಿಗೆಗಾಗಿ ಸಮಾಜ ಸುಧಾರಕರಿಂದ ನಡೆದ ಚಳುವಳಿ, ಸ್ವಾತಂತ್ರ್ಯಹೋರಾಟ, ಇವೆಲ್ಲವುಗಳಿಂದಾಗಿ ಭಾರತೀಯ ಸಮಾಜ ದಲ್ಲಿ ನವ ಜಾಗೃತಿಯುಂಟಾಯಿತು. ಮಿಶನರಿಗಳಿಂದ ಪ್ರಾರಂಭವಾದ ಶಿಕ್ಷಣ ಪ್ರಚಾರ ದಿಂದ ಕ್ರಮೇಣ ಸ್ತ್ರೀ ವಿದ್ಯಾಭ್ಯಾಸಕ್ಕೂ ಪ್ರೇರಣೆ ಹಾಗೂ ಪ್ರೋತ್ಸಾಹ ದೊರೆತವು.

ನಮ್ಮ ಕರ್ನಾಟದಲ್ಲೂ ಸಹ ಎಚ್ಚೆತ್ತ ಮಹಿಳೆಯರು ದೇಶ ಭಕ್ತಿಯಿಂದ ಗಾಂಧೀಜಿಯವರ ಕರೆಗೆ ಓಗೊಟ್ಟು ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದರು.

ಕುಮಟೆಯ ಗಂಗಾಬಾಯಿ, ಶಕುಂತಾಲಾ ಕುರ್ತಕೋಟಿ, ಭವಾನಿ ನಾಡಕರ್ಣಿ, ರಾಧಾ ಕಾರ್ನಾಡ, ಬಿ. ಕಾಮಾಕ್ಷಮ್ಮ, ಉಮಾಬಾಯಿ ಕುಂದಾಪುರ, ಕೃಷ್ಣಾಬಾಯಿ ಪಣಜೀಕರ, ಇನ್ನೂ ಅನೇಕ ಮಹಿಳೆಯರನ್ನು ಇಲ್ಲಿ ನೆನೆಯಬಹುದು.

ಸಮಗ್ರ ಸಮಾಜದಲ್ಲಾದ ಜಾಗೃತಿಯೇ ಕರ್ನಾಟದ ಮಹಿಳೆಯರ ಜಾಗೃತಿಗೂ ಕಾರಣವಾಯಿತು. ನಾಲ್ಕುಗೋಡೆಗಳ ಮಧ್ಯೆ ತನ್ನ ಬದುಕನ್ನು ರೂಪಿಸಿಕೊಂಡು ಬಾಳುತ್ತಿದ್ದ ಮಹಿಳೆ. ಬದಲಾಗುತ್ತಿರುವ ಹೊಸ ಸಮಾಜದತ್ತ ಕಣ್ತೆರೆದು ನೋಡ ತೊಡಗಿದಳು. ಪಾಶ್ಚಾತ್ಯ ಪ್ರಭಾವದಿಂದ ಭಾರತೀಯ ಸಾಹಿತ್ಯರಂಗವನ್ನು ಪ್ರವೇಶಿಸಿದ ಕತೆ, ಕಾದಂಬರಿ, ವೃತ್ತ ಪತ್ರಿಕೆಗಳು ಇವು ನಮ್ಮ ಮಹಿಳೆಯರ ಆಲೋಚನಾಶಕ್ತಿಯನ್ನು ಕುದುರಿಸಿದವು.

ಈ ಶತಮಾನದ ಆರಂಭ ಕಾಲದಲ್ಲಿ ಮಹಿಳೆಯರು ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿದಾಗ ಹೊಸಗನ್ನಡದಲ್ಲಿ ಗದ್ಯ ರಚನೆ ಪ್ರಾರಂಭವಾಗಿ ಹಲವು ದಶಕಗಳು ಕಳೆದಿದ್ದವು. ಎಂ. ಎಸ್. ಪುಟ್ಟಣ್ಣ. ಬಿ. ವೆಂಕಟಾಚಾರ್ಯ, ಗಳಗನಾಥ ಇವರ ಕನ್ನಡದ ಗದ್ಯವನ್ನು ಹದಗೊಳಿಸಿದ್ದರು. ಸ್ತ್ರೀ ಶಿಕ್ಷಣ ಪ್ರಸಾರದಿಂದ ಮಹಿಳೆಯ ರಲ್ಲೂ ಓದುವ ಅಭಿರುಚಿ ಬೆಳೆಯಿತು. ಬಿ. ವೆಂಕಟಾಚಾರ್ಯ ಹಾಗೂ ಗಳಗನಾಥರ ಕಾದಂಬರಿಗಳು, ಗುಲ್ವಾಡಿಯವರ ಇಂದಿರಾಬಾಯಿ, ಕೆರೂರ ವಾಸುದೇವಾಚಾರ್ಯರ 'ಇಂದಿರೆ'ಯಂತಹ ಸಾಮಾಜಿಕ ಕಾದಂಬರಿಗಳು ಮಹಿಳೆಯರನ್ನು ಆಕರ್ಷಿದವು. ಶ್ರೀನಿವಾಸ, ಪಂಜೆಮಂಗೇಶರಾವ್ ಅವರ ಕತೆಗಳು ಜನಾಭಿರುಚಿಯನ್ನು ಕೆರಳಿಸಿದವು. ಓದು ಬರಹವನ್ನು ಬಲ್ಲ ಮಹಿಳೆಯರನ್ನು ಕಥಾಂಶವೇ ಹೆಚ್ಚಾಗಿವುಳ್ಳ ಸುಲಭವಾಗಿ ಕೈಗೆ ನಿಲುಕುವ ಕತೆ ಕಾದಂಬರಿಗಳು ಮಹಿಳೆಯರನ್ನು ಬರೆಯಲು ಪ್ರಚೋದಿಸಿದವು.

ಸ್ವಾತಂತ್ರ್ಯಪೂರ್ವದ ಲೇಖಕಿಯರು :

ಈ ಶತಮಾನದ ಆರಂಭದಲ್ಲಿಯೇ ಬಾಲವಿಧವೆಯರಾದ ನಂಜನಗೂಡಿನ ದಿ॥ ತಿರುಮಲಾಂಬಾ ಹಾಗೂ ಆರ್. ಕಲ್ಯಾಣಮ್ಮ ಇವರು ಬಂಧುಗಳ ಸಹಾಯದಿಂದ ವಿದ್ಯಾಭ್ಯಾಸ ಪಡೆದು ಸಮಾಜ ಸೇವೆಯೊಂದಿಗೆ ಸಾಹಿತ್ಯ ರಚನೆಗೆ ಕೈಹಾಕಿದುದು ಗಮನಾರ್ಹವೆನಿಸುತ್ತದೆ. ಆ ಕಾಲದ ದೃಷ್ಟಿಯಿಂದ ನೋಡಿದಾಗ ಪ್ರತಿಕೂಲ ಪರಿಸ್ಥಿತಿಯಲ್ಲಿ ಅವರು ಸಾಧಿಸಿದುದು ಹೆಚ್ಚಿಂದೇ ಹೇಳಬೇಕಾಗುತ್ತದೆ.

ತಿರುಮಲಾಂಬಾ ಅವರಿಗಿಂತ ಪೂರ್ವದಲ್ಲೇ ಉತ್ತರ ಕರ್ನಾಟಕದವರಾದ ಶ್ರೀಮತಿ ಶಾಂತಾಬಾಯಿ ನೀಲಗಾರ ಇವರು ೧೯೧೦ರಲ್ಲಿ ಸದ್ಗುಣಿ ಕೃಷ್ಣಾಬಾಯಿ ಅಥವಾ ಉತ್ತಮ ಗೃಹಿಣಿ" ಎಂಬ ಕಾದಂಬರಿಯನ್ನು ಬರೆದುದನ್ನು ಇಲ್ಲಿ ನೆನೆಯ ಬೇಕು. ಅದು ವಾಗ್ಭೂಷಣ ಪತ್ರಿಕೆಯಲಲ್ಲ ಪ್ರಕಟವಾಗಿತ್ತು. ಗುಳವಾಡಿ ವೆಂಕಟ ರಾಯರ 'ಇಂದಿರಾಬಾಯಿ ಅಥವಾ ಸದ್ಧರ್ಮ ವಿಜಯ (೧೮೯೯) ದ ಹೆಸರಿನ ಮಾದರಿಯಲ್ಲಿ ಕಾದಂಬರಿಯ ಶೀರ್ಷಿಕೆ ಇರುವುದನ್ನು ಗಮನಿಸಬಹುದು.

ನಂಜನಗೂಡಿನ ತಿರುಮಲಾಂಬಾ ಅವರ ಪ್ರಥಮ ಕಾದಂಬರಿ 'ಸುಶೀಲೆ' ೧೯೧೩ ರಲ್ಲಿಯೇ ಪ್ರಕಟವಾಯಿತು. 'ವೀರಾಗಿಣಿ', ೧೯೧೪ 'ನಭಾ', 'ವಿದ್ಯುಲ್ಲತಾ', 'ಮಣಿ

ಮಾಲಾ', 'ಪೂರ್ಣಕಲಾ', 'ದಕ್ಷಕನ್ಯಾ'. ಈ ಮೊದಲಾದ ಕಾದಂಬರಿಗಳನ್ನು ಬರೆದಿದ್ದಾರೆ. ಮತ್ತು 'ಕರ್ನಾಟಕ ನಂದಿನಿ' 'ಸನ್ಮಾರ್ಗ', ಎಂಬ ಪ್ರಬಂಧಗಳನ್ನು 'ರಮಾನಂದ' ಎಂಬ ನಾಟಕವನ್ನು ರಚಿಸಿದ್ದಾರೆ. 'ಭಕ್ತಿಗೀತಾವಳಿ', 'ಭದ್ರಗೀತಾವಳಿ' ಇವು ಅವರ ಕಾವ್ಯಗಳು, ತಿರುಮಲಾಂಬಾ ಅವರು ನಾಟಕ, ಪ್ರಬಂಧ, ಲೇಖನಗಳನ್ನು ಬರೆದಿದ್ದರೂ ಸಹ ಕಾದಂಬರಿಗಳ ಸಂಖ್ಯೆಯೇ ಹೆಚ್ಚು. ಅವರು ಸ್ತ್ರೀ ಶಿಕ್ಷಣ ಹಾಗೂ ವಿಧವೆಯರ ಸಮಸ್ಯೆಗಳನ್ನು ಕುರಿತು ಬರೆದರು. ಕಾದಂಬರಿಕಾರ್ತಿಯಾಗಿರುವುದರ ಜೊತೆಗೆ 'ಸತೀಹಿತೈಷಿಣಿ ಗ್ರಂಥಮಾಲೆ'ಯನ್ನು ನಡೆಸಿದರು.

ಆರ್. ಕಲ್ಯಾಣಮ್ಮನವರು ಸ್ತ್ರೀ ಏಳಿಗಾಗಿ 'ಶಾರದಾ ಸ್ತ್ರೀ ಸಮಾಜ'ವನ್ನು ಸ್ಥಾಪಿಸಿದರು. ೧೯೩೧ ರಲ್ಲಿ ಮಕ್ಕಳ ಕೂಟವನ್ನು ಪ್ರಾರಂಭಿಸಿದರು. 'ಸರಸ್ವತಿ' ಎಂಬ ಮಾಸ ಪತ್ರಿಕೆಯನ್ನು ನಡೆಸಿದ್ದರು. ಅಸಹಾಯಕ ಬಡಮಹಿಳೆಯರ ಉದ್ಧಾರಕ್ಕಾಗಿ ಶ್ರಮಿಸಿದರು. ಸ್ತ್ರೀ ಶಿಕ್ಷಣಕ್ಕಾಗಿ ಆಗ್ರಹ ಪಡಿಸಿದರು. 'ಸುಖಲತಾ', 'ಭಕ್ತಮೀರಾ', 'ಮಾಧವಿ', 'ನಿರ್ಮಲಾ', 'ಸತಿಪದ್ಮಿನಿ', 'ನೀರದಾ ರಣಕೇಸರಿ', 'ಪ್ರಹಜಾನ' ಎಂಬ ಸ್ವತಂತ್ರ ಕಾದಂಬರಿಗಳನ್ನು ಬರೆದರು. ಪ್ರಿಯಂವದೆ; ಇಂದಿರೆ ಅಥವಾ ನಿರ್ಭಾಗ್ಯವನಿತೆ ಇವರ ಅನುವಾದಿತ ಕಾದಂಬರಿಗಳು.

ನಾಟಕ ಹಾಗೂ ಮಕ್ಕಳ ಸಾಹಿತ್ಯಕ್ಕೂ ಇವರಿಂದ ಕಾಣಿಕೆ ಸಂದಿದೆ. 'ಕನ್ನಡಿ' 'ಪಂಚಕಜ್ಜಾಯ ಪುಟಾಣಿ ಕತೆಗಳು,' 'ವಿಕಟಕವಿ', ನಮ್ಮ ಹಿಂದೂಸ್ತಾನ ಇವು ಮಕ್ಕಳಿಗಾಗಿ ಬರೆದವುಗಳು. ಕಾದಂಬರಿಗಳ ಸಂಖ್ಯೆಯೇ ಹೆಚ್ಚು ಇವರು ಸ್ತ್ರೀಯರ ಶಿಕ್ಷಣಕ್ಕಾಗಿ ಒತ್ತಿ ಹೇಳಿದರು. ಮತ್ತು ವಿಧವೆಯರ ಗೋಳನ್ನು ಚಿತ್ರಿಸಿದರು.

ತಿರುಮಲಾಂಬಾ ಹಾಗೂ ಕಲ್ಯಾಣಮ್ಮ ಇವರು ಈ ಶತಮಾನ ಆರಂಭ ಕಾಲದಲ್ಲಿಯ ಕೈಗೊಂಡ ನಾಡು—ನುಡಿಯ ಸೇವೆ ಮಹತ್ವಪೂರ್ಣವಾಗಿದೆ.

ಸ್ವಾತಂತ್ರ್ಯ ಪೂರ್ವದ ಬರಹಗಾರ್ತಿಯರಲ್ಲಿ ಅದರಲ್ಲೂ ಕತೆಗಾರ್ತಿಯರಲ್ಲಿ ದಿ॥ ಕೊಡಗಿನ ಗೌರಮ್ಮ (ಬಿ. ಟಿ. ಜಿ. ಕೃಷ್ಣ ೧೯೧೨–೧೯೪೦) ನವರ ಹೆಸರು ಎದ್ದು ಕಾಣುವಂತಹದು. ೧೯೩೧ ರಿಂದಲೇ ಗೌರಮ್ಮನವರು ಕತೆಗಳನ್ನು ಬರೆಯಲು ಪ್ರಾರಂಭಿಸಿದರು 'ಕಂಬನಿ' 'ಚಿಗುರು' ಇವು ಅವರ ಕಥಾ ಸಂಕಲನಗಳು, ಗೌರಮ್ಮನವರು ತಮ್ಮ ಕತೆಗಳಲ್ಲಿ' ದಾಂಪತ್ಯ ಜೀವನದ ಸುಖ–ದುಃಖಗಳನ್ನು, ಸ್ತ್ರೀಯ ಕೋಮಲವಾದ ಭಾವನೆಗಳನ್ನೂ ನವಿರಾಗಿ ಸರಳವಾಗಿ ಬಿಡಿಸಿದ್ದಾರೆ. ಇವರು ಒಳ್ಳೆಯ ಕತೆಗಾರ್ತಿ ಎಂದು ತಮ್ಮ ಬರವಣಿಗೆಯ ಪ್ರಾರಂಭದ ಹಂತದಲ್ಲೇ ಹೆಸರು ಗಳಿಸಿದ್ದರು. ಕನ್ನಡ ಜನತೆ ಅವರಿಂದ ಇನ್ನೂ ಉತ್ತಮವಾದುದನ್ನು ನಿರೀಕ್ಷಿಸುತ್ತಿದ್ದಾಗ ಅಕಾಲ ಮರಣಕ್ಕೆ ತುತ್ತಾದರು.

ಶ್ಯಾಮಲಾದೇವಿ ಬೆಳಗಾಂವಕರ ಅವರು ಸಹ ಸ್ವಾತಂತ್ರ್ಯಪೂರ್ವದ ಬರಹಗಾರ್ತಿ 'ಹೂ—ಬಿಸಿಲು' ಎಂಬುದು ಇವರ ಕಥಾ ಸಂಕಲನ.

ಶ್ರೀಮತಿ ಜಯಲಕ್ಷ್ಮಿ ಶ್ರೀನಿವಾಸನ್ ಅವರು ೧೯೩೭ರಲ್ಲಿ 'ಸರೋಜಿನಿ ನಳಿನಿ' ಎಂಬ ಜೀವನ ಚರಿತ್ರೆಯನ್ನು ಬರೆದಿದ್ದಾರೆ. 'ಮೊಗ್ಗು' ಎಂಬ ಕಥಾ ಸಂಕಲನ ಹಾಗೂ 'ಪರಿಣಯ' ಎಂಬ ಒಂದು ಕಾದಂಬರಿಯನ್ನು ಬರೆದಿದ್ದಾರೆ. ೧೯೨೦ರಲ್ಲಿ ಕಮಲಾಂಬಾ ಶಿಖರಂ ಎಂಬುವವರು ಆಂಧ್ರದ ಭಂಡಾರು ಅಚ್ಚಮಾಂಬೆಯವರ 'ಅಬಲಾ ಸಚ್ಚರಿತ್ರ ರತ್ನಮಾಲಾ ಹಾಗೂ ವಿದುಷಿ ಮಣಲು' ಎಂಬ ತೆಲುಗಿನ ಮೂಲ ಕೃತಿಯನ್ನು 'ಅಬಲಾ ಸಚ್ಚರಿತ್ರಮಾಲಾ' ಎಂದು ಕನ್ನಡಕ್ಕೆ ತಂದಿದ್ದಾರೆ. ಸರಸ್ವತಿ ಬಾಯಿ ರಾಜವಾಡೆ, ಶಾಂತಾದೇವಿ ಮಾಳವಾಡ, ವಾಣಿ, (ಬಿ.ನ. ಸುಬ್ಬಮ್ಮ) ಇವರು ಸ್ವಾತಂತ್ರ್ಯ ಪೂರ್ವದಲ್ಲೇ ಬರವಣಿಗೆಯನ್ನು ಪ್ರಾರಂಭಿಸಿದರು.

ಸರಸ್ವತಿಬಾಯಿ ರಾಜವಾಡೆಯವರು ಅನೇಕ ಕತೆಗಳನ್ನು ಲೇಖನಗಳನ್ನು ಪತ್ರಿಕೆಗಳಲ್ಲಿ ಬರೆದರು. ೧೯೩೮ರಲ್ಲಿ 'ಆಹುತಿ ಇತ್ಯಾದಿ ಕತೆಗಳು' ಪ್ರಕಟವಾದವು. 'ಕದಂಬ' ಪ್ರೇಮವಿವಾಹ, ಎಂಬ ಕಥಾ ಸಂಕಲನವನ್ನೂ ವಿಮಲೆ' ಎಂಬ ಕಾದಂಬರಿಯನ್ನೂ ಬರೆದಿದ್ದಾರೆ.

ಶಾಂತಾದೇವಿಮಾಳವಾಡ ಇವರು ೧೯೪೧ ರಿಂದ ಮೊಗ್ಗೆಯ ಮಾಲೆ ಕಥಾ ಸಂಕಲನದಿಂದ ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿದರು. 'ಕುಂಕುಮಬಲ' ಇವರ ಮತ್ತೊಂದು ಕಥಾಸಂಕಲನ.

'ಕನ್ನಡ ತಾಯಿ', 'ಕೆಳದಿಚೆನ್ನಮ್ಮ', 'ಅಕ್ಕನಾಗಲಾಂಬಿಕೆ' 'ಸ್ವಾಭಿಮಾನಿ ಬೆಳವಡಿ ರಾಣಿ' ಇನ್ನೂ ಮೊದಲಾದ ಇಪ್ಪತ್ತೆರಡು ಕೃತಿಗಳನ್ನು ರಚಿಸಿದ್ದಾರೆ. 'ರಸಪಾಕ', 'ಸೊಬಗಿನಮನೆ' ಮಹಿಳೆಯರ ಅಲಂಕಾರ, ಇತ್ಯಾದಿ ಮಹಿಳೆಯರಿಗೆ ಉಪಯುಕ್ತವಾದ ಪುಸ್ತಕಗಳನ್ನು ಬರೆದಿದ್ದಾರೆ.

ವಾಣಿಯವರು ಕಾದಂಬರಿಕಾರ್ತಿಯಾಗಿ ಹೆಸರು ಗಳಿಸಿದ್ದಾರೆ. ೧೯೪೪ ರಲ್ಲಿ 'ಕಸ್ತೂರಿ' ಎಂಬ ಕಥಾಸಂಕಲನ ಪ್ರಕಟವಾಯಿತು. ಅವರ ಪ್ರಥಮ ಕಾದಂಬರಿ 'ಬಿಡುಗಡೆ', ೧೯೫೫ರಲ್ಲಿ ಬೆಳಕಿಗೆ ಬಂದಿತು. 'ಚಿನ್ನದ ಪಂಜರ', 'ಮನೆ ಮಗಳು', 'ಅವಳ ಭಾಗ್ಯ', 'ಅಂಜಲಿ', 'ಕಾವೇರಿಯ ಮಡಿಲಲ್ಲಿ' 'ಬಾಳಿಯ ನೆರಳು' ಈ ಮೊದಲಾದ ಕಾದಂಬರಿಗಳನ್ನು ಬರೆದಿದ್ದಾರೆ. ನಾಲ್ಕು ಕಥಾ ಸಂಕಲನಗಳು ಪ್ರಕಟವಾಗಿವೆ. 'ಎರಡು ಕನಸು', 'ಶುಭಮಂಗಳ' 'ಹೊಸ ಬೆಳಕು', ಇವು ಚಲನ ಚಿತ್ರಗಳಾಗಿ ಜನಪ್ರಿಯತೆ ಗಳಿಸಿವೆ.

"ಆದರ್ಶ ಗೃಹಿಣಿಯನ್ನೇ ಚಿತ್ರಿಸುವುದು ಇವರಿಗೆ ಪ್ರಿಯವಾದರೂ ಅವರ ಕೆಲವೊಂದು ಕಥೆ, ಕಾದಂಬರಿಗಳಲ್ಲಿ ಮಹಿಳೆಯ ಸಮಸ್ಯೆಗಳ ಬಗ್ಗೆ ಸೂಚನೆ ಇದೆ.

ಉದಾಹರಣೆಗೆ ಅವರ ಮನೆ ಮಗಳು ಕಾದಂಬರಿಯಲ್ಲಿ ವಿಧವೆಯ ಪುನರ್ ವಿವಾಹವೇ ವಸ್ತುವಾಗಿದೆ."

ಸ್ವಾತಂತ್ರ್ಯೋತ್ತರ ಲೇಖಕಿಯರು (೧೯೪೭ ರಿಂದೀಚೆಗೆ)

೧೯೫೩ರಲ್ಲಿ ತ್ರಿವೇಣಿಯವರ ಆಗಮನದೊಂದಿಗೆ ಲೇಖಕಿಯರ ಸ್ಥಾನ ಮಾನ ದಲ್ಲಿ ಬದಲಾವಣೆ ಕಂಡುಬಂದಿತು. 'ಸ್ವಾತಂತ್ರ್ಯೋತ್ತರ ಬರಹಗಾರ್ತಿಯರಲ್ಲಿ ತ್ರಿವೇಣಿ ಅತ್ಯಂತ ಪ್ರಮುಖರು. ಇವರ ಪ್ರಥಮ ಕಾದಂಬರಿ 'ಹೂವು-ಹಣ್ಣು' ವೇಶ್ಯಾಸಮಸ್ಯೆಯನ್ನೊಳಗೊಂಡದ್ದು ೧೯೫೩ರಲ್ಲಿ ಪ್ರಕಟವಾಯಿತು. ವೇಶ್ಯಾ ಸಮಸ್ಯೆಯನ್ನು ಕುರಿತು ಬರೆದ ಲೇಖಕಿಯರಲ್ಲಿ ತ್ರಿವೇಣಿ ಮೊದಲಿಗರು. ಮನಶ್ಶಾಸ್ತ್ರ ವನ್ನು ಪ್ರಧಾನ ವಿಷಯವನ್ನಾಗಿ ಅಭ್ಯಸಿಸಿ ಬಿ. ಎ. ಪದವಿಗಳಿಸಿದ ತ್ರಿವೇಣಿಯವರು ಮನೋವೈಜ್ಞಾನಿಕ ಕಾದಂಬರಿಗಳನ್ನು ಬರೆದರು. ವಸ್ತುವೈವಿಧ್ಯ ಹಾಗೂ ಸರಳ ಶೈಲಿಯಿಂದಾಗಿ ತ್ರಿವೇಣಿಯವರು ಕೆಲವೇ ವರ್ಷಗಳಲ್ಲಿ ಜನಪ್ರಿಯತೆಯನ್ನು ಗಳಿಸಿದರು.

'ಶರಪಂಜರ', 'ಬೆಕ್ಕಿನಕಣ್ಣು', 'ದೂರದಬೆಟ್ಟ', ಇವು ಮೊದಲಾದ ಮನೋ ವೈಜ್ಞಾನಿಕ ಕಥಾವಸ್ತುವನ್ನೊಳಗೊಂಡ ಕಾದಂಬರಿಗಳನ್ನು ಬರೆದರು. ಮನೋ ವೈಜ್ಞಾನಿಕ ಕಾದಂಬರಿಗಳನ್ನು ಬರೆದ ಲೇಖಕಿಯರಲ್ಲಿ ತ್ರಿವೇಣಿ ಮೊದಲಿಗರು. 'ಅಪಸ್ವರ', 'ಸೋತು ಗೆದ್ದವಳು', 'ಅಪಜಯ', 'ಕೀಲುಗೊಂಬೆ, 'ಹಣ್ಣೆಲೆ' ಚಿಗುರಿ ದಾಗ', 'ವಸಂತಗಾನ', 'ಕಂಕಣ', 'ಮುಕ್ತಿ', ತಾವರೆಕೊಳ, 'ಅವಳ ಮಗಳು' ಮುಂತಾದ ಇಪ್ಪತ್ತೊಂದು ಕಾದಂಬರಿಗಳನ್ನೂ 'ಹೆಂಡತಿಯ ಹೆಸರು', 'ಸಮಸ್ಯೆಯ ಮಗು ಈ ಎರಡು ಕಥಾ ಸಂಕಲನಗಳನ್ನು ಕನ್ನಡಿಗರಿಗೆ ಕೊಟ್ಟಿದ್ದಾರೆ.

ತ್ರಿವೇಣಿಯವರು ತಮ್ಮ ಕತೆ-ಕಾದಂಬರಿಗಳಲ್ಲಿ ಕೌಟುಂಬಿಕ, ಸಾಮಾಜಿಕ ಸಮಸ್ಯೆಗಳನ್ನು ಚಿತ್ರಿಸಿದ್ದಾರೆ. ಸ್ತ್ರೀಯ ಬದುಕಿನ ಹಲವು ಸಮಸ್ಯೆಗಳನ್ನು ಚಿತ್ರಿಸಿ ದ್ದಾರೆ. ಸ್ತ್ರೀಯ ಬದುಕಿನ ಹಲವು ಸಮಸ್ಯೆಗಳನ್ನು, ದಾಂಪತ್ಯ ಜೀವನದ ಸರಸ ವಿರಸವನ್ನು, ನೋವು—ನಲಿವುಗಳನ್ನೂ ಚಿತ್ರಿಸಿದ್ದಾರೆ. 'ಅಪಸ್ವರ' 'ಅಪಜಯ' 'ಕಾದಂಬರಿಗಳಲ್ಲಿ ವಿಷಮ ವಿವಾಹವನ್ನು 'ಸೋತು ಗೆದ್ದವಳು' ಕಾದಂಬರಿಯಲ್ಲಿ ವಿವಾಹ ಬಾಹಿರ ಪ್ರೇಮದಲ್ಲಿ ಬಂಧಿತಳಾದ ಹೆಣ್ಣಿನ ಮಾನಸಿಕ ತೊಳಲಾಟವನ್ನು ಚಿತ್ರಿಸಿದ್ದಾರೆ. 'ಕಂಕಣ', -'ಮುಕ್ತಿ' ಈ ಕಾದಂಬರಿಗಳಲ್ಲಿ ವಿದ್ಯಾವಂತ ಅವಿವಾಹಿತ ತರುಣಿಯರ ಸಮಸ್ಯೆ ಇದ್ದರೆ 'ಹಣ್ಣೆಲೆ ಚಿಗುರಿದಾಗ' ಕಾದಂಬರಿಯಲ್ಲಿ ವಿಧವಾ ವಿವಾಹ ಸಮಸ್ಯೆ ಇದೆ. 'ಬೆಳ್ಳಿಮೋಡ'ದಲ್ಲಿ ಸ್ವಾರ್ಥಿಯುವಕನ ಪ್ರೇಮದಿಂದ ಮೋಸ ಹೋಗಿ ನಿರಾಶೆಗೊಂಡ ಯುವತಿಯ ಪಾತ್ರವಿದೆ. ಹೀಗೆ ಅವರ ಕಾದಂಬರಿಗಳಲ್ಲಿ ಸ್ತ್ರೀಯರ ಸಮಸ್ಯೆಗಳು, ಕೌಟುಂಬಿಕ ಸಾಮಾಜಿಕ ಸಮಸ್ಯೆಗಳು ಇವೆ. ಅಲ್ಪಾವಧಿ ಯಲ್ಲೇ ಜನ ಮೆಚ್ಚುಗೆಯನ್ನು ಪಡೆದ ತ್ರಿವೇಣಿಯವರ ಹೆಸರು ಆಧುನಿಕ ಕನ್ನಡ

ಸಾಹಿತ್ಯದಲ್ಲಿ ಕನ್ನಡಿಗರ ಮನದಲ್ಲಿ ಶಾಶ್ವತವಾಗಿವೆ. ಕನ್ನಡ ಸಾಹಿತ್ಯ ಇನ್ನೂ ಅವರಿಂದ ಉತ್ತಮ ಸೇವೆಯನ್ನು ನಿರೀಕ್ಷಿಸುತ್ತಿರುವಾಗ ಅವರು ನಿಧನರಾದರು.

ಡಾ॥ ಅನುಪಮಾ ನಿರಂಜನ ಇವರು ಕಾದಂಬರಿಗಳನ್ನೂ ಕಥಾ ಸಂಕಲನ ಗಳನ್ನೂ ಬರೆದಿದ್ದಾರೆ. ಇವರು ಖ್ಯಾತ ಕಾದಂಬರಿಕಾರ ನಿರಂಜನರ ಪತ್ನಿ. ವೃತ್ತಿ ಯಿಂದ ವೈದ್ಯ (ಎಂ. ಬಿ. ಬಿ. ಎಸ್) ಇವರ ಪ್ರಥಮ ಕಾದಂಬರಿ 'ಅನಂತಗೀತ' ೧೯೫೪ರಲ್ಲಿ ಪ್ರಕಟವಾಗಿದೆ. ಸಂಕೋಲೆಯೊಳಗಿಂದ ನೂಲು ಸೇಯ್ದು ಚಿತ್ರ ಹಿಮದ ಹೂ, ಆಕಾಶಗಂಗೆ, ಸಸ್ಯಶ್ಯಾಮಲಾ, ಮಾಧವಿ ನಟಿ ಎಳೆ, ಕೊಳಚೆಕೊಂಪೆಯ ದಾನಿ ಗಳು ಇವೇ ಮೊದಲಾದ ಹತ್ತೊಂಭತ್ತು ಕಾದಂಬರಿಗಳನ್ನು ಬರೆದಿದ್ದಾರೆ, ಕಣ್ಮಣಿ, ರೂವಾರಿಯಲಕ್ಷ್ಮಿ, ನೀರಿಗೆನ್ನೈದಿಲೆ ಶೃಂಗಾರ, ಏಳು ಸುತ್ತಿನ ಮಲ್ಲಿಗೆ, ಗಿರಿಧಾಮ, ಒಡಲು ಪುಷ್ಪ ಇವು ಅವರ ಕಥಾ ಸಂಕಲನಗಳು.

ವೈದ್ಯಕೀಯ ಗ್ರಂಥಗಳನ್ನು ಬರೆದಿದ್ದಾರೆ. ಆರೋಗ್ಯದರ್ಶನ ಕೆಂಪಮ್ಮನ ಮಗು, ತಾಯಿ—ಮಗು, ಕೇಶು ಕಿಶೋರಿ ಇವು ಅವರ ವೈದ್ಯಕೀಯ ಗ್ರಂಥಗಳು.

೧೯೬೦ರಲ್ಲಿ 'ರೂವಾರಿಯಲಕ್ಷ್ಮಿ' ಕಥಾ ಸಂಕಲನ ಹಾಗೂ 'ಆರೋಗ್ಯದರ್ಶನ' ಎಂಬ ವೈದ್ಯಕೀಯ ಗ್ರಂಥಕ್ಕೆ ರಾಜ್ಯ ಸರಕಾರದ ಬಹುಮಾನ ಲಭಿಸಿದೆ. ಇನ್ನೂ ಅವರ ಧಾರಾವಾಹಿ ಕಾದಂಬರಿಗಳು ಸಣ್ಣ ಕತೆ, ವೈಜ್ಞಾನಿಕ, ವೈದ್ಯಕೀಯ ಲೇಖನ ಗಳು ಪ್ರಕಟವಾಗುತ್ತಿವೆ. ಸಾಹಿತ್ಯದ ವಿವಿಧ ಪ್ರಕಾರಗಳಿಗೆ ಅವರು ತಮ್ಮ ಮಹತ್ವದ ಕೊಡುಗೆ ನೀಡಿದ್ದಾರೆ.

'ಸಂಕೋಲೆಯೊಳಗಿಂದ' ಕಾದಂಬರಿಯು ವಸ್ತು ಹೆಣ್ಣಿನ ಮೇಲೆ ಗಂಡಿನ ದಬ್ಬಾಳಿಕೆ'ಯನ್ನು ಚಿತ್ರಿಸುತ್ತಾನೆ. 'ಚಿತ್ತಮೋಹನ' ಕಾದಂಬರಿಯಲ್ಲಿ ವಿಧವಾ ವಿಹಾರದ ಸಮಸ್ಯೆ ಇದೆ.

ಸ್ವಾತಂತ್ರ್ಯಾನಂತರದ ಲೇಖಕಿಯರಲ್ಲಿ ಗೀತಾಕುಲಕರ್ಣಿಯಾವರೂ ಪ್ರಮುಖರು ಅವರ 'ತೇಲಿಹೋದವೋಡ' ಕಥಾಸಂಕಲನ ೧೯೫೬ರಲ್ಲಿ ಪ್ರಕಟವಾಗಿವೆ. 'ಸುವರ್ಣೆಯ ಗ್ರಿನ್ ರೂಂ', 'ಚಿಪ್ಪಿನೊಳಗಣ ಮುತ್ತು' ಇವು ಅವರ ಕಥಾ ಸಂಕಲನಗಳು. 'ಕಂಬನಿ ಒರೆಸಿದಕೈ' 'ಸ್ವಪ್ನಮಂದಿರ', 'ಶೋಭನಾ', 'ಸಂಬಂಧ', 'ನೂಲು ಏಣಿ', 'ದೀಪ ಮಿಂಚಿತು' ಇವು ಅವರ ಕಾದಂಬರಿಗಳು. ಅವರ ಕತೆ ಕಾದಂಬರಿಗಳಲ್ಲಿ ಪ್ರಗತಿಪರ ಧೋರಣೆ ಇದೆ.

ತ್ರಿವೇಣಿಯವರ ಸಹೋದರಿಯಾದ ಆರ್ಯಂಬ ಪಟ್ಟಾಭಿಯವರು ಕತೆ, ಕಾದಂಬರಿ ಗಳನ್ನು ಬರೆದಿದ್ದಾರೆ. ಅವರ ಪ್ರಥಮ ಕಾದಂಬರಿ ಹೊಂಗನಸು ೧೯೬೧ರಲ್ಲಿ ಪ್ರಕಟ ವಾಗಿದೆ. 'ಆರಾಧನೆ', 'ಪ್ರಿಯ ಸಂಗಮ', 'ಎರಡುಮುಖ', 'ಬೀಸಿದಬಲೆ', 'ಸವತಿ ನೆರಳು', 'ಬದುಕಿನ ಬವಣೆಯಲ್ಲಿ', 'ಕಪ್ಪುಬಿಳಪು' ಈ ಮೊದಲಾದ ಇಪ್ಪತ್ತು ಕಾದಂಬರಿ ಗಳನ್ನು ಬರೆದಿದ್ದಾರೆ 'ಉದಯರವಿ', 'ಮರಳಬಂದ ಮಮತೆ', 'ನನ್ನವಳು' ಇವು ಅವರಕಥಾ ಸಂಕಲನಗಳು.

ಶ್ರೀಮತಿ ಶಾಂತಾದೇವಿ ಕಣವಿಯವರು ಕತೆಗಾರ್ತಿ ಎಂದು ಹೆಸರುಗಳಿಸಿದ್ದಾರೆ. ಉತ್ತರಕರ್ನಾಟಕ ಆಡುನುಡಿಯ ಸೊಗಸು ಇವರ ಕತೆಗಳಲ್ಲಿದೆ. ಅವರ ಪ್ರಥಮ ಸಂಕಲನ 'ಸಂಜೆಮಲ್ಲಿಗೆ' ೧೯೬೦ರಲ್ಲಿ ಪ್ರಕಟಗೊಂಡಿದೆ 'ಮರುವಿಚಾರ' 'ಬಯಲು ಆಲಯ' 'ಜಾತ್ರೆ ಮುಗಿದಿತ್ತು' ಇವು ಅವರ ಇನ್ನಿತರ ಕಥಾ ಸಂಕಲನಗಳು ನಿಜಗುಣ ಶಿವಯೋಗಿ' ಮಕ್ಕಳಿಗಾಗಿ ಬರೆದ ಪುಸ್ತಕ.

ನವ್ಯ ಬರಹಗಾರ್ತಿ ಎನಿಸಿದ ವೀಣಾಶಾಂತೇಶ್ವರ ಪ್ರಥಮ ಕಥಾ ಸಂಕಲನ ೧೯೬೯ರಲ್ಲಿ ಬೆಳಕಿಗೆ ಬಂದಿದೆ. ಕೊನೆಯ ದಾರಿ, ಕವಲು ಇವರ ಕಥಾ ಸಂಕಲನಗಳು 'ಗಂಡಸರು' ಇವರ ಕಿರುಕಾದಂಬರಿ. ಈ ಕಾದಂಬರಿಯ ಶಾಂತಿ ಒಂದು ಗಮನಾರ್ಹ ಪಾತ್ರ. ಗೋಮುಖವ್ಯಾಘ್ರಗಳ ಮಾತಿಗೆ ಮರುಳಾಗಿ ಮೋಸಹೋಗಿ ಒಬ್ಬೊಬ್ಬರೂ ಅವಳನ್ನು ತೊರೆದು ಹೋದಾಗ ಗಂಡಸರ ಈ ಸಂಬಂಧವನ್ನೇ ಅವಳು ಲಘುವಾಗಿ ಕಾಣುತ್ತಾಳೆ.

ಎಚ್. ಎಸ್. ಪಾರ್ವತಿಯವರು 'ನೇಸರು ನೆಳಲು', 'ಜಾಬಾಲಾ', 'ಜೀವನ ಜಾಲ', ಈ ಮೂರು ಕಾದಂಬರಿಗಳನ್ನು ಬರೆದಿದ್ದಾರೆ. 'ಜಾಬಾಲಾ' ಹೊಸ ದೃಷ್ಟಿಯಿಂದ ನೋಡಲಾದ ಗಮನಾರ್ಹಕೃತಿ. 'ಸ್ವರ–ಅಪಸ್ವರ', 'ಬದಲಾದ ಪ್ರತಿಬಿಂಬ', 'ಒಂಟಿಮೋಡ', 'ಹೆಣ್ಣು ಹೃದಯ' ಇವು ಅವರ ಕಥಾ ಸಂಕಲನಗಳು.

'ದುರ್ಗೇಶನಂದಿನಿ', 'ಬಿಳಿಯರಕ್ತ', 'ದರ್ಬಾರೀರಾಗ', 'ಮಾಸಿದ ಸೆರಗು', 'ತ್ಯಾಗಪತ್ರ' ಇವು ಅವರ ಅನುವಾದಿತ ಕೃತಿಗಳು.

ಎ. ಪಂಕಜಾ, ಪುಷ್ಪ ಎನ್. ರಾವ್, ನೀಳಾದೇವಿ, ಈಚನೂರ ಜಯಲಕ್ಷ್ಮಿ, ಈಚನೂರ ಶಾಂತಾ, ಅನಸೂಯಾ ರಾಮರೆಡ್ಡಿ ಮಂಗಳಾ ಸತ್ಯನ್, ಪ್ರೇಮಾಭಟ್ಟ ರೇಖಾ ಕಾಖಂಡಕಿ, ಗಿರಿಜ ಟಿ. ಗೀತಾ ನಾಗಭೂಷಣ, ವೈ. ಕೆ. ಸಂಧ್ಯಾ ಶರ್ಮಾ, ಅಶ್ವಿನಿ ಸಾಯಿಸುತೆ, ಕೆ. ಸರೋಜರಾವ್, ಸಿ. ಎನ್. ಜಯಲಕ್ಷ್ಮಿದೇವಿ ಇನ್ನಿತರರು ಕತೆ–ಕಾದಂಬರಿಗಳನ್ನು ಬರೆಯುತ್ತಿದ್ದಾರೆ. ದಿ. ಎಂ. ಕೆ. ಜಯಲಕ್ಷ್ಮಿಯವರು ಹದಿನೈದು ಕಾದಂಬರಿಗಳನ್ನು ಬರೆದಿದ್ದಾರೆ.

ಕತೆ, ಕಾದಂಬರಿ ಕ್ಷೇತ್ರಕ್ಕೆ ನಮ್ಮ ಲೇಖಕಿಯರು ಸಮೃದ್ಧವಾದ ಕೊಡುಗೆಯನ್ನಿತ್ತಿದ್ದಾರೆ.

ಡಾ॥ ನಳಿನಿಮೂರ್ತಿ, ಜಯಂತಿಬಾಯಿ ಇವರು ಕ್ರಮವಾಗಿ ಗಣಕಯಂತ್ರ, ಕಾಲೇಜು ಸಸ್ಯವಿಜ್ಞಾನ ಎಂಬ ಗ್ರಂಥಗಳನ್ನು ಬರೆದಿದ್ದಾರೆ.

ಬಿ. ಕಾಮಾಕ್ಷಮ್ಮ ಇವರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಗಾಂಧೀಜಿಯವರಿಂದ ಪ್ರಭಾವಿತರಾಗಿದ್ದಾರೆ. 'ಸರೋಜಿನಿ ನಾಯ್ಡು', 'ಯಶೋಧರಾದಾಸಪ್ಪ' ಇವು ಅವರು ಬರೆದ ಜೀವನ ಚರಿತ್ರೆಗಳು, ಅಶ್ರಮದ ಸೋದರಿಯರಿಗೆ ಬಾಪೂಜಿ

ಪತ್ರಗಳು, 'ವಿನೋಬಾ ಯಾತ್ರೆಯ ಹಾಸ್ಯ ಪ್ರಸಂಗ' ಇವುಗಳನ್ನು ಬರೆದಿದ್ದಾರೆ. 'ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿ'ಯನ್ನು ಅನುವಾದಿಸಿದ್ದಾರೆ.

ಕಮಲಾ ಹಂಪನಾ ಇವರು ಸಣ್ಣಕತೆ, ಅನುವಾದ, ಶಿಶುಸಾಹಿತ್ಯ, ವಿಮರ್ಶೆ, ಸಂಶೋದನೆ ಹೀಗೆ ವಿವಿಧ ಪ್ರಕಾರಗಳಲ್ಲಿ ಬರೆಯುತ್ತಲಿದ್ದಾರೆ. 'ಶಾಂತಿನಾಥ', 'ಆದರ್ಶ ಜೈನ ಮಹಿಳೆಯರು' ಅವರ ಸಂಶೋದನ ಗ್ರಂಥಗಳು 'ನಕ್ಕಿತು ಹಾಲಿನ ಬಟ್ಟಲು' ಅವರ ಕಥಾಸಂಕಲನ.

ಡಾ॥ ಎಂ. ಆರ್. ಉಮಾದೇವಿ ಅವರ 'ಕವಿಚಕ್ರವರ್ತಿ ಪೊನ್ನ' ಮತ್ತು ಆತನ ಕೃತಿಗಳು ಡಾ॥ ಎಚ್. ಎಸ್. ಸುಜಾತಾ ಅವರ 'ಎಂ. ಎಸ್. ಪುಟ್ಟಣ್ಣ ಒಂದು ಅಧ್ಯಯನ' ವಿಜಯಲಕ್ಷ್ಮಿ ಆರ್. ಎನ್. ಇವರ 'ಕನ್ನಡ ಸಾಂಗತ್ಯ ಪ್ರಕಾರ' ಈ ಮೊದಲಾದ ಸಂಶೋಧನ ಮಹಾಪ್ರಬಂಧಗಳು ಪ್ರಕಟವಾಗಿವೆ. ಡಾ॥ ಸರೋಜಿನಿ ಮಹಿಷಿಯವರು "ಕರ್ನಾಟಕದ ಕವಯಿತ್ರಿಯರು" ಎಂಬ ಸಂಶೋಧನ ಗ್ರಂಥವನ್ನು ಬರೆದಿದ್ದಾರೆ. ಚಂದ್ರಭಾಗಾದೇವಿ ಅವರು ನೃತ್ಯಕಲೆಗೆ ಸಂಬಂಧಿಸಿದ 'ನೃತ್ಯಕಲೆ' 'ಆಧುನಿಕ ಭಾರತದಲ್ಲಿ ನೃತ್ಯ,' 'ಗೆಜ್ಜೆಯ ಹೆಜ್ಜೆಯ ನುಡಿ' ಈ ಗ್ರಂಥಗಳನ್ನು ಬರೆದಿದ್ದಾರೆ.

ಹಳೆಯ ತಲೆಮಾರಿನ ಕವಯಿತ್ರಿಯರು :

ಹಳೆಯ ತಲೆಮಾರಿನ ಕವಯಿತ್ರಿಯರಲ್ಲಿ ದಿ. ತಿರುಮಲೆ ರಾಜಮ್ಮ (೧೯೦೦–೧೯೮೪) ಹಾಗೂ ಜಯದೇವಿತಾಯಿ ಲಿಗಾಡೆಯವರು ಪ್ರಮುಖರು. ತಿರುಮಲೆ ರಾಜಮ್ಮನವರು 'ಭಾರತಿ' ಕಾವ್ಯನಾಮದಿಂದ 'ತಪಸ್ವಿನಿ' ಎಂಬ ಕಾವ್ಯ ನಾಟಕವನ್ನು ಬರೆದಿದ್ದಾರೆ. 'ಮಹಾಸತಿ', 'ವಾತ್ಸಲ್ಯ', 'ತರಂಗಲೀಲಾ', 'ಅಹಲ್ಯಾ' ಅವರ ಇನ್ನುಳಿದ ನಾಟಕಗಳು. 'ದೇಶಭಕ್ತಿ ಗೀತೆಗಳು' ಇದು ಅವರ ಕವನ ಸಂಗ್ರಹ.

ಜಯದೇವಿ ತಾಯಿ ಲಿಗಾಡೆಯವರು ಕನ್ನಡ ಹಾಗೂ ಮರಾಠಿಯಲ್ಲಿ ಕಾವ್ಯರಚನೆ ಮಾಡಿದ್ದಾರೆ. 'ಜಯಗೀತ' ಇವರ ಪ್ರಥಮ ಕಾವ್ಯ. 'ಸಿದ್ಧರಾಮ ಪುರಾಣ'ವನ್ನು ತ್ರಿಪದಿಯಲ್ಲಿ ರಚಿಸಿದ್ದಾರೆ. 'ತಾಯಿಯ ಪದಗಳು', 'ತಾರಕ ತಂಬೂರಿ' ಅವರ ಇನ್ನಿತರ ಕೃತಿಗಳು, ಇವರು ಕನ್ನಡ ಹಿರಿಯ ಪ್ರಸಿದ್ಧ ಕವಯಿತ್ರಿ.

ಬೆಳಗೆರೆ ಜಾನಕಮ್ಮ, ಹಾಡಿನ ವೆಂಕಮ್ಮ, ಹಾಡಿನ ಹುಚ್ಚಮ್ಮ, ಕರವೀರ ಶೆಟ್ಟರ ಸಂಗಮ್ಮ, ಕೋಳಿವಾಡದ ಕೃಷ್ಣಾಬಾಯಿ, ಚಂದ್ರಕ್ಕ (ಯಮುನಾಬಾಯಿ ಕುಲಕರ್ಣಿ) ಇವರೆಲ್ಲರಿಂದ ಸಂಪ್ರದಾಯದ ಹಾಡುಗಳ ಪರಂಪರೆ ಮುಂದುವರೆದಿದೆ.

ಹೊಸ ಪೀಳಿಗೆಯವರಾದ ಶಶಿಕಲಾ ವಸ್ತ್ರದ ಅವರ 'ಗುಬ್ಬಿಮನಿ', 'ಪ್ರಶ್ನೆ' ಹೇಮಾ ಇವರ 'ವಿರಹೋತ್ಸವ' ಡಾ॥ ವಿಜಯಾ ಅವರ 'ಇರುತ್ತವೆ' ಈ ಕವನ ಸಂಕಲನಗಳು ಪ್ರಕಟವಾಗಿವೆ, ಮಾಲತಿ ಪಟ್ಟಣಶೆಟ್ಟಿಯವರ 'ಬಾ ಪರೀಕ್ಷೆಗೆ'

'ಗರಿಗೆದರಿ' ಸುಕನ್ಯಾಮಾರುತಿಯವರ 'ಪರಿಸರದಲ್ಲಿ', 'ಪಂಚಾಗ್ನಿ ಮಧ್ಯೆ' ಈ ಹೊಸ ಕವನ ಸಂಕಲನಗಳು ಬೆಳಕಿಗೆ ಬಂದಿವೆ. ಕುಲಶೇಖರಿಯರ 'ಕ್ಷಿತಿಜ' 'ಸಂಕಲ್ಪ' ಎರಡು ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಗುಡಿಬಂಡೆ ಪೂರ್ಣಿಮಾ, ಚಿ. ಸರ್ವಮಂಗಳ, ಕಮಲ ಹೆಮ್ಮಿಗೆ ಇವರು ಕವನ ರಚನೆಯಲ್ಲಿ ತೊಡಗಿದ್ದಾರೆ.

೧೯೮೩ರಲ್ಲಿ ಪ್ರಕಟವಾದ ಕವನ ಸಂಗ್ರಹಗಳನ್ನು ಸಮೀಕ್ಷೆ ಮಾಡಿದಾಗ "ಈ ವರ್ಷದ ಮಹಿಳೆಯರ ಕವನ ಸಂಕಲನಗಳು ಮಹಿಳೆಯರ ಸಾಹಿತ್ಯಮಾರ್ಗದಲ್ಲಿ ಬಂದು ಮಹತ್ವದ ಮಜಲನ್ನು ತೋರಿಸುತ್ತದೆ. ಕಾವ್ಯಸತ್ವ ಪುರುಷರ ಕೈತಪ್ಪಿ ಮಹಿಳೆಯರ ಕೈಗೆ ಹೋಗುವ ಸೂಚನೆಗಳು ತೋರುತ್ತವೆ.[1] ಎಂದು ಹಾ. ಮಾ. ನಾ. ಅವರು ನುಡಿದಿದ್ದಾರೆ.

ಒಟ್ಟಿನಲ್ಲಿ ಹೊಸ ತಲೆಮಾರಿನ ಲೇಖಕಿಯರು ಸಂಪ್ರದಾಯದಿಂದ ಹೊರಬಂದು ಹೊಸ ಪರಂಪರೆಯತ್ತ ಕಾಲಿಡುತ್ತಿದ್ದಾರೆಂದು ಹೇಳಬಹುದು. ಕತೆ, ಕಾದಂಬರಿ ಕ್ಷೇತ್ರಕ್ಕೆ ಮಹಿಳೆಯರು ಸಮೃದ್ಧವಾದ ಕಾಣಿಕೆ ಸಲ್ಲಿಸಿದ್ದಾರೆ. ವೈಜ್ಞಾನಿಕ, ಸಂಶೋಧನೆ, ವಿಮರ್ಶೆ, ಈ ಕ್ಷೇತ್ರಗಳಲ್ಲಿ ಮಹಿಳೆಯರ ಸಾಹಿತ್ಯ ಇನ್ನೂ ಬೆಳೆಯಬೇಕಾಗಿದೆ.

ಇತ್ತೀಚಿಗೆ ಲೇಖಕಿಯರಿಗಾಗಿಯೇ ರಾಜ್ಯಮಟ್ಟದಲ್ಲಿ ಪ್ರತ್ಯೇಕ ಸಮ್ಮೇಳನಗಳು ನಡೆಯುತ್ತಿವೆ. ೧೯೮೦ರಲ್ಲಿ ಸಾಹಿತ್ಯ ಪರಿಷತ್ತಿನಲ್ಲಿ ಅಖಿಲ ಕರ್ನಾಟಕ ಲೇಖಕಿಯರ ಮೊದಲನೆಯ ಸಮ್ಮೇಳನ ಜರುಗಿತು. ೧೯೮೨ರಲ್ಲಿ ಗುಲ್ಬರ್ಗಾದಲ್ಲಿ, ೧೯೮೪ರಲ್ಲಿ ತುಮಕೂರಿನಲ್ಲಿ ಒಟ್ಟು ಇದುವರೆಗೆ ಮೂರು ಸಮ್ಮೇಳನಗಳಾಗಿವೆ.[2] ಉತ್ತರ ಕರ್ನಾಟಕದ ಲೇಖಕಿಯರಿಗೆ ಪ್ರೋತ್ಸಾಹ ನೀಡುವುದಕ್ಕಾಗಿ ಉತ್ತರ ಕರ್ನಾಟಕ ಲೇಖಕಿಯರ ಸಂಘ ಸ್ಥಾಪಿಸಲ್ಪಟ್ಟಿದೆ.

ಸ್ವಾತಂತ್ರ್ಯಾನಂತರ ಕನ್ನಡ ಲೇಖಕಿಯರ ಸಂಖ್ಯೆ ದಿನದಿನಕ್ಕೆ ಬೆಳೆಯುತ್ತಿದೆ. ಕರ್ನಾಟಕದಲ್ಲಿ ಲೇಖಕಿಯರ ಸಂಖ್ಯೆ ೨೫೦ಕ್ಕೂ ಹೆಚ್ಚಿದೆ.[3] ೧೯೮೪ ರಲ್ಲಿ (ಜೂನ್ ೩–೪) ನಡೆದ ಲೇಖಕಿಯರ ಸಮ್ಮೇಳನದಲ್ಲಿ ಮಾತನಾಡಿದ ಪರಿಷತ್ತಿನ ಅಧ್ಯಕ್ಷ ಹಂಪನಾ ಅವರು 'ಕರ್ನಾಟದಲ್ಲಿರುವಷ್ಟು ಲೇಖಕಿಯರು ಭಾರತದ ಇನ್ನಾವ ಭಾಷೆಗಳಲ್ಲೂ ಇಲ್ಲ.'[2] ಎಂದು ಅಭಿಪ್ರಾಯಪಟ್ಟಿದ್ದಾರೆ.

---

1. ಗ್ರಂಥಲೋಕ ಸಂಪುಟ 8 ಸಂಚಿಕೆ 6 ಜೂನ್ 1984 ಪುಟ 5.
2. ಈ ಮೂರು ಸಮ್ಮೇಳನಗಳಲ್ಲದೆ 1976 ರಲ್ಲಿ ಮೈಸೂರು ವಿಶ್ವವಿದ್ಯಾಲಯದ ವಜ್ರ ಮಹೋತ್ಸವದ ಮತ್ತು ಕನ್ನಡ ಅಧ್ಯಯನ ಸಂಸ್ಥೆಯ ದಶಮಾನೋತ್ಸವದ ಸಂದರ್ಭದಲ್ಲಿ ಕನ್ನಡ ಲೇಖಕಿಯರಿಗಾಗಿ ಸಮ್ಮೇಳನವನ್ನು ಏರ್ಪಡಿಸಲಾಗಿತ್ತು. 1981 ರಲ್ಲಿ ದಾವಣಗೆರೆಯ 'ಕಲಾರಂಗ' ಸಂಸ್ಥೆಯವರು ರಾಜ್ಯಮಟ್ಟದ ಲೇಖಕಿಯರ ಸಮ್ಮೇಳನವನ್ನು ಕರೆದಿದ್ದರು. ಈ ಸಮ್ಮೇಳನಕ್ಕೆ ಎಂ. ಕೆ. ಇಂದಿರಾ ಅವರು ಅಧ್ಯಕ್ಷೆಯಾಗಿದ್ದರು.
3. ನೋಡಿರಿ : ಕುಲಶೇಖರಿ ಹಾಗೂ ವೈ.ಕೆ. ಸಂಧ್ಯಾಶರ್ಮ (ಸಂ.) ನಮ್ಮ ಲೇಖಕಿಯರು.

"ಇದೀಗ ಒದೊಂದು ಕತೆ ಬರೆಯುವ ಉದಯೋನ್ಮುಖ ಲೇಖಕಿಯರನ್ನು ಸೇರಿಸಿಕೊಂಡರೆ ಕನ್ನಡದಲ್ಲಿ ಸಾವಿರದ ಎಂಟುನೂರು ಲೇಖಕಿಯರಿದ್ದಾರೆ ಎಂಬ ಒಂದು ಗಣತಿ ಸಿಕ್ಕಿದೆ"[1] ಎಂದು ಇಂದಿರಾ ಅವರು ದಾವಣಗೆರೆಯಲ್ಲಿ ನಡೆದ ಲೇಖಕಿಯರ ಸಮ್ಮೇಳದ ಅಧ್ಯಕ್ಷೀಯ ಭಾಷಣದಲ್ಲಿ ಹೇಳಿದ್ದಾರೆ.

ಸ್ತ್ರೀ ಶಿಕ್ಷಣ ಪ್ರಸಾರದಿಂದಾಗಿ ವಿದ್ಯಾವಂತ ಮಹಿಳೆಯರ ಸಂಖ್ಯೆಯೂ ಹೆಚ್ಚಿ ಕನ್ನಡ ಬರಹಗಾರ್ತಿಯರ ಬಳಗ ದೊಡ್ಡದಾಗುತ್ತಿದೆ. ಪತ್ರಿಕೆಗಳಿಂದ ಪ್ರಕಾಶಕರಿಂದ ಲೇಖಕಿಯರಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯುತ್ತಿದೆ. ಸುದಾ–ಪ್ರಜಾಮತ, ತರಂಗ, ಮಲ್ಲಿಗೆ, ಇಷ್ಟಲ್ಲದೆ ಮಹಿಳೆಯರಿಗಾಗಿಯೇ ಮೀಸಲಾದ ಗೆಳತಿ, ವನಿತಾ, ರಾಗಸಂಗಮ ಈ ಪತ್ರಿಕೆಗಳಲ್ಲಿ ಲೇಖಕಿಯರ ಕತೆ, ಕಾದಂಬರಿಗಳಿಗೇ ಪ್ರಾಶಸ್ತ್ಯದೊರೆತು ಧಾರಾವಾಹಿ ಕಾದಂಬರಿಗಳ ಮಹಾಪೂರವೇ ಲೇಖಕಿಯರಿಂದ ನುಗ್ಗಿಬರುತ್ತಿದೆ.

ಮಹಿಳಾ ಸಾಹಿತ್ಯದ ಅವಲೋಕನ :

"ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣಿನ ಅನುಭವ ಅಭಿವ್ಯಕ್ತಿಗಳಿಗೆ ತನ್ನದೇ ಆದ ವಿಶಿಷ್ಟ ಛಾಪು ಇರಲು ಸಾಧ್ಯ."[2] ಎನ್ನುವ ಬರಗೂರು ರಾಮಚಂದ್ರಪ್ಪನವರ ಮಾತು ಸಮಂಜಸವಾದದ್ದು.

ಮಹಿಳಾ ಸಾಹಿತ್ಯ ಪುರುಷ ಪ್ರಧಾನ ಸಮಾಜ ವ್ಯವಸ್ಥೆಯ ಹಿನ್ನೆಲೆಯಲ್ಲಿಯೇ ಬೆಳೆದುಬಂದುದು. ನಾಲ್ಕು ಗೋಡೆಗಳ ಮಧ್ಯೆ ತನ್ನ ಜೀವನವನ್ನು ರೂಪಿಸಿಕೊಂಡು ಬಾಳುತ್ತಿದ್ದ ಮಹಿಳೆ ಇತ್ತೀಚೆಗೆ ಜೀವನದ ಎಲ್ಲ ರಂಗಗಳಲ್ಲೂ ಪ್ರವೇಶಿಸುತ್ತಿದ್ದಾಳೆ. ಹೊರ ಪ್ರಪಂಚದತ್ತ ತನ್ನ ಗಮನವನ್ನು ಹರಿಸುತ್ತಿದ್ದಾಳೆ.

ಕನ್ನಡ ಲೇಖಕಿಯರು ಕೌಟುಂಬಿಕ ಹಾಗೂ ಸಾಮಾಜಿಕ ಸಮಸ್ಯೆಗಳನ್ನು ತಮ್ಮ ಕೃತಿಗಳಲ್ಲಿ ಚಿತ್ರಿಸಿದ್ದಾರೆ. ಹೊಸಗನ್ನಡ ಸಾಹಿತ್ಯದ ಆರಂಭಕಾಲದಲ್ಲಿ ವಿಧವಾ ವಿವಾಹ, ಸ್ತ್ರೀ ಶಿಕ್ಷಣ ವರದಕ್ಷಿಣೆ ಈ ಸಮಸ್ಯೆಗಳೂ ಹಾಗೂ ಕೌಟುಂಬಿಕ, ದಾಂಪತ್ಯ ಜೀವನದ ಸಿಹಿ-ಕಹಿ ಇವು ನಮ್ಮ ಕಾದಂಬರಿಕಾರ್ತಿಯರಿಗೆ ವಸ್ತುವನ್ನೊದಗಿಸಿದವು.

ಸ್ವಾತಂತ್ರ್ಯಾನಂತರ ಸ್ತ್ರೀಶಿಕ್ಷಣ ಹಾಗೂ ಸಮಾಜ ಸುಧಾರಣೆಯ ಹೊಸ ಗಾಳಿಯಿಂದಾಗಿ ಸಮಾಜದಲ್ಲಿ ಸ್ತ್ರೀಯ ಸ್ಥಾನಮಾನಗಳಲ್ಲೂ ಬದಲಾವಣೆ ಕಾಣಿಸಿ ಕೊಳ್ಳತೊಡಗಿತು. ಉದ್ಯೋಗಸ್ಥ ಮಹಿಳೆಯರ ಸಮಸ್ಯೆ, ಅಂತರ್‌ಜಾತೀಯ ವಿವಾಹ, ಪ್ರೇಮವಿವಾಹ, ವರದಕ್ಷಿಣೆ, ದಲಿತರ ಶೋಷಣೆ, ಪ್ರೌಢ ವಿಧವೆಯರ ಜೀವನದ ಸಮಸ್ಯೆ, ದಾರಿದ್ರ್ಯ, ಅಜ್ಞಾನ, ವೇಶ್ಯಾ ಸಮಸ್ಯೆ, ಸ್ತ್ರೀಶೋಷಣೆ

1. ಪ್ರಜಾವಾಣಿ 4–5–1984 ಪುಟ–3.
2. ಸಾಹಿತ್ಯ ವಾರ್ಷಿಕ 1973 ಪುಟ 72–73

ನಮ್ಮ ಲೇಖಕಿಯರು ಇನ್ನೂ ಭಾರತೀಯ ಆದರ್ಶ ನಾರಿಯ ಕಲ್ಪನೆಯಿಂದ ಹೊರ ಬಂದಿಲ್ಲ. ಆದುದರಿಂದ ಅವರು ಇನ್ನೂ ತಮ್ಮ ಗೂಡಿನಲ್ಲೇ ಇದ್ದಾರೆ, ಹೀಗಾಗಿ ಅವರಿಗೆ ತೀರ ಅಂತರಿಕ ಅನಿಸಿಕೆಗಳನ್ನು ಬಿಚ್ಚು ಮನಸ್ಸಿನಿಂದ ಅಭಿವ್ಯಕ್ತಗೊಳಿಸಲು ಸಾಧ್ಯವಾಗಿಲ್ಲ.[1]

ಇದುವರೆಗೆ ನಮ್ಮ ಲೇಖಕಿಯರು ಕುವೆಂಪು ಅವರ ಕಾನೂರ ಹೆಗ್ಗಡತಿ, ರಾವ್ ಬಹಾದ್ದೂರರ 'ಗ್ರಾಮಾಯಣ' ಕಾರಂತರ 'ಮರಳಿ ಮಣ್ಣಿಗೆ' ಭೈರಪ್ಪನವರ 'ಪರ್ವ'ದಂತಹ ಕಾದಂಬರಿಗಳನ್ನು ಬರೆದಿಲ್ಲ ಎಂಬ ಮಾತು ಇದೆ.

ಮಹಿಳೆಯರಿಗೆ ಇಂತಹ ಕೃತಿಗಳನ್ನು ಬರೆಯಲು ಸಾಧ್ಯವಾಗದೇ ಇರುವುದಕ್ಕೆ ಅವರ ಅನುಭವ ಸ್ತರ ಸೀಮಿತವಾದದ್ದು. ಮತ್ತು ಪುರುಷರಿಗಿರುವ ಸೌಲಭ್ಯಗಳು ನಮ್ಮ ಸಮಾಜದಲ್ಲಿ ಸ್ತ್ರೀಯರಿಗೆ ಇನ್ನೂ ಸಿಕ್ಕಿಲ್ಲ.

ನಗರಗಳಲ್ಲಿ ಹುಟ್ಟಿ ಬೆಳೆದು, ವಿದ್ಯಾವಂತರಾಗಿ, ನಗರವಾಸಿಗಳನ್ನೇ ಮದುವೆಯಾಗಿ, ಉದ್ಯೋಗಸ್ಥೆಯಾಗಿರುವ ಮಹಿಳೆಯರು ತಮ್ಮ ಸುತ್ತಮುತ್ತ ನಡೆದುದನ್ನು, ಕಂಡದನ್ನು ಮಾತ್ರ ಬರೆದಿದ್ದಾರೆ.

ತೆಲುಗು ಸಾಹಿತ್ಯದಲ್ಲಿ ಬರಹಗಾರ್ತಿಯರ ಸಂಖ್ಯೆ ಹೆಚ್ಚಾಗಿರುವುದನ್ನು ಕಾಣುತ್ತೇವೆ.

"೧೯ನೇ ಶತಮಾನದಲ್ಲಿ ವಿರೇಶಲಿಂಗಂ ಪಂತುಲುರವರ ಸ್ತ್ರೀ ಸುಧಾರಣಾ ಚಳುವಳಿಯ ಫಲವಾಗಿ ೨೦ನೇ ಶತಮಾನದಲ್ಲಿ ಅನೇಕ ಮಹಿಳೆಯರು ವಿದ್ಯಾವಂತರಾಗಿ ಬರಹಗಾರ್ತಿಯರ ಒಂದು ದೊಡ್ಡ ತಂಡವೇ ನಿರ್ಮಾಣವಾಯಿತು. ಬರಹಗಾರ್ತಿಯರ ಸಂಖ್ಯೆಯನ್ನು ಹೆಚ್ಚಿಸಲು ಮತ್ತು ಸಮಕಾಲೀನ ಜೀವನವನ್ನು ಚಿತ್ರಿಸಲು ಕಾದಂಬರಿ ಹೇಗೆ ಉತ್ತಮವಾಯಿತು ಎಂಬುದು ವಿದಿತವಾಗುತ್ತದೆ. ಈ ಲೇಖಕಿಯರಲ್ಲಿ ಬಹು

---

1. "Woman-writers have not yet recovered from the philomela-complex and that is why they find it difficult to articulate their innermost thought and feelings"– K. D. Kurthkoti : Two Novels by M. K. Indira. paper presented in All India seminar on 'Woman writers of fiction and woman in Fiction' at Mysore Deney 18,19,20th Nov., 1984 conducted by 'Dhwanyaloka' Manasagangotri Mysore.

ಮಟ್ಟಿಗೆ ಮಧ್ಯಮ ತರಗತಿಯಿಂದ ಬಂದವರಾದ್ದರಿಂದ ಬಹುಮಟ್ಟಿಗೆ ಆ ಜೀವನದ ಚಿತ್ರಣವೇ ಇವುಗಳಲ್ಲಿ ಹೆಚ್ಚಾಗಿ ಕಾಣಿಸುತ್ತವೆ."[1]

ಒಟ್ಟಿನಲ್ಲಿ ಕನ್ನಡದಂತೆಯೇ ತೆಲುಗಿನಲ್ಲಿಯೂ ಕಾದಂಬರಿಗಾರ್ತಿಯರ ಸಂಖ್ಯೆ ಹೆಚ್ಚಾಗಿದೆ ಎನ್ನಬಹುದು.

ಸರಸ್ವತೀದೇವಿ, ದ್ವಿವೇದುಲು ವಿಶಾಲಾಕ್ಷಿ, ರಂಗನಾಯಕಮ್ಮ ಕೃಷ್ಣವೇಣಿ ವಿವೇಕಾನಂದದೇವಿ ಇವರೆಲ್ಲ ತಮ್ಮ ಮೊದಮೊದಲಿನ ಕೃತಿಗಳಲ್ಲಿ ಪರಂಪರಾಗತವಾಗಿ ಬಂದ ಮೌಲ್ಯಗಳಿಗೆ ಪ್ರಾಧಾನ್ಯ ಇತ್ತು, ಸಮಾಜವನ್ನು ಅಧಿಕೃತ ವ್ಯವಸ್ಥೆಯನ್ನಾಗಿ ಸ್ವೀಕರಿಸಿ ಅದಕ್ಕೆ ತಕ್ಕಂತೆ ಪಾತ್ರಗಳನ್ನು ಸೃಷ್ಟಿಸಿದರು.[2]

ಇದೇ ಮಾತನ್ನು ಈ ಶತಮಾನದ ಆರಂಭದಲ್ಲಿ ಕಾದಂಬರಿಗಳನ್ನು ಬರೆದ ತಿರುಮಲಾಂಬಾ ಹಾಗೂ ಆರ್. ಕಲ್ಯಾಣಮ್ಮ ಇವರಿಗೆ ಹೇಳಲಾಗುತ್ತದೆ. ಈ ಶತಮಾನದ ಆರಂಭದಲ್ಲಿ ಒಂದು ಜ್ವಲಂತ ಸಮಸ್ಯೆಯಾಗಿದ್ದ ಬಾಲವಿಧವೆಯರನ್ನು ಕುರಿತು ಇವರು ಬರೆದ ಕಾದಂಬರಿಗಳಲ್ಲಿ, ಇವರ ತುಡಿತವನ್ನು ಕಾಣುತ್ತೇವೆ.

"ಶ್ರೀಮತಿ ತಿರುಮಲಾಂಬಾ ಅವರು ಸನಾತನ ಧರ್ಮಕ್ಕೆ ಅಂಟಿಕೊಳ್ಳಬೇಕೆನ್ನುವವರು, ಹರಿಯುವ ಪ್ರವಾಹವನ್ನು ತಿರುಗಿಸಲು ಪ್ರಯತ್ನಿಸಿದವರು. ಶ್ರೀಮತಿ ಕಲ್ಯಾಣಮ್ಮನವರು ಪುರಾತನ ಸಂಪ್ರದಾಯಗಳ ಕಟ್ಟುಗಳು ಬಿಗಿಯನ್ನು ಸಡಲಿಸುವ ಪ್ರಯತ್ನದಲ್ಲಿ ತೊಡಗಿದವರು. ಮಹಿಳೆಯರು ನಾಲ್ಕುಗೋಡೆಯ ದಾಟುವಂತೆ ಕರೆ ನೀಡಿದರು. ದೇಶ ಸೇವೆ ಸಮಾಜ ಸೇವೆಯಲ್ಲಿ ತೊಡಗಬೇಕೆನ್ನುವರು."[3] ಹೀಗೆ ಒಂದೇ ವಸ್ತುವನ್ನೊಳಗೊಂಡಿದ್ದರೂ ಅವರ ಧೋರಣೆಯಲ್ಲಿ ಕಾಣುವ ಭಿನ್ನತೆಗೆ ಅಂದು ಅವರು ಹುಟ್ಟಿ ಬೆಳೆದ ಸಾಮಾಜಿಕ ವಾತಾವರಣವೇ ಕಾರಣವೆನ್ನಬಹುದು.

ಕೊಡಗಿನ ಗೌರಮ್ಮ ವಿಧವೆಯ ಪುನರ್ ವಿವಾಹಕ್ಕೆ ಸಮ್ಮತಿ ನೀಡುತ್ತಾರೆ. ತ್ರಿವೇಣಿಯವರು 'ಹಣ್ಣೆಲೆ ಚಿಗುರಿದಾಗ' ಕಾದಂಬರಿ ಬಾಲ್ಯವಿಧವೆಯ ವಿವಾಹ ಅದೊಂದು ಸಮಸ್ಯೆಯಲ್ಲ ಎಂದು ಎತ್ತಿ ತೋರಿಸಿದ್ದಾರೆ. ವಿಧವೆಯ ಪುನರ್ ವಿವಾಹಕ್ಕೆ ಆಗ್ರಹ ಪಡಿಸಿದ್ದಾರೆ. ಒಟ್ಟಿನಲ್ಲಿ ಸ್ವಾತಂತ್ರ್ಯ ಪೂರ್ವದಿಂದಲೇ ಬಾಲ್ಯ ವಿವಾಹ ಸಮಸ್ಯೆಯ ಬಗೆಗೆ ನಮ್ಮ ಲೇಖಕಿಯರು ಚಿಂತನೆ ನಡೆಸಿರುವುದು ಕಂಡು ಬರುತ್ತದೆ.

---

1. ಹಂ.ಪ.ನಾ. (ಸಂ.) 'ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನ'. 'ಇಂದಿನ ತೆಲುಗು ಸಾಹಿತ್ಯದಲ್ಲಿನ ಲೇಖಕಿಯರು' (ಲೇಖಕಿ ನಿರುಪಮಾ) ಪುಟ–41-42.
2. ಅದೇ ಪುಟ–42-43.
3. ಗಿರಡ್ಡಿ ಗೋವಿಂದರಾಜ : 'ಕಾದಂಬರಿ ವಸ್ತು ಮತ್ತು ತಂತ್ರ' ಪುಟ–180

ನವ್ಯತೆ ೧೯೫೦ ರಿಂದಲೇ ಸಣ್ಣ ಕಥೆಗಳಲ್ಲಿ ಕಾಣಿಸಿಕೊಂಡಿದ್ದರೂ ಕಾದಂಬರಿಯಲ್ಲಿ ಬಂದದ್ದು ೧೯೬೦ರ ನಂತರ. ೧೯೩೪ರಲ್ಲಿ ಪ್ರಕಟವಾದ ಶ್ರೀರಂಗರ 'ವಿಶ್ವಾಮಿತ್ರನ ಸೃಷ್ಟಿ', ಶಂಕರ ಮೊಕಾಶಿ ಪುಣೇಕರ ಅವರು ೧೯೫೬ರಲ್ಲಿ ಬರೆದ 'ಗಂಗವ್ವ–ಗಂಗಾಮಾಯಿ' ಈ ಕಾದಂಬರಿಗಳಲ್ಲಿ ನವ್ಯ ಕಾದಂಬರಿಗಳ ಮನೋಧರ್ಮವನ್ನು ಕಾಣುತ್ತೇವೆ. ೧೯೬೦ರಲ್ಲಿ ಪ್ರಕಟವಾದ ಶಾಂತಿನಾಥ ದೇಸಾಯಿಯರ "ಮುಕ್ತಿ" ಎಲ್ಲ ದೃಷ್ಟಿಯಿಂದ ನವ್ಯ ಕಾದಂಬರಿಯಾಗಿದೆ. ಯಶವಂತ ಚಿತ್ತಾಲರ "ಮೂರು ದಾರಿಗಳು" ಯು. ಆರ್. ಅನಂತಮೂರ್ತಿಯವರ 'ಸಂಸ್ಕಾರ' 'ಭಾರತೀಪುರ' ಇವುಗಳನ್ನು ಇಲ್ಲಿ ಹೆಸರಿಸಬಹುದು.

ನವ್ಯ ಕಾದಂಬರಿ ಮುಖ್ಯವಾಗಿ ನೀರಸವಾಸ್ತವವಾದದ ವಿರುದ್ಧ ಎದ್ದ ಬಂಡಾಯ ವಾಸ್ತವತಾವಾದದ ಉಕ್ಕಿನ ಬೇಲಿಗಳನ್ನು ಮುರಿದು ಸಾಂಕೇತಿಕತೆಯ ಮೂಲಕ ಚತುರ ಸಂವಿಧಾನದ ಮೂಲಕ ಅರ್ಥದ ಪದಗಳನ್ನು ಹಿಂಗಿಸಿಕೊಳ್ಳಲು ನವ್ಯ ಕಾದಂಬರಿ ಪ್ರಯತ್ನಿಸುತ್ತವೆ. ಪ್ರತಿಯೊಂದು ನವ್ಯ ಕಾದಂಬರಿಗೂ ತನ್ನದೇ ಆದ ವಿಶಿಷ್ಟ ತಂತ್ರವಿದೆ. ನವೋದಯ ಕಾದಂಬರಿಕಾರರು ತಂತ್ರದ ಬಗ್ಗೆ ಹೆಚ್ಚು ಆಸಕ್ತಿ ಹೊಂದಿದ್ದಾರೆ....ಇತ್ಯಾದಿಗಳೆಲ್ಲ ನವ್ಯ ಕಾದಂಬರಿಗಳನ್ನು ಕುರಿತು ಹೊರ ಹೊಮ್ಮಿದ ವಿಚಾರಗಳು.

ನವ್ಯ ಕಾದಂಬರಿಗಳು ಜನಸಾಮಾನ್ಯರಿಗೆ ಅರ್ಥವಾಗದೇ ಹೋದ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಹೊಸ ಚೈತನ್ಯವನ್ನು ಪಡೆಯಿತು. ಹಿಂದೂ ಸಮಾಜದ ಒಂದು ವರ್ಗ ತನ್ನ ಅಸ್ತಿತ್ವಕ್ಕಾಗಿ ಎಚ್ಚೆತ್ತುಕೊಂಡಿತು. ಎಚ್ಚೆತ್ತ ದಲಿತ ಪ್ರಜ್ಞೆಯ ದೇವನೂರ ಮಹಾದೇವ ಅವರ 'ಒಡಲಾಳ' ಕಾದಂಬರಿ ಪ್ರಕಟವಾಯಿತು.

ತಿರುಮಲಾಂಬಾ ಮತ್ತು ಆರ್. ಕಲ್ಯಾಣಮ್ಮ ಇವರು ಸ್ವಾತಂತ್ರ್ಯ ಪೂರ್ವದಲ್ಲೆ ಕಾದಂಬರಿಗಳನ್ನು ರಚಿಸಿದ್ದರು. ವಾಣಿ, ಅನುಪಮಾ ನಿರಂಜನ, ಆರ್ಯಾಂಬ ಪಟ್ಟಾಭಿ ಇವರು ಕಾದಂಬರಿಗಳ ರಚನೆಯಲ್ಲಿ ತೊಡಗಿದ್ದರು.

೧೯೫೩ರಲ್ಲಿ 'ಹೂವು ಹಣ್ಣು' ಕಾದಂಬರಿಯಿಂದ ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿದ 'ತ್ರಿವೇಣಿ'ಯವರ ಬೆಳ್ಳಿಮೋಡ, ಶರಪಂಜರ, ವಸಂತಗಾನ ಇನ್ನೂ ಮುಂತಾದ ಕಾದಂಬರಿಗಳನ್ನು ಬರೆದು ಜನಪ್ರಿಯತೆಯನ್ನು ಗಳಿಸಿದರು. ವಸ್ತು ವೈವಿಧ್ಯ, ಸುಂದರ ಶೈಲಿಯಿಂದಾಗಿ ಅವರ ಕೃತಿಗಳು ಓದುಗರಲ್ಲಿ ಆಸಕ್ತಿಯನ್ನು ಬೆಳೆಸಿದವು. ಅವರ ಕೊನೆಯ ಕಾದಂಬರಿ ೧೯೬೩ರಲ್ಲಿ ಪ್ರಕಟವಾಯಿತು. ಅವರು ಅದೇ ವರ್ಷ ನಿಧನರಾದರು. ತ್ರಿವೇಣಿಯವರ ಕೊನೆಯ ಕಾದಂಬರಿ ಪ್ರಕಟವಾದ ವರ್ಷ ಅಂದರೆ ೧೯೬೩ರಲ್ಲಿ ಎಂ. ಕೆ. ಇಂದಿರಾ ಅವರ ಅನುಭವಜನ್ಯ ಕಾದಂಬರಿ 'ತುಂಗಭದ್ರ' ಪ್ರಕಟವಾಯಿತು.

"ಕನ್ನಡ ಸಾಹಿತ್ಯದಲ್ಲಿ ನಡೆದ ರಮ್ಯ, ಪ್ರಗತಿಶೀಲ ಹಾಗೂ ನವ್ಯ ಈ ಆಂದೋಲನಗಳ ತೀವ್ರ ಪ್ರಭಾವಕ್ಕೆ ನಮ್ಮ ಲೇಖಕಿಯರು ಒಳಗಾಗಿಲ್ಲವೆಂದು ಹೇಳಬಹುದು."[1]

ಎಂ. ಕೆ. ಇಂದಿರಾ ಅವರು ಸಹ ಆ ಕಾಲದ ನವ್ಯ ಸಾಹಿತ್ಯದ ಪ್ರಭಾವಕ್ಕೆ ಒಳಗಾಗಲಿಲ್ಲ, ಸುತ್ತಮುತ್ತಲಿನ ಸಮಾಜದಲ್ಲಿ ಕಾಣುವ ಕೌಟುಂಬಿಕ, ಸಾಮಾಜಿಕ ಸಮಸ್ಯೆಗಳನ್ನು ತಮ್ಮ ಕಾದಂಬರಿಗಳಲ್ಲಿ ಚಿತ್ರಿಸತೊಡಗಿದರು. ಕಲಾತ್ಮಕವಾದ ಆಡು ನುಡಿಯ ಬಳಕೆ, ಮಲೆನಾಡಿನ ಪರಿಸರ ವಸ್ತು ವೈವಿಧ್ಯ ಇವುಗಳಿಂದ ಅವರ ಕಾದಂಬರಿಗಳು ಜನಪ್ರಿಯವಾದವು. ಓದುಗರ ಬೇಡಿಕೆಯಲ್ಲದೆ ಬರೆಯಲೇ ಬೇಕಾದ ಅನಿವಾರ್ಯತೆಯೂ ಅವರಿಗಿದ್ದಿತು. ಪತ್ರಿಕೆಗಳಿಂದ ಪ್ರಕಾಶಕರಿಂದ ಪ್ರೋತ್ಸಾಹವು ದೊರೆತು ಅವರು ಒಂದಾದ ಮೇಲೊಂದು ಕಾದಂಬರಿಗಳನ್ನು ಕನ್ನಡಿಗರಿಗೆ ಕೊಡ ತೊಡಗಿದರು. 'ಗೆಜ್ಜೆಪೂಜೆ' ಚಲನಚಿತ್ರವಾಗಿ ಅವರಿಗೆ ಹೆಚ್ಚು ಪ್ರಸಿದ್ಧಿಯನ್ನು ಕೀರ್ತಿಯನ್ನು ತಂದುಕೊಟ್ಟಿತು. ಅವರು ಕರ್ನಾಟಕದ ಮನೆಮಾತಾದರು.

---

1. ಶ್ರೀಮತಿ ಶಕುಂತಲಾ ಸಿದ್ದರಾಮ ದುರಗಿ : 'ಆಧುನಿಕ ಕನ್ನಡದಲ್ಲಿ ಮಹಿಳಾ ಸಾಹಿತ್ಯ' ಪುಟ–43 (ಅಪ್ರಕಟಿತ ಮಹಾಪ್ರಬಂಧ)

ಅಧ್ಯಾಯ - ಎರಡು

ಎಂ. ಕೆ. ಇಂದಿರಾ ಅವರ ಜೀವನ

ಶ್ರೀಮತಿ ಎಂ. ಕೆ. ಇಂದಿರಾ ಅವರು ಮಂಡಗದ್ದೆಯ ದಿ. ಕೃಷ್ಣರಾವ್ ಇವರ ಪತ್ನಿ. ಹಾಗೂ ತರಿಕೆರೆ ಸೂರ್ಯನಾರಾಯಣರಾವ್ ಮತ್ತು ಬನಶಂಕರಮ್ಮ ಇವರ ಮಗಳು.

ಮನೆತನ

ಇಂದಿರಾ ಅವರ ಅಜ್ಜಿ ಫಣಿಯಮ್ಮ ಅಂದರೆ ಬನಶಂಕರಮ್ಮನವರ ತಾಯಿ ಅಗರದ ಮನೆತನಕ್ಕೆ ಸೇರಿದವಳು. ಅರಗವೆಂಬುದು ಶಿವಮೊಗ್ಗ ಜಿಲ್ಲೆಯ ಒಂದು ಹಳ್ಳಿ. ಇಂದಿರಾ ಅವರ ಅಜ್ಜ (ತಾಯಿಯ ತಂದೆ) ಮಾಳೂರು ಕೃಷ್ಣಪ್ಪನವರು. ಆರಗದ ಮನೆತನ ಸಾಹಿತಿಗಳಿಂದ ಕಲಾವಿದರಿಂದ ಹೆಸರಾದುದು. ಬನಶಂಕರಮ್ಮನವರ ಏಳು ಜನ ಸೋದರ ಮಾವಂದಿರು (ಫಣಿಯಮ್ಮನ ತಮ್ಮಂದಿರು) ಒಂದೊಂದು ರೀತಿಯಲ್ಲಿ ಕಲಾವಿದರು. ಹಿರಿಯ ಸೋದರ ಮಾವ ಶೇಷಾಚಲಯ್ಯನವರು ಸಂಸ್ಕೃತ ವಿದ್ವಾಂಸರು. ವೃತ್ತಿಯಿಂದ ವಕೀಲರಾಗಿದ್ದರು.

ಅವರ ಮಕ್ಕಳು ಮೊಮ್ಮಕ್ಕಳೆಲ್ಲ ಬೆಂಗಳೂರಿನಲ್ಲಿಯೇ ನೆಲೆಸಿದ್ದಾರೆ. ಅವರಲ್ಲಿ ಅನೇಕರು ಕಲಾವಿದರು ಜಯದೇವ ಸಂಗೀತಕಲಾವಿದ ಇನ್ನು ಕೆಲವರು ಚಿತ್ರ ಕಲಾ ವಿದರು. ಅವರ ಅಳಿಯ ದಿ. ಅಜ್ಜಂಪುರ ಅವರು ಮೊಟ್ಟಮೊದಲಾಗಿ "ಭೂ ಕೈಲಾಸ" ನಾಟಕ ಬರೆದು ಆಡಿದವರು. ಬಡತನದಲ್ಲಿ ಭಾಗ್ಯ 'ಹೊಮ್‌ರೂಲ್' ಮೊದಲಾದ ನಾಟಕಗಳನ್ನು ನರಸಿಂಹ ರಾಜಪುರದಲ್ಲಿ ಆಡಿದ್ದರು. ಅಜ್ಜಂಪುರ ಅವರು ಕವಿಗಳೂ ಹೌದು. ಅಂದಿನ ಪತ್ರಿಕೆಗಳಲ್ಲಿ ಅವರ ಕವನಗಳು ಆಗಾಗ ಪ್ರಕಟವಾಗುತ್ತಿದ್ದವು. "ಹಾಲ್ಸ್ವಾಮಿ" ಎಂಬ ಕಾವ್ಯ ಬಹಳ ಮೆಚ್ಚಿಗೆ ಪಡೆದಿತ್ತು. ವೃತ್ತಿಯಲ್ಲಿ ಅವರು ಇಂಜಿನೀಯರ್ ಆಗಿದ್ದರು."[1]

ಬನಶಂಕರಮ್ಮನವರ ನಾಲ್ಕನೆಯ ಸೋದರಮಾವ ದಿ. ಸೀತಾರಾಮಯ್ಯನವರು ವೃತ್ತಿಯಲ್ಲಿ ಎಕ್ಸೈಜ್ ಇನ್‌ಸ್ಪೆಕ್ಟರರಾದರೂ ಆಶುಕವಿತೆ ಬರೆಯುವದು ಹಾಡುವುದು ಅವರ ಹವ್ಯಾಸಗಳಾಗಿದ್ದವು. ಬನಶಂಕರಮ್ಮನವರಿಗೆ ಹೆಚ್ಚಾಗಿ ದೇವರ ಹಾಡುಗಳನ್ನು ಅವರೇ ಹೇಳಿಕೊಡುತ್ತಿದ್ದರಂತೆ. ಅವು ಬರಹರೂಪದಲ್ಲಿ ಈಗ ಲಭ್ಯವಿಲ್ಲ. ಆರನೆಯ

---

1. ಶ್ರೀಮತಿ ಎಂ. ಕೆ. ಇಂದಿರಾ ಅವರು 5-2-83 ರ ಪತ್ರದಲ್ಲಿ ನನಗೆ ತಿಳಿಸಿದ್ದಾರೆ.

ಸೋದರಮಾವ ದಿ. ಅನಂತಶರ್ಮರು ಬರಹಗಾರರು ಅಪ್ಪಟ ಗಾಂಧೀವಾದಿಗಳೂ ಆಗಿದ್ದರು.

ಇಂದಿರಾ ಅವರ ಸೋದರ ಮಾವಂದಿರ ಮಕ್ಕಳು. ಎ. ಅನಂತಯ್ಯ, ಚಿತ್ರಕಲಾವಿದ 'ಛಾಯಾಪ್ರಕಾಶ ಸ್ಟುಡಿಯೋ' ಆರಗಂ ಕೃಷ್ಣಮೂರ್ತಿ ಚಿತ್ರಕಲಾವಿದ ಇಬ್ಬರೂ ಬೆಂಗಳೂರಲ್ಲಿ ನೆಲೆಸಿದ್ದಾರೆ.

"ಸ್ವಾತಂತ್ರ್ಯ ಚಳುವಳಿಯ ಪ್ರಾರಂಭ ಕಾಲದಲ್ಲಿ, ತೀರ್ಥಹಳ್ಳಿಯ ಜ್ಞಾನಿಗಳೂ, ತ್ಯಾಗಿಗಳೂ, ರಾಷ್ಟ್ರೀಯ ಪ್ರವಾದಿಗಳೂ ಆಗಿದ್ದ. ಅನಂತ ಶರ್ಮರನ್ನು ಆ ಕಾಲದವರೆಲ್ಲ ಅರಿತವರೇ ಆಗಿದ್ದರು. ಅಪ್ಪಟ ಖಾದೀಧಾರಿಗಳಾಗಿದ್ದ ಅವರು, ತೀರ್ಥಹಳ್ಳಿಯ ಬಾಳೇಬೈಲಿನ ಹತ್ತಿರ ತುಂಗಾತೀರದಲ್ಲಿ ಆಶ್ರಮವೊಂದನ್ನು ಕಟ್ಟಿಕೊಂಡು ವಾಸಮಾಡುತ್ತಿದ್ದರು. ಎಲ್ಲ ರಾಷ್ಟ್ರೀಯ ಕಾರ್ಯಕಲಾಪಗಳಲ್ಲಿ ಭಾಗವಹಿಸುತ್ತಿದ್ದರು. ಅವರು ತಮ್ಮ ಆಶ್ರಮದಲ್ಲಿ ಹರಿಜನರನ್ನು ಕೆಲಸಕ್ಕೆ ನೇಮಿಸಿಕೊಂಡಿದ್ದರಲ್ಲದೆ ಅಸ್ಪೃಶ್ಯ ಬಾಲಕರಿಗೆ ಅನ್ನ–ಬಟ್ಟೆಗಳನ್ನು ಕೊಟ್ಟು ಪಾಠ ಹೇಳುತ್ತಿದ್ದರು. ಬಹುಸಂಖ್ಯೆಯಲ್ಲಿ ಒಂದು ಪುಸ್ತಕ ಭಂಡಾರವೇ ಅವರ ಆಶ್ರಮದಲ್ಲಿದ್ದಿತು. ಭಗವದ್ಗೀತೆಯ ಮೊದಲನೆಯ ಪಾಠ ನನಗೆ ಅವರೇ ಕಲಿಸಿದ್ದು. "ಸೇನೆಯೋರು ಭಯೋರ್ಮಧ್ಯೇ" ಎಂಬ ಶ್ಲೋಕ ಈಗಲೂ ನನಗೆ ನೆನಪಿದೆ. ತೀರ್ಥಹಳ್ಳಿಯ ರಾಜಕೀಯ ಚಳುವಳಿಯಲ್ಲಿಯೂ ಮೊದಲು ಇವರು ಪ್ರಮುಖ ಪಾತ್ರವಹಿಸಿದ್ದರು.[1] ಎಂದು ಟಿ. ವಿಶ್ವನಾಥ ಅವರು ಭಕ್ತಿ ಅಭಿಮಾನದಿಂದ ನುಡಿದಿದ್ದಾರೆ. ಒಟ್ಟಿನಲ್ಲಿ ಅನಂತಶರ್ಮರೂ ಜ್ಞಾನಿಗಳೂ, ದೇಶಭಕ್ತರೂ ಆದರ್ಶವಾದಿಗಳೂ ಆಗಿದ್ದರೆಂಬುದು ತಿಳಿದುಬರುತ್ತದೆ.

ಶಿವಮೊಗ್ಗೆಯಲ್ಲಿ ಅವರು ಒಂದು 'ಬಾಲಿಕಾ ಪಾಠಶಾಲೆ'ಯನ್ನು ಸ್ಥಾಪಿಸಿದ್ದರಂತೆ. ಹರಿಜನ ಮಕ್ಕಳಿಗೆಲ್ಲ ಹೊಳೆಯಲ್ಲಿ ಕಡ್ಡಾಯವಾಗಿ ಸ್ನಾನಮಾಡಿಸಿ ಊರಿನಲ್ಲಿ ಎಲ್ಲರ ಮನೆಯ ಹಿಟ್ಟು ಹಾಗೂ ಮಜ್ಜಿಗೆ ತರಿಸಿ ದೋಸೆ ಮಾಡಿಸಿ ತಿನ್ನಲು ಹಂಚುತ್ತಿದ್ದರು. ಈ ವಿಷಯವನ್ನು ಇಂದಿರಾ ಅವರ ಭಾವನವರ ಮಗ ಎಂ. ಎಸ್. ರಾಮಸ್ವಾಮಿಯವರು ನನಗೆ ತಿಳಿಸಿದ್ದಾರೆ.

ಬನಶಂಕರಮ್ಮನವರ ಏಳನೆಯ ಸೋದರಮಾವ ದಿ. ಅರಗದ ಲಕ್ಷಣರಾಯರು 'ಹೊಯ್ಸಳ' ಕಾವ್ಯನಾಮದಿಂದ ಕನ್ನಡ ಸಾಹಿತ್ಯ ಲೋಕದಲ್ಲಿ ಚಿರಸ್ಥಾಯಿ ಹೆಸರು ಪಡೆದಿದ್ದಾರೆ. ಮಕ್ಕಳ ಸಾಹಿತ್ಯಕ್ಕೆ ಅವರು ಕೊಟ್ಟ ಕೊಡುಗೆ ಅಮೂಲ್ಯ ಅವರು ರವೀಂದ್ರನಾಥ ಠಾಗೂರರ ಶಿಷ್ಯರು ಹೌದು. ಅಳಿಯ ಸಿ. ವಿ. ಶಿವಶಂಕರ ಅವರು ಬರೆದ "ಹೋಗದಿರೀ ಸೋದರರೇ ಹೋಗದಿರಿ ಬಂಧುಗಳೇ" ಹಾಡು ಪ್ರಸಿದ್ಧವಾಗಿದೆ.

---

1. ಸೂರ್ಯನಾಥ ಕಾಮತ್ (ಸಂ) ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು" ಎಂಬ ಗ್ರಂಥದಲ್ಲಿ ಟಿ. ವಿಶ್ವನಾಥ ಅವರ ಸ್ವಾತಂತ್ರ್ಯ ಹೋರಾಟದ ನೆನಪು ಸಂಪುಟ 2 ಪುಟ 622–623

ಇಂದಿರಾ ಅವರ ಅಜ್ಜಿ ಫಣಿಯಮ್ಮನೂ ಕಲಾವಿದೆ. ಹಾಡು, ಹಸೆ, ಕಸೂತಿ, ಹೆಣಿಕೆಯಲ್ಲಿ ನಿಪುಣೆಯಾಗಿದ್ದರಂತೆ. ವಾತ್ಸಲ್ಯಮಯಿ ಮತ್ತು ಸದ್ಗೃಹಿಣಿ. ಇಂದಿರಾ ಅವರು ಎರಡು ತಿಂಗಳ ಮಗುವಾಗಿದ್ದಾಗಲೇ ಆವರು ತೀರಿಹೋಗಿದ್ದರು.

ಅರಗದ ಮನೆತನದ ಸಂಸ್ಕಾರ ರಕ್ತಗತವಾಗಿ ಬಂದುದರಿಂದ ಇಂದಿರಾ ಅವರ ತಾಯಿ ಬನಶಂಕರಮ್ಮನವರು ಕೂಡ ಕಲಾವಿದೆಯೇ ಆಗಿದ್ದರು.

"ಇಂದಿರಾ ಅವರ ತಾಯಿ ಬನಶಂಕರಮ್ಮ ತುಂಬಾ ಚೆಲುವೆ, ಹಾಗೂ ಬುದ್ಧಿವಂತೆ; ಕಲಾವಿದೆ. ಎಲ್ಲರೊಡನೆ ಹೊಂದಿಕೊಳ್ಳುವ ಆತ್ಮೀಯ ಸ್ವಭಾವದವರೂ ಆಗಿದ್ದರು"[1]

"ಸ್ವಚ್ಛ ಹೊಂಗೇದಗೆಯ ಬಣ್ಣ. ಗುಂಗುರ, ಮುಂಗುರುಳು, ತಿಳಿಗೆಂಪಿನ ತುಟಿ, ದುಂಡು ದುಂಡಾದ ಮೈಮಾಟ, ಸ್ವಲ್ಪ ಎತ್ತರ ಎನ್ನಬಹುದಾದ ನಿಲವು ನಗುಮೊಗ ಮೆಲುಮಾತು, ಮಧುರ ಶರೀರ"

ಅಂದಿನ ಕಾಲದಲ್ಲಿ ಹೆಣ್ಣುಮಕ್ಕಳು ಶಾಲೆಗೆ ಹೋಗುವುದು ಮನೆತನದ ಹಿರಿಮೆಗೆ ಚ್ಯುತಿ ಎಂಬ ಭಾವನೆ ಬಲವಾಗಿ ಬೇರೂರಿತ್ತು. ಆಗಿನ ಕಾಲಕ್ಕೆ ಬನಶಂಕರಮ್ಮನವರ ಶಿಕ್ಷಣ ಲೋವರ್ ಸೆಕೆಂಡರಿಯವರೆಗೆ ಮಾತ್ರ. ಸಂಪ್ರದಾಯದಂತೆ ಹತ್ತನೆಯ ವರ್ಷಕ್ಕೇ ಬನಶಂಕರಮ್ಮನವರ ಮದುವೆ ತರಿಕೆರೆ ಸೂರ್ಯನಾರಾಯಣರೊಂದಿಗೆ ನಡೆಯಿತು. ಮುಂದೆ ಐದು ವರ್ಷಗಳ ಕಾಲ ಬನಶಂಕರಮ್ಮ, ತವರುಮನೆ ತೀರ್ಥಹಳ್ಳಿಯಲ್ಲೇ ಉಳಿದರು. ಹದಿನೈದನೆಯ ವರ್ಷಕ್ಕೆ ಪುಷ್ಪವತಿಯಾಗಿ ಪತಿಯ ಮನೆ–ನರಸಿಂಹರಾಜಪುರಕ್ಕೆ ಹೋದರು. ಬನಶಂಕರಮ್ಮನವರಿಗೆ ಬಾಲ್ಯದಿಂದಲೇ ಪುಸ್ತಕ ಓದುವಗೀಳು. ಹೆಂಗಸರು ಪುಸ್ತಕವನ್ನು ಮುಟ್ಟಬಾರದು ಎಂದು ಆಗಿನ ಹಿರಿಯರ ಮನೋಭಾವ. ತವರು ಮನೆಯಲ್ಲಿದ್ದಾಗ ಗ್ರಂಥಾಲಯದಿಂದ ಪುರಾಣ, ಪುಣ್ಯಕತೆಗಳ ಪುಸ್ತಕಗಳನ್ನು ತರಿಸಿ ಓದುತ್ತಿದ್ದರು. 'ಪತಿಯ ಮನೆಗೆ ಹೋದನಂತರ ಕೈತುಂಬ ಕೆಲಸ, ಮನೆತುಂಬ ಹಿರಿಯರು ಓದಲು ಅವಕಾಶವೆಲ್ಲಿ!

ಶ್ರೀಮಂತರ ಮನೆತನದಲ್ಲಿ, ಚೆಲುವೆ–ಸ್ಫುರದ್ರೂಪಿ ಸೊಸೆಯಂದಿರು ಮನೆಯ ಹೊಸ್ತಿಲನ್ನು ದಾಟುವಂತಿಲ್ಲ.

ಅದರಲ್ಲೂ ಮುಟ್ಟಾದ ಮೂರುದಿನಗಳನ್ನು ಕಳೆಯುವದೆಂದರೆ ಆಗಿನ ಕಾಲದಲ್ಲಿ ಹೆಣ್ಣುಮಕ್ಕಳಿಗೊಂದು ಜೈಲು ವಾಸವೇ. ಕತ್ತಲೆ ಕೋಣೆ ಬಿಟ್ಟು ಹೊರಗೆ ಬರುವಂತಿಲ್ಲ, ಮುಟ್ಟಾದವರಿಗಾಗಿ ಪ್ರತ್ಯೇಕ ಕೋಣೆಗಳೇ ಇರುತ್ತಿದ್ದವು.

---

1. ಎಚ್. ಎಸ್. ಪಾರ್ವತಿಯವರನ್ನು ದಿನಾಂಕ 8–10–1984ರಂದು ಕಂಡಾಗ ನನಗೆ ಹೇಳಿದ್ದಾರೆ.

ಮುಟ್ಟಾದಾಗ ಒಮ್ಮೆ ಬನಶಂಕರಮ್ಮನವರು ಬೇಸರವಾಗಿ "ಏನಾದರೂ ಪುಸ್ತಕ ಇದ್ದರೆ ಕೊಡಿ, ಹ್ಯಾಗೂ ಈ ಮುಟ್ಟಿನ ಕೋಣೆಗೆ ಯಾರೂ ಬರುವದಿಲ್ಲವಲ್ಲ, ಮೂರು ದಿನ ಓದ್ತಿನಿ" ಎಂದು ಪತಿ ಸೂರ್ಯನಾರಾಯಣರನ್ನು ಕೇಳಿದಾಗ, ಅವರಿಗೆ ತಟ್ಟನೆ ಬಿ. ವೆಂಕಟಾಚಾರ್ಯರ ನೆನಪಾಯಿತಂತೆ. ಸೂರ್ಯನಾರಾಯಣರು ಮದುವೆಗೆ ಮೊದಲು ಎಫ್.ಎ. (ಈಗಿನ ಪಿ.ಯು.ಸಿ.) ಓದುತ್ತಿದ್ದಾಗ ಬಿ. ವೆಂಕಟಾಚಾರ್ಯರು ನರಸಿಂಹರಾಜಪುರದಲ್ಲಿ ಹೆಡ್‌ಮುನ್ಷಿ ಕೆಲಸದಲ್ಲಿದ್ದರಂತೆ. ಅವರ ಹೆಂಡತಿಯೂ ತೀರಿಹೋಗಿದ್ದರಿಂದ ತಮ್ಮ ತಾಯಿ ತಿರುಮಲಮ್ಮನವರೊಂದಿಗೆ ಸೂರ್ಯನಾರಾಯಣರ ಮನೆಯ ಹಿಂಭಾಗದ ಮೂರು ಕೋಣೆಯಲ್ಲಿ ವಾಸವಾಗಿದ್ದರಂತೆ. ಹಳ್ಳಿಯ ದೊಡ್ಡ ಮನೆ. ಅಲ್ಲದೆ ಈಗಿನಂತೆ ಬಾಡಿಗೆ ತೆಗೆದುಕೊಳ್ಳುವ ಪರಿಪಾಠವೂ ಇರುತ್ತಿರಲಿಲ್ಲ.

"ಹಿಂಭಾಗದ ಹದಿನಾರು ಕಂಬದ ಚೌಕಿಯಲ್ಲಿ ಕಾಲು ದೀಪದ ಬೆಳಕಿನಲ್ಲಿ ಡೆಸ್ಕಿನ ಮುಂದೆ ಕುಳಿತು ಬಿ. ವೆಂಕಟಾಚಾರ್ಯರು, ಬಂಗಾಲಿ ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದಿಸುತ್ತಿದ್ದರಂತೆ. ವೆಂಕಟಾಚಾರ್ಯರು ಶ್ರೀ ವೈಷ್ಣವರು. ಬಹಳ ನೇಮದವರಂತೆ. ಆಗ ಅವರಿಗೆ ನಲವತ್ತೈದು ವರ್ಷ ಅವರ ತಾಯಿ ತಿರುಮಲಮ್ಮನವರಿಗೆ ಅರವತ್ತು ವರ್ಷಗಳಂತೆ ಬೆಳಿಗ್ಗೆ ಸ್ನಾನ, ಪೂಜೆ, ಊಟ, ಕಛೇರಿ, ಸಂಜೆ ಸಂಧ್ಯಾವಂದನೆ ಮುಗಿಸಿ ಕುಳಿತರೆ ರಾತ್ರಿ ಒಂಬತ್ತು ಗಂಟೆಯವರೆಗೂ ಬರೆಯುತ್ತಿದ್ದರಂತೆ. ಅವರು ಏನು ಬರೆಯುತ್ತಿದ್ದರೆಂಬುದು ಯಾರಿಗೂ ಗೊತ್ತಿಲ್ಲ. ಇದು ಸುಮಾರು ಎಂಬತ್ತು ವರ್ಷಕ್ಕೂ ಹಿಂದಿನ ಮಾತು. ಆಗಿನ ಕಾಲದಲ್ಲಿ ಕತೆ ಕಾದಂಬರಿಗಳೆಂದರೆ ಏನೆಂಬುದೇ ತಿಳಿಯದು. ಮಸಿದೌತಿ ಲೇಖನಿಯಿಂದ ಅವರು ಬರೆಯುತ್ತಿದ್ದರಂತೆ."[1]

ಸೂರ್ಯನಾರಾಯಣರು ಮೈಸೂರಲ್ಲಿ ಎಫ್.ಎ. ಮುಗಿಸಿ ನರಸಿಂಹರಾಜಪುರಕ್ಕೆ ಬಂದಾಗ ವೆಂಕಟಾಚಾರ್ಯರು ತಾವು ಆ ಊರು ಬಿಡುವಮುನ್ನ 'ತಗೊಳ್ಳಪ್ಪ ಸೂರ್ಯನಾರಾಯಣ ಈ ಕಾದಂಬರಿ ನಾನು ನಿಮ್ಮ ಮನೆಯಲ್ಲಿ ಕೂತು ಬರೆದದ್ದು ಸಾಧ್ಯವಾದರೆ ಓದು ಇಲ್ಲದಿದ್ದರೆ ನಿಮ್ಮನೆ ಬೀರೂಲಿ ಇಟ್ಟಿರು' ಎಂದು 'ಅಡವಿ ಹುಡುಗಿ', 'ದುರ್ಗೇಶ ನಂದಿನಿ', 'ಕಪಾಲ ಕುಂಡಲಿ', 'ದೇವಿ ಚೌಧುರಾಣಿ' ಪುಸ್ತಕಗಳನ್ನು ಕೊಟ್ಟಿದ್ದು ನೆನಪಾಗಿ ತಕ್ಷಣ ಮಡದಿ ಬನಶಂಕರಮ್ಮನವರಿಗೆ ಆ ಕಾದಂಬರಿಗಳನ್ನು ಕೊಟ್ಟರಂತೆ.

"ಇದು ಎಂತಹ ಪುಸ್ತಕವೋ ನನಗೆ ಗೊತ್ತಿಲ್ಲ. ವೆಂಕಟಾಚಾರ್ಯರು ಕೊಟ್ಟಿದ್ದು. ಯಾರೂ ಬಿಚ್ಚಿ ನೋಡಿಲ್ಲ. ನೀನು ಓದಿ ನೋಡು" ಎಂದಾಗ ಬನಶಂಕರಮ್ಮನವರಿಗೆ ಹಿಡಿಸಲಾರದ ಸಂತೋಷ. ಮುಟ್ಟಾದ ಮೂರುದಿನ ಹಿರಿಯರ ಕಣ್ಣು ತಪ್ಪಿಸಿ ಆ ಕಾದಂಬರಿಗಳನ್ನು ಓದು ಮುಗಿಸಿದರಂತೆ.

---

1. ಎಂ. ಕೆ. ಇಂದಿರಾ ಅವರು ಬಿ. ವೆಂಕಟಾಚಾರ್ಯರ ಬಗೆಗೆ ತಮ್ಮ ತಂದೆಯವರಿಂದ ತಿಳಿದುದನ್ನ ನಾನು ಸಂದರ್ಶನಕ್ಕೆ ಹೋದಾಗ ಹೇಳಿದ್ದಾರೆ.

ಹೀಗೆ ಬನಶಂಕರಮ್ಮನರರಿಗೆ ಕತೆ-ಕಾದಂಬರಿಗಳ ಗುಂಗು ಹಿಡಿದು ಓದುವದರಲ್ಲಿ ಆಸಕ್ತಿ ಹೆಚ್ಚಾಯಿತು. ಫಣಿಯಮ್ಮನವರು ಮಗಳಿಗೆ ಹಾಡು, ರಂಗವಲ್ಲಿ, ಕಸೂತಿ, ಕುಶಲ ಕಲೆಗಳನ್ನು ಕಲಿಸಿದ್ದರು. ಯಕ್ಷಗಾನದ ಹಾಡು, ಹಾರ್ಮೋನಿಯಂ ಮುಂತಾದ ವುಗಳಲ್ಲಿ ಬನಶಂಕರಮ್ಮ ಪ್ರವೀಣೆಯಾಗಿದ್ದರು.

ಮುಂದೆ ಇಂದಿರಾ ಅವರನ್ನು ಗರ್ಭಧರಿಸಿದಾಗಲೂ ಬನಶಂಕರಮ್ಮ ಕಾದಂಬರಿ ಗಳನ್ನು ತಪ್ಪದೇ ಓದುತ್ತಿದ್ದರು. ಅದೇ ತಾನೇ ಹೊಸದಾಗಿ ಬಂದ ಕಾದಂಬರಿಗಳ ಹಾರಾಟ. ಒಮ್ಮೆ ಕಾದಂಬರಿಯನ್ನು ಕೈಗೆತ್ತಿಕೊಂಡರೆ ಕೆಳಗೆ ಇಡುವಂತೆಯೇ ಇಲ್ಲ. ಬನಶಂಕರಮ್ಮನವರ ಸಾಹಿತ್ಯದ ಗೀಳು ಗರ್ಭದಲ್ಲಿ ಬೆಳೆಯುತ್ತಿದ್ದ ಇಂದಿರಾ ಅವರ ಮೇಲೂ ಸಾಕಷ್ಟು ಪರಿಣಾಮ ಬೀರಿರಬೇಕು.

ಎಂ. ಕೆ. ಇಂದಿರಾ ಅವರ ಜನನ :

ಕಲಾವಿದರ ಮನೆತನದ ಬನಶಂಕರಮ್ಮ ಹಾಗೂ ತರಿಕೆರೆ ಸೂರ್ಯನಾರಾಯಣರ ಎರಡನೆಯ ಮಗಳಾಗಿ ಇಂದಿರಾ ಅವರು ೫-೧-೧೯೧೭ರಲ್ಲಿ ಜನಿಸಿದರು. ಬನಶಂಕರಮ್ಮ ನವರ ಬಾಣಂತಿತನ ತವರೂರಾದ ತೀರ್ಥಹಳ್ಳಿಯ ಮನೆಯಲ್ಲಿ ನಡೆಯಿತು. ತೀರ್ಥಹಳ್ಳಿ ನಿಸರ್ಗದ ತೊಟ್ಟಿಲು, ಅಲ್ಲದೆ ಪರಶುರಾಮನ ಪುಣ್ಯ ಕ್ಷೇತ್ರವೆಂದು ಹೆಸರಾಗಿದೆ.

ಪುಷ್ಯಶುದ್ಧ ತ್ರಯೋದಶಿ ರೋಹಿಣಿ ನಕ್ಷತ್ರ, ಶುಕ್ರವಾರ ಗೋಧೂಳಿ ಸಮಯಕ್ಕೆ ಜನಿಸಿದ್ದರಿಂದ, 'ಇಂದಿರಾ' ಎಂಬ ಹೆಸರನ್ನಿಡಲಾಯಿತು. ಕುವೆಂಪು, ಹಾ. ಮಾ. ನಾಯಕ, ದಿ. ಹೊಯ್ಸಳ, ಯು. ಆರ್. ಅನಂತಮೂರ್ತಿ, ಮೊದಲಾದ ಪ್ರಸಿದ್ಧ ಕವಿ, ಸಾಹಿತಿಗಳ ಮಲೆನಾಡೇ ಈ ಇಂದಿರಾ ಅವರ ಜನ್ಮಸ್ಥಳ.

ಬನಶಂಕರಮ್ಮನವರಿಗೆ ಒಟ್ಟು ನಾಲ್ಕು ಜನ ಮಕ್ಕಳು ಹಿರಿಯವಳು ಶಾರದಾ, ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಎರಡನೆಯವರು ಇಂದಿರಾ, ಮೂರನೆಯವರು ಟಿ. ಎಸ್. ಆನಂದರಾವ್, ನಾಲ್ಕನೆಯವರು ದಿ॥ ಟಿ. ಎಸ್. ರಾಮಚಂದ್ರ, ಇಪ್ಪತ್ತೆಂಟು ವರ್ಷ ಪ್ರಜಾವಾಣಿ ಸಂಪಾದಕರಾಗಿದ್ದುದು ಸರ್ವವಿದಿತ. ಅವರು ಕ್ಯಾನ್ಸರ್‌ದಿಂದ ಮರಣಹೊಂದಿದ್ದರು. ಎಂಟು ಸಲ ವಿದೇಶಕ್ಕೂ ಹೋಗಿ ಬಂದಿದ್ದರು.

ಇಂದಿರಾ ಅವರು ಜನಿಸಿದಾಗ ಅಜ್ಜ, ಅಜ್ಜಿ, ತಾಯಿಯ ಚಿಕ್ಕಮ್ಮ ನಾಗಮ್ಮ ಅಲ್ಲದೆ ಇಂದಿರಾ ಅವರು ಈಗ ಬರೆದಿರುವ 'ಫಣಿಯಮ್ಮ' ಅಲ್ಲಿಯೇ ಇದ್ದರಂತೆ. ಎಲ್ಲರೂ ಅವರನ್ನು ಅಂಚೆಅತ್ತೆ ಎಂದೇ ಕರೆಯುತ್ತಿದ್ದರಂತೆ. ಬನಶಂಕರಮ್ಮನವರ ಬಾಣಂತಿತನವನ್ನು ಮಾಡಿದವರು ಅವರೆ ಪುನೀತ ಬದುಕನ್ನು ಬಾಳಿದ ಫಣಿಯಮ್ಮನ ತೊಡೆಯ ಮೇಲೆ ಇಂದಿರಾ ಅವರು ಮಗುವಾಗಿದ್ದಾಗ ಮಜ್ಜನ ಮಾಡಿಸಿಕೊಂಡಿದ್ದಾರೆ.

ಇಂದಿರಾ ಅವರ ಬಾಲ್ಯ : ಅವರದು ಬಂಧು ಬಾಂಧವರಿಂದ ತುಂಬಿರುತ್ತಿದ್ದ ನಂದಗೋಕುಲದಂತಹ ಮನೆ ಮನೆತುಂಬ ಆಕಳುಗಳು, ಹಾಲು ಹೈನು ದವಸ-ಧಾನ್ಯಗಳಿಂದ ಸಮೃದ್ಧ ಮನೆ. ಶಾಲೆಗೆ ಹೋಗುವ ಸಮವಯಸ್ಸಿನ ಮಕ್ಕಳು. ಸದಾ ಅತಿಥಿಗಳಿಂದ ತುಂಬಿರುತ್ತಿದ್ದ ಮನೆ. ಅಲ್ಲದೆ ಹಬ್ಬ-ಹರಿದಿನ, ಬಸಿರು ಬಾಣಂತಿತನಗಳ ಗದ್ದಲ.

"ಮೂರು ತಿಂಗಳ ಎಳೆಯ ಕೂಸಿನ ಕಣ್ಣು ಮೊದಲು ಕಂಡದ್ದು ಮಲೆನಾಡ ಹಚ್ಚಹಸಿರನ್ನು, ನಿರಭ್ರ ನೀಲಾಕಾಶವನ್ನು ತಿಳಿನೀರಿನ ತುಂಗಾಸಲಿಲವನ್ನು ಜಗದೀಶ ರಾಮೇಶ್ವರನನ್ನು"[1]

ಈಗಲೂ ಹಚ್ಚಹಸಿರು, ಗಿರಿ-ತೊರೆ. ಇವುಗಳನ್ನು ಕಂಡರೆ ಇಂದಿರಾ ಅವರು ಎಲ್ಲವನ್ನೂ ಮರೆಯುತ್ತಾರೆ.

ಆಗ ತೀರ್ಥಹಳ್ಳಿಯಲ್ಲಿದ್ದ ಎರಡು ಶಾಲೆಗಳಲ್ಲಿ ಒಂದು ಗಂಡು ಮಕ್ಕಳದು. ಇನ್ನೊಂದು ಹೆಣ್ಣು ಮಕ್ಕಳದ್ದು. ಸಹ ಶಿಕ್ಷಣ ಇನ್ನೂ ಜಾರಿಯಲ್ಲಿರಲಿಲ್ಲ.

ಎರಡೂ ಶಾಲೆಗಳಲ್ಲಿ ಪ್ರಾಥಮಿಕ, ಮಾಧ್ಯಮಿಕ ವರ್ಗಗಳು ಒಂದೇ ಕಟ್ಟಡದಲ್ಲಿ ನಡೆಯುತ್ತಿದ್ದವು. ತುಂಗಾ ನದಿಯ ಆಚೆಯ ದಡದಲ್ಲಿರುವ ಕುರವಳ್ಳಿಯ ಅಗ್ರಹಾರದಲ್ಲಿ ಐಗಳ ಮಠವೂ ಇದ್ದಿತಂತೆ. ಅಲ್ಲಿ ಕೈಬೆರಳಿನಿಂದ ಅಕ್ಷರಗಳನ್ನು ಮರಳ ಮೇಲೆ ತಿದ್ದುವ ಪರಿಪಾಠವಿದ್ದಿತಾದರೂ ತೀರ್ಥಹಳ್ಳಿಗಾಗಲೇ ಶಾಲೆಗಳು ಪ್ರಾರಂಭವಾಗಿದ್ದವು. ಆದ್ದರಿಂದ ಇಂದಿರಾ ಅವರು ಅಜ್ಜನ ಊರು ತೀರ್ಥಹಳ್ಳಿಯಲ್ಲಿಯೇ ಶಿಕ್ಷಣವನ್ನು ಪಡೆದರು. ಅಲ್ಲದೆ ಆಗಲೇ (ಪಾಟಿ) ಸ್ಲೇಟು, ಬಳಪ ಜಾರಿಯಲ್ಲಿದ್ದುದರಿಂದ ಪ್ರಥಮವಾಗಿ ಪಾಟಿಯ ಮೇಲೆ 'ಶ್ರೀ'ಕಾರವನ್ನು ತಿದ್ದಿ ಅಕ್ಷರಾಭ್ಯಾಸವನ್ನು ಪ್ರಾರಂಭಿಸಿದರು. ಇಂದಿರಾ ಅವರ ಶಾಲೆಯಲ್ಲಿ 'ಲಕ್ಷ್ಮೀಬಾಯಿ' ಎಂಬ ಕೊಂಕಣಿ ವಿಧವೆ ಹೆಡ್‌ಮಾಸ್ತರಳಾಗಿದ್ದಳಂತೆ. ಅಲ್ಲದೆ 'ಸುಮಿತ್ರಾ' 'ಸೋಫಿಯಾ' ಎಂಬ ಇಬ್ಬರು ಕ್ರಿಶ್ಚಿಯನ್ ತರುಣಿಯರು ಇಂದಿರಾ ಅವರ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕಿಯರಾಗಿದ್ದರು, ತಮ್ಮ ಶಿಕ್ಷಣ ಕ್ರಮದ ಬಗ್ಗೆ ಇಂದಿರಾ ಅವರೆ ತಿಳಿಸಿದಂತೆ.

"ಪ್ರಾಣಿಗಳು, ಪದಾರ್ಥಗಳು ಅಂಕಿ-ಮಗ್ಗಿ ವ್ಯವಹಾರಿಕ ಲೆಕ್ಕ ಇವುಗಳನ್ನು ಅಂದಿನ ಶಾಲೆಗಳಲ್ಲಿ ಕಲಿಸಲಾಗುತ್ತಿತ್ತು. ವರ್ಗದಲ್ಲಿ ಗೋವಿನ ಕಥೆ, ಸೋಮೇಶ್ವರ ಶತಕ, ವಿದುರನೀತಿ, ಇವಲ್ಲದೆ ಇನ್ನೂ ಅನೇಕ ಪದ್ಯಗಳನ್ನು ಕಲಿಸಲಾಗುತ್ತಿತ್ತು. ವಾರದಲ್ಲಿ ಎರಡು ದಿನ ನೀತಿಯ ಪಾಠಗಳೂ ನಡೆಯುತ್ತಿದ್ದವು. ಆಗಲೇ ಅಂದಿನ ಕಾಲದಲ್ಲಿ ಪ್ರಸಿದ್ಧ ಕಾದಂಬರಿಕಾರ ದಿ॥ ಎಂ. ಎಸ್. ಪುಟ್ಟಣ್ಣನವರ 'ನೀತಿ ಚಿಂತಾಮಣಿಯೂ' ಪಠ್ಯ ಪುಸ್ತಕವಾಗಿದ್ದಿತು."

1. ಎಂ. ಕೆ. ಇಂದಿರಾ ಕಸ್ತೂರಿ ವಸಂತ ಸಂಚಿಕೆ ಮೇ-1966 ಪುಟ 108.

ಶಾಲೆಯಲ್ಲಿ ಇಂಗ್ಲಿಷ್ ಪದ್ಯಗಳನ್ನೂ ಹೇಳಿಕೊಡುವುದೂ ರೂಢಿಯಲ್ಲಿತ್ತು 'ಇಜಾಬೆಲಾ' ಬಾಲೆಯ ದುರಂತ ಕಥೆಯ ಹಾಡನ್ನು ಕೂಡ ಕನ್ನಡದಲ್ಲಿ ಕಲಿಸಲಾಗುತ್ತಿತ್ತು. ಇದಿಷ್ಟು ಪ್ರಾಥಮಿಕ ಶಾಲೆಯ ಶಿಕ್ಷಣ.

ಇನ್ನು ಮಾಧ್ಯಮಿಕ ಶಾಲೆಯ ಶಿಕ್ಷಣ ಬೇರೆ. ಮಾಧ್ಯಮಿಕ ಶಾಲೆಯಲ್ಲಿ ಉಪಾಧ್ಯಾಯಿನಿಯರು ಹುಡುಗಿಯರಿಗೆ ತಾವೇ ನಾಟಕ ಹೇಳಿಕೊಟ್ಟು ನಾಟಕವನ್ನು ಆಡಿಸುತ್ತಿದ್ದರಂತೆ. ಆಗಿನ ಕಾಲದಲ್ಲಿ ಸೀನರಿಯ ಪರದೆಗಳು ಇದ್ದವು. ಇಂದಿರಾ ಅವರದು ಸುಶ್ರಾವ್ಯ ಕಂಠ. ನಾಟಕದಲ್ಲಿ ಇಂದಿರಾ ಅವರಿಗೆ ಕೃಷ್ಣನ ಪಾತ್ರವಿತ್ತು. ಇಂದಿರಾ ಅವರ ಅಕ್ಕ ಶಾರದ ಮೀರಾ ಆಗಿದ್ದರು.

"ನನಗೆ ಲಕ್ಷಣವಾಗಿ ಕೃಷ್ಣನ ಪಾರ್ಟು ಹಾಕಿ ಕೈಯಲ್ಲಿ ಕೊಳಲು ಕೊಟ್ಟು ಬೃಂದಾವನದಲ್ಲಿ ನಿಲ್ಲಿಸಿದರು. ನನಗೂ ಸ್ವರ್ಗಕ್ಕೂ ಮೂರೇ ಗೇಣು ಎಂದು ಭಾವಿಸಿದೆ"[1] ಎಂದು ಇಂದಿರಾ ಅವರು ತಮ್ಮ ಬಾಲ್ಯದಲ್ಲಿ ಅಭಿನಯಿಸಿದ ನಾಟಕದ ನೆನಪುಗಳನ್ನು ಸಂಭ್ರಮದಿಂದ ಹೇಳಿಕೊಂಡಿದ್ದಾರೆ.

"ಶಾಲೆಯಲ್ಲಿ ಚಿತ್ರಗಳನ್ನು ಬರೆಯಲು ಕಲಿಸುತ್ತಿದ್ದರು. ಹೊಲಿಗೆ, ಕಸೂತಿ ಎಲ್ಲವನ್ನೂ ಚೆನ್ನಾಗಿ ಮಾಡಿದವರಿಗೆ ನಂಬರು ಕೊಡುತ್ತಿದ್ದರು. ದಸರೆಯಲ್ಲಿ ಆಟ–ಓಟಗಳಲ್ಲದೆ ಸೂಜಿಗೆ ದಾರ ಪೋಣಿಸುವುದು, ಕಡಲೇಕಾಯಿ ಬಿಡಿಸುವದು, ಕೋಲಾಟ–ಇತ್ಯಾದಿ, ಗೆದ್ದವರಿಗೆ ಸ್ಲೇಟು (ಪಾಟಿ) ಪುಸ್ತಕ, ಪೆನ್ಸಿಲ್ಲು ಮಸಿದೌತಿ, ಲೇಖನಿ, ಸ್ಲೇಟಿನ ಚೀಲ ಹೀಗೆ ವಿದ್ಯಾರ್ಥಿಗಳಿಗೆ ಉಪಯುಕ್ತವಾದ ವಸ್ತುಗಳನ್ನೇ ಬಹುಮಾನವಾಗಿ ಕೊಡುತ್ತಿದ್ದರು"[2]

ಮಾಧ್ಯಮಿಕ ಎರಡನೆಯ ತರಗತಿ ಮುಗಿಯುವಷ್ಟರಲ್ಲಿ ಸಂಪ್ರದಾಯಶೀಲ ಹಿರಿಯರು ಹೆಣ್ಣು ಹುಡುಗಿಗೆ ಹೆಚ್ಚಿನ ಓದೇಕೆ ಎಂದು ಶ್ರೀಮತಿ ಇಂದಿರಾ ಅವರನ್ನು ಶಾಲೆ ಬಿಡಿಸಿದರು. ಸ್ವತಃ ಶಾಲೆಯ ಉಪಾಧ್ಯಾಯಿನಿಯೇ ಬಂದು ಹೇಳಿದರೂ ಶಾಲೆಗೆ ಕಳಿಸಲು ಮನೆಯ ಹಿರಿಯರು ಒಪ್ಪಲಿಲ್ಲ. ತಾವು ಹೆಚ್ಚಿಗೆ ಕಲಿಯಲಿಲ್ಲವೆಂಬ ಕೊರಗು ಇಂದಿರಾ ಅವರಿಗೆ ಈಗಲೂ ಇದ್ದೇ ಇದೆ.

ನಿಸರ್ಗದ ಮಡಿಲಲ್ಲಿ ಕಿಶೋರಿ ಇಂದಿರಾ :

ಪ್ರಕೃತಿಯ ಮಡಿಲಾದ ಮಲೆನಾಡಿನ ತೊಟ್ಟಿಲಲ್ಲೇ ಹುಟ್ಟಿ ಬೆಳೆದು, ಆ ವನಸಿರಿಯ ನಡುವೆ ನಕ್ಕು ನಲಿದು, ಕುಣಿದು–ಕುಪ್ಪಳಿಸಿ, ನೀರಿನಲ್ಲಿ ಮೀನಿನಂತೆ

---

1. ಎಂ. ಕೆ. ಇಂದಿರಾ 'ಕಸ್ತೂರಿ' ವಸಂತ ಸಂಚಿಕೆ–1966 ಪುಟ 109
'ಸಿಂಧುವಿನಲ್ಲಿ ಬಿಂದು'
2. ಲೇಖಕಿಯರಿಗೆ 5–2–83ರ ಪತ್ರದಲ್ಲಿ ಎಂ. ಕೆ. ಇಂದಿರಾ ಅವರು ತಿಳಿಸಿದುದು.

ಈಜಾಡಿ, ಮಲೆಯ ತಣ್ಣಿನಲ್ಲಿ ಹದಿನಾರು ವರ್ಷಗಳನ್ನು ಕಳೆದು ಬಂದಿದ್ದರೂ ಇನ್ನೂ ಆ ನಿಸರ್ಗದ ಹುಚ್ಚು ಬಿಟ್ಟಿಲ್ಲ ಈಗಲೂ ಕಡಲು, ನದಿ, ಜಲಪಾತ, ತೊರೆ, ಝರಿ, ಗಿರಿ, ವನ ತೋಟ–ತುಡಿಕೆಗಳೆಂದರೆ ಅವರ ಮನ ಕುಣಿಯುತ್ತದೆ"[1] ಎಂದು ಬಾಲ್ಯದಿಂದಲೂ ತಮಗೆ ಅಂಟಿಕೊಂಡು ಬಂದ ನಿಸರ್ಗ ಪ್ರೇಮವನ್ನು ವಿವರಿಸಿದ್ದಾರೆ. ಇಂದಿರಾ ಅವರಿಗೆ ಬಾಲ್ಯದ ಗೆಳತಿಯರ ಒಂದು ದೊಡ್ಡ ಗುಂಪೇ ಇರುತ್ತಿತ್ತು. ಶಾಲೆಯ ಗೆಳತಿಯರು ಬೇರೆ; ಮನೆಯ ಗೆಳತಿಯರು ಬೇರೆ.

ಸೀತಾ, ಚಿನ್ನಪದ್ದಿ, ನಾಗು, ಸರಸಿ, ಕಮಲ ಇವರು ಇಂದಿರಾ ಅವರ ಬಾಲ್ಯದ ಅಚ್ಚುಮೆಚ್ಚಿನ ಗೆಳತಿಯರು. ಇಂದಿರಾ ಅವರಿಗೆ ಬಾಲ್ಯದಲ್ಲಿ ಈಜುವ ಹುಚ್ಚು. ತೀರ್ಥಹಳ್ಳಿಯ ಹೊಳೆಯಲ್ಲಿ ಈಜಲು ಬನಶಂಕರಮ್ಮನವರು ಒಪ್ಪಿಗೆ ಕೊಡುತ್ತಿರಲಿಲ್ಲ.

ಇಂದಿರಾ ಅವರು ಹುಟ್ಟಿದ್ದು ತಾಯಿಯ ಮನೆ ತೀರ್ಥಹಳ್ಳಿಯಾದರೂ ಅವರ ತಂದೆ ಸೂರ್ಯನಾರಾಯಣರ ಊರು ನರಸಿಂಹರಾಜ ಪುರ. ಸೂರ್ಯನಾರಾಯಣರ ತೋಟ, ಗದ್ದೆಗಳೆಲ್ಲ ಸಮೀಪದ 'ಶೀಗವಾನಿ' ಗ್ರಾಮದಲ್ಲಿದ್ದವಾದುದರಿಂದ ರವಿವಾರ ಬಂದಿತೆಂದರೆ ಇಂದಿರಾ ಹಾಗೂ ಗೆಳತಿಯರ ಗುಂಪು 'ಶೀಗವಾನಿ'ಗೇ ಓಡುತ್ತಿತ್ತು.

ಶೀಗವಾನಿ ಹಚ್ಚ ಹಸುರಿನ ಪಚ್ಚೆಪೈರಿನ ತಾಣದಲ್ಲಿ ಮಲಗಿದ ಸುಂದರ ತಂಪಿನ ಗ್ರಾಮ. ಇಂದಿರಾ ಅವರ ಮನೆತನ ಅಜ್ಜನ ತಂದೆ ಕಾಡಯ್ಯನವರ ಕಾಲದಿಂದಲೂ ಸಮೃದ್ಧಿಹೊಂದಿದುದು.

ಶೀಗವಾನಿ ನನ್ನ ಅಜ್ಜನ ತಂದೆ ಕಾಡಯ್ಯನವರು ದರಖಾಸ್ತಿನಲ್ಲಿ ಒಂದೂವರೆ ರೂಪಾಯಿಗೆ ಕೊಂಡು ಅಭಿವೃದ್ಧಿಪಡಿಸಿದರಂತೆ. ಅಲ್ಲಿ ಕೊಂಡಾಗಲೇ ಮಾವಿನ ತೋಪು, ಶೀಗೆ ಹಿಂಡ್ಲುಹುಣಸೇಮರ ಮುಂತಾದವು ಇದ್ದವಂತೆ.

ಇಂದಿರಾ ಅವರ ತಂದೆಯ ತೋಟದ ಕೊಬ್ಬರಿಪಲಸು, ಸುತ್ತಲಿನ ಮಲೆನಾಡಿನ ಹಳ್ಳಿಗಳಿಗೆ ಪ್ರಸಿದ್ಧವಾದುದು. ಮೈಸೂರಿನ ಅರಮನೆಗೂ ಹಲಸನ್ನೂ ಒಯ್ದಿದ್ದರಂತೆ

"ಮಲೆನಾಡು ಎಂದರೆ ಒಂದು ರೀತಿಯಲ್ಲಿ ಮುಗ್ಧಸರಳ ಸೌಂದರ್ಯದ ಲಜ್ಜಾವತಿ ಯುವತಿಯಂತೆ ! ಶೀಗವಾನಿ, ಎಡೇಹಳ್ಳಿ, ತೀರ್ಥಹಳ್ಳಿಯಲ್ಲಿ ನನ್ನ ಬಾಲ್ಯ ಜೀವನವನ್ನು ಕಳೆದಿದ್ದೇನೆ. ಅನುಭವಿಸಿದ್ದೇನೆ" ಎಂದು ಇಂದಿರಾ ಅವರು ತಮ್ಮ ಬಾಲ್ಯದ ಸವಿನೆನಪನ್ನು ಮತ್ತೆ ಮತ್ತೆ ಹುಮ್ಮಸ್ಸಿನಿಂದ ವಿವರಿಸುತ್ತಾರೆ.

ಅಜ್ಜನ ಸಂಧ್ಯಾವಂದನೆ ಮುಗಿಯುವುದರೊಳಗಾಗಿ ಮನೆಯ ಹುಡುಗರಿಗೂ ಸ್ನಾನ ಮಾಡಿಸಿರುತ್ತಿದ್ದರಂತೆ. ದೇವರ ತೀರ್ಥಪ್ರಸಾದದನಂತರ ಅಜ್ಜನೊಡನೆ,

---

1. ಎಂ. ಕೆ. ಇಂದಿರಾ; 'ಅನುಭವ ಕುಂಜ', ಪುಟ 10

'ಕೆಂಡರೊಟ್ಟಿ' 'ತಾಲಿಪಿಟ್ಟು' 'ಮೊಸರವಲಕ್ಕಿ' 'ಅರಳು ಹುರಿಯಿಟ್ಟು' ಹೀಗೆ ಹೊಟ್ಟೆ ತುಂಬ ತಿಂಡಿಯಾಗುತ್ತಿತ್ತು.

ಮಾವು ಹಲಸಿನ ದಿನಗಳಲ್ಲಿ ಸಾಕಷ್ಟು ಹಣ್ಣು ಹಂಪಲದ ಸುಗ್ಗಿ. ಹುಡುಗರಿಗೆ ಕವಡೆ, ಗಜ್ಜುಗ, ಚೌಕಾಬಾರ ಚನ್ನೆಮಣೆ, ಮೊದಲಾದ ಆಟಗಳನ್ನು ಹುಡುಗರೆಲ್ಲ ಆಡುತ್ತಿದ್ದರಂತೆ.

ಅಂದಿನ ಕಾಲದಲ್ಲಿ ಮಕ್ಕಳಿಗೆ ಕಾಫಿಯನ್ನು ಕೊಡುತ್ತಿರಲಿಲ್ಲ. ಮನೆಯಲ್ಲಿ ದನ ಕರುಗಳಿದ್ದುದರಿಂದ ಹಾಲು–ಹೈನುಗಳ ಸಮೃದ್ಧಿ ಕುಡಿಯಲು ಹಾಲು, ಮಜ್ಜಿಗೆ ಕಡೆಯುವಾಗ ದೊಡ್ಡಗಾತ್ರದ ಬೆಣ್ಣೆಉಂಡೆ, ಹಳದೀ ವರ್ಣನೆ ದಪ್ಪಕೆನೆ ಅದಕ್ಕೆ ಬೆಲ್ಲ ಸೇರಿಸಿ ಮಕ್ಕಳೆಲ್ಲ ತಿನ್ನುತ್ತಿದ್ದರೂ.

ಇಂದಿಗೂ ಇಂದಿರಾ ಅವರಿಗೆ ಹಾಲು ಎಂದರೆ ಪಂಚಪ್ರಾಣ. ರಾತ್ರಿ ಹಾಲು ಕುಡಿಯದಿದ್ದರೆ ಅವರಿಗೆ ನಿದ್ರೆಬರುವುದಿಲ್ಲವಂತೆ.

ತೀರ್ಥಪಳ್ಳಿಯ ಹೊಳೆಯಲ್ಲಿ ಈಜಲು ಹಿರಿಯರ ಅನುಮತಿ ಇರಲಿಲ್ಲ. ಆದರೂ ಶೀಗವಾನಿ ತಿಳಿನೀರಿನಲ್ಲಿ ಕೆರೆಯಲ್ಲಿ ತಾಯಿ ಬನಶಂಕರಮ್ಮನವರಿಗೆ ತಿಳಿಯ ದಂತೆ ಈಜಿ ಬರುತ್ತಿದ್ದರು. ಈ ದೊಡ್ಡ ಕುಟುಂಬದಲ್ಲಿ ಒಟ್ಟು ಅರವತ್ತುಜನ.

"ಬೇಸಿಗೆಯ ದಿನಗಳಲ್ಲಿ ಅಡಿಕೆ ತೋಟದ ಹಿಂಬದಿಯಲ್ಲಿ ದೊಡ್ಡ ಕೆರೆಯಲ್ಲಿ ಸೊಂಟದುದ್ದ ನೀರಿನಲ್ಲಿ ಉಟ್ಟ ಬಟ್ಟೆಯಲ್ಲಿ ಈಜು ಹೊಡೆದದ್ದುಂಟು. ಮನೆಗೆ ಬಂದ ಮೇಲೆ ಅಮ್ಮನಿಂದ ನಾಲ್ಕು ಗುದುಮುರಿಗೆ ಏಟು ತಿಂದದ್ದೂ ಉಂಟು"[1] ಎಂದು ಇಂದಿರಾ ಅವರು ಈಜಿದ ಸಾಹಸವನ್ನು ಇಂದಿಗೂ ಸಂಭ್ರಮದಿಂದ ಮೆಲುಕು ಹಾಕುತ್ತಾರೆ. ಮಕ್ಕಳಿಗೆ ಬರಿಗೈಯಿಂದ ಹೊಡೆದಾಗ ಬನಶಂಕರಮ್ಮನವರ ಕೋಮಲ ಕೈಗಳು ಹಸಿರುಗಟ್ಟುತ್ತಿದ್ದವಂತೆ ! ಆದ್ದರಿಂದ ಇವರಿಗಾಗಿ ಒಂದು ದೊಡ್ಡ ಬಡಿಗೆಯನ್ನೇ ಮಾಡಿದ್ದರಂತೆ !

ಶಾಲೆಯ ನಾಟಕದಲ್ಲಿ ಕೃಷ್ಣನ ಪಾತ್ರ ಮಾಡಿದ ಕೆಲವು ದಿನಗಳಲ್ಲಿ ಅಜ್ಜ ಲಕ್ಷ್ಮಣ ರಾಯರು (ಹೊಯ್ಸಳ) ಬಂದಾಗ ಅವರನ್ನು ಕಾಡಿಬೇಡಿ ಗೋಗರೆದು ಕೊಳಲು ನುಡಿಸಲು ಕಲಿತರು, ಆದಕ್ಕೂ ಹಿರಿಯರ ಅನುಮತಿ ಇರಲಿಲ್ಲವಾದ್ದರಿಂದ ಗುಡ್ಡ–ಬೆಟ್ಟ ಅಲೆದು ಮನೆಯ ಜನರ ಕಣ್ಣು ತಪ್ಪಿಸಿ ಕೊಳಲು ನುಡಿಸಲು ಕಲಿತರು.

"ಸೂರ್ಯನಾರಾಯಣರದು ಎಂಟುನೂರು ಮಣದ ಅಡಿಕೆ ತೋಟ. ತೆಂಗು, ಭತ್ತ, ಕಬ್ಬು ನೇರಳ, ಪೇರಲ, ಚಕ್ಕೋತ, ಮಾವು, ಬೆಮ್ಮಾರಲ, ಕಲ್ಲುಸಂಪೆ,

1. ಎಂ. ಕೆ. ಇಂದಿರಾ, 'ಕಸ್ತೂರಿ' ವಸಂತ ಸಂಚಿಕೆ; ಮೇ 1966. ಪುಟ–109.

ಖರ್ಜೂ, ರಂಜದ ಹಣ್ಣು ಹಲಸು, ಮೊದಲಾದ ಹಣ್ಣುಹಂಪಲುಗಳು ಬೆಳೆಯು ತ್ತಿದ್ದವು."[1]

"ರಸಬಾಳೆ, ಕಲ್ಯಾಣಬಾಳೆ, ಕರಿಬಾಳೆ, ಕಾಡುಬಾಳೆ, ಪುಟ್ಟಬಾಳೆ, ಯಾಲಕ್ಕಿ ಬಾಳೆ, ಚಂದ್ರಬಾಳೆ, ಪಚಬಾಳೆ, ಬೀಜಬಾಳೆ"[2]

"ಕೊಬ್ಬರಿ ಹಲಸು", ಚಂದ್ರಹಲಸು, ಅಂಬಲಿ ಹಲಸು, ಆನೆ ಹಲಸು.[3] "ಸೂಜಿಮಲ್ಲಿಗೆ ದುಂಡುಮಲ್ಲಿಗೆ ಕಸ್ತೂರಿ ಮಲ್ಲಿಗೆ, ಮಾಗಿ ಮಲ್ಲಿಗೆ, ಏಳುಸುತ್ತಿನ ಮಲ್ಲಿಗೆ, ದೇವಮಲ್ಲಿಗೆ, ಚಂಡಮಲ್ಲಿಗೆ ಕೆಂಡಸಂಪಿಗೆ, ಹಳದಿಸಂಪಿಗೆ, ನಾಗಸಂಪಿಗೆ, ಈ ಮೊದಲಾದ ವಿವಿಧ ಬಗೆಯ ಹಣ್ಣು–ಹೂವುಗಳ ಸಮೃದ್ಧಿಯಿತ್ತು.

ಮನೆಯಲ್ಲಿ ಗದ್ದೆಯಲ್ಲಿ ದುಡಿಯುವವರನ್ನು ಸೂರ್ಯನಾರಾಯಣರು ಮಕ್ಕಳಂತೆ ನೋಡಿಕೊಳ್ಳುತ್ತಿದ್ದರು. ಜಾತಿ ಮತ ಮೇಲುಕೀಳೆಂಬ ಭೇದಭಾವಗಳನ್ನು ಅಷ್ಟೊಂದಾಗಿ ತೋರುತ್ತಿರಲಿಲ್ಲ. ಬನಶಂಕರಮ್ಮನವರು ಸುಸಂಸ್ಕೃತ ಮನೆತನದವರು. ಪತಿ ಪತ್ನಿಯರಿಬ್ಬರೂ ಸ್ವಭಾವತಃ ಅಂದಶ್ರದ್ಧೆಗಳಿಗೆ ಅಂಟಿಕೊಳ್ಳುವವರಲ್ಲ. ಆದರೂ ಅವರು ಅಂದಿನ ಅಪ್ರಬುದ್ಧ ಸಮಾಜಕ್ಕೆ ತಲೆಬಾಗಿ ನಡೆಯಲೇಬೇಕಾಗಿತ್ತು. ಬನಶಂಕರಮ್ಮನವರದು, ಸರಳ ಸ್ವಭಾವ.

ಹಬ್ಬ ಹರಿದಿನಗಳನ್ನು ಸೂರ್ಯನಾರಾಯಣರು ವಿಜೃಂಭಣೆಯಿಂದ ನಡೆಸು ತ್ತಿದ್ದರು. ಮನೆಯಲ್ಲಿ ದಿನ, ದಿನ ಹೊತ್ತಿಗೊಂದು ಹಬ್ಬ, ಪೂಜೆ, ಪುರಸ್ಕಾರ ನಡೆಯುತ್ತಿದ್ದವು. ನವರಾತ್ರಿ ಹಾಗೂ ರಾಮನವಮಿ ಉತ್ಸವಗಳು ವೈಶಿಷ್ಟ್ಯಪೂರ್ಣ ವಾಗಿರುತ್ತಿದ್ದವು.

ನವರಾತ್ರಿಯಲ್ಲಿ ಮನೆಯ ದೊಡ್ಡ ಹಜಾರದ ತುಂಬಾ ಬಣ್ಣ ಬಣ್ಣದ ಬೊಂಬೆ ಗಳನ್ನು ಇಟ್ಟು ಅಲಂಕರಿಸುತ್ತಿದ್ದರು. ಇಂದಿರಾ ಹಾಗೂ ಅವರ ಗೆಳತಿಯರು ದಿನಕ್ಕೊಂದು ಬಗೆಯಲ್ಲಿ ಅಲಂಕರಿಸಿಕೊಂಡು ತಾವು ಕಲಿತ ಹಾಡುಗಳನ್ನೆಲ್ಲ ಎಲ್ಲರ ಮನೆಗೂ ಹೋಗಿ ಹಾಡಿಕೊಂಡು ಕೋಲಾಟವಾಡಿ ಬರುತ್ತಿದ್ದರು.

ರಾಮನವಮಿ ಉತ್ಸವವನ್ನಂತೂ ತುಂಬಾ ವೈಶಿಷ್ಟ್ಯಪೂರ್ಣವಾಗಿ ಆಚರಿಸ ಲಾಗುತ್ತಿತ್ತಂತೆ, ಒಂಬತ್ತು ದಿನಗಳವರೆಗೂ ಪ್ರತಿದಿನ ಹರಿಕಥೆ, ಭಜನೆ, ಪುರಾಣ, ವಸಂತಮಾಸ ತೋಟದಿಂದ ತಂದ ನೂರಾರು ಬಗೆಯ ಬಣ್ಣಬಣ್ಣದ ಹೂವುಗಳು. ಹುಡುಗಿಯರಿಗೂ ಕೈತುಂಬ ಕೆಲಸವಿರುತ್ತಿತ್ತು. ಇಂದಿರಾ ಅವರು ಬಣ್ಣ ಬಣ್ಣದ

1. ಎಂ. ಕೆ. ಇಂದಿರಾ ಅವರ ಸಂದರ್ಶನಕ್ಕೆ ಹೋದಾಗ 20–7–83 ರಂದು ತಿಳಿದು ಬಂದುದು.
2. ಅದೇ.
3. ಅದೇ.

ಹೂವುಗಳನ್ನು ಸುಂದರವಾಗಿ ಜೋಡಿಸಿ ಮಾಲೆ ಕಟ್ಟುವ ಕೆಲಸವನ್ನು ಆಯ್ದುಕೊಳ್ಳುತ್ತಿದ್ದರು.

ಬತ್ತದಕೊಯ್ಲು, ಅಡಿಕೆಕೊಯ್ಲಿನ ಸಮಯದಲ್ಲಿ ಮನೆಯಲ್ಲಿ ನಲವತ್ತು ಐವತ್ತು ಜನ ಆಳುಗಳು ಇದ್ದೇ ಇರುತ್ತಿದ್ದರು. ಅಡಿಕೆ ಕೊಯ್ಲಿನ ಸಮಯದಲ್ಲಿ ಬೇಸರ ಕಳೆಯಲು ಮೂವತ್ತು ನಲವತ್ತು ಜನರನ್ನು ಹುರಿದುಂಬಿಸಿ ಬಯಲಾಟ, ದೊಂಬರಾಟ, ಯಕ್ಷಗಾನ, ಪ್ರಸಂಗ, ಕುಸ್ತಿಯಾಟ, ಹಾವಾಡಿಗರಾಟಗಳನ್ನು ಏರ್ಪಡಿಸುತ್ತಿದ್ದರು. ಇವೆಲ್ಲ ಮುಗಿಯುವ ತನಕ ರಾತ್ರಿ ನಿದ್ದೆ ಮಾಡದೇ ಇಂದಿರಾ ಅವರು ತಂದೆಯ ತೊಡೆಯಮೇಲೆ ಕುಳಿತು ಕುಳಿತು ತನ್ಮಯರಾಗಿ ನೋಡುತ್ತಿದ್ದರು. ಬಯಲಾಟ, ಯಕ್ಷಗಾನ ಪ್ರಸಂಗ ಈ ಮೊದಲಾದವುಗಳಿಂದ ಇಂದಿರಾ ಅವರಿಗೆ ಪುರಾಣದ ಮಹಾಭಾರತದ ಕತೆಗಳಲ್ಲೆ ತಿಳಿದುಬಿಡುತ್ತಿದ್ದವು. ಬಾಲ್ಯದಿಂದಲೇ ಇಂದಿರಾ ಅವರಿಗೆ ಈ ಕಲೆಗಳಲ್ಲಿ ಅಭಿರುಚಿ ಮತ್ತು ಆಸಕ್ತಿಯನ್ನು ಬೆಳೆಸಿಕೊಂಡರು.

ಆರೇಳು ವರ್ಷದವರಿದ್ದಾಗ ಒಂದು ಸಾರಿ ಅಜ್ಜನ ಮನೆಗೆ ಬಂದಾಗ ಮೊದಲನೆಯ ಸಲ ರಾಷ್ಟ್ರಕವಿ "ಶ್ರೀಕುವೆಂಪು" ಅವರನ್ನು ಕಂಡದ್ದನ್ನು ಇಂದಿಗೂ ನೆನಪಿಸಿಕೊಳ್ಳುತ್ತಾರೆ.

"ನಮ್ಮ ಅಜ್ಜನ ಮನೆಯ ಮುಂದಿನ ರಸ್ತೆಯಲ್ಲೇ ಅವರು ಬಸ್ಸಿಳಿದು ಕುರುವಳ್ಳಿಗೆ ನಡೆದುಹೋಗುತ್ತಿದ್ದರು. ಆಗ ಅವರ ವಯಸ್ಸು ಸುಮಾರು ಇಪ್ಪತ್ತು ಇದ್ದಿತೇನೋ ನನಗೆ ಸರಿಯಾಗಿ ತಿಳಿಯದು. ಎತ್ತರದ ಸೇರನಿಲುವು, ನಡುವೆ ಬೈತಲೆ ತೆಗೆದು ಸುರುಳಿಗೂದಲಿನ ಕ್ರಾಪು, ಪೈಜಾಮ, ಜುಬ್ಬ ಮೇಲೊಂದು ವೇಸ್‌ಕೋಟು ಕೈಯಲ್ಲಿ ಒಂದು ಇಂಗ್ಲೀಷ್ ಕೈಪಿಡಿ, ಧೀರಸೇರ ನಡಿಗೆ. ಮಾತು ತೀರಾ ಕಡಿಮೆ ಅವರು ಕುಪ್ಪಳ್ಳಿಗೆ ಹೋಗುವಾಗ ನಾಲ್ಕಾರು ಬಾರಿ ನೋಡಿದ್ದೆ. ಆಗ ಅವರನ್ನು ಎಲ್ಲರೂ "ಪುಟ್ಟಪ್ಪ ಎಂದೇ ಕರೆಯುತ್ತಿದ್ದರು."[1]

ತೀರ್ಥಹಳ್ಳಿಯಲ್ಲಿ ಪುಷ್ಯ ಬಹುಳ ಎಳ್ಳಮಾವಾಸ್ಯೆಯಂದು ನಡೆಯುವ ಜಾತ್ರೆ ಬಹಳ ದೊಡ್ಡದು. ಜಾತ್ರೆಯ ನಿಮಿತ್ತ ನಾಟಕ, ಯಕ್ಷಗಾನ, ಬಯಲಾಟ ಮೊದಲಾದ ಅನೇಕ ಸಾಂಸ್ಕೃತಿಕ ಮನರಂಜನೆಯ ಕಾರ್ಯಕ್ರಮಗಳು ನಡೆಯುತ್ತಿದ್ದವು. ಜಾತ್ರೆಯ ನೆಪದಲ್ಲಿ ಅಕ್ಕಪಕ್ಕದ ಊರಿನ ಬಂಧುಗಳೆಲ್ಲ ಒಂದೆಡೆ ಸೇರುವುದು ಸಾಮಾನ್ಯ.

ಇಂದಿರಾ ಅವರಿಗೆ ಐದು ವರ್ಷವಿದ್ದಾಗಲೇ ವರದಾಚಾರ್ಯರ ನಾಟಕ ಕಂಪನಿ ಜಾತ್ರೆಯ ನಿಮಿತ್ತ ತೀರ್ಥಹಳ್ಳಿಯಲ್ಲಿ ಬೀಡುಬಿಟ್ಟಿತು.

"ಶ್ರೀಕೃಷ್ಣಲೀಲಾ', 'ಭಕ್ತಪ್ರಹ್ಲಾದ', 'ಮನ್ಮಥ ವಿಜಯ', 'ನಿರುಪಮಾ', 'ರಾಮವರ್ಮ ಲೀಲಾವತಿ', 'ಭಕ್ತ ಧ್ರುವ', 'ಸದಾರಮೆ', 'ಶಕುಂತಲಾ',

1. ಇಂದಿರಾ ಅವರಿಂದ ತಿಳಿದುಬಂದುದು.

'ಸಂಪೂರ್ಣ ರಾಮಾಯಣ,' 'ಪಾದುಕಾ ಪಟ್ಟಾಭಿಷೇಕ', 'ಸತ್ಯ ಹರಿಶ್ಚಂದ್ರ'[1] ಇತ್ಯಾದಿ ನಾಟಕಗಳು ನಡೆಯುತ್ತಿದ್ದವು.

ಇಂದಿರಾ ಎಲ್ಲ ನಾಟಕಗಳನ್ನೂ ತಪ್ಪದೇ ನೋಡಿದರು. ಪೌರಾಣಿಕ ನಾಟಕ, ಯಕ್ಷಗಾನ ಪ್ರಸಂಗ, ಭಾಗವತರಾಟ, ಇವೆಲ್ಲ ಇಂದಿರಾ ಅವರ ವಿಕಸಿತವಾಗುತ್ತಿರುವ ಮನಸ್ಸಿನ ಒಂದೊಂದು ರೀತಿಯಲ್ಲಿ ಪ್ರಭಾವ ಬೀರಿ ಅವರನ್ನು ವಿಚಾರವಾದಿಯನ್ನಾಗಿ ಮಾಡಿದವೆಂದು ಹೇಳಬೇಕಾಗುತ್ತದೆ.

ಇಂದಿರಾ ಅವರು ಹುಟ್ಟಿದ ಕೆಲವು ತಿಂಗಳಲ್ಲಿ ಇಬ್ಬರೂ ಅಜ್ಜಿಯರು ತೀರಿ ಹೋಗಿದ್ದರು. ಆದರೆ ಬೇರೆ ಬೇರೆ ಅಜ್ಜಿಯರು ಮನೆಯಲ್ಲಿ ಇದ್ದೇ ಇರುತ್ತಿದ್ದರು. ಮನೆಯ ಚಿಕ್ಕ ಮಕ್ಕಳಿಗೆಲ್ಲ ಕತೆ ಹೇಳುತ್ತಿದ್ದವರೆಂದರೆ ಅಜ್ಜ ಮಾಳೂರು ಕೃಷ್ಣಪ್ಪ ನವರು, ಅಜ್ಜನಿಂದ ಪಂಚತಂತ್ರ, ಏಳುಮಲ್ಲಿಗೆ ತೂಕದ ರಾಜಕುಮಾರಿ ಕತೆ. ಪೌರಾಣಿಕ-ಧಾರ್ಮಿಕ ಕತೆ ಅಲ್ಲದೆ ಬೇರೆ ಚಮತ್ಕಾರದ ಕತೆಗಳನ್ನೂ ಬಾಲಕಿ ಇಂದಿರಾ ಅವರು ತಪ್ಪದೇ ಕೇಳುತ್ತಿದ್ದರು. ಕಾಗಕ್ಕ–ಗುಬ್ಬಕ್ಕನ ಕತೆಯಿಂದ ಹಿಡಿದು ಭಾಗವತ, ವೇದಪುರಾಣ, ರಾಮಾಯಣ, ಮಹಾಭಾರತ ಕತೆಗಳೆಲ್ಲ ಬೇರೆ ಬೇರೆ ಅಜ್ಜಿಯರಿಂದ ತಿಳಿಯಲ್ಪಟ್ಟವು. ಈಗ ಚಂದಮಾಮದಲ್ಲಿ ಬರುವ ಕತೆಗಳನ್ನೆಲ್ಲ ಅವರಾಗಲೇ ಹತ್ತನೆಯ ವರ್ಷದೊಳಗೆ ಕೇಳಿ ತಿಳಿದಿದ್ದರು.

ಅಲ್ಲದೆ 'ಫಣಿಯಮ್ಮ' ಕಾದಂಬರಿಯ ಅಜ್ಜಿ 'ಫಣಿಯಮ್ಮ' ಕತೆಯ ಭಂಡಾರವೇ ಆಗಿದ್ದಳಂತೆ. ಅಲ್ಲಾಉದ್ದೀನನ ಕತೆ, ಬೇತಾಳ ಪಂಚವಿಶಂತಿ ಕತೆ, ಭೂತಪ್ರೇತದ ಕತೆ ಪುರಾಣ ಪುಣ್ಯಕತೆಗಳನ್ನು ಆ ಅಜ್ಜಿ ಇವರಿಗೆಲ್ಲ ಹೇಳುತ್ತಿದ್ದಳು.

ಈ ರೀತಿ ಕತೆಗಳನ್ನು ಕೇಳುತ್ತ, ಓದುತ್ತ, ಬೆಳೆದ ಇಂದಿರಾ ಅವರು, ಕಾದಂಬರಿ ಗಾರ್ತಿಯಾದುದು ಸಹಜವೇ ಆಗಿದೆ. ಅಲ್ಲದೆ, ಯಕ್ಷಗಾನ, ಬಯಲಾಟ, ಪ್ರಸಂಗ, ಇವು ಕೂಡ ಇಂದಿರಾ ಅವರಿಗೆ ಒಂದು ರೀತಿಯಲ್ಲಿ ಶಿಕ್ಷಣವನ್ನು ಒದಗಿಸಿದವು.

ಇಂದಿರಾ ಅವರು ಶಾಲೆಯಲ್ಲಿ ಪಡೆದ ಶಿಕ್ಷಣ ಮಾಧ್ಯಮಿಕ ಎರಡನೆಯ ತರಗತಿ ಯವರೆಗೆ ಆದರೆ ಅವರು ಪರಿಸರದಿಂದ, ಜೀವನದಿಂದ ಪಡೆದ ಶಿಕ್ಷಣ ಎಲ್ಲದಕ್ಕಿಂತ ಮಿಗಿಲಾದುದು.

ಇಂದಿರಾ ಹಾಗೂ ಅವರ ಅಕ್ಕ ಶಾರದಮ್ಮ ದಿನವೂ ಮನೆಯವರಿಗೆಲ್ಲ ಒಂದು ಗಂಟೆ ಕಾದಂಬರಿಗಳನ್ನು, ಹೆಳವನಕಟ್ಟೆ ಗಿರಿಯಮ್ಮನಂತಹ ಸಾಧ್ವಿಯರ ಜೀವನ ಚರಿತ್ರೆಗಳನ್ನೂ ಓದಿ ಹೇಳಬೇಕಾಗುತ್ತಿತ್ತು. 'ತಾಯಿನಾಡು' ಎಂಬ ಗ್ರಂಥ ಬಾಲ್ಯ ದಲ್ಲಿ ಇಂದಿರಾ ಅವರಿಗೆ ಬಹಳ ಮೆಚ್ಚಿಗೆಯಾದ ಕೃತಿ.

---

1. ಇಂದಿರಾ ಅವರಿಂದ ತಿಳಿದುಬಂದುದು.

ಅವರು ಓದಿದ ಮೊಟ್ಟಮೊದಲ ಕಾದಂಬರಿ ಬಿ. ವೆಂಕಟಾಚಾರ್ಯರ 'ಅಡವಿ ಹುಡುಗಿ'. ಚಿಕ್ಕವರಿದ್ದಾಗಲೇ ತೀರ್ಥಹಳ್ಳಿಯ ಗ್ರಂಥಾಲಯದಿಂದ ರಾಮಾಯಣ, ಮಹಾಭಾರತದಿಂದ ಹಿಡಿದು ಹೊಸದಾಗಿ ಬಂದ ಬಿ. ವೆಂಕಟಾಚಾರ್ಯ, ಹಾಗೂ ಗಳಗನಾಥರ ಕಾದಂಬರಿಗಳನ್ನು ಓದತೊಡಗಿದರು.

'ಕಪಾಲ ಕುಂಡಲಿ', 'ಕೋಹಿನೂರು', 'ವಿಷವೃಕ್ಷ' 'ಬಾಣಂತಿ ಹಸ್ತ' (ಪತ್ತೇದಾರಿ. ಲೇಖಕರ ಹೆಸರು ಗೊತ್ತಿಲ್ಲ) 'ಕಾಣದ ಕೈ' ಮೊದಲಾದವುಗಳನ್ನು ಓದಿದ್ದರು. 'ಪ್ರೇಮಾಂಕುರ' ಎಂಬ ಕಾದಂಬರಿ ಇಂದಿರಾ ಅವರಿಗೆ ಬಹಳ ಹಿಡಿಸಿತ್ತು. ಹೆಸರು 'ಪ್ರೇಮಾಂಕುರ'ವೆಂದಾದರೂ ಅದು ಕೇವಲ ಪ್ರೇಮ ಕತೆಯಲ್ಲ. 'ಸ್ವದೇಶ ಪ್ರೇಮವನ್ನು ಬೆಳೆಸುವ ಉತ್ತಮ ಕತೆ' ಎಂದು ಇಂದಿರಾ ಅಭಿಪ್ರಾಯ ಪಟ್ಟಿದ್ದಾರೆ.

ತಾನೂ ಹೀಗೆ ಬರೆಯಬೇಕೆಂಬ ಒಂದು ಬಯಕೆ ಇಂದಿರಾ ಅವರ ಮನದಲ್ಲಿ ಮೊಳಕೆ ಒಡೆದಿತ್ತು.

ಅಂದಿನ ಪ್ರಮುಖ ಪತ್ರಿಕೆಗಳಿಂದ 'ಮಕ್ಕಳ ಪುಸ್ತಕ', 'ನಗುವ ನಂದ', 'ನಗೆಗಡಲು', 'ಕತೆಗಾರ', 'ಕಥಾಂಜಲಿ', 'ಪ್ರಬುದ್ಧ ಕರ್ಣಾಟಕ', 'ವೃತ್ತಾಂತ ಪತ್ರಿಕೆ', 'ನವಜೀವನ', 'ತಾಯಿನಾಡು' ಈ ಮೊದಲಾದವುಗಳನ್ನು ದಿನವೂ ತಪ್ಪದೇ ಓದುತ್ತಿದ್ದರು.

ಇಂದಿರಾ ಅವರು ಎಂಟುವರ್ಷಕ್ಕೆ ಹುಬ್ಬಳ್ಳಿಯಲ್ಲಿ 'ವಜ್ರದ ಕಳ್ಳ' ಎಂಬ ಇಂಗ್ಲೀಷಿನ ಮೂಕಿ ಚಿತ್ರವನ್ನು ನೋಡಿದ್ದರು. ಆಗಿನ್ನೂ ಮೂಕಿ–ಟಾಕಿ ಚಿತ್ರಗಳು ಕಾಲಿರಿಸಿದ್ದವು. ಬೆಂಗಳೂರು–ಮೈಸೂರುಗಳಿಗಷ್ಟೇ ಸಿನಿಮಾ ಥೇಟರುಗಳು ಇದ್ದವಂತೆ. ನಾಟಕಗಳ ಪ್ರಭಾವವಂತೂ ಆಗಿನ ಕಾಲಕ್ಕೆ ಬಹಳ. ಇಂದಿರಾ ಅವರು ಹನ್ನೆರಡು ವರ್ಷದವರಾಗುವ ವೇಳೆಗೆ ಸಾಕಷ್ಟು ನಾಟಕ, ಸಿನಿಮಾಗಳನ್ನು ನೋಡಿದ್ದರು.

ಅವರು ನೋಡಿದ ಸಿನಿಮಾಗಳ ಸಂಖ್ಯೆ ಈಗ ಮೂರುಸಾವಿರಕ್ಕೆ ಏರಿದೆಯೆಂದರೆ ಅದು ಒಂದು ಆಶ್ಚರ್ಯವೆನಿಸುತ್ತದೆ. ನಾಟಕ ಕಂಪನಿ ಬಂದ ಮೇಲೆ ಇಂದಿರಾ ಹಾಗೂ ಮನೆಯ ಹುಡುಗರ ಧಾಂದಲೆ ಹೇಳತೀರದಂತೆ. ಅವರ ಮಾತಿನಲ್ಲಿಯೇ ಅದನ್ನು ತಿಳಿದರೆ ಅದಕ್ಕೆ ಇನ್ನೂ ಹೆಚ್ಚಿನ ಸೊಗಸು.

"ಮನೆಯ ಹಿಂಬದಿಯಲ್ಲಿನ ದೊಡ್ಡ ಅಟ್ಟವೆಲ್ಲ ನಾಟಕ ಶಾಲೆಯಾಯಿತು. ಹಾಸಿಗೆ, ದಿಂಬು, ಚಾದರಗಳೆಲ್ಲ ಸೀನರಿ ಪರದೆಗಳಾದವು. ಪೆಟ್ಟಿಗೆಯೊಳಗಿನ ಪಟ್ಟೆ ಪೀತಾಂಬರಗಳೆಲ್ಲ ಹೊರಬಂದವು. ಮುಂಬೂದಿ, ರೆಡ್ಡಿಂಕು, ಮುಖಕ್ಕೆ ಬಳಿದು ಕೊಂಡು ಕುಣಿದೆವು. ಕೇರಿಯ ನೂರಾರು ಮಕ್ಕಳು ಪ್ರೇಕ್ಷಕರಾಗಿ ನೆರೆದರು. ಖಾಲಿಯ ಡಬ್ಬಿಯನ್ನು ಕಟ್ಟಿಗೆಯಿಂದ ಬಡಿದು ಹಾವಳಿ ಎಬ್ಬಿಸಿದ ನನ್ನ ತಮ್ಮ. ಈ ದೊಂಬಿಯನ್ನು ತಡೆಯಲಾರದೆ ಅಮ್ಮ ಬಂದು ಅದೇ ಕಟ್ಟಿಗೆಯಿಂದ ನಾಲ್ಕು

ಬಡಿದರು. ಆದರ ಲಕ್ಷ್ಯವಿಲ್ಲದೆ ಅವನು ಹನುಮಂತನಾಗಿ ಹಾರಾಡಿದ. ಹಿರಣ್ಯ ಕಶಿಪುವಾಗಿ ಅಬ್ಬರಿಸಿದ. ನಾಟಕದ ಹಾಡುಗಳೆಲ್ಲ ಬಾಯಿಪಾಠವಾಗಿದ್ದವು. ಹಾರ್ಮೋನಿಯಂ ವಿನಾಟಿ ಹಿರಿಯರ ಲಕ್ಷ್ಯವಿಲ್ಲದೆ ಕಿರಿಚಾಡಿದೆವು."[1]

ಇದಿಷ್ಟು ನಾಟಕದ ಗದ್ದಲವಾದರೆ ಸರ್ಕಸ್ ನೋಡಿದ ಮೇಲಂತೂ ಮನೆಯಲ್ಲಿ ಹುಡುಗರ ಹಾವಳಿಯನ್ನು ತಡೆಯುವುದರಲ್ಲಿ ಮನೆಯ ಜನರೆಲ್ಲ ಸುಸ್ತಾದರಂತೆ. ಇಂದಿರಾ 'ತಾರಾಬಾಯಿ'ಯಾದರೆ ಅವರ ತಮ್ಮ 'ಭಫೂನ್' ಆಗುತ್ತಿದ್ದನಂತೆ.

"ಮನೆಯಲ್ಲಿ ಮಂಚ, ಸ್ಟೂಲು, ಕುರ್ಚಿಗಳೆಲ್ಲವೂ ಹದಿನಾರು ಕಂಬದ ದೊಡ್ಡ ಚೌಕಿಯಲ್ಲಿ ನೆರೆದವು. ಮನೆಯ ಸಂದಿ ಗೊಂದಿಯ ಹಗ್ಗ ಸರಪಳಿಗಳೆಲ್ಲ ತೊಲೆಯ ಮೇಲೆ ನೇತಾಡಿದವು. ನಾವೂ ಸಾಧ್ಯವಾದಷ್ಟು ನೆಗೆದು, ಎದ್ದು, ಬಿದ್ದು ಕೈಕಾಲು ಮುರಿದುಕೊಂಡ ನಂತರ ನಮ್ಮ ಸರ್ಕಸ್ ಕಂಪನಿ ಮುಕ್ತಾಯವಾಯಿತು." ಎಂದು ಇಂದಿರಾ ಅವರ ಹಾಸ್ಯಮಯವಾಗಿ ತಮ್ಮ ಬಾಲ್ಯದ ಗಲಾಟೆಯನ್ನು ವಿವರಿಸಿದ್ದಾರೆ.

'ಸರ್ಕಸ್' ಧಾಂದಲೆ ಮುಗಿದ ಕೆಲವೇ ದಿನಗಳಲ್ಲಿ ಮೂಕಚಿತ್ರಗಳ ಚಲನವಲನವನ್ನು ರಾತ್ರಿ ಎಲ್ಲರೂ ಮಲಗುವ ವೇಳೆಗೆ ಪ್ರಾರಂಭಿಸುತ್ತಿದ್ದರಂತೆ. ಶಾಂತರೀತಿಯಿಂದ ನಡೆಯುತ್ತಿದ್ದರಿಂದ ಮನೆಯ ಹಿರಿಯರೆಲ್ಲ ಕೆಲಸಮುಗಿಸಿ ನಿಶ್ಚಿಂತರಾಗಿ ಶಾಂತತೆಯಿಂದ ಕುಳಿತು ನೋಡಿ ಆನಂದ ಪಡುತ್ತಿದ್ದರಂತೆ

ಹೀಗೆ ಅವರ ಬಾಲ್ಯ ಜೀವನ ವಿವಿಧ ರೀತಿಯಲ್ಲಿ ವಿಕಸಿತವಾಯಿತು. ಇದೇ ವೇಳೆಗೆ ಮನೆಯ ಜನರ ಜೊತೆ ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ, ಅಲ್ಲದೆ ಮಲೆನಾಡಿನ ಸುತ್ತಲಿನ ಹಳ್ಳಿಪಳ್ಳಿಗಳನ್ನು ಸುತ್ತಿ ನಿಸರ್ಗ ಸೌಂದರ್ಯವನ್ನು ಸವಿದು ಬಂದರು. ನಿಸರ್ಗಪ್ರಿಯತೆ, ಭಾವುಕತೆಗೆ ಇಂಬು ಕೊಡುತ್ತಿತ್ತು. ಮಾಧ್ಯಮಿಕ ಎರಡನೇ ತರಗತಿಯಲ್ಲಿ ಇಂದಿರಾ ಅವರು ಮೊದಲಿಗರಾಗಿ ಪಾಸಾದರು. ಹನ್ನೆರಡು ವರ್ಷಗಳೂ ತುಂಬಿದವು. ಹಿರಿಯರು ಶಾಲೆಯನ್ನು ಬಿಡಿಸಿದರು. ಆದರೆ ಇಂದಿರಾ ಅವರು ಓದುವುದನ್ನು ಬಿಡಲಿಲ್ಲ. ಕೆ. ವಿ. ರಾವ್ ಅವರ 'ಬಾಳ್ವೆ' ಕಾದಂಬರಿ ಇಂದಿರಾ ಅವರ ಮನಸ್ಸಿನ ಮೇಲೆ ಬಹಳ ಪ್ರಭಾವ ಬೀರಿತ್ತು. "ಬಾಲ್ಯದಲ್ಲಿ ಓದಿದ ಕೆಲವು ಕಾದಂಬರಿಗಳು ಮತ್ತು ಸಣ್ಣಕತೆಗಳು ಉದಾ: ಶ್ರೀ ಆನಂದರ 'ನಾನು ಕೊಂದ ಹುಡುಗಿ' 'ಬಡತನದಲ್ಲಿ ಭಾಗ್ಯ' ಇಂತಹ ಕತೆಗಳು ಮನಸ್ಸಿನ ಮೇಲೆ ಪರಿಣಾಮ ಬೀರಿ, ಸುಂದರ ಕಲ್ಪನೆಗಳ ಲೋಕಕ್ಕೆ ಚೈತನ್ಯನವನ್ನು ಒಯ್ದು, ಅಪೂರ್ವ ಸುಖ

---

1. ಎಂ. ಕೆ. ಇಂದಿರಾ; 'ಕಸ್ತೂರಿ' ವಸಂತ ಸಂಚಿಕೆ, ಮೇ 1966, ಪುಟ-110.

ತೃಪ್ತಿ ನೀಡುತ್ತಿದ್ದವು."[1] ಇಂದಿರಾ ಅವರ ಕತೆ ಕಾದಂಬರಿಗಳ ಓದು ಅವ್ಯಾಹತವಾಗಿ ಸಾಗಿಯೇ ಇತ್ತು.

"ಕಷ್ಟವೆಂಬುದೊಂದು ಪ್ರಪಂಚದಲ್ಲಿದೆಯೆಂಬ ಅರಿವೆ ನಮಗಿರಲಿಲ್ಲ. ವಸಂತ ಋತುಗಳಲ್ಲಂತೂ ಹೂವು ಮುಗ್ಗು ಇದು ಹಣ್ಣು ಕಬ್ಬಿನ ಹಾಲು ಸವಿದು ಹಣ್ಣು-ಹಂಪಲ ತಿಂದು ಸೊಕ್ಕಿ ಕುಪ್ಪಳಿಸಿದ ದಿನಗಳವು"[2] ಎಂದು ಇಂದಿರಾ ಬಾಲ್ಯದ ಸುಖವನ್ನು ನೆನೆಯುತ್ತಾರೆ. ಬಾಲ್ಯಜೀವನದ ಆನಂದದಲ್ಲಿರುವಾಗಲೇ ಮನೆಯ ಹಿರಿಯರು ಶಾಲೆ ಬಿಡಿಸಿ ಇಂದಿರಾ ಅವರ ಮದುವೆಯನ್ನು ನಿಶ್ಚಯಿಸಿದರು. ಮೂರು ಜನ ಹೆಣ್ಣು ಮಕ್ಕಳಿಗೆ ಮದುವೆ ನಿಶ್ಚಯವಾಗಿತ್ತು. ಇಂದಿರಾ ಒಬ್ಬರೇ ತಮಗೀಗಲೇ ಮದುವೆ ಬೇಡವೆಂದು ಅತ್ತೂ ಕರೆದೂ ರಾದ್ಧಾಂತ ಮಾಡಿದರೂ ಹಿರಿಯರು ಕೇಳಬೇಕಲ್ಲ !

ಇಂದಿರಾ ಅವರಿಗೆ ಹತ್ತನೆಯ ವರ್ಷಕ್ಕೆ ಬನಶಂಕರಮ್ಮನವರು ಕಿರಿಗೆ ಉಡಿಸಲು ಪ್ರಾರಂಭಿಸಿದ್ದರು. ಮುಂದೆ ಕೆಲವೇ ದಿನಗಳಲ್ಲಿ ಅಂದರೆ ಮದುವೆಗೆ ಮೊದಲೇ ಹದಿನೆಂಟು ಮೊಳದ ದೊಡ್ಡ ಸೀರೆಯನ್ನು ಇಂದಿರಾ ಉಡುತ್ತಿದ್ದರು. ಇಂದಿರಾ ಅವರಿಗೆ ಮನೆಯೇ ಶಾಲೆಯಾಯಿತು. ಹಿರಿಯರಿಂದ ಗೃಹಿಣಿಯಾಗುವವಳು ಕಲಿಯಬೇಕಾದ ಶಿಕ್ಷಣ ಪ್ರಾರಂಭವಾಯಿತು.

ಹಾಡು-ಹಸೆ, ಸಂಗೀತ, ಹಾರ್ಮೋನಿಯಂ, ಹೊಲಿಗೆ-ಕಸೂತಿ ಮನೆಗೆಲಸವನ್ನು ಇಂದಿರಾ ಅವರು ಕಲಿತರು.

'ಗೃಹಿಣಿ ಇಂದಿರಾ'

ಇಂದಿರಾ ಅವರಿಗೆ ಹನ್ನೆರಡು ವರ್ಷಗಳಾಗುತ್ತಿದ್ದಂತೆಯೇ ಮುಂಡಗದ್ದೆಯ ಕೃಷ್ಣರಾಯರೊಡನೆ ಕ್ರಿ. ಶ. ೧೯೨೯ರಲ್ಲಿ ವಿವಾಹವಾಯಿತು. ಕೃಷ್ಣರಾಯರು ಬನಶಂಕರಮ್ಮನವರ ಚಿಕ್ಕಪ್ಪನ ಮಗ ಅಂದರೆ ಇಂದಿರಾ ಅವರಿಗೆ ಸೋದರ ಮಾವ. ಕೃಷ್ಣರಾಯರಿಗೆ ಆಗ ಹತ್ತೊಂಬತ್ತು ವರ್ಷ. ಅವರ ಶಿಕ್ಷಣ ಎಲ್. ಎಸ್.ವರೆಗೆ ಆಗಿತ್ತು.

ಕೃಷ್ಣರಾಯರ ತಂದೆ ಮುಂಡಗದ್ದೆ ಸುಬ್ಬರಾಯರು. ಅವರ ವೃತ್ತಿ ಶ್ಯಾನುಬೋಗಿಕೆ, ಕೃಷ್ಣರಾಯರು ಚಿಕ್ಕವರಿದ್ದಾಗಲೇ ತಂದೆ ತೀರಿಹೋಗಿದ್ದುದರಿಂದ ಅವರ ಚಿಕ್ಕಪ್ಪನವರಾದ ಮಂಜಪ್ಪನವರೇ ಏಳು ಜನರನ್ನೂ ಸಾಕಿ ಸಲಹಿದರು.

---

1. 'ಸಂಯುಕ್ತ ಕರ್ನಾಟಕ' ಸಾಪ್ತಾಹಿಕ ಮಂಜರಿ 1-7-73 ರಂದು 'ಸಾಹಿತಿಯ ಸ್ವಯಂ ಸಂದರ್ಶನ'ದಲ್ಲಿ ಈ ರೀತಿ ಬರೆದಿದ್ದಾರೆ.
2. ಎಂ. ಕೆ. ಇಂದಿರಾ, 'ಕಸ್ತೂರಿ' ವಸಂತ, ಮೇ 1966-ಪುಟ 110.

ಇಂದಿರಾ ಅವರ ಮದುವೆ ಅಂದಿನ ಸಂಪ್ರದಾಯಕ್ಕೆ ತಕ್ಕಂತೆ ಎಂಟುದಿನಗಳ ವರೆಗೆ ನಡೆಯಿತು. ಈಗಿನ ಕಾಲದಂತೆ ಅಂದು ವರದಕ್ಷಿಣೆಯ ಅವಾಂತರ ಅಷ್ಟಾಗಿ ಇರಲಿಲ್ಲ. ಅಂತೂ ಏನಿದ್ದರೂ ಶಾಸ್ತ್ರೋಕ್ತವಾಗಿ ನಡೆಯಬೇಕಿತ್ತು.

ಮೊದಲದಿನ ಹಂದರ, ಎರಡನೆಯ ದಿನ ದೇವತಾರಾಧನೆ, ಹೂವೀಳ್ಯ, ಮೂರನೆಯ ದಿನ ನಾಂದಿ, ನಾಲ್ಕನೆಯ ದಿನ ಧಾರೆ. ಐದನೆಯ ದಿನ ನಾಗೋಲಿ, ಆರನೆಯ ದಿನ ಉರುಟಣೆ ಉಯ್ಯಾಲೆ, ಏಳನೆಯ ದಿನ ಚಂಡಾಟ, ಓಕಳಿಸ್ನಾನ, ಎಂಟನೆಯ ದಿನ ಬೀಗರ ಜಾತಗಾ "ಹೀಗೆ ಎಂಟು ದಿನಗಳವರೆಗೆ ಇಂದಿರಾ ಅವರ ಮದುವೆ ಶಾಸ್ತ್ರೋಕ್ತವಾಗಿ ವಿಜೃಂಭಣೆಯಿಂದ ನಡೆಯಿತು.

ಇಂದಿರಾ ಅವರ ಅತ್ತೆಯ ಹೆಸರು ಹಿರಿಯಕ್ಕ. ಇಂದಿರಾ ಅವರ ಕೊನೆಯ ಮೈದುನ ಒಂಭತ್ತು ತಿಂಗಳ ಮಗುವಾಗಿದ್ದಾಗಲೇ ಅತಿಸಾರ ಭೇದಿಯಿಂದ ತೀರಿ ಹೋಗಿದ್ದರಂತೆ ಹಿರಿಯಕ್ಕ' ಅವರಿಗೆ ನಾಲ್ಕು ಜನ ಗಂಡುಮಕ್ಕಳು, ಇಬ್ಬರು ಹೆಣ್ಣು ಮಕ್ಕಳು. ಅವರಲ್ಲಿ ಮೂರನೆಯವರೇ ಕೃಷ್ಣರಾಯರು.

ಇಂದಿರಾ ಅವರ ಚಿಕ್ಕಮಾವನವರ ಹೆಸರು ಮಂಜಪ್ಪ. ಅವರದು ದೊಡ್ಡ ಸಂಸಾರ. ಅವರು ಮೋಟಾರನ್ನಿಟ್ಟಿದ್ದರಿಂದ ಅವರಿಗೆ 'ಮೋಟಾರ ಮಂಜಪ್ಪ' ಎಂದೇ ಕರೆಯುತ್ತಿದ್ದರಂತೆ. ೧೯೧೯ರಲ್ಲಿ ತೀರ್ಥಹಳ್ಳಿಗೆ ಮೊಟ್ಟಮೊದಲ ಮೋಟಾರು ತಂದವರು ಅವರೇ.

ಕೃಷ್ಣರಾಯರು ಹಾಗೂ ಉಳಿದವರೆಲ್ಲ ದೊಡ್ಡವರಾದ ಮೇಲೆ ಬೇರೆ ಬೇರೆ ಯಾದರು.

ಇಂದಿರಾ ಅವರ ಮದುವೆ ಹನ್ನೆರಡನೆಯ ವಯಸ್ಸಿಗೇ ಆಗಿದ್ದಿತಾದ್ದರಿಂದ ಮುಂದೆ ಐದು ವರ್ಷಗಳವರೆಗೆ ಅವರು ತವರುಮನೆಯಲ್ಲಿಯೇ ಉಳಿದರು. ಮನೆಯಲ್ಲಿ ಹೊಸದಾಗಿ ಮದುವೆಯಾದವಳು ಮಾಡಲೇಬೇಕಾದ ಶ್ರಾವಣಮಾಸದ ವ್ರತಗಳು, ಮಂಗಳಗೌರಿ, ಇತ್ಯಾದಿ ವ್ರತಗಳನ್ನೆಲ್ಲ ಮುಗಿಸಿದರು. ಹದಿನೈದನೆಯ ವರ್ಷಕ್ಕೆ ಇಂದಿರ ಪುಷ್ಪವತಿಯಾದರು. ಮುಂದೆ ಒಂದು ವರ್ಷಕ್ಕೆ ನಿಷೇಕವಾಗಿ ಪತಿಯ ಮನೆ ಮಗಳನ್ನು ತುಂಬಿದರು.

ಸುಬ್ಬರಾಯರಿಗೆ ಮನೆ ಗದ್ದೆ, ತೋಟ ಎಲ್ಲ ಮಂಡಗದ್ದೆಯಲ್ಲಿತ್ತಾದರೂ ಹಿರಿಯರ ಆಸ್ತಿ ಇವರ ಸಂಸಾರ ಜೀವನ ಪ್ರಾರಂಭವಾಯಿತು. ಮಂಜಪ್ಪನವರ ಮನೆಯಲ್ಲಿ ಬಹಳ ಬಿಗುವಿನ ವಾತಾವರಣ.

"ಸಾಂಪ್ರದಾಯಿಕ, ಶ್ರೀಮಂತ ಮನೆತನದಲ್ಲಿ ಸುಸಂಸ್ಕೃತ ವಾತಾವರಣದಲ್ಲಿ ಧಾರ್ಮಿಕ ವಲಯದ ಕಟ್ಟುನಿಟ್ಟಿನ ವಾತಾವರಣದಲ್ಲಿ ಕೆಲವು ಮೂಢನಂಬಿಕೆಗಳ ಗೊಂದಲದಲ್ಲಿ ಬೆಳೆದುದರಿಂದ ಹಿರಿಯರ ಮಾತು ಮೀರುವಂತಿರಲಿಲ್ಲ. ಹೆದರಿಕೆ ಸದಾ,

ಮಡಿ, ಹುಡಿ, ಪೂಜೆ, ಪುನಸ್ಕಾರ ದಾನ ಧರ್ಮಗಳಲ್ಲಿ ಬಹಳ ಶ್ರದ್ಧೆ, ಅತ್ತೆ ಮನೆಯಲ್ಲಿ ಮರ್ಯಾದೆಯಾಗಿ ಬಾಳಬೇಕು ಎಂಬುದನ್ನು ಹಿರಿಯರು ನಾನಾ ರೂಪದಲ್ಲಿ ತಲೆಗೆ ತುಂಬಿದುದರಿಂದ ಸದಾ ಅದೇ ಗುಂಗು."

ಶಿವಮೊಗ್ಗೆಯಲ್ಲಿ ಇಂದಿರಾ ಅವರ ಸಂಸಾರ ಜೀವನ ಪ್ರಾರಂಭವಾಯಿತು. ಕೃಷ್ಣರಾಯರದು ಊರಿಂದೂರಿಗೆ ಓಡಾಡುವ ಕೆಲಸ ಇಂದಿರಾ ಅವರು ಮನೆಯಲ್ಲಿ ಒಬ್ಬರೆ ಇರುತ್ತಿದ್ದುದರಿಂದ ಕಾದಂಬರಿಗಳನ್ನು ಬಿಡುವಿಲ್ಲದಂತೆ ಓದುತ್ತಿದ್ದರು. ಸ್ನೇಹಶೀಲೆ ಹಾಗೂ ಮುಗ್ಧೆಯೂ ಆದ ಇಂದಿರಾ ಅಕ್ಕಪಕ್ಕದ ಮನೆಯವರಿಗೆ ಅಚ್ಚು ಮೆಚ್ಚಿನವರಾಗುತ್ತಿದ್ದರು.

ಸಂಸಾರಿಯಾಗಿ ಎರಡು ವರ್ಷಗಳಲ್ಲಿ ಇಂದಿರಾ ಅವರಿಗೆ ಸಂಸಾರಬಂಧನ ಹೆಚ್ಚಾಯಿತು. ಬಸಿರು ಬಾಣಂತಿತನದ ಜಂಜಾಟ ಪ್ರಾರಂಭವಾಯಿತು. ಇಂದಿರಾ ಅವರದು ಮಿತವ್ಯಯದ ಸಂಸಾರ. ಆಡಂಬರದ ಜೀವನವಲ್ಲ. ಕೃಷ್ಣರಾಯರಿಗಿದ್ದ ಸಂಬಳದಲ್ಲೇ ಇಂದಿರಾ ಅವರು ಒಪ್ಪಓರಣವಾಗಿ ಸಂಸಾರ ಮಾಡಿದ್ದಾರೆ. ಕೃಷ್ಣ ರಾಯರು ಬಹಳ ಶಿಸ್ತಿನ ಜೀವನ. ವಾಸ್ತವಜೀವಿ. ಇಂದಿರಾ ಹಾಗೂ ಕೃಷ್ಣರಾಯರದು ತಿಳಿವಳಿಕೆ ಹೊಂದಿದ ಅನ್ಯೋನ್ಯ ದಾಂಪತ್ಯ ಜೀವನವಾಗಿತ್ತು. ಹೆಂಡತಿಯನ್ನು ಸೆರಳಿ ನಂತೆ ನಡೆಸಿಕೊಂಡಿದ್ದರು. 'ಮೂಢನಂಬಿಕೆ', ಅಂಧ ಶ್ರದ್ಧೆಗಳಿಂದ ಕೃಷ್ಣರಾಯರು ದೂರ.

"ನನಗೆ ತಿಳವಳಿಕೆ ಬಂದ ಮೊದಲಲ್ಲೇ ನನ್ನ ಕಣ್ಣಿಗೆ ಬಿದ್ದದ್ದು ಒಂದು ಕೃಷ್ಣನ ಬೊಂಬೆ. ತೊದಲು ನುಡಿಯಲ್ಲಿ ಕಲಿತದ್ದು 'ಉಡುಪಿ ಕೃಷ್ಣಾ' ಎಂಬ ಹಾಡು ಕೇವಲ ಐದನೆಯ ವಯಸ್ಸಿನಲ್ಲಿ ಕಂಡ ನಾಟಕ 'ಶ್ರೀ ಕೃಷ್ಣಲೀಲಾ' ಹೀಗಾಗಿ ಮೃದುವಾಗಿದ್ದ ಎಳೆಯ ಮನಸ್ಸಿನ ಆ ಕೃಷ್ಣನ ಪ್ರಭಾವವೇ ಹೆಚ್ಚಾಯಿತು."

ಕೃಷ್ಣನ ಪ್ರಭಾವ ಇಂದಿರಾ ಅವರ ಜೀವನ ತುಂಬ ವ್ಯಾಪಿಸಿದೆ. ಇಂದಿರಾ ಅವರ ಆರಾಧ್ಯದೈವ (ಅದನ್ನು ಅವರ ಒಂದು ಶಕ್ತಿ ಎಂದು ನಂಬಿದ್ದಾರೆ) ಕೃಷ್ಣನೇ ಆಗಿ ಎಂದೆಂದಿಗೂ ಅವರು ಕೃಷ್ಣರಾಯರ ಬಾಳಸಂಗಾತಿಯಾದರು.

ಪತಿ ಕೃಷ್ಣರಾಯರ ಬಗೆಗೆ ಹೇಳುತ್ತ "ಅವರದು ಮಹಾ ಮುಂಗೋಪ" ಆದರೆ ಅಷ್ಟೇ ಒಳ್ಳೆಯ ಮನಸ್ಸು. ತಾವು ತಂದುದನ್ನು ನಾಲ್ವರಿಗೆ ಹಂಚಿ ತಿನ್ನಬೇಕು ಎಂಬ ಸ್ವಭಾವ. "ನನ್ನನ್ನು ಹಾಗೂ ಮಕ್ಕಳನ್ನು ತುಂಬ ಪ್ರೀತಿಸುತ್ತಿದ್ದರು." ಎಂದೂ ಹೇಳುತ್ತಾರೆ. ಅವರು ತುಂಬಾ ಸಾಹಸಿಯೂ ಆಗಿದ್ದರಂತೆ. ಇಂದಿರಾ ಅವರ ಬರಹಕ್ಕೂ ಪ್ರೋತ್ಸಾಹ ನೀಡುತ್ತಿದ್ದರು. ಅವರೂ ಮಲೆ ನಾಡಿನವರೇ ಆಗಿದ್ದರಿಂದ ಆಗಾಗ ಸಲಹೆಯನ್ನು ಕೊಡುತ್ತಿದ್ದರು" ಎಂದು ಹೇಳುತ್ತಾರೆ.

1. ನೋಡಿ, 'ಕಸ್ತೂರಿ' 1963 ಅಕ್ಟೋಬರ್ 'ಸತಿ ಅನಸೂಯಾ' ಎಂಬ ಲೇಖನ ಬರೆದವರು ಎಂ. ಕೆ. ಇಂದಿರಾ (ಪುಟ 59)

ಇಂದಿರಾ ಸದ್ಗೃಹಿಣಿ, ಅಚ್ಚುಕಟ್ಟಾಗಿ, ಒಪ್ಪ ಓರಣವಾಗಿ ನಡೆವವರು. ಸಂಸಾರ ದುಂದುವೆಚ್ಚ ಎಂದಿಗೂ ಹಿಡಿಸದು. ಏನೇ ಆದರೂ ಸಾಲ ಮಾಡದೇ ಹಿಂದೆ ಬಡತನವಿದ್ದಾಗಲೂ ನೆಮ್ಮದಿಯಿಂದ ಜೀವನ ನಡೆಸಿದ್ದಾರೆ. ಎಲ್ಲದರಲ್ಲೂ ಹಿತಮಿತತೆ ಎದ್ದು ಕಾಣುತ್ತದೆ. ನಾಲ್ವರಲ್ಲಿ ಒಳ್ಳೆಯವರೆನಿಸಿಕೊಂಡು ಬಾಳಬೇಕೆಂಬ ಆಸೆ ಫಲಿಸಿಕೊಂಡವರು.

ತ್ರಿವೇಣಿಯವರೊಡನೆ ಸ್ನೇಹ :

ಎಂ. ಕೆ. ಇಂದಿರಾ ಅವರ ಸಂಸಾರ ೧೯೪೬ ರಿಂದ ೪೮ರವರೆಗೆ ಮಂಡ್ಯದಲ್ಲಿ ಉಳಿಯಿತು. ಮಂಡ್ಯದಲ್ಲಿ ಕೃಷ್ಣರಾಯರ ವರ್ಕ್‌ಶಾಪ್ ಇತ್ತು.

ಇಂದಿರಾ ಅವರ ಮನೆಯ ಹತ್ತಿರ ಪದ್ಮನಾಭಾಚಾರ್ ಎಂಬ ಪಂಡಿತರು ಮಹಿಳಾ ಸಮಾಜದ ಮೂರು ಹಿಂದಿ ವರ್ಗಗಳಿಗೆ ಪಾಠ ಹೇಳುತ್ತಿದ್ದರು. ಆ ವೇಳೆಗೆ ಇಂದಿರಾ ಅವರು ಪ್ರಥಮ, ಮಾಧ್ಯಮ ಎರಡೂ ಪರೀಕ್ಷೆಯಲ್ಲಿ ಪ್ರಥಮ ವರ್ಗದಲ್ಲಿ ಪಾಸಾಗಿದ್ದರು.

ಪದ್ಮನಾಭಾಚಾರ್ಯರು ಕೃಷ್ಣರಾಯರಿಗೆ ಹೇಳಿ, ಇಂದಿರಾ ಅವರು ರಾಷ್ಟ್ರಭಾಷಾ ವರ್ಗಕ್ಕೆ ಸೇರುವಂತೆ ಮಾಡಿದರು. ಆ ವರ್ಷ ರಾಷ್ಟ್ರಭಾಷಾ ಪರೀಕ್ಷೆಗೆ ಕುಳಿತವರು ಆರು ಮಂದಿ. ಅದರಲ್ಲಿ (ತ್ರಿವೇಣಿ) ಅನಸೂಯಾ ಒಬ್ಬರು. ಮಹಿಳಾ ಸಮಾಜದ ಎದುರಿಗೆ ಅನುಸೂಯಾ ಮಂಡ್ಯದದ ಅವರ ಮನೆ. (ತ್ರಿವೇಣಿಯವರ ಮೊದಲಿನ ಹೆಸರು ಅನಸೂಯಾ) ಅವರು ಬಿ. ಎ. ಮುಗಿಸಿ ಮಂಡ್ಯದ ಬಾಲಿಕಾ ಪಾಠ ಶಾಲೆಯ ಹಂಗಾಮಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದರು. ಇಂದಿರಾ ಹಾಗೂ ಅನಸೂಯಾ ಅವರ ಪರಸ್ಪರ ಪರಿಚಯವಾಗಿ ಆತ್ಮೀಯ ಗೆಳತಿಯರಾದರು. ಇಂದಿರಾ ಅವರು ಅನಸೂಯಾ ಅವರಿಗಿಂತ ಹನ್ನೊಂದು ವರ್ಷಕ್ಕೆ ದೊಡ್ಡವರು.

ರಾಷ್ಟ್ರ ಭಾಷಾ ಪರೀಕ್ಷೆಗೆ ಪ್ರೇಮಚಂದ್ರ 'ನಿರ್ಮಲಾ' ಕಾದಂಬರಿ ಪಠ್ಯ ಪುಸ್ತಕವಾಗಿತ್ತು. ಪದ್ಮಾನಾಭಾಚಾರ್ಯರು 'ನಿರ್ಮಲಾ' ಕಾದಂಬರಿಯನ್ನು ಕಥಾ ಭಾಗಕ್ಕೆ ಲೋಪವಾಗದಂತೆ ಆರು ಪುಟಗಳಿಗೆ ಮೀರದಂತೆ ಕನ್ನಡಕ್ಕೆ ಭಾಷಾಂತರಿಸಲು ಹೇಳಿದರಂತೆ.

ಆರೂ 'ಜನರೂ ತಮಗೆ ತಿಳಿದಂತೆ ಅನುವಾದಿಸಿದರು. ಅಧ್ಯಾಪಕರು ಮೇಜಿನ ಮೇಲೆ ಇಟ್ಟು 'ಇಂದೊಂದೆ ಸರಿಯಾಗಿರುವುದು' ಎಂದರಂತೆ ಸ್ವಾರಸ್ಯ ಕೆಡದಂತೆ ಇಂದಿರಾ ಅವರು ಅದನ್ನು ಆರು ಪುಟಗಳಲ್ಲಿ ಸರಿಯಾಗಿ ನಿರೂಪಿಸಿದ್ದರು. ಅದು ಅಧ್ಯಾಪಕರಿಗೆ ಮೆಚ್ಚಿಗೆಯಾಗಿತ್ತು. ಅಲ್ಲದೆ ಪ್ರತ್ಯೇಕವಾಗಿ ಇಂದಿರಾ ಅವರದು ಎಂದು

ಹೇಳಲು ಸಂಕೋಚವಾಗಿರಬಹುದು. ಏಕೆಂದರೆ ತ್ರಿವೇಣಿ, ಇನ್ನು ಕೆಲವರು ಅದರಲ್ಲಿ ಪದವಿ ಪಡೆದವರಾಗಿದ್ದರು. ಗೆಳತಿಯರಿಂದಲೂ ಅದು ಮೆಚ್ಚಿಕೆ ಪಡೆದಿತ್ತು.

ಅನಸೂಯಾ ಅವರು ಅದನ್ನು ಓದಿ—"ಅವರಂದದ್ದು ನಿಜ. ಕಥನ ಕಲೆ ನಿಮಗೆ ಹೃದ್ಗತವಾಗಿರಬೇಕು. ನೀವು ಸ್ವಂತವಾಗಿ ಏನನ್ನಾದರೂ ಬರೆದಿದ್ದೀರಾ"[1] ಎಂದಾಗ ಇಂದಿರಾ ಅವರು

"ಇಲ್ಲ ನಾನು ಬರಹಗಾರಳಲ್ಲ, ವಿದ್ಯಾವಂತೆಯೂ ಅಲ್ಲ. ಸುಮ್ಮನೆ ಆಸೆಗೆ ಒಂದೆರಡು ಚಿಕ್ಕ ರೂಪಕಗಳನ್ನು ಬರೆದಿಟ್ಟಿದ್ದೇನೆ. ಆದರೆ ಯಾರಿಗೂ ಅದನ್ನು ತೋರಿಸಿಲ್ಲ. ಬರೆಯುವ ಆಸೆ ಇರುವುದೂ ನಿಜ. ನಾವು ಬರೆದರೆ ಬೆಲೆ ಇಲ್ಲ. ಯಾರೂ ಪ್ರಕಟಿಸುವುದಿಲ್ಲ"[2] ಎಂದರು.

"ಅದೇ ತಪ್ಪು ಮೊದಲು ಎಲ್ಲರಿಗೂ ಹಾಗೆಯೇ ನೀವು ಮನಸ್ಸು ಮಾಡಿದರೆ ಪ್ರಯತ್ನಿಸಿದರೆ ಚೆನ್ನಾಗಿ ಬರೆಯಲ್ಲಿರಿ."[3]

ಎಂದು ಪ್ರೋತ್ಸಾಹದ ನುಡಿಗಳನ್ನು ಇಂದಿರಾ ಅವರಿಗೆ ನುಡಿದಿದ್ದರು.

ಒಂದು ದಿನ ತರಗತಿಗೆ ರಜೆ ಇದ್ದಾಗ ಅನಸೂಯಾ ಅವರು ಮನೆಯ ಕೈ ತೋಟಕ್ಕೆ ನೀರು ಹಾಕುತ್ತಿದ್ದ ಇಂದಿರಾ ಅವರಿಗೆ

"ಒಳ್ಳೆ ಸೇವೆ ಇದು"[4] ಎಂದಾರು ಇಂದಿರಾ ಕತ್ತೆತ್ತಿ ನೋಡಿ "ಒಳಗೆ ಬನ್ನಿ" ಎಂದಾಗ "ನೀವು ಕಾಫಿ ಕೊಡುವುದಾದರೆ ಬರುವದಿಲ್ಲ. ನಿಮ್ಮ ಕತೆ ಓದಲು ಒಪ್ಪಿಗೆ ಕೊಡುವುದಾದರೆ ಬರುತ್ತೇನೆ" ಎಂದರು.

ಇಂದಿರಾ ಯಾರಿಗೂ ಗೊತ್ತಾಗದಂತೆ ಬರೆದಿಟ್ಟಿದ್ದ 'ಪಶ್ಚಿಮ ಕರಾವಳಿ' ಹಾಗೂ 'ಹಳ್ಳಿಗಾರ್ತಿ' ಕತೆಗಳನ್ನು ಓದಿದರು. ಕಥೆ ಮೆಚ್ಚಿಕೊಂಡು ಅನಸೂಯಾ 'ಇಂದಿರಮ್ಮ, ನೀವು ಮುಂದೆ ಬರೆಯಲೇಬೇಕು. ಎಂದು ಆತ್ಮೀಯತೆಯ ಪ್ರೋತ್ಸಾಹಕ ಮಾತುಗಳನ್ನಾಡಿದ್ದರಂತೆ.

ಅನಸೂಯಾ ಅವರು, ಆಗಾಗ ಇಂದಿರಮ್ಮನವರಿಗೆ ಹಾಗೂ ಉಳಿದ ಗೆಳತಿಯರಿಗೆ ತಮ್ಮ ಆಯುಷ್ಯ ಕಡಿಮೆ ಎಂದು ಹೇಳುತ್ತಿದ್ದರಂತೆ.

---

1. 'ಕಸ್ತೂರಿ' 1963 ಅಕ್ಟೋಬರ್ 'ಸತಿ ಅನಸೂಯಾ' ಎಂಬ ಲೇಖನ ಬರೆದವರು ಎಂ. ಕೆ. ಇಂದಿರಾ (ಪುಟ 59)
2. ಅದೇ ; ಪುಟ. 59
3. ಅದೇ ; ಪುಟ. 59
4. ಅದೇ ; ಪುಟ, 59

ಒಂದು ಸಂಜೆ ಅನುಸೂಯಾ ಅವರು ಮೊಳಕಾಲಿನವರೆಗೆ ಇಳಿದ ತಮ್ಮ ಹೇರಳವಾದ ಕೂದಲನ್ನು ಬಾಚಿಕೊಳ್ಳುತ್ತಿದ್ದಾಗ ಹಿತ್ತಲಿನಲ್ಲಿದ್ದ ಆವರ ಗೆಳತಿ ಅನಸೂಯಾ ಅವರಿಗೆ

"ಏನೆ ? ಚೋಟುದ್ದ ಕೂದಲಿದ್ದವರೆಲ್ಲ ಎರಡು ಜಡೆ ಹಾಕ್ಕೋತಾರೇ ನೀ ಒಳ್ಳೇ ಪೂರ್ವದ ಪ್ರವೃತ್ತಿಯಂತೆ ಒಂದೇ ಜಡೆ ಹಾಕ್ಕೋತಿ ನನಗೇನಾದ್ರೂ ಇಷ್ಟು ಕೂದಲಿದ್ರೆ ಮಾವೇಣಿ ಅಗ್ತಿದ್ದೆ"[1] ಎಂದರಂತೆ. ಅಲ್ಲಿಯೇ ಇದ್ದ ಇಂದಿರಾ ಅವರು ಅನಸೂಯಾ ಆವರಿಗೆ "ನಿಜ ಎರಡೇಕೆ ಮೂರು ಜಡೆ ಹಾಕಿಕೊಂಡು 'ತ್ರಿವೇಣಿ' ಯಾಗಬಹುದು ನೀವು"[2]

ಎಂದಾಗ ಅನಸೂಯಾ ಅವರು—

"ಹೌದಂ, ಹೌದು ಎಷ್ಟು ಚೆನ್ನ. ತ್ರಿವೇಣಿ ಅನ್ನೋ ಹೆಸರು. ನಾನು ಮೂರು ಕಾಲಿನ ಒಂದೇ ಜಡೆ ಹಾಕಿಕೊಂಡ ತ್ರಿವೇಣಿ ಅಗ್ತೇನೆ" ಎಂದರಂತೆ. ಪರೀಕ್ಷೆಯಲ್ಲಿ ಎಲ್ಲರೂ ತೇರ್ಗಡೆಯಾಗಿದ್ದರು. ಮುಂದೆ ಇಂದಿರಾ ಅವರ ಸಂಸಾರ ಮೈಸೂರಿಗೆ ಬಂದಿತು. ಮುಂದಿನ ನಾಲ್ಕು ವರ್ಷಗಳ ನಂತರ ಅನಸೂಯಾ ಶಂಕರ್ ಅವರನ್ನು ಮದುವೆಯಾಗಿ ಗೃಹಿಣಿಯಾಗಿದ್ದರಲ್ಲಿ 'ತ್ರಿವೇಣಿ' ಎಂಬ ಹೆಸರಿನಿಂದ ನಾಲ್ಕಾರು ಕಾದಂಬರಿಗಳನ್ನು ಬರೆದು ಪ್ರಸಿದ್ಧರಾಗಿದ್ದರು.

ಮೈಸೂರಿನ ದಸರಾ ಪ್ರದರ್ಶನದಲ್ಲಿ ಇಂದಿರಾ ಅವರನ್ನು ಭೇಟ್ಟಿಯಾದಾಗಲೂ 'ತ್ರಿವೇಣಿ'ಯವರು ಇಂದಿರಾ ಅವರ ಕತೆಗಳ ಬಗ್ಗೆ ಕೇಳದೆ ಇರಲಿಲ್ಲ.

ಇಂದಿರಾ ಅವರ ಕಾದಂಬರಿ (ತುಂಗಭದ್ರ) ೧೯೬೩ ರಲ್ಲಿ ಪ್ರಕಟವಾಯಿತು. ತ್ರಿವೇಣಿಯವರು ತಮ್ಮ ಆಯುಷ್ಯದ ಬಗ್ಗೆ ನುಡಿದ ಮಾತು ಅದೇ ವರ್ಷ ನಿಜವಾಗಿ 'ತ್ರಿವೇಣಿ' ಇನಿಲ್ಲವಾದರು.

'ತುಂಗಭದ್ರ'ವನ್ನು 'ತ್ರಿವೇಣಿ' ಯವರಿಗೆ ಕೊಟ್ಟು ಬರಬೇಕೆಂದಿದ್ದರು. ಅಷ್ಟರಲ್ಲಿ ತ್ರಿವೇಣಿ ಬಹುದೂರ ಹೋಗಿದ್ದರು. ತಮ್ಮ ಒಂದು ಕೃತಿಯನ್ನು ಅವರಿಗೆ ತೋರಿಸದೇ ಹೋದ ಬಗ್ಗೆ ಇಂದಿರಾ ಅವರಿಗೆ ವ್ಯಥೆಯಾಯಿತಂತೆ.

ಹೀಗೆ ಎಂ. ಕೆ. ಇಂದಿರಾ ಅವರೇ ಅನಸೂಯಾ ಅವರಿಗೆ 'ತ್ರಿವೇಣಿ' ಎಂಬ ಆಕರ್ಷಕ ಕಾವ್ಯನಾಮ ಸೂಚಸಿದರೆಂಬುದು ಅತ್ಯಂತ ಗಮನಾರ್ಹ.

ತ್ರಿವೇಣಿಯವರು ಕನ್ನಡ ಸಾಹಿತ್ಯದಲ್ಲಿ ಇಂದಿರಾ ಅವರು ಸೂಚಿಸಿದ ಹೆಸರಿನಿಂದಲೇ ಕಾದಂಬರಿಕಾರ್ತಿಯಾಗಿ ಪ್ರಸ್ಧಿರಾದರೂ 'ತ್ರಿವೇಣಿ'ಯವರ ಕಾದಂಬರಿಗಳೂ ಇಂದಿಗೂ ಜನಪ್ರಿಯವಾಗಿ ಉಳಿದಿವೆ.

---

1. ಅದೇ ; ಪುಟ 61
2. ಅದೇ ; ಪುಟ 61

ಶ್ರೀಮತಿ ಇಂದಿರಾ ಅವರ ಸಂಸಾರಿಕ ಜೀವನ :

ಎಂ. ಕೆ. ಇಂದಿರಾ ಹಾಗೂ ಅವರ ಪತಿ ದಿ॥ ಕೃಷ್ಣರಾಯರು ನಿರಾಡಂಬರ ಜೀವಿಗಳು. ಕೃಷ್ಣರಾಯರದು ಸುಮ್ಮನೆ ಕುಳಿತುಕೊಳ್ಳುವ ಸ್ವಭಾವದವರಲ್ಲ. ಮೋಟಾರು, ಬಸ್ಸುಗಳನ್ನು ಇಟ್ಟಿದ್ದರುತೆ. ಹೀಗಾಗಿ ಊರಿಂದೂರಿಗೆ ಓಡಾಡುವ ಕೆಲಸವಿರುತ್ತಿತ್ತು.

ಇಂದಿರಾ ಅವರಿಗೆ ಒಟ್ಟು ಎಂಟು ಜನ ಮಕ್ಕಳು. ಅದರಲ್ಲಿ ಉಳಿದವರು ನಾಲ್ಕು ಜನ ಮಾತ್ರ. ಮೂರು ಜನ ಗಂಡುಮಕ್ಕಳು, ಒಬ್ಬ ಮಗಳು.

ಇಂದಿರಾ ಅವರ ಮೂರು ಬಾಣಂತಿತನಗಳನ್ನು ಬನಶಂಕರಮ್ಮನವರು ಮಾಡಿದ್ದರು. ಎರಡನ್ನು ವಠಾರದವರು, ಒಂದನ್ನು ಚಿಕ್ಕ ಅಜ್ಜಿ, ಒಂದನ್ನು ಬೇರೆ ಒಬ್ಬ ಸಮೀಪದ ಬಂಧುಗಳು, ಮತ್ತೊಂದನ್ನು ಸ್ವತಃ ಪತಿ ಕೃಷ್ಣರಾಯರೇ ಮಾಡಿದ್ದರಂತೆ.

ಇಂದಿರಾ, ಆರನೇ ಮಗುವಿನ ಬಾಣಂತಿಯಾದಾಗ ಕೃಷ್ಣರಾಜ ಪೇಟೆಯ ಹೊಸ ಹೊಳಲು ಎಂಬ ಗ್ರಾಮದಲ್ಲಿದ್ದರಂತೆ. ಬನಶಂಕರಮ್ಮನವರಿಗೆ ಶಸ್ತ್ರಚಿಕಿತ್ಸೆ (ಆಪ್ರೇಶನ್) ಆಗಿದ್ದುದುರಿಂದ ಇಂದಿರಾ ಅವರು ಬಂಧು ಬಳಗದವರನ್ನು ಕರೆಯಲಿಲ್ಲ. ಮನೆಯಲ್ಲಿ ಮೊದಲೇ ಎಲ್ಲ ಸೌಕರ್ಯವನ್ನು ಮಾಡಿದುದರಿಂದ ಕೃಷ್ಣರಾಯರೇ ಎರಡು ತಿಂಗಳು ಮನೆಯಲ್ಲೆ ಎಲ್ಲವನ್ನು ನಿರ್ವಹಿಸಿದರು. ಹೀಗೆ ಸಂದಿಗ್ಧ ಸಮಯದಲ್ಲಿ ಇಂದಿರಾ ಅವರೊಂದಿಗೆ ಅವರ ಪತಿ ಸಹನೆಯಿಂದ ಬಾಳ್ವೆಮಾಡಿದವರು.

ಎಂ. ಕೆ. ಇಂದಿರಾ ಅವರ ಜೀವನದ ಕೆಲವು ಘಟನೆಗಳು

ಇಂದಿರಾ ಅವರ ಜೀವನದಲ್ಲಿ ನೂರಾರು ಘಟನೆಗಳು ಜರುಗಿ ಹೋಗಿವೆ. ಅವುಗಳಲ್ಲಿ ಅವರ ಜೀವನಕ್ಕೆ ನೋವು ಕೊಟ್ಟಂತಹವುಗಳೇ ಬಹಳ.

ಎಂಟು ಮಕ್ಕಳಲ್ಲಿ ನಾಲ್ಕು ಮಕ್ಕಳನ್ನು ಕಳೆದುಕೊಂಡ ಇಂದಿರಾ ಅವರು ನೊಂದ ಜೀವಿ.

"ಇಂದಿರಾ ನಿಲೋಲಾಕ್ಷಿ ಎಂಬುದು ಒಂದು ಮುದ್ದಾದ ಹೆಣ್ಣುಮಗುವಿತ್ತು. ಅದಕ್ಕೆ ನಾಲ್ಕು ವರ್ಷಗಳಿರಬಹುದು. ಅದಕ್ಕೆ ಡಿಫ್ತೀರಿಯಾ ಅಟ್ಯಾಕ್ ಬಂದಿತ್ತು. ಇಂದಿರಾ ಒಬ್ಬಳೇ ಮನೆಯಲ್ಲಿದ್ದಳು. ನೂರೆಂಟು ತಾಪತ್ರಯಗಳಲ್ಲಿ ಆ ಮಗುವನ್ನು ಆಸ್ಪತ್ರೆಗೆ ತೋರಿಸಲು ಸಾಧ್ಯವಾಗಲಿಲ್ಲ. ಅವರ ಬಂಧು, ಅವರ ಜೊತೆಗೆ ಬೆಳೆದು ಆಟವಾಡಿದ ರಾಮಸ್ವಾಮಿಯವರನ್ನು ಆ ಮಗುವನ್ನು ಆಸ್ಪತ್ರೆಗೆ ಕರೆದೊಯ್ದರು. ಆಗಲೇ ಲೋಲಾಕ್ಷಿ ತಾಯಿಯನ್ನು ತೊರೆದು ಹೋಗಿತ್ತು.

ಹಿರಿಯ ಮಗ ಸುಬ್ಬುವಿಗೂ ಆ ಕಾಯಿಲೆ ನಿಧಾನವಾಗಿ ಬರತೊಡಗಿತ್ತು. ರಾಮಸ್ವಾಮಿಯವರು ಅವನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರಂತೆ. ಇಲ್ಲವಾದರೆ ಸುಬ್ಬುವಿನ ಸ್ಥಿತಿಯೂ ಲೋಲಾಕ್ಷಿಯಂತೆಯೇ ಆಗುತ್ತಿತ್ತೇನೋ"[1] ಎನ್ನುತ್ತಾರೆ. ರಾಮಸ್ವಾಮಿಯವರು.

ಇನ್ನೆರಡು ಅವಳಿ ಮಕ್ಕಳು ಆಸ್ಪತ್ರೆಯಲ್ಲೇ ತಮ್ಮ ಜೀವವನ್ನು ತೊರೆದವು. ಶೈಲಾಕ್ಷಿ ಎಂಬ ಮಗುವು ಡಿಫ್ತೀರಿಯಾ ಕಾಯಿಲೆಯಿಂದ ಹೆತ್ತವರನ್ನು ತೊರೆಯಿತಂತೆ.

ಇಂದಿರಾ ಅವರಿಗೆ ಹಸುಳೆಗಳ ನೆನಪು ಇಂದಿಗೂ ಆಗಾಗ ಕಾಡುತ್ತದೆ. ಕಣ್ಣು ಒದ್ದೆಯಾಗುತ್ತದೆ. ೧–೧–೧೯೬೯ ಅವರ ಜೀವನದಲ್ಲಿ ಅತೀವ ತಾಪದಾಯಕ ದಿನ. ಅವರ ಪತಿ ಕೃಷ್ಣರಾಯರು ಅಸ್ತಮಾ ಕಾಯಿಲೆಯಿಂದ ನಿಧನಹೊಂದಿದರು. ಅನ್ಯೋನ್ಯ ದಾಂಪತ್ಯ ಜೀವನ ಥಟ್ಟನೆ ಮುರಿದಾಗ, ಇಂದಿರಾ ಅವರು ಏಕಾಂಗಿಯಾದರು. ಜೀವನ ಸಂಗಾತಿಯಾದವಳು ಮಾಡಬೇಕಾದ ಸೇವೆಯನ್ನೆಲ್ಲ ಇಂದಿರಾ ಅವರು ಮಾಡಿದ್ದರು. ಅವರ ಪತಿ ಕೃಷ್ಣರಾಯರು ಅಸ್ತಮಾ ಅತಿಯಾದಾಗ.

"ನೀನೇ ಎಲ್ಲ ಜವಾಬ್ದಾರಿ ಹೊತ್ತುಕೊಂಡಿರುವಿ, ಎಲ್ಲ ಸೇವೆ ಮಾಡಿರುವಿ. ನಿನ್ನ ಸಹನೆ, ಮನೋಸ್ಥೈರ್ಯ ದೊಡ್ಡದು. ನಾನು ಸತ್ತಮೇಲೂ ನೀನು ಎಲ್ಲವನ್ನೂ ನೀಗಿಸಿಕೊಳ್ಳುವಿ ಎಂಬ ಅರಿವು ನನಗಿದೆ. ನನ್ನ ಸಾವಿನ ನಂತರ ನೀನು ಯಾವುದೇ ಅಂಧಶ್ರದ್ಧೆಗೆ ಬಲಿಯಾಗಬೇಗಬೇಡ. ಮಾಂಗಲ್ಯದ ವಿನಾ ಉಳಿದೆಲ್ಲ ಹಾಗೆಯೇ ಇರಲಿ. ಓಲೆ, ಕಾಲುಂಗರ, ಮೂಗುತಿ, ಕುಂಕುಮ ಯಾವುದನ್ನೂ ತೆಗೆಯಬೇಡ.

"ನನ್ನ ತಿಥಿಗಾಗಿ ಮಕ್ಕಳಿಗೆ ಸೊಸೆಯಂದಿರಿಗೆ ಮಡಿ–ಹುಡಿಯ ತೊಂದರೆಯೇ ಬೇಡ. ಇದುವರೆಗೆ ನನ್ನ ಜೀವನದುದ್ದಕ್ಕೂ ಸಂಗಾತಿಯಾಗಿ ಸಂಸಾರದಲ್ಲಿ ನೀನೇ ಹೆಚ್ಚು ಹೊಣೆ ಹೊತ್ತಿರುವಿ"[2] ಎಂದು ಆಗಾಗ ಇಂದಿರಾ ಅವರನ್ನು ಪಕ್ಕಕ್ಕೆ ಕುಳ್ಳಿರಿಸಿಕೊಂಡು ಹೇಳುತ್ತಿದ್ದರಂತೆ.

ನವೆಂಬರ ೧ ರಾಜ್ಯೋತ್ಸವ; ಎಲ್ಲರಿಗೂ ಸಂತೋಷದ ದಿನ. ಇಂದಿರಾ ಅವರ ಜೀವನದಲ್ಲಿ ಅದೊಂದು ದುರ್ದಿನ. ರಾಜ್ಯೋತ್ಸವ ; ಕಾರ್ಯಕ್ರಮಕ್ಕೆ ಕಾದಂಬರಿಕಾರ್ತಿ ಇಂದಿರಾ ಆಗಾಗ ಕರೆ ಬಂದರೂ ನೆಪ ಹೇಳಿ ತಪ್ಪಿಸಿಕೊಳ್ಳುತ್ತಿದ್ದರು. ಆದರೆ ವಿಧಿಯಿಲ್ಲದೆ ಒಮ್ಮೆ ಹೋಗಲೇಬೇಕಾಯಿತಂತೆ. ಕಿ. ಶ. ೧೯೭೪ ಇಂದಿರಾ ಅವರ ಜೀವನದಲ್ಲಿ ಒಂದು ದೊಡ್ಡ ಪೆಟ್ಟು. ಪತಿಯನ್ನು ಹಲವು ಮಕ್ಕಳನ್ನು ಕಳೆದುಕೊಂಡ ಅವರ

---

1. ರಾಮ್ಸ್ವಾಮಿ (ಎಂ. ಎಸ್. ರಾಮಸ್ವಾಮಿ) ಯವರನ್ನು 8–10–84ರಂದು ಭೆಟ್ಟಿಯಾದಾಗ ನನಗೆ ತಿಳಿಸಿದರು. ರಾಮ್ಸ್ವಾಮಿ ಇಂದಿರಾ ಅವರ ಭಾವನವರ ಮಗ.
2. ಇಂದಿರಾ ಅವರು ಹೇಳಿದ್ದು.

ಮನಸ್ಸಿಗೆ ಮತ್ತೊಂದು ಆಘಾತದ ಪೆಟ್ಟು ಇಂದಿರಾ ಅವರ ಮಗ ನಾಗೇಂದ್ರ ಇಪ್ಪತ್ತುನಾಲ್ಕರ ತರುಣ, ಧೀರ ಪ್ರತಿಭಾವಂತ ಯುವಕ. ಸಿನೆಮಾನೋಡಿ ಬೇಸಿಗೆಯ ದಿನಗಳಾದ್ದರಿಂದ ಮನೆಯ ಹೊರಾಂಗಣದಲ್ಲಿ ಮಲಗಿದ. 'ಅಮ್ಮಾ' ಎಂದು ಚಿಟ್ಟನೆ ಚೀರಿದಾಗಲೇ ಮಲಗಿದವರು ಧಾವಿಸಿ ಬಂದರು. ಬಂಧುಗಳೆಲ್ಲ ಕೂಡಿದರು. ವೈದ್ಯರು ಬಂದರು. ಯಾವುದೂ ಪ್ರಯೋಜನವಾಗಲಿಲ್ಲ. ಚಿರನಿದ್ರೆಯಲ್ಲಿ ಲೀನವಾಗಿದ್ದ ಅವನ ಸಾವಿಗೆ 'ಬ್ರೇನ್ ಹ್ಯಾಮ್ರೇಜ್' ಕಾರಣ ಎಂದು ತಿಳಿದುಬಂದಿತು.

೧೯೭೭ರಲ್ಲಿ ಒಡಹುಟ್ಟಿದ ಸೋದರ ಟಿ. ಎಸ್. ರಾಮಚಂದ್ರರಾವ್ (ಪ್ರಜಾವಾಣಿ ಸಂಪಾದಕ) ಕ್ಯಾನ್ಸರ್ ರೋಗದಿಂದ ತೀರಿಹೋದರು. ಈ ಮೊದಲೇ ಇಂದಿರಾ ಅವರ ತಾಯಿ–ತಂದೆಯೂ ತೀರಿಹೋಗಿದ್ದರು. ಅವರಿಗೆ ವಯಸ್ಸಾಗಿದ್ದರೂ ತಂದೆ–ತಾಯಿಯ ಸಾವು ಎಲ್ಲರ ಜೀವನದಲ್ಲಿ ಮರೆಯಲಾಗದಂತಹ ನೋವು. ಇತ್ತೀಚೆಗೆ ಮಗಳು ಅನ್ನಪೂರ್ಣ ಅವರ ಮಗ (ಮೊಮ್ಮಗಳು) ಹುಟ್ಟಿದ ಕೆಲವೇ ದಿನಗಳಲ್ಲಿ ತೀರಿ ಹೋಯಿತು.

ಹೀಗೆ ಇಂದಿರಾ ಅವರು ಜೀವನದುದ್ದಕ್ಕೂ ಪೆಟ್ಟಿನ ಮೇಲೆ ಪೆಟ್ಟು ತಿಂದಿದ್ದಾರೆ. ಅವರದು ನೊಂದ ಬದುಕು. ಈಗ ಯಾರಾದರೂ ತೀರಿಕೊಂಡ ಆಕಸ್ಮಿಕ ಸುದ್ದಿ ತಿಳಿದರೆ ಇಂದಿರಾ ಅವರು ಅತ್ಯಂತ ದುಃಖಿಯಾಗುತ್ತಾರೆ. ಆತ್ಮಹತ್ಯೆಯಂತಹ ಸುದ್ದಿಯನ್ನು ಕೇಳಿದರಂತೂ ಅವರ ಮನಸ್ಸಿಗೆ ಅತ್ಯಂತ ನೋವಾಗುತ್ತದೆ. "ಆತ್ಮೀಯರಿಗೆ ಏನಾದರೂ ನೋವಾಗುವ ಸಂದರ್ಭವಿದ್ದರೆ ನನ್ನ ಮನಸ್ಸಿಗೆ ನಾಲ್ಕಾರು ದಿನ ಮೊದಲೇ ಒಂದು ರೀತಿಯ ಸಂಕಟ ಹತ್ತಿಕೊಳ್ಳುತ್ತದೆ."[1] ಎನ್ನುತ್ತಾರೆ.

"ನನ್ನ ಸಾಂಸಾರಿಕ ಜೀವನದಲ್ಲಿ ನಾನು ಒಂದು ಮುರುಕು ಸೂಜಿಯನ್ನೇ ಕಳೆದುಕೊಂಡಿಲ್ಲ. ಆದರೆ ಬಾಳಸಂಗಾತಿ, ಹೊಟ್ಟೆಯ ಕಂದಮ್ಮಗಳನ್ನು, ತಂದೆ–ತಾಯಿ ಒಡಹುಟ್ಟಿದವರನ್ನು ಕಳೆದುಕೊಂಡಿದ್ದೇನೆ. ಇವುಗಳನ್ನೆಲ್ಲ ನೋಡುವುದಕ್ಕೆ ನಾನು ಗುಂಡುಕಲ್ಲಿನಂತೆ ಇದ್ದೇನೆ. ಏನು ಸಾವು ಏನು ನೋವು" ಏನು ಜೀವನವೋ ಸಾಕಾಗಿದೆ ಎಂದು ದುಃಖಿತಪ್ತರಾಗುತ್ತಾರೆ. "ಮಗನ ಸಾವು, ಹಾಗೂ ತಮ್ಮನ ಸಾವಿನ ನಂತರ ಇಂದಿರಾ ಅವರು ತೀರ ಸೋತು ಹೋಗಿದ್ದಾರೆ" ಎಂದು ಎಚ್. ಎಸ್. ಪಾರ್ವತಿಯವರೂ ಹೇಳುತ್ತಾರೆ.

---

1. (7–10–84ರಂದು) ನಾನು ಹೋದಾಗ ಅವರಿಗೆ ತೀರ ಪರಿಚಿತಳಾದ (ಮಗಳ ಗೆಳತಿ) ವಿವಾಹಿತ ಯುವತಿಯೊಬ್ಬಳು ವಿಷ ಸೇವನೆಯಿಂದ ಆತ್ಮಹತ್ಯೆ ಮಾಡಿಕೊಂಡಿದ್ದಳು. ಅವಳನ್ನು ತಿಳಿದ ಇಂದಿರಾ ಅವರು, ಮಾನಸಿಕವಾಗಿ ತೀರ ನೊಂದಿದ್ದರು. ದುಃಖದಿಂದ ಅವರ ಮನಸ್ಸಿನ ಮೇಲೆ ಸ್ಥಿಮಿತವಿರಲಿಲ್ಲ. ತಮ್ಮ ಜೀವನದಲ್ಲಿ ಕಂಡ ಸಾವು ನೋವುಗಳನ್ನು ನೆನೆದು ಕಣ್ಣೀರಿಡುತ್ತ ಕುಳಿತಿದ್ದರು. ಮತ್ತೆ ಮರುದಿನ ಇದ್ದುದರಲ್ಲಿಯೇ ಸಮಾಧಾನ ತಂದುಕೊಂಡರು.

ಕಾದಂಬರಿ ಕಾರ್ತಿಯಾದ ವರ್ಷ ೧೯೬೩ :

ಸುಮಾರು ೧೯೫೦ನೆಯ ಇಸವಿಯಲ್ಲಿ ಕೃಷ್ಣರಾಯರು ಬೆಂಗಳೂರಿನ ಬಿ.ಟಿ.ಎಸ್. ಕೆಲಸಕ್ಕೆ ಸೇರಿದುದರಿಂದ ಇಂದಿರಾ ಅವರು ಸಂಸಾರ ಸಮೇತ ಬೆಂಗಳೂರಿಗೆ ಬಂದರು, ಈಗಲೂ ಇಂದಿರಾ ಅವರು ಬೆಂಗಳೂರಿನ ವಿಲ್ಸನ್ ಗಾರ್ಡನ್ನಿನ ಮನೆಯೊಂದರಲ್ಲಿ ವಾಸಿಸುತ್ತಿದ್ದಾರೆ,

ಇಂದಿರಾ ಅವರ ಬರವಣಿಗೆಯನ್ನು ನೋಡುತ್ತ ಬಂದವರು ಎಂ. ಎಸ್. ರಾಮಸ್ವಾಮಿಯವರಿಗೆ ಇಂದಿರಾ ಅವರ ಬರವಣಿಗೆಯ ಬಗೆಗೆ ಬಹಳ ಅಭಿಮಾನ. 'ಹೆಣ್ಣಿನ ಆಕಾಂಕ್ಷೆ'ಯನ್ನು ಬರೆದಿಟ್ಟಾಗ ಅದನ್ನು ಎಚ್. ಎಸ್. ಪಾರ್ವತಿಯವರಿಗೂ ತೋರಿಸಿದ್ದರಂತೆ.[1]

"೧೯೫೪ರಲ್ಲಿ ನಾನು 'ಹೆತ್ತೊಡಲು' ನೀಳ್ಗತೆಯನ್ನು ಬರೆದದ್ದು, ಅದನ್ನು ಪ್ರಕಟಣೆಗೆ ಕಳಿಸಿಬೇಕೆಂಬ ಚಪಲ ನನಗಿರಲಿಲ್ಲ. ಕಾರಣ ಅದು ನನ್ನ ಕುಟುಂಬದ ಕತೆ, ಕತೆ ಚೆನ್ನಾಗಿದೆಯೆಂದು ನನ್ನ ಭಾವನವರ ಮಗ ಎಂ. ಎಸ್. ರಾಮಸ್ವಾಮಿ 'ಪ್ರಜಾವಾಣಿ' ದೀಪಾವಳಿ ಸ್ಪರ್ಧೆಗೆ ಕಳಿಸಿದ. ತೀರ್ಪುಗಾರರು ಎರಡು ಕತೆಗಳನ್ನು ಪ್ರಥಮ ಬಹುಮಾನಕ್ಕೆ ಆಯ್ಕೆ ಮಾಡಿದ್ದರಂತೆ, ಅದರಲ್ಲಿ ನನ್ನ ಹೆಸರು ಇಂದಿರಮ್ಮ ಎಂದಿತ್ತು ಮನೆಯಲ್ಲಿ ನಡೆದ ಘಟನೆ ಮನೆಯವರೇ ಬರೆದು ಕಳಿಸಿದ್ದು. ಈ ಕಾರಣದಿಂದ ನನ್ನ ತಮ್ಮ ನನ್ನ ಕತೆಗೆ ಬಹುಮಾನ ಬೇಡವೆಂದನಂತೆ. ವಾರದ ನಂತರ ಪ್ರಜಾವಾಣಿಯಲ್ಲಿ ಕೆಲಸ ಮಾಡುತ್ತಿದ್ದವರೊಬ್ಬರಿಂದ ನನಗೆ ಈ ವಿಷಯ ತಿಳಿಯಿತು ಆದರಿಂದ ನನಗೆ ಕಿಂಚಿತ್ತು ಬೇಸರವಿಲ್ಲ. ೧೯೫೮ರಲ್ಲಿ 'ತುಂಗಭದ್ರ' ಬರೆದದ್ದು ಆದರೆ ೧೯೬೩ರ ನಂತರ ಎಲ್ಲಾ ಪ್ರಕಟವಾಯಿತು. ಅನಂತರವೇ ಹೆತ್ತೊಡಲು 'ಕಸ್ತೂರಿ'ಯಲ್ಲಿ ಪುಸ್ತಕ ವಿಭಾಗದಲ್ಲಿ ಪ್ರಕಟವಾಗಿ 'ನವರತ್ನ' ಕಥಾ ಸಂಕಲನದಲ್ಲಿ ಮೊದಲನೆಯ ಕತೆಯಾಗಿ ಸೇರಿ, ಆ ಸಂಕಲನಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ" ಬಂದಿತು.[2]

ಹೀಗೆ ಪತ್ರಿಕೆಗೆ ಹೋದ ಮೊದಲನೆಯ ಕತೆ ತಮ್ಮನಿಂದಲೇ ಹಿಂತಿರುಗಿ ಬಂದರೂ 'ನವರತ್ನ' ಸಂಕಲನದಲ್ಲಿ ಸೇರಿ ಪ್ರಶಸ್ತಿಗಳಿಸಿತು.

ಇಂದಿರಾ ಅವರ ಪರಿಚಯದವರಾದ 'ರಾಧಮ್ಮ' ಎಂಬುವವರು ೧೯೫೮ರಲ್ಲಿ ಇಂದಿರಾ ಅವರ ಮನೆಗೆ ಬಂದಾಗ ತಮ್ಮ ಮನೆತನದ ಕತೆಯೂ 'ಬರೆದರೆ ಅದೊಂದು ದೊಡ್ಡ ಕತೆ ಆಗುತ್ತದೆ ಎಂದಾಗ ಇಂದಿರಾ ಅವರು ತಟ್ಟನೆ 'ನಾನು ಬರೆಯಲಾ' ಎಂದು ಕೇಳಿದರಂತೆ. ಆಗ 'ರಾಧಮ್ಮ' ಅವಶ್ಯ ಬರೀರಿ ಎಂದರಂತೆ. ಇಂದಿರಾ ಅವರು 'ತುಂಗಭದ್ರ' ಬರೆದರು. ಮುಂದೆ ರಾಧಮ್ಮ ಕಾಶಿಯಲ್ಲಿ ತೀರಿಕೊಂಡರು.

"ಕಾದಂಬರಿಯಲ್ಲಿ ಬರುವ ಮಂದಾಕಿನಿ ಪಾತ್ರ ನಿಜವಾಗಿ ಅವರೇ ತ್ರಿವೇಣಿ, ರಾಧಮ್ಮ, ನನ್ನ ಬರವಣಿಗೆಗೆ ಪ್ರೇರಕರು" ಎಂದು ಹೇಳುತ್ತ ಅವರಿತ್ತ ಪ್ರೋತ್ಸಾಹ

1. ಎಚ್. ಎಸ್. ಪಾರ್ವತಿಯವರು ದಿನಾಂಕ 8–10–84ರಂದು ಮುಖತಃ ಕಂಡಾಗ ಈ ಪ್ರಬಂಧಕಾರಳಿಗೆ ಈ ಮಾತು ಹೇಳಿದರು.
2. ಎಂ. ಕೆ. ಇಂದಿರಾ : 'ತರಂಗ' ಪುಟ 6, 7 ಆಗಸ್ಟ್ 1983

ವನ್ನು ಅತ್ಯಂತ ಕೃತಜ್ಞತೆಯಿಂದ ಸ್ಮರಿಸುತ್ತಾರೆ. ಇಂದಿರಾ ಅವರು 'ತುಂಗಭದ್ರ' ಬರೆದಾಗ (೧೯೬೦) ರಲ್ಲಿ ತಾಯಿ ಬನಶಂಕರಮ್ಮನವರು ಓದಿ ಚೆನ್ನಾಗಿ ಬಂದಿದೆ ಎಂದು ಪ್ರೀತಿಯಿಂದ ಪ್ರೋತ್ಸಾಹದ ನುಡಿಗಳನ್ನಾಡಿರು. ಬನಶಂಕರಮ್ಮ ಆಗಲೇ ಬೆಂಗಳೂರಲ್ಲಿ ನೆಲೆಸಿ ಹದಿನೆಂಟು ವರ್ಷಗಳಾಗಿದ್ದವು.

ಇಂದಿರಾ ಅವರು ಕಾದಂಬರಿಕಾರ್ತಿಯಾದುದು ಅವರ ಭಾವನವರ ಮಗ ಶ್ರೀ ಎಂ. ಎಸ್. ರಾಮಸ್ವಾಮಿಯವರಿಂದ. 'ಗೆಜ್ಜೆಪೂಜೆಯನ್ನು ಬರೆದು ಎಚ್. ಕೆ. ರಂಗನಾಥ್ ಇವರಿಗೆ ತೋರಿಸಿದ್ದರಂತೆ.

ಮೊದಲು 'ಹೆಣ್ಣಿನ ಆಕಾಂಕ್ಷೆ'ಯನ್ನು ಪ್ರಕಟಿಸಬೇಕೆಂಬ ಸಂಕಲ್ಪ ಇಂದಿರಾ ಅವರದಾಗಿತ್ತು. ತಾಯಿ ಬನಶಂಕರಮ್ಮನವರು 'ರಾಧಮ್ಮ' ಹೇಳಿದ ಘಟನೆಯನ್ನು ಬರೆಯಲು ಪ್ರಚೋದಿಸಿದಾಗ, ಇಂದಿರಾ ಅವರು 'ತುಂಗಭದ್ರ' ಬರೆದರು. ಮೊದಲಿನಿಂದಲೂ ಇಂದಿರಾ ಅವರ ಬರವಣಿಗೆಯ ಬಗ್ಗೆ ಅಭಿಮಾನವಿದ್ದ ರಾಮಸ್ವಾಮಿಯವರು ಅದನ್ನು ಎಚ್. ಕೆ. ರಂಗನಾಥ ಅವರಿಗೆ ಒಪ್ಪಿಸಿದರಂತೆ.

'ತುಂಗಭದ್ರದ' ಸತ್ಯದ ಘಟನೆಯನ್ನು ಇಂದಿರಾ ಅವರು ಕಂಡು ಕೇಳಿದ್ದರು. ಹವ್ಯಕ ಕುಟುಂಬದಲ್ಲಿ ಜನಿಸಿದ 'ಗಂಗೆ-ಗೌರಿ' ಎಂಬ ಅವಳಿ ಹುಟ್ಟು ಕುರುಡಿಯರು ಮಾನಸಿಕಯಾತನೆಯನ್ನು ಅನುಭವಿಸಿ, ಹೊಳೆಯಲ್ಲಿ ಬಿದ್ದು ಆತ್ಮಹತ್ಯೆ ಮಾಡಿ ಕೊಂಡಿದ್ದರು.

ಧೂಳು ತುಂಬಿದ ಪೆಟ್ಟಿಗೆಯಿಂದ ಹೊರಬಿದ್ದ 'ತುಂಗಭದ್ರ'ದ ಹಸ್ತಪ್ರತಿ ರಾಮಸ್ವಾಮಿ, ಹಾಗೂ ಎಚ್. ಕೆ. ರಂಗನಾಥ್ ಇವರಿಂದಾಗಿ ಧಾರವಾಡದ ಸುಪ್ರಸಿದ್ಧ ಮನೋಹರ ಗ್ರಂಥಮಾಲೆಯ ಸಲಹೆಗಾರರೂ ಹೆಸರಾಂತ ವಿಮರ್ಶಕರೂ ಆದ ಶ್ರೀ ಕೆ. ಡಿ. ಕುರ್ತಕೋಟಿಯವರ ಕೈಸೇರಿತು.

ಶ್ರೀ ಕೆ. ಡಿ. ಕುರ್ತಕೋಟಿಯವರು ಒಂದು ಕಾರ್ಯಕ್ರಮ ನಿಮಿತ್ತ ಮುಂಬಯಿಗೆ ಹೋಗುವವರಿದ್ದರು. ಹಸ್ತಪ್ರತಿಯನ್ನು ಜೊತೆಗೆ ಒಂದು ಸಾವಿರ ರೂಪಾಯಿಗಳನ್ನು 'ಪ್ಲೀಡರ್ಸ್ ಲೆದರ್ ಬ್ಯಾಗ'ನಲ್ಲಿ ಹಾಕಿ ಇಟ್ಟರು, ಮುಂಬಯಿಯ ವಿಪರೀತ ಗದ್ದಲದಲ್ಲಿ ಹಸ್ತಪ್ರತಿ ಇದ್ದ ಚೀಲ ನಾಪತ್ತೆಯಾಗಿತ್ತು. ಹಣವಂತೂ ಹೋಯಿತು. ಜೊತೆಗೆ ಶ್ರಮ ವಹಿಸಿ ಬರೆದ ಕಾದಂಬರಿಯ ಹಸ್ತಪ್ರತಿಯೂ ಕಳೆದುದಕ್ಕೆ ಕುರ್ತಕೋಟಿಯವರಿಗೆ ಅತೀವ ದುಃಖವೂ ನಿರಾಶೆಯೂ ಆಯಿತು.

ಕಳೆದುಕೊಂಡ ಚೀಲದ (ಬ್ಯಾಗ) ವಿಷಯವನ್ನು ಒಬ್ಬರ ಸಲಹೆಯ ಮೇರೆಗೆ ಪತ್ರಿಕೆಯೊಂದರಲ್ಲಿ ತಿಳಿಸಿಯೂ ಆಯಿತು. ಹಣ ಹೋದರೆ ಹಸ್ತಪ್ರತಿಯಾದರೂ ಸಿಗಲಿ ಎಂಬ ದೂರದ ಆಶೆ. ಆದರೆ ಪ್ರಯೋಜನವಾಗಲಿಲ್ಲ. ಶ್ರೀ ಕೆ. ಡಿ. ಕುರ್ತಕೋಟಿಯವರು ತಾವು ಓದಿದ ಸ್ಮರಣಶಕ್ತಿಯಿಂದ ಪುನಃ ಅದನ್ನು ಬರೆದು ಕೊಡುವುದಾಗಿ

ಶ್ರೀ ಕೆ. ಡಿ. ಕುರ್ತಕೋಟಿಯುವರು ಮನೋಹರ ಗ್ರಂಥಮಾಲೆಯ ಸಂಪಾದಕರೂ, ಒಡೆಯರು ಆದ ಶ್ರೀ ಜಿ. ಬಿ. ಜೋಶಿಯುವರಿಗೆ ಹೇಳಿದರು. ಒಬ್ಬರ ಅಂತರಂಗದ ತುಮುಲದಿಂದ ಸೃಷ್ಟಿಯನ್ನು ನೆನಪಿನ ಆಧಾರದ ಮೇಲೆ ಮತ್ತೊಬ್ಬರು ಬರೆಯುವುದ ಅಸಾಧ್ಯ ಕೆಲಸವೇ ಸರಿ. ಇಂದಿರಾ ಅವರ ಮನಸ್ಸಿಗೆ ನೋವು ಕೊಡಬಾರದೆಂದು ಜೋಶಿಯುವರ ಆಸೆ. ವಿಧಿಯಿಲ್ಲದೆ ಅನಿವಾರ್ಯವಾಗಿ ಎಚ್. ಕೆ. ರಂಗನಾಥರಿಗೆ ವಿಷಯ ತಿಳಿಸಿ ಕೈಮೀರಿ ನಡೆದ ಘಟನೆಯ ಬಗ್ಗೆ ನೊಂದ ಮನದಿಂದ ಪತ್ರ ಬರೆದು ಕ್ಷಮೆ ಕೇಳಿದರು.

ಅದು ಪ್ರಕಟವಾಗಿದ್ದರೆ ಸಲ್ಲಬಹುದಾಗಿದ್ದ ಗೌರವಧನವನ್ನು ತಾವೇ ಕೊಡುವು ದಾಗಿ ಕೆ. ಡಿ. ಕುರ್ತಕೋಟಿಯುವರು ತಿಳಿಸಿದ್ದರು. ಇದು ಕೈಮೀರಿ, ನಡೆದ ಘಟನೆ ಯಾದ್ದರಿಂದ ತಾವೇ ಕೊಡುವುದಾಗಿ ಶ್ರೀ ಜಿ. ಬಿ. ಜೋಶಿಯುವರು ತಿಳಿಸಿದರು.

"ನೀವೇ ಈ ದುರ್ದೈವದ ಪ್ರಸಂಗದೊಳಗಿಂದ ನನ್ನನ್ನು ಪಾರು ಮಾಡಬೇಕು. ಉಪಾಯ ಏನೆಂಬುದನ್ನು ತಿಳಿಸಬೇಕು."[1]

"ಇಡೀ ಮೂವತ್ತು ವರ್ಷದ ಗ್ರಂಥಮಾಲೆಯ ಆಯುಷ್ಯದಲ್ಲಿ ಹೀಗಾದದ್ದು ಇದೇ ಮೊದಲು. ಈ ಅನೀರಿಕ್ಷಿತ ಘಟನೆ ನನ್ನನ್ನೂ, ಕೀರ್ತಿ ಹಣ್ಣು ಮಾಡಿದೆ. ನೀವು ನಿಮ್ಮ ತಂಗಿಯುವರಿಗೆ ಭೆಟ್ಟಿಯಾಗಿ ತಿಳಿಸಿ. ಏನಾದರೂ ಉಪಾಯ ಇದ್ದರೆ ಇದ್ದ ಬಿದ್ದ (ಟಿಪ್ಪಣಿ)ಗಳಿಂದ ಅದನ್ನೇ ಇನ್ನೊಮ್ಮೆ ಬರೆದರೆ ಸಮಾಧಾನವಾಗುತ್ತದೆ"[2] ಎಂದು ರಂಗನಾಥ ಅವರಿಗೂ ಕುರ್ತಕೋಟಿಯುವರು ಪತ್ರ ಬರೆದರು; ಅದೇ ಎಂ. ಕೆ. ಇಂದಿರಾ ಅವರಿಗೆ ಪತ್ರ ಬರೆದು ಕ್ಷಮೆ ಕೇಳಿದರು.

ಈ ಘಟನೆಯಿಂದ ಇಂದಿರಾ ಅವರಿಗೆ ಹೇಗಾಗಿರಬೇಡ ? ಆ ನಿರಾಶೆ ಆ ದುಃಖ ಅನುಭವವೇದ್ಯ, ಎಷ್ಟೋ ವರ್ಷಗಳಿಂದ ಬರೆಯುವ ಹಂಬಲವನ್ನಿಟ್ಟುಕೊಂಡಿದ್ದರು. ಮನದ ಒತ್ತಡ ತಾಳಲಾಗದೇ ಬರೆದು ಇಟ್ಟಿದ್ದರು. ತಾಯಿಯಾಗುವವಳು ತನ್ನ ಚೊಚ್ಚಲು ಮಗುವನ್ನು ಕಾಣಲು ತಾಳ್ಮೆ, ಸಂಭ್ರಮದಿಂದ ಪ್ರಥಮ ಕೃತಿಗಾಗಿ ನೀರಿಕ್ಷಿಸಿ ದ್ದರು. ಆದರೆ ಅವರಿಗೆ ಹೆತ್ತ ಕೂಸೊಂದನ್ನು ಕಳೆದುಕೊಂಡಂತೆ ನೋವು ಆದುದು ಸಹಜವೇ.

"ಈ ಬಗೆಯ ಹೊಗೆ, ಧಗೆ, ಬೇಗೆ ಸಾಮಾನ್ಯವಾಗಿ ಎಲ್ಲ ಕಲಾವಿದರ ಪಾಲಿಗೂ ಬಂದಿರುವ ಬಳುವಳಿ ಎಂದೇ ನನ್ನ ಅನುಭವ ಹೇಳುತ್ತದೆ."[3]

---

1. 20–12–1962 ರಲ್ಲಿ ಜಿ. ಬಿ. ಜೋಶಿಯುವರು ಎಚ್. ಕೆ. ರಂಗನಾಥರಿಗೆ ಬರೆದ ಪತ್ರದ ಆಧಾರ.
2. 20–12–1962ರಲ್ಲಿ ಜಿ. ಬಿ. ಜೋಶಿಯುವರು ಎಚ್. ಕೆ. ರಂಗನಾಥರಿಗೆ ಬರೆದ ಪತ್ರದ ಆಧಾರ.
3. ಎಂ. ಕೆ. ಇಂದಿರಾ; 'ಯಾತ್ರಿಕ' ಕನ್ನಡ ರಾಜ್ಯೋತ್ಸವ ದೀಪಾವಳಿ 1972 ಪುಟ 12

"ವಾತಾವರಣ, ಹೆತ್ತವರ ಪಾಲನೆ, ಪೂರ್ವಜರ ಸಂಸ್ಕಾರ, ಜೊತೆಗೆ ನಮ್ಮ ಕಿಂಚಿತ್ ಪುಣ್ಯವೂ ಇದ್ದಿತು. ವಿದ್ಯೆ ಬಹಳ ಕಡಿಮೆಯಾದರೂ ಓದುವ ಮತ್ತು ಬರೆಯುವ ಹುಚ್ಚು ಒಳಗಿಂದೊಳಗೇ ಅರಳುತ್ತಿತ್ತು. ಕೆರಳುತ್ತಿತ್ತು. ಆದರೆ ಪ್ರಕಾಶಕ್ಕೆ ಅವಕಾಶವೇ ಇರಲಿಲ್ಲ."

"ಸಂಪ್ರದಾಯ ನಿಷ್ಠೆಯ 'ಅತ್ತೆಯ ಮನೆ, ನನ್ನ ಮನಸ್ಸಿಗೆ ತದ್ವಿರುದ್ಧ; ಮನದ ಆಶೆಗಳೆಲ್ಲ ಭೂಗತ. ಬಸಿರು, ಬಾಣಂತಿತನ, ಸಂತಾನನಷ್ಟ, ಸಂಸಾರಿಕ ನೂರೆಂಟು ಕಷ್ಟ ಕಾರ್ಪಣ್ಯ ಕೋಟಲೆಗಳ ಅನುದಿನದ ಈ ಬವಣೆಗಳಲ್ಲೂ ಅಂತರಂಗ ದಲ್ಲೇ ಸಾಹಿತ್ಯ ಲತೆ ಬೆಳೆದು ಹೂ ಬಿಟ್ಟಿತು. ಅದರಲ್ಲೂ ಎಷ್ಟೋ ಸಂತಸ ಸಮಾಧಾನ ನನ್ನ ಮನಸ್ಸಿಗೆ ನೂರಾರು ಬೇಗೆ ಬೇಗುದಿಗಳನ್ನು ತಣಿಸುತ್ತಿದ್ದುದು ಈ ನಿರಂತರ ಚೆಲುಮೆಯ ಅಂತರಗಂಗೆ."[1]

ಈ ರೀತಿ ಅಂತರಂಗದ ತುಮುಲದಲ್ಲಿ ಬರೆದ ಕೃತಿ ಬೆಳಕು ಕಾಣುವ ಹೊಸ ಆಶಾಭಾವನೆಯಲ್ಲಿದ್ದಾಗ ಮನಸ್ಸಿಗೆ ನೋವನ್ನೆ ತಂದಿತು. ಕಠೋರ ಸತ್ಯವನ್ನು ಸಹನಾಮಯಿಯಾದ ಇಂದಿರಾ ಅವರು ಧೃತಿಗೆಡದೆ ಎದುರಿಸಿದರು. ಜಿ. ಬಿ. ಜೋಶಿ ಯವರಿಗೂ, ಕೆ. ಡಿ. ಕುರ್ತಕೋಟಿಯವರಿಗೂ ಸಮಾಧಾನದ ಉತ್ತರ ಬರೆದು ಮತ್ತೊಮ್ಮೆ ಕೃತಿಯನ್ನು ಪುನರ್ ಸೃಷ್ಟಿಸಿರುವುದಾಗಿ ತಿಳಿಸಿದರು.

ಹದಿನೈದುದಿನ ಕಳಿತು ಅದೇ ಪ್ರಕಾಶದಲ್ಲಿ 'ತುಂಗಭದ್ರ' ಕೃತಿಯನ್ನು ಕಳಿಸಿದರು.

ಇಂದಿರಾ ಅವರ ಪತ್ರವನ್ನೂ, ಕೃತಿಯನ್ನೂ ನೋಡಿ ಕೆ. ಡಿ. ಕುರ್ತಕೋಟಿ ಯವರಿಗೂ ಅಶ್ಚರ್ಯವಾಯಿತು.

"ಕಾದಂಬರಿಯ ಬರವಣಿಗೆಯನ್ನು ಇಷ್ಟು ಬೇಗ ನೀವು ಮುಗಿಸಿದ್ದಕ್ಕೆ ಸಂತೋಷ ವಾಯಿತಲ್ಲದೆ ಆಶ್ಚರ್ಯವು ಆಯಿತು. ನೀವು ಮಾಡಲಾರಿರೆಂದಲ್ಲ. ಆದರೆ ಕೃತಿ ಕಳೆದುಹೋದ ಮೇಲೆ ಅವರ ಪುನರ್ರಚನೆ ಎಷ್ಟು ಕಷ್ಟವೆಂಬುದನ್ನು ನಾನು ಊಹಿಸ ಬಲ್ಲೆ. ಅಂತೂ ಬರೆದು ಮುಗಿಸಿ ನೀವು ಗೆದ್ದುದಲ್ಲದೆ ನಮ್ಮನ್ನೂ ಪಾರು ಮಾಡಿದಿರಿ. ಅದಕ್ಕಾಗಿ ನಿಮಗೆ ಎಷ್ಟು ಕೃತಜ್ಞನಾಗಿದ್ದರೂ ಸಾಲದು."[2] ಎಂದು ಬರೆದು ಕೃತಿಯ ವಿವರಗಳು ಮೊದಲಿಗಿಂತ ಹೆಚ್ಚು ಜೀವಂತವಾಗಿ ಮೂಡಿರುವುದನ್ನು ಕಂಡು ವಿಸ್ಮಯವಾಯಿತು.

---

1. ಅದೇ ; ಪುಟ–12
2. 13–3–1963 ರಂದು ಶ್ರೀ ಕೆ. ಡಿ. ಕುರ್ತಕೋಟಿಯವರು ಎಂ. ಕೆ. ಇಂದಿರಾ ಅವರಿಗೆ ಬರೆದ ಪತ್ರದ ಆಧಾರ.

   16–1–1963ರ ಶ್ರೀ ಕುರ್ತಕೋಟಿಯವರ ಪತ್ರದ ಆಧಾರ.

"ಅದನ್ನೋದಿದಂತೆ ಏನೇನೋ ಸಮಿಶ್ರ ಭಾವನೆಗಳು ಮನಸ್ಸಿನಲ್ಲಿ ಮೂಡಿದವು. ನಿಮ್ಮನ್ನ ಎಂಥ ತೊಂದರೆಗೆ ಗುರಿಮಾಡಿದೆನಲ್ಲ ಎಂದು ಸಂಕಟವಾಯಿತು. ಆದರೆ ಎಂಥ ಪ್ರಳಯಕಾಲದಲ್ಲೂ ಇನ್ನೊಂದು ಕೃತಿ ಸೃಷ್ಟಿಯಾಯಿತಲ್ಲ ಎಂದು ಸಂತೋಷವೂ ಆಯಿತು."

ಇದೇ ರೀತಿಯ ಪತ್ರವನ್ನು ಇಂದಿರಾ ಅವರಿಗೆ ಜಿ. ಬಿ. ಜೋಶಿಯವರೂ ಬರೆದರು. "ನಿಮ್ಮ ೨೫–೧೨–೬೨ರ ಪತ್ರ ನಿನ್ನೆ ಸಾಯಂಕಾಲ ಬಂದು ತಲುಪಿತು. ಕುದಿಯುತ್ತಿರುವ ಮನಸ್ಸಿಗೆ ತಂಪು ಕೊಟ್ಟಿತು. ನನಗೆ ದುಃಖ ಉಂಡುಂಡು ಸ್ಥಿಮಿತ್ವ ಪಡೆದ ಮನಸ್ಸಿನ ನಿಮ್ಮ ಬರವಣಿಗೆ ಎಲ್ಲಿಲ್ಲದ ಸಮಾಧಾನಕೊಟ್ಟಿತು. ನೀವು ಕೂಸನ್ನು ಕಳೆದುಕೊಂಡ ದುಃಖವನ್ನೇ ಅನುಭವಿಸಿರಬೇಕು. ಈ ಅಘಟಿತ ಘಟನೆ ನಮ್ಮೆಲ್ಲರ ಮನಸ್ಸುಗಳನ್ನು ವಿಚಲಿತ ಮಾಡಿತ್ತು. ಪತ್ರ ಬರೆಯುವಾಗಿನ ನನ್ನ ಉಮ್ಮಳವನ್ನು, ಅಯ್ಯೋ, ನೆನೆಸುವುದೇ ಬೇಡ. ನೀವೇ ಅದಕ್ಕೆ ಪರಿಹಾರ ಒದಗಿಸಿ ಉಮ್ಮಳ ಕಡಿಮೆ ಮಾಡಿದ್ದೀರಿ. ಮನೆಯ ಇಂತಹ ಪರಿಸ್ಥಿತಿಯಲ್ಲೂ ನೀವು ಮತ್ತೆ ಬರೆದು ಕೊಡುವ ಮನೋಸ್ಥೈರ್ಯ ತೋರಿಸಿದ್ದು ನನಗಂತೂ ಒಂದು ಬಹು ವಿಸ್ಮಯ ವನ್ನುಂಟುಮಾಡಿದೆ. ನೀವು ನಂಬಿದ ಕೃಷ್ಣ, ನಿಮ್ಮನ್ನು ಯಾವಾಗಲೂ ಕಾಯು ತ್ತಾನೆ. ನಿಮ್ಮ ಉದಾರ ಅಂತಃಕರಣಕ್ಕೆ ನಮಸ್ಕಾರ ಮಾಡುತ್ತೇನೆ."[1]

"ನಿಮ್ಮ ಪತ್ರ, ನಮ್ಮೆಲ್ಲರ ಸಮಸ್ಯೆಯನ್ನು ಎದೆ–ದುಗುಡವನ್ನು ಪರಿತಾಪ ವನ್ನು ಒಮ್ಮೆಲೇ ಕಡಿಮೆ ಮಾಡಿತು. ಆದರೂ ಅದಕ್ಕಾಗಿ ನೀವು ಸೂಚಿಸಿರುವ ಪರಿಹಾರ ಮತ್ತು ಮಾಡುತ್ತಿರುವ ಪ್ರಯತ್ನ ಇವೆಲ್ಲ ನಿಮ್ಮ ಮನೋಧೈರ್ಯವನ್ನು ಹೆಚ್ಚಿಸಿವೆ. ನಿಮ್ಮ ಹೃದಯ ವೈಶಾಲ್ಯಕ್ಕಾಗಿ, ಧೈರ್ಯಕ್ಕಾಗಿ ನಿಮ್ಮ ದೃಷ್ಟಿಯಲ್ಲಿಯ ವಿವೇಕಕ್ಕಾಗಿ, ನಿಮಗೆ ನನ್ನ ತಲೆ ತಾನಾಗಿ ಬಾಗುತ್ತದೆ"[2] ಎಂದು ಬರೆದರು. ಜೀವನದಲ್ಲಿಯಂತೆ ಸಾಹಿತ್ಯದಲ್ಲಿಯೂ ಇದ್ದ ಇಂದಿರಾ ಅವರ ಶ್ರದ್ಧೆಗೆ ಕೆ. ಡಿ. ಕುರ್ತ ಕೋಟಿಯವರು, ಮೆಚ್ಚಿಕೊಂಡು 'ತುಂಗಭದ್ರ'ದ ಮುನ್ನುಡಿಯಲ್ಲಿ "ಶ್ರೀಮತಿ ಇಂದಿರಾ ಅವರ ಈ ಕಾದಂಬರಿ, ಅವರ ಜೀವನ ಶ್ರದ್ಧೆಯ ಫಲವಾಗಿದೆ" ಎಂದು ಬರೆದಿದ್ದಾರೆ.

ಸತ್ವಪರೀಕ್ಷೆಯಲ್ಲಿ ಗೆದ್ದು ೧೯೬೩ರಲ್ಲಿ ತುಂಗಭದ್ರ ಪ್ರಕಟವಾಯಿತು. ಜನ ಮನದ, ಹಿರಿಯ ವಿಮರ್ಶಕರ ಮೆಚ್ಚಿಕೆ ಗಳಿಸಿತು. ೧೯೬೩ನೆಯ ಇಸ್ವಿ ಇಂದಿರಾ ಅವರ ಬದುಕಿಗೆ ಮಹತ್ವದ ತಿರುವು ತಂದ ವರುಷ. ಇಂದಿರಾ ಅವರ ಪ್ರಥಮ ಕಾದಂಬರಿ ಯಶಸ್ವಿಯಾಗಿ, ಅವರು ಪ್ರಸಿದ್ಧ ಕಾದಂಬರಿಗಾರ್ತಿಯೆನಿಸಿಕೊಂಡರು.

---

1. ಜಿ. ಬಿ. ಜೋಶಿಯವರು, ಎಂ. ಕೆ. ಇಂದಿರಾ ಅವರಿಗೆ 28–12–1962 ರಂದು ಬರೆದ ಪತ್ರ.
2. ಶ್ರೀ ಕೆ. ಡಿ. ಕುರ್ತಕೋಟಿ ಡಿಸೆಂಬರ್ 1962ರಂದು ಬರೆದ ಪತ್ರ.

"ತುಂಗಭದ್ರ" ಬರೆ ಹಸ್ತಪ್ರತಿ ಒಂದೇ ಒಂದು ಅಚಾತುರ್ಯದಿಂದ ಕಳೆದು ಹೋದುದು ಒಂದೂವರೆ ವರ್ಷದ ಬಳಿಕ ಇಂದಿರಾ ಅವರಿಗೆ ತಿಳಿದಾಗ, ಅದನ್ನು ಕೇವಲ ನೆನಪಿನ ಆಧಾರದ ಮೇಲೆ, ಹನ್ನೆರಡು ದಿನಗಳಲ್ಲಿ ಪುನರ್‌ಸೃಷ್ಟಿಸಿದ್ದು ಒಂದು ಸ್ವಾರಸ್ಯಕರ ಘಟನೆ"[1] ಎಂಬುದು ನೂರಕ್ಕೆ ನೂರು ಸತ್ಯ ಎಂಬುದನ್ನು ಮನಗಾಣ ಬಹುದು.

"ನನ್ನ ನಲವತ್ತಾರನೆಯ ವಯಸ್ಸಿನಲ್ಲಿ ಆಕಸ್ಮಿಕವಾಗಿ ನಾನು ಕಾದಂಬರಿಗಾರ್ತಿ ಯಾದೆ ; ಯಾಕೋ ಏನೋ ಹೇಳಲು ಬರುವುದಿಲ್ಲ. ಅದು ಅಲ್ಲಿ ಪ್ರಕಟವಾಗಿ ಬಂದದ್ದು, ಸಾರ್ವಜನಿಕರಿಗೆ ಅಚ್ಚರಿ ತಂದಿದ್ದರೂ ನನಗೇನೂ ಅಚ್ಚರಿ ಎನಿಸಿರಲಿಲ್ಲ. ಕತೆ, ಕಾದಂಬರಿ, ಓದುತ್ತಿದ್ದೆ. ಪತ್ರಿಕೆಗಳನ್ನು ಓದುತ್ತಿದ್ದೆ. ಮೊದಲ ಕೃತಿಯ ನಂತರ ಅನೇಕ ಪತ್ರಿಕೆಗಳಿಂದ ಬೇಡಿಕೆಗಳು ಬಂದಾಗ ಸ್ವಲ್ಪ ಹೆದರಿಕೆಯೂ ಆಯಿತು. ಜೊತೆಗೆ ವಿಚಿತ್ರ ಧೈರ್ಯವೂ ಬಂತು. 'ತುಂಗಭದ್ರ'ದ ವಿಮರ್ಶಕರು ನನ್ನ ಬರವಣಿಗೆಯ ಬಗೆಗೆ ಅನೇಕ ವಿಶೇಷಗಳನ್ನು ಸೇರಿಸಿದ್ದರು. ಕೃತಿಯಲ್ಲಿ ವಾಸ್ತವತೆ ಇದೆಯೇ ಹೊರತು ಪ್ರತಿಭೆ, ಪಾಂಡಿತ್ಯವೇನೂ ಇಲ್ಲ"[2] ಎಂದೂ ಬರೆದರು.

"ವಾಸ್ತವತೆಯ ವಸ್ತುಶಿಲ್ಪದ ಕೆಲವು ವಿಕಾರಗಳನ್ನು ಓದುಗರ ಕಣ್ಣಿನಿಂದ ಮರೆಮಾಡುವಷ್ಟು ಕಲ್ಪನೆ ಮಾತ್ರ ಇದೆ. ಅದೇ ಜನತೆಗೆ ಒಪ್ಪಿತವಾಗಿರಬಹುದು ಎಂದು ಅದೇ ಸೂತ್ರ ಹಿಡಿದೆ"[3] ಎಂದು ಇಂದಿರಾ ಅವರು ತಾವು ಸಾಹಿತ್ಯಕ್ಷೇತ್ರದಲ್ಲಿ ಮುಂದುವರೆದ ಬಗೆಗೆ ವಿನಮ್ರವಾಗಿ ಹೇಳಿದ್ದಾರೆ.

೧೯೬೩ರಿಂದ ಇಲ್ಲಿಯವರೆಗೆ ಎಲ್ಲ ಪತ್ರಿಕೆಯವರೂ, ಪ್ರಕಾಶಕರೂ ತಾವಾಗಿ ಕತೆ ಕಾದಂಬರಿ, ಲೇಖನ ಹರಟೆಯನ್ನು ಕೇಳಿ ಬರೆಸಿಕೊಂಡಿದ್ದಾರೆ.

ಅವರ ಎರಡನೆಯ ಕಾದಂಬರಿ 'ಸದಾನಂದವೂ' 'ತುಂಗಭದ್ರ' ಕಾದಂಬರಿಗಿಂತ ಕೆಳಗಿಳಿಯಲಿಲ್ಲ. ಅದಕ್ಕೂ ಹೆಚ್ಚಿನ ಜನಮನ್ನಣೆಯನ್ನು ಒಳ್ಳೆ ವಿಮರ್ಶೆಯನ್ನು ಪಡೆಯಿತು.

ಕಾದಂಬರಿಗಾರ್ತಿಯಾಗುವವರೆಗೆ ಎಂ ಇಂದಿರಮ್ಮ ಎಂಬ ಹೆಸರೇ ಇತ್ತು. ಆದರೆ ಪ್ರಥಮ ಕಾದಂಬರಿಯಲ್ಲಿ ಎಂ. ಕೆ. ಇಂದಿರಾ ಎಂದಿದ್ದುದರಿಂದ ಕೆಲವರು ಇಂದಿರಾ ಕಾಲೇಜು ತರುಣಿ ಇರಬೇಕೆಂದೇ ತಿಳಿದಿದ್ದರಂತೆ! ಇನ್ನೂ ಕೆಲವರು ಭಾವಚಿತ್ರಗಳನ್ನು ಕಳಿಸುವಂತೆ ಕೇಳಿದ್ದರಂತೆ. ಆದರೆ ಅವರ ಉತ್ಸಾಹ ಇಳಿದು ಹೋದೀತೆಂದು

---

1. ತರಂಗ ಜುಲೈ–1983 ಪುಟ 8
2. ನೋಡಿರಿ : 'ಕನ್ನಡನುಡಿ' ವಿಶೇಷ ಸಂಚಿಕೆ ಪತ್ರಿಕೆ ಮತ್ತು ಸಾಹಿತ್ಯ–ವಿಚಾರಸಂಕಿರಣ. 'ಪತ್ರಿಕೆ–ಸಂಬಂಧ–ಅನುಭವ ಲೇಖನ' 14 : 15 : 1980
3. ಅದೇ

ಇಂದಿರಾ ಅವರು ಯಾರಿಗೂ ಕಳಿಸಲಿಲ್ಲ. ಎಂ. ಕೆ. ಇಂದಿರಾ ಅವರು ದಿ|| ಎಂ. ಕೆ. ಜಯಲಕ್ಷ್ಮಿಯವರ ತಂಗಿ ಎಂದೂ ತಿಳಿದಿದ್ದರಂತೆ.

ಇಂದಿರಾ ಅವರ 'ತುಂಗಭದ್ರ' ಪ್ರಕಟವಾದಾಗ ಅವರಿಗೆ ನಲವತ್ತಾರು ವರ್ಷ. ಹಿರಿಯ ಮಗನ ಮದುವೆಯಾಗಿ ಆಗಲೇ ಮೊಮ್ಮಗಳು ಹುಟ್ಟಿ ಇಂದಿರಾ ಅವರು ಅಜ್ಜಿಯಾಗಿದ್ದರು.

ಇಂದಿರಾ ಅವರ ವ್ಯಕ್ತಿತ್ವ ಸ್ವಭಾವ :

ಇಂದಿರಾ ಅವರ ಸ್ವಭಾವ ಅವರ ಅಜ್ಜಿ, ತಾಯಿಯಂತೆ. ಪ್ರಶಾಂತ ಮೃದು ಸ್ವಭಾವ; ಸಹನೆಯುಳ್ಳದು. ಹೃದಯ ಶ್ರೀಮಂತಿಕೆ, ಔದಾರ್ಯ, ಸ್ಪಷ್ಟವಾದಿತ್ವ, ಇವೆಲ್ಲವುಗಳನ್ನು ಇಂದಿರಾ ಅವರು ಮೈಗೂಡಿಸಿಕೊಂಡಿದ್ದಾರೆ. ಅವರದು ನಿರಾಡಂಬರ ಬದುಕು. ಸರಳ ಸ್ವಭಾವ. ಮುಗ್ಧ ಮನಸ್ಸು. ಸಾಲುಸಾಲಾಗಿ ಪತ್ರಿಕೆಗಳ ಪ್ರಶಂಸೆ, ರಾಜ್ಯ ಪ್ರಶಸ್ತಿ ಬಂದಿದ್ದರೂ 'ಅಹಂಕಾರ' ಇವರ ಹತ್ತಿರ ಸುಳಿದಿಲ್ಲ.

ನೋವುಂಡ ಇಂದಿರಾ ಅವರದು ನಿರ್ಲಿಪ್ತ ಮನಸ್ಸು. ಬದುಕಿನುದ್ದಕ್ಕೂ ಕಷ್ಟಪಟ್ಟಿದ್ದಾರೆ. ವಾತ್ಸಲ್ಯ, ಮಾನವೀಯ ಅಂತಃಕರಣದಿಂದಾಗಿ ಎಲ್ಲರೊಂದಿಗೂ ಹೊಂದಿಕೊಳ್ಳುತ್ತಾರೆ. ಎಲ್ಲ ತರಹದ ಸ್ವಭಾವ, ವಯಸ್ಸಿನವರೊಂದಿಗೆ ಸರಳವಾಗಿ ಹೊಂದಿಕೊಂಡು ಬಹುಬೇಗನೇ ಆತ್ಮೀಯರಾಗಿ ಮನಸ್ಸನ್ನು ಗೆಲ್ಲುತ್ತಾರೆ; ಸರಳ ಸ್ವಭಾವದಿಂದಾಗಿ ಇಂದಿರಾ ಅವರ ಸಾಹಿತ್ಯಕ ಪರಿವಾರ ಬಹಳ ದೊಡ್ಡದಾಗಿ ಬೆಳೆಯುತ್ತಲೇ ಇದೆ.

"ಇಂದಿರಮ್ಮನವರದು ಹಾಲಿನಂತಹ ಮನಸ್ಸು, ಮುಗ್ಧಸ್ವಭಾವ. ಲೇಖಕಿಯರ ಸಂಘದ ಎಲ್ಲ ಚಟುವಟಿಕೆಗಳಲ್ಲೂ ಭಾಗವಹಿಸುತ್ತಾರೆ. ಸರಳತೆಯಿಂದ ಎಲ್ಲರೊಡನೆ ಮಾತನಾಡುತ್ತಾರೆ."[1]

"ಇಂದಿರಾ ಅವರು ನನಗೆ ಮಾತೃಸ್ಥಾನದಲ್ಲಿರುವರು. ಈ ಸಹೃದಯರ ಒಳ್ಳೆಯ ಸ್ವಭಾವಕ್ಕೆ ಎಂತಹವರೂ ಬೆರಗಾಗಲೇಬೇಕು. ಚುರುಕುಬುದ್ಧಿ, ಒಳ್ಳೆಯ ಮನಸ್ಸಿಗೆ ಈಕೆ ಸತ್‌ಸ್ವಭಾವದಿಂದಾಗಿ ನನಗೆ ತೀರಾ ಹತ್ತಿರದವರಾದರು." ಇಂದಿರಾ ಅವರದು ನಿರಾಡಂಬರ ನಿಲುವು. ಶಾಲಾಕಾಲೇಜುಗಳ ಕಟ್ಟೆ ಹತ್ತಿದವಳಲ್ಲ. ಈಕೆಗೆ ಬರೆಯುವ ಶಕ್ತಿ ಆದರೂ ಹೇಗೆ ಬಂತುಎಂದು ಅನೇಕರಿಗೆ ಅಚ್ಚರಿ. ಆಕೆ ಜಗತ್ತನ್ನು ತನ್ನ ಸುತ್ತಮುತ್ತಣ ಪರಿಸರವನ್ನು ನೋಡಿದಾಗ ಮನದಾಳದಲ್ಲಿ ಇಟ್ಟುಕೊಂಡ ಶಕ್ತಿಯನ್ನು ಅನುಭವಿಸಿ, ಲೇಖನಿಯಲ್ಲಿ ಹರಿಸುವ ಚೈತನ್ಯ, ಬರೆಯಲೇಬೇಕೆನ್ನುವ ಛಲ, ತಾನು ದೊಡ್ಡವಳೇನೋ ಅಲ್ಲ ಎಂಬನಿರಾಡಂಬರ ನಿಲುವು ಈ ಎಲ್ಲಾ ಉತ್ತಮ ಗುಣಗಳು

1. ಶ್ರೀಮತಿ ಎಚ್‌, ಎಸ್‌. ಪಾರ್ವತಿ. 8–10–1984ರಂದು ನನಗೆ ತಿಳಿಸಿದರು.

ಇರುವುದರಿಂದಲೇ ಇಂದಿರಾ,ಅವರೂ, ಅವರ ಕೃತಿಗಳೂ ಜನತೆಗೆ ಅಚ್ಚುಮೆಚ್ಚಾಗಿವೆ"[1] ಎಂದು ಇಂದಿರಾ ಅವರೊಡನೆ ನಿಕಟ ಸಂಬಂಧವಿರುವ ಲೇಖಕಿ ಎ. ಪಂಕಜಾ ಹೇಳಿರುವುದರಲ್ಲಿ ಸಂಪೂರ್ಣಸತ್ಯವಿದೆ.

"ಎಂ. ಕೆ. ಇಂದಿರಾ ಸಾತ್ವಿಕ ಜೀವಿ; ಸಾತ್ವಿಕತೆಗೆ ಇನ್ನೊಂದು ಹೆಸರು"[2] ಎಂದು ಇಂದಿರಾ ಅವರಿಗೆ ಬಹಳ ದಿನಗಳಿಂದ ಪರಿಚಿತರಾದ ಹಿರಿಯರೂ ಕಾದಂಬರಿಕಾರ ಕೃಷ್ಣಮೂರ್ತಿ ಪುರಾಣಿಕರೂ ಹೇಳುತ್ತಾರೆ.

"ಎಂ. ಕೆ. ಇಂದಿರಾ ಅವರ ವ್ಯಕ್ತಿತ್ವವೂ ತೀರ ಸರಳ, ಬಹುಬೇಗ ಎಲ್ಲರೊಡನೊಂದಾಗುವ ಸ್ನೇಹಜೀವಿ. ಗತ್ತು ಆಡಂಬರಗಳಿಲ್ಲದ ಬದುಕು. ಕಪಟ, ಮೋಸಗಳನ್ನರಿಯದ ವ್ಯಕ್ತಿತ್ವ. ಕಷ್ಟಗಳು ಬೇಕಾದಷ್ಟು ಬಂದು ಕಾಡಿದರೂ ಎಂ. ಕೆ. ಇಂದಿರಾ ಅವರು ಬದುಕಿಗೆ ಅಂಜಲಿಲ್ಲ. ಎಲ್ಲಾ ನೋವನ್ನು ನುಂಗಿ ತಮ್ಮದೇ ಆದ ವ್ಯಕ್ತಿತ್ವ ಬೆಳೆಸಿಕೊಂಡಿದ್ದಾರೆ.[3]

ಇಂದಿರಾ ಅವರು ತಮ್ಮ ಸುತ್ತ ಪವಿತ್ರವಾದ ವಲಯವನ್ನು ನಿರ್ಮಿಸಿಕೊಂಡಿದ್ದಾರೆ. ಹಿರಿಯರೆಲ್ಲ ಪ್ರಶಂಸಿಸುತ್ತಾರೆ. ಕಿರಿಯರೆಲ್ಲ ಗೌರವಿಸುತ್ತಾರೆ.

ಪ್ರೇಮಾಭಟ್ ಅವರು, "ಇಂದಿರಾ ಕೊಂಕು–ಕಪಟವನ್ನರಿಯದ ಮುಗ್ಧ ಮನಸ್ಸು ಅತಿ ಧಾರಾಳತೆ, ಅತಿ ಸಹನೆಯಿಂದಾಗಿ ಅವರು ಒಮ್ಮೊಮ್ಮೆ ತೊಂದರೆಗೀಡಾಗುತ್ತಾರೆ. ಇದು ಒಂದು ದೌರ್ಬಲ್ಯವೆಂದರೆ ತಪ್ಪಾಗಲಾರದು" ಎಂದಿದ್ದಾರೆ

"ನನ್ನ ಸಹನೆ ಒಂದೊಂದು ಸಾರಿ ನನಗೇ ಮುಳುವಾಗುತ್ತದೆ. ಆಗಲೇ ಸ್ವಾಭಿಮಾನ ನನ್ನ ರಕ್ಷಣೆಗೆ ಬರುವುದು"[4] ಎಂದು ಇಂದಿರಾ ಅವರೇ ಹೇಳಿರುವದನ್ನೂ ಗಮನಿಸಬೇಕು.

"ಸಾಹಿತ್ಯ ಸಮ್ಮೇಳನಗಳಲ್ಲಿ ನಾವೆಲ್ಲ ಲೇಖಕಿಯರು: ವಾಣಿ, ಎಂ. ಕೆ. ಇಂದಿರಾ ಅನುಪಮಾ, ಹೀಗೆ ಹೆಚ್ಚು ಕಡಿಮೆ ಸಮವಯಸ್ಕರು ಒಂದು ಗುಂಪಾಗುತ್ತೇವೆ. ಪ್ರೀತಿ ವಿಶ್ವಾಸಗಳ ಮಾತುಗಳನ್ನಾಡುತ್ತೇವೆ. ಇಂದಿರಾ ಅವರದು ಸರಳ ಸ್ವಭಾವ"[5]

---

1. ಶ್ರೀಮತಿ ಎ. ಪಂಕಜಾ ಅವರು ನನಗೆ 16–10–84 ರಂದು ಬರೆದ ಪತ್ರದಲ್ಲಿ ಮೇಲಿನಂತೆ ಇಂದಿರಾ ಅವರ ಸ್ವಭಾವದ ಬಗ್ಗೆ ತಿಳಿಸಿದ್ದರು.
2. ಶ್ರೀ ಕೃಷ್ಣಮೂರ್ತಿ ಪುರಾಣಿಕರು ಈ ಪ್ರಬಂಧಕಾರಳಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ. 13–10–1984.
3. ಶ್ರೀಮತಿ ಪ್ರೇಮಾಭಟ್ 18–10–1984ರ ಪತ್ರ.
4. ಎಂ. ಕೆ. ಇಂದಿರಾ ಅನುಭವ ಕುಂಜ ಪುಟ 17
5. ಶ್ರೀಮತಿ ಶಾಂತಾದೇವಿ ಮಾಳವಾಡ 9–12–1983 ರಂದು ತಿಳಿಸಿದರು.

ವಾಣಿ, ಗೀತಾಕುಲಕರ್ಣಿ, ಅನುಪಮಾನಿರಂಜನ, ಶಾಂತಾದೇವಿ ಮಾಳವಾಡ, ಎಂ. ಕೆ. ಇಂದಿರಾ, ಇನ್ನು ಅನೇಕ ಲೇಖಕಿಯರೆಲ್ಲ ಸೋದರಿಯರಂತೆ ಇದ್ದಾರೆ. ಎ. ಪಂಕಜ, ಪ್ರೇಮಾಭಟ್ಟ ಡಾ. ಎಚ್. ಎಸ್. ಸುಜಾತ; ರೇಖಾ ಕಾಖಂಡಕಿ, ಇವರೆಲ್ಲ ಇಂದಿರಾ ಅವರ ವಾತ್ಸಲ್ಯದ ಮಮತೆಯ ಸವಿಯನ್ನುಂಡಿದ್ದಾರೆ.

ಲೇಖಕಿಯರ ಸಂಘದ ಅಧ್ಯಕ್ಷೆ ಹಾಗೂ ಲೇಖಕಿ ಎಚ್. ಎಸ್. ಪಾರ್ವತಿ ಯವರು, ಇಂದಿರಾ ಅವರಿಗೆ ಸಂಬಂಧಿಕರು ಅವರಿಗೂ ಇಂದಿರಾ ಅವರು ಆತ್ಮೀಯ ರಾಗಿದ್ದಾರೆ. ಗೀತಾ ಕುಲಕರ್ಣಿಯವರು ಇಂದಿರಾ ಅವರನ್ನು ಒಡಹುಟ್ಟಿದ ಅಕ್ಕನಂತೆ ಕಾಣುತ್ತಾರೆ. ಕಿರಿಯರಿಗೆಲ್ಲ ಇಂದಿರಾ ಅವರು ಪ್ರೋತ್ಸಾಹ ನೀಡುತ್ತಾರೆ.

ಎಂ. ಕೆ. ಇಂದಿರಾ ಅವರ ಮಕ್ಕಳು :

ಎಂ. ಕೆ. ಇಂದಿರಾ ಅವರಿಗೆ ಒಟ್ಟು ಎಂಟು ಜನ ಮಕ್ಕಳು ನಾಲ್ಕು ಮಕ್ಕಳನ್ನು ಕಳೆದುಕೊಂಡಿದ್ದಾರೆ. ನಾಲ್ಕೂ ಜನ ಮಕ್ಕಳು ಬೆಂಗಳೂರಿನಲ್ಲಿಯೇ ಸಂಸಾರ ಮಾಡಿ ಕೊಂಡಿದ್ದಾರೆ.

ಹಿರಿಯ ಮಗ ಎಂ. ಕೆ. ಸುಬ್ಬರಾವ್, ಕಿರ್ಲೋಸ್ಕರ ಕಂಪನಿಯಲ್ಲಿ ಎಂಜನೀಯರ್. ಅವರ ಪುತ್ರಿ ಪ್ರಭಾ. ಅವರಿಗೆ ಎರಡು ಮಕ್ಕಳು ಹಿರಿಯ ಮಗಳು ವಾಸಂತಿ (ವಸಂತಲಕ್ಷ್ಮಿ) ಅವಳಿಗೆ ಇಪ್ಪತ್ತೆರಡುವರ್ಷ. ಮೊಮ್ಮಗ ಸದಾನಂದ.

ಎರಡನೆಯವರು ಎಂ. ಕೆ. ಮಂಜುನಾಥ ಕೆ. ಎಸ್. ಆರ್. ಟಿ. ಸಿ. ಯಲ್ಲಿ ಗುಮಾಸ್ತ (ಕ್ಲಾರ್ಕ್) ಆಗಿದ್ದಾರೆ. ಅವರ ಪತ್ನಿ ಲಲಿತಾ ಗುರುದತ್ತ ಹಾಗೂ ಮಧುಕರ ಎಂಬ ಎರಡು ಗಂಡುಮಕ್ಕಳು.

ಮೂರನೆಯವರು ಎಂ. ಕೆ. ಶಂಕರ್ ವಿಜಯಾ ಬ್ಯಾಂಕಿನಲ್ಲಿದ್ದಾರೆ. ಅವರ ಪತ್ನಿಯ ಹೆಸರು ಉಮಾ. ಒಂದು ಹೆಣ್ಣು ಮಗುವಿದೆ ಅವಳ ಹೆಸರು ಪೂರ್ಣಿಮಾ.

ಮಗಳು ಅನ್ನಪೂರ್ಣ. ಶಿರಹಟ್ಟಿಯ ರಂಗನಾಥ್ ದೇಸಾಯಿಯವರೊಂದಿಗೆ ಮದುವೆಯಾಗಿದೆ. ಅನ್ನಪೂರ್ಣ ಬಿ.ಎ. ಪದವೀಧರೆ; ಕನ್ನಡ ವಿಷಯ ಅವರ ಪದವೀ ಪರೀಕ್ಷೆಗೆ ವಿಷಯವಾಗಿತ್ತು.

ಕೃಷ್ಣರಾಯರಿದ್ದಾಗ ಸುಬ್ಬರಾವ್ ಒಬ್ಬರಿಗೇ ಮದುವೆಯಾಗಿತ್ತು. ಮೂರು ಜನ ಮಕ್ಕಳ ಮದುವೆ, ಸಂಸಾರದ ಸಮಸ್ತ ಜವಾಬ್ದಾರಿಯನ್ನು ಇಂದಿರಾ ಅವರೇ ನಿರ್ವಹಿಸಿದ್ದಾರೆ. ಯಾವುದಕ್ಕೂ ಯಾರ ಸಹಾಯವನ್ನೂ ಯಾಚಿಸಿದವರಲ್ಲ. ಮೊದಲಿನಿಂದಲೂ ಸಂಸಾರ ನಿರ್ವಹಣೆಯಲ್ಲಿ ಇಂದಿರಾ ಅವರದೇ ಹೆಚ್ಚಿನ ಪಾತ್ರ.

ಮೂರೂಜನ ಗಂಡುಮಕ್ಕಳ ಮದುವೆಯಲ್ಲಿ ಅವರು ವರದಕ್ಷಿಣೆ ತೆಗೆದು ಕೊಂಡಿಲ್ಲ. ತಮ್ಮ ಅಂತಸ್ತಿಗೆ ತಕ್ಕ ಕನ್ಯೆಯನ್ನು ನೋಡಿ ಮದುವೆ ಮಾಡಿದ್ದಾರೆ.

'ವರದಕ್ಷಿಣೆ'ಯ ಪಿಡುಗನ್ನು ಮನೆಯಿಂದ ಹೊರಗೆ ಹಾಕಿದ್ದಾರೆ. ಮಗಳು ಅನ್ನಪೂರ್ಣೆಯ ಮದುವೆಗೂ ವರದಕ್ಷಿಣೆ ಕೊಟ್ಟಿಲ್ಲ. ಆದರೆ ಮುದ್ದಿನ ಮಗಳೆಂದು ಇಂದಿರಾ ಅವರು ತಾವೇ ಪ್ರೀತಿಯಿಂದ ಅವಳಿಗೆ ಕೆಲ ವಸ್ತು-ಒಡವೆಗಳನ್ನು ಕೊಟ್ಟು ಸಂತಸಪಟ್ಟಿದ್ದಾರೆ.

ಮೂರು ಜನ ಮಕ್ಕಳು ಸ್ವಂತ ಮನೆ ಕಟ್ಟಿಸಿಲ್ಲ. ಇಂದಿರಾ ಅವರು ವಿಲ್ಸನ್ ಗಾರ್ಡನ ಕ್ಷೇತ್ರದಲ್ಲಿ ಬಾಡಿಗೆ ಮನೆಯಲ್ಲಿಯೇ ಇದ್ದಾರೆ. ಕೆಳಗೆ ಮಗ ಮಂಜುನಾಥ ವಾಸಿಸುತ್ತಾರೆ. ನೀರಿನ ತೊಂದರೆಯಿಂದಾಗಿ ಎಲ್ಲರೂ ಬೇರೆ ಮನೆ ಮಾಡಿದ್ದಾರೆ.

ಮೂರು ಜನ ಸೊಸೆಯಂದಿರು ಒಳ್ಳೆಯ ಗೃಹಿಣಿಯರು. ಅತ್ತೆಯನ್ನು ಪ್ರೀತಿ, ಗೌರವದಿಂದ ನೋಡಿಕೊಳ್ಳುತ್ತಾರೆ. ಸ್ವತಃ ವಿಚಾರವಂತೆಯಾದ ಇಂದಿರಾ ಅವರು ಸೊಸೆಯಂದಿರಿಗೆ, ಸಂಪ್ರದಾಯ ಶಾಸ್ತ್ರಗಳ ಕಟ್ಟುನಿಟ್ಟನ್ನು ಹೇರಿಲ್ಲ. "ಮಕ್ಕಳು ಸೊಸೆ, ಮೊಮ್ಮಕ್ಕಳೆಲ್ಲ ನಾಲ್ಕು ಜನರಲ್ಲಿ ಒಳ್ಳೆಯವರೆನಿಸಿಕೊಂಡು ಬಾಳಿದರೆ ಅದೇ ನನಗೆ ಸಂತೋಷ" ಎನ್ನುತ್ತಾರೆ ಇಂದಿರಾ.

ಮಕ್ಕಳು, ಸೊಸೆಯಂದಿರಿಗೆ ಇಂದಿರಾ ಅವರ ಸಾಹಿತ್ಯದ ಬಗೆಗೆ ಬಹಳ ಅಭಿಮಾನ. ಎಲ್ಲ ಕೃತಿಗಳನ್ನು ಓದುತ್ತಾರೆ. ಕಿರಿಯ ಮೊಮ್ಮಗಳು ನಾಲ್ಕು ವರ್ಷದ ಪೂರ್ಣಿಮಾ, ಅಜ್ಜಿಗೆ ಬಲು ಪ್ರೀತಿಯವಳು. ಎಲ್ಲ ಮೊಮ್ಮಕ್ಕಳಲ್ಲೂ ಒಂದೇ ಬಗೆಯ ಪ್ರೀತಿ ಆದರೆ ಪೂರ್ಣಿಮಾ ಅಜ್ಜಿಗೆ ಅಂಟಿಕೊಂಡರೆ ಮೂರು ನಾಲ್ಕು ತಾಸುಗಳವರೆಗೂ ಅಜ್ಜಿಯನ್ನು ಬಿಡುವುದಿಲ್ಲ. ಏಕೆಂದರೆ ಅಜ್ಜಿ ಇಂದಿರಾ ಹೇಳುವ ಕತೆಗಳೆಲ್ಲ ಅವಳಿಗೆ ಅಚ್ಚುಮೆಚ್ಚು.

"ನಾನು ಈಗ ಅವಳಿಗೆ ಭಾಗವತ, ರಾಮಾಯಣ, ಮಹಾಭಾರತದ ಸುಮಾರು ಎಲ್ಲ ಕತೆಗಳನ್ನೂ ಹೇಳಿ ಮುಗಿಸಿದ್ದೇನೆ" ಎಷ್ಟು ಕತೆ ಹೇಳಿದರೂ ಅವಳಿಗೆ ತೃಪ್ತಿಯಿಲ್ಲ. ಮಾತಿಗೊಂದು ಪ್ರಶ್ನೆ ಕೇಳುತ್ತಾಳೆ. ಅವಳಲ್ಲಿ ಕತೆಗಾರ್ತಿಯಾಗುವ ಲಕ್ಷಣಗಳಿವೆ. ಎಂದು ಇಂದಿರಾ ಮೊಮ್ಮಗಳ ಬಗೆಗೆ ತುಂಟುತನವನ್ನು ಮೆಚ್ಚಿಯೂ ಹೀಗೆ ಹೇಳುತ್ತಾರೆ.

ಇಂದಿರಾ ಅವರು 'ತುಂಗಭದ್ರಾ' ಬರೆದಾಗ, ಅವರ ಹಿರಿಸೊಸೆ ಪ್ರಭಾಗೆ ಕೇವಲ ಹದಿನೆಂಟು ವರ್ಷ. ತುಂಬ ಸಹಕಾರವನ್ನಿತ್ತ ಆ ಸೊಸೆಯ ಬಗೆಗೆ ಬಹಳ ಅಭಿಮಾನ. ಮನೆಯ ಸಮಸ್ತ ಜವಾಬ್ದಾರಿಯನ್ನು ನೋಡಿಕೊಂಡು ಇಂದಿರಾ ಅವರ ಬರಹಕ್ಕೆ ಸಹಕಾರವನ್ನಿತ್ತಿದ್ದಾಳೆ,

ವಾತ್ಸಲ್ಯ ಮಾನವೀಯ ಅಂತಃಕರಣ, ಔದಾರ್ಯ, ಸರಳತೆ, ಕಿರಿಯರಿಗೆ ಪ್ರೋತ್ಸಾಹ, ಹಿರಿಯರಲ್ಲಿ ಗೌರವ, ಎಲ್ಲರ ಕಷ್ಟ-ಸುಖಗಳಲ್ಲಿ ಭಾಗಿಯಾಗುವುದು, ತಾನು ಸಾಧಿಸಿದುದು ಏನೂ ಅಲ್ಲ. 'ಸಿಂಧುವಿನಲ್ಲೊಂದು ಬಿಂದು' ಎಂಬ ವಿನಮ್ರತೆ ಇವೆಲ್ಲ ಇಂದಿರಾ ವ್ಯಕ್ತಿತ್ವದಲ್ಲಡಗಿದ ಹಿರಿಯ ಆದರ್ಶದ ಗುಣಗಳಾಗಿವೆ.

ಒಮ್ಮೆ ಕನ್ನಡ ರಾಜ್ಯೋತ್ಸವದ ಕಾರ್ಯಕ್ರಮ. ಅಂದಿನ ಕಾರ್ಯಕ್ರಮದಲ್ಲಿ ಚಿತ್ರರಂಗದವರೇ ಹೆಚ್ಚಾಗಿ ಭಾಗವಹಿಸಿದ್ದರಂತೆ. ಸಾಹಿತಿ ಎನಿಸಿಕೊಂಡವರಲ್ಲಿ ಇಂದಿರಾ ಒಬ್ಬರೇ. ಸಿನಿಮಾ ನಟರ ಗದ್ದಲದಲ್ಲಿ ಇಂದಿರಾ ಅವರಿಗೆ ಹೋಗಲೂ ಇಷ್ಟವಿರಲಿಲ್ಲ. ಬಿಡಲೂ ಸಾಧ್ಯವಿರಲಿಲ್ಲ. ಕಾರಣ ಅಲ್ಲಿ ಭಾಷಣಕ್ಕಿಂತ ಸಿನಿಮಾ ನಟನಟಿಯರ ದರ್ಶನಕ್ಕೆ ಸಾಮಾನ್ಯವಾಗಿ ಜನ ಸೇರಿದ್ದರು.

ಚಿತ್ರರಂಗದ ಪ್ರತಿಭಾವಂತ ಕಲಾವಿದರೆಲ್ಲ ಅಲ್ಲಿ ಸೇರಿದ್ದರಂತೆ. ಮೊದಲಿಗೇ ಇಂದಿರಾ ಅವರ ಭಾಷಣ. ದಿನವೂ ಭಾಷಣ ಮಾಡಿ ಅಭ್ಯಾಸವಾದುದರಿಂದ ಇಂದಿರಾ, ನಾಲ್ಕು ಮಾತಿನಲ್ಲಿ ಸಂಕ್ಷಿಪ್ತವಾಗಿ ಹೇಳಿ ಹಿಂದಿನ ಸಾಲಿನಲ್ಲಿ ಹೋಗಿ ಕೂತರಂತೆ. ಶಿವರಾಂ (ನಟ) ಅವರು ತಮ್ಮ ಭಾಷಣದಲ್ಲಿ ಹಾಸ್ಯಶೈಲಿಯಲ್ಲಿ ಮಾತನಾಡುತ್ತ ಇಂದಿರಾ ಅವರ ಹೆಸರು ಎತ್ತಿ,

"ಈಗ ಇಂದಿರಮ್ಮನೋರಿಂದ ಒಂದ ನೀತಿ ಕಲಿತೆ. ಅವರು ತಮ್ಮ ಭಾಷಣ ಮುಗಿದ ಕೂಡಲೆ 'ಈಗ ನಿಮ್ಮ ಸರದಿ ನನ್ನ ಕೆಲಸ ಮುಗಿಯಿತು. ನಾನು ಹಿಂದಕ್ಕೆ ಹೋಗ್ತೈನೆ ನೀವು ಇಲ್ಲಿ ಬನ್ನಿ. ಜನ ನಿಮ್ಮನ್ನು ನೋಡಬೇಕೂಂತ ಕಾಯ್ತಾ ಇದ್ದಾರೆ" ಎಂದು ಹೇಳಿ ತಾವು ಹಿಂದಿನ ಸೀಟಿಗೆ ಹೋಗಿ ಕುಳಿತರು. ಎಂಥಾ ನೀತಿ ನೋಡಿ', ಈ ಮಾತು ಎಲ್ಲಾ ಜನಾಂಗಕ್ಕೂ ಅನ್ವಯಿಸುತ್ತದೆ. ಯಾರೇ ಆಗಲಿ, ಒಂದು ಕ್ಷೇತ್ರ ದಲ್ಲಿ ತಮ್ಮ ಪಾಲಿನ ಕರ್ತವ್ಯ ಮುಗಿದೊಡನೆ ತಾವು ಹಿಂದೆಸರಿದು ನಮ್ಮ ಉತ್ಸಾಹಿ ಕಿರಿಯರಿಗೆ ದಾರೀ ಬಿಟ್ಟು ಅವರ ಉತ್ಕರ್ಷ ಹಾರೈಸುವುದು ನಮ್ಮ ಆದ್ಯ ಕರ್ತವ್ಯ ಮತ್ತು ಭೂಷಣಪ್ರದವೂ ಹೌದು"[1] ಎಂದು ಇಂದಿರಾ ಅವರ ಹಿರಿತನವನ್ನು ಮೆಚ್ಚಿ ಕೊಂಡರು.

ಶಿವರಾಂ ಅವರು ಅದನ್ನು ಒಳ್ಳೆಯ ನೀತಿಯಾಗಿ ಸ್ವೀಕರಿಸಿದ್ದರು. ಇಂದಿರಾ ಅವರಿಗೆ ಪ್ರತಿಹೆಜ್ಜೆಗೂ ಶಿವರಾಂ ಅವರ ಮಾತು ನೆನಪಿಗೆ ಬರುತ್ತದೆ.

"ಬದುಕಿನಲ್ಲಿ ಹೊಸ ಹೆಜ್ಜೆ ಇಡುತ್ತಿರುವವರಿಗೆ ನಾವು ಪ್ರೋತ್ಸಾಹ ಕೊಡ ಬೇಕು" ಎಂಬುದನ್ನು ಅರಿತಿದ್ದಾರೆ. ಹೀಗೆ ಇಂದಿರಾ ಅವರ ಒಂದೊಂದು ಅನುಭವವೂ ಅರ್ಥವತ್ತಾಗಿದೆ.

"ಕರ್ಮವೀರ" ದೀಪಾವಳಿ ವಿಶೇಷಾಂಕದಲ್ಲಿ ಪ್ರಕಟವಾದ 'ತಾಪದಿಂದ ತಂಪಿಗೆ' ಎಂಬ ಕಿರುಕಾದಂಬರಿಯನ್ನು ಮೆಚ್ಚಿ ಅಭಿಮಾನಿಗಳನೇಕರ ಪತ್ರಗಳು ಇಂದಿರಾ ಅವರಿಗೆ ಬಂದಿದ್ದವು. ಅವುಗಳಲ್ಲಿ ಕೃಷ್ಣಮೂರ್ತಿ ಪುರಾಣಿಕರ ಪತ್ರವೂ ಬಂದಿತ್ತು. ಇಂದಿರಾ ಅವರು ಬರೆಯಲು ಪ್ರಾರಂಭಿಸಿ ಎರಡು ವರ್ಷಗಳಾಗಿದ್ದವು. "ನನಗಿಂತಲೂ ಎಲ್ಲಾ ವಿಧದಲ್ಲೂ ಹಿರಿಯರಾದ ಒಬ್ಬ ಸಹೃದಯ ಸಾಹಿತಿಯಿಂದ ಮೆಚ್ಚಿಗೆಯ ಪತ್ರ

1. ಎಂ. ಕೆ. ಇಂದಿರಾ 'ಅನುಭವ ಕುಂಜ' ಪುಟ 97.

ಬಂದುದು ನನಗೆ ಹೆಮ್ಮೆಯೆನಿಸಿತು." ದೀಪಾವಳಿ ಸಂಚಿಕೆಯಲ್ಲಿ ಪ್ರಕಟವಾದ ನನ್ನ 'ತಾಪದಿಂದ ತಂಪಿಗೆ' ಕಾದಂಬರಿಯ ಬಗೆಗೆ ಬರೆಯುತ್ತ 'ಆತ್ಮೀಯ ಸೋದರಿ ಇಂದಿರಮ್ಮನವರೇ, ದೀಪಾವಳಿ ಸಂಚಿಕೆಯ ನಿಮ್ಮ 'ತಾಪದಿಂದ ತಂಪಿಗೆ' ಕೃತಿ ಬಹಳ ಹಿಡಿಸಿತು. ಯಾವ ಕಾರಣದಿಂದಲೂ ನಿಮ್ಮ ಬರವಣಿಗೆಯನ್ನು ನಿಲ್ಲಿಸಬೇಡಿ. ನಿಮ್ಮಿಂದ ಸಾಹಿತ್ಯ ಲೋಕಕ್ಕೆ ಇನ್ನೂ ಹೆಚ್ಚಿನ ಕೊಡುಗೆ ಬರಲಿ"[1] ಎಂದು ಇಂದಿರಾ ಅವರಿಗೆ ಹಾರೈಸಿ ಪತ್ರ ಬರೆದಿದ್ದರಂತೆ. "ಅವರ ಹರಕೆಯೋ ಏನೋ ಮುಂದೆ ಹಲವಾರು ಪತ್ರಿಕೆಗಳಿಂದ ಬೇಡಿಕೆ ಬಂದಿತು"[2] ಎಂದು ಇಂದಿರಾ ಅವರು ಕೃಷ್ಣ ಮೂರ್ತಿ ಪುರಾಣಿಕರಿಂದ ದೊರೆತ ಪ್ರೋತ್ಸಾಹವನ್ನು ವಿನಮ್ರರಾಗಿ ಗೌರವ, ಅಭಿಮಾನಗಳಿಂದ ನೆನೆಯುತ್ತಾರೆ.

ಒಂದುಬಾರಿ ಪುರಾಣಿಕರು ಪ್ರಜಾವಾಣಿ ಆಫೀಸಿಗೆ ಹೋಗಿ ಸಂಪಾದಕ ಟಿ. ಎಸ್. ರಾಮಚಂದ್ರರಾಯರಿಗೆ "ಏನು ರಾಮಚಂದ್ರರಾಯರೇ, ಯಾರು ಯಾರದ್ದೋ ಕತೆ ಕಾದಂಬರಿ ನಿಮ್ಮ ಪತ್ರಿಕೇಲಿ ಹಾಕ್ತೀರಿ. ನಿಮ್ಮ ಅಕ್ಕ ಎಷ್ಟು ಛಲೋ ಬರೀತಾರ. ಇಲ್ಲಿಯವರೆಗೆ ಅವರದ್ದು ಒಂದನ್ನೂ ನೀವು ಪ್ರಕಟಿಸಿಲ್ಲ. ಮನೇಲಿ ಬೆಣ್ಣೆ ಇಟ್ಟು ಕೊಂಡು ತುಪ್ಪಕ್ಕೆ ಅಲೀತಿದ್ದ ಸಮಾಚಾರ ಆಯ್ತು"[3] ಎಂದು ಟಿ. ರಾಮಚಂದ್ರ ರಾಯರಿಗೆ ಛೂಛಾಣ ಬಿಟ್ಟಿದ್ದರಂತೆ.

ಒಮ್ಮೆ ಇಂದಿರಾ ಅವರೊಡನೆ ಮಾತನಾಡುತ್ತ ಅವರ ತಮ್ಮ ಟಿ. ಎಸ್. ರಾಮಚಂದ್ರರಾವ್ ಅವರು ಛೂಬಾಣದ ಧಾಟಿಯಲ್ಲೇ ಹೇಳಿ ನಕ್ಕರಂತೆ. ಸಂಪಾದಕ ತಮ್ಮ ತಮ್ಮನೇ ಆಗಿದ್ದರೂ ಕೂಡ ಇಂದಿರಾ ಅವರು ತಮ್ಮ ಯಾವ ಕೃತಿಯನ್ನೂ ಪ್ರಕಟಿಸು ಎಂದು ಕೇಳಲಿಲ್ಲ. ಇದು ಅವರ ಸ್ವಾಭಿಮಾನವನ್ನು ತೋರಿಸುತ್ತದೆ.

ಮುಂದೆ ಶ್ರೀಯುತ ಖಾದ್ರಿ ಶಾಮಣ್ಣನವರ ಒತ್ತಾಯದಿಂದ, 'ಗೆಜ್ಜೆಪೂಜೆ' ಯಿಂದ ಪ್ರಜಾವಾಣಿಯಲ್ಲಿ ಪ್ರಕಟವಾಗಿ, ಪ್ರಜಾವಾಣಿಯ ಲೇಖಕಿಯಾಗಿ ಇಂದಿರಾ ಅವರು ಮುಂದೆ ಹೆಜ್ಜೆ ಇಟ್ಟರು.

ಮಾನಸ ಗಂಗೋತ್ರಿಯ ಸುವರ್ಣ ಮಹೋತ್ಸವದಲ್ಲಿ ಹಲವು ಹಿರಿಯ ಸಾಹಿತಿ ಗಳೊಡನೆ ಇಂದಿರಾ ಅವರು ಭಾಗವಹಿಸಿದ್ದರು. ಅಲ್ಲಿ ಆಮಂತ್ರಿತರಾದ ಮಹಿಳೆ ಯರೆಂದರೆ ಎಂ. ಕೆ. ಇಂದಿರಾ ಹಾಗೂ ಉಷಾದೇವಿ.

"ಹಿರಿಯ ಸಾಹಿತಿಗಳೆಲ್ಲ ಬಂದಿದ್ದರು, ಕಡಲ ತೀರದ ಭಾರ್ಗವ ಶಿವರಾಮ ಕಾರಂತರೂ ಬಂದಿದ್ದರು. ಉದ್ದೇಶಪೂರ್ವಕವಲ್ಲದಿದ್ದರೂ ಯೋಗಾಯೋಗವೋ

---

1. ವಿದ್ಯಾಪುರಾಣಿಕ (ಸಂ.) 'ಸೌಭಾಗ್ಯವತಿ', ಎಂ. ಕೆ. ಇಂದಿರಾ ಅವರ ಲೇಖನ 'ಲೋಕಪಾವನೆ' ಪುಟ 9
2. ಅದೇ
3. ಅದೇ ಪುಟ 10

ಆಕಸ್ಮಿಕವೋ ಊಟಕ್ಕೆ ಕೂಡುವಾಗ ನಾನು ಹಾಗೂ ಕಾರಂತರು, ಪುರಾಣಿಕರು ಒಂದೆಡೆ ಸೇರಿಬಿಡುತ್ತಿದ್ದೆವು. ಕಾರಂತರು ನನ್ನ ಮುಖ ಕಂಡೊಡನೆ 'ಬನ್ನಿ ತಾಯಿ' ಎಂದು ನನಗೆ, ನನ್ನ ಮಗನಿಗೆ ತಮ್ಮ ಹತ್ತಿರದ ಸ್ಥಳಕೊಡುತ್ತಿದ್ದರು"[1] ಎಂದು ಇಂದಿರಾ ಅವರು ಕಾರಂತರೊಂದಿಗೆ ಆದ ಪರಿಚಯವನ್ನು ಅವರ ಹಿರಿತನವನ್ನು ಅಭಿಮಾನದಿಂದ ನೆನೆಯುತ್ತಾರೆ. ಹಿರಿಯ ಲೇಖಕಿ ಇಂದಿರಾ ಅವರಿಗೆ ಎಲ್ಲರಿಂದಲೂ ಗೌರವದ 'ತಾಯಿ'ಯ ಸ್ಥಾನ ಇಂದು ದೊರಕಿದೆ.

ಇಂದಿರಾ ಅವರ ಆಯಾಸಗೊಂಡ ಮನಸ್ಸು ಸದಾ ಪ್ರಶಾಂತ ಜೀವನ, ಪ್ರಶಾಂತವಾತಾವರಣವನ್ನು ಬಯಸುತ್ತದೆ.

"ಸಂಸಾರ ನೌಕೆ ಬಿರುಗಾಳಿಗೆ ಸಿಕ್ಕಿ, ಒಂದೆಡೆ ಬಡಿದು, ಹಲವು ಆತ್ಮೀಯ ಜೀವಿಗಳನ್ನು ಕಳೆದುಕೊಂಡು ಬೆಂದು–ಬೇಗುದಿ ಹೊಂದಿದ್ದರೂ, ಮನಸ್ಸನ್ನು ತಾತ್ಕಾಲಿಕವಾಗಿಯಾದರೂ ತುಸು ಸಾಂತ್ವನಗೊಳಿಸುವ ದಿವ್ಯ ಚೈತನ್ಯ ಈ ಪ್ರಕೃತಿ ದೇವಿಗಿದೆ"[2] ಎಂಬ ನಂಬಿಕೆಯಿಂದ ಎಂಟು ವರ್ಷಗಳ ಹಿಂದೆ ದಕ್ಷಿಣ ಭಾರತದ ಪುಣ್ಯ ಕ್ಷೇತ್ರ ದರ್ಶನ ಮಾಡಿಕೊಂಡು ಬಂದಿದ್ದಾರೆ. ಪ್ರವಾಸಮಾಡಿ ಅನುಭವ ಪಡೆಯುವ ದೃಷ್ಟಿ ಇಂದಿರಾ ಅವರದು.

"ಏಷ್ಯನ್ ಟ್ರಾವಲ್ಸ್"ನ ಮಾಲೀಕರಾಗಿದ್ದ ದಿ|| ಹೆಚ್. ವಿ. ನಾರಾಯಣ್ ಅವರು ನನ್ನನ್ನು ಒತ್ತಾಯ ಪೂರ್ವಕವಾಗಿ ದಕ್ಷಿಣ ಭಾರತದ ಪ್ರವಾಸಕ್ಕೆ ಕಳಿಸಿದರು. ಅವರ ಒತ್ತಾಯವಿಲ್ಲದಿದ್ದರೆ ಖಂಡಿತಾ ನನ್ನ ಪ್ರವಾಸವಾಗುತ್ತಿರಲಿಲ್ಲ"[3] ಎಂದು ಬರೆದಿದ್ದಾರೆ. ಎಚ್. ವಿ. ನಾರಾಯಣ್ ಅವರು ಇಂದಿರಾ ಅವರ ಕುಟುಂಬದ ಆತ್ಮೀಯ ಬಂಧು.

"ನನ್ನ ಜೀವಿತದಲ್ಲಿ ಅವರನ್ನು ಮರೆಯಲು ಸಾಧ್ಯವೇ ಇಲ್ಲ"[4] ಎಂದು ಇಂದಿರಾ ಅವರನ್ನು ನೆನೆಯುತ್ತಾರೆ. ಹದಿನೇಳು ದಿನಗಳ ಪ್ರವಾಸದ ಅನುಭವವನ್ನು 'ಅನುಭವಕುಂಜ' ಎಂಬ ಪ್ರವಾಸ ಕಥನವನ್ನು ಬರೆದು ಅದನ್ನು ದಿ|| ಹೆಚ್. ವಿ. ನಾರಾಯಣ್ ಅವರಿಗೆ ಅರ್ಪಿಸಿದ್ದಾರೆ.

ಜೀವನದುದ್ದಕ್ಕೂ ಪೆಟ್ಟಿನ ಮೇಲೆ ಪೆಟ್ಟು ತಿಂದ ಇಂದಿರಾ ಅವರ ಮನಸ್ಸು ಇಂದು ಹಿಗ್ಗುವ ಕುಗ್ಗುವ ಭಾವಗಳಿಂದ ಮುಕ್ತವಾಗಿ ಸಮತೆಯನ್ನು ಹೊಂದಿದೆ.

---

1. ವಿದ್ಯಾಪುರಾಣಿಕ (ಸಂ) ಸೌಭಾಗ್ಯವತಿ ಎಂ. ಕೆ. ಇಂದಿರಾ ಅವರ ಲೇಖನ 'ಲೋಕ ಪಾವನೆ' ಪುಟ 12.
2. ಎಂ. ಕೆ. ಇಂದಿರಾ 'ಅನುಭವಕುಂಜ' ಪುಟ 10.
3. ಅದೇ ; ಪುಟ 10
4. ಅದೇ ; ಪುಟ 10

ಮನೆತನದ ಸಂಸ್ಕೃತಿ, ಹುಟ್ಟಿಬೆಳೆದ ವಾತಾವರಣ, ಸುತ್ತಲಿನ ಪರಿಸರದಿಂದಾಗಿ ಸಾಹಿತ್ಯ ರಚನೆ ಇಂದಿರಾ ಅವರಿಗೆ ಸ್ವಾಭಾವಿಕವಾಗಿ ಬಂದ ಕಲೆ.

ಸುಸಂಸ್ಕೃತ, ಮನೆತನದಲ್ಲಿ ಹುಟ್ಟಿದ ಇಂದಿರಾ ಅವರ ಮನಸ್ಸು ಸುತ್ತಣ ಸಂಸ್ಕೃತ, ಜನಜೀವನ, ಪ್ರಕೃತಿ ಸೌಂದರ್ಯವನ್ನು ಹೀಗಿಕೊಂಡು ಹದವಾಗುತ್ತ ಬೆಳೆದಿದೆ.

ಅಂದಿನ ಜನರ ಅಜ್ಞಾನ. ಮೂಢನಂಬಿಕೆ, ಅಂಧಶ್ರದ್ಧೆ ಇವುಗಳನ್ನು ಕಂಡ ಇಂದಿರಾ ಅವರ ಮನಸ್ಸು ವಿಚಾರಶೀಲವಾಗಿದೆ. ಸಂಪ್ರದಾಯದ ವಾತಾವರಣದಲ್ಲಿ ಹುಟ್ಟಿದ ಅವರು, ಸಂಪ್ರದಾಯ ವಿರೋಧಿಯಾದರು. ಸಮಾಜದ ಡಾಂಭಿಕತೆ, ಅಜ್ಞಾನ, ಮೂಢನಂಬಿಕೆ, ಇವುಗಳನ್ನು ಇಂದಿರಾ ಅವರು ದಿಟ್ಟತನದಿಂದ ಬಯಲಿಗೆಳೆದಿದ್ದಾರೆ.

ಇಂದಿರಾ ಅವರ ಪ್ರತಿಯೊಂದು ಕಾದಂಬರಿಯು ವಾಸ್ತವ ಘಟನೆಗಳ ಆಧಾರದ ಮೇಲೆ ರೂಪುಗೊಂಡಿದೆ. ಆದರ್ಶವಾದಿ ಪ್ರತಿಭಾಶಾಲಿಯೂ ಆದ ಚಿಕ್ಕಮ್ಮನ ಮಗ ಸೋಮಸುಂದರ 'ಸದಾನಂದ'ವಾಗಿ ರೂಪುಗೊಂಡ 'ಗೆಜ್ಜೆಪೂಜೆ' ಇಂದಿರಾ ಅವರು ಮೈಸೂರಿನಲ್ಲಿದ್ದಾಗ ಕಂಡ ಸತ್ಯಘಟನೆ. 'ಗಿರಿಬಾಲೆ' ಕಾದಂಬರಿ ಮನೆತನದಲ್ಲಿ ನಡೆದ ಕತೆ. 'ಫಣಿಯಮ್ಮ' ಇಂದಿರಾ ಅವರಿಗೆ ಅಜ್ಜಿ, 'ಆತ್ಮಸಖಿ'ಯು ಅನಂತ ಶರ್ಮರು ತಾಯಿಯ ಸೋದರಮಾವ.

'ಹೆತ್ತೊಡಲು' ತಮ್ಮ ತವರಿನಲ್ಲಿಯೇ ನಡೆದದ್ದು. ಇಂದಿರಾ ಅವರ ತಮ್ಮ ಆನಂದ ತಂದೆಯ ಜೊತೆಗೆ ರಾಮೇಶ್ವರಕ್ಕೆ ಹೋದಾಗ ಶಿವರಾತ್ರಿ ಗದ್ದಲದಲ್ಲಿ ತಪ್ಪಿಸಿಕೊಂಡ. ಆಗ ಅವನಿಗೆ ಹನ್ನೊಂದು ವರ್ಷಗಳಂತೆ. ತಂದೆ ಮಗನನ್ನು ಹುಡುಕಲು ಮಾಡಿದ ಸಾಹಸವೆಲ್ಲ ವ್ಯರ್ಥವಾಗಿ ದುಃಖದಿಂದ ಮನೆಗೆ ಹಿಂದಿರುಗಿದರು.

ಕೆಲವು ದಿನಗಳ ನಂತರ ರಾಮೇಶ್ವರದ ಸಮುದ್ರದ ದಂಡೆಯಲ್ಲಿ ಜಲಚರಗಳು ತಿಂದ ಛಿದ್ರವಾದ ಒಬ್ಬ ಬಾಲಕನ ದೇಹವನ್ನು ಕಂಡು ತಂದೆ ತಾಯಿಗಳು ತಮ್ಮ ಮಗ ಸತ್ತುಹೋದನೆಂದೇ ಭಾವಿಸಿದ್ದರು. ಕಾರಣ ಅವನು ಈಜಲು ಹೋಗಿದ್ದನಂತೆ. ತಾಯಿ ಬನಶಂಕರಮ್ಮನವರು ಸುಮಾರು ಇಪ್ಪತ್ತೆರಡು ವರ್ಷ ಪುತ್ರ ಶೋಕ ನರಳಿ ಕೊರಗಿದರು ಹೆತ್ತಕರುಳು 'ಆನಂದು ಸತ್ತಿಲ್ಲ, ಅವನು ಎಲ್ಲೋ ಬದುಕಿದ್ದಾನೆ ಹುಡುಕುವವರೇ ಇಲ್ಲವಲ್ಲ' ಎಂದು ಕಣ್ಣೀರಿಡುತ್ತಿತ್ತು. ತಂದೆಯೂ ತೀರಿಕೊಂಡರು.

ದಿ॥ ಟಿ. ಎಸ್. ರಾಮಚಂದ್ರರಾವ್ ಕಬ್ಬನ್‌ಪೇಟೆಯಲ್ಲಿದ್ದಾಗ ಒಂದುದಿನ ರಾತ್ರಿ ಒಂಬತ್ತು ಗಂಟೆಯ ಸಮಯದಲ್ಲಿ ಆರೂವರೆ ಅಡಿ ಎತ್ತರದ ಆಜಾನುಬಾಹು ವ್ಯಕ್ತಿಯೊಬ್ಬ ನಗುನಗುತ್ತ ಮನೆಯನ್ನು ಪ್ರವೇಶಿಸಿದಾಗ ಮನೆಯವರಿಗೆಲ್ಲ ಒಂದು ಕ್ಷಣ ಗಾಬರಿ. ಆಗರ್ಭ ಶ್ರೀಮಂತನಂತೆ ಕಾಣುತ್ತಿದ್ದ ಆ ವ್ಯಕ್ತಿಯನ್ನು ಕಂಡಾಗ

ಯಾರಿಗೂ ಗುರುತು ಸಿಗಲಿಲ್ಲ. ಅವನನ್ನು ಎರಡು ಕ್ಷಣ ನೋಡಿದ ತಾಯಿ ಬನಶಂಕರಮ್ಮ 'ಆನಂದು, ಆನಂದು' ಎಂದು ನರಳಿ ಮೂರ್ಛಿತರಾದರು ಹೆತ್ತೊಡಲು ತನ್ನ ಕರುವಿನ ಕಂದನನ್ನು ಗುರುತಿಸಿತ್ತು.

ಇದೇ ಘಟನೆ ಇಂದಿರಾ ಅವರ 'ಹೆತ್ತೊಡಲು' ಕತೆಯ ಹಿನ್ನೆಲೆ. 'ಆನಂದರಾವ್' ಈಗ ಬೆಂಗಳೂರಿನಲ್ಲಿಯೇ ಇದ್ದಾರೆ. ಇದು ಆ ಇಂದಿರಾ ಅವರ ಮೆಚ್ಚಿನ ಕಥೆಯೂ ಹೌದು. 'ನವರತ್ನ' ಕಥಾಸಂಕಲನದಲ್ಲಿ ಇದು ಮೊದಲನೆಯ ಕತೆಯಾಗಿ ಸೇರಿತು. ಈ ಕಥಾಸಂಕಲನಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿಯ ಬಹುಮಾನವೂ ಬಂದಿದೆ.

ಹೀಗೆಯೇ 'ಶಾಂತಿಧಾಮ' ಇಂದಿರಾ ಅವರ ಕಣ್ಣೆದುರಿಗೆ ನಡೆದ ಒಂದು ಕುಟುಂಬದ ದುರಂತ ಕಥೆ. ಇಂದಿರಾ ಅವರ ಕತೆ ಕಾದಂಬರಿಗಳೆಲ್ಲ ವಾಸ್ತವ ಸಂಗತಿಗಳನ್ನೇ ಆಧರಿಸಿ ಬರೆದವುಗಳು ಹೀಗಾಗಿ ಇವರ ಕತೆ ಕಾದಂಬರಿಗಳಲ್ಲಿ ವಾಸ್ತವತೆಯೇ ಪ್ರಧಾನ.

ಕೆಲವುಸಲ ಕಟ್ಟು ಕಥೆಗಿಂತಲೂ ವಿಚಿತ್ರವಾದ ಸತ್ಯವನ್ನು ನಾವು ಕಾಣುತ್ತೇವೆ. ಹೀಗೆ ಅವರು ವಾಸ್ತವತೆಗೆ ನಿಷ್ಠರಾಗಿರುವುದರಿಂದಲೇ ಇಂದು ಅಸಂಖ್ಯಾತ ಜೊಳ್ಳುಗಳ ನಡುವೆ ಗಟ್ಟಿ ಕಾಳಾಗಿ ಉಳಿದಿದ್ದಾರೆ.[1] ಎಂಬ ಮಾತಿನಲ್ಲಿ ಸತ್ಯಾಂಶವಿದೆ.

'ತಗ್ಗಿನಮನೆ ಸೀತೆ' ಈ ಕಾದಂಬರಿಯ ನಾಯಕಿ ಸೀತೆಯೂ ನಿಜ ಜೀವನದಲ್ಲಿ ಕಂಡ ಒಬ್ಬ ಧೀಮಂತ ಮಹಿಳೆ.

'ಸದಾನಂದ' ಸಾಹಿತ್ಯ ಅಕಾಡೆಮಿಯ ಬಹುಮಾನ ಗಳಿಸಿದರು. ೧೯೭೭ರಲ್ಲಿ 'ಫಣಿಯಮ್ಮ' ಕಾದಂಬರಿ ಇಂದಿರಾ ಅವರಿಗೆ ಬಹುಮಾನ ಹಾಗೂ ಪ್ರಶಸ್ತಿಯನ್ನು ತಂದುಕೊಟ್ಟಿದೆ.

'ಗೆಜ್ಜೆ ಪೂಜೆ' ಕಾದಂಬರಿ ಚಲನಚಿತ್ರವಾಗಿ ಯಶಸ್ವಿಯಾಗಿ ಅವರಿಗೆ ಅಪಾರ ಜನಪ್ರಿಯತೆಯನ್ನು ತಂದುಕೊಟ್ಟಿದೆ. ಹೀಗೆ ಅವರು ಪ್ರಥಮ ಕಾದಂಬರಿಯಿಂದಲೇ ಸಾಹಿತ್ಯ ಕ್ಷೇತ್ರದಲ್ಲಿ ಯಶಸ್ವಿ ಹೆಜ್ಜೆಯನ್ನಿರಿಸಿದವರು.

ಸುಧೀರ್ಘ ಹಾಗೂ ಗಟ್ಟಿಯಾದ ಜೀವನಾನುಭವವೇ ಇಂದಿರಾ ಅವರ ಸಾಹಿತ್ಯ ಸೃಷ್ಟಿಗೆ ಬಂಡವಾಳ. ಅವರ ಸಾಹಿತ್ಯ ಸೃಷ್ಟಿಗೆ. ಮಲೆನಾಡಿನ ಸಮೃದ್ಧ ಪರಿಸರದಲ್ಲಿ ಕಳೆದ ಬಾಲ್ಯಜೀವನ, ಸ್ಫೂರ್ತಿ ಹಾಗೂ ಪ್ರೇರಣೆಯನ್ನೊದಗಿಸಿದೆ.

"ಕನ್ನಡದಲ್ಲಿ ಕಾದಂಬರಿಕಾರ್ತಿಯರು ವಿರಳವಾಗಿದ್ದ ಕಾಲದಲ್ಲಿ ಕೇಳಿಬಂದ ಹೆಸರು ಎಂ. ಕೆ. ಇಂದಿರಾ. ಅವರು ಬರವಣಿಗೆಗೆ ತೊಡಗಿದ್ದೇ ಜೀವನಾನುಭವ ಪಕ್ವವಾದ ಮೇಲೆ ಬರಹ ಬರೀ ಉತ್ಸಾಹವಾಗದೇ ಆಕೆಗೆ ಬರಹವೇ ವೃತ್ತಿಯಾಗ

---

1. ಈಶ್ವರಚಂದ್ರ : 'ತರಂಗ' ಜುಲೈ 3 1983 ಪುಟ 9

ಬೇಕಾದ ಅನಿವಾರ್ಯಗಳಿದ್ದವು. ಬರವಣಿಗೆಯಿಂದಲೇ ಬದುಕನ್ನು ನಿರ್ವಹಿಸುವುದು ಕನ್ನಡದ ಸಂದರ್ಭದಲ್ಲಿ ಅಪರೂಪದ ಮಾತು. ಅದನ್ನು ಆಗಮಾಡಿಕೊಂಡ ಮಹಿಳೆ ಎಂ. ಕೆ. ಇಂದಿರಾ"[1].

ಇಂದಿರಾ ಅವರು ಬರವಣಿಗೆಯನ್ನು ಪ್ರಾರಂಭಿಸಿದ ಮೇಲೆ ಅವರ ಆರ್ಥಿಕ ಸ್ಥಿತಿಯೂ ಸುಧಾರಿಸಿದೆ.

"ಬರವಣಿಗೆಯಿಂದ ಬಂದ ಸಂಪಾದನೆಯಿಂದಲೇ ಜೀವನವನ್ನು ಸಾಗಿಸುತ್ತಿದ್ದೇನೆ. ಒಂದು ದಿನವೂ ನನ್ನ ಮಕ್ಕಳ ದುಡ್ಡು, ಕಾಸಿನ ಗೊಡವೆಗೆ ನಾನು ಹೋಗಿಲ್ಲ, ಆರ್ಥಿಕ ಈಗ ಪರಿಸ್ಥಿತಿ ಸುಧಾರಿಸಿದೆ" ಎಂದು ಇಂದಿರಾ ಅವರು ಬಿಚ್ಚುಮನಸ್ಸಿನಿಂದ ಹೇಳುತ್ತಾರೆ. ೧೯೮೦ ರಿಂದ ಕರ್ನಾಟಕ ಸರಕಾರದಿಂದ ಐದುನೂರು (೫೦೦ ರೂ) ರೂಪಾಯಿ ಮಾಸಿಕ ವೇತನವೂ ದೊರಕುತ್ತಿದೆ.

ಸ್ವಂತ ಸಂಪಾದನೆಯಿಂದಲೇ ಇಂದಿರಾ ಅವರು ಮಕ್ಕಳ ವಿದ್ಯಾಭ್ಯಾಸ, ಮದುವೆ, ಸಾಂಸಾರಿಕ ಜವಾಬ್ದಾರಿಯನ್ನೆಲ್ಲ ಒಬ್ಬರೇ ನಿರ್ವಹಿಸಿದ್ದಾರೆ.

ಇಪ್ಪತ್ತೊಂದು ವರ್ಷಗಳ ಸತತ ಬರವಣಿಗೆ, ದಣಿವು ಸಾಂಸಾರಿಕ ಜಂಜಡ ದಿಂದಾಗಿ ಇಂದಿರಾ ಅವರ ಆಯಾಸಗೊಂಡ ದೇಹ – ಮನಸ್ಸು ವಿಶ್ರಾಂತಿಯನ್ನು ಬಯಸುತ್ತಾರೆ. ಏಕಾಂತ ಜೀವನವೆಂದರೆ ಇಂದಿರಾ ಅವರಿಗೆ ಇಷ್ಟ. ಬೆಂಗಳೂರಿನ ಗದ್ದಲದ ಜೀವನ ಅವರಿಗೆ ಬೇಸರ ತಂದಿದೆ. ನಿಸರ್ಗದ ತಂಪಿನ ತಾಣದಲ್ಲಿ, ಪ್ರಶಾಂತ ವಾತಾವರಣದಲ್ಲಿ ಇರುವ ಬಯಕೆ ಅವರಿಗಿದೆ. ಆದರೆ ಸಂಸಾರ ಸಾಹಿತ್ಯ ಎರಡನ್ನೂ ಬಿಡಲು ಸಾಧ್ಯವಿಲ್ಲದಾಗಿದೆ.

ಕನ್ನಡ ಸಾಹಿತ್ಯ ಅದರಲ್ಲೂ ಕಾದಂಬರಿ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಗೆ ಹಲವಾರು ಸಂಘ–ಸಂಸ್ಥೆಗಳಿಂದ ಇವರಿಗೆ ಗೌರವ, ಸನ್ಮಾನ ಲಭಿಸಿವೆ. ಕನ್ನಡ ಜನತೆಯ ಅಪಾರ ಮೆಚ್ಚುಗೆ, ಅಭಿಮಾನ. ಗೌರವವನ್ನು ಇಂದಿರಾ ಅವರು ಗಳಿಸಿದ್ದಾರೆ.

೧೯೭೬ರಲ್ಲಿ 'ರಾಜ್ಯಸಾಹಿತ್ಯ ಅಕಾಡೆಮಿಯ ಪುರಸ್ಕಾರ. ೧೯೮೦ರಲ್ಲಿ ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನದಲ್ಲಿ ಸನ್ಮಾನ ಪಡೆದಿದ್ದಾರೆ. ಚಿಕ್ಕಮಗಳೂರು, ಧರ್ಮಸ್ಥಳದ ಸಮ್ಮೇಳನಗಳಲ್ಲಿ ಪ್ರಮುಖರಾಗಿ ಭಾಗವಹಿಸಿದ್ದಾರೆ. ೧೯೮೨ರಲ್ಲಿ ಗುಲ್ಬರ್ಗಾದಲ್ಲಿ ನಡೆದ ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನದಲ್ಲಿ ಇಂದಿರಾ ಅವರದು ಪ್ರಮುಖ ಪಾತ್ರ. ೧೯೮೪ರ ಜೂನ್ ೩–೪ರಂದು ನಡೆದ ಲೇಖಕಿಯರ ಮೂರನೆಯ ಸಮ್ಮೇಳನದಲ್ಲಿ ಹಿರಿಯ ಲೇಖಕಿ ಇಂದಿರಾ ಅವರನ್ನು ಸನ್ಮಾನಿಸಲಾಗಿದೆ.

---

1. ಡಾ॥ ಹಾ. ಮಾ. ನಾಯಕ, ಸಿ. ಪಿ. ಕೃಷ್ಣಕುಮಾರ್, ಟಿ. ವಿ. ವೆಂಕಟಾಚಲಶಾಸ್ತ್ರಿ. (ಸಂ.) 'ಸ್ವಸ್ತಿ' ತ. ಸು. ಶ್ಯಾಮರಾಯರ ಅಭಿನಂದನ ಗ್ರಂಥ 'ವಿಜಯಾ' ಅವರ 'ಫಣಿಯಮ್ಮ' ಪುಟ 704.

೧೯೮೧ರಲ್ಲಿ ದಾವಣಗೆರೆಯ ಕಲಾರಂಗದ ವತಿಯಿಂದ ನಡೆದ ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನದ ಅಧ್ಯಕ್ಷತೆ ವಹಿಸಿದ ಕೀರ್ತಿ ಇಂದಿರಾ ಅವರದು. ಇಂದಿರಾ ಅವರು ಬರೆದ ಅಧ್ಯಕ್ಷೀಯ ಭಾಷಣ ಸರಳ ಶೈಲಿಯಲ್ಲಿದ್ದು ಜನಮನವನ್ನು ತಲುಪು ವಂತಿದೆ.

ಅಧ್ಯಕ್ಷೀಯ ಭಾಷಣದಲ್ಲಿ ಇಂದಿರಾ ಮಹಿಳಾ ಸಾಹಿತ್ಯದ ಬಗೆಗೆ ಇರುವ ಆರೋಪಗಳಿಗೆ ಸಮರ್ಪಕ ಉತ್ತರಗಳನ್ನು ನೀಡಿದ್ದಾರೆ.

ಈ ಶತಮಾನದ ಆರಂಭದಲ್ಲಿ ಸಾಹಿತ್ಯ ಆರಂಭದಲ್ಲಿ ಸಾಹಿತ್ಯಸೇವೆ ಸಲ್ಲಿಸಿದ ಕೊಡಗಿನ ಗೌರಮ್ಮ, ಆರ್. ಕಲ್ಯಾಣಮ್ಮ, ತಿರುಮಲೆ ರಾಜಮ್ಮ ಮೊದಲಾದವರ ಸಾಧನೆಯನ್ನು ಗಮನಕ್ಕೆ ತಂದಿದ್ದಾರೆ. ಮಹಿಳಾ ಸಾಹಿತ್ಯದ ಇತಿಮಿತಿಗಳ ಬಗ್ಗೆ ವಿವೇಚಿಸಿದ್ದಾರೆ. ಸದ್ಯದಲ್ಲಿ ಬರೆಯುತ್ತಿರುವ ಲೇಖಕಿಯರ ಸಮಸ್ಯೆಗಳನ್ನು ಚರ್ಚಿಸಿ ಅವರ ಹೊಣೆಗಾರಿಕೆಯನ್ನು ಮನವರಿಕೆ ಮಾಡಿಕೊಟ್ಟಿದ್ದಾರೆ.

ಭೈರಪ್ಪನವರ 'ಪರ್ವ' ಸಿ. ಕೆ. ನಾಗರಾಜ್ ಅವರ 'ಶಾಂತಲಾ' ದಂತಹ ಕಾದಂಬರಿಗಳ ರಚನೆ ಮಹಿಳೆಯರಿಂದ ಸಾಧ್ಯವಾಗಿಲ್ಲವೆಂದು ಒಪ್ಪಿಕೊಂಡಿದ್ದಾರೆ. ಈ ಕಾದಂಬರಿಗಳಿಗೆ ಆ ಲೇಖಕರು ನಡೆಸಿದ ಸಂಶೋಧನೆ ಮಹಿಳೆಯರಿಗೆ ಸಾಧ್ಯವಿಲ್ಲ. ಅಂತಹ ಅವಕಾಶ ಸೌಲಭ್ಯಗಳು ಮಹಿಳೆಗೆ ದೊರೆತಿಲ್ಲವೆಂದು ಹೇಳಿದ್ದಾರೆ.

ಮದುವೆ ಮಕ್ಕಳು ಸಂಸಾರದ ಜಂಜಡಗಳ ನಡುವೆ ತನ್ನ ಜೀವನವನ್ನು ಕಳೆಯುವ ಲೇಖಕಿಯರು ಸಂಸಾರ, ಸಮಾಜ, ಪ್ರೇಮವಲಯಗಳನ್ನು ಬಿಟ್ಟು ದಾಟಿಲ್ಲ ಎಂದಿದ್ದಾರೆ. ಡಾ॥ ಅನುಪಮಾ ನಿರಂಜನ, ಹೇಮಲತಾ ಮಹಿಷಿ, ಸರಿತಾ ಕುಸುಮಾಕರ ದೇಸಾಯಿ ಮುಂತಾದವರು ವಿವಿಧ ವೃತ್ತಿಯಲ್ಲಿ ಅನುಭವ ಪಡೆದು ಸಾಹಿತ್ಯ ರಚನೆಯಲ್ಲಿ ತೊಡಗಿರುವುದನ್ನು ನೆನೆದಿದ್ದಾರೆ. ವಾಣಿ, ತ್ರಿವೇಣಿ, ಎಂ. ಕೆ. ಜಯಲಕ್ಷ್ಮಿ ಇವರೆಲ್ಲ ಉತ್ತಮ ಕಾದಂಬರಿಗಳನ್ನು ಬರೆದಿರುವುದನ್ನು ಎತ್ತಿತೋರಿಸಿ ದ್ದಾರೆ.

ಇನ್ನು ಕೆಲವು ವರ್ಷಗಳನ್ನು ಕಾದು ನೋಡಿದಾಗ ಮಹಿಳೆ ಉತ್ತಮ ಸಾಹಿತ್ಯ ರಚಿಸಬಲ್ಲಳು ಎಂಬ ಭರವಸೆ ತಾಳಿದ್ದಾರೆ.

"ಕನ್ನಡ ಭಾಷೆ ಬೆಳೆಸುವ ಪ್ರಯತ್ನವನ್ನಂತೂ ನಾವು ಮಾಡಬೇಕು. ಒಂದು ಕಡೆ ಕನ್ನಡವನ್ನು ಬೆಳೆಸುವ ಯತ್ನ ನಡೆದರೆ ಮತ್ತೊಂದೆಡೆ ಆಂಗ್ಲ ಭಾಷೆಯನ್ನು ಅಪ್ಪಿಕೊಳ್ಳುವ ಪ್ರಯತ್ನ ನಡೆದಿದೆ. ವಿಶ್ವದ ಸಹಸ್ರಾರು ಭಾಷೆಗಳಲ್ಲಿ ಕನ್ನಡವೂ ಒಂದು. ಅದನ್ನು ಸಾಧ್ಯವಾದಷ್ಟು ಉಳಿಸಿ–ಬೆಳೆಸಬೇಕಾದ್ದು ಕನ್ನಡಿಗರ ಕರ್ತವ್ಯ. ಆದರೆ ವಿಷಾದದ ಸಂಗತಿಯೆಂದರೆ ಇಂದಿನ ಪ್ರಜೆಗಳಿಗೆ ಹಿಡಿದಿರುವ ಭ್ರಮೆ. ಕನ್ನಡ ರಾಜ್ಯದಲ್ಲಿ ಸಾಕಷ್ಟು ಸರ್ಕಾರದ ಕನ್ನಡ ಶಾಲೆಗಳಿಲ್ಲ. ಕೆಲವರಿಗೆ ತಮ್ಮ ಮಕ್ಕಳು ಎಳೆಯ ಬಾಯಲ್ಲಿಯೇ ಆಂಗ್ಲಭಾಷೆ ಮಾತಾಡುವುದನ್ನು ಕೇಳುವಾಸೆ. ಮಕ್ಕಳಿಗೆ

ಪುಸ್ತಕಗಳ ಭಾರ ಮತ್ತು ಅವರ ಎಳೆಯ ಮೆದುಳಿಗೆ ಕಾನ್ವೆಂಟುಗಳ ಕಲಿಕೆ ಹೊರಲಾರದ ಹೊರೆ.

ಈಗಿನ ಮಕ್ಕಳಿಗೆ ಕನ್ನಡ ಎಂದರೆ ಏನೆಂಬುದೇ ತಿಳಿಯಲಾರದ ಪರಿಸ್ಥಿತಿ ಬಂದಿದೆ. ಹೀಗಾದರೆ ಕನ್ನಡ ಆಡಳಿತ ಭಾಷೆ ಆಗುವುದಾದರೂ ಹೇಗೆ ?[1] ಎನ್ನುವ ಇಂದಿರಾ ಅವರ ಈ ಅಧ್ಯಕ್ಷೀಯ ಭಾಷಣದಲ್ಲಿ ಬಗೆಗಿನ ತೀವ್ರ ಕಳಕಳಿ ವ್ಯಕ್ತವಾಗಿದೆ. (ಕನ್ನಡ ನಾಡಿನಲ್ಲಿ ಪ್ರಚಲಿತವಿರುವ ನೂರಾರು ಬಗೆಯಲ್ಲಿ ಪ್ರಚಲಿತವಿರುವ ಪ್ರಾಂತೀಯ, ಪ್ರಾದೇಶಿಕ ಪರಿಸರಗಳ ಕನ್ನಡ, ಆಯಾ ಪ್ರಾಂತದವರು ಮಾತನಾಡುವ ಅವರದೇ ಆದ ರೀತಿ ಧ್ವನಿ, ಅರ್ಥಗಳಿಂದ ಕೂಡಿವೆ. ಇವುಗಳ ಪರಿಚಯ ನಮ್ಮ ಲೇಖಕಿಯರಿಗೆ ದೊರೆಯಬೇಕು) ಎಂದು ಅಭಿಪ್ರಾಯಪಟ್ಟಿದ್ದಾರೆ.

ಸಾಹಿತ್ಯ ಹಾಗೂ ಸಂಸಾರದಲ್ಲಿ ದುಡಿದು ಈಗ ಹಣ್ಣಾಗಿದ್ದಾರೆ. ಅರವತ್ತೆಂಟು ವರ್ಷಗಳ ವೃದ್ಧಾಪ್ಯವೂ ಹರಿಯುತ್ತಿದೆ. ವಿಶ್ರಾಂತಿ ದೊರೆತಾಗ ಈ ವೃದ್ಧಾಪ್ಯದಲ್ಲೂ ಅವರು ಉತ್ಸಾಹ ಚಟುವಟಿಕೆಯಿಂದ ತಮ್ಮ ಕೆಲಸದಲ್ಲಿ ತೊಡಗುತ್ತಾರೆ. ಮನೆಗೆಲಸವನ್ನು ತಾವೇ ಮಾಡಿಕೊಳ್ಳುತ್ತಾರೆ.

"ಪರ್ತಕರ್ತರೊಬ್ಬರು ಎಂ. ಕೆ. ಇಂದಿರಾ ಅವರನ್ನು ಭೇಟಿ ಮಾಡಬೇಕೆಂಬ ಹಂಬಲದಿಂದ ಅವರ ಮನೆಗೆ ಹೋದಾಗ ಮನೆ ಪಾತ್ರೆಗಳನ್ನು ತಿಕ್ಕುತ್ತಾ ಕುಳಿತಿದ್ದ ಹೆಣ್ಣುಮಗಳನ್ನು ಇಂದಿರಾ ಇಲ್ವೇನಮ್ಮಾ ಎಂದು ಕೇಳಿದರಂತೆ. ನಾನೇ ಇಂದಿರಾ ಏನ್‌ಬೇಕಾಗಿತ್ತು ? ಎಂದಾಗ ಪತ್ರಕರ್ತ ತಬ್ಬಿಬ್ಬು."[2]

"ಶಕ್ತಿ (ಪತ್ರಿಕೆ)ಯ ಸಂದರ್ಶನದ ಸಲುವಾಗಿ ಛಾಯಾ ಗ್ರಾಹಕರು ಇಂದಿರಾ ಅವರ ಮನೆಗೆ ಹೋಗಿ 'ಇಂದಿರಾ ಇದ್ದಾರೆಯೇ' ? ಎಂದು ಕೇಳಿದಾಗ 'ನಾನೇ ಇಂದಿರಾ' ಎಂಬ ಉತ್ತರ ಛಾಯಾಗ್ರಾಹಕರನ್ನು ವಿಸ್ಮಿತರನ್ನಾಗಿಸಿತು. ಕತೆಗಾರ್ತಿ ಇಂದಿರಾ ಸ್ಲೀವ್‌ಲೆಸ್ ಬ್ಲೌಸ್ ಹಾಕಿ ಶೋಕಾಗಿರುತ್ತಾರೆ" ಎಂದು ತಿಳಿದಿದ್ದರೇನೋ ಎಂದು ನಕ್ಕರು.[3]

ಇಷ್ಟೊಂದು ಸರಳತೆ ಇಂದಿರಾ ಅವರದು. ಉಡುಗೆ–ತೊಡಿಗೆ ತೀರಾ ಸರಳ. ಮನೆಯಲ್ಲಿ ತೀರಾ ಸಾದಾ ನೂಲಿನ ಸೀರೆ. ರವಿಕೆ, ಬಿಗಿಯಾಗಿ ಹೆಣೆದ ಜಡೆ. ಪ್ರಜ್ಞಾವಂತೆ ಇಂದಿರಾ ಅವರು ಯಾವ ಅಂಧಶ್ರದ್ಧೆಗೂ ಒಳಗಾಗಿಲ್ಲ. ಅವರು ಹಣೆಯಲ್ಲಿ

---

1. ಜುಲೈ 25, 26, 1981 ದಾವಣಗೆರೆಯಲ್ಲಿ ನಡೆದ ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನದ ಅಧ್ಯಕ್ಷೀಯ ಭಾಷಣದ ಅಪ್ರಕಟಿತ ಹಸ್ತಪ್ರತಿಯ ಆಧಾರದಿಂದ.
2. 'ಶಕ್ತಿ' ಜೂನ್ 24–1984 ಪುಟ 3
3. ಅದೇ ; ಪುಟ–3

ಕಪ್ಪು ಚುಕ್ಕೆಯನ್ನಿಟ್ಟು ಕೊಳ್ಳುತ್ತಾರೆ. ಮೂಗುಬೊಟ್ಟು, ಕಾಲುಂಗುರ, ಕೊರಳಲ್ಲಿ ಒಂದೆಳೆಯ ಸರವನ್ನು ಧರಿಸುತ್ತಾರೆ.

ಬರೆಯುವಾಗ ಎರಡು-ಮೂರು ತಾಸಿಗೊಮ್ಮೆ ಅವರಿಗೆ ಕಾಫಿ ಬೇಕಾಗುತ್ತದೆ. ಮಲೆನಾಡಿನ ಊಟ-ತಿಂಡಿ ಅವರಿಗೆ ಇಷ್ಟ. ಇಂದಿರಾ ಅವರ ಬಂಧು ಬಳಗದವರೆಲ್ಲ ಹೆಚ್ಚಾಗಿ ಬೆಂಗಳೂರಿನಲ್ಲಿಯೇ ಇದ್ದಾರೆ. ದಿನವೂ ಮನೆಗೆ ಬಂದು ಹೋಗುವವರು ಇದ್ದೇ ಇರುತ್ತಾರೆ. ಅಲ್ಲದೆ ಸಾಹಿತಿಗಳು, ಅಭಿಮಾನಿಗಳು, ಪ್ರಕಾಶಕರು, ಪತ್ರಕರ್ತರು ಹೀಗೆ ಅತಿಥಿಗಳು ಅವರ ಮನೆಯಲ್ಲಿ ಕಾಣಸಿಗುತ್ತಾರೆ. ಎಲ್ಲರನ್ನೂ ಮುಗುಳ್ನಗೆಯಿಂದ ಸ್ವಾಗತಿಸುತ್ತಾರೆ. ಬಿಂಕ – ಬಿಗುಮಾನವಿಲ್ಲದೆ ಸರಳವಾಗಿ ಆತ್ಮೀಯತೆಯಿಂದ ಕಂಡು ಆತಿಥಿಸತ್ಕಾರ ಮಾಡಿ ಕಳುಹಿಸುತ್ತಾರೆ. ಹಿರಿಯರಾಗಲಿ, ಕಿರಿಯರಾಗಲಿ ಎಲ್ಲರನ್ನೂ ಬಹುವಚನದಿಂದ ಮಾತಾಡಿಸಿ ಗಂಟೆಗಟ್ಟಲೆ ನಿರರ್ಗಳವಾಗಿ ಮಾತನಾಡಿ ಬಹುಬೇಗ ಆತ್ಮೀಯತೆಗಳಿಸುತ್ತಾರೆ.

"ಬರೆದದ್ದು ಸಾಹಿತ್ಯವೇ ಎಂಬ ಅನುಮಾನ, ಪ್ರಕಾಶನಕ್ಕೆ ಸಾಧ್ಯವಿಲ್ಲ ಎಂದು ಸಂಪಾದಕರಿಂದ ಬಂದ ಪತ್ರದಿಂದ ಅವಮಾನ, ಪ್ರಕಟವಾದಾಗ ಸಮಾಧಾನ, ಆಮೇಲೆ ಬಿಗುಮಾನ, ನಂತರ ಸನ್ಮಾನ ಹೀಗೆ ಐದು ಅವಸ್ಥೆಗಳನ್ನು ಸಾಹಿತಿ ಸವಿಯಬೇಕಾಗಿದೆ. ಬಿಗುಮಾನ 'ಬಿಟ್ಟು' ಉಳಿದ ಅವಸ್ಥೆಗಳನ್ನು ಇಂದಿರಾ ಅವರು ಅನುಭವಿಸಿದ್ದಾರೆ."[1] ಎಂದು ಶ್ರೀ ಸೂರ್ಯನಾರಾಯಣ ಚಡಗರು ಇಂದಿರಾ ಅವರ ಸನ್ಮಾನ ಸಮಾರಂಭದಲ್ಲಿ ಹೇಳಿರುವ ಮಾತಿನಲ್ಲಿ ಸತ್ಯಾಂಶವಿದೆ.

ಆದೇ ಸಂದರ್ಭದಲ್ಲಿ 'ವಾತ್ಸಲ್ಯಮಯಿ' ಎಂದು ಇಂದಿರಾ ಅವರಿಗೆ ಆತ್ಮೀಯತೆಯಿಂದ ಕೊಟ್ಟ ಬಿರುದು ಅವರಿಗೆ ಚೆನ್ನಾಗಿ ಒಪ್ಪುತ್ತದೆ.

ಅದೇ ರೀತಿ ಇಂದಿರಾ ಅವರನ್ನು ಕುರಿತು "ತುಂಬಿದ ಕೊಡ ತುಳುಕುವುದಿಲ್ಲ"[2] ಎನ್ನುವ ಮಾತಿನಲ್ಲಿ ಯಾವ ಅತಿಶಯೋಕ್ತಿಯೂ ಇಲ್ಲ.

ಕರ್ನಾಟಕದ ಪ್ರಖ್ಯಾತ ನೃತ್ಯ ಕಲಾವಿದೆ ಚಂದ್ರಭಾಗದೇವಿಯರ 'ಗೆಜ್ಜೆಯ ಹೆಜ್ಜೆಯ ನುಡಿ' ಎಂಬ ಗ್ರಂಥವನ್ನು ಮೆಚ್ಚಿಕೊಂಡು ಇಂದಿರಾ ಅವರು ಪತ್ರವನ್ನು ಬರೆದಾಗ ಪತ್ರಿಕೆಯ ಸಂಪಾದಕರು—"ಒಬ್ಬ ಸ್ತ್ರೀ ಮತ್ತೊಬ್ಬ ಸ್ತ್ರೀಯನ್ನು ಮೆಚ್ಚುವುದು ಅಪರೂಪ. ಅದರಲ್ಲೂ ಆತ್ಮೀಯತೆಯಿಂದ ಮನಬಿಚ್ಚಿ ಮಾತನಾಡುವುದು ಮೆಚ್ಚಿಕೆ ವ್ಯಕ್ತಪಡಿಸುವುದು ಮತ್ತೂ ಅಪರೂಪ. ಇದು ಸುಸಂಸ್ಕೃತಿಯ ಒಂದು

1. ಪ್ರಜಾವಾಣಿ 27-12-1973 ಪುಟ 5. ಇಂದಿರಾ ಅವರ ಸನ್ಮಾನ ಸಮಾರಂಭದಲ್ಲಿ ಹೇಳಿದ ಮಾತುಗಳು.

2. ಪ್ರೇಮಾಭಟ್ ಸ್ತ್ರೀ ಮಾರ್ಚ್ 10, 1965 ಪುಟ-22.

ಲಕ್ಷಣವೇ ಆಗಿದೆ"[1] ಎಂದು ಹೇಳುವ ಮಾತುಗಳು ಕೂಡ ಇಂದಿರಾ ಅವರ ಸರಳ, ತುಂಬುಹೃದಯದ, ವ್ಯಕ್ತಿತ್ವವನ್ನೇ ಎತ್ತಿತೋರಿಸುತ್ತವೆ.

೧೪-೩-೭೧ ರಂದು ಶಿವಮೊಗ್ಗ ಜಿಲ್ಲಾ ಪ್ರಥಮ ಸಾಹಿತ್ಯ ಸಮ್ಮೇಳನ ಹಾಗೂ ೨-೪-೧೯೭೨ ಚಿಕ್ಕಮಗಳೂರಲ್ಲಿ ಜಿಲ್ಲಾ ಸಾಹಿತ್ಯ ಸಮ್ಮೇಳನಗಳಲ್ಲಿಯೂ ಇಂದಿರಾ ಗೌರವ ಪುರಸ್ಕಾರವಾಗಿ ಸನ್ಮಾನ ಪತ್ರಗಳನ್ನು ಅರ್ಪಿಸಿದ್ದಾರೆ. ಅನೇಕ ಕನ್ನಡ ಸಂಘ ಸಂಸ್ಥೆಗಳು ಇಂದಿರಾ ಅವರನ್ನು ಸನ್ಮಾನಿಸಿ ಗೌರವಿಸಿವೆ. ಕಾದಂಬರಿ ಕ್ಷೇತ್ರಕ್ಕೆ ಅವರಿಂದ ಸಂದ ಸೇವೆಯನ್ನ ಪ್ರಶಂಸಿವೆ.

ನನ್ನ ಕೃತಿಗಳು ಎಂಥವು ಎನ್ನುವದು ನನಗೆ ಗೊತ್ತಿದೆ. ಅದೇ ಸಿಂಧುವಿನಲ್ಲಿ ಬಿಂದು"[2] ಎನ್ನುವ ವಿನಮ್ರತೆ ನಿರಹಂಕಾರ ಇಂದಿರಾ ಅವರದು.

ನನ್ನ ಉತ್ಕರ್ಷಕ್ಕೆ ಕಾರಣ ಕನ್ನಡ ಜನತೆಯ ಅಪಾರ ಅಭಿಮಾನ, ನಾಡಿನ ಪತ್ರಿಕೆಗಳ ಪ್ರಕಾಶಕರ ಹಿರಿಯ ಸಾಹಿತಿಗಳ ಅಶೀರ್ವಾದ"[3]

ಎಂದು ಇಂದಿರಾ ಅವರು ಸಾಹಿತ್ಯ ಪ್ರೇಮಿಗಳನ್ನು, ಕನ್ನಡ ನಾಡಿನ ಜನತೆಯನ್ನು ಪ್ರಕಾಶಕರನ್ನು, ವಿಮರ್ಶಕರನ್ನು ತುಂಬು ಹೃದಯದಿಂದ ನೆನೆಯುತ್ತಾರೆ.

ಡಿ.ವಿ.ಜಿ.ಯವರ 'ಮಂಕುತಿಮ್ಮನ ಕಗ್ಗ' ಇಂದಿರಾ ಅವರ ಮೆಚ್ಚಿನ ಕಾವ್ಯ.

ಅದೇರೀತಿ ಬಾಲ್ಯದಿಂದಲೂ ಅವರಿಗೆ ಹಿಡಿಸಿದ ಕೃತಿಗಳೆಂದರೆ 'ಬದುಕಲು ಕಲಿಯಿರಿ' 'ಜೀವನ ಕಲೆ' 'ಜೀವನ ದರ್ಶನ' ಇವು ಅತ್ಯಂತ ಸರಳವಾಗಿ ಬರೆಯಲ್ಪಟ್ಟ ಉತ್ತಮ ಕೃತಿಗಳು. ಇವುಗಳನ್ನು ಬರೆದ ಮೂಲ ಲೇಖಕರು ಕೃಷ್ಣಾನಂದ, ಅನುವಾದಕರು ಸುಬ್ರಾಯ ಅಡಿಗ.[4]

ಡಾ॥ ಶಿವರಾಮ ಕಾರಂತರ 'ಮರಳಿ ಮಣ್ಣಿಗೆ' 'ಬೆಟ್ಟದ ಜೀವ' 'ಅಳಿದಮೇಲೆ' 'ಮೂಕಜ್ಜಿಯ ಕನಸುಗಳು,' ಡಾ॥ ವಿ. ಕೃ. ಗೋಕಾಕರ 'ಸಮರಸವೇ ಜೀವನ' (ಒಂದು ಭವ್ಯಕೃತಿ) ರಾವ್‌ಬಹದ್ದೂರರ 'ಗ್ರಾಮಾಯಣ' ಈ ಕೃತಿಗಳು ಇಂದಿರಾ ಅವರಿಗೆ ಮೆಚ್ಚಿಕೆ. ಇವಲ್ಲದೆ ಕಟ್ಟೀಮನಿಯವರ 'ಗಿರಿಯ ನವಿಲು' ತ. ರಾ. ಸು ಅವರ ಕಂಬನಿಯ ಆರು ಭಾಗಗಳು (ಐತಿಹಾಸಿಕ) ತ್ರಿವೇಣಿಯವರ 'ಬೆಕ್ಕಿನ ಕಣ್ಣು' 'ಶರಪಂಜರ', 'ಪ್ರೇಮಾಭಟ್ ಅವರ' 'ಇದ್ದು ಹೋದ ಜೀವ' ರೇಖಾ ಕಾಖಂಡಕಿ ಇವರ 'ಕೋಟೆ' ಈ ಕೃತಿಗಳೂ ಇಂದಿರಾ ಅವರಿಗೆ ಹಿಡಿಸಿವೆ. ಶ್ರೀಗೊರೂರರ ಹಾಸ್ಯ

1. ಹೆಚ್ಚಿನ ಬರವಣಿಗೆ—ಸಂಯುಕ್ತ ಕರ್ನಾಟಕ 27-12-1972—ಪುಟ 2.
2. ಎಂ. ಕೆ. ಇಂದಿರಾ ಸಂಯುಕ್ತ ಕರ್ನಾಟಕ ಸಾಪ್ತಾಹಿಕ ಮಂಜರಿ. 1-7-73 'ಸಿಂಧುವಿನಲ್ಲಿ ಬಿಂದು'
3. ಅದೇ
4. ಎಂ. ಕೆ. ಇಂದಿರಾ, ಅವರಿಂದ ತಿಳಿದಿದ್ದೇನೆ.

ಕೃತಿಗಳು ಕುವೆಂಪು ಅವರ 'ಕಾನೂರ ಸುಬ್ಬಮ್ಮ ಹೆಗ್ಗಡತಿ' 'ಮಲೆಗಳಲ್ಲಿ ಮದುಮಗಳು' ಡಾ॥ ಕೆ. ವಿ. ರಾವ್ ಅವರ ಬಾಳ್ವೆ ಕೆ. ವಿ. ಅಯ್ಯರ ಅವರ ಶಾಂತಲಾ ರೂಪದರ್ಶಿ, ಈ ಕೃತಿಗಳು ಇಂದಿರಾ ಅವರಿಗೆ ಎಂದೆಂದಿಗೂ ಮೆಚ್ಚಿನವುಗಳು.

ವಿ. ಸೀ. ಯವರ 'ನಾಗರಿಕ' ಪದ್ಯ ಇಂದಿರಾ ಅವರಿಗೆ ಪ್ರಿಯವಾದದು. ಎಂಟು ರಾಮಾಯಣಗಳನ್ನು ಇಂದಿರಾ ಅವರು ಓದಿದ್ದಾರೆ.

ವಾಲ್ಮೀಕಿ ರಾಮಾಯಣ. ತುಲಸೀ ರಾಮಾಯಣ, ಸಂಪೂರ್ಣ ರಾಮಾಯಣ, ವಚನ ರಾಮಾಯಣ, ಅಳಸಿಂಗಾಚಾರ್ಯರ ಶ್ರೀಮದ್ ರಾಮಾಯಣ, ಕುವೆಂಪು ರಾಮಾಯಣ ದರ್ಶನ. ಮೊದಲಾದವುಗಳನ್ನು ಓದಿದ ಇಂದಿರಾ ಅವರಿಗೆ ಸೀತೆ, ಊರ್ಮಿಳೆ, ಮೊದಲಾದ ಸ್ತ್ರೀಪಾತ್ರಗಳೇ ಪ್ರಧಾನವಾದ ರಾಮಾಯಣವನ್ನಾಧರಿಸಿದ ಕಾದಂಬರಿಯೊಂದನ್ನು ಬರೆಯುವ ಹಂಬಲವಿದೆ.

ಕನ್ನಡಿಗರ ಮೆಚ್ಚುಗೆ ಗಳಿಸಿದ ಇಂದಿರಾ ಅವರಿಗೆ ದಿನದಿನವೂ ಓದುಗರ, ಅಭಿಮಾನಿಗಳ ಪತ್ರಗಳು ಬರುತ್ತವೆ. ಹಿರಿಯರಾಗಿದ್ದರೆ 'ಸೋದರಿ' ಕಿರಿಯರಾಗಿದ್ದರೆ ತಾಯಿ ಎಂಬ ಗೌರವ ಪೂರ್ಣ ಸಂಬೋಧನೆ ಹೊತ್ತುಕೊಂಡೇ ಬರುತ್ತವೆ. ಎಲ್ಲರಿಗೂ ತಕ್ಷಣ ಗೌರವಪೂರ್ವಕ, ವಾತ್ಸಲ್ಯ ಪೂರ್ವಕ ಉತ್ತರಗಳನ್ನು ತಕ್ಷಣ ಬರೆಯುತ್ತಾರೆ.

ಇತ್ತೀಚಿಗೆ ಅವರಿಗೆ ಮೇಲಿಂದ ಮೇಲೆ ಅನಾರೋಗ್ಯ, 'ಇಡೀ ಆಯುಷ್ಯದಲ್ಲಿ ೧೯೮೩ ರಲ್ಲಿ ಮೊದಲಬಾರಿ ಅನಾರೋಗ್ಯದಿಂದ ಬಳಲಿ ಆಸ್ಪತ್ರೆಗೆ ಹೋಗಿದ್ದೇನೆ' ಎಂದು ಇಂದಿರಾ ಹೇಳುತ್ತಾರೆ. ಮಲೆನಾಡಿನ ಸಮಗ್ರ ಜನಜೀವನವನ್ನು ಚಿತ್ರಿಸುವ ಬೃಹತ್ ಕಾದಂಬರಿಯನ್ನು ಬರೆಯುವ ಸಂಕಲ್ಪ ಇಂದಿರಾ ಅವರಿಗಿದೆ.

ಆ ಕೃತಿ ಪ್ರಕಟವಾಗಬೇಕೆಂದು ಹಿರಿಯ ಸಾಹಿತಿ ಡಾ॥ ಹಾ. ಮಾ. ನಾಯಕ್, ಕುವೆಂಪು ಮೊದಲಾದವರ ಹಾರೈಕೆ. ಇಂದಿರಾ ಅವರ ಅನಾರೋಗ್ಯದ ವಿಷಯ ತಿಳಿದ ಹಿರಿಯ ಸಾಹಿತಿ ಡಾ॥ ಹಾ. ಮಾ. ನಾಯಕ ಅವರು ಅಗಸ್ಟ ೨೬-೧೯೮೩ ರಂದು ಪತ್ರ ಬರೆದು ಇಂದಿರಾ ಅವರಿಗೆ "ನಿಮ್ಮ ಅನಾರೋಗ್ಯದ ವಿಷಯ ತಿಳಿದು ನನಗೆ ನನ್ನ ಶ್ರೀಮತಿಗೆ ತುಂಬ ವ್ಯಥೆಯಾಯಿತು. ದೇವರ ದಯೆಯಿಂದ ಈಗ ನೀವು ಉತ್ತಮವಾಗಿದ್ದೀರೆಂದು ತಿಳಿದು ಸಂತೋಷವಾಯಿತು. ನೀವು ಬೇಗನೆ ಗುಣಮುಖರಾಗಿ ಎಂದಿನ ಆರೋಗ್ಯ ಪಡೆಯಬೇಕೆಂಬುದು ನಮ್ಮ ಹೃದಯದ ಹಾರೈಕೆ. ಮಲೆನಾಡಿನ ಜನಜೀವನವನ್ನು ಸಮಗ್ರವಾಗಿ ಚಿತ್ರಿಸುವ ನಿಮ್ಮ ಆ ಮಹಾಕೃತಿ ಪ್ರಕಟಗೊಳ್ಳಬೇಕೆಂಬುದೇ ನನ್ನ ಆಸೆ, ಅಪೇಕ್ಷೆ. ಅದು ಆಗುವುದೇ ಇಲ್ಲ ಎಂಬ ನಿರಾಶೆ ತಾಳಬೇಕಾದುದೇನೂ ಇಲ್ಲ. ನಿಮಗೆ ಯಾವ ಕಾಹಿಲೆಯೂ ಇಲ್ಲ. ಆಗಿರುವದು ಬಳಲಿಕೆ ಈಗ ನೀವು ಈ ಬಳಲಿಕೆಯನ್ನು ಕಳೆದು ಸ್ವಲ್ಪ ಶಕ್ತಿವಂತರಾಗಬೇಕಾದ ಅಗತ್ಯವಿದೆ. ಅದು ವಿಶ್ರಾಂತಿ ಹಾಗೂ ಪೌಷ್ಟಿಕ ಆಹಾರದಿಂದ ಸಾಧ್ಯ. ಕೆಲವು ದಿನ ನೀವು

ಇದಕ್ಕೆ ಒಳಗಾಗಬೇಕೆಂಬುದೇ ಕೋರಿಕೆ....ನಮ್ಮ ಪರಿಚಯ ಆದ ದಿನದಿಂದಲೂ ನೀವು ನನ್ನಲ್ಲಿ ಏಕಪ್ರಕಾರವಾದ ಪ್ರೀತಿಯನ್ನು ತೋರುತ್ತ ಬಂದಿದ್ದೀರಿ. ನಿಮ್ಮ ಪ್ರೀತಿಗೆ ಅಂತಃಕರಣಕ್ಕೆ ನಾನು ಋಣಿಯಾಗಿದ್ದೇನೆ. ಹಿರಿಯರಾದ ನಿಮ್ಮ ಪ್ರೀತಿ ನನಗೆ ಆಶೀರ್ವಾದವಾಗಿದೆ."[1] ಎಂದು ಇಂದಿರಾ ಅವರಿಗೆ ಹಲವರು ಪತ್ರ ಬರೆದು ಮಹಾಕಾದಂಬರಿಯನ್ನು ಬೇಗನೆ ಬರೆಯುವಂತೆ ಅಭಿಮಾನದಿಂದ ಹಾರೈಸಿದ್ದಾರೆ. ಎಲ್ಲ ಹಿರಿಯ ಸಾಹಿತಿಗಳೂ, ಸಾಹಿತ್ಯಾಭಿಮಾನಿಗಳೂ ಅವರ ಬಂಧುಬಳಗದವರೂ ಇಂದಿರಾ ಅವರ ಮೇಲೆ ಅಪಾರ ಅಭಿಮಾನ, ಗೌರವವನ್ನಿಟ್ಟಿದ್ದಾರೆ. ಸಾಧ್ಯವಾದಷ್ಟು ಜಾಗ್ರತೆ ಬರೆಯಬೇಕೆಂಬ ಸಂಕಲ್ಪವಿದೆ. ನನ್ನ ಸಂಕಲ್ಪವನ್ನು ಶ್ರೀ ಕೃಷ್ಣ ಎಂದರೆ ಅದೊಂದು ದೈವ ಶಕ್ತಿ ಎನ್ನುತ್ತಾರೆ.

ಸಂಸಾರ-ಸಾಹಿತ್ಯ ಎರಡರಲ್ಲೂ ನಿಷ್ಠೆಯಿಂದ ದುಡಿಯುತ್ತಿರುವ ಇಂದಿರಾ ಅವರು ಕಿರಿಯರಿಗೆ ಮಾರ್ಗದರ್ಶಕರಾಗಿದ್ದಾರೆ. ಕೈಸೋಲುತ್ತಿದ್ದರೂ ಅವರ ಮನಸ್ಸು ಚೈತನ್ಯ ಚಿಲುಮೆ. ಇಳಿವಯಸ್ಸಿನಲ್ಲಿ ಬೃಹತ್ ಕಾದಂಬರಿಯ ರಚನೆಯ ಸಂಕಲ್ಪವಿಟ್ಟು ಕೊಂಡು ನಾಡ-ನುಡಿಯ ಸೇವೆಯಲ್ಲಿ ತೊಡಗಿದ್ದಾರೆ. ಕನ್ನಡ ಕಾದಂಬರಿಯ ಸಂಪತ್ತನ್ನು ಹೆಚ್ಚಿಸುತ್ತಿದ್ದಾರೆ. ಇದು ಕನ್ನಡಿಗರ ಸೌಭಾಗ್ಯವಾಗಿದೆ.

---

1. ಇಂದಿರಾ ಅವರಲ್ಲಿದ್ದ ಪತ್ರಗಳ ಸಂಗ್ರಹದಿಂದ.

ಅಧ್ಯಾಯ-ಮೂರು

ಕಾದಂಬರಿಗಳ ಪರಿಶೀಲನೆ

ಇಂದಿರಾ ಅವರು ಇದುವರೆಗೆ ಬರೆದ ಎಲ್ಲಾ ಕಾದಂಬರಿಗಳು ಸಾಮಾಜಿಕವಾದವು. ಅವುಗಳನ್ನೆ ವಸ್ತುವಿನ ದೃಷ್ಟಿಯಿಂದ ವ್ಯಕ್ತಿಗಳ ಜೀವನವೇ ಪ್ರಧಾನವಾದಂತಹ ಕಾದಂಬರಿಗಳು, ಕೌಟುಂಬಿಕ ಕಥಾವಸ್ತುಗಳನ್ನೊಳಗೊಂಡ ಕೌಟುಂಬಿಕ ಕಾದಂಬರಿಗಳು, ಸಾಮಾಜಿಕ ಘಟನೆಗಳನ್ನು ಸಮಸ್ಯೆಗಳನ್ನು ಕಥಾವಸ್ತುವನ್ನಾಗಿ ಉಳ್ಳ ಕಾದಂಬರಿಗಳು ಎಂದು ವರ್ಗೀಕರಿಸಿ ವಿಶ್ಲೇಷಣೆಗೊಳಪಡಿಸಲಾಗಿದೆ.

ವ್ಯಕ್ತಿಗಳ ಜೀವನ ಚಿತ್ರಣವೇ ಪ್ರಧಾನವಾದ ಕಾದಂಬರಿಗಳು :

ಈ ಪ್ರಕಾರಕ್ಕೆ ಸೇರಿದ ಕಾದಂಬರಿಗಳೆಲ್ಲ ಪಾತ್ರ ಪ್ರಧಾನವಾದವು "ಪಾತ್ರ ಪ್ರಧಾನವಾದ ಕಾದಂಬರಿಯಲ್ಲಿ ಪಾತ್ರ ನಿರೂಪಣೆ ಹೇಗೋ ಹಾಗೆ ವಸ್ತು ಹರಿಯುತ್ತದೆ. ಪಾತ್ರಗಳ ಸಂಪೂರ್ಣ ನಿರೂಪಣೆಯಾದಾಗ ಕಾದಂಬರಿ ಮುಕ್ತಾಯದತ್ತ ಸಾಗುತ್ತದೆ. ಇಂತಹ ಕೃತಿಗಳಲ್ಲಿ ಕಾದಂಬರಿಕಾರ ಆರಿಸುವ ಮುಕ್ತಾಯವನ್ನು ಬಿಟ್ಟು ಬೇರೊಂದು ಮುಕ್ತಾಯವನ್ನು ಯೋಚಿಸಲು ಸಾಧ್ಯ. ಒಂದು ಪ್ರಧಾನವ್ಯಕ್ತಿಯ ಚಿತ್ರವೇ ಕಾದಂಬರಿಕಾರರ ಗುರಿ ಉಳಿದ ಪಾತ್ರಗಳೆಲ್ಲ ಈ ಕೇಂದ್ರ ಪಾತ್ರದ ನಿರೂಪಣೆಗೆ ಪೋಷಕವಾದ ವ್ಯಕ್ತಿಗಳು"[1]

ಇಂದಿರಾ ಅವರ 'ಜಾಲ', 'ನಾಗವೀಣಾ', 'ಅಮರಾವತಿ', 'ಕೂಚುಭಟ್ಟ'. ಗುಂಡ, 'ಗಿರಿಬಾಲೆ,' 'ಆತ್ಮಸಖಿ', 'ಸೂತ್ರಧಾರಿ', 'ಕಲಾದರ್ಶಿ', 'ತಗ್ಗಿನ ಮನೆ ಸೀತೆ', ಇವೆಲ್ಲ–ಪಾತ್ರ ಪ್ರಧಾನವಾದ ವ್ಯಕ್ತಿ ಜೀವನವೇ ಕಾದಂಬರಿಯ ಕೇಂದ್ರ ವಸ್ತುವಾಗಿರುವಂತಹ ಕಾದಂಬರಿಗಳು.

---

1. ಪ್ರೊ॥ ಎಲ್. ಎಸ್. ಶೇಷಗಿರಿ ರಾವ್ ಕಾದಂಬರಿ ಮತ್ತು "ಸಾಮಾನ್ಯ ಮನುಷ್ಯ" ಪುಟ 49–50

ವಿ. ಸೂ. — ಇದುವರೆಗೆ ಅವರಿಂದ ನಲವತ್ತೆರಡು ಕಾದಂಬರಿಗಳೂ ಹನ್ನೊಂದು ಕಥಾ ಸಂಕಲನಗಳೂ, ಒಂದು ಹರಟೆಗಳ ಸಂಗ್ರಹವೂ ಬಂದಿದೆ. "ಅನುಭವಕುಂಜ" ಅವರ ಪ್ರವಾಸ ಕಥನ. ಒಟ್ಟು ಅವರ ಕೃತಿಗಳ ಸಂಖ್ಯೆ ಐವತ್ನಾಲ್ಕು ಇರುತ್ತದೆ. ಇವುಗಳಲ್ಲಿ ಇಂದಿರಾ ಅವರ ಕಾದಂಬರಿಗಳ ವಿವರವಾದ ಅಭ್ಯಾಸವನ್ನು ಮಾಡಿ, ಅನಂತರ ಅವರ ಕಥಾಸಂಕಲನಗಳನ್ನೂ ಮತ್ತಿತರ ಲೇಖನಗಳ ಕಾಲಾನುಕ್ರಮ ಪಟ್ಟಿಯನ್ನು ಅನುಬಂಧ 1 ರಲ್ಲಿ ನೋಡಬಹುದು.

'ಜಾಲ' ಹಾಗೂ 'ನಾಗವೀಣಾ' :

ಇಂದಿರಾ ಅವರು ಈ ಎರಡೂ ಕಾದಂಬರಿಗಳಲ್ಲಿ ಅನೈತಿಕ ನಡೆತೆಯ ಹೆಣ್ಣಿನ ಬದುಕನ್ನು ಚಿತ್ರಿಸಿದ್ದಾರೆ.

"ಮಾನವ ಜೀವಿತವೇ ಒಂದು ಜಾಲ. ಅದರಲ್ಲಿ ಕೆಲವರು ಇನ್ನೊಬ್ಬರಿಗಾಗಿ ಹರಡಿಕೊಂಡ ಜಾಲವಲ್ಲಿ ತಾವೇ ಸಿಕ್ಕುಬಿದ್ದು ಒದ್ದಾಡುತ್ತಾರೆ. ಅಂಥದೇ ಒಂದು ಕಥಾವಸ್ತು ಜಾಲ" ಎಂದು ಲೇಖಕಿ ಮೊದಲ ಮಾತಿನಲ್ಲಿ ಹೇಳಿದ್ದಾರೆ.

ಕ್ಷಣಿಕ ಆಸೆಗಾಗಿ, ಮನೋದೌರ್ಬಲ್ಯಕ್ಕೊಳಗಾಗಿ ಅನೈತಿಕ ಜೀವನವನ್ನು ನಡೆಸಿ ಹಾಳಾದ ಹೆಣ್ಣನ್ನು ಇಲ್ಲಿ ಚಿತ್ರಿಸಿದ್ದಾರೆ. ಅನೈತಿಕ ನಡತೆ, ಬದುಕಿನ ಅಧಃಪತನಕ್ಕೆ ಕಾರಣವಾಗುತ್ತದೆ. ಎಂಬುದನ್ನು ಇಲ್ಲಿ "ಪಾರ್ವತಿಯ" ಪಾತ್ರದ ಮೂಲಕ ಕಾಣುತ್ತೇವೆ.

'ನಾಗವೀಣಾ' ಕಾದಂಬರಿಯಲ್ಲಿ ಅನೈತಿಕ ನಡತೆಯ ದುಷ್ಟಸ್ವಭಾವದ ತಾಯಿ ಹಾಗೂ ದುರ್ಬಲ ಮನಸ್ಸಿನ ಮಗಳ ಜೀವನದ ಚಿತ್ರಣವಿದೆ ಜಾಲ ಕಾದಂಬರಿಯಲ್ಲಿ ಪಾರ್ವತಿ ಬಾಲ್ಯದಲ್ಲಿ ತಂದೆ ತಾಯಿಗಳನ್ನು ಕಳೆದುಕೊಂಡು ತಬ್ಬಲಿಯಾಗಿ ದೊಡ್ಡಪ್ಪನ ಆಶ್ರಯದಲ್ಲಿ ಬೆಳೆಯುತ್ತಾಳೆ, ದೊಡ್ಡಮ್ಮನ ಕಟುನುಡಿ, ನಿಂದೆ, ಇವುಗಳಿಂದ ಪಾರ್ವತಿಯ ಮನಸ್ಸು ಒರಟಾಗುತ್ತದೆ. ಹೈಸ್ಕೂಲಿನ ಕೊನೆಯ ವರ್ಷದಲ್ಲಿದ್ದಾಗ ಆ ಹಳ್ಳಿಗೆ ಹೊಸತಾಗಿ 'ಟೆಂಟ್' ಸಿನೇಮಾ ಬರುತ್ತದೆ. ಊರ ಜನರೆಲ್ಲ ಸಿನೇಮಾ ನೋಡಿದಾಗ ತಾನೂ ಸಿನೇಮಾ ನೋಡಬೇಕೆಂಬ ಆಶೆ ಪಾರ್ವತಿಯಲ್ಲಿ ಪ್ರಬಲವಾಗುತ್ತದೆ. ಒಂದು ರಾತ್ರಿ ಹಿರಿಯರ ಕಣ್ಣು ತಪ್ಪಿಸಿ ಸಿನೇಮಾ ನೋಡಲು ಹೊರಡುತ್ತಾಳೆ. ಅಲ್ಲಿ ದ್ವಾರಪಾಲಕ ಪಾರ್ವತಿಗೆ ದಿನವೂ ಸಿನೇಮಾ ತೋರಿಸುವ ಆಶೆ ಹುಟ್ಟಿಸಿ ಆವಳ ಶೀಲಹರಣ ಮಾಡುತ್ತಾನೆ. ತನ್ನ ಕೆಲಸ ಮುಗಿದ ಕೆಲವೇ ದಿನಗಳಲ್ಲಿ ಪಾರ್ವತಿಗೆ ಸುಳ್ಳು ವಿಳಾಸ ಕೊಟ್ಟು ಆಕೆಯನ್ನು ಮದುವೆಯಾಗುವದಾಗಿ ಹೇಳಿ ಹೊರಟು ಹೋಗುತ್ತಾನೆ,

ಮೋಸಹೋದ ಪಾರ್ವತಿ ಗರ್ಭಿಣಿಯಾಗಿ ದೊಡ್ಡಪ್ಪನ ಮನೆಯವರು ಊರಲ್ಲಿ ಇಲ್ಲದ ಸಮಯ ಸಾಧಿಸಿ ಸಮಾಜಕ್ಕೆ ಹೆದರಿ ಬೆಂಗಳೂರು ಸೇರುತ್ತಾಳೆ. ಸಂಜೀವನ ಹುಡುಕಾಟಕ್ಕಾಗಿ ಪ್ರಯತ್ನಿಸಿ ವಿಫಲಳಾಗುತ್ತಾಳೆ. ಚರ್ಚವೊಂದರಲ್ಲಿ ಆಶ್ರಯ ಪಡೆದು ಕ್ರೈಸ್ತಧರ್ಮ ಸ್ವೀಕಾರ ಮಾಡುತ್ತಾಳೆ. ಗಂಡು ಮಗುವಿಗೆ ಜನ್ಮ ಕೊಡುತ್ತಾಳೆ. ಆ ಮಗುವನ್ನು ಚರ್ಚಿನ ವೃದ್ಧ ಪಾದ್ರಿ ದಂಪತಿಗಳಿಗೆ ಒಪ್ಪಿಸಿ, ಬೊಂಬಾಯಿಯಲ್ಲಿ 'ನರ್ಸ್' ಕೆಲಸಕ್ಕೆ ಸೇರುತ್ತಾಳೆ. ದೇವರು, ಧರ್ಮ, ಪ್ರೀತಿ, ಕರುಣೆ, ವಾತ್ಸಲ್ಯ ಇವುಗಳಲ್ಲಿ ತನ್ನ ನಂಬಿಕೆಯನ್ನು ಕಳೆದುಕೊಳ್ಳುತ್ತಾಳೆ. ಸ್ವಚ್ಛಂದವಾದ ಜೀವನ ನಡೆಸುತ್ತಾಳೆ.

ಒಮ್ಮೆ ದೇವದಾಸನೆಂಬ ತರುಣ ವೈದ್ಯನ ಮೇಲೆ 'ಜಾಲ' ಬೀಸುತ್ತಾಳೆ. ದೇವದಾಸನ ಮದುವೆ ನಿಶ್ಚಯವಾದಾಗ ಅವನೊಂದಿಗೆ ಕೊನೆಯ ದಿನವನ್ನು ಕಳೆಯಲು ಹೋದಾಗ ಮನೆಯಲ್ಲಿ ಬೆಂಗಳೂರಿನ ಚರ್ಚಿನಲ್ಲಿ ಮಗುವಿನೊಂದಿಗೆ ತೆಗೆಸಿದ ತನ್ನ ಭಾವಚಿತ್ರ ಕಣ್ಣಿಗೆ ಬೀಳುತ್ತದೆ. ದೇವದಾಸನಿಂದ ಅವನ ಜೀವನ ವೃತ್ತಾಂತ. ತಿಳಿದಾಗ ಆತನು ತನ್ನ ಮಗನೆಂಬುದು ಸ್ಪಷ್ಟವಾಗುತ್ತದೆ. ಮಗನೆಂದು ತಿಳಿಯದೆ ಅವನೊಂದಿಗೆ ದೈಹಿಕ ಸಂಬಂಧ ಬೆಳೆಸಿದ ಪಾರ್ವತಿ ಪಶ್ಚಾತ್ತಾಪ ಪಟ್ಟು ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ ಈ ಕಾದಂಬರಿಯ ನಾಯಕಿ ಪಾರ್ವತಿ ತಾನೂ ಒಂದು ಮೋಸದ ಜಾಲದಲ್ಲಿ ಸಿಲುಕಿದ್ದಲ್ಲದೆ ಮತ್ತೊಬ್ಬರಿಗೆ ಹರಡಿದ ಜಾಲದಲ್ಲಿ ತಾನೇ ಸಿಕ್ಕಿಬೀಳುತ್ತಾಳೆ.

ಈ ಕಾದಂಬರಿಯಲ್ಲಿ ಸಿನೇಮಾ ಕಥಾತಂತ್ರದ ಬಳಕೆ ಹೆಚ್ಚಾಗಿದೆ. ಪಾರ್ವತಿಗೆ ಸಿನೀಮಾ ನೋಡುವ ಚಪಲ ಸಹಜವಾದರೂ ತನ್ನ ಶೀಲವನ್ನೆ ಅದಕ್ಕೆ ಬಲಿಕೊಡುವಷ್ಟು ಪ್ರಬಲವಾಗಿತ್ತೆಂಬುದು ಸ್ಪಷ್ಟನಿರೂಪಣೆ ಇಲ್ಲಿ ಕಂಡು ಬರುವುದಿಲ್ಲ. ಸಂಜೀವ ಪಾರ್ವತಿಯನ್ನು ಕಂಡ ಕೂಡಲೇ ಅವಳನ್ನು ಬಯಸುವದು, ಆತನು ಕೇಳಿದ ತಕ್ಷಣ ಯಾವ ರೀತಿಯ ದ್ವಂದ್ವಕ್ಕೂ ಒಳಗಾಗದೇ ತನ್ನನ್ನು ಆತನಿಗೆ ಒಪ್ಪಿಸಿಕೊಳ್ಳುವದು ಇವೆಲ್ಲ ಅಸಹಜವೆನಿಸುತ್ತದೆ. ಇಲ್ಲಿ ಪಾರ್ವತಿಯ ಬಾಳು ವಿಕೃತದಾರಿ ಹಿಡಿಯಲು ಸಂಜೀವನಂತಹ ಕಾಮುಕ ಪುರುಷರೇ ಕಾರಣವೆನ್ನುವಂತೆ ಚಿತ್ರಿಸಿದ್ದಾರೆ.

ಪಾರ್ವತಿ ಕೆಲಸಕ್ಕಿದ್ದ ಆಸ್ಪತ್ರೆಗೆ, ಅವಳ ಮಗ ದೇವದಾಸ ವೈದ್ಯನಾಗಿ ಬರುವುದು, ಅದೇವರ್ಷ ಸಂಜೀವ ತನ್ನ ಹೆಸರು ಬದಲಿಸಿಕೊಂಡು ಅದೇ ಆಸ್ಪತ್ರೆಗೆ ರೋಗಿಯಾಗಿ ಬರುವದು ಇವೆಲ್ಲ ಸಿನೀಮಾಯವಾಗಿ ಚಿತ್ರಿತವಾಗಿವೆ.

ಆಸ್ಪತ್ರೆಯಲ್ಲಿ ವೈದ್ಯರು, ದಾದಿಯರು ಶ್ರೀಮಂತ ರೋಗಿಗಳಿಂದ ದುಡ್ಡು ಕೇಳುವದು ಆಸ್ಪತ್ರೆಯ ರಾಜಕೀಯ, ಹೊಸದಾಗಿ ಬಂದ ವೈದ್ಯರು ತಮ್ಮ ಕೆಲಸಕ್ಕೆ ಅನುಭವೀ ದಾದಿಯರನ್ನು ಅವಲಂಬಿಸುವದು. ದಾದಿಯರ ಅನೈತಿಕ ನಡತೆ, ಅವರ ನಾಟಕೀಯತೆ ಇವೆಲ್ಲವುಗಳ ವಿವರಣೆ ಇಲ್ಲಿ ವಾಸ್ತವವಾಗಿ ಬಂದಿದೆ.

ದೇವರು, ಧರ್ಮ, ಶೀಲ–ಸಂಪ್ರದಾಯ ಇವುಗಳಲ್ಲಿ ನಂಬಿಕೆ ಕಳೆದುಕೊಂಡ ಪಾರ್ವತಿ ಕೊನೆಗೆ ದೇವದಾಸ ತನ್ನ ಮಗನೆಂದು ತಿಳಿದಾಗ ಪಾಪ ಪ್ರಜ್ಞೆಯಿಂದ ತೊಳಲುತ್ತಾಳೆ. ದೈವ ಎಂಬ ಅಗೋಚರ ಶಕ್ತಿಯನ್ನು ನಂಬುತ್ತಾಳೆ.

ಸ್ತ್ರೀ ಒಮ್ಮೆ ತಿಳಿದೋ ತಿಳಿಯದೆಯೋ ಕಾಲು ಜಾರಿದರೆ ಹಿಂದೂ ಸಮಾಜ ಅವಳನ್ನು ತಿರಸ್ಕಾರದಿಂದ ನೋಡುತ್ತದೆ ಅದೇ ಕ್ರೈಸ್ತ ಧರ್ಮ ಮಾನವೀಯತೆಯಿಂದ ನೋಡುತ್ತದೆ ಎಂಬುದನ್ನು ಈ ಕಾದಂಬರಿಯ ಪಾರ್ವತಿಯ ಜೀವನ ವೃತ್ತಾಂತದಿಂದ ತಿಳಿಯಬಹುದು–ಜೀವನದಲ್ಲಿ ಒಬ್ಬ ವ್ಯಕ್ತಿ ತಪ್ಪು ಮಾಡಿದಾಗ ಅದರ ಹಿನ್ನೆಲೆಯನ್ನು ವಿಚಾರಿಸಿ ಮಾನವೀಯ ದೃಷ್ಟಿಯಿಂದ ನೋಡಬೇಕಾದ ಅಗತ್ಯವನ್ನು ಲೇಖಕಿ ಸೂಚ್ಯ

ವಾಗಿ ಇಲ್ಲಿ ನಿರೂಪಿಸಿದ್ದಾರೆ. ಇಲ್ಲದೇ ಹೋದರೇ ಮಾನವ ಜೀವನ ಪಾರ್ವತಿಯ ಜೀವನದಂತೆ ವಿಕೃತವಾಗಿ ದುರಂತದಲ್ಲಿ ಕೊನೆಗೊಳ್ಳುತ್ತದೆ.

ನಾಗವೀಣಾ ಕಾದಂಬರಿಯಲ್ಲಿ ವಿಲಾಸ ಜೀವನದ ಬೆನ್ನುಹತ್ತಿದ ತಾಯಿಯಿಂದ ಮೃದು ಸ್ವಭಾವದ ಮಗಳ ಜೀವನ ದುರಂತದಲ್ಲಿ ಪರ್ಯವಸಾನ ಹೊಂದುತ್ತದೆ.

ರಾಜಸ್ಥಾನದ ಅಮಾತ್ಯರು, ಆಂಧ್ರದ ಜಗದೀಶ್ವರಿಯ ಸೌಂದರ್ಯಕ್ಕೆ ಮರುಳಾಗಿ ಅವಳನ್ನು ಮದುವೆಯಾಗುತ್ತಾರೆ. ಅವಳು ಸುಂದರಿಯಾಗಿದ್ದರೂ ಗಯ್ಯಾಳಿ. ಮದುವೆಯಾದ ಕೆಲದಿನಗಳಲ್ಲಿಯೇ ಜಗದೀಶ್ವರಿ ಸ್ವೇಚ್ಛಾಮನೋಭಾವದ ಅಹಂಕಾರಿ ಎಂಬುದು ಅಮಾತ್ಯರಿಗೆ ತಿಳಿಯುತ್ತದೆ. ಅವಳು ರಾಜಮನೆತನದ ಗಾಂಭೀರ್ಯ, ಮರ್ಯಾದೆಯ ಎಲ್ಲೆಯನ್ನು ಮೀರಿ ವರ್ತಿಸುತ್ತಾಳೆ. ಸಾತ್ವಿಕ ಸ್ವಭಾವದ ಅಮಾತ್ಯರು ಮಗಳು ಭುವನೇಶ್ವರಿಗಾಗಿ ಎಲ್ಲವನ್ನು ಸಹಿಸುತ್ತಾರೆ.

ಭುವನೇಶ್ವರಿ ಸುಂದರಿ. ಗಂಭೀರ ಸ್ವಭಾವದವಳು. ವಿದ್ಯಾವಂತೆ. ತಾಯಿಯ ನಡತೆಯ ಬಗೆಗೆ ಆಕೆಗೆ ಬಾಲ್ಯದಿಂದಲೇ ಜಿಗುಪ್ಸೆ, ರಾಜಮನೆತನದ ಪದ್ಧತಿಯಂತೆ ಭುವನೇಶ್ವರಿಯ ಮದುವೆ ಹನ್ನೆರಡು ವರ್ಷಕ್ಕೆ ಕಾಠೆವಾಡದ ರಾಜಕುಮಾರನೊಂದಿಗೆ ನಡೆಯುತ್ತದೆ. ಮದುವೆಯಾದ ಒಂದು ವರ್ಷದಲ್ಲಿ ರಾಜಕುಮಾರ ಅಲಹಾಬಾದಿನಲ್ಲಿ ತ್ರಿವೇಣಿಯಲ್ಲಿ ಈಜಲು ಹೋದಾಗ ಸೆಳುವಿಗೆ ಸಿಕ್ಕು ಮೃತನಾಗುತ್ತಾನೆ. ಈ ಸುದ್ದಿ ಯಿಂದ ಅಮಾತ್ಯರಿಗೆ ಹೃದಯಾಘಾತವಾಗುತ್ತದೆ. ತಂದೆ ಹಾಗೂ ಪತಿಯನ್ನು ಕಳೆದುಕೊಂಡ ಭುವನೇಶ್ವರಿಯ ಬಾಳು ಬರಡಾಗುತ್ತದೆ.

ಅಮಾತ್ಯರ ಮರಣದ ನಂತರ ಜಗದೀಶ್ವರೀ ಮಗಳೊಂದಿಗೆ ಮುಂಬಯಿಗೆ ಬಂದು ನೆಲೆಸುತ್ತಾಳೆ. ಅವಳ ಧನದ ದಾಹ, ಪ್ರತಿಷ್ಠೆಯ ಚಪಲ ದಿನ ದಿನಕ್ಕೆ ಬೆಳೆಯತೊಡಗುತ್ತದೆ. ತಾಯಿಯ ಸಹವಾಸ ಭುವನೇಶ್ವರಿಗೆ ಮುಳ್ಳಿನ ಹಾಸಿಗೆಯಾಗಿ ಪರಿಣಮಿಸುತ್ತದೆ. ವಿಲಾಸದ ಜೀವನವನ್ನು ಅರಸಿ ಹೊರಟ ಜಗದೀಶ್ವರಿ ಮುಂಬಯಿ ಕೋಟ್ಯಾದೀಶನ ಮೇಲೆ ತನ್ನ ಜಾಲವನ್ನು ಬೀಸುತ್ತಾಳೆ ತನ್ನ ಮಗಳನ್ನು ಅದೇ ಹಾದಿಗೆ ಎಳೆಯಲು ಪ್ರಯತ್ನಿಸುತ್ತಾಳೆ.

ಒಮ್ಮೆ ಭುವನೇಶ್ವರಿ ತನ್ನ ತಾಯಿಯ ಸ್ನೇಹಿತರೊಬ್ಬರ ಮನೆಗೆ ಮದುವೆಗೆ ಹೋದಾಗ ನಾಗವೀಣೆಯನ್ನು ನುಡಿಸುತ್ತಿದ್ದ ಜಗನ್ಮೋಹನ ಎಂಬ ಯುವಕ ಸೌಮ್ಯ ಸೌಂದರ್ಯಕ್ಕೆ ಮನಸೋಲುತ್ತಾಳೆ. ನಾಗವೀಣೆಯನ್ನು ನುಡಿಸಲು ಕಲಿಯುವ ಇಚ್ಛೆಯನ್ನು ವ್ಯಕ್ತಪಡಿಸುತ್ತಾಳೆ. ಅವನನ್ನು ಪ್ರೀತಿಸುತ್ತಾಳೆ.

ವಿಶ್ವಾಮಿತ್ರನೆಂಬ ಕೋಟ್ಯಾಧೀಶನು ದೇವೇಂದ್ರಲಾಲ್ ಎಂಬ ಶ್ರೀಮಂತನ ವೈಭವವನ್ನು ತೋರಿಸುವ ನೆಪದಲ್ಲಿ ಅವಳನ್ನು ಕರೆದೊಯ್ದು ಅವಳ ಮೇಲೆ ಅತ್ಯಾಚಾರವೆಸಗುತ್ತಾನೆ. ಭುವನೇಶ್ವರಿ ಒಮ್ಮೆ ನಾಗವೀಣೆಯನ್ನು ನುಡಿಸುತ್ತಿದ್ದ

ಸಂದರ್ಭದಲ್ಲಿ ಅದರ ತಂತಿಯು ಕಿತ್ತು ಹೋಗುತ್ತದೆ. ಯೋಗ್ಯ ವ್ಯಕ್ತಿಗಳಿಗೆ ಮಾತ್ರ ನಾಗವೀಣೆಯನ್ನು ನುಡಿಸುವ ವಿದ್ಯೆಯನ್ನು ಕಲಿಸು ಎಂದು ಹೇಳಿದ ಗುರುವಿನ ಮಾತು ಜಗನ್ಮೋಹನನಿಗೆ ನೆನಪಾಗುತ್ತದೆ. ಭುವನೇಶ್ವರಿಯ ಸಚ್ಚಾರಿತ್ರದ ಬಗೆಗೆ ಸಂದೇಹ ಉಂಟಾಗಿ ಅವನು ಮುನಿಸಿಕೊಂಡು ಹೊರಟು ಹೋಗುತ್ತಾನೆ.

ತಾಯಿಯ ಸಂಚಿನಿಂದ ಭುವನೆಯ ಮದುವೆ ವೃದ್ಧನಾದ ದೇವೇಂದ್ರಲಾಲ ನೊಡನೆ ನಡೆಯುತ್ತದೆ. ದೇವೇಂದ್ರಲಾಲ್‌ನಲ್ಲಿ ಸಂತಾನ ಶಕ್ತಿ ಇರುವದಿಲ್ಲವಾದ್ದ ರಿಂದ ಭುವನೆ ತಾಯ್ತನದ ಸುಖದಿಂದ ವಂಚಿತಳಾಗುತ್ತಾಳೆ. ಕೊನೆಯಲ್ಲಿ ಅವಳ ತಾಯಿಯೇ ದೇವೇಂದ್ರಲಾಲ್‌ನೊಡನೆ ವಿಲಾಸದ, ಜೀವನ ಕಳೆಯಲು ಪ್ಯಾರಿಸಗೆ ಹೊರಟು ಹೋಗುತ್ತಾಳೆ.

ದುಷ್ಟ ತಾಯಿಯ ಜಾಲದಲ್ಲಿ ಸಿಕ್ಕು ಭುವನೇಶ್ವರಿ ಜಲವಿಹಾರಕ್ಕೆ ಹೋದಾಗ ಉದ್ದೇಶಪೂರ್ವಕವಾಗಿ ಮುಳುಗಿ ತನ್ನ ಬದುಕನ್ನು ಕೊನೆಗೊಳಿಸಿಕೊಳ್ಳುತ್ತಾಳೆ.

ಬಾಟ್ಲೀವಾಲಾ, ದೇವೇಂದ್ರಲಾಲ, ಜಗದೀಶ್ವರೀ ಈ ಎಲ್ಲ ಪಾತ್ರಗಳು ಶ್ರೀಮಂತಿಕೆಯ ಅಟ್ಟಹಾಸದಲ್ಲಿ ಮೆರೆಯುವ ಅಮಾನುಷ ಪಾತ್ರಗಳು. ಅತಿರೇಕದ ವರ್ಣನೆಗಳಿಂದ ಕಾದಂಬರಿ ತನ್ನ ಸತ್ವವನ್ನು ಕಳೆದುಕೊಂಡಿದೆ. ಸಮಾಜದಲ್ಲಿ ಸಂಬಂಧಿ ಸಿದ ವ್ಯಕ್ತಿಗಳೇ ಸಭ್ಯ ವ್ಯಕ್ತಿಗಳೇ ಬಾಳಿಗೆ ಹೇಗೆ ತೊಡಕಾಗುತ್ತಾರೆ. ಎಂಬುದನ್ನು ಈ ಕಾದಂಬರಿಯಲ್ಲಿ ಕಾಣುತ್ತೇವೆ. ಆದರೂ ಈ ಕಾದಂಬರಿಗೂ ಒಂದು ವರ್ಗದ ಓದುಗ ರಿರುವದರಿಂದ ಜನಪ್ರಿಯವಾಗಿದೆ.

'ಗುಂಡ' ಹಾಗೂ 'ಕೂಚುಭಟ್ಟ' :

'ಗುಂಡ' ಈ ಕಾದಂಬರಿ ೧೯೭೭ ರಲ್ಲಿ ಪ್ರಕಾಶ ಸಾಹಿತ್ಯದಿಂದ ಪ್ರಕಟವಾಗಿ ೧೯೮೦ ರಲ್ಲಿ ದ್ವಿತೀಯ ಮುದ್ರಣ ಕಂಡಿದೆ. ಇಂದಿರಾ ಅವರು 'ಗುಂಡ' ಕಾದಂಬರಿಯಲ್ಲಿ ಅವನ ಸರಳ ವ್ಯಕ್ತಿತ್ವ ವೈಚಾರಿಕತೆ ಹಾಗೂ ವಾಸ್ತವ ಬದುಕನ್ನು ಕುರಿತು ಚಿತ್ರಿಸಿದ್ದಾರೆ. ಈ ಕಥಾನಾಯಕ ಬಾಲ್ಯದಿಂದಲೂ ಲೇಖಕಿಗೆ ಪರಿಚಯದವನು, ಎಂಟು ವರ್ಷ ಹಿರಿಯನು.

"ನಮ್ಮ ಮಲೆನಾಡಿನ ಒಂದು ಊರಿನ ಪರದೇಶಿ ಹುಡುಗ ಗುಂಡ ಅವನ ನಿಜವಾದ ಹೆಸರು ಬೇರೆ. ಅವನ ಜೀವನ ಚಿತ್ರ ಇದ್ದುದನ್ನು ಇದ್ದ ಹಾಗೆ ಬರೆದಿದ್ದೇನೆ" ಎಂದು ಮುನ್ನುಡಿಯಲ್ಲಿ ಹೇಳಿದ್ದಾರೆ.

ಗುಂಡ ಬಡ ಕುಟುಂಬದಲ್ಲಿ ಹುಟ್ಟಿದವನು. ಅವನ ತಂದೆ-ತಾಯಿಗಳು ಬಡವ ರಾದರೂ ಉದಾರ ಮನಸ್ಸಿನವರು, ದೈವಭಕ್ತರು. ಅವರಿಗೆ ಮೂರು ಹೆಣ್ಣು ಹುಟ್ಟಿ ಒಂದರ ಹಿಂದೆ ಒಂದು ತೀರಿಹೋದಾಗ ಶಂಕರ ಭಟ್ಟರ ತಾಯಿ ಶೃಂಗೇರಿಯಲ್ಲಿ ಸಂಸ್ಕೃತ ಕಲಿತು ಜ್ಯೋತಿಷಿಗಳಿಗೆ ಮಗ-ಸೊಸೆಯ ಜಾತಕವನ್ನು ತೋರಿಸುತ್ತಾರೆ. ಜಾತಕ

ನೋಡಿದ ಜೋಯಿಸರು "...ಶಂಕ್ರೂ ಜಾತಕದಾಗೆ, 'ನಾಗದೋಷ' ಇದೆ. ನಾಗರ ಪ್ರತಿಷ್ಠೆ ಮಾಡಿದರೂ ಸಲೆಗಾ ಅವನಿಗೆ ಆರು ಮಕ್ಕಳ ಫಲದಾಗ ಉಳಿಯೊದು ಒಂದೇ. ಆರು ಮಕ್ಕಳ ಆಯುಸ್ಸು ಒಂದಕ್ಕೆ ತುಂಬತ್ತೆ" ಎಂದು ಭವಿಷ್ಯ ನುಡಿದದ್ದು ನಿಜವಾಗುತ್ತದೆ. ನಾಲ್ಕನೇಯವನಾಗಿ 'ಗುಂಡ' ಹುಟ್ಟಿದ ನಂತರದ ಎರಡು ಮಕ್ಕಳು ಸತ್ತು ಹೋಗುತ್ತವೆ. ಗಟ್ಟಿಮುಟ್ಟಾದ ಶರೀರ, ಸುಂದರ ರೂಪದ 'ಗುಂಡ' ಆ ಕುಟುಂಬದ ಕಣ್ಮಣಿಯಾಗುತ್ತಾನೆ.

'ಗುಂಡ' ಆರು ವರ್ಷದವನಿದ್ದಾಗ ಊರಿಗೆ ಬಂದ ಕಾಲರಾ ಬೇನೆ ಶಂಕರಭಟ್ಟರನ್ನು ಬಲಿ ತೆಗೆದುಕೊಳ್ಳುತ್ತದೆ. ಈ ಕುಟುಂಬಕ್ಕೆ ಆಧಾರ ಸ್ತಂಭದಂತಿದ್ದ ಊರ ಧನಿಕ ರಾಮಯ್ಯನವರ ಹೆಂಡತಿ. ಅನ್ನಪೂರ್ಣಮ್ಮ ಕಾಲರಾಕ್ಕೆ ಬಲಿಯಾಗುತ್ತಾಳೆ. ಗಂಡ, ಹಾಗೂ ತಾಯಿಯಂತಿದ್ದ ಅನ್ನಪೂರ್ಣಮ್ಮನನ್ನು ಕಳೆದುಕೊಂಡ ಸಣ್ಣಮ್ಮ ಅಸಹಾಯಕಳಾಗುತ್ತಾಳೆ. ಊರ ಹೆಂಗಳೆಯರ ಸಾಂತ್ವನ ಮತ್ತೆ ಅವಳನ್ನು ಬದಕಲು ಪ್ರೇರೆಪಿಸುತ್ತದೆ.

ಅನ್ನಪೂರ್ಣಮ್ಮ ತೀರಿಕೊಂಡ ನಂತರ ರಾಮಯ್ಯನವರ ಕುಟುಂಬದಲ್ಲಿ ಏರುಪೇರುಗಳಾಗುತ್ತವೆ ಮನೆಯಲ್ಲಿ ಅಣ್ಣತಮ್ಮಂದಿರಲ್ಲಿ ವಿರಸ ಉಂಟಾಗುತ್ತದೆ ಅನುಭವಿಕರಾದ ರಾಮಯ್ಯನವರು ಮನೆಯ ಮಗಳಂತಿದ್ದ ಸಣ್ಣಮ್ಮನನ್ನು ಸೊಸೆಯಂದಿರು ಪ್ರೀತಿಯಿಂದ ಕಾಣುವದಿಲ್ಲ. ಎಂಬುದನ್ನು ತಿಳಿದು ಅವಳ ಋಣವನ್ನು ಹೇಗಾದರೂ ತೀರಿಸಬೇಕೆಂದು ಬಯಸಿ ತಮ್ಮ ಸ್ನೇಹಿತ ಗಂಗಾದರ ಎನ್ನುವವರ ಮೂಲಕ ಮೂರು ಸಾವಿರ ನಗದು ಹಣವನ್ನು ಗುಟ್ಟಾಗಿ ತಲುಪಿಸುತ್ತಾರೆ ರಾಮಯ್ಯನವರ ಮಕ್ಕಳಲ್ಲಿ ಜಗಳವಾಗಿ ಸಣ್ಣಮ್ಮನಿಗೆ ಇರಲು ಕೊಟ್ಟಿದ್ದ ಮನೆಯನ್ನು ಬಿಡಿಸುತ್ತಾರೆ ಕೆಲವೇ ದಿನಗಳಲ್ಲಿ ಅವಿಶ್ರಾಂತವಾಗಿ ದುಡಿದ ಸಣ್ಣಮ್ಮ ಕಾಯಿಲೆಯಿಂದಾಗಿ ಮರಣ ಹೊಂದುತ್ತಾಳೆ.

ತಬ್ಬಲಿಯಾದ ಗುಂಡ ತನ್ನ ಸದ್ಗುಣಗಳಿಂದ ಊರವರ ಕರುಣೆಯ ಕೂಸಾಗಿ ಬೆಳೆಯುತ್ತಾನೆ. ಊರ ಜನರ ಕಷ್ಟಸುಖದಲ್ಲಿ ನೆರವಾಗಿ ಎಲ್ಲರ ಪ್ರೀತಿಗೆ ಪಾತ್ರನಾಗುತ್ತಾನೆ. ಶಾಲೆಗೆ ಹೋಗಿ ಶಿಕ್ಷಣ ಪಡೆಯದಿದ್ದರೂ ಜೀವನಾನುಭವದಲ್ಲಿ ಅವನ ಮನಸ್ಸು ಮಾಗುತ್ತದೆ.

ಪ್ರಾಮಾಣಿಕವಾಗಿ ದುಡಿಯುತ್ತಾನೆ. ಅಂಧಶ್ರದ್ಧೆ, ಪುರಾಣ, ಪುಣ್ಯಕಥೆ, ಸ್ವರ್ಗನರಕ, ಇತ್ಯಾದಿ ವಿಚಾರಗಳಿಂದ ಅವನು ದೂರವಾಗಿ ವಾಸ್ತವ ಬದುಕನ್ನು ಮಾತ್ರ ನಂಬುತ್ತಾನೆ.

ಅವನು ತನ್ನ ಜೀವಿತದಲ್ಲಿ ಮಾಡಿದ ಪರೋಪಕಾರಗಳು ಅನೇಕ. ಅತ್ತೆಯ ಪ್ರಕೋಪಕ್ಕೆ ಬಲಿಯಾಗಿ ತನ್ನ ಜೀವವನ್ನು ಕಳೆದುಕೊಳ್ಳಲು ಸಿದ್ಧಳಾದ ಪ್ರಾಣೇಶನ

ಹೆಂಡತಿಯನ್ನು ರಕ್ಷಿಸಿ ಅವಳ ಮನೆಯಲ್ಲಿ ಅವಳು ಸುಖವಾಗಿ ಬಾಳುವಂತೆ ಸಹಾಯ ಮಾಡುತ್ತಾನೆ.

ಅವನ ಬದುಕಿನಲ್ಲಿ ಪ್ರಾಮಾಣಿಕತೆ ಹಾಗೂ ಸಂಯಮದ ಸತ್ವಪರೀಕ್ಷೆಯ ಸಂದರ್ಭ ಎದುರಾದಾಗ ಅವನು ತೋರಿಸಿದ ದಿಟ್ಟತನ ಮೆಚ್ಚುವಂತಹದು, ಅದೆಂದರೆ ಮದುವೆಯಾಗಿ ಆರುವರ್ಷವಾದರೂ ಮಕ್ಕಳಿಲ್ಲದ್ದರಿಂದ ಹೆಂಗಸೊಬ್ಬಳನ್ನು ಅವರ ಮನೆಯವರು ತಾತ್ಸಾರ ಮಾಡಿ ಹೊರಗೆ ಹಾಕುತ್ತಾರೆ. ಸದೃಢಕಾಯನು ಸುಂದರನೂ ಆಗಿದ್ದ ಗುಂಡನ ಬಳಿ ಬಂದು ಗುಟ್ಟಾಗಿ ಅವನ ಕಾಲಿಗೆ ಬಿದ್ದು 'ಗರ್ಭದಾನ' ಮಾಡು ವಂತೆ ಅಂಗಲಾಚಿಕೊಳ್ಳುತ್ತಾಳೆ. ಗುಂಡ ಕೆಲಕ್ಷಣ ಸಂಯಮ ಕಳೆದುಕೊಂಡರೂ ಹುಟ್ಟಿನಿಂದಲೇ ಬಂದ ವಿವೇಕ ಅವನನ್ನು ಎಚ್ಚರಿಸುತ್ತದೆ. ಅವಳಿಗೆ ತಿಳಿಹೇಳಿ ಮನೆಗೆ ಕಳಿಸಿಕೊಡುತ್ತಾನೆ. ತನ್ನ ಗಂಡನಿಂದ ಮಕ್ಕಳಾಗುವ ಸಂಭವ ತನಗಿಲ್ಲವೆಂದು ಅವಳೇ ಹೇಳಿರುತ್ತಾಳೆ. ಇಷ್ಟಾದರೂ ಒಂದೆರಡು ವರ್ಷಗಳಲ್ಲಿ ಅವಳು ಪರಪುರುಷನಿಂದ ಗರ್ಭಿಣಿಯಾಗಿರುವದನ್ನು ತಿಳಿದರೂ ಗುಂಡ ಸುಮ್ಮನಿದ್ದು ಬಿಡುತ್ತಾನೆ. ಅಂತಹ ನಿರ್ಲಿಪ್ತತೆ ಅವನಲ್ಲಿದೆ.

ಅವನ ತಾಯಿಯಂತಿದ್ದ ಗೌರಕ್ಕನ ಮಗಳು ಸರಸಿಯನ್ನು ಮದುವೆಯಾಗಿ ತೃಪ್ತಿಯ, ಸರಸದ ಜೀವನ ಸಾಗಿಸುತ್ತಾನೆ.

ಗುಂಡನ ಗಂಭೀರ ಸ್ವಭಾವ, ಪರೋಪಕಾರ, ಪ್ರಾಮಾಣಿಕತ, ಸ್ವಾವಲಂಬನೆ, ದುಡಿತ, ಅವನ ಸರಳತೆ, ಮಾನವೀಯ ಅನುಕಂಪ, ಅವನ ವೈಚಾರಿಕ ಜೀವನದ ರೀತಿ ಇವೆಲ್ಲವುಗಳನ್ನು ಸರಳ ಸುಂದರವಾಗಿ ನಿರೂಪಿಸಿದ್ದಾರೆ. ಅವನ ವ್ಯಕ್ತಿತ್ವ, ಸ್ವಭಾವದ ಜಟಿಲತೆಯನ್ನು ತೋರಿಸಿದ್ದರೆ ಅವನ ಪಾತ್ರ ಇನ್ನೂ ಜೀವಂತವಾಗುತ್ತಿತ್ತು.

ಗುಂಡನ ಪ್ರಾಮಾಣಿಕತೆ, ಕೊಂಕು, ಕಪಟ ಮೋಸವನ್ನು ಅರಿಯದ ಸರಳ ಸ್ವಭಾವದ ವ್ಯಕ್ತಿಗಳಲ್ಲಿ ಲೇಖಕಿಗೆ ವಿಶೇಷ ಪ್ರೀತಿ. ಹೀಗಾಗಿ ಗುಂಡನ ವಿಶಿಷ್ಟ ಗುಣಗಳನ್ನು ಅವರು ಆಸಕ್ತಿಯಿಂದ ಸರಳವಾಗಿ ನಿರೂಪಿಸಿದ್ದಾರೆ.

'ಕೂಚುಭಟ್ಟ' :

ಈ ಕಾದಂಬರಿ, ೧೯೭೫ ರಲ್ಲಿ ಹೇಮಂತ ಸಾಹಿತ್ಯ ಪ್ರಕಾಶನದಿಂದ ಬೆಳಕಿಗೆ ಬಂದಿದೆ. ಇಪ್ಪತ್ತು ದಿನಗಳವರೆಗೆ ಆಕಾಶವಾಣಿಯಲ್ಲೂ ಪ್ರಸಾರವಾಗಿ ಜನಪ್ರೀಯ ವಾಗಿದೆ.

ಕೂಚುಭಟ್ಟನ ವ್ಯರ್ಥ ಓದನ್ನು ಇಲ್ಲಿ ಲೇಖಕಿ ಹಾಸ್ಯಮಯವಾಗಿ ಚಿತ್ರಿಸಿದ್ದಾರೆ. ತಮ್ಮದೇ ಆದ ಕಲ್ಪನಾ ಲೋಕದಲ್ಲಿ ವಿಹರಿಸುವ ಕೂಚುಭಟ್ಟನಂತಹ ವ್ಯಕ್ತಿಗಳು ನಮ್ಮ ಸಮಾಜದಲ್ಲಿ ಇರುತ್ತಾರೆ.

ಕಾದಂಬರಿಯ ನಾಯಕ ಸೀತಾರಾಮನೇ ಇಲ್ಲಿ ಕೂಚುಭಟ್ಟ. 'ಸೀತಾರಾಮ' ನರಸಮ್ಮನಿಗಿರುವ ಒಬ್ಬನೇ ಮಗ. ತನ್ನ ಬದುಕಿನ ಕಣ್ಮಣಿಯಂತಿರುವ ಸೀತಾರಾಮ ಮೆಟ್ರಿಕ್ ಮುಗಿಸಿ ಒಂದು ಕೆಲಸಕ್ಕೆ ಸೇರಿದ ನಂತರ ತನ್ನ ಅಣ್ಣನ ಮಗಳನ್ನೆ ತಂದು ಕೊಳ್ಳಬೇಕೆಂಬುದು ತಾಯಿಯ ಆಸೆ.

ಸೀತಾರಾಮನಿಗೆ ಬಾಲ್ಯದಿಂದಲೇ ಕೈಗೆ ಸಿಕ್ಕ ಪ್ರೇಮ–ಪ್ರಣಯ ಕತೆಯ ಪುಸ್ತಕ ಗಳನ್ನು, ಶೃಂಗಾರ ಕಾವ್ಯಗಳನ್ನೆಲ್ಲಾ ಓದುವ ಗೀಳು. ಶೃಂಗಾರ ಕಾವ್ಯಗಳನ್ನೆಲ್ಲಾ ಓದಿ ಸೀತಾರಾಮ ಭಾವನಾಜೀವಿಯಾಗಿರುತ್ತಾನೆ. ಸ್ತ್ರೀ ಸೌಂದರ್ಯ ವರ್ಣನೆಯ ಕಡೆಗೇ ಅವನ ಗಮನ ಹೆಚ್ಚು. ಶ್ರಮವಹಿಸಿ ಕೆಲಸ ಮಾಡುವದೆಂದರೆ ಅದನಿಗೆ ಆಗದು. ಹೀಗಾಗಿ ಬೆಂಗಳೂರಿನಲ್ಲಿದ್ದ ಮಾವನಿಗೆ ಏನಾದರೂ ಕೆಲಸ ಕೊಡಿಸುವಂತೆ ಪತ್ರ ಬರೆಯುತ್ತಾನೆ. ಅಲ್ಲಿಯೇ 'ಘಟವಾಣಿ' ವಾರ ಪತ್ರಿಕಾಲಯದಲ್ಲಿ ಕೆಲಸ ದೊರೆಯುತ್ತದೆ. ಅದು ಸೀತಾರಾಮನಿಗೆ ಪ್ರಿಯವಾದ ಕೆಲಸ.

ತಾನು ಕಾವ್ಯದಲ್ಲಿ ಓದಿದ 'ಸಂಪಿಗೆಯಂತಹ ಮೂಗು, ಧ್ರಾಕ್ಷಿಗೊಂಚಲಿ ನಂತಹ ಮುಂಗುರುಳು, ತೊಂಡೆಹಣ್ಣಿನ ತುಟಿ, ಕಮಲದಂತಹ ಕಣ್ಣು...ಇತ್ಯಾದಿ. ಸೌಂದರ್ಯವಿರುವ ಸ್ತ್ರೀ ತನ್ನ ಕಣ್ಣಿಗೆ ಬಿದ್ದರೆ ಅವಳನ್ನೆ ಮದುವೆಯಾಗಬೇಕೆಂಬುದು ಅವನ ಆಶಯ.

ಅವನ ಈ ಹುಚ್ಚನ್ನು ಬಿಡಿಸಲು ಅವನ ಹಿತೈಷಿಗಳು ಒಬ್ಬ ಜಾಣ ಮನೋ ವೈದ್ಯನ ನೆರವನ್ನು ಪಡೆಯುತ್ತಾರೆ. ಕಾವ್ಯದಲ್ಲಿ ವರ್ಣಿತವಾದಂತೆ ಮುಂದಲೆಗೆ ದ್ರಾಕ್ಷಿಗೊಂಚಲು ಮೂಗು ಇರುವಲ್ಲಿ ಸಂಪಿಗೆ ಮೊಗ್ಗು, ಕಣ್ಣುಗಳಿಗೆ ಕೆಂದಾವರೆ, ಇತ್ಯಾದಿಗಳಿಂದ ಅಲಂಕೃತ ವ್ಯಕ್ತಿಯನ್ನು ತೋರಿಸಿದಾಗ ಸೀತಾರಾಮ ಆ ವಿಕಾರ ರೂಪವನ್ನು ಕಂಡು ಹೆದರಿ ಓಡಿಹೋಗುತ್ತಾನೆ. ಅವನ ಹುಚ್ಚು ಬಿಡುತ್ತದೆ.

ತನ್ನ ಮಾವನ ಮಗಳು ಹಳ್ಳಿಯ ಸುಂದರಿಯನ್ನು ಮದುವೆಯಾಗಿ ನೆಮ್ಮದಿ ಕಾಣುತ್ತಾನೆ. ಇದೊಂದು ಯಾವುದೇ ಗಹನ ಸಮಸ್ಯೆ ಇಲ್ಲದ ಸರಳ ನಿರೂಪಣೆಯ ಕಾದಂಬರಿ. ಲೇಖಕಿಯ ಹಾಸ್ಯ ಪ್ರಜ್ಞೆ ಈ ಕಾದಂಬರಿಯಲ್ಲಿ ಗೋಚರವಾಗಿದೆ.

'ಅಮರಾವತಿ' :

'ಅಮರಾವತಿ' ಕಾದಂಬರಿ ೧೯೮೧ ರಲ್ಲಿ ಪ್ರಕಟವಾಗಿದೆ. ಕಾದಂಬರಿಯ ನಾಯಕಿಯ ಹೆಸರು ಅಮರಾವತಿ. ನಗರ ಸಂಸ್ಥಾನದ ಆಗರ್ಭಶ್ರೀಮಂತರೆನಿಸಿದ ನಾಗಾಭರಣರ ಏಕೈಕ ಪುತ್ರಿ.

ನಾಗಾಭರಣ ಹಾಗೂ ರುಕ್ಮಿಣಿದೇವಿಯರ ಸುಖ–ಸಂಸಾರದಲ್ಲಿ ಜನಿಸಿದವಳು ಅಮರಾವತಿ, ನಾಗಾಭರಣರು ತಮ್ಮ ಹಿರಿಯರು ಬಾಳಿ ಬದುಕಿದ ಸ್ಥಳದಲ್ಲಿ ಭವ್ಯ ಮನೆಯನ್ನು ಕಟ್ಟಿಸಿ, ಕರಣಿಕರಿಗೆ, ಆಳುಕಾಳುಗಳಿಗೆ ಮನೆ, ಕೆರೆ, ಬಾವಿಗಳನ್ನು

ಕಟ್ಟಿಸಿ ಸೌಕರ್ಯ ಮಾಡುತ್ತಾರೆ. ಭಾರಿ ಭವ್ಯ ಕಟ್ಟಡಗಳನ್ನು ನಿರ್ಮಿಸಬೇಕೆಂದು ಸಂಕಲ್ಪ ಮಾಡುತ್ತಾರೆ. ಅಮರಾವತಿ ಹುಟ್ಟಿದ ಹತ್ತು ವರ್ಷದ ನಂತರ ಜನಿಸಿದ ಅಚ್ಯುತನ ಸೊಂಟ, ಕತ್ತು, ಕಾಲು ಭದ್ರವಾಗಿ ನಿಲ್ಲುವದಿಲ್ಲವೆಂದು ತಿಳಿಯುತ್ತದೆ. ನೂರಾರು ಜನ ವೈದ್ಯರ ಪ್ರಯತ್ನ ವಿಫಲವಾಗುತ್ತದೆ. ಅಮರಾವತಿ ಎಂ.ಎ. ಪಧ ವಿಧರೆಯಾಗಿ ಬಂದ ಕೆಲವೇ ದಿನಗಳಲ್ಲಿ ತಾಯಿ ರುಕ್ಮಿಣಿದೇವಿ ಸಾವನ್ನಪ್ಪುತ್ತಾಳೆ. ಪ್ರಬುದ್ಧಳಾದ ಅಮರಾವತಿ ತಂದೆಗೆ ಆಸರೆಯಾಗಿ ನಿಲ್ಲುತ್ತಾಳೆ. ಎಸ್ಟೇಟಿನ ಕರಣಿಕ ರಾಗಿದ್ದ ಕಳಸಪ್ಪನವರ ಮಗ ಚಿನ್ಮಯನಿಗೆ ತಮ್ಮ ಮಗಳನ್ನು ಕೊಡಬೇಕೆಂಬ ಆಸೆ ನಾಗಾಭರಣರದಾಗಿರುತ್ತದೆ. ಆದರೆ ಅವನ ಮದುವೆ ಸೋದರ ಮಾವನ ಮಗ ಳೊಂದಿಗೆ ನಡೆಯುತ್ತದೆ.

ನಾಗಾಭರಣರು ತಮ್ಮ ಅಮರಾವತಿಯಲ್ಲಿ ಭವ್ಯಭವನಗಳನ್ನು ನಿರ್ಮಿಸಬೇಕೆಂಬ ಬಹು ದಿನಗಳ ಹಂಬಲವನ್ನು ಈಡೇರಿಸಿಕೊಳ್ಳಲು ಜಪಾನಿನಲ್ಲಿ ವಾಸ್ತುಶಿಲ್ಪವನ್ನು ಅಭ್ಯಸಿಸಿ ಬಂದ 'ಶ್ರೀಮಂತ' ಎಂಬುವವನನ್ನು ಕರೆಸುತ್ತಾರೆ. "ಶ್ರೀಮಂತ ಸಾಧ್ಯ ವಾದಷ್ಟು ಹಣ ಕಿತ್ತುಕೊಂಡು ತನ್ನ ಕೆಲಸ ಮುಗಿಸಿ ಹೊರಡಬೇಕೆಂದು ನಿರ್ಧರಿಸು ತ್ತಾನೆ, ಅಲ್ಲಿನ ಜನರ ಸರಳ ನಡೆ ನುಡಿ, ಶ್ರೀಮಂತಿಕೆಯಲ್ಲೂ ಅವರ ಆತ್ಮೀಯತೆ, ಪ್ರೀತಿ, ಇವುಗಳನ್ನು ಕಂಡು ಬದಲಾಗುತ್ತಾನೆ.

ನಾಗಾಭರಣರು ವಂಶಪಾರಂಪರ್ಯವಾಗಿ ತಮ್ಮ ಸಂಸ್ಥಾನವನ್ನು ಅಭಿವೃದ್ಧಿ ಪಡಿಸಿ ದೌಲತ್ತನ್ನು, ಹಿರಿತನವನ್ನು ಕಾಪಾಡಿಕೊಂಡು ಬಂದಂತೆ, ಅವರ ಮಗಳು ಅಮರಾವತಿಯೂ ಅದನ್ನು ಮುಂದುವರೆಸಿಕೊಂಡು ಬರುತ್ತಾಳೆ. ತನ್ನ ಸಂಕಲ್ಪದಂತೆ ಕೊನೆಯವರೆಗೂ ನಡೆದುಕೊಳ್ಳುತ್ತಾಳೆ. ತಾಯಿಯ ಸಾವಿನ ಸಮಯದಲ್ಲಿ ತಂದೆಯು ಪಾರ್ಶ್ವವಾಯುವಾದಾಗ, ತಮ್ಮ ಹಾಗೂ ತಂದೆಯನ್ನು ತಾಯಿಯಂತೆ ಕಾಪಾಡು ತ್ತಾಳೆ. ತಮ್ಮನ ಮರಣವಾದಾಗ ತಂದೆಯ ನೋವನ್ನು ಮರೆಸುವದಕ್ಕಾಗಿ, ಪ್ರಾಮಾಣಿಕ ಸೇವೆ ಸಲ್ಲಿಸಿದ ಚಿನ್ಮಯನನ್ನು ಮದುವೆಯಾಗುತ್ತಾಳೆ. ಅವನ ತಬ್ಬಲಿ ಮಗುವನ್ನು ಜೋಪಾನ ಮಾಡುತ್ತಾಳೆ. ದಿಟ್ಟ ನಿಲುವು, ಗಾಂಭೀರ್ಯ, ಆತ್ಮೀಯತೆ ಔದಾರ್ಯ, ವಿವೇಕ ಎಸ್ಟೇಟಿನ ಸಕಲ ಜವಾಬ್ದಾರಿಯನ್ನು ನಡೆಸುವ ಅವಳ ಚತುರತೆ ಪ್ರಬುದ್ಧವಾಗಿದೆ.

'ವಾಣಿ'ಯ ಸಾವಿನ ನಂತರ ಅಮರಾವತಿ ಚಿನ್ಮಯನನ್ನ ಮದುವೆಯಾಗುವಳೆಂಬ ಅಂಶ ಓದುಗರಿಗೆ ತಿಳಿದು ಹೋಗುವದರಿಂದ ಕುತೂಹಲವುಳಿಸಿಕೊಳ್ಳುವಲ್ಲಿ ಕಾದಂಬರಿ ವಿಫಲವಾಗಿದೆ. 'ವಾಣಿ'ಯ ಸಾವು ಅಸಹಜವಲ್ಲ. ಆದರೂ ಮುಂದಿನ ಸಮಸ್ಯೆಯ ಪರಿಹಾರ ಸುಲಭವಾಗುತ್ತದೆ. ನಗರ ಸಂಸ್ಥಾನದ ವೈಭವೋಪೇತ ಜೀವನ ಚೆನ್ನಾಗಿ ನಿರೂಪಿತವಾಗಿದೆ. ಹಾಗೂ ಅಮರಾವತಿಯ ಪಾತ್ರ ಓದುಗರ ಮೆಚ್ಚುಗೆ ಗಳಿಸುತ್ತದೆ.

ನಾಗಾಭರಣರೂ ಹಾಗೂ ಕರಣಿಕ ಕಳಸಪ್ಪನವರ ಹಿರಿತನ ಔದಾರ್ಯದಿಂದ ಓದುಗರ ಮನ ಸೆಳೆಯುತ್ತವೆ. ಅವರೆಲ್ಲರಿಗೂ ಹೃದಯ ಶ್ರೀಮಂತಿಕೆ, ಹುಟ್ಟಿನಿಂದಲೇ ಬಂದದ್ದು, ತಮ್ಮ ಮಗಳನ್ನು ಚಿನ್ಮಯನಿಗೆ ಕೊಡುವ ಇಚ್ಛೆ ಇದ್ದರೂ ಅವನ ಮದುವೆ ವಾಣಿಯೊಂದಿಗೆ ನಡೆದಾಗ ಸಂತೋಷದಿಂದ ಹರಸಿ ಧನಸಹಾಯ ಸಲ್ಲಿಸುತ್ತಾರೆ. ಅವರ ಹೆಂಡತಿಯ ಸಾವು, ಮಗನ ಸಾವು, ತಮ್ಮ ಪಾರ್ಶ್ವವಾಯು ಈ ಎಲ್ಲ ಸಂದರ್ಭದಲ್ಲೂ ದುಃಖವನ್ನು ಸಹಿಸುವ ಧೀಮಂತ ವ್ಯಕ್ತಿತ್ವ ನಾಗಾಭರಣರದಾಗಿದೆ.

ಕರಣಿಕ ಕಳಸಪ್ಪನವರು ದಕ್ಷ ಆಡಳಿತಗಾರರು ವಿಶ್ವಾಸ, ಪ್ರೀತಿ, ಕರ್ತವ್ಯನಿಷ್ಠೆ ಇವುಗಳಲ್ಲಿ ನಂಬಿಕೆ ಇಟ್ಟು ಬಾಳಿದವರು ಈ ಪ್ರೀತಿ ವಿಶ್ವಾಸವೇ ಅವೆರಡೂ ಸಂಸಾರಗಳನ್ನು ಬಂಧಿಸುತ್ತದೆ.

'ಕಲಾದರ್ಶಿ' ಮತ್ತು 'ಸೂತ್ರಧಾರಿ' :

ಈ ಕಾದಂಬರಿ ೧೯೬೮ ರಲ್ಲಿ ಗೀತಾ ಪಬ್ಲಿಕೇಶನವಲ್ಲಿ ಪ್ರಥಮ ಮುದ್ರಣವಾಗಿದೆ. 'ಕಲಾದರ್ಶಿ' ಒಂದು ಕಾಲ್ಪನಿಕ ಕೃತಿ ಎಂದು ಲೇಖಕಿಯೇ ಮುನ್ನುಡಿಯಲ್ಲಿ ಹೇಳಿದ್ದಾರೆ. ಕಲಾವಿದನ ಜೀವನ ಲಹರಿಯನ್ನನುಸರಿಸಿ ಹಬ್ಬಿಕೊಂಡ ಈ ಕಾದಂಬರಿಗೆ ಇಂದಿರಾ ಅವರು ಮಲೆನಾಡಿನ ಪ್ರಕೃತಿರಮ್ಯಸ್ಥಳಗಳಾದ 'ಹಿರೇ ತೋಟ' ಗುಡ್ಡದ ಮಠ' ಈ ಹಳ್ಳಿಗಳನ್ನು ಬಳಸಿಕೊಂಡಿದ್ದಾರೆ.

ಕಲಾವಿದ (ಚಿತ್ರಕಲಾವಿದ) 'ಕಿಟ್ಟು' ತನ್ನ ಆದರ್ಶ ಸಾಧನೆಯ ದಾರಿಯಲ್ಲಿ ಮುನ್ನಡೆಯುತ್ತಾನೆ. ಕೃಷ್ಣಮೂರ್ತಿ (ಕಿಟ್ಟು)ಗೆ ಬಾಲ್ಯದಿಂದಲೇ ಚಿತ್ರಕಲೆಯ ಬಗೆಗೆ ಆಸಕ್ತಿ. ಇಂಟರ್ ಮುಗಿಸಿದ ತಕ್ಷಣ 'ಕಲಾವಿಭಾ'ಕ್ಕೆ ಸೇರಿ ಚಿತ್ರಕಲೆಗಾಗಿಯೇ ತನ್ನ ಬದುಕು ಎಂದು ನಿರ್ಧರಿಸುತ್ತಾನೆ. ಅಲ್ಲಿ ಮೂರು ವರ್ಷದ ಶಿಕ್ಷಣ ಮುಗಿಸಿ, ಸ್ವಂತ ಖರ್ಚಿನ ಉಪಯೋಗಕ್ಕಾಗಿ ಬಣ್ಣ ಬಣ್ಣದ ಬಟ್ಟೆಗಳಿಗೆ ಸುಂದರ ವಿನ್ಯಾಸದ ಚಿತ್ರಗಳನ್ನು ಬರೆಯಲು ಪ್ರಾರಂಭಿಸುತ್ತಾನೆ. ಕಲೆ 'ಎಂದರೆ ಒಂದು ತಪಸ್ಸು' ಎಂದು ಭಾವಿಸಿದ ಕೃಷ್ಣಮೂರ್ತಿಯ ಮನಸ್ಸಿನ ಮೇಲೆ ಕಲಾವಿದರ ಜೀವನ ಚರಿತ್ರೆಗಳು ಪ್ರಭಾವ ಬೀರುತ್ತವೆ.

ಕಲೆಯ ನಿಜಸ್ವರೂಪವನ್ನು ಅರಸುತ್ತ ಹೊರಟ ತರುಣ ಕೃಷ್ಣಮೂರ್ತಿ ಎಲ್ಲ ದೇಶಗಳ ಚಿತ್ರ ಶಾಸ್ತ್ರಗಳ ಗ್ರಂಥಗಳನ್ನು ಸಂಗ್ರಹಿಸುತ್ತಾನೆ. ಅವನ ಈ ಹವ್ಯಾಸವನ್ನು ಮೆಚ್ಚಿ ಪ್ರೋತ್ಸಾಹಿಸಿದವರು ಅವನ ಅತ್ತಿಗೆ ಹಾಗೂ ಅವನ ತಂಗಿ ನೀಲಾ.

ಮಲೆನಾಡಿಗೆ ಚಿತ್ರ ಸಂಗ್ರಹಿಸಲು ಬಂದಾಗ ಹಿರೇತೋಟದಂತಹ ಕುಗ್ರಾಮದಲ್ಲಿ ಕಣ್ಣಿಗೆ ಬೀಳುತ್ತದೆ. ಮಲೆನಾಡಿನ ಹಳ್ಳಿಯಲ್ಲಿ ಗಿಡಗಂಟೆ, ಗುಡ್ಡ-ಬೆಟ್ಟ, ತೊರೆ, ಹೊಳೆ, ಹಳ್ಳ, ದನಕರು ಪಶುಪಕ್ಷಿಗಳ ಸಂಸರ್ಗದಲ್ಲಿ ಬೆಳೆಯುತ್ತಿದ್ದ ಕಿಶೋರ

ವಯಸ್ಸಿನ 'ಚಿನ್ನ'ನಲ್ಲಿ ಆ ಸೌಂದರ್ಯವನ್ನು ಕಾಣುತ್ತಾನೆ. ಅವಳಲ್ಲಿ ಸುಪ್ತಸೌಂದರ್ಯ, ಶಾಂತ, ಮುಗ್ಧಸ್ವಭಾವವನ್ನು ಮೆಚ್ಚಿಕೊಂಡ ಕೃಷ್ಣಮೂರ್ತಿ ಅವಳನ್ನೆ ತನ್ನ 'ಕಲಾದರ್ಶಿ' ಎಂದು ನಿರ್ಧರಿಸುತ್ತಾನೆ.

ಏಳುಸುತ್ತಿನ ಕೋಟೆಯಂತಿದ್ದ ಆ ಮಲೆನಾಡಿನ ದೊಡ್ಡ ಕುಟುಂಬದಿಂದ ಅವಳನ್ನು ಕರೆತಂದು 'ಕೆದರಿದ ತಲೆ ಕೊಳೆಯಾದ ರವಿಕೆ, ಕೊಳೆಯಾದ ಸೀರೆಯುಟ್ಟು, ದಪ್ಪ ಬಾಳೆಕಾಯಿಗೆ ಮಾಸಲು ಬೆಳ್ಳಿಪಟ್ಟಿ ಹಾಕಿದ, ಮೋಟು ಜಡೆಗೆ ಬಾಳಿನಾರು ಬಿಗಿದು ಒರಟು ಒರಟಾಗಿ ಕಗ್ಗಲ್ಲಿನಂತಿದ್ದ 'ಚಿನ್ನ'ನನ್ನು ಶುಭ್ರವಾದ ಬಟ್ಟೆತೊಡಿಸಿ. ನಯ ನಾಜೂಕನ್ನು ಕಲಿಸಿ ಹಿರಿಯರನ್ನು ಒಪ್ಪಿಸಿ ಅವಳನ್ನು ಮದುವೆಯಾಗುತ್ತಾನೆ. ತನ್ನ ಕಲಾಸಾಧನೆಯ ಹಾದಿಯಲ್ಲಿ ಅವಳನ್ನು ಕಲಾದರ್ಶಿಯನ್ನಾಗಿ ಸ್ವೀಕರಿಸಿ. ಕಲಾದೇವಿಯ ಭವ್ಯ ಮನೋಹರ ಚಿತ್ರ ತೆಗೆದು ತನ್ನ ಆದರ್ಶ ಬದುಕಿನ ಸಾರ್ಥಕತೆಯನ್ನು ಕಂಡುಕೊಳ್ಳುತ್ತಾನೆ.

ಎಲ್ಲ ಪಾತ್ರಗಳು ಸಜೀವವಾಗಿ ಮೈತುಂಬಿಕೊಂಡಿವೆ. 'ಚಿನ್ನ'ನ ಗೀಳು ಹಿಡಿದ ಕೃಷ್ಣಮೂರ್ತಿಯ ಮಾನಸಿಕ ವಿಶ್ಲೇಷಣೆ ಸಮರ್ಪಕವಾಗಿವೆ. ಚಿನ್ನನ ಮುಗ್ಧ ಸ್ವಭಾವ, ಅವಳ ಕಾರ್ಯ ತತ್ಪರತೆ ನಡೆ–ನುಡಿ ಇವು ಓದುಗರ ಮೆಚ್ಚುಗೆ ಗಳಿಸುತ್ತವೆ.

ಚಿಕ್ಕಮ್ಮ, ಅತ್ತಿಗೆ, ನಾಗಪ್ಪಯ್ಯ, ಫಣಿಯಪ್ಪಯ್ಯ ಶೇಷಪ್ಪಯ್ಯ ಇನ್ನು ಬಾಲಕರಾದ ಗುಂಡ, ಸುಬ್ಬಣ್ಣ, ರಂಗಿ, ಈ ಎಲ್ಲ ಪಾತ್ರಗಳು ಅಲ್ಲಲ್ಲಿ ಕಂಡು ಬರುವ ಸನ್ನಿವೇಶಗಳಲ್ಲಿ ನಡೆ ನುಡಿಗಳಿಂದ ಜೀವಂತ ಚಿತ್ರಣವಾಗಿವೆ.

ನಾಗಪ್ಪಯ್ಯ, ಫಣಿಯಪ್ಪಯ್ಯ ಹಗಲಿರುಳೆನ್ನದೆ ದುಡಿಯುವ ಕಷ್ಟ ಸಹಿಷ್ಣುಗಳು. ಅವರ ಬದುಕಿನ ರೀತಿ, ಮಾತಿಲ್ಲದೆ ಕೆಲಸ ಮಾಡುವ ಜೀವನ ಶ್ರದ್ಧೆ ಓದುಗರ ಗಮನ ಸೆಳೆಯುತ್ತದೆ.

'ಶೇಷಪ್ಪಯ್ಯ ಮೈತುಂಬಿಕೊಂಡ ಪಾತ್ರ ಅವರ ಪಾತ್ರ ಚಿತ್ರಣದಲ್ಲಿ ಲೇಖಕಿಯ ಬದುಕಿನ ಸಮಗ್ರ ಅನುಭವ ಕಂಡುಬರುತ್ತದೆ.

ಮಲೆನಾಡಿನ ರಮ್ಯ ಪ್ರಕೃತಿಯೊಡನೆ ಕೃತಿಕರ್ತೃವಿಗಿರುವ ನಿಕಟ ಸಂಪರ್ಕ ಕಾದಂಬರಿಗೆ ಜರತಾರಿ ಅಂಚಾಗಿ ಕಳೆಕಟ್ಟಿದೆ. ಎಂದಿನಂತೆ ಆಡುನುಡಿಯ ಸೊಬಗನ್ನು ಹೆಚ್ಚಿಸಿದೆ. ಎಂದು ಕೆ. ವಿಜಯಶ್ರೀಯವರು ಈ ಕಾದಂಬರಿಯ ಬಗೆಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಇಂದಿರಾ ಅವರ ಉತ್ತಮ ಕಾದಂಬರಿಗಳಲ್ಲಿ 'ಕಲಾದರ್ಶಿ'ಯೂ ಒಂದು. ಇಲ್ಲಿ ಕಲಾವಿದನ ಆದರ್ಶವನ್ನು ಲೇಖಕಿ ಚಿತ್ರಿಸಿದ್ದಾರೆ

---

1. ಜೀವನ ಸಂಪುಟ—1 ಸಂ–1 ಜನವರಿ 1971
'ಇಂದಿರಾ ಅವರ ಕಾದಂಬರಿಗಳು ಒಂದು ಸಮೀಕ್ಷೆ' ; ಪುಟ–26

'ಸೂತ್ರದಾರಿ' :

ಎಂ. ಕೆ. ಇಂದಿರಾ ಅವರ 'ಸೂತ್ರಧಾರಿ' ಇತ್ತೀಚೆಗೆ (೧೯೮೪) 'ಜೈಸು' ಪ್ರಕಾಶನದಿಂದ ಹೊರಬಂದಿದೆ.*

ಚಲನಚಿತ್ರರಂಗದ ಶ್ರೇಷ್ಠ ನಟನ ಬದುಕನ್ನು ಇಲ್ಲಿ ಚಿತ್ರಿಸಿದ್ದಾರೆ. ಕಲೆಗಾಗಿಯೇ ಉಸಿರಾಡಿದ 'ಬಾಲಾಜಿ'ಯ ಬದುಕಿನ ಕಷ್ಟ-ಸುಖಗಳು, ಸಿಹಿ-ಕಹಿಗಳನ್ನು ಲೇಖಕಿ ಅವನ ಜೀವಿತದ ಹಂತ ಹಂತಗಳಲ್ಲಿ ಚಿತ್ರಿಸಿದ್ದಾರೆ.

ಹಳೆ ಹೊಸ ಪೀಳಿಗೆಗಳಲ್ಲಿ, ರಾಜಕೀಯ, ಸಾಮಾಜಿಕ, ಕೌಟುಂಬಿಕ, ಚಿತ್ರರಂಗ ವೈಜ್ಞಾನಿಕ, ಜೀವನದ ವಿವಿಧ ರಂಗಗಳಲ್ಲಾಗುತ್ತಿರುವ ಬದಲಾವಣೆಗಳನ್ನು ಲೇಖಕಿ ಕಾದಂಬರಿಯುದ್ದಕ್ಕೂ ಸೂಚ್ಯವಾಗಿ, ಪ್ರಬುದ್ಧವಾಗಿ ನಿರೂಪಿಸಿದ್ದಾರೆ. ಸಂಕ್ರಮಣಾವಸ್ಥೆಯ ಸಮಾಜದಲ್ಲಿ ಹಳೆಯ ತಲೆಮಾರಿನವರಾದ 'ಬಾಲಾಜಿ'ಯಂತಹ ಹಿರಿಯರು ನೋವನ್ನು ನುಂಗಿ, ತಮ್ಮ ಮುಂದಿನ ಪೀಳಿಗೆಗೆ ಒಳಿತನ್ನು ಹಾರೈಸುತ್ತ, ತಮ್ಮ ವೈಯಕ್ತಿಕತೆಯನ್ನು ಬದಲಾದ ಸಮಾಜಕ್ಕೆ ಒಪ್ಪಿಸಿಕೊಳ್ಳಲೇಬೇಕಾದ ಅನಿವಾರ್ಯತೆಯನ್ನು ಇಲ್ಲಿ ಅತ್ಯಂತ ಸೂಕ್ಷ್ಮವಾಗಿ ಲೇಖಕಿ ನಿರೂಪಿಸುತ್ತಾರೆ.

ಸ್ವಾತಂತ್ರ್ಯಪೂರ್ವದಲ್ಲಿ ಸಾಮಾಜಿಕ, ಕೌಟುಂಬಿಕ ಜೀವನದಲ್ಲಿದ್ದ ನೆಮ್ಮದಿ ಸ್ವಾತಂತ್ರ್ಯಾನಂತರದ ಕೌಟುಂಬಿಕ ಜೀವನದಲ್ಲಿ ಏರು-ಪೇರು ಆಗುತ್ತಿರುವದನ್ನು ಇಲ್ಲಿ ಕಾಣುತ್ತೇವೆ.

ಕಾದಂಬರಿ, ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಿಂದ ಆರಂಭವಾಗಿ 'ಬಾಲಾಜಿ'ಯ ಕಾಲಕ್ಕೆ ಬಂದರೆ ಆಗ ಕೃಷ್ಣರಾಜೇಂದ್ರ ಒಡೆಯರು ಆಳ್ವಿಕೆಯಲ್ಲಿದ್ದ ಕಾಲ. 'ರಮಾವಿಲಾಸ' ಹಾಗೂ 'ಸೀತಾವಿಲಾಸ', ಅಗ್ರಹಾರಗಳು ಅರಮನೆಯ ಕವಿಗಳು, ಕಲಾವಿದರು, ವಿದ್ವಾಂಸರು, ಪುರೋಹಿತವರ್ಗದವರಿಗಾಗಿ ಕಟ್ಟಲ್ಪಟ್ಟಿದ್ದವು. ಚಾಮರಾಜರು, ನಾಲ್ವಡಿ ಕೃಷ್ಣರಾಜ ಒಡೆಯರ ಆಳ್ವಿಕೆ ಮುಗಿದು ಕೃಷ್ಣರಾಜೇಂದ್ರ ಒಡೆಯರ ಕಾಲ ಪ್ರಾರಂಭವಾಗಿತ್ತು.

ನಾಲ್ವಡಿ ಕೃಷ್ಣರಾಜ ಒಡೆಯರು ಆಡಳಿತಕ್ಕೆ ಬಂದಾಗ 'ಸೀತಾವಿಲಾಸ' ಅಗ್ರಹಾರದ ಒಂದು ಮನೆ ಪುರೋಹಿತ ವರ್ಗದವರಲ್ಲಿ ಒಬ್ಬರಾದ 'ಬಾಲಾಜಿ'ಯ ಅಜ್ಜ ವೆಂಕಣ್ಣಶಾಸ್ತ್ರಿಗಳದಾಗಿತ್ತು. ಅರಮನೆಯಿಂದ ಅಗ್ರಹಾರದವರಿಗೆಲ್ಲ ವೀಳ್ಯದೆಲೆ, ಹೂವಿನಿಂದ ಮೊದಲಾಗಿ ಜೀವನಾವಶ್ಯಕ ವಸ್ತುಗಳೆಲ್ಲ ಎತ್ತಿನ ಗಾಡಿಗಳಲ್ಲಿ ಮನೆ-ಮನೆಗೆ

---

* ಕಡೆಯ ರೂಪರೇಷೆಗಳನ್ನು ಇಂದಿರಾ ಅವರಿಗೆ ಸೂಚಿಸಿದವರು 'ಕಾನಕಾನಹಳ್ಳಿ ಗೋಪಿ' ಯವರು. ಜೈಸು ಪ್ರಕಾಶನದವರು 7-10-84ರಂದು ಬೆಂಗಳೂರಿನಲ್ಲಿ 'ಸೂತ್ರಧಾರಿ' ಕಾದಂಬರಿಯ ಬಿಡುಗಡೆ ಸಮಾರಂಭವನ್ನೇರ್ಪಡಿಸಿದ್ದರು. ಅಕಾಡೆಮಿ ಅಧ್ಯಕ್ಷ, ಕವಿ ನಿಸ್ಸಾರ ಅಹಮದ್ ಅವರು ಪುಸ್ತಕ ಬಿಡುಗಡೆ ಮಾಡಿದರು.

ಬರುತ್ತಿದ್ದುದರಿಂದ ಕಷ್ಟವೆಂಬುದೇ ಇರಲಿಲ್ಲ. ಪ್ರತಿಯೊಂದು ಕುಟುಂಬದಲ್ಲೂ ಸೌಖ್ಯ–ಹರುಷ ತುಂಬಿರುತ್ತಿತ್ತು.

ಬಾಲಾಜಿಯ ತಂದೆ ಶ್ರೀನಿವಾಸಶಾಸ್ತ್ರಿಗಳು ವೇದಾಧ್ಯಯನ ಮಾಡಿದ ಪಂಡಿತರು. ತಮ್ಮ ತಂದೆಯ ಪುರೋಹಿತ ವೃತ್ತಿಯನ್ನು ಮುಂದುವರಿಸಿಕೊಂಡು ಬರುತ್ತಾರೆ. ಬಾಲಾಜಿ ಹುಟ್ಟುವ ವೇಳೆಗಾಗಲೇ ಅವನ ಅಜ್ಜ ವೆಂಕಣ್ಣಶಾಸ್ತ್ರಿಗಳು ತೀರಿಹೋಗಿರುತ್ತಾರೆ. ಅರಮನೆಯ ಒಳಾಡಳಿತದಲ್ಲೂ ಸಾಕಷ್ಟು ಅವ್ಯವಸ್ಥೆ ತಲೆದೋರುತ್ತದೆ.

ಶ್ರೀನಿವಾಸಶಾಸ್ತ್ರಿ ಹಾಗೂ ಲಚ್ಚಮ್ಮನವರ ಮಧುರ, ಅನ್ಯೋನ್ಯ ದಾಂಪತ್ಯ ಜೀವನದಲ್ಲಿ ಮೂರು ಹೆಣ್ಣಿನ ಮೇಲೆ ಹುಟ್ಟಿದವನು 'ಬಾಲಾಜಿ'. ಅಷ್ಟರಲ್ಲಿ ಶ್ರೀನಿವಾಸ ಶಾಸ್ತ್ರಿಗಳ ಅಕ್ಕ 'ಮೋಟಮ್ಮ' ವಿಧವೆಯಾಗಿ ತಮ್ಮನ ಆಶ್ರಯಕ್ಕೆ ಬರುತ್ತಾಳೆ. ಅತ್ತಿಗೆ–ನಾದಿನಿಯರಲ್ಲಿ ಪ್ರೀತಿ, ಮುದ್ದುಮಕ್ಕಳು, ಕೌಟುಂಬಿಕ ಜೀವನದಲ್ಲಿ ಸ್ನೇಹ–ಸೌಹಾರ್ದಗಳು ತುಂಬಿದ ಸಂಸಾರದಲ್ಲಿ ಜನಿಸಿದವನು ಬಾಲಾಜಿ. ಅನುಪಮ ಚೆಲುವು, ಎತ್ತರದ ನಿಲುವು, ನಗೆಮುಖದ ಹೊಳೆವ ಕಂಗಳ 'ಬಾಲಾಜಿ' ಮನೆಯ ಜನರ, ಅಗ್ರಹಾರದವರ ಮುದ್ದಿನ ಮಗುವಾಗಿ ಬೆಳೆಯುತ್ತಾನೆ.

ಬಾಲಾಜಿ ಮೆಟ್ರಿಕ್ ಮುಗಿಸುವ ವೇಳೆಗೆ ಮೂವರು ಅಕ್ಕಂದಿರಿಗೆ ಮದುವೆಯಾಗಿ ಗಂಡನ ಮನೆಗೆ ಹೊರಟು ಹೋಗಿರುತ್ತಾರೆ. ಮೆಟ್ರಿಕ್ ಮುಗಿನೊಡನೆ ತಮ್ಮ ಮಗ ವೇದಾಧ್ಯಯನ ಮಾಡಲಿ ಎಂದು ಶ್ರೀನಿವಾಸ ಶಾಸ್ತ್ರಿಗಳು ಮನದಲ್ಲಿ ಬಯುಸಿದ್ದರೂ ಕಾಲ ಬದಲಾಗಿದೆ ಎಂಬುದನ್ನು ಅರಿತುಕೊಳ್ಳುತ್ತಾರೆ. ನಾಲ್ವಡಿ ಕೃಷ್ಣರಾಜರ ಆಳ್ವಿಕೆ ಚೆನ್ನಾಗಿದ್ದರೂ 'ಅರಮನೆಯಲ್ಲಿ ಹೆಗ್ಗಣಗಳು ಜಾಸ್ತಿಯಾಗಿವೆ.[1] ಎಂದು ತಿಳಿದ ಶಾಸ್ತ್ರಿಗಳು ತಮ್ಮ ಮಗ ಓದಿ ಸಂಪಾದಿಸಲಿ ಎಂದು ಅವನ ಭವಿಷ್ಯವನ್ನು ಅವನ ನಿರ್ಣಯಕ್ಕೆ ಬಿಡುತ್ತಾರೆ.

ಶಾಲೆ–ಕಾಲೇಜುಗಳಲ್ಲಿ ಆಟ–ಪಾಠ, ಸಂಗೀತ, ಕೊಳಲು, ಹಾರ್ಮೋನಿಯಂ, ರಾಗಮಾಲಿಕೆ, ನಟನೆ ಇತ್ಯಾದಿ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಬಾಲಾಜಿ ತನ್ನ ಪ್ರತಿಭೆಯನ್ನು ವ್ಯಕ್ತಪಡಿಸುತ್ತಾನೆ. ಕಾಲೇಜಿನ ಅನೇಕ ನಾಟಕಗಳಲ್ಲಿ ಅಭಿನಯಿಸಿ ಕೀರ್ತಿ ಪಡೆಯುತ್ತಾನೆ. 'ನಾಟಕ ತಮ್ಮಂತಹವರಿಗೆ ಹೇಳಿ ಮಾಡಿಸಿದುದಲ್ಲ' ಎಂಬ ಭಾವನೆ ಶಾಸ್ತ್ರಿಗಳಿಗಿದ್ದರೂ ಕ್ರಮೇಣ ತಮ್ಮ ಭಾವನೆಯನ್ನು ಬದಲಿಸಿಕೊಳ್ಳುತ್ತಾರೆ. ತಮ್ಮ ಮಗ ಒಬ್ಬ ಶ್ರೇಷ್ಠ ನಟ ಎಂಬುದನ್ನು ಅರಿತುಕೊಳ್ಳುತ್ತಾರೆ. 'ಭಕ್ತ ಮಾರ್ಕಂಡೇಯ', 'ಸೀತಾಕಲ್ಯಾಣ' ನಾಟಕಗಳಲ್ಲಿ ಅಭಿನಯಿಸಿದ ಅವರ ಪ್ರತಿಭೆ

1. ಎಂ. ಕೆ. ಇಂದಿರಾ ; 'ಸೂತ್ರದಾರಿ', ಪುಟ–3.

ಯನ್ನು ಮೆಚ್ಚಿ ಪ್ರೋತ್ಸಾಹಿಸಿದ ಮಹಾರಾಜರು ಪಾರಿತೋಷಕ ನೀಡಿದಾಗ ಅವನ ಕೀರ್ತಿಗೆ ಮತ್ತೊಂದು ಕಳಸ.

ಅವನು ಬಿ. ಎ. ಬಿ. ಎಡ್ ಮುಗಿಸಿ ಉಪಾಧ್ಯಾಯ ವೃತ್ತಿ ಕೈಗೊಂಡಾಗ ಆಗಲೇ ನಾಟಕಗಳ ಕಾಲ ಸರಿದು, ಸಿನಿಮಾ ಯುಗ ಪ್ರಾರಂಭವಾಗಿತ್ತು. ಮೂಕಿ ಚಿತ್ರಗಳ ನಂತರ ಟಾಕಿ ಚಿತ್ರಗಳು ಭಾರತದ ವಿವಿಧ ಭಾಷೆಗಳಲ್ಲಿ ಬರತೊಡಗಿದ್ದವು. ಅನೇಕ ನಾಟಕಗಳಲ್ಲಿ ಅಮೋಘ ಅಭಿನಯ ನೀಡಿದ ಬಾಲಾಜಿಗೆ ಚಿತ್ರರಂಗದ ಕರೆ ಬರುತ್ತದೆ. ಚಲನಚಿತ್ರರಂಗ ತೀರ ಶೈಶವಾಸ್ಥೆಯಲ್ಲಿದ್ದ ಕಾಲ. ಚಿತ್ರರಂಗದ ವಿದ್ವಾಂಸರೊಬ್ಬರು ಬಾಗಿಲಿಗೆ ಬಂದಾಗ ಶಾಸ್ತ್ರಿಗಳು ಇಲ್ಲವೆನ್ನದೆ 'ಬಾಲಾಜಿ'ಯನ್ನು ಕಳುಹಿಸಲು ಒಪ್ಪಿಕೊಳ್ಳುತ್ತಾರೆ. 'ಮುಕುಂದಲೀಲಾ' 'ವಾಸವದತ್ತಾ' 'ಭೀಷ್ಮಪ್ರತಿಜ್ಞೆ' 'ಕೃಷ್ಣ ಸುಧಾಮ' ಈ ಪೌರಾಣಿಕ ಚಿತ್ರಗಳಲ್ಲಿ ಅಭಿನಯಿಸಿದ 'ಬಾಲಾಜಿ' ಕೀರ್ತಿ ಶಿಖರವನ್ನೇರುತ್ತಾನೆ. ಕೀರ್ತಿ, ಹಣ, ಗೌರವ, ಪ್ರತಿಷ್ಠೆ ಒಂದೊಂದೂ ಅವನನ್ನು ಅರಸಿಕೊಂಡು ಬರುತ್ತವೆ. ಹತ್ತಾರು ಜನ ಸುಂದರಿಯರ ನಡುವೆ ಇದ್ದರೂ ಹುಟ್ಟಾ ಸಂಯಮಿಯಾದ 'ಬಾಲಾಜಿ ತನ್ನ ನಡತೆಯಿಂದ ಹಿರಿಯರ ಪ್ರೀತಿಗೆ ಪಾತ್ರನಾಗುತ್ತಾನೆ.

ಅಕ್ಕರೆಯ ತಂದೆ–ತಾಯಿ, ವಾತ್ಸಲ್ಯ ಸುರಿಸುವ ಸೋದರತ್ತೆ, ಆತ್ಮೀಯ ಬಂಧುಗಳು ಕಲಾವಿದ ಬಾಲಾಜಿಗೆ ಚೈತನ್ಯ, ಪ್ರೋತ್ಸಾಹ ತುಂಬುತ್ತಾರೆ. ತಾಯಿಯ ಹತ್ತಿರದ ಸಂಬಂಧಿಗಳ ಕನ್ಯೆ, 'ಗಾಯತ್ರಿ'ಯನ್ನು ಮದುವೆಯಾಗುತ್ತಾನೆ. ಗಾಯತ್ರಿ ಹಾಗೂ ಬಾಲಾಜಿ ಇವರದು ಸಹ ಅನುರಾಗದ ದಾಂಪತ್ಯ ಜೀವನ. ಅವರ ನೆಮ್ಮದಿಯ ಜೀವನದಲ್ಲಿ ಜನಿಸಿದವನು ನಟರಾಜ, ತಂದೆಯ ಸ್ವಭಾವಕ್ಕೆ ತದ್ವಿರುದ್ಧ. ನಾಟಕ ಸಿನಿಮಾಗಳಲ್ಲಿ ಅಭಿನಯಿಸುವದು ತೀರಾ ಹೀನ ವೃತ್ತಿ ಎಂದು ಭಾವಿಸುತ್ತಾನೆ.

ಮುಂದಿನ ಇಪ್ಪತ್ತು ವರ್ಷಗಳಲ್ಲಿ ಸಾಮಾಜಿಕ, ಕೌಟುಂಬಿಕ, ಶೈಕ್ಷಣಿಕ, ನಾಟಕ, ಚಲನಚಿತ್ರ, ಸಾಹಿತ್ಯ, ವಿಜ್ಞಾನ ಮುಂತಾದ ಜೀವನದ ವಿವಿಧ ರಂಗಗಳಲ್ಲಿ ಸಂಪೂರ್ಣ ಬದಲಾವಣೆಗಳಾಗಿ ಸ್ವಾತಂತ್ರ್ಯಾಂದೋಲನವೂ ನಡೆದು, ದೇಶವು ಸ್ವತಂತ್ರವಾದಾಗ, ಚಲನಚಿತ್ರರಂಗದಲ್ಲಿಯೂ ಸಮಗ್ರ ಬದಲಾವಣೆಗಳಾದವು. ಹಿನ್ನೆಲೆಗಾಯಕರು, ಕ್ಯಾಬರೆ, ರೇಪ್ ದೃಶ್ಯಗಳು ತುಂಬಿದ ಚಲನಚಿತ್ರಗಳು ಬರತೊಡಗಿದ ತೀರ ಇತ್ತೀಚಿನ ಕಾಲದಲ್ಲಿ.

ಬಾಲಾಜಿಯ ತಂದೆ–ತಾಯಿ, ಹಳೆಯ ತಲೆಮಾರಿನವರೆಲ್ಲ ಸರಿದು ಹೋಗಿದ್ದರು. ಬಾಲಾಜಿಯ ಜೀವನದಲ್ಲಿಯೇ ಮಹತ್ವದ ಬದಲಾವಣೆಗಳಾಗಿದ್ದವು. ಮಗ ನಟರಾಜ ಇಂಜಿನೀಯರನಾಗುತ್ತಾನೆ. ಸುಲೋಚನೆ ಮದುವೆಯಾಗಿ ಗಂಡನ ಮನೆಗೆ ಹೊರಟು ಹೋಗಿರುತ್ತಾಳೆ. ಶ್ರೀಮಂತರ ಮನೆಯ ಕನ್ಯೆ ನಟರಾಜನ ಮಡದಿಯಾಗಿ ಬರುತ್ತಾಳೆ. ಕೌಟುಂಬಿಕ ಜೀವನದಲ್ಲಿ ಬಿರುಕು ಪ್ರಾರಂಭವಾಗುತ್ತದೆ. ಮನೆಯ ಎಲ್ಲ ಅಧಿಕಾರ

ಸೂತ್ರ ಸೊಸೆಯ ಕೈಗೆ ಬಂದಾಗ ಗಾಯತ್ರಿ, ಬಾಲಾಜಿ ಮನೆಯಲ್ಲಿ ಪರಕೀಯರಂತೆ ಬಾಳಬೇಕಾಗುತ್ತದೆ. ಅತ್ತೆ-ಮಾವನ ಮೇಲೆ ಗೌರವ, ಪ್ರೀತಿ, ವಿಶ್ವಾಸಗಳಿಲ್ಲದೇ ಅವರು ತಮ್ಮ ಮನೆಗೊಂದು 'ಪೀಡೆ' ಎಂಬ ಅಸಡ್ಡೆಯ ಭಾವನೆ ಅವಳಲ್ಲಿ ಬೆಳೆಯತೊಡಗುತ್ತದೆ. ಹಣ ಸಂಪಾದನೆ, ಪ್ರತಿಷ್ಠೆ ಇವು ನಟರಾಜನ ಬದುಕಿನ ಧ್ಯೇಯವಾಗುತ್ತವೆ. ಮಗಳ ಬಾಣಂತಿತನಕ್ಕೆ ಹೋದಾಗ ಗಾಯತ್ರಿ, ಅಲ್ಲೇ ಅತಿಸಾರ ಕಾಯಿಲೆಯಿಂದ ಮರಣ ಹೊಂದುತ್ತಾಳೆ. ಏಕಾಂಗಿಯಾದ ಬಾಲಾಜಿ, ಮನನೊಂದು, ಹೆಂಡತಿಯ ಕರ್ಮ ಮುಗಿಸಿ ದೇಶ ಸಂಚಾರಕ್ಕೆ ಹೊರಡುತ್ತಾನೆ. ಆದರೆ ನಟರಾಜನ ಮಗ 'ಮನೋಹರ' ಒಬ್ಬ ಶ್ರೇಷ್ಠ ಕಲಾವಿದನಾಗುವನೆಂಬ ಭರವಸೆ, ದೂರದ ಆಸೆ. ಬಾಲಾಜಿಯ ಬದುಕಿಗೆ ಮತ್ತೇ ಮತ್ತೆ ಚೈತನ್ಯವನ್ನು ತುಂಬುತ್ತದೆ.

ಮೈಸೂರನ್ನು ಬಿಟ್ಟು ಹನ್ನೆರಡು ವರ್ಷಗಳ ನಂತರ ವೃದ್ಧಾಪ್ಯದ ಕೊನೆಯ ದಿನಗಳಲ್ಲಿ ಕೊನೆಗೊಮ್ಮೆ, ಮಕ್ಕಳು, ಮೊಮ್ಮಕ್ಕಳನ್ನು ಕಾಣಲು ಬೆಂಗಳೂರಿಗೆ ಹೊರಡುತ್ತಾರೆ. ಅಷ್ಟರಲ್ಲಿ ಅವರ ಬದುಕಿನ ಅಂತಿಮ ಆಸೆ ಕೈಗೂಡಿರುತ್ತದೆ. ಮೊಮ್ಮಗ 'ಮನೋಹರ' ಅಭಿನಯಿಸಿದ 'ಬಾಳೊಂದು ನಂದನ' ಚಿತ್ರದ ನೂರನೇ ದಿನದ ಸಮಾರಂಭ. ಅವೇ ಊರಿನಲ್ಲಿ ಬಾಲಾಜಿಯವರು ನಟಿಸಿದ ಹಳೆಯ 'ಭೀಷ್ಮ ಪ್ರತಿಜ್ಞೆ' ಚಿತ್ರವೂ ಬಂದಿರುತ್ತದೆ. 'ಬಾಲಾಜಿ' ತೀರಿಕೊಂಡಿದ್ದಾರೆಂದೇ ಎಲ್ಲರೂ ಭಾವಿಸಿರುತ್ತಾರೆ. ಬದುಕಿನ ಅಂತ್ಯದ ಆಸೆ ಕೈಗೂಡಿದ ಬಾಲಾಜಿಯವರು ಮಕ್ಕಳಿಗೆ ಒಂದು ಪತ್ರವನ್ನು ಬರೆಯುತ್ತಾರೆ. ಸಾವಿರಾರು ಜನರ ಗದ್ದಲದಲ್ಲಿ ಕಾರಿನಲ್ಲಿ ಸೌಜನ್ಯದಿಂದ ಎಲ್ಲರಿಗೆ ಕೈಮುಗಿಯುತ್ತ ನಿಂತ ಮೊಮ್ಮಗನನ್ನು ಕಂಡ 'ಬಾಲಾಜಿ' ತಮ್ಮ ಜೀವನ ಸಾರ್ಥಕವಾಯಿತೆಂದುಕೊಳ್ಳುತ್ತಾರೆ. ನೂಕುನುಗ್ಗಲಿನಲ್ಲಿ ಬಾಲಾಜಿಯವರು ಮೊಮ್ಮಗನ ಕಾರಿನಡಿಯಲ್ಲಿಯೇ ಬಿದ್ದು ತಮ್ಮ ಜೀವನವನ್ನು ಕಳೆದುಕೊಳ್ಳುತ್ತಾರೆ. ಕಲಾವಿದನ ಬದುಕು ಹೀಗೆ ದುರಂತಕ್ಕೊಳಗಾಗುತ್ತದೆ.

ಬಾಲಾಜಿಯವರ ಸಾವು, ಸೀನಿಮ್ಯಾಟಿಕ್ ಎನಿಸಿದರೂ ಸಹ, ಅವರ ವೃದ್ಧಾಪ್ಯದ ಅಂತಿಮ ದಿನಗಳು, ಸಾವಿನ ಸನ್ನಿವೇಶ, ತಮ್ಮ ಬಾಳಸಂಗಾತಿ 'ಗಾಯತ್ರಿ' ಕಳೆದುಕೊಂಡಾಗ ಅವರ ಬದುಕಿನ ಏಕಾಕಿತನ, ಇವೆಲ್ಲ ಓದುಗರನ್ನು ಭಾವೋತ್ಕಟತೆಗೆ ಒಯ್ಯುತ್ತದೆ.

ಮೋಟಮ್ಮ, ಅಚ್ಚಮ್ಮ, ಶ್ರೀನಿವಾಸಶಾಸ್ತ್ರಿಗಳು, ವೆಂಕಟಸುಬ್ಬಯ್ಯ ಹಳೆಯ ತಲೆಮಾರಿನ ಹಿರಿಯರು. ಸ್ವಾತಂತ್ರಪೂರ್ವದಲ್ಲಿ ನೆಮ್ಮದಿಯ ಕೌಟುಂಬಿಕ ಜೀವನವನ್ನು ಕಳೆದಹಿರಿಯ ಜೀವಿಗಳು. ಗಾಯತ್ರಿ, ಬಾಲಾಜಿ, ಸ್ವಾತಂತ್ರ್ಯಾನಂತರ ಇತ್ತೀಚೆಗೆ ಸ್ನೇಹ, ಸೌಹಾರ್ದ, ಪ್ರೀತಿ, ವಿಶ್ವಾಸಗಳಿಲ್ಲದ ಕುಟುಂಬದಲ್ಲಿ ಹೊಸ ಪೀಳಿಗೆಯವರೊಡನೆ ಸಂಪೂರ್ಣವಾಗಿ ಹೊಂದಿಕೊಳ್ಳಲಾಗದೆ ತತ್ತರಿಸಿದ ನೊಂದ ಜೀವಿಗಳು. ನಟರಾಜ, ನಂದಿನಿ, ಹೊಸ ಪೀಳಿಗೆಯನ್ನು ಪ್ರತಿನಿಧಿಸುತ್ತಾರೆ. ಆಧುನೀಕರಣ

ಹೊಂದಿದ ಯಾಂತ್ರಿಕ ಬದುಕನ್ನು ಅಪ್ಪಿಕೊಂಡು ವೈಯಕ್ತಿಕ ಸುಖಕ್ಕೆ ಮಹತ್ವ ಕೊಡುತ್ತಾರೆ. ಹೀಗೆ ಕೌಟುಂಬಿಕ ಮೌಲ್ಯಗಳು ಅಪಮೌಲ್ಯವಾಗುತ್ತಿರುವದನ್ನು ಲೇಖಕಿ ಸೂಚ್ಯವಾಗಿ ಮಾರ್ಮಿಕವಾಗಿ ನಿರೂಪಿಸಿದ್ದಾರೆ. ಲೇಖಕಿ ಇಲ್ಲಿ ನಾಲ್ಕು ತಲೆ ಮಾರುಗಳ ಚರಿತ್ರೆಯನ್ನು ಸ್ಥೂಲವಾಗಿ ಚಿತ್ರಿಸಲು ಪ್ರಯತ್ನಿಸಿದ್ದಾರೆ. ತಲೆತಲಾಂತರ ಗಳಲ್ಲಿ ಬದಲಾಗುತ್ತಿರುವ ಮಾನವ ಬದುಕಿನ ಒಳ-ಹೊರಗನ್ನು ಮಾರ್ಮಿಕವಾಗಿ ಅರ್ಥಪೂರ್ಣವಾಗಿ ಬಿಂಬಿಸಿದ್ದಾರೆ. ಇಂದಿರಾ ಅವರ ಭಾಷೆ ಶೈಲಿ ಪಾರದರ್ಶವಾಗಿದೆ. ಓದುಗರನ್ನು ಆಳಕ್ಕೆ ಕೊಂಡೊಯ್ಯುತ್ತಾರೆ.

ಇಂದಿರಾ ಅವರದು ಪ್ರಗತಿಶೀಲದೃಷ್ಟಿ. ಹಳೆ-ಹೊಸ ಮೌಲ್ಯಗಳ ಈ ಸಂಘರ್ಷ ವನ್ನು ಪ್ರಬುದ್ಧವಾಗಿ ನಿರೂಪಿಸಿದ್ದಾರೆ.[1]

'ಬಾಳು-ಬದುಕು ಒಂದು ದಿನದಂತೆ' "ಸೂರ್ಯೋದಯವಾಗಿ ಸರ್ವಜಗತ್ತು ಎಚ್ಚರಗೊಳ್ಳುತ್ತದೆ. ಜಗತ್ತಿಗೆ ಆಗ ಬಾಲ್ಯ; ಮನುಷ್ಯನ ಜೀವನಕ್ಕೂ ಅಷ್ಟೇ ದಿನ ಚಟುವಟಿಕೆಗಳು ಶ್ರದ್ಧೆ ಉತ್ಸಾಹದಿಂದ ಸಾಗುತ್ತವೆ. ಮಧ್ಯಾಹ್ನದಿಂದ ಸಂಜೆಯ ವರೆಗೂ ದುಡಿತ-ದಣಿವು. ತಾರುಣ್ಯ ಪ್ರೌಢತ್ವ ಕಳೆದು ಜೀವ ದಣಿದು ವಿಶ್ರಾಂತಿ ಬಯಸುತ್ತದೆ. ಸಂಜೆಯ ರಮ್ಯಮನೋಹರ ದೃಶ್ಯ ಕೇವಲ ಕೆಲವರಿಗೆ ಮಾತ್ರ ಸುಖ ದಾಯಕ. ಎಲ್ಲರಿಗೂ ಅಲ್ಲಿ ಕತ್ತಲು ಕವಿಯುತ್ತೆ ಜೀವ ಬೆಳಕು ಬಯಸುತ್ತದೆ. ಕೆಲವರ ಬಾಳಿಗೂ ರಾತ್ರಿಯೂ ಸುಖದಾಯಕ. ಅದೃಷ್ಟಹೀನರ ಪಾಲಿಗೆ ರಾತ್ರಿ ಎಂಬುದು ಬಾಳಿನ ಅತ್ಯಂತ ಗಾಢಾಂಧಕಾರ. ಅವರ ಬದುಕಿಗೆ ತಮಸ್ಸು ಮುಚ್ಚಿಕೊಳ್ಳುತ್ತದೆ. ಹಗಲಿನ ಬೆಳಕು, ನೆಂಟರಿಷ್ಟರು, ಗೆಳೆಯರು ಶ್ರೀಮಂತಿಕೆ, ಚೆಲುವು, ಉತ್ಸಾಹ, ಕೆಚ್ಚು, ಎಲ್ಲಕ್ಕೂ ಕತ್ತಲು ಆವರಿಸಿಕೊಂಡು ಅವರ ಸಕಲ ಪರಿವಾರವೂ ದೂರವಾಗಿ ಹುಟ್ಟುವಾಗ ಒಂಟಿಯಾಗಿ ಬಂದಂತೆ ಸಾಯುವಾಗಲೂ ಏಕಾಂಗಿಯಾಗಿ ನರಳುತ್ತ ಸಾಯಬೇಕು.

ಇದು ಜಗತ್ತಿನ ನಿಯಮ. ಬದುಕಿನಲ್ಲಿ ಸೂತ್ರಧಾರಿಯೊಬ್ಬನಿದ್ದಾನೆ. ಮಾನವ ಬದುಕಿನ ತಾತ್ವಿಕ ಅರ್ಥವನ್ನು ಕಲಾವಿದನ ಜೀವನದ ಹಂತ ಹಂತಗಳಲ್ಲಿ ಕಾದಂಬರಿ ಕಾರ್ತಿ ಮನೋಜ್ಞವಾಗಿ ನಿರೂಪಿಸಿದ್ದಾರೆ.

'ಗಿರಿಬಾಲೆ' :

ಶ್ರೀಮತಿ ಇಂದಿರಾ ಅವರ 'ಗಿರಿಬಾಲೆ' ೧೯೬೯ ರಲ್ಲಿ ಪ್ರಕಟವಾಗಿ, ೧೯೭೪ ರಲ್ಲಿ ದ್ವಿತೀಯ ಮುದ್ರಣವಾಗಿದೆ.

---

1. ಶ್ರೀ ನಿಸ್ಸಾರ್ ಅಹಮದ್ 'ಬಿಡುಗಡೆ ಸಮಾರಂಭದ ಭಾಷಣ 7-10-1984.'

'ಗಿರಿಬಾಲೆ' ಯಲ್ಲಿ ಸ್ತ್ರೀಯ ತ್ಯಾಗ, ಸಹನೆ, ಔದಾರ್ಯ, ಮುಗ್ಧತೆ ಇವುಗಳನ್ನು ಚಿತ್ರಿಸಿದ್ದಾರೆ.

"ಬದುಕಿನುದ್ದಕ್ಕೂ ನೋವು, ಸಂಕಟಗಳನ್ನೇ ಅನುಭವಿಸಿ ಯಾವುದೇ ಬಗೆಯ ಪ್ರತಿಫಲಾಪೇಕ್ಷೆಯಿಲ್ಲದೆ ತನ್ನ ಕರ್ತವ್ಯವನ್ನು ಮುಗಿಸಿ ಅದೇ ನೋವಿನಲ್ಲಿಯೇ ಕಣ್ಮರೆಯಾಗಿ ಹೋದವರು ಅನೇಕ"

ಈ ಕೃತಿಯಲ್ಲಿ, ಶಂಕರಿಯೂ ಅಂತಹದೇ ಒಂದು ಮುಗ್ಧಜೀವಿ. ಅವಳಿಗೆ ಹೊರಗಿನ ಪ್ರಪಂಚವೇ ತಿಳಿಯದು. ತಾನು ಹುಟ್ಟಿ ಬೆಳೆದ ಪರಿಸರ, ತನ್ನ ಹಿರಿಯರ ಆಚಾರ–ವಿಚಾರಗಳು, ಶೀಲ–ಸಂಪ್ರದಾಯಗಳು, ಸತ್ಯ, ಧರ್ಮ, ಕರ್ತವ್ಯನಿಷ್ಠೆ–ಇವೇ ತನ್ನ ಜೀವಿತದ ಉಸಿರು–ನಾಡಿ ; ಧನ್ಯತೆ ಅದೇ ತನ್ನ ಮುಕ್ತಿ ಎಂದು ನಂಬಿದವಳು. ಕಡೆಗೆ ಇಷ್ಟು ಮಾಡಿಯೂ ತನ್ನ ಬದುಕು–ಬರಡು, ವ್ಯರ್ಥ–ಎಂದು ತಪ್ಪಾಗಿ ತಿಳಿದ ಅವಳು, ತನ್ನ ಕರ್ತವ್ಯ ಮುಗಿಸಿ, ತನ್ನ ಪಾಲಿನ ಪುಣ್ಯವನ್ನು ಉಳಿಸಿ ಸದ್ದಿಲ್ಲದೆ ಕರಗಿ ಹೋದಳು"[1]

ಈ ಕೃತಿಯಲ್ಲಿ ಮನೋಹರ ದೃಶ್ಯಗಳಿಲ್ಲ. ಮುಗ್ಧ ಪರಿಸರವಿದೆ. ಪಂಡಿತರಿಲ್ಲ, ಪಾಮರರಿದ್ದಾರೆ. ದೇವಾಂಶ ಸಂಭೂತರಿಲ್ಲ, ಮಾನವರೇ ಇದ್ದಾರೆ. ಪವಾಡಗಳೊಂದೂ ಇಲ್ಲ. ವಾಸ್ತವತೆ–ಮಾತ್ರ ಇದೆ. ಕಣ್ಣು ಕೋರೈಸುವ ಸುಂದರಿಯರಿಲ್ಲ; ಸಾಮಾನ್ಯ ಹೆಂಗಳೆಯರಿದ್ದಾರೆ. ಸಂಗೀತ ನಾಟ್ಯ, ಕಲೆ, ಒಂದೂ ಇಲ್ಲ. ನೈಜ ಜೀವನವಿದೆ. ಇದನ್ನು ಓದುತ್ತಿರುವಾಗ ಮನ ರಂಜಿಸಲಾರದು; ಆದರೆ ಮನ ಕರಗಬಹುದು. ಕಣ್ಣು ತುಂಬಿ ಬರಬಹುದು–'ಶಂಕರಿ'ಯ ನೈಜ ಸ್ಥಿತಿ ನಿಮ್ಮ ಕಣ್ಣೆದುರಿಗೆ ಬಂದರೆ ಮಾತ್ರ"[2] ಎಂದು ಕಾದಂಬರಿಕಾರ್ತಿಯೇ 'ಬಿನ್ನಹ'ದಲ್ಲಿ ಹೇಳಿದ್ದಾರೆ.

ಕಥಾನಾಯಕಿ ಶಂಕರಿ, ಸುಮಾರು ಎಂಬತ್ತು ವರ್ಷಗಳ ಹಿಂದೆ ಮಲೆನಾಡಿನ 'ಮಲ್ಲತ್ತಿ'ಯ ಮುಗ್ಧನಿಸರ್ಗದ ಪರಿಸರದಲ್ಲಿ ಬೆಳೆದವಳು. ಅವಳು ಬದುಕನ್ನು ಕಳೆದುದೂ ಮಲೆನಾಡಿನಲ್ಲಿಯೇ.

"ಪ್ರಾಂತ್ಯದ ಹಳ್ಳಿಗಳ ಕಡೆ ಬಸ್ಸುಗಳ ಓಡಾಟವಿರಲಿಲ್ಲ[3] ಬಾಲ್ಯವಿವಾಹ, ವೇಶ್ಯಾಪದ್ಧತಿ, ಬಹುಪತ್ನಿತ್ವ, ಸಂಪ್ರದಾಯ ನಿಷ್ಠೆ, ಪ್ರಬಲವಾಗಿದ್ದ ಕಾಲ ಅದು, ಕಥಾನಾಯಕಿ 'ಶಂಕರಿ'ಗೂ ಬಾಲ್ಯದಲ್ಲೇ ವಿವಾಹವಾಗಿರುತ್ತದೆ. ಕೈಹಿಡಿದ ಪತಿಯ ದಬ್ಬಾಳಿಕೆಗೆ ತುತ್ತಾಗಿ, ಸಹನೆ ತಾಳ್ಮೆಯಿಂದ ತನ್ನ ಬದುಕನ್ನು ಕಳೆದವಳು.

---

1. ಎಂ. ಕೆ. ಇಂದಿರಾ "ಬಿನ್ನಹ"ದಲ್ಲಿ.
2. ಎಂ. ಕೆ. ಇಂದಿರಾ "ಗಿರಿಬಾಲೆ" ಪು. 19.
3. ಅದೇ ; ಪುಟ.

'ಶಂಕರಿ', ಮಲೆನಾಡಿನ ಹಳ್ಳಿಯ ಪರಿಸರದಲ್ಲಿ, ಪಶು–ಪಕ್ಷಿಗಳ ಸಂಸರ್ಗ, ಪ್ರಶಾಂತ ವಾತಾವರಣದಲ್ಲಿ ಮೂಕಪ್ರಾಣಿಗಳ ಸಾನ್ನಿಧ್ಯದಲ್ಲಿ ಮುಗ್ಧಳಾಗಿ ಮೌನಗೌರಿ ಯಾಗಿಬೆಳೆಯುತ್ತಾಳೆ. ವಿದ್ಯಾಭ್ಯಾಸ್ಯದ ಗಂಧವೇ ಇಲ್ಲದ ಆ ಕಾಲದಲ್ಲಿ 'ಶಂಕರಿ' ಹಿರಿಯರು ಹಾಕಿಕೊಟ್ಟ ಮಾರ್ಗದಲ್ಲಿ ಹೆಜ್ಜೆಯಿಟ್ಟು ಬದುಕಿನುದ್ದಕ್ಕೂ ಅದೇ ದಾರಿಯಲ್ಲಿ ನಡೆಯುತ್ತಾಳೆ.

"ಗಂಡನಿಗೆ ಎಂದೂ ಎದುರು ಹೇಳಬೇಡ. ಹಬ್ಬ–ಹರಿದಿನ ಸರಿಯಾಗಿ ನಡೆಸು. ಮನೆಗೆ ಬಂದವರನ್ನು ಉಪಚರಿಸು, ಪೂಜೆ–ಪುರಸ್ಕಾರ ಒಂದೂ ಬಿಡಬೇಡ, ನಿನ್ನ ಕಷ್ಟ ಎಂದಾದರೂ ಪರಿಹಾರವಾದೀತು"[1] ಎಂದು ಅತ್ತೆ 'ಗಿರಿಯಮ್ಮ'ನವರು ಹೇಳಿದ ಮಾತುಗಳನ್ನು ನೆನಪಿಟ್ಟುಕೊಂಡು ಜೀವನದುದ್ದಕ್ಕೂ ಪರಿಪಾಲಿಸುತ್ತಾಳೆ. ವೆಂಕಟೇಶ, ದನ ಬಡಿದಂತೆ ಬಡಿದರೂ ಸುಮ್ಮನಿರುತ್ತಾಳೆ. ಅವನು ಸುಖದ ಸುಪ್ಪತ್ತಿಗೆಯಲ್ಲಿದ್ದರೂ ಅವನಿಂದ ಏನನ್ನೂ ಅಪೇಕ್ಷಿಸದ ನಿರ್ಲಿಪ್ತತೆ ಅವಳದು. ಅವನು ತಂದಿಟ್ಟುಕೊಂಡ ಸೂಳೆಯ ಸೇವೆಯನ್ನೂ ಮಾಡುತ್ತಾಳೆ. ಗಂಡ–ಹೆಂಡಿರ ಲೈಂಗಿಕ ಜೀವನದ ಕಲ್ಪನೆಯೂ ಅವಳಿಗಿರುವುದಿಲ್ಲ, ಸೂಳೆಯನ್ನು ಇಟ್ಟುಕೊಂಡು ಇವಳನ್ನು ಅಲಕ್ಷಿಸಿದ್ದ ಕ್ಕಾಗಿ ಹಿರಿಯರೆಲ್ಲ ತೋರಿದುದರ ಅರ್ಥಕೂಡ ಇವಳಿಗಿರಲಿಲ್ಲ.

ಅಲ್ಲದೆ ಅದೇ ಹಳ್ಳಿಯ 'ಹಾಗಲಮನೆ' ಸಾಹುಕಾರರು ಸೂಳೆಯನ್ನಿಟ್ಟುಕೊಂಡಿರು ವಂತೆ ತನ್ನ ಗಂಡನೂ ಸೂಳೆಯನ್ನು ಇಟ್ಟುಕೊಂಡಿರಬೇಕೆಂದು ತಿಳಿದಳೇ ವಿನಾ ಸೂಳೆ ಯನ್ನು ಇಟ್ಟುಕೊಂಡುದದರ ಕಾರಣವನ್ನೂ ಯೋಚಿಸದಷ್ಟು ಮುಗ್ಧಳು, ಗಂಡನೆನಿಸಿ ಕೊಂಡವನು ಹೆಂಡತಿಯನ್ನು ಹೊಡೆಯುವುದು ಸಾಮಾನ್ಯವೆಂದು ಭಾವಿಸಿದ ಅವಳು, ಹೊಡೆಯುವದನ್ನೂ ತೆಪ್ಪಗೆ ಸಹಿಸಿಕೊಳ್ಳುತ್ತಾಳೆ. ಅದಕ್ಕಾಗಿ 'ಸೋಮಲಾಪುರ'ದ ಜೋಯಿಸರ ಮಗನ ಉದಾಹರಣೆಯೂ ಅವಳಿಗಿದೆ. ಜೋಯಿಸರ ಮಗ ಹೆಂಡತಿ ಯನ್ನು ತುಂಬಾ ಹೊಡೀತಾನೆ ಎಂದು ಅನೇಕರು ಹೇಳಿದ್ದನ್ನು ಕೇಳಿದ ಶಂಕರಿ, ವೆಂಕಟೇಶ ಹೊಡೆದಾಗ ಅದನ್ನು ಸಹಿಸುವದು ತನ್ನ ಕರ್ತವ್ಯ ಎಂದು ಭಾವಿಸುತ್ತಾಳೆ. ಇದು ಮುಗ್ಧತನದ ಪರಮಾವಧಿ.

"ಅವನು ಹೊಡೀಲಿ, ಬೈಲಿ ಬೇಕಾದ್ದು ಮಾಡ್ಲಿ, ಅವನ ಜೊತೆ ಮಾತ್ರ ಬಿಟ್ಟು ಬರಬ್ಯಾಡ"[2] ಎಂದು ಗಿರಿಯಮ್ಮನವರು ಉಪದೇಶಿಸಿ, ವೆಂಕಟೇಶನ ಹತ್ತಿರ ಬಿಟ್ಟು ಬಂದಾಗ, ಅದನ್ನು ಅಕ್ಷರಶಃ ಪರಿಪಾಲಿಸುತ್ತಾಳೆ. ಅಲ್ಲದೆ 'ದುಗ್ಗಜ್ಜಿ'..."ಅವನು ಹೊಡದ್ರೆ ಹೊಡೀಲಿ, ತ್ಯಪ್ಗಿದ್ಬಿಡು, ನಿನ್ನ ಕೆಲಸ ನೀನು ಮಾಡ್ಕಂಡಿರು, ಎಷ್ಟುದಿನ ಹಾರ್‍ಯಾಡ್ಯಾನು, ಹೆಣ್ಣಾದೋಳು ಸಹಿಸ್ಕೋಬೇಕು"[3] ಎಂದು ಹೇಳುತ್ತಾಳೆ.

---

1. ಅದೇ; ಪುಟ 119–120.
2. ಅದೇ; ಪುಟ. 80.
3. ಅದೇ; ಪುಟ. 80.

ಹೀಗೆ ಹಿರಿಯರೆಲ್ಲರ ಬೋಧೆ, ಉಪದೇಶ, ಅವಳ ಮುಗ್ಧ ಮನಸ್ಸಿನಲ್ಲಿ ಗಟ್ಟಿಯಾಗಿ ಬೆಳೆಯುತ್ತ ಹೋಗುತ್ತವೆ. ನಿಷ್ಠೆಯಿಂದ ಗೃಹಿಣೀ ಧರ್ಮವನ್ನು ಆಚರಿಸುತ್ತಾಳೆ. ಮನೆಯ ಆಳುಕಾಳುಗಳಿಗೆ ತಾಯಿಯಾಗುತ್ತಾಳೆ. ಸುತ್ತುಮುತ್ತಣದವರ ಅನುಕಂಪಕ್ಕೆ ಪಾತ್ರಳಾಗುತ್ತಾಳೆ.

ಒಂದು ದಿನ 'ದುಗ್ಗಜ್ಜಿ' ಶಂಕರಿಯನ್ನು ಗುಟ್ಟಾಗಿ ಕರೆದು ತನಿಖೆ ಮಾಡಿ, "ದುರ್ದೈವದ ಹೆಣ್ಣು ನೀನು, ಚೆಂದಾತು ಬಿಡು. ನಿನ್ನ ಗಂಡ ಅಲ್ಲಿ ಸೂಳೇನ ಮಗ್ಗಾಗೆ ಹಾಕ್ಕಂಡು ಬಿದ್ಗಾತಾನೆ, ನೀನು ಇಲ್ಲಿ 'ಲಚ್ಚಿ' ಮಗ್ಗಾಗೆ ಮಲಗಿರು"[1] ಎಂದಾಗ ಹತ್ತೊಂಬತ್ತು ವರ್ಷದ ಶಂಕರಿಗೆ ತನ್ನ ಗಂಡ ಸೂಳೆಯನ್ನು ಮಗ್ಗುಲಲ್ಲಿ ಮಲಗಿಸಿಕೊಳ್ಳುವದರಲ್ಲಿ ಏನೋ ಗುಟ್ಟಿರಬಹುದೆಂದು ಮೊದಲ ಬಾರಿ ತಲೆಗೆ ಹೊಳೆಯುತ್ತದೆ. ಕ್ರಮೇಣ ತಿಳುವಳಿಕೆಯುಂಟಾಗಿ ಸಂಸಾರದಲ್ಲಿ ತನ್ನ ನಿಲುವು ಏನು ಎಂಬುದನ್ನು ಅರಿತುಕೊಳ್ಳುತ್ತಾಳೆ. ಪಕ್ಕದ ಮನೆಯ ರಾಮಚಂದ್ರ ಉಡುಪರ ತಾಯಿ 'ಶೇಷಮ್ಮ' ಆಗಾಗ ಉಪದೇಶ ಮಾಡುತ್ತಲೇ ಇರುತ್ತಿದ್ದುದರಿಂದ ಅವಳಿಗೆ ತಾಳ್ಮೆಯೊಡನೆ, ತಿಳುವಳಿಕೆಯೂ ಬೆಳೆಯುತ್ತದೆ.

"ನೀನು ಒಂದು ದಿನವಾದರೂ ಗಂಡನ ಹಾಸಿಗೇಲಿ ಮಲಗಬೇಕು ಮಗುವೇ ?"[2] ಎಂದು ಶೇಷಮ್ಮ ಹೇಳಿದ ಮಾತಿನ ಅಂತರಾರ್ಥ ಅವಳಿಗೆ ತಿಳಿಯದೇ ಹೋದಾಗ, ಒಂದು ದಿನ 'ಶೇಷಮ್ಮ' ಗಂಡ–ಹೆಂಡಿರ ಲೈಂಗಿಕ ಸಂಬಂಧದ ವಿಚಾರವನ್ನು ಸ್ಪಷ್ಟವಾಗಿ ಹೇಳುತ್ತಾಳೆ. ಈ ರಹಸ್ಯವನ್ನು ಮೊದಲಬಾರಿ ತಿಳಿದ 'ಶಂಕರಿ' ವಿಚಾರಪರಳಾಗುತ್ತಾಳೆ. ಆದರೂ ತಾಳ್ಮೆಗೆಡದೆ, ಪೂಜೆ–ಪುರಸ್ಕಾರ, ಹಬ್ಬ–ಹರಿದಿನ, ಗೌರಿಪೂಜೆ, ತುಳಸೀಪೂಜೆ, ಎಲ್ಲವನ್ನು ತಪ್ಪದೇ ನಡೆಸುತ್ತಾಳೆ. ಗಂಡನ ಭ್ರಷ್ಟಾಚಾರ ಅವಳಿಗೆ ಹಿಡಿಸದಾದರೂ ಅದಕ್ಕೆ ಪ್ರತಿಕ್ರಿಯೆ ತೋರುವುದಿಲ್ಲ ; ಸಿಡಿದೇಳುವದಿಲ್ಲ. ಬದಲಾಗಿ ಸಾಂಪ್ರದಾಯಿಕ ಆಚರಣೆಗಳಲ್ಲಿ ಶ್ರದ್ಧೆವಹಿಸಿ, ಭವಿಷ್ಯ ಜೀವನದ ಬಗೆಗೆ ಆಶಾ ಭಾವನೆ ತಳೆಯುತ್ತಾಳೆ. ಗಂಡ, ಆಕಸ್ಮಿಕವಾಗಿ ಒದಗಿಬಂದ ಸನ್ನಿವೇಶದಲ್ಲಿ ತನ್ನವನಾದಾಗ, ಅವನ ಸಕಲ ಅಪರಾಧವನ್ನೂ ಮನ್ನಿಸುವ ಔದಾರ್ಯ ಅವಳಲ್ಲಿದೆ. 'ಶೇಷಮ್ಮ'ನವರು ಒಮ್ಮೆ ಬಸಿರು ಬಯಕೆಯ ಬಗೆಗೆ ವಿಚಾರಿಸಿದಾಗ ಅವಳ ತಾಯ್ತನದ ಬಯಕೆ ಜಾಗೃತವಾಗುತ್ತದೆ. ಅತ್ತಿಗೆ–ನಾದಿನಿಯರ ಬಾಣಂತಿತನ ಮಾಡಿ, ಅವರ ಮಕ್ಕಳನ್ನು ಎತ್ತಿ ಆಡಿಸಿದ ಅವಳ ಮನಸ್ಸು, ತನ್ನದೇ ಆದ ಕಂದನನ್ನು ಬಯಸುವದು ಸ್ವಾಭಾವಿಕ. ಮಕ್ಕಳನ್ನು ಅಪೇಕ್ಷಿಸಿ 'ನಾಗರಪ್ರತಿಷ್ಠೆ' ಮಾಡಿಸುತ್ತಾಳೆ. ಅದು ಫಲಿಸದೇ ಹೋದಾಗ, 'ರಾಯರ ಯೋಗದಲ್ಲಿ ಎಂಟುಮಕ್ಕಳ ಫಲವಿದೆ' ಎಂದು ಹೇಳಿದ

---

1. ಅದೇ ; ಪುಟ. 77.

2. ಅದೇ ; ಪುಟ. 99.

ಜೋಯಿಸರ ಮಾತಿನಲ್ಲಿ ಶ್ರದ್ಧೆಯಿಟ್ಟು ಬಡವರ ಮನೆಯ ಹುಡುಗಿ 'ಮುತ್ತು'ವನ್ನು ವೆಂಕಟೇಶನಿಗೆ ಮದುವೆ ಮಾಡಿಸಿ ಅವಳನ್ನು ಒಡಹುಟ್ಟಿದ ತಂಗಿಯಂತೆ ಕಾಣುತ್ತಾಳೆ.

'ನಾಗರವಳ್ಳಿ' ಸಾಹುಕಾರ, ಮೊದಲ ಹೆಂಡತಿ ಬಂಜೆ ಎಂದು ತಿಳಿದು ಎರಡನೆಯ ಮದುವೆಯಾಗಿ ನಾಲ್ಕಾರು ಮಕ್ಕಳನ್ನು ಪಡೆದುದನ್ನು ಅವಳು ತಿಳಿದಿರುತ್ತಾಳೆ. ಆದ್ದರಿಂದ ತನ್ನಿಂದಾಗಿ ತನ್ನ ಗಂಡನ ಬದುಕು ಬರಡಾಗಕೂಡದೆಂದು ಹಿರಿತನದ ಯೋಚನೆ ಮಾಡುತ್ತಾಳೆ. 'ಮುತ್ತು', ಮಗುವನ್ನು ಹೆತ್ತಾಗ ತಾಯಿಯಾದಂತೆ ಸಂತಸಪಡುತ್ತಾಳೆ! 'ಮುತ್ತು'ವಿನ ತಾಯಿ, ಹೊನ್ನಮ್ಮನ ಅನಾಗರಿಕ ವರ್ತನೆ, ಅವಳ ಕಟುನುಡಿಗಳಿಂದ ಮನನೊಂದು ಮುಂದಿನ ತನ್ನ ಘೋರ ಬದುಕನ್ನು ನೆನೆದು, ಶರಾವತಿಯಲ್ಲಿ ತನ್ನ ಜೀವನವನ್ನು ಕೊನೆಗಾಣಿಸಿಕೊಳ್ಳುತ್ತಾಳೆ.

ತೀರ ಮುಗ್ಧಳಾಗಿದ್ದ ಶಂಕರಿಯ ಸಹನೆ, ತ್ಯಾಗ. ಔದಾರ್ಯವನ್ನು ಲೇಖಕಿ ಹಂತ ಹಂತವಾಗಿ ಚಿತ್ರಿಸಿದ್ದಾರೆ. ಅವಳ ಬದುಕು ಓದುಗರ ಸಹಾನುಭೂತಿಯನ್ನು ಗಳಿಸುತ್ತದೆ. ಲೇಖಕಿ ಅವಳನ್ನು ಭಾರತೀಯ ಆದರ್ಶ ಮಹಿಳೆಯಂತೆ ಚಿತ್ರಿಸಿದ್ದಾರೆ. 'ಶೇಷಮ್ಮ'ನಿಂದ ದಾಂಪತ್ಯ ರಹಸ್ಯವನ್ನು ತಿಳಿದಾಗ, ಅವಳು ದ್ವಂದ್ವಕ್ಕೆ ಸಿಲುಕ ಬಹುದಾದ ಸಂದರ್ಭವನ್ನು ಇಲ್ಲಿ ಲೇಖಕಿ ತಪ್ಪಿಸಿದ್ದಾರೆ. ಅವಳ ಅಂತರ್ಯದ ಸಂಘರ್ಷ ವನ್ನು ಚಿತ್ರಿಸಿದ್ದರೆ ಶಂಕರಿಯ ಪಾತ್ರಕ್ಕೆ ಇನ್ನೂ ಹೆಚ್ಚಿನ ಜೀವಂತಿಕೆ ಬರಲು ಸಾಧ್ಯ ವಿತ್ತು. ಒಟ್ಟಿನಲ್ಲಿ ಅವಳೊಬ್ಬ ತ್ಯಾಗ ಮಯಿಯಾಗಿ, ಸಹನೆಯೂ ಮೂರ್ತಿಯಾಗಿ ಚಿತ್ರಿತಳಾಗಿದ್ದಾಳೆ.

ಕಾದಂಬರಿಯ ಇನ್ನುಳಿದ ಸ್ತ್ರೀ ಪಾತ್ರಗಳಾದ ಶೇಷಮ್ಮ, ದುಗಜ್ಜಿ, ಗಿರಿಯಮ್ಮ, ಇವರೆಲ್ಲ ಪರಹಿತವನ್ನು ಬಯಸುವ ಹಿರಿಯ ಜೀವಗಳು. ಇವರೆಲ್ಲರೂ ಶತಶತಮಾನ ಗಳಿಂದ ನಡೆದು ಬಂದಿರುವ ಸ್ತ್ರೀಶೋಷಣೆಯ ಅರಿವಿಲ್ಲದೆ, ಪುರುಷ ಪ್ರಾಧಾನ್ಯ ಸಾಮಾಜಿಕ ವ್ಯವಸ್ಥೆಯನ್ನು ಒಂದು ರೀತಿ ಒಪ್ಪಿಕೊಂಡವರು 'ಶಂಕರಿ'ಗೂ ಅದನ್ನೇ ಬೋಧಿಸಿ ಮೌನ, ತ್ಯಾಗ ಈ ಆದರ್ಶಗಳನ್ನೇ ಬೆಳಸಿ ಉಳಿಸುವಂತೆ ನೋಡಿಕೊಳ್ಳು ತ್ತಾರೆ. ದುಗ್ಗಜ್ಜಿ ಹಾಗೂ ಶೇಷಮ್ಮ ಶಂಕರಿಯ ಬಾಳಿನ ಆಶಯ ಕೈಗೂಡಲು ಮಹತ್ವದ ಪಾತ್ರ ವಹಿಸಿದ್ದಾರೆ. 'ಮುತ್ತು' ತಮ್ಮ ಗಂಡನನ್ನು ತನ್ನ ಹಿಡಿತದಲ್ಲಿಟ್ಟು ಕೊಳ್ಳುವ ಚಾಣಾಕ್ಷಳಾಗಿ ಚಿತ್ರಿತಳಾಗಿದ್ದಾಳೆ.

ಈ ಕಾದಂಬರಿಯಲ್ಲಿ ಬರುವ 'ಜಲಜೆ'. ವೇಶ್ಯೆಯಾದರೂ ಶಂಕರಿಯ ನಿಸ್ವಾರ್ಥ ಸೇವೆಯನ್ನು ಕಂಡಾಗ, ಅವಳ ಮಾನವೀಯ ಭಾವನೆಗಳು ಜಾಗೃತವಾಗುತ್ತವೆ. ಅವಳನ್ನು ತಾಯಿಯಂತೆ ಕಾಣುತ್ತಾಳೆ. ಊರಿಗೆ ಹೊರಟಾಗ, ಶಂಕರಿ ಮಡಿಲು ತುಂಬಿದಾಗ, ಕಣ್ಣೀರು ತಾನೇ ತಾನಾಗಿ ಹೊರ ಬರುತ್ತವೆ.

ಹೊನ್ನಮ್ಮ, ಅನಾಗರಿಕ, ಅಸಂಸ್ಕೃತ ಹೆಣ್ಣಾಗಿ ಚಿತ್ರಿತಳಾಗಿದ್ದಾಳೆ. ಬಡತನ ದಲ್ಲಿ ಜೀವನ ಕಳೆದ ಹೊನ್ನಮ್ಮ ಶ್ರೀಮಂತ ಅಳಿಯನ ಮನೆಯಲ್ಲಿದ್ದಂತೆ ಕ್ರಮೇಣ

ಅವಳಲ್ಲಿ ಮಾತ್ಸರ್ಯ–ತಾತ್ಸಾರ ಹೆಚ್ಚಾಗುತ್ತದೆ. ಬಂಜೆಯರನ್ನು ಹೀನಾಯವಾಗಿ ಕಾಣುವ ಹೊನ್ನಮ್ಮ ನಂತಹ ಅನಾಗರಿಕ ಹೆಂಗಸರಿಗೇನೂ ನಮ್ಮ ಸಮಾಜದಲ್ಲಿ ಕೊರತೆಯಿಲ್ಲ. ಶಂಕರಿಯನ್ನು ಮಾತಿಗೊಮ್ಮೆ 'ಬಂಜೆ' ಎಂದು ಹಂಗಿಸಿ, ಅವಳು ಮನೆಬಿಟ್ಟು ಹೊರಡುವದಕ್ಕೆ ಕಾರಣಳಾಗುತ್ತಾಳೆ. ಬಂಜೆಯು ಬಗ್ಗೆ ಹೆಂಗಸರಾಡುವ ಕುಹಕ ನುಡಿಗಳನ್ನು ಇಂದಿರಾ ಅವರು ಹೊನ್ನಮ್ಮನ ಮೂಲಕ ನಿರೂಪಿಸಿದ್ದಾರೆ. ಶಂಕರಿ ತವರಿನಿಂದ ತಂದ 'ಕೆಂದ' ಹಸುವನ್ನೂ ಸುರಿದ ಮಳೆಯಲ್ಲಿ ಹೊರಗಡೆ ಕಟ್ಟಿಸುತ್ತಾಳೆ, ಗೊಡ್ಡು ದನವನ್ನು ಕಟುಕರಿಗೆ ಮಾರುತ್ತಾಳೆ,

"ಅದೇನು ಕರೆಯೂದಲ್ಲ, ಕಾಸೂದಲ್ಲ ಅದು ಹೋದ್ರೆ ಯಾಕೆ ಈಪಾಟಿ ಆತಂಕಾಂತೀನಿ ? ಗೊಡ್ಡುದನ ಎಷ್ಟು ದಿನ ಇದ್ರೂ ಅಷ್ಟೇ ಸೈ. ಅದರ ಹೊಟ್ಟೆಗೆ ಚಾಚ್ತಿದ್ರೆ ಒಂದಿಷ್ಟು ಸಗಣಿ–ಗಂಜಲು ಅಷ್ಟೇ ಸೈ"[1] ಎಂದು ಅಪ್ರತ್ಯಕ್ಷವಾಗಿ ಶಂಕರಿಗೆ ಚುಚ್ಚುನುಡಿಗಳನ್ನಾಡಿ ಅವಳ ಸಾವಿಗೆ ಕಾರಣಳಾಗುತ್ತಾಳೆ. ನಮ್ಮ ಸಮಾಜ ಮಕ್ಕಳಿಲ್ಲದವರನ್ನು ನೋಡುವ ರೀತಿ ಇದು !

ಸಾಹುಕಾರರ ಮನೆಯ 'ನೀತಿ'ಯ ಮನಮೋಹಕ ಸೌಂದರ್ಯ ಅವಳನ್ನು ಅನೈತಿಕ ದಾರಿಯತ್ತ ಎಳೆದಿದೆ. ತಾನು ಸುಂದರಿ ಎಂಬ ಅಹಂಕಾರ, ಶ್ರೀಮಂತಿಕೆ, ವಿಧವಾತನ ಇವೆಲ್ಲ ಕಾರಣಕ್ಕಾಗಿ ಅವಳು ಮನೆತನ ಮಾನ ಮರ್ಯಾದೆಯನ್ನು ಅಲಕ್ಷಿಸಿ ತನ್ನ ಬದುಕಿನ ಸುಖಕ್ಕೆ ಮಹತ್ವ ಕೊಡುತ್ತಾಳೆ. ಅಂತೆಯೇ ವಿಧವೆಯಾದ ನಂತರ ವೆಂಕಟೇಶನೊಡನೆ ಸಂಬಂಧ ಬೆಳೆಸಿದರೂ ಆ ಬಂಧನ ಅವಳಿಗೆ ಬೇಸರ ತರಿಸುತ್ತದೆ. ಹೀಗಾಗಿ ಕ್ಷಣಿಕ ಸುಖವನ್ನರಸಿ ಹೊರಟ ಅವಳು ಕಲ್ಕತ್ತೆಯ ಸಾಹುಕಾರನೊಡನೆ ಓಡಿ ಹೋಗುತ್ತಾಳೆ. ಅವಳ ಅನೈತಿಕ ನಡತೆ ಅವಳ ಬದುಕನ್ನು ಅಧಃಪತನಕ್ಕೆಳೆದೊಯ್ಯುತ್ತದೆ,

ಈ ಕಾದಂಬರಿಯಲ್ಲಿ ತಾಯಿ, ವೇಶ್ಯೆ, ಹೆಂಡತಿ, ಅತ್ತಿಗೆ, ಸವತಿ, ಅನೈತಿಕ ಹೆಣ್ಣು, ಹೀಗೆ ಸ್ತ್ರೀಯ ಹಲವು ಮುಖಗಳನ್ನು ಇಲ್ಲಿ ಕಾಣುತ್ತೇವೆ.

ವೆಂಕಟೇಶ, ಸಿಡುಕು ಸ್ವಭಾವದ ಹಟವಾದಿಯಾಗಿದ್ದರೂ, ಕಾದಂಬರಿಯ ಕೊನೆಗೆ ಅವನಲ್ಲಿ ಪರಿವರ್ತನೆಯಾಗುತ್ತದೆ. ತನ್ನ ಹೆಂಡತಿ ಶಂಕರಿಯ ತ್ಯಾಗ, ಔದಾರ್ಯ ಸಹನೆ ಈ ಸದ್ಗುಣಗಳಿಂದಾಗಿ ಅವನ ಮನಸ್ಸು ಬದಲಾಗುತ್ತದೆ. ಅವನಲ್ಲಿ ತಿಳುವಳಿಕೆಯನ್ನು ಮೂಡಿಸುತ್ತದೆ.

ವೆಂಕಟೇಶನ ಸ್ವಭಾವ 'ಶಂಕರಿ'ಯ ಸ್ವಭಾವಕ್ಕೆ ತದ್ವಿರುದ್ಧವಾದುದು. ಬಾಲ್ಯದಲ್ಲೇ ತಾಯಿಯನ್ನು ಕಳೆದುಕೊಂಡ ವೆಂಕಟೇಶ, ಅಜ್ಜಿಯ ಆರೈಕೆಯಲ್ಲಿ

---

1. ಅದೇ ಪುಟ–173.

ಬೆಳೆಯುತ್ತಾನೆ. ಅವಳ ಕಟ್ಟುನಿಟ್ಟಾದ ಶಿಸ್ತುಗಾರಿಕೆ ಹಾಗೂ ದುರ್ಬೋಧೆಯಿಂದಾಗಿ ಅವನು ದರ್ಪದ ಸ್ವಭಾವದವನಾಗಿ ಬೆಳೆಯುತ್ತಾನೆ.

ತಾನು ವಿದ್ಯೆಕಲಿತು, ವ್ಯಾಪಾರ ಮಾಡಿ ಗಣ್ಯವ್ಯಕ್ತಿಎನಿಸಿಕೊಳ್ಳಬೇಕೆಂಬುದು ಅವನ ಹಂಬಲ. ಊರಿನ ಗಣ್ಯ ಶ್ರೀಮಂತ ಕೋದಂಡರಾಮಯ್ಯನವರ ಚೆಲುವೆಯಾದ ಮಗಳನ್ನು ಮದುವೆಯಾಗಿ, ದರ್ಬಾರಿನ ಜೀವನ ನಡೆಸಬೇಕು ಎಂಬುದು ಅವನ ಆಸೆ. ಆದರೆ ಸಂಪ್ರದಾಯಶೀಲರಾದ ಸುಬ್ಬಯ್ಯನವರು, ಮಗ ತಮ್ಮಂತೆ ಶ್ಯಾನುಭೋಗಿಕೆ ಮಾಡಲಿ ಎಂದು ಬಯಸುತ್ತಾರೆ. ಮಲತಾಯಿ ಗಿರಿಯಮ್ಮನವರಾದರೂ ತಮ್ಮ ಮಗ, ಸೋದರ ಮಾವನ ಮಗಳನ್ನು ಮದುವೆಯಾದರೆ, ತಮ್ಮನ್ನು ಪ್ರೀತಿಯಿಂದ ಸಾಕಿ ಸಲಹಿದ ಸೋದರಮಾವನ ಋಣವನ್ನು ತೀರಿಸಿದಂತಾಗುತ್ತದೆ ಎಂದು ಯೋಚಿಸುತ್ತಾರೆ ಹೀಗಾಗಿ ತನ್ನ ತಂದೆ ವಿದ್ಯೆ ಕಲಿಸದೇ ಇರುವುದಕ್ಕೆ, ದುಡ್ಡು ಕೊಡದೇ ಇರುವುದಕ್ಕೆ ತನ್ನ ಮಲತಾಯಿಯೇ ಕಾರಣ ಎಂದು ಭಾವಿಸುತ್ತಾನೆ. ಚೆಲುವೆಯಲ್ಲದ ಹೆಣ್ಣನ್ನು ತನ್ನ ಕೊರಳಿಗೆ ಕಟ್ಟಲು ಮಲತಾಯಿಯೇ ಕಾರಣ ಎಂಬ ಭಾವನೆ ಅವನಲ್ಲಿ ಬಲವಾಗುತ್ತ ಹೋಗುತ್ತದೆ. ಅವನು ಮೆಚ್ಚಿಕೊಂಡ 'ನೀಲವೇಣಿ' ಅವನ ಕೈತಪ್ಪಿ ಹೋದಾಗ ಅವನಲ್ಲಿ ಪ್ರತೀಕಾರದ ಭಾವನೆ ಬೆಳೆಯುತ್ತದೆ. ಪ್ರಣಯಭಂಗನಾದ ವೆಂಕಟೇಶ ಸಿಡುಕು ಸ್ವಭಾವದವನಾಗಿ ಹಟವಾದಿಯಾಗುತ್ತ ಹೋಗುತ್ತಾನೆ.

ಅವನ ಛಲಕ್ಕೆ ಯಜ್ಞಪಶುವಾದವಳು ಶಂಕರಿ ತಂದೆ–ತಾಯಿಗಳ ಮೇಲಿನ ಸಿಟ್ಟನ್ನು ಶಂಕರಿಯ ಮೇಲೆ ತೀರಿಸಿಕೊಳ್ಳುತ್ತಾನೆ. ಜಲಜೆ (ವೇಶ್ಯೆ) ಹಾಗೂ ನೀಲ ವೇಣಿ ಇಬ್ಬರೂ ಬಿಟ್ಟು ಹೋದಾಗ ಅವನಿಗೆ ತನ್ನ ತಪ್ಪಿನ ಅರಿವಾಗುತ್ತದೆ. ಶಂಕರಿಯ ಸದ್ಗುಣಕ್ಕೆ ತಲೆಬಾಗುತ್ತಾನೆ.

ಶಂಕರಿಯ ಸತಿತ್ವಕ್ಕೆ ಇಲ್ಲಿ ಜಯ ದೊರೆತಿದೆ. 'ಹಳೆಯದನ್ನು ಮರೆತಾಗಲೇ ಹೊಸ ಬಾಳು' ಎಂಬುದು ಅವಳು ಜೀವನದಿಂದ ತಿಳುವಳಿಕೆ ಪಡೆದು, ಗಂಡನಿಗೂ ಅದನ್ನು ಮನಗಾಣಿಸಿ ಕೊಡುತ್ತಾಳೆ. ಶೀರ ಮುಗ್ಧಳಾಗಿದ್ದ ಶಂಕರಿ, ಬದುಕಿನುದ್ದಕ್ಕೂ ಪಡ ಬಾರದ ಬವಣೆಗಳನ್ನುಂಡು ತಿದ್ದಿದ ಮೂರ್ತಿಯಾಗಿದ್ದಾಳೆ. ಅವಳ ಅಂತರಂಗದ ಸೌಂದರ್ಯ ಅರಳಿದೆ ಲೇಖಕಿ ಅವಳ ಮುಗ್ಧತನವನ್ನು ತ್ಯಾಗಮಯ ಜೀವನವನ್ನು ಹಂತ ಹಂತವಾಗಿ ಚಿತ್ರಿಸಿದ್ದಾರೆ. ಸಾಮಾನ್ಯ ವ್ಯಕ್ತಿಗಳಲ್ಲಿರುವ ಅಸಾಮಾನ್ಯತೆಯ ದರ್ಶನ ವನ್ನು ಮಾಡಿಸಿದ್ದಾರೆ. ಜೀವನಾನುಭವದಿಂದಗಟ್ಟಿಗೊಂಡ ಪಾತ್ರ ಶಂಕರಿಯದು.

'ಆತ್ಮಸಖಿ' :

ಕೈಲಾಸ ಪತ್ರಿಕೆಯಲ್ಲಿ ಧಾರವಾಹಿಯಾಗಿ ಬಂದ. ಇಂದಿರಾ ಅವರ 'ಆತ್ಮಸಖಿ' ೧೯೭೦ರಲ್ಲಿ ಪ್ರಕಾಶ ಸಾಹಿತ್ಯದಲ್ಲಿ ಪಥಮ ಮುದ್ರಣವಾಗಿದೆ. ಈ ಕಾದಂಬರಿಯನ್ನು ಲೇಖಕಿ ತಮ್ಮ ಪತಿ ದಿ॥ ಕೃಷ್ಣರಾಯರಿಗೆ ಅರ್ಪಿಸಿದ್ದಾರೆ.

ಇಂದಿರಾ ಅವರ ಅಜ್ಜ, ಅಂದರೆ ತಾಯಿಯ ಸೋದರಮಾವ ಅರಗದ ಅನಂತ ಶರ್ಮರ ಆದರ್ಶ ಜೀವನ ಈ ಕಾದಂಬರಿಯ ವಸ್ತು. ಅಪ್ಪಟ ಗಾಂಧೀವಾದಿಗಳೂ ಹಾಗೂ ರವೀಂದ್ರನಾಥ ಟಾಗೋರರ ಶಿಷ್ಯರೂ ಆಗಿದ್ದ ಅನಂತಶರ್ಮರು, ತಾವು ನಂಬಿದ ತತ್ವಗಳನ್ನು, ಮೌಲ್ಯಗಳನ್ನು ಬದುಕಿನುದ್ದಕ್ಕೂ ಪರಿಪಾಲಿಸಿದವರು. ಅವರ ಬದುಕಿನ ಕೇಂದ್ರವಾಗಿ ಅವರ ಆದರ್ಶದ ಹೆಜ್ಜೆಯಲ್ಲಿ ತನ್ನ ಹೆಜ್ಜೆಯನ್ನಿರಿಸಿ ಅವರ 'ಆತ್ಮಸಖಿ' ಯಾಗಿ ಬಾಳಿದವಳು ಅವರ ಮಡದಿ ಸಾವಿತ್ರಿ,

ಅವೈಚಾರಿಕತೆ, ಸಂಪ್ರದಾಯನಿಷ್ಠೆ, ಅಂಧಶ್ರದ್ಧೆ, ತುಂಬಿದ್ದ ಸಮಾಜದಲ್ಲಿ ಬೆಳೆದ ಅನಂತಶರ್ಮರು. ಎಲ್ಲರಿಗಿಂತ ಭಿನ್ನವಾದ ವ್ಯಕ್ತಿತ್ವ ರೂಪಿಸಿಕೊಂಡವರು. ಅಂದಿನ ಸಂಪ್ರದಾಯಸ್ಥ ಸಮಾಜದ ವಿರೋಧಿಯಾಗಿ ಬಾಳಿದವರು.

"ಅರಗದ ಸುಬ್ಬಣ್ಣ ಹಾಗೂ ಸುಬ್ಬಮ್ಮ ಇವರ ಹನ್ನೊಂದು ಮಕ್ಕಳಲ್ಲಿ ಅನಂತ ಶರ್ಮ ಆರನೆಯವರು"[1] ಅನಂತಶರ್ಮ ಬಾಲ್ಯದಿಂದಲೇ ಭಾವಜೀವಿ, ಹಾಗೂ ಪ್ರಕೃತಿಪ್ರಿಯರು. ಬಾಲ್ಯದಲ್ಲಿ ಅವರು ಕಂಡ ಒಂದು ದುರ್ಘಟನೆ ಅವರನ್ನು ಸಂಪ್ರದಾಯ ವಿರೋಧಿಯನ್ನಾಗಿ ಮಾಡುತ್ತದೆ. ಈ ಶತಮಾನದ ಆರಂಭದ ದಶಕಗಳ ಸಾಮಾಜಿಕ ಜೀವನವನ್ನು ಈ ಕಾದಂಬರಿಯಲ್ಲಿ ಕಾಣುತ್ತೇವೆ. ಗಡಿಯಾರ, ವಾಹನ ಸೌಕರ್ಯ, ಅಂಚೆವ್ಯವಸ್ಥೆ ಇಲ್ಲದ ಕಾಲ ಅದು. ಬಾಲ್ಯವಿವಾಹ ಪದ್ಧತಿ ಜಾರಿಯಲ್ಲಿತ್ತು. ಅವಿಭಕ್ತ ಕುಟುಂಬಗಳಲ್ಲಿ ಅನೇಕ ಸಂಪ್ರದಾಯಗಳನ್ನು ಅತ್ಯಂತ ಕಟ್ಟುನಿಟ್ಟಾಗಿ ಪರಿಪಾಲಿಸಲೇಬೇಕಾಗಿತ್ತು.

ಮೂರನೆಯ ಹೆರಿಗೆ ಅತ್ತೆಯ ಮನೆಯಲ್ಲೇ ನಡೆಯಬೇಕೇಕೆಂಬುದು ಒಂದು ಸಂಪ್ರದಾಯ. ಅದನ್ನು ಕಟ್ಟುನಿಟ್ಟಾಗಿ ಪರಿಪಾಲಿಸಬೇಕಾದುದರಿಂದ, ತಾಟಕಿಯಂತಹ ಅತ್ತೆ, ಅವಿವೇಕಿ ಗಂಡನ ಕೈಯಲ್ಲಿ ನೊಂದ ಅನಂತಶರ್ಮರ ಅಕ್ಕ 'ನಾಗಮ್ಮ', ಅಳುತ್ತಲೇ ತವರಿನಿಂದ ಅತ್ತೆಯಮನೆಗೆ ಬರುತ್ತಾಳೆ. ಅಕ್ಕನ ಊರಿಗೆ ಬಂದ ಬಾಲಕ ಅನಂತನಿಗೆ 'ಚಿಬ್ಬಲುಗುಡ್ಡೆ'ಯ ಹೊಳೆ, ಅಲ್ಲಿನ ಮೀನುಗಳನ್ನು ನೋಡುವುದೆಂದರೆ ಬಲು ಪ್ರೀತಿ, ಅವನು ಮೀನುಗಳಿಗೆ 'ಅಕ್ಕಿ' ಹಾಕಿದಾಗ 'ನಾಗಮ್ಮ'ನ ಅತ್ತೆ–

"ದಿನ ಬೆಳಗಾದರೆ ಪಾವು ಸೇರು ಅಕ್ಕೀನ ಹೊಳೆಗೆ ಸುರಿಯೂಕೆ ಇವಳ ಅಪ್ಪ ನಮಗೇನು ಪತ್ತೆಕರೆ ಗದ್ದೇನ ಜಹಗೀರಿ ಬಿಟ್ಟಿದಾನ?"[2] ಎಂದು ಆರ್ಭಟಿಸಿ ಕೂಗಾಡಿ ಮಗನಿಗೆ ಚಾಡಿ ಹೇಳುತ್ತಾಳೆ. ತಾಯಿಯ ಮಾತನ್ನು ಪಾಲಿಸಲು ಪಣತೊಟ್ಟ ನಾಗಮ್ಮನ ಗಂಡ, ದಿನ ತುಂಬಿದ ಬಸುರಿಯನ್ನು ದನ ಬಡಿದಂತೆ ಬಡಿದಾಗ, ಆ

---

1. ಅವರು ಬಾಳಿ ಬದುಕಿದ ಕಾಲ 1889–1962. ದೊಡ್ಡಬಳ್ಳಾಪುರದಲ್ಲಿ ಈಗಲೂ 'ಎ. ಅನಂತಾಚಾರ್ಯ'ರ ಸಮಾಧಿ ಇದೆಯಂತೆ. (ಇಂದಿರಾ ಅವರ ಹೇಳಿಕೆ.)
2. ಎಂ. ಕೆ. ಇಂದಿರಾ, 'ಆತ್ಮಸಖಿ'; ಪುಟ–14.

ನೋವಿನಿಂದ ನರಳಿ ಮರುದಿನವೇ ಹೆಣ್ಣುಮಗುವನ್ನು ಹಡೆಯುತ್ತಾಳೆ! ಶ್ರಾವಣ ಮಾಸದ ದಿನಗಳು, ಮಲೆನಾಡಿನಲ್ಲಿ ಧಾರಾಕಾರವಾಗಿ ಸುರಿವ ಮಳೆ; ಹೀಗಿದ್ದಾಗ ನಾಗಮ್ಮನ ಅತ್ತೆ ಪುಟ್ಟಮ್ಮ 'ಪತ್ರೊಡೆ' ಎಂಬ ತಿಂಡಿಯನ್ನು ಮಾಡಿ ಅದು ಬಾಣಂತಿಗೆ ನಿಷಿದ್ಧವೆಂದು ಮುಚ್ಚಿಡುತ್ತಾಳೆ. ಮನೆಯಲ್ಲಿ ಇಲಿ, ಹೆಗ್ಗಣಗಳು, ಇದ್ದ 'ಪತ್ರೊಡೆ' ಯನ್ನು ತಿಂದು ಹಾಕುತ್ತವೆ. ಸೊಸೆ ಹಾಗೂ ಅನಂತ ಇಬ್ಬರೂ ಪತ್ರೊಡೆ ಕದ್ದು ತಿಂದಿದ್ದಾರೆಂದು ಕೂಗಾಡಿದಾಗ, ನಾಗಮ್ಮನ ಗಂಡ ಬಾಣಂತಿಯನ್ನು ಮನಬಂದಂತೆ ಹೊಡೆಯುತ್ತಾನೆ. ನಾಗಮ್ಮ ಪ್ರಮಾಣಮಾಡಿ ಹೇಳಿದರೂ ನಂಬುವದಿಲ್ಲ. ಕಾಕ ತಾಳೀಯವೆಂಬಂತೆ ಅದೇ ದಿನ ಮೂರು ತಿಂಗಳ ಶಿಶು ಉಸಿರುಕಟ್ಟಿ ಅಳಲು ಪ್ರಾರಂಭಿಸುತ್ತದೆ. 'ಪತ್ರೊಡೆ'ಯನ್ನು ಕದ್ದು ತಿಂದದ್ದಕ್ಕೆ ಮಗು ಹೊಟ್ಟೆ ನೋವಿನಿಂದ ಅಳಲು ಪ್ರಾರಂಭಿಸಿದೆಯೆಂದು ಪುಟ್ಟಮ್ಮ ಮಗನಿಗೆ ದೂರುತ್ತಾಳೆ.

ಅವಿವೇಕಿ ಗಂಡ, ಹೆಂಡತಿಯ ಜುಟ್ಟು ಹಿಡಿದು ಗುದ್ದಿದಾಗ, ಕೈಯಲ್ಲಿದ್ದ ಮಗು ಬಿದ್ದು ಉಸಿರುಕಟ್ಟಿ ಸಾಯುತ್ತದೆ! ಮರುದಿನ ಬೆಳಗಿನ ವೇಳೆಗೆ ನಾಗಮ್ಮನ ಜೀವವೇ ಹೋಗಿರುತ್ತದೆ.

ಅನಂತನ ಮನಸ್ಸಿನಲ್ಲಿ ಈ ದುರ್ಘಟನೆ ತೀವ್ರವಾದ ಪರಿಣಾಮವನ್ನುಂಟು ಮಾಡುತ್ತದೆ. ಗಂಡನೆನಿಸಿಕೊಂಡವನು ತನ್ನ ಹೆಂಡತಿಯನ್ನು ಶೋಷಿಸುವುದು, ಹೆಣ್ಣೇ ಹೆಣ್ಣನ್ನು ಶೋಷಣೆ ಮಾಡುವ ರೀತಿಗೆ ಇಲ್ಲಿ ಲೇಖಕಿ ಸ್ಪಂದಿಸಿದ್ದಾರೆ.

ಅನಂತನ ತಂದೆ, ತಾಯಿ ಮಕ್ಕಳೊಂದಿಗೆ 'ಆರಗ'ವನ್ನು ಬಿಟ್ಟು 'ಎಡೇಹಳ್ಳಿ'ಗೆ ಬಂದು ನೆಲೆಸುತ್ತಾರೆ. ಅನಂತನ ಪ್ರಾಥಮಿಕ ಶಿಕ್ಷಣ 'ಎಡೇಹಳ್ಳಿ'ಯಲ್ಲಿ ನಡೆಯುತ್ತದೆ. ತುಂಬಿದ ಕುಟುಂಬದಲ್ಲಿ ಅನಂತನ ಸ್ವಭಾವವನ್ನು ಯಾರೂ ಗಮನಿಸುವುದಿಲ್ಲ. ಹೈಸ್ಕೂಲಿನ ವಿದ್ಯಾಭ್ಯಾಸ ಮುಗಿಸಿ ಮೈಸೂರಿನಲ್ಲಿ ಕಾಲೇಜು ಸೇರುತ್ತಾನೆ. ಬಾಲ್ಯದಲ್ಲಿ ಸುಬ್ಬಾಭಟ್ಟನಿಂದ ಕೇಳಿದ ರಾಮಾಯಣ, 'ಮಹಾಭಾರತ' ಆತನ ಮನಸ್ಸಿನ ಮೇಲೆ ಪರಿಣಾಮ ಬೀರುತ್ತವೆ. ಅದೇ ವೇಳೆಗೆ ರಾಜಕೀಯದಲ್ಲಿ ಸ್ವಾತಂತ್ರ್ಯ ಚಳುವಳಿಯೂ ಪ್ರಾರಂಭವಾಗುತ್ತದೆ. ಗಾಂಧೀಜಿಯವರಿಂದ ಪ್ರಭಾವಿತನಾಗಿ ವಿದೇಶೀ ವಸ್ತ್ರವನ್ನು ತೊರೆದು ಖಾದೀ ಧಾರಿಯಾಗುತ್ತಾನೆ. ಸ್ವದೇಶ ಪ್ರೇಮಿಯಾಗಿ, ಹರಿಜನೋದ್ಧಾರದ ಕನಸು ಕಾಣುತ್ತಾನೇ ಒಂದುವರ್ಷ ರವಿಂದ್ರನಾಥ ಟ್ಯಾಗೋರರ ಸಾನಿಧ್ಯದಲ್ಲಿದ್ದು ಬಂದ 'ಅನಂತ' ಅನಂತಶರ್ಮ ಆಗಿ ಅಪ್ಪಟ ಚಿನ್ನದಂತಾಗಿದ್ದಾನೆ.

ಅನಂತಶರ್ಮ ಮದುವೆಗೆ ಮೊದಲು ಒಪ್ಪದಿದ್ದರೂ ತಾಯಿಯ ಒತ್ತಾಯಕ್ಕೆ ಮಣಿಯಲೇಬೇಕಾಗುತ್ತದೆ. ಮದುವೆಗೆ ಮೊದಲು ತನ್ನದೇ ಆದ ಷರತ್ತುಗಳನ್ನು ಮುಂದಿಡುತ್ತಾನೆ. ಹುಡುಗಿಯನ್ನು ನೋಡಲು ಹೋದಾಗ ತಾನೇ ನೇರವಾಗಿ ಅವಳನ್ನು ಮಾತನಾಡಿಸಿ ತನ್ನ ಆದರ್ಶನಿಯಮಗಳನ್ನು ಅವಳು ಪಾಲಿಸಲು ಸಿದ್ಧಳಾಗಿರುವಳೆಂಬುದನ್ನು ತಿಳಿದುಕೊಳ್ಳುತ್ತಾನೆ. ಮದುವೆಯಾದ ಆರನೆಯ ದಿನ ಅಂದಿನ

ಸಂಪ್ರದಾಯವನ್ನು ಮುರಿದು ಇನ್ನೂ ಪ್ರಾಪ್ತವಯಸ್ಕಳಾಗಿರದ ಸಾವಿತ್ರಿಯನ್ನು ತನ್ನೊಡನೆ ಊರಿಗೆ ಕರೆದೊಯ್ಯುತ್ತಾನೆ. ತನ್ನ ಆದರ್ಶ ಜೀವನದ ಪಾಠಗಳನ್ನು ಪ್ರಾರಂಭಿಸುತ್ತಾನೆ. ಸಂಸಾರಿಯಾದ ನಂತರ ಹೆಂಡತಿಯನ್ನು ತಮ್ಮ ಆದರ್ಶದ ದಾರಿಯಲ್ಲೇ ಎಳೆದೊಯ್ಯುತ್ತಾರೆ. ಅವಳ ಕೈಬಳೆ, ಕಾಲುಂಗುರ, ಮೂಗುತಿ ಎಲ್ಲವನ್ನೂ ತೆಗೆದುಹಾಕಿ—

"ಸಾವಿತ್ರು ನಮ್ಮ ಸಮಾಜ ಬಹಳ ಕಠೋರವಾದದ್ದು. ಈಗೆಲ್ಲ ನಿನಗೆ ರಾಶಿ ರಾಶಿ ಅರಿಶಿನ ಕುಂಕುಮ ಬಳಿತಾರೆ ; ಹೂವು, ಒಡವೆ, ವಸ್ತ್ರ ಅಲಂಕಾರ ಮಾಡ್ತಾರೆ. ನಾನೇ ಮೊದಲು ಅಕಸ್ಮಾತ್ ಸಾಯಬಹುದು. ಆಗ ಒಟ್ಟಿಗೇ ಎಲ್ಲವನ್ನೂ ತೆಗೆದು ವಿಧವೇ ವೇಷ ಹಾಕಿಕೂರಸ್ತಾರೆ"[1] ಎನ್ನುವದು ಅವರ ಸಂಪ್ರದಾಯ ವಿರೋಧವನ್ನೇ ತೋರಿಸುತ್ತದೆ. ತಾವೂ ಸಹ ಜನಿವಾರವನ್ನು ತೆಗೆದುಹಾಕಿದ್ದು ಅಂದಿನ ಸಮಾಜದಲ್ಲಿ ಇಟ್ಟ ಒಂದು ಕ್ರಾಂತಿಕಾರಕ ದಿಟ್ಟಹೆಜ್ಜೆ.

ಮುರುಕು ಮನೆ, ಈಚಲು ಚಾಪೆ, ಮಣ್ಣಿನ ಮಡಕೆ ಇವು ಅನಂತಶರ್ಮ ಹಾಗೂ ಸಾವಿತ್ರಿಯ ಸಂಸಾರದ ವಸ್ತುಗಳು. ಹೊಳೆಯ ಸ್ನಾನ, ಸೂರ್ಯನಮಸ್ಕಾರ, ವ್ಯಾಯಾಮ ಗೀತಾಪಠಣ—ಇವು ಆ ದಂಪತಿಗಳ ಬೆಳಗಿನ ದಿನಚರಿ. ಫಲಾಹಾರ, ಶಾಲೆಯಲ್ಲಿ ಪಾಠ ಹೇಳುವುದು, ಸಾಯಂಕಾಲ ದೂರ ದೂರದವರೆಗೆ ಅಲೆದಾಡು ವುದು, ಮರುದಿನದ ಆಹಾರಕ್ಕಾಗಿ ಈದಿನ ಚಿಂತಿಸಬೇಕಾಗಿಲ್ಲವೆಂಬುದು ಅನಂತಶರ್ಮರ ನಿಲುವು.

"ನೋಡು, ಭಗವಂತ ನಾವು ಹುಟ್ಟುವಾಗಲೇ ನಮ್ಮ ಪಾಲಿನ ಅನ್ನ ನಮಗೆ ಕೊಟ್ಟೇ ಇರುತ್ತಾನೆ. ನಾವು ಎಲ್ಲಿದ್ದರೂ ಹೇಗಿದ್ದರೂ ನಮಗೆ ಲಭ್ಯವಿದ್ದರೆ ಆ ಹೊತ್ತಿಗೆ ಬಂದು ಒದಗುತ್ತದೆ" ಎನ್ನುವ ನಂಬಿಕೆ ಅವರದು.

ಪಶು-ಪಕ್ಷಿ ನಾಯಿ-ದನಕರು ಎಲ್ಲ ಜೀವಿಗಳೂ ಒಂದೇ ಎಂದು ನಂಬಿದ ಅವರು ಬೀದಿಯಲ್ಲಿ ಓಡಾಡುವ ನಾಯಿ ದನ-ಕರುಗಳೊಡನೆ ಆನಂದದಿಂದ ಸಹಪಂಕ್ತಿ ಭೋಜನ ಮಾಡುತ್ತಾರೆ. ಸೋದರ ಲಕ್ಷ್ಮಣನ (ಹೊಯ್ಸಳ) ವಿದ್ಯಾರ್ಜನೆಗೆ, ಬಡವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಕೊಟ್ಟು ಉಳಿದ ಹಣ ಒಬ್ಬ ವಿದ್ಯಾರ್ಥಿಯ ಹತ್ತಿರವಿರುತ್ತಿತ್ತು. ಹಣ್ಣು-ಹಂಪಲಗಳು ಸಿಗದೇ ಇದ್ದ ದಿನ ಅವರು ಮೂರು ದಿನ ತುಂಗಾನದಿಯ ನೀರು ಕುಡಿದೇ ತೃಪ್ತಿಯಾಗುತ್ತಿದ್ದುದು ಅವರ ಸಹನೆ, ಹಾಗೂ ಕಠೋರ ನಿಷ್ಠೆಯ ಪರಮಾವಧಿ.

ತೀರ್ಥಹಳ್ಳಿಗೆ 'ಇನ್-ಫ್ಲೂಯೆನಜಾ' ಕಾಯಿಲೆ, ಹರಡಿದಾಗ ಊರ ಜನರ ಸೇವೆ ಮಾಡುವರು. 'ತರಿಕೆರೆ'ಯಲ್ಲಿ 'ಪ್ಲೇಗು' ಬಂದಾಗ, ಹರಿಜನಕೇರಿಯಲ್ಲಿ

1. ಅದೇ; ಪುಟ–47.

ರೋಗಿಗಳ ಸೇವೆ ಮಾಡುವದು, ಗಾಂಧೀ ಚಳುವಳಿಯಲ್ಲಿ ನುಗ್ಗಿ ಜೇಲುವಾಸ ಅನುಭವಿಸುವದು—ಇವೆಲ್ಲ ಅವರು ತಮ್ಮ ಜೀವಿತದಲ್ಲಿ ನಡೆಸಿದ ಪರೋಪಕಾರಗಳು.

ಗಾಂಧೀಜಿಯುಪರ ತತ್ವಗಳನ್ನು ಬೋಧಿಸಲು ಹರಿಜನರಿಗೆ ಸಂಘಗಳನ್ನು ಕಟ್ಟಿ ಭಗವದ್ಗೀತೆ, ನೂಲುವದು, ಪಾಠಹೇಳುವದು–ಇವೆಲ್ಲ ಅವರು ಜೀವನದಲ್ಲಿ ಆಚರಣೆಗೆ ತಂದ ಆದರ್ಶಗಳು. ಎಲ್ಲ ಪ್ರಾಣಿಗಳನ್ನೂ ದಯೆಯಿಂದ, ಪ್ರೀತಿಯಿಂದ ನೋಡುವ ಅನಂತಶರ್ಮರು ಒಮ್ಮೊಮ್ಮೆ ಹೆಂಡತಿಯ ಬಗೆಗೆ ಅತ್ಯಂತ ಕಠೋರವಾಗಿ ನಡೆದುಕೊಳ್ಳುತ್ತಾರೆ.

ಒಮ್ಮೆ ಶಿವಮೊಗ್ಗೆಯಿಂದ ತೀರ್ಥಹಳ್ಳಿಯವರೆಗೆ ಕಾಲುನಡಿಗೆಯ ದೀರ್ಘ ಪ್ರಯಾಣ ಕೈಕೊಂಡಾಗ, ಟಪಾಲು ಗಾಡಿಯವನೊಬ್ಬ ಗಾಡಿ ನಿಲ್ಲಿಸಿ, ಹತ್ತಲೂ ಪ್ರಾರ್ಥಿಸಿದಾಗ, ಬಳಲಿದ ಸಾವಿತ್ರಿ ಗಾಡಿಯಲ್ಲಿ ಪ್ರಯಾಣ ಮಾಡುವ ಬಯಕೆಯನ್ನು ವ್ಯಕ್ತಪಡಿಸಿದಾಗ, ಅನಂತಶರ್ಮರು ನಿರ್ದಾಕ್ಷಿಣ್ಯವಾಗಿ ನಿರಾಕರಿಸುತ್ತಾರೆ.

ಅವರ ಸೋದರಸೊಸೆ, 'ಅಮ್ಮಯ್ಯ' ಒಮ್ಮೆ ಮಾವಿನ ಮಿಡಿ ಹಾಕಿದ ಅನ್ನವನ್ನು ತಿನ್ನುವಂತೆ ಸಾವಿತ್ರಿಗೆ ಒತ್ತಾಯಿಸುತ್ತಾಳೆ. ಗಂಡನನ್ನು ಕದ್ದು ತಿನ್ನುವುದು ಸಾವಿತ್ರಿಗೆ ಇಷ್ಟವಿಲ್ಲದಿದ್ದರೂ ಬಾಯಿಗೆ ತುತ್ತುಹಾಕಿಕೊಳ್ಳುತ್ತಾಳೆ. ಅದನ್ನು ಕಂಡ ಅನಂತಶರ್ಮರು ಕಠೋರವಾಗಿ ಅದನ್ನು ವಿರೋಧಿಸುತ್ತಾರೆ. ಅಲ್ಲದೆ ಮೂರು ದಿನ ಉಪವಾಸದ ಶಿಕ್ಷೆ ವಿಧಿಸುತ್ತಾರೆ.

ಈ ರೀತಿ ಅವಳೊಡನೆ ಕಠೋರತೆಯಿಂದ ವರ್ತಿಸಿದರೂ ಅವಳು ತೀರಿಕೊಂಡಾಗ ಅವರ ದುಃಖವೆಲ್ಲ ನುಗ್ಗಿ ಬರುತ್ತದೆ. ಅನೇಕರು ಮರುಮದುವೆಗೆ ಒತ್ತಾಯಿಸಿದಾಗ ಸಾವಿತ್ರಿಯಂತಹ ಹೆಣ್ಣು ಇನ್ನು ಸಿಗುವದು ಸಾಧ್ಯವಿಲ್ಲವೆಂದು ಅವರಿಗೆ ಸಮಾಧಾನ ಹೇಳಿ ಕಳುಹಿಸುತ್ತಾರೆ.

೧೯೫೨ರಿಂದ ಹಲವು ವರ್ಷ ದೊಡ್ಡ ಬಳ್ಳಾಪುರದಲ್ಲಿ ನೆಲೆಸುತ್ತಾರೆ. ಎಲ್ಲರಿಂದ ದೂರವಾಗಿ ಹರಿಜನಸೇವೆ, ಭಗವದ್ಗೀತಾ ಪಠಣ, ಭಜನೆ ಇವುಗಳಲ್ಲೇ ಬದುಕನ್ನು ಕಳೆಯುತ್ತಾರೆ. ಒಮ್ಮೆ ಚಿಕ್ಕಮಗಳೂರಿನ ನೆಂಟರ ಮನೆಯಲ್ಲಿ ಇಳಿದುಕೊಂಡಾಗ ಮೂರ್ಛೆರೋಗ ಬಂದು ಅವರ ಎಡಗೈ ಒಲೆಯೊಳಗೆ ಬಿದ್ದು ಬೆಂದು ಹೋಗುತ್ತದೆ. ಸ್ವದೇಶೀವ್ರತ ತೊಟ್ಟ ಶರ್ಮರು, ಕೆಮ್ಮಣ್ಣಿನ ಲೇಪ, ಸೊಪ್ಪಿನ ರಸವನ್ನು ಲೇಪಿಸಿ ಚಿಕಿತ್ಸೆ ಪಡೆಯುತ್ತಾರೆ. ಆದರೆ ಅವರ ಮನಸ್ಸಿನಾಳದಲ್ಲಿ ಒಂದು ನೋವು ಸ್ಪಷ್ಟವಾಗಿ ಕಾಣಿಸಿಕೊಳ್ಳುತ್ತದೆ.

ಸಾವಿತ್ರಿಗೆ ಲೌಕಿಕ ಸುಖ ಕೊಡದೇ ಅವಳನ್ನು ನೋಯಿಸಿದ್ದಕ್ಕೆ ಈ ಘೋರ ಶಿಕ್ಷೆ ಎಂದುಕೊಳ್ಳುತ್ತಾರೆ. ಅವರ ಮಾನಸಿಕ ಪರಿವರ್ತನೆ, ಪಾತ್ರದ ಬೆಳವಣಿಗೆಯಲ್ಲಿ ಜೀವಂತಿಕೆಯನ್ನು ಇಲ್ಲಿ ಕಾಣುತ್ತೇವೆ.

ಸಾವಿತ್ರಿ ತನ್ನ ಪತಿಯ ಆದರ್ಶಕ್ಕಾಗಿ ತನ್ನ ಬದುಕನ್ನು ಕಳೆದ ಸಾಧ್ವಿ. ಅಂದಿನ ಸಮಾಜದಲ್ಲಿ ಎಲ್ಲ ಸ್ತ್ರೀಯರಿಗಿಂತ ಬೇರೆಯಾದ ಬದುಕನ್ನು ಕಳೆಯುತ್ತಾಳೆ. ಸಂಪ್ರದಾಯಸ್ಥ ಸಮಾಜದಲ್ಲಿ ಅರಿಷಿನ ಕುಂಕುಮ, ಮಾಂಗಲ್ಯವಿಲ್ಲದೇ ವಿಧವೆವೇಷದಲ್ಲಿರುವದು, ಉಪವಾಸ, ಗುಡಿಸಲಿನ ವಾಸ, ಹರಿಜನರ ಸೇವೆ, ಪತಿಯ ಸಾನಿಧ್ಯದಲ್ಲಿ ಬ್ರಹ್ಮಚರ್ಯ, ಇವೆಲ್ಲ ಅವಳ ಸಹನೆ, ತ್ಯಾಗ, ಪರಿಶುದ್ಧ ಜೀವನವನ್ನು ಸಾರುತ್ತವೆ. ಭಗವದ್ಗೀತೆ, ರಾಮಾಯಣ, ಮಹಾಭಾರತ ಇವುಗಳಲ್ಲದೆ ಆದರ್ಶ ಪತಿಯ ಸಾನ್ನಿಧ್ಯ ಶಾರದಾಮಣಿದೇವಿ, ರಾಮಕೃಷ್ಣ ಪರಮಹಂಸ ಇವರೆಲ್ಲರ ಜೀವನಚರಿತ್ರೆಗಳು ಅವಳ ಮನದಲ್ಲಿ ಸಂಸ್ಕಾರವನ್ನುಂಟುಮಾಡಿವೆ. ಅವರ ವಿಚಿತ್ರ ಬದುಕಿನ ರೀತಿಯನ್ನು, ಧ್ಯಾನ-ಮೌನಗಳನ್ನು ಕಂಡವರು ಅನೇಕರು ಮಾಟ-ಮಂತ್ರ ಕಲಿತಿರುವಳೆಂದು ಭಾವಿಸುತ್ತಾರೆ.

ಅನಂತಶರ್ಮರ ಭಾವ ಕೃಷ್ಣಪ್ಪನವರು ಅವರಲ್ಲಿಗೆ ಬಂದಾಗ ರಾತ್ರಿ ಗುಡಿಸಲಿನಲ್ಲಿ ಕೇವಲ ಮಡಕೆ, ಕುಡಿಕೆಗಳನ್ನು ಕಂಡು ನಸುಕಿನಲ್ಲಿ ಏಳುತ್ತಿದ್ದಂತೆ ದೊಡ್ಡ ಹಂಡೆಯಲ್ಲಿ ನೀರು ಕಾಯುತ್ತಿರುವದನ್ನು ಸಾವಿತ್ರಿ ಬಗೆ ಬಗೆಯ ಭಕ್ಷ್ಯಗಳನ್ನು ತಯಾರಿಸುವದನ್ನು ನೋಡುತ್ತಾರೆ.

ಮತ್ತೊಮ್ಮೆ ಅಪರೂಪದ ಅತಿಥಿಗಳು ಬಂದಾಗ ಮನೆಯಲ್ಲಿ ಬೆಲ್ಲ, ಬೇಲದ ಹಣ್ಣು ಏಲಕ್ಕಿ ಯಾವುದೂ ಇರುವದಿಲ್ಲ. ಆದರೂ ಅವಳು ಧ್ಯಾನಸ್ಥಳಾಗಿ ಕೆಲವೇ ನಿಮಿಷಗಳಲ್ಲಿ ಪಾನಕವನ್ನು ತಯಾರಿಸಿ ಅತಿಥಿ ಸತ್ಕಾರ ಮಾಡುತ್ತಾಳೆ.*

ತರಿಕೆರೆಯಲ್ಲಿ ಪ್ಲೇಗು ಬಂದಾಗ ತುಂಬು ಗರ್ಭಿಣಿಯಾಗಿದ್ದರೂ 'ದೀನದಲಿತರ ಸೇವೆಯೇ ಪರಮಾತ್ಮನ ಸೇವೆ' ಎಂಬುದನ್ನು ನಂಬಿದ ಸಾವಿತ್ರಿ, ಹಗಲಿರುಳು ರೋಗಿಗಳ ಸೇವೆಯನ್ನು ಮಾಡುತ್ತಾಳೆ. ಇದು, ಅವಳ ಸಹನೆ, ಹಾಗೂ ಪರೋಪಕಾರದ ಒಂದು ಪರಮಾವಧಿ. 'ಪ್ಲೇಗು' ರೋಗಿಗಳ ಸೇವೆ ಮಾಡಿದ ಕೆಲವೇ ದಿನಗಳಲ್ಲಿ, ಅದೇ ರೋಗಕ್ಕೆ ತುತ್ತಾಗಿ ತಾಯ್ತನದಿಂದ ವಂಚಿತಳಾಗಿ ಕಣ್ಮುಚ್ಚುತ್ತಾಳೆ.

ಪತಿಯ ಆದರ್ಶಕ್ಕಾಗಿ ಅವಳು ಇಷ್ಟೆಲ್ಲ ತ್ಯಾಗ ಮಾಡಿದರೂ ಅವಳ ಮಾನಸಿಕ ತುಮುಲ ಆಗಾಗ ಹೊರಬಂದಿದೆ. "ಅನಂತ, ನೀನು ಏನು ಅಂದುಕೋತಿಯೋ ಏನೋ, ನಾವು ಮನುಷ್ಯರಾಗಿ ಹುಟ್ಟೋದಕ್ಕಿಂತ ಹೀಗೆ ಯಾವುದದಾದರೂ ಪಶುವೋ ಪಕ್ಷಿಯೋ ಆಗಿ ಹುಟ್ಟಿದ್ದರೆ ಚೆನ್ನಾಗಿತ್ತು; ಅಲ್ಲವೇ? ಮನುಷ್ಯರ ಜಂಜಡ

---

* ಈ ಸಂದರ್ಭದಲ್ಲಿ ಪಾನಕದ ರಹಸ್ಯ ಓದುಗರಿಗೆ ತಿಳಿಯುವುದಿಲ್ಲ. ನೋಡಿ ಹೆಚ್ಚಿನ ವಿವರಣೆಗಾಗಿ 'ಆತ್ಮಸಖಿ' ಪುಟ 70–71. ಪಾನಕದ ರಹಸ್ಯ ರಹಸ್ಯವಾಗಿಯೇ ಉಳಿದಿದೆ ಎಂದು ಲೇಖಕಿ ನನಗೆ ತಿಳಿಸಿದ್ದಾರೆ.

ಒಂದೂ ಇವೆಲ್ಲಕ್ಕಿಲ್ಲ. ಮದುವೆ ಮುಂಜಿ ತಾಪತ್ರಯವಿಲ್ಲ"[1] ಎನ್ನುವ ಮಾತು ಸಂಕ್ಷೇಪವಾಗಿ ಅವಳ ವ್ಯಥೆಯನ್ನು ತೋರಿಸುತ್ತದೆ. ಲೇಖಕಿಯೇ ಹೇಳಿದಂತೆ–

"ಅನಂತಶರ್ಮರಿಗಿಂತ ಇಲ್ಲಿ ಸಾವಿತ್ರಿಯ ಮೌಲ್ಯವೇ ಹೆಚ್ಚು" ಪತಿಯ ಆದರ್ಶಕ್ಕಾಗಿ ತನ್ನ ಸ್ವಂತದ ಸುಖವನ್ನು ಕಳೆಯುತ್ತಾಳೆ. ಅವಳ ಮಾನ ಪ್ರೇಮ, ಸಹನೆ, ಇವು ಓದುಗರ ಗಮನ ಸೆಳೆಯುತ್ತ. ಕೆಲವು ವರ್ಷಗಳ ಹಿಂದೆ ಮಂತ್ರಿಗಳಾಗಿದ್ದ ದಿ॥ ಟಿ. ಸಿದ್ದಲಿಂಗಯ್ಯನವರು, ಹೆಚ್. ಸಿದ್ದಯ್ಯನವರು, ಅನಂತಶರ್ಮರ ಶಿಷ್ಯಂದಿರು 'ಬನಶಂಕರಿ' ಇಂದಿರಾ ಅವರ ತಾಯಿ, ಹಾಗೂ ಫಣಿಯಮ್ಮ ಅನಂತಶರ್ಮರ ಅಕ್ಕ, ಇವರೆಲ್ಲ ಇಲ್ಲಿ ಉಲ್ಲೇಖಿತರಾಗಿದ್ದಾರೆ. ತೀರ್ಥಹಳ್ಳಿಯ ಹೊಳೆ, ರಾಮಮಂಟಪ, 'ಚಿಬ್ಬಲುಗುಡ್ಡೆ'ಯ ಹೊಳೆ, ಇವೆಲ್ಲ ಅನಂತಶರ್ಮರ ಭಾವುಕತೆಗೆ ಇಂಬುಕೊಡುತ್ತವೆ.

ಕಾದಂಬರಿಯಲ್ಲಿ ಅನಂತಶರ್ಮರ ಸೋದರಸೊಸೆ ಅಮ್ಮಯ್ಯನ ಪಾತ್ರ ಚಿತ್ರಣ ಸ್ವಾಭಾವಿಕವಾಗಿ ಮೂಡಿಬಂದಿದೆ. ಅವಳು ವಾಸ್ತವವಾದಿ ಅವಳಿಗೆ ಸಾವಿತ್ರಿಯ ಬಗೆಗೆ ಕನಿಕರವಿದೆ. ಉಂಡುಟ್ಟು ಎಲ್ಲರಂತೆ ಸುಖವಾಗಿ ಬಾಳುವದೇ ಜೀವನ ಎಂದು ತಿಳಿದ ಆಕೆ ಸಂಸಾರದ ಸುಖಭೋಗಗಳಿಂದ ದೂರವಾದ ತ್ಯಾಗಜೀವಿ ಸಾವಿತ್ರಿಯನ್ನು ಅನುಕಂಪದಿಂದ ನೋಡುತ್ತಾಳೆ. ಸಾವಿತ್ರಿಯನ್ನು ಸನ್ಯಾಸಿಯಂತೆ ಬಾಳಿಸಿದ ಅನಂತಶರ್ಮರ ಬಗೆಗೆ ದುಡುಕಿ ಮಾತಾಡಿದರೂ ಪಶ್ಚಾತ್ತಾಪ ಪಡುತ್ತಾಳೆ. ಅವಳ ವರ್ತನೆಯಲ್ಲಿ ಸಹಜತೆ ಇದೆ.

'ನಾಗಮ್ಮ' ಓದುಗರ ಸಹಾನುಭೂತಿ ಗಳಿಸುತ್ತಾಳೆ. ಅವಳ ಅತ್ತೆ 'ಪುಟ್ಟಮ್ಮ' ಹಾಗೂ ಅವಳ ಗಂಡ ಸಮಾಜದ ಅಜ್ಞಾನವನ್ನು ಪ್ರತಿನಿಧಿಸುತ್ತಾರೆ. 'ಹಿರೇತೋಟ'ದ 'ವಾಗ್ದೇವಮ್ಮ' ಕೆಲವೇ ಕ್ಷಣ ಕಾಣಿಸಿಕೊಂಡರೂ ಆತ್ಮೀಯಳಾಗುವ ಭಾವ, ಅವಳ ಜೀವನ ಶ್ರದ್ಧೆ, ಚಟುವಟಿಕೆಗಳಿಂದ ಓದುಗರ ಗಮನ ಸೆಳೆಯುತ್ತಾಳೆ.

ಅಪ್ರತ್ಯಕ್ಷವಾಗಿ ಅಂದಿನ ಸಮಾಜದಿಂದ ಬಹಿಷ್ಕೃತರಾಗಿದ್ದರೂ, ತಮ್ಮ ಧ್ಯೇಯಾದರ್ಶಗಳಿಗೆ ಜೀವದುದ್ದಕ್ಕೂ ಹೋರಾಡಿದ ಅನಂತಶರ್ಮರ ವೈಶಿಷ್ಟ್ಯಯುತವಾದ ಬದುಕನ್ನು ಇಲ್ಲಿ ಲೇಖಕಿ ಹಂತಹಂತವಾಗಿ ಚಿತ್ರಿಸಿದ್ದಾರೆ, 'ಎಲೆಮರೆಯ ಫಲದಂತೆ' ದೇಶಕ್ಕಾಗಿ ಆದರ್ಶ ಬದುಕನ್ನು ಬಾಳಿದ ಅನಂತಶರ್ಮ ಹಾಗೂ ಸಾವಿತ್ರಿಯ ಜೀವನ ಓದುಗರಲ್ಲಿ ಗೌರವ ಮೂಡಿಸುತ್ತದೆ. ಓದುಗರ ಮೇಲೆ ಪರಿಣಾಮ ಬೀರಿ, ಇಂದಿನ ಸ್ಥಿತಿಯ ಬಗೆಗೆ ಚಿಂತನೆ ಮೂಡಿಸುತ್ತದೆ. ನಿಜಕ್ಕೂ ಇದು ಶ್ರೇಷ್ಠ ಕಥಾವಸ್ತುವನ್ನೊಳಗೊಂಡ ಉತ್ತಮ ಕಾದಂಬರಿ. ವೈಚಾರಿಕತೆ, ಅರ್ಥಹೀನ ಸಂಪ್ರದಾಯದ ವಿರೋಧ, ಸತ್ಯಪ್ರಿಯತೆ, ಮಾನವಪ್ರೇಮ, ತ್ಯಾಗ, ಸಹನೆ, ಸಂಯಮ, ಸ್ವದೇಶಾಭಿಮಾನ, ಹೀಗೆ ಅನಂತಶರ್ಮರ ಆದರ್ಶದ ಬದುಕು ಇಲ್ಲಿ ನೈಜವಾಗಿ ನಿರೂಪಿತವಾಗಿದೆ.

---

1. ಎಂ. ಕೆ. ಇಂದಿರಾ 'ಆತ್ಮಸಖಿ' ಪುಟ–88.

'ತಗ್ಗಿನಮನೆ ಸೀತೆ' :

೧೯೬೮ರಲ್ಲಿ 'ವನಿತಾ' ಮಾಸ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಬಂದ 'ತಗ್ಗಿನಮನೆ ಸೀತೆ' ೧೯೭೪ರಲ್ಲಿ ಬೆಂಗಳೂರಿನ ಹೇಮಂತ ಸಾಹಿತ್ಯದಿಂದ ಪುಸ್ತಕರೂಪ ದಲ್ಲಿ ಪ್ರಥಮ ಮುದ್ರಣ ಕಂಡಿದೆ.

ಸುಮಾರು ಎಪ್ಪತ್ತು ವರ್ಷಕ್ಕೂ ಹಿಂದಿನ ಸಮಾಜದಲ್ಲಿ ಬಾಳಿದ ದಿಟ್ಟ ಮಹಿಳೆ 'ತಗ್ಗಿನಮನೆ ಸೀತೆ'ಯ ಜೀವನ ಹಾಗೂ ಅವಳ ವೈಶಿಷ್ಟ್ಯಯುತ ವ್ಯಕ್ತಿತ್ವವನ್ನು ಲೇಖಕಿ ಚಿತ್ರಿಸಿದ್ದಾರೆ.

'ತಗ್ಗಿನಮನೆ ಸೀತೆ'ಯ ಕಾಲ, ಲೇಖಕಿಯೇ ಸೂಚಿಸಿದಂತೆ, ಧರ್ಮಸ್ಥಳದಲ್ಲಿ ಮಂಜಯ್ಯ ಹೆಗ್ಗಡೆಯವರು ಅಧಿಕಾರದಲ್ಲಿದ್ದ ಕಾಲ.

"೧೮೮೦–೯೦ ಆಸುಪಾಸಿನ ಸಮಯ ಬ್ರಿಟಿಷರು ಭಾರತಕ್ಕೆ ಕಾಲಿಟ್ಟು ಇನ್ನೂರು ವರ್ಷಗಳೇ ಕಳೆದಿದ್ದವು. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲ.

ಮುಂದಿನ ಮೂವತ್ತು–ನಲವತ್ತು ವರ್ಷಗಳಲ್ಲಿ ಕಾಲ ಬಹಳ ಬದಲಾಗಿ ಮುಂಬಯಿ, ಮದ್ರಾಸ್, ಬೆಂಗಳೂರು, ಮೈಸೂರುಗಳಲ್ಲಿ ಸಾಕಷ್ಟು ಸಾಕ್ಷರತೆ ನಾಗರೀ ಕತೆ, ಆಧುನಿಕತೆ ಬೆಳೆದು ಬಂದಿದ್ದರೂ ಅರ್ಥಹೀನ ಸಂಪ್ರದಾಯದ ಅಂಧಕಾರದಲ್ಲಿ ತಡವರಿಸುತ್ತಿದ್ದ ಪ್ರದೇಶಗಳು ಇದ್ದವು. ಅದರಲ್ಲಿ ಮೊದಲನೆಯದು ಮಲೆನಾಡು"[1] ಸ್ತ್ರೀ ಸ್ವಾತಂತ್ರ್ಯವಿಲ್ಲದ ಕಾಲ. ಹರಳೆಣ್ಣೆಯ ಕಾಲ ದೀಪಗಳು ಮಾಯವಾಗಿ, ಚಿಮಣಿ ಎಣ್ಣೆಯ ಗಾಜಿನ ಬುರುಡೆಯ ದೀಪಗಳು ಅದೇ ತಾನೇ ಕಾಲಿಡುತ್ತಿದ್ದವು. ಕಂಪನಿ ನಾಟಕಗಳು (ಶಿರಹಟ್ಟಿ ಕಂಪನಿ) ಪ್ರಸಿದ್ಧಿಯಲ್ಲಿದ್ದವು. ೧೯೧೯ನೆಯ ಇಸವಿಯ ಸುಮಾರಿಗೆ ತೀರ್ಥಹಳ್ಳಿಗೆ ವಾಹನಗಳ ಸಂಚಾರ ಪ್ರಾರಂಭವಾಗಿತ್ತು. ತೀರ್ಥಹಳ್ಳಿ, ಕುರುವಳ್ಳಿಯಲ್ಲಿ ಪ್ರಾಥಮಿಕ ಮಾಧ್ಯಮಿಕ ಶಾಲೆಗಳು ತೆರೆಯಲ್ಪಟ್ಟಿದ್ದವು.

ಭಾರತೀಯ ಸಾಮಾಜಿಕ, ರಾಜಕೀಯ, ಜೀವನದಲ್ಲಿ ಹೊಸತನದ ಗಾಳಿ ಬೀಸುತ್ತಿತ್ತು. ಇಂತಹ ಸಂಧಿಕಾಲದಲ್ಲಿ ಬದುಕಿ ಬಾಳಿದವಳು 'ತಗ್ಗಿನಮನೆ ಸೀತೆ'.

ಹೊರ ಪ್ರಪಂಚದಲ್ಲಿ ನಾಗರೀಕತೆಯ ಗಾಳಿ ಬೀಸಿದ್ದರೂ, ಮಲೆನಾಡ ಮೂಲೆ ಯಲ್ಲಿ "ಸುತ್ತಲೂ ಕೋಟೆಯಂತೆ ಘನೀಭವಿಸಿ ಸುತ್ತಿಕೊಂಡಿರುವ ಗುಡ್ಡಬೆಟ್ಟ ಕಾಡುಗಳ ಸಂದಿಗೊಂದಿಗಳಲ್ಲಿ ಹೊರಪ್ರಪಂಚಕ್ಕೆ ಗೋಚರವಾಗದಂತೆ ಅಡಗಿ ಕುಳಿತಿದ್ದ ಹಳ್ಳಿಗಳಲ್ಲಿ ಈ ಕಟ್ಟೆಮನೆ, ತಗ್ಗಿನ ಮನೆಗಳೂ ಸೇರಿವೆ."[2]

---

1. ಎಂ. ಕೆ. ಇಂದಿರಾ 'ತಗ್ಗಿನಮನೆ ಸೀತೆ' ಪುಟ–57
2. ಅದೇ ; ಪುಟ–8

ಅಜ್ಞಾನ, ಅಂಧಕಾರ, ಮುಗ್ಧನಂಬಿಕೆ, ಅರ್ಥಹೀನ ಸಂಪ್ರದಾಯಗಳೇ ತುಂಬಿದ್ದ ಪರಿಸರದ ಅಂದಿನ ಸಮಾಜದಲ್ಲಿ, ಅದರಲ್ಲೂ ಆ ಕಾಲದಲ್ಲಿ ನಾಲ್ಕುಗೋಡೆಗಳ ಮಧ್ಯೆ ಬಂಧಿತರಾಗಿರುವ ಸ್ತ್ರೀ ಸಮಾಜದಲ್ಲಿ ಎಲ್ಲರಿಗಿಂತ ಭಿನ್ನವಾದ ವೈಶಿಷ್ಟ್ಯಯುತ ವ್ಯಕ್ತಿತ್ವವನ್ನು ಹೊಂದಿದವಳು ಧೀರ, ಧೀಮಂತ ಮಹಿಳೆ ಸೀತೆ.

"ಸೀತೆ ವಿದ್ಯಾವಂತೆಯಲ್ಲ, ಬುದ್ಧಿವಂತೆ; ತ್ರಿಲೋಕ ಸುಂದರಿಯಲ್ಲದಿದ್ದರೂ ಸುರೂಪಿ; ಬಜಾರಿಯಲ್ಲ, ಧೀರೆ. ಧೀಮಂತೆ; ಕಲ್ಪನಾಲೋಕ ವಿಹಾರಿಯಲ್ಲ. ವಾಸ್ತವವಾದಿ, ಸುಳ್ಳು. ಮರೆ, ಮೋಸ, ಕೊಂಕುಗಳನ್ನು ಸದೆ ಬಡಿಯುವಂಥ ನಿರ್ಭಯ ನಿಲುವು."[1]

ಇವು ಸೀತೆಯ ವ್ಯಕ್ತಿತ್ವದ ವಿಶಿಷ್ಟಗುಣಗಳು. ಈ ಎಲ್ಲ ಗುಣಗಳೂ ಕಾದಂಬರಿ ಬೆಳೆದಂತೆ ಒಂದೊಂದಾಗಿ ಪ್ರಕಟವಾಗುತ್ತವೆ. ಅವಳು ಹುಟ್ಟಾ ಧೈರ್ಯವಂತೆ ಸಾಹಸಿ ಪುರಾಣ–ಪುಣ್ಯಕತೆ, ಮಹಾಭಾರತ, ರಾಮಾಯಣ, ಭಾಗವತರಾಟ, ಯಕ್ಷಗಾನ ಇವುಗಳನ್ನು ಕೇಳುತ್ತ ಬೆಳೆದವಳು. ಸೀತೆಗೆ ರಾಮಾಯಣ, ಮಹಾಭಾರತ ಕಾಲ ದಿಂದಲೂ ಸಮಾಜ ಸ್ತ್ರೀಯನ್ನು ಯಾವ ರೀತಿ ನಡೆಸಿಕೊಂಡು ಬಂದಿದೆ ಎಂಬುದರ ಪ್ರಜ್ಞೆ ಇದೆ.

ಸ್ತ್ರೀ ಸ್ವಾತಂತ್ರ್ಯವಿಲ್ಲದ ಕಾಲದಲ್ಲಿ ಬಾಳಿದ 'ತಗ್ಗಿನಮನೆ ಸೀತೆ' ಮಲೆನಾಡಿನ ಹಳ್ಳಿಗಳಲ್ಲಿ ಮೂಢನಂಬಿಕೆ ಅಜ್ಞಾನ ತುಂಬಿದ್ದ ಕಾಲದಲ್ಲಿ ಬೆಳೆದರೂ ಎಲ್ಲ ಸ್ತ್ರೀಯರಿ ಗಿಂತ ಭಿನ್ನಳಾಗಿ ಕಾಣಿಸಿಕೊಳ್ಳುತ್ತಾಳೆ. ಬಾಲ್ಯದಿಂದಲೇ, ಅವಳ ಪ್ರತಿಯೊಂದು ನಡೆ ನುಡಿಯಲ್ಲಿ ಅವಳ ಬುದ್ಧಿವಂತಿಕೆ, ವಿಚಾರಶಕ್ತಿ, ಧೈರ್ಯ, ಸಾಹಸಗಳು ವ್ಯಕ್ತ ವಾಗುತ್ತವೆ.

ಮಲತಾಯಿ ಮೋಟಮ್ಮ ವಿನಾಕಾರಣ ನೆವ ತೆಗೆದು ಆಕ್ಷೇಪಣೆ ಮಾಡಿದಾಗ ಸರಿಯಾಗಿಯೇ ಉತ್ತರಕೊಡುತ್ತಾಳೆ. ಮಲತಾಯಿಯ ಕೈಯಲ್ಲಿ ಬಾಲ್ಯ ಕಳೆದ ಸೀತೆಗೆ ಜೋರಿನ ಅತ್ತೆಯ ಕೈಯಲ್ಲಿ ಬಾಳುವುದು ಒಂದು ಸಮಸ್ಯೆ ಎನಿಸುವುದಿಲ್ಲ. ಅವಳ ಮದುವೆ ಹತ್ತನೆಯ ವರ್ಷಕ್ಕೆ 'ಕುರುವಳ್ಳಿ'ಯ ರಾಮಕ್ಕನ ಮಗ 'ಕುಮಾರಿ' ಯೊಡನೆ ನಡೆಯುತ್ತದೆ. ಬಾಯಿ ಜೋರಿದ್ದ ರಾಮಕ್ಕನ ಕೈಯಲ್ಲಿ ಸೊಸೆಯರು ಬಾಳುವದೇ ಒಂದು ಸಾಹಸ ಎನಿಸಿದ್ದರೂ ಸೀತೆಗೆ ಅತ್ತೆಯ ಅಚ್ಚುಕಟ್ಟುತನ, ಧಾರಾಳ ಮನಸ್ಸು, ಸತ್ಯಪ್ರಿಯತೆ– ಇವು ಮೆಚ್ಚಿಕೆಯಾಗಿ ಅವಳೊಡನೆ ಹೊಂದಿಕೊಳ್ಳುತ್ತಾಳೆ. ಜೀವನ ದುದ್ದಕ್ಕೂ ಅತ್ತೆಯನ್ನು ಅನುಸರಿಸಿಕೊಂಡು ಹೋಗುತ್ತಾಳೆ.

ಸೀತೆಯ ಜೀವನವಲ್ಲಿ ಆಕೆಯ ಧೈರ್ಯ, ಸಾಹಸ. ಬುದ್ಧಿವಂತಿಕೆಯನ್ನು ಪರೀಕ್ಷಿಸುವ ಅನೇಕ ಸಂದರ್ಭಗಳು ಎದುರಾಗುತ್ತವೆ. 'ಕುರುವಳ್ಳಿ'ಯ ನಿಸರ್ಗರಮ್ಯ

---

1. ಅದೇ; ಪುಟ–59.

ಪರಿಸರ. ಅತ್ತೆಯಿಂದ ದೊರೆತ ಕೌಟುಂಬಿಕ ಶಿಕ್ಷಣ. ಇವುಗಳಿಂದಾಗಿ ಸೀತೆಯ ಮನಸ್ಸು ವಿಕಾಸವಾಗುತ್ತದೆ.

ಸೀತೆ ಗಂಡನ ಮನೆಗೆ ಹೋದ ಕೆಲವೇ ದಿನಗಳಲ್ಲಿ ಅವಳ ಸಾಹಸವನ್ನು ಪರೀಕ್ಷಿಸುವ ಸಂದರ್ಭವೊಂದು ಬರುತ್ತದೆ. ಕಾಳಿಂಗಯ್ಯನ ಮಗಳು 'ಅನ್ನಪೂರ್ಣೆಯು' ಬಿಂದಿಗೆ ಸೆಳವಿಗೆ ಸಿಕ್ಕು ತೇಲಿಹೋದಾಗ ಹೊಳೆದಂಡೆಯಲ್ಲಿದ್ದ ಜನಜಂಗುಳಿಯನ್ನು ಲೆಕ್ಕಿಸದೇ ಹೊಳೆಗೆ ಧುಮುಕಿ ಪ್ರವಾಹದಲ್ಲಿ ಈಜಿ ಕೊಡವನ್ನು ಹಿಡಿದು ತರುತ್ತಾಳೆ.

ಸ್ತ್ರೀ ಮನೆಬಿಟ್ಟು ಹೊರಬರುವುದೇ ಮಹಾ ಅಪರಾಧ ಎನಿಸಿದ್ದ ಕಾಲದಲ್ಲಿ. ಅದೂ ಹಳ್ಳಿಯಸಂಪ್ರದಾಯಸ್ಥ ಕುಟುಂಬದ ಚೆಲುವೆ. ಹರೆಯದ ಸೊಸೆ 'ಸೀತೆ' ಅನ್ನಪೂರ್ಣೆಗೆ ಸಹಾಯ ಮಾಡುವ ಸದುದ್ದೇಶದಿಂದ ಹೊಳೆಗೆ ಧುಮುಕಿದುದು ಸಾಮಾನ್ಯ ಮಾತಲ್ಲ. ಮನೆಗೆ ಬಂದ ನಂತರ ಅತ್ತೆ ಹಾಗೂ ಗಂಡನಿಂದ ಏಟು ಬಿದ್ದರೂ ಅದರ ಬಗೆಗೆ ಅವಳಿಗೆ ಅಸಮಾಧಾನವಿಲ್ಲ.

ಊರಿಗೆ 'ಪ್ರಂಡ' ಪೋಕರಿ ಎನಿಸಿದ್ದ 'ಅಪ್ಪು'ವಿಗೂ ಸೀತೆ ಸಿಂಹಸ್ವಪ್ನಳಾಗುತ್ತಾಳೆ. ಸೀತೆಯ ಗಂಡ, ಹಾಗೂ ಅತ್ತೆ ಮನೆಯಲ್ಲಿಲ್ಲದ ಸಮಯ ಸಾಧಿಸಿ ಅಪ್ಪು ದುರುದ್ದೇಶವಿಟ್ಟುಕೊಂಡು ಸೀತೆಯನ್ನು ಕೆಣಕಲು ಬರುತ್ತಾನೆ, ಅದನ್ನು ಸಹಿಸದೆ ಸೀತೆ ಹಿಂದೆ ಮುಂದೆ ನೋಡದೆ, ತನ್ನನ್ನು ಅಪಮಾನಗೊಳಿಸಲು ಬಂದ ಅಪ್ಪುವನ್ನು ಈಚಲು ಹಿಡಿಯಿಂದ 'ರಪರಪ' ಹೊಡೆದು ಓಡಿಸುತ್ತಾಳೆ. ಪುರುಷ ದೌರ್ಜನ್ಯವನ್ನು ಸದೆ ಬಡಿದ ಅವಳ ಧೈರ್ಯವಂತಿಕೆಯಿಂದ ಓದುಗರ ಮೆಚ್ಚುಗೆ ಗಳಿಸುತ್ತಾಳೆ.

ನೆರೆಮನೆಯ ಶ್ಯಾಮಯ್ಯನವರ ಹೆಂಡತಿ ಅನ್ನಪೂರ್ಣಮ್ಮ ಕ್ಷಯರೋಗದಿಂದ ಮೇಲುಸಿರು ಪ್ರಾರಂಭವಾಗಿ "ನಾ ಅವರನ್ನು ನೋಡ್ದನೆ ಸಾಯ್ತೀನಿ ಕಣೆ ಸೀತೆ" ಎಂದು ಗಂಡನನ್ನು ನೆನೆದು ಕಣ್ತುಂಬಿದಾಗ ಮೋಡ ಕವಿದ ಅಂಧಕಾರ, ಸುರಿವಮಳೆ, ಉಕ್ಕಿ ಬರುತ್ತಿದ್ದ ನದಿಯ ಪ್ರವಾಹದಲ್ಲೆ, ತೀರ್ಥಹಳ್ಳಿಯ ಸೂಳೆ 'ಶಾಂಭವಿ' ಯ ಮನೆಯಲ್ಲಿದ್ದ ಶ್ಯಾಮಯ್ಯನನ್ನು ಕರೆದುತರುತ್ತಾಳೆ. ಎದೆ ನಡುಗಿಸುವ ಭೀಕರ ಪ್ರವಾಹದಲ್ಲೆ ಹುಟ್ಟುಹಾಕಲು ಅಂಬಿಗರೂ ನಿರಾಕರಿಸಿದಾಗ, ತಾನೇ ಒಂದು ಹರಿಗೋಲಿನಲ್ಲಿ ಹರಿವಾಣಗಳಿಂದ ನೀರನ್ನು ತಳ್ಳುತ್ತ 'ಶಾಂಭವಿ'ಯ ಮನೆಯನ್ನು ತಲುಪುವ ಸನ್ನಿವೇಶ ರೋಮಾಂಚಕಾರಿಯಾದುದು.

ಅನ್ನಪೂರ್ಣಮ್ಮ ನರಳುತ್ತ ಸಾಯುವ ಸ್ಥಿತಿಯಲ್ಲಿದ್ದರೂ ಸೂಳೆಯ ಮನೆಯಲ್ಲಿ ಚಕ್ಕಂದವಾಡುತ್ತಿದ್ದ ಶ್ಯಾಮಯ್ಯನ ಬಗೆಗೆ ಅವಳ ಮನಸ್ಸುಬಂಡೇಳುತ್ತದೆ. "ಹೆಚ್ಚಿನ ವಿಮರ್ಶಾತ್ಮಕ ಬುದ್ಧಿಯಿಲ್ಲದಿದ್ದರೂ ಸ್ವಭಾವತಃ ದಿಟ್ಟ ವಾಸ್ತವ ಜೀವಿಯಾಗಿದ್ದ ಸೀತೆಯ ಮನಸ್ಸು ಬಂಡೆದ್ದು ಬುಸುಗುಡುತ್ತಿತ್ತು. 'ಹೆಂಡ್ತಿ ಸಾಯ್ತಾಬಿದಿದ್ರೂ

ಇವನೆಂಥ ಪತಿ? ಅಂಥವನ ಪಾದಮುಟ್ಟಿ ಪ್ರಾಣ ಬಿಡುವ ಹುಚ್ಚಿನ ಇದೆಂಥ ವ್ರತ ಈಕೆಯದು! ನಾನಾಗಿದ್ರೆ ಹಾಳಾಗ್ಲಿ ಅಂತಿದ್ದೆ"[1]

ಇವೆಲ್ಲ ಪುರುಷನ ದಬ್ಬಾಳಿಕೆ, ಹಾಗೂ ಸ್ತ್ರೀ ಅವೈಚಾರಿಕ ಮುಗ್ಧತನದ ಬಗೆಗೆ ಲೇಖಕಿಯ ಧೋರಣೆ ಸ್ಪಷ್ಟವಾಗಿದೆ. ಸ್ತ್ರೀ ಶೋಷಣೆಯ ಬಗೆಗೆ ಲೇಖಕಿಯ ಸ್ಪಂದನೆಯನ್ನು ಇಲ್ಲಿ ಕಾಣುತ್ತೇವೆ, ಅನ್ನಪೂರ್ಣಮ್ಮನ ಅಂತಿಮ ದೈನ್ಯಕೋರಿಕೆ ಅವಳ ಮಾನವೀಯತೆಯನ್ನು ಮಿಡಿಯುತ್ತದೆ. ಎಳೆಮಗುವಿನ ತಾಯಿ ಬಾಣಂತಿಯಾಗಿದ್ದು ಸೀತೆ ಧಾರಕಾರವಾಗಿ ಸುರಿಯುವ ಮಳೆಯನ್ನು ಲೆಕ್ಕಿಸದೆ ಅನ್ನಪೂರ್ಣಮ್ಮನ ಅಂತಿಮ ಕೋರಿಕೆಯನ್ನು ಈಡೇರಿಸಲು ಮುಂದಾಗುತ್ತಾಳೆ.

ಸೀತೆ ಜೀವನದಲ್ಲಿ ಎದುರಾಗುವ ಎಲ್ಲಾ ಸಮಸ್ಯೆಗಳಿಗೂ, ಮನೋಸ್ಥೈರ್ಯದಿಂದ ಪರಿಹಾರ ಕಂಡುಹಿಡಿಯುತ್ತಾಳೆ. ಸೀತೆ ಚೊಚ್ಚಲು ಬಸಿರಿಗೆ ತವರಿಗೆ ಹೋದಾಗ ಬಾಲ್ಯದ ಗೆಳತಿ ಅಚ್ಚಿಗೂ ಮದುವೆಯಾಗುತ್ತಿರುತ್ತದೆ. ಆದರೆ ಅವಳು ಮೈನೆರೆತಿರುವುದಿಲ್ಲ. 'ಅಚ್ಚಿಯ ಗಂಡನಿಗೆ ಬೇರೆ ಮದುವೆ ಮಾಡುತ್ತೇನೆಂದು ಗಂಡಿನ ಕಡೆಯ ಬೀಗರು ಹೆದರಿಸುತ್ತಾರೆ. 'ಅಚ್ಚಿ' ನಿರಾಶಳಾಗಿ ಸೀತೆಯ ಮುಂದೆ ಗೋಳಾಡಿದಾಗ ಅವಳಿಗೆ ಸೀತೆ ಧೈರ್ಯ ತುಂಬುತ್ತಾಳೆ. ತನಗೆ ಗೊತ್ತಿದ್ದ ನಾರು–ಬೇರಿನ ಔಷಧಿಯನ್ನು ತಂದುಕೊಟ್ಟು ಗೆಳತಿಯ ಜೀವನ ಸುಗಮವಾಗಲೆಂದು ಹಂಬಲಿಸುತ್ತಾಳೆ. ಆದರೂ ಅಚ್ಚಿಯ ದಾಂಪತ್ಯ ಜೀವನಕ್ಕೆ ಅನೇಕ ಲೈಂಗಿಕ ಸಮಸ್ಯೆಗಳು ಇರುತ್ತವೆ. ಹೀಗಾಗಿ ಅವಳು ಹೆಣ್ಣಲ್ಲವೆಂದು ತಿರ್ಮಾನಿಸಿದ ಬೀಗರು ಅವಳನ್ನು ತವರಿಗೆ ತಂದು ಬಿಡುತ್ತಾರೆ.

ನಾಲ್ಕು ಮಕ್ಕಳ ತಾಯಿಯಾದ ಸೀತೆಯ ಅನುಭವ ಪರಿಪಕ್ವವಾಗುತ್ತದೆ.[2] ತವರು ಮನೆ ಗಂಡನ ಮನೆಯಿಂದ ದೂರವಾಗಿ ಸಮಾಜದ ತಾತ್ಸಾರಕ್ಕೊಳಗಾದ 'ಅಚ್ಚಿಗೆ ಸೀತೆ ತನ್ನ ಮನೆಯಲ್ಲೇ ಆಶ್ರಯ ಕೊಡುತ್ತಾಳೆ. ಬಾಲ್ಯದಿಂದಲೇ 'ಅಚ್ಚಿ'ಗೆ ಎದುರಾದ ಅನೇಕ ಸಂದೇಹಗಳನ್ನು ನಿವಾರಿಸಲು ಪ್ರಯತ್ನಿಸಿದ ಸೀತೆ 'ಅಚ್ಚಿ'ಯ ಜೀವನದಲ್ಲೇ ಭೂತಾಕಾರವಾಗಿ ಮೈತಳೆದು ನಿಂತ ಸಮಸ್ಯೆಯನ್ನು ಪರಿಹರಿಸುತ್ತಾಳೆ. ಸೀತೆಯ ಪಾತ್ರ ಮಾನವೀಯ ಗುಣಗಳಿಂದ ಎತ್ತರಕ್ಕೆ ಬೆಳೆದುನಿಲ್ಲುತ್ತದೆ.

"ತಗ್ಗಿನಮನೆ ಸೀತೆಯ ಪಾತ್ರ ವೈಶಿಷ್ಟ್ಯ ಪೂರ್ಣವಾಗಿದೆ. ಮುತ್ತೈದೆ ಅನ್ನಪೂರ್ಣಮ್ಮ ಸಾವು ಸಮಾಪಿಸಿದ ಕೊನೆಯ ಗಳಿಗೆಯಲ್ಲಿ ಪತಿ ಶ್ಯಾಮಣ್ಣನನ್ನು

---

1. ಅದೇ; ಪುಟ–150.

2. ಇಂದಿನಿಂದ ಸಂತತಿ ನಿಯಂತ್ರಣಕ್ಕೆ ಯಾವುದೇ ರೀತಿಯ ವೈದ್ಯಕೀಯ ಸೌಲಭ್ಯವಿಲ್ಲದ ಕಾಲದಲ್ಲಿ ಸೀತೆ ಅತ್ತೆಯಿಂದ ತಿಳಿದ ಸಂತತಿ ನಿಯಂತ್ರಣದ ವಿಧಾನಗಳನ್ನು ಅನುಸರಿಸುತ್ತಾಳೆ. ತಿಂಗಳಿನ ಕೆಲವು ದಿನಗಳಲ್ಲಿ ಗಂಡನಿಂದ ದೂರವಿರುತ್ತಾಳೆ.

ನೋಡುವ ಇಚ್ಛೆ ವ್ಯಕ್ತಪಡಿಸಿದಾಗ ಪೂರ್ಣ ವಿವಾಹದಿಂದ ತುಂಬಿದ ಹೊಳೆಯಲ್ಲಿ ಸುರಿಯುವ ಮಳೆಯಲ್ಲಿ ಅಂಬಿಗರೇ ಹುಟ್ಟು ಹಾಕಲು ಹೆದರುತ್ತಿರುವಾಗ ದೋಣಿ ಹಾಕಿ ವೇಶ್ಯೆಯ ಮನೆಯಲ್ಲಿ ಚಕ್ಕಂದವಾಡುತ್ತಿದ್ದ ಶ್ಯಾಮಣ್ಣನನ್ನು ಸೀತೆ ಕರೆದುತಂದ ಸಾಹಸ ಸ್ವಿಮಿಂಗ್‌ಪೂಲಿನಲ್ಲಿ ಮಾತ್ರ ಈಜಬಲ್ಲ ಆಧುನಿಕ ಮಹಿಳೆಯನ್ನು ದಿಗ್ಭ್ರಮೆಗೊಳಿಸುತ್ತದೆ'. ಇಂಥ ಹೆಣ್ಣನ್ನು ಕೆಣಕಲು ಹೋದವನ ಸ್ಥಿತಿ ಏನಾಗಿರಬೇಡ? ಮೂಲೆಯಲ್ಲಿದ್ದ ಪೊರಕೆಯಿಂದ ಮಾನಭಂಗಕ್ಕೆ ಪ್ರಯತ್ನಸಿದವನನ್ನು ಸೀತೆ ಮನೆಯಿಂದಾಚೆ ಹೊಡೆದೋಡಿಸಿದುದನ್ನು ನೋಡಿದರೆ ಇಂದು ಪತ್ರಿಕೆಗಳಲ್ಲಿ ಪ್ರಸಿದ್ಧಿ ಪಡೆದು ಬೆಳಕಿಗೆ ಬರುತ್ತಿರುವ ಎಷ್ಟೋ ಪ್ರಕರಣಗಳನ್ನು ಮಹಿಳೆಯರೇ ಬಗೆಹರಿಸಿಕೊಳ್ಳಬಹುದು ಎಂದೆನಿಸದಿರದು"[1]

ಈ ಕಾದಂಬರಿಯಲ್ಲಿ 'ಅಚ್ಚಿ' 'ಅನ್ನಪೂರ್ಣಮ್ಮ' ಇವರ ಶೋಷಣೆ ಹಾಗೂ ಸಮಸ್ಯೆಯನ್ನು ಸ್ತ್ರೀ ದೃಷ್ಟಿಯಿಂದ ನೋಡಲಾಗಿದೆ. ರಾಮಕ್ಕ, ಮೋಟಮ್ಮ ಈ ಪಾತ್ರಗಳು ಜೀವನ ಶ್ರದ್ಧೆ ಲವಲವಿಕೆಯಿಂದ ಜೀವಂತ ಚಿತ್ರಣ ಪಡೆದಿವೆ. ರಾಮಕ್ಕನ ಮಾತು ಒರಟಾದರೂ ಅವಳ ಮನಸ್ಸು ಒಳ್ಳೆಯದು. ಬಾಯಿ ಜೋರಾಗಿದ್ದುದರಿಂದಲೇ ಆಕೆ ತನ್ನ ಸಂಸ್ಕಾರವನ್ನು ಹದ್ದುಬಸ್ತಿನಲ್ಲಿಟ್ಟುಕೊಳ್ಳುತ್ತಾಳೆ. ಮಕ್ಕಳು ಸೊಸೆ ಮೊಮ್ಮಕ್ಕಳ ಮೇಲೆ ಅವಳಿಟ್ಟ ಪ್ರೀತಿ ಅಪಾರ. ಸೀತೆ ಹೊಳೆಗೆ ಧುಮುಕಿ ಕೊಡವನ್ನು ಹಿಡಿದು ತಂದಾಗ ಸೊಸೆಗೆ ಹೊಡೆಯುವದು ಅವಳ ಮೇಲಿನ ಸಿಟ್ಟಿನಿಂದಲ್ಲ. ಕಾರಣ ತನ್ನ ಚೆಲುವೆ ಸೊಸೆಯ ಮೇಲೆ ಯಾರ ಕಣ್ಣೂ ಬೀಳಕೂಡದೆಂಬ ಭಾವನೆಯಿಂದ. ಸೀತೆ ಏಟು ಬಿದ್ದು ಗಾಯವಾದ ತನ್ನ ತೊಡೆ, ಮೈ–ಕೈಗಳನ್ನು ತೋರಿಸಿದಾಗ 'ರಾಮಕ್ಕ' ಕನಿಕರಪಟ್ಟು ತನ್ನ ಕೈಯಾರ ಔಷಧಿ ಹಚ್ಚಿ ಉಪಚಾರ ಮಾಡುತ್ತಾಳೆ.

ಅನ್ನಪೂರ್ಣಮ್ಮನ ಸಾವಿನ ಸಮಯದಲ್ಲಿ ಸೀತೆ ಪ್ರವಾಹದಲ್ಲಿ ದೋಣಿಯಲ್ಲಿ ಶ್ಯಾಮಯ್ಯನವರನ್ನು ಕರೆತಂದಾಗ ತನ್ನ ಸೊಸೆ ವೇಶ್ಯೆಯ ಮನೆಗೆ ಹೋದುದಕ್ಕಾಗಿ ಅವಳಿಗೆ ಸಿಟ್ಟು ಬಂದಿರುತ್ತದೆ. ಆದರೆ ಕೊನೆಯುಸಿರು ಎಳೆಯುತ್ತಿದ್ದ ಅನ್ನಪೂರ್ಣಮ್ಮ –"ರಾಮಕ್ಕ ನಿಮಗೆ ಸಮವಾದ ಸೊಸೆ"[2] ಎಂದು ಹೇಳಿದಾಗ ರಾಮಕ್ಕನ ಸಿಟ್ಟೆಲ್ಲ ಇಳಿದು ಸೊಸೆಗೆ–"ಎದ್ದೇಳೆ ಮನಿಗ್ಹೋಗಿ ಬ್ಯಾರೆ ಸೀರೆ ಉಟ್ಕಂಡು ತಲೆ ಒರಿಸ್ಕಾ; ನಿನ್ನ ಮೈ ಯಾತಕ್ಕಾದೀತು ; ನಡೀ ಬಿಸಿ ಕಾಫೀಮಾಡಿ ಕೊಡ್ತೀನಿ" ಎಂದು ಒರಟು ಮಾತಿನಿಂದಲೇ ಸೊಸೆಗೆ ಅಕ್ಕರೆಗರೆಯುತ್ತಾಳೆ.

---

1. ಗೀತಾ ದೇಸಾಯಿ 'ಸಂಯುಕ್ತ ಕರ್ನಾಟಕ' 12–9–1982 ಪುಟ–3

2. ಎಂ. ಕೆ. ಇಂದಿರಾ 'ತಗ್ಗಿನಮನೆ ಸೀತೆ' ಪುಟ–156.

ಮೋಟಮ್ಮ ಇಪ್ಪತ್ತು ವರ್ಷಕ್ಕೆ ಮೂರು ಮಕ್ಕಳನ್ನು ಹಡೆದವಳು. ಆಕೆ ಸೀತೆಗೆ ಒರಟಾಗಿ ಮಾತನಾಡಿದರೂ ಸ್ವಭಾವತಃ ಕೆಟ್ಟವಳಲ್ಲ ಎಲ್ಲ ಮಲತಾಯಿಯರೂ ತಮ್ಮ ಮಲಮಕ್ಕಳನ್ನು ಹೊಡೆದು ಬಯ್ಯುವಂತೆ, ತಾನೂ ಸೀತೆಯನ್ನು ಬಯ್ಯುತ್ತಾಳೆ. ಆದರೆ ಅವಳು ಸಂಸಾರಿಕ ಜವಾಬ್ದಾರಿಯನ್ನು ಅರಿತವಳು. ಆದ್ದರಿಂದಲೇ ಸೀತೆಗೆ ವರ ಹುಡುಕಿ ಮದುವೆ ಮಾಡಿಸುವಲ್ಲಿ ಗಂಡ ಮಹಾಬಲಯ್ಯನಿಗಿಂತ ಅವಳ ಪಾತ್ರವೇ ಹಿರಿದು.

ಅನ್ನಪೂರ್ಣಮ್ಮ ಪತಿಯೇ ದೈವವೆಂದು ಭಾವಿಸುವ ಸಂಪ್ರದಾಯಶೀಲ ಮುಗ್ಧ ಮಹಿಳೆ, ಅದ್ದರಿಂದ ಸಾಯುವ ಗಳಿಗೆಯಲ್ಲಿ ಪತಿಯ ಪಾದ ಮುಟ್ಟಿ ಪ್ರಾಣಬಿಡಬೇಕೆಂಬ ಇಚ್ಛೆಯನ್ನು ವ್ಯಕ್ತಪಡಿಸುತ್ತಾಳೆ. ಪತಿಯ ವೇಶ್ಯೆ 'ಶಾಂಭವಿ'ಯ ಬಗೆಗೆ ಒಂದಿಷ್ಟೂ ಮತ್ಸರವಿಲ್ಲ ಅವಳಿಗೆ.

ಅನ್ನಪೂರ್ಣಮ್ಮನಂತಯೇ 'ಅಚ್ಚಿ'ಯೂ ಸಹ ಪುರುಷನ ಶೋಷಣೆಗೀಡಾದವಳು. 'ಅಚ್ಚಿ' ಹಾಗೂ ಅನ್ನಪೂರ್ಣಮ್ಮನ ಪಾತ್ರ ಓದುಗರ ಅನುಕಂಪಗಳಿಸುತ್ತವೆ.

ಸಾತಿ, ಮಿೂನಿ, ಬಾನಿ, ಪುಟ್ಟತಾಯಮ್ಮ ಈ ಎಲ್ಲ ಪಾತ್ರಗಳೂ ಕಾದಂಬರಿಯ ಕೊನೆಯವರೆಗೂ ಲೇಖಕಿಯ ಗಮನ ಪಡೆದಿವೆ. 'ಸೀತೆ'ಯ ತವರಿನ ಚೆಳುವಳಿ ಆಕಳು 'ಗೌರಿ' ಹಾಗೂ ಅವರ ಮಗಳು ಅವು ಸಹ ಕಾದಂಬರಿಯಲ್ಲಿ ಗಮನಸೆಳೆಯುತ್ತವೆ.

'ದೋಟಿಸುಬ್ಬ' 'ಕೊಮಾರಿ' ಮಹಾಬಲಯ್ಯ ಶಂಕ್ರಭಟ್ಟ, ಶ್ಯಾಮಯ್ಯ ಈ ಎಲ್ಲ ಪಾತ್ರಗಳು ಜೀವಂತಿಕೆಯಿಂದ ಕೂಡಿವೆ.

ಸ್ತ್ರೀ ಸ್ವಾತಂತ್ರ್ಯ ಮಹಿಳಾಜಾಗ್ರುತಿ ಎಂದು ಕೂಗು ಹಾಕುವ ವಿದ್ಯಾವಂತ ಆಧುನಿಕ ಮಹಿಳೆಯರಿಗೆ 'ಸೀತೆ' ಒಂದು ಸವಾಲು. ಸ್ತ್ರೀ ಸ್ವಾತಂತ್ರ್ಯ, ಸಮಾನತೆ ಇವುಗಳ ಗೊಡವೆ ಇಲ್ಲದೆ ಮನೋಸ್ಥೈರ್ಯ, ಧೈರ್ಯ, ಸಾಹಸ ಬುದ್ಧಿವಂತಿಕೆಯಿಂದ ವಾಸ್ತವ ವಿಚಾರಗಳಿಂದ ಪುರುಷನ ದಬ್ಬಾಳಿಕೆಯ ವಿರದ್ಧ ಬಂಡೆದ್ದ ಮಹಿಳೆ ಸೀತೆ.

ಸೀತೆಯ ಬುದ್ಧಿವಂತಿಕೆ, ದುಃಖಗಳಿಗೆ ಅಸಹಾಯಕರಾಗಿ ಆಸರೆಯಾಗಿ ನಿಲ್ಲುವ ಅವಳ ಮಾನವೀಯ ಗುಣಗಳು ಸ್ತ್ರೀಯರಿಗೆ ಯಾವ ಕಾಲಕ್ಕೂ ಅನುಕರಣೀಯವಾಗಿವೆ. ಮಲೆನಾಡಿನ ಜನರ ಜೀವನದ ರೀತಿ, ಅವರ ನಂಬಿಕೆ ಸಂಪ್ರದಾಯಗಳು ಇವೆಲ್ಲ ಕಾದಂಬರಿಯಲ್ಲಿ ಹಾಸುಹೊಕ್ಕಾಗಿವೆ.

"ನಮ್ಮ ನಾಡಿನ ಹಿರಿಯ ಲೇಖಕಿ ಶ್ರೀಮತಿ ಇಂದಿರಾ ಅವರು 'ತಗ್ಗಿನಮನೆ ಸೀತೆ'ಯನ್ನು ಪ್ರಕಟಿಸಿದ್ದಕ್ಕಾಗಿ ನನ್ನ ಅಭಿನಂದನೆಗಳು. ಮಲೆನಾಡಿನ ಯಾವುದೋ ಮೂಲೆಯಲ್ಲಿ ಬೆಳೆದ ಸೀತೆಯ ವ್ಯಕ್ತಿ ಚಿತ್ರ ಓದುಗರ ಮನಸ್ಸಿಗೆ ನಾಟುವಂತೆ ಬರೆದಿದ್ದಾರೆ. ಫಣಿಯಮ್ಮನನ್ನು ಬೆಳಕಿಗೆ ತಂದ ಲೇಖಕಿ–'ಸೀತೆಯ'ನ್ನು ತಂದಿದ್ದಾರೆ. ಹಾಗೆಯೇ ಇನ್ನೂ ಈ ಬಗೆಯಾಗಿ ಎಲೆಮರೆಯ ಕಾಯಿಗಳಂತೆ, ಬೆಳಕಿಗೆ ಬಾರದಿರುವವರನ್ನು

ಪರಿಚಯಿಸಲಿ. ಅವರ ಜೀವನದ ಬಗೆಯನ್ನು ನಮಗೆ ತೋರಿಸಿ ನಮ್ಮನ್ನೂ ಅವರಂತೆ ಆದರ್ಶದ ಹಾದಿಯಲ್ಲಿ ನಡೆಸಲಿ ಎಂಬುದು ನನ್ನ ಹಿರಿಯಾಸೆ.

ಮಲೆನಾಡಿನ ಭಾಷೆಯ ಸೊಗಸು, ಅಲ್ಲಿನ ಪರಿಸರವನ್ನು ಲೇಖನಿಯಲ್ಲಿ ಇಳಿಸುವ ಕಲೆ ಶ್ರೀಮತಿ ಇಂದಿರಾ ಅವರಿಗೆ ಚೆನ್ನಾಗಿ ಸಿದ್ಧಿಸಿದೆ. ಉಕ್ಕಿದ ಹೊಳೆಯಲ್ಲಿ ದೋಣಿ ನಡೆಸಿ ಅನೇಕರ ಹೃದಯದಲ್ಲಿ ನೆಲೆಯಾದ 'ಸೀತೆ'ಯ ಕೊನೆಯ ಕಂತನ್ನು ಓದಿದ ನಂತರ ಆ ಘಟನೆಯನ್ನು ಸ್ವತಃ ಕಂಡು ಅನುಭವಿಸಿದಂತಾಯಿತು.[1]

"ಶ್ರೀಮತಿ ಇಂದಿರಾ ಅವರ ತಗ್ಗಿನಮನೆ ಸೀತೆ ಒಂದು ಅತ್ಯುತ್ತಮ ಕಾದಂಬರಿ. ಕಾದಂಬರಿಯನ್ನು ಓದುತ್ತಾ ನಾವು ಕೇವಲ ಓದುಗರಾಗಿರದೆ ಪಾತ್ರವರ್ಗದಲ್ಲಿ ಲೀನ ವಾಗಿ ಬಿಡುತ್ತಿದ್ದೆವು. ಸೀತೆಯ ಪಾತ್ರ ಚಿತ್ರಣವಂತೂ ಎಂದೆಂದಿಗೂ ಮರೆಯದೆ ಮನಸ್ಸಿನಲ್ಲಿ ಚಿರಕಾಲ ನಿಲ್ಲುವಂತಹದು."[2]

"ಶ್ರೀಮತಿ ಇಂದಿರಾ ಅವರ 'ತಗ್ಗಿನಮನೆ ಸೀತೆ' ಅದ್ಭುತವಾಗಿದೆ. ಕಾದಂಬರಿಯ ವಸ್ತು, ಪಾತ್ರಚಿತ್ರಣ ಶೈಲಿ ಮತ್ತು ಘಟನಾವಳಿಗಳು ವಾಸ್ತವಿಕತೆಗೆ ತೀರ ಹತ್ತಿರ ವಾಗಿವೆ. ಮಹಿಳೆಯ ಶೋಷಣೆಯ ಬಗೆಗೆ ಬರಿಯ ಗೋಳಿನ ಪುರಾಣವನ್ನೇ ಓದಿ ಬೇಸತ್ತಿದ್ದ ನನ್ನಂತಹರಿಗೆ ತಗ್ಗಿನಮನೆ ಸೀತೆಯಂತಹ ಮಹಿಳಾ ಮಣಿಯರ ಅಸ್ತಿತ್ವ ವನ್ನು ಕಂಡು ಸಂತೋಷವಾಯಿತು"[3] ಎಂದು ಅನೇಕ ಓದುಗರು ಧಾರವಾಹಿಯಾಗಿ ಬೆಳಕಿಗೆ ಬಂದ ತಗ್ಗಿನಮನೆ ಸೀತೆಯನ್ನು ಮೆಚ್ಚಿ ವನಿತಾಕ್ಕೆ ಪತ್ರ ಬರೆದುದನ್ನು ಗಮನಿಸಬಹುದು.

ಒಟ್ಟಾರೆ ಇದು ಇಂದಿರಾ ಅವರ ಒಂದು ವಿಶಿಷ್ಟ, ಉತ್ತಮ ಕಾದಂಬರಿ ಎಂಬುದರಲ್ಲಿ ಸಂದೇಹವಿಲ್ಲ.

---

1. ಕುಸುಮಾ ಎಸ್. ಶ್ರೀಧರ್ 'ವನಿತಾ' ಫೆಬ್ರುವರಿ–1981.
2. ಕುಸುಮಾ ಎಮ್. ಭಟ್ " "
3. ಬಿ. ಎಸ್. ಎ. ಕುಂದಾಪುರ 'ವನಿತಾ' ಫೆಬ್ರುವರಿ–1981.

(ಬ) ಕೌಟುಂಬಿಕ ಕಾದಂಬರಿಗಳು :

ಕುಟುಂಬವು ಸಮಾಜದ ಒಂದು ಅವಿಭಾಜ್ಯ ಅಂಗ. ಪಾಶ್ಚಾತ್ಯ ಸಂಸ್ಕೃತಿಯ ಸಂಪರ್ಕದಿಂದಾಗಿ, ಭಾರತೀಯ ಸಾಮಾಜಿಕ ಜೀವನದಲ್ಲಾದ ಬದಲಾವಣೆ ಕೌಟುಂಬಿಕ ಜೀವನದಲ್ಲೂ ಪರಿಣಾಮವನ್ನುಂಟು ಮಾಡಿದೆ. ಬಡತನ ನಿರುದ್ಯೋಗ, ಜನಸಂಖ್ಯಾ ಹೆಚ್ಚಳ, ಹಳೆ-ಹೊಸ ತಲೆಮಾರುಗಳಲ್ಲಿ ಕಂಡುಬರುವ ವೈಚಾರಿಕ ಅಂತರ, ಮೌಲ್ಯಗಳ ಸಂಘರ್ಷ. ಇವೆಲ್ಲ ಕೌಟುಂಬಿಕ ಜೀವನದಲ್ಲೂ ಸಮಸ್ಯೆಗಳನ್ನು ಹುಟ್ಟಿಸಿವೆ. ಸಾಮಾಜಿಕ ಕಾದಂಬರಿಗಳಲ್ಲಿ ಕೌಟುಂಬಿಕ ಜೀವನ ಹಿನ್ನೆಲೆಯಾಗಿ ಇದ್ದೇ ಇದೆ. ಈ ಯುಗದ ಮುಖ್ಯ ಲಕ್ಷಣಗಳಲ್ಲೊಂದಾದ ವ್ಯಕ್ತಿ ನಿಷ್ಠತೆಯಿಂದಾಗಿ, ಅವಿಭಕ್ತ ಕುಟುಂಬಗಳು ಒಡೆದು ಹೋಗುತ್ತಿವೆ. ಕೌಟುಂಬಿಕ ಮೌಲ್ಯಗಳು ಏರುಪೇರಾಗುತ್ತಿವೆ.

ಕುಟುಂಬ ಜೀವನದ ಸಿಹಿ-ಕಹಿ, ಏರುಪೇರು, ಅಣ್ಣ-ತಮ್ಮಂದಿರ ಸ್ವಾರ್ಥ, ದಾಯಾದಿಗಳ ಜಗಳ, ಮಕ್ಕಳ ಬದುಕು, ಅತ್ತೆ-ಸೊಸೆಯರ ಸಂಬಂಧ ಸ್ತ್ರೀಯ ತ್ಯಾಗ, ಸಹನೆ ದಾಂಪತ್ಯ ಜೀವನದ ಸರಸ-ವಿರಸ ಇತ್ಯಾದಿಗಳೆಲ್ಲ ಈ ಕೌಟುಂಬಿಕ ಕಾದಂಬರಿಗಳ ವಸ್ತುವಾಗಿವೆ.

ರಸವಾಹಿನಿ, ಒಂದೇ ನಿಮಿಷ, ಬ್ರಹ್ಮಚಾರಿ, ಸುಖಾಂತ-ಹೆಣ್ಣಿನ ಆಕಾಂಕ್ಷೆ ತಾಳಿದವರು, ಶಾಂತಿಧಾಮ, ತುಂಗಭದ್ರ ಈ ಕಾದಂಬರಿಗಳು ಮುಖ್ಯವಾಗಿ ಕೌಟುಂಬಿಕ ಕಥಾವಸ್ತುವನ್ನೊಳಗೊಂಡವುಗಳಾಗಿವೆ.

'ರಸವಾಹಿನಿ' ಹಾಗೂ 'ಮನತುಂಬಿದ ಮಡದಿ' :

ಎಂ. ಕೆ. ಇಂದಿರಾ ಅವರ ರಸವಾಹಿನಿ ಹಾಗೂ ಮನತುಂಬಿದ ಮಡದಿ, ಈ ಎರಡೂ ಕಾದಂಬರಿಗಳಲ್ಲಿ ಸರಸ ದಾಂಪತ್ಯದ ಚಿತ್ರಣವಿದೆ.

ರಸವಾಹಿನಿ ಕಾದಂಬರಿಯ ನಾಯಕಿ ಇಂದುಮತಿ ಹಾಗೂ ಅವಳ ಪತಿ ವೇಣು ಇವರ ಸರಸ ಸುಂದರ ದಾಂಪತ್ಯ ಜೀವನವನ್ನು ಚಿತ್ರಿಸುವ ಕಾದಂಬರಿ. ದಿನಚರಿಯಲ್ಲಿ ಬರೆದ ಅವಳ ಬದುಕಿನ ರಸಮಯ ಸನ್ನಿವೇಶಗಳು ಇಲ್ಲಿ ಬಿಚ್ಚಿಕೊಳ್ಳುತ್ತವೆ. ತುಂಬು ಜೀವನದ ಸುಂದರ ಕೌಟುಂಬಿಕ ಜೀವನದ ಚಿತ್ರಣವೇ ಇಲ್ಲಿ ಪ್ರಧಾನ.

ಮುನ್ನುಡಿಯಲ್ಲಿ ಕಾದಂಬರಿಕಾರ್ತಿ ಹೇಳಿರುವಂತೆ, "ಈ ಕಾದಂಬರಿಯಲ್ಲಿ ಸಾವು-ನೋವುಗಳಿಲ್ಲ; ಕಷ್ಟ-ನಿಷ್ಠುರಗಳಿಲ್ಲ; ಸಾವಿರಾರು ಕೋಟಲೆಗಳ ನಡುವೆಯೂ ಸರಸವಾಗಿ ಹರಿದು ಬಂದ ಜೀವನ ವಾಹಿನಿ ಇದು."

ಇಂದುಮತಿ ಕಾದಂಬರಿಯ ಆರಂಭಕ್ಕೆ ಹದಿನೇಳು ವರ್ಷದ ಕನ್ಯೆ. ಕಾದಂಬರಿ ಮುಕ್ತಾಯಕ್ಕೆ ಅವಳಿಗೆ ಇಳಿವಯಸ್ಸು. ದಿನಚರಿ ರೂಪದಲ್ಲಿ ಅವಳು ಜೀವನದ ಕೆಲವು ರಸಗಳಿಗೆಗಳನ್ನು ಹಂಚಿಕೊಳ್ಳುತ್ತಿರುವುದನ್ನು ಇಲ್ಲಿ ಕಾಣುತ್ತೇವೆ.

ಅತ್ತೆ–ಮಾವ, 'ಇವರ ಪ್ರೀತಿ, ವಾತ್ಸಲ್ಯ ನಾದಿನಿಯ ಸರಸ ಸ್ವಭಾವ ಪತಿಯ ಪ್ರೇಮದಿಂದ ಅವಳ ಜೀವನ ಸುಂದರವಾಗುತ್ತದೆ. ಎರಡು ಗಂಡು ಮಕ್ಕಳನ್ನು ಪಡೆದು ಸುಖ–ಸಂಸಾರ ಹೊಂದುತ್ತಾಳೆ.

ವಿವೇಕಿ ಆದರ್ಶವಾದಿ ವಿದ್ಯಾವಂತ (ಡಾಕ್ಟರ್) ಪತಿಯ ಸಾನ್ನಿಧ್ಯದಲ್ಲಿ ಅವಳ ಜೀವನ ಪಕ್ವವಾಗುತ್ತದೆ. ಗಂಡು ಮಕ್ಕಳಿಬ್ಬರಿಗೂ ಹೆಚ್ಚು ಶಿಕ್ಷಣ ಕೊಡಿಸುತ್ತಾರೆ. ಅವರ ಜೀವನಕ್ಕೆ ಬೇಕಾದ ಎಲ್ಲ ಅನುಕೂಲತೆಗಳನ್ನು ಒದಗಿಸಿ ತಮ್ಮ ಕರ್ತವ್ಯ ನಿರ್ವಹಿಸುತ್ತಾರೆ. ದಂಪತಿಗಳಿಬ್ಬರೂ ಸುಖ ಸಂಸಾರವನ್ನು ಹೊಂದಿ ಕರ್ತವ್ಯ ನಿಷ್ಠ ತಂದೆ–ತಾಯಿಗಳಾಗಿ ತುಂಬು ಜೀವನ ನಡೆಸುತ್ತಾರೆ.

ಕಾದಂಬರಿಯ ಸ್ತ್ರೀ ಪಾತ್ರಗಳಾದ ಅಮ್ಮಯ್ಯ, ರಾಜಮ್ಮ, ಇಬ್ಬರೂ ಸಂಪ್ರದಾಯಸ್ಥರು. ಅವರು ಹಳೆಯ ತಲೆಮಾರಿನವರಾದರೂ ಹೊಸ ಸಮಾಜಕ್ಕೆ ಹೊಂದಿಕೊಳ್ಳುವದರಿಂದ ಅವರ ಕೌಟುಂಬಿಕ ಜೀವನದಲ್ಲಿ ಸುಖ-ಶಾಂತಿ ಇದೆ. ಇದೇ ಮಾತು ಇಂದುಮತಿಯ ತಂದೆ ಹಾಗೂ ವೇಣುವಿನ ತಂದೆ ಅಚ್ಚುತರಾವ್ ಈ ಪಾತ್ರಗಳಿಗೂ ಅನ್ವಯಿಸುತ್ತದೆ.

'ಮನ ತುಂಬಿದ ಮಡದಿ' 'ಕಾದಂಬರಿ' ಇದೊಂದು ಸುಂದರ ಭಾವನಾ ಪ್ರಧಾನ ಕೌಟುಂಬಿಕ ಜೀವನವನ್ನು ಚಿತ್ರಿಸುತ್ತದೆ. ಮೊದಲ ನೋಟಕ್ಕೆ ಕಾದಂಬರಿಯ ವಸ್ತು ವರದಕ್ಷಿಣೆಗೆ ಸಂಬಂಧಿಸಿದಂತೆ ತೋರಿದರೂ ಸಮಸ್ಯೆಯಾಗಿ ಗಂಭೀರವಾಗಿ ಚಿಂತನೆಗೊಳಗಾಗಿಲ್ಲ.

ಕಾದಂಬರಿಯ ನಾಯಕಿ 'ಪ್ರೇಮಾ' ಇಲ್ಲಿ ಕಥೆಯನ್ನು ಹೇಳಿಕೊಂಡು ಹೋಗುತ್ತಾಳೆ. ಕಥಾನಾಯಕಿ ಪ್ರೇಮಾ ಕಾಲೇಜು ಶಿಕ್ಷಣ ಪಡೆದ ವಿದ್ಯಾವಂತ ವರದಕ್ಷಿಣೆ ವಿರೋಧಿ, ತನ್ನ ಮದುವೆ, ದಾಂಪತ್ಯ ಜೀವನದ ಬಗೆಗೆ ಸುಮಧುರ ಕನಸು ಕಟ್ಟಿಕೊಂಡವಳು.

ಸೂರಪ್ಪನವರು ಪ್ರೇಮಳ ತಂದೆಯ ಬಾಲ್ಯದ ಸ್ನೇಹಿತ ಇಬ್ಬರೂ ಒಂದೇ ಊರಿನಲ್ಲಿ ಅಕ್ಕ-ಪಕ್ಕದಲ್ಲಿ ಇರುವದರಿಂದ ಎಂದಿಗೂ ಅವರಲ್ಲಿ ಆತ್ಮೀಯತೆ ಸಲಿಗೆ ಇದೆ. ಸೂರಪ್ಪನವರು ಸ್ನೇಹಿತನ ಕುಟುಂಬದ ಒಳಿತಿಗಾಗಿ ಹಗಲಿರುಳೂ ಚಿಂತಿಸುತ್ತಾರೆ. ಪ್ರೇಮಳ ಅಕ್ಕನಿಗೂ ಸೂರಪ್ಪನವರೇ ಒಳ್ಳೆಯ ವರನನ್ನು ಹುಡುಕಿದ್ದರು. ಪ್ರೇಮಳಿಗೂ ಯೋಗ್ಯನಾದ ವಿನಯಶೀಲ ಇಂಜಿನೀಯರ್ ವರನನ್ನೇ ಆಯ್ಕೆ ಮಾಡುತ್ತಾರೆ.

ಕಥಾನಾಯಕಿ ಪ್ರೇಮಾ ಸುಂದರ ರೂಪದ ನಗುಮುಖದ 'ಸುಂದರ'ನನ್ನು ಮೆಚ್ಚಿಕೊಳ್ಳುತ್ತಾಳೆ. ಹೆಚ್ಚು ಖರ್ಚಿಲ್ಲದೆ ಮದುವೆಯೂ ನಡೆದು ಹೋಗುತ್ತದೆ. ಅತ್ತೆಯ ಮನೆಯ ಸರಳ ಸಜ್ಜನಿಕೆಯ ಆತ್ಮೀಯ ವಾತಾವರಣದಲ್ಲಿ ಅವಳ ದಾಂಪತ್ಯ

ಜೀವನ ಸುಂದರವಾಗಿ ಅರಳುತ್ತದೆ. ಸುಂದರ, ಮಾವನಿಂದ ಎರಡು ಸಾವಿರ ರೂಪಾಯಿ ಪಡೆದು ಸ್ವಂತ ಉದ್ಯೋಗ ಆರಂಭಿಸುತ್ತಾನೆ ಅದರಲ್ಲಿ ಲಾಭವಾಗಿ ದೊಡ್ಡ ಬಂಗಲೆ, ಕಾರು, ಮನೆ ತುಂಬ ಆಳು-ಕಾಳು ಇಷ್ಟಿದ್ದರೂ ತನ್ನ ಗಂಡ ತನ್ನ ತಂದೆಯಿಂದ ಪಡೆದ ಹಣವನ್ನು ಹಿಂತಿರುಗಿ ಕೊಟ್ಟಿಲ್ಲವೆಂದು ಚಿಂತೆ ಸ್ವಭಾವತಃ ವಿವೇಕಿಯಾದ ಸುಂದರ ಪ್ರೇಮಾಳ ತಂಗಿ ಶ್ಯಾಮಲೆಯ ಮದುವೆಯ ಹೊತ್ತಿಗೆ ಗುಟ್ಟಾಗಿ ಏಳು ಸಾವಿರ ರೂಪಾಯಿಗಳನ್ನು ಕೊಟ್ಟಿರುತ್ತಾನೆ. ಈ ವಿಷಯ ಪ್ರೇಮಾಳಿಗೆ ಸೂರಪ್ಪನವರಿಂದ ತಿಳಿಯುತ್ತದೆ. ಮನದಲ್ಲಿದ್ದ ಚಿಂತೆ ದೂರಾಗುತ್ತದೆ. ತನಗೆ ಆದರ್ಶ, ವಿನಯಶೀಲ, ವಿದ್ಯಾವಂತ ಪತಿ ದೊರೆತುದಕ್ಕಾಗಿ ತೃಪ್ತಿಪಟ್ಟುಕೊಳ್ಳುತ್ತಾಳೆ. ಸುಂದರನ ಮನೆ ಮನಗಳನ್ನು ತುಂಬಿದ ಪ್ರೇಮದ ಮಡದಿ ಇರುತ್ತಾಳೆ.

ರಸವಾಹಿನಿ ಹಾಗೂ ಮನ ತುಂಬಿದ ಮಡದಿ ಈ ಎರಡೂ ಕಾದಂಬರಿಗಳಲ್ಲಿ ಹೆಣ್ಣಿನ ಮಧುರ ಭಾವನೆಗಳನ್ನು ಲೇಖಕಿ ನವಿರಾಗಿ ಚಿತ್ರಿಸಿದ್ದಾರೆ. ತೆಳುವಾದ ಕಡಿಕೆಯ ಮೇಲೆ ಚೆಲುವಾಗಿ ಕಾದಂಬರಿಯನ್ನು ಬೆಳೆಸಿದ್ದಾರೆ. ಇವೆರಡೂ ಕಾದಂಬರಿಗಳೂ ಸರಾಗವಾಗಿ ಓದಿಸಿಕೊಂಡು ಹೋಗುತ್ತವೆ.

'ಒಂದೇ ನಿಮಿಷ' :

ಮಕ್ಕಳಿಲ್ಲದ ಮನೆತನದಲ್ಲಿ ನಡೆದ ಕತೆ ಈ ಕಾದಂಬರಿಯ ವಸ್ತು. ಮನೋವಿಶ್ಲೇಷಣೆ ಈ ಕಾದಂಬರಿಯಲ್ಲಿ ಪ್ರಮುಖವಾಗಿ ಕಾಣಿಸಿಕೊಳ್ಳುತ್ತದೆ ಒಂದು ನಿಮಿಷದಲ್ಲಿ ನಡೆದ ಘಟನೆ ಇಡೀ ಕುಟುಂಬದಲ್ಲಿ ಹಲವು ಸಮಸ್ಯೆಗಳಿಗೆ ಕಾರಣವಾಗುತ್ತದೆ.

'ರವಿ ಕಾಣದ್ದನ್ನು ಕವಿ ಕಾಣುತ್ತಾನೆ' ಎಂಬ ನಾಣ್ಣುಡಿಯನ್ನು ಒಪ್ಪುವಿರಾದರೆ ನನ್ನ ಈ ಕಾದಂಬರಿಯನ್ನು ಒಪ್ಪುವಿರಿ ಎಂದು ಲೇಖಕಿ ಮುನ್ನುಡಿಯಲ್ಲಿ ಹೇಳಿದ್ದಾರೆ.

ಕಲ್ಯಾಣಮ್ಮನವರಿಗೆ ಸೌಮ್ಯ, ಇಂದುಶೇಖರ, ಆದಿತ್ಯ ಎಂಬ ಮೂರು ಜನ ಗಂಡು ಮಕ್ಕಳು. ಒಬ್ಬಳು ಹೆಣ್ಣುಮಗಳು ರಾಣಿ, ವರದ, ಜಮುನಾ, ವೀಣಾ, ಮೂವರು ಸೊಸೆಯಂದಿರು. ಅಣ್ಣತಮ್ಮಂದಿರಲ್ಲಿ ಓರಗಿತ್ತಿಯರಲ್ಲಿ ಅನ್ಯೋನ್ಯತೆ ಇರುತ್ತದೆ. ಇಷ್ಟೆಲ್ಲ ಸುಖಸಮೃದ್ಧಿಯಿದ್ದರೂ ಆ ಮನೆತನಕ್ಕಿದ್ದ ಒಂದೇ ಒಂದು ಕೊರಗು ಮಕ್ಕಳಿಲ್ಲದ್ದು. ಮೂರು ಜನ ಸೊಸೆಯಂದಿರು ತಜ್ಞವೈದ್ಯರಲ್ಲಿ ತೋರಿಸುತ್ತಾರೆ. ಮೂರು ಜನ ಸೊಸೆಯರಲ್ಲೂ ಸಂತಾನ ಶಕ್ತಿಯಿದ್ದು ಗಂಡಸರಲ್ಲೇ ದೋಷವಿದೆಯೆಂದು ಸ್ಪಷ್ಟವಾಗಿ ಹೇಳುತ್ತಾರೆ.

ತಮ್ಮ ಮಕ್ಕಳಲ್ಲಿಯೇ ದೋಷವಿರಬಹುದೆಂದು ಸಂದೇಹ ಕಲ್ಯಾಣಮ್ಮನವರಿಗೆ ಬಂದರೂ ಅದನ್ನು ತೋರಿಸಿಕೊಳ್ಳುವುದಿಲ್ಲ. ಹಿಗಿದ್ದಾಗ ಕಿರಿಯಸೊಸೆ ವೀಣಾ ಅನಿರೀಕ್ಷಿತವಾಗಿ ಗರ್ಭಿಣಿಯಾಗುತ್ತಾಳೆ. ಗುಣಶೀಲಸಂಪನ್ನೆಯಾದ ವೀಣಾಳ ಬಗೆಗೆ

ಯಾರೂ ಸಂದೇಹ ಪಡುವುದಿಲ್ಲ. ಗಂಡು ಮಗುವಿನ ತಾಯಿಯಾಗುತ್ತಾಳೆ. ಕುಲ ದೀಪಕನ ಆಗಮನದಿಂದ ಅಪರ ಮನೆ ಸಂತಸದ ಹೊನಲಾಗುತ್ತದೆ. ಇಷ್ಟೆಲ್ಲ ಸುಖ ಸಂತೋಷದ ನಡುವೆಯೂ ವೀಣಾಳ ಮನಸ್ಸಿನಲ್ಲಿ ಒಂದು ಕೊರಗು ಉಳಿದು ಅವಳು ಮನೋರೋಗಿಯಾಗುತ್ತಾಳೆ. ಅದೇ ಅವಳು ಗರ್ಭಿಣಿಯಾಗಿ ಪ್ರಕಾಶನಿಗೆ ಜನ್ಮ ಕೊಟ್ಟಿದ್ದು ಆ ರಹಸ್ಯವನ್ನು ಅವಳು ಕೊನೆಯವರೆಗೂ ಕಾಪಾಡಿಕೊಂಡು ಬರುತ್ತಾಳೆ. ಈ ರಹಸ್ಯದಿಂದಾಗಿ 'ಪ್ರಕಾಶ–ವಾಸಂತಿ' ಅಣ್ಣತಂಗಿಯರು ದಂಪತಿಗಳಾಗಲು ಕಾರಣ ವಾಗುತ್ತದೆ,

ಈ ರಹಸ್ಯವನ್ನು ಓದುಗರ ಕುತೂಹಲ ಉಳಿಯುವಂತೆ ಲೇಖಕಿ ಕಾದಂಬರಿಯ ಬೆಳವಣಿಗೆ ಮಾಡಿದ್ದಾರೆ. 'ವೀಣಾ' ಹೇಗೆ ಗರ್ಭಿಣಿಯಾದದ್ದು ಎಂಬುದೇ ಇಲ್ಲಿರುವ ರಹಸ್ಯ. ವೀಣಾಳ ಜೀವನದಲ್ಲಿ ಅನಿರೀಕ್ಷಿತವಾಗಿ ಘಟನೆಯೊಂದು ನಡೆದು ಅವಳು ಗರ್ಭಿಣಿಯಾಗುತ್ತಾಳೆ. ಅದನ್ನು ಹಿಂಜಿ ತೆಳುವಾಗಿ ಹಬ್ಬಿಸಿದ್ದೇ ಲೇಖಕಿಯ ಚಾತುರ್ಯವಿದೆ. ಈ ರಹಸ್ಯ ಕಾದಂಬರಿಯ ಕೊನೆಯಲ್ಲಿ ಬಯಲಾಗಿದೆ.

ವೀಣಾ ಒಮ್ಮೆ ತೌರುಮನೆಯಿಂದ ಅತ್ತೆಯ ಮನೆಗೆ ಹಿಂತಿರುಗುವಾಗ ಜೋರಾಗಿ ಮಳೆ ಪ್ರಾರಂಭವಾಗುತ್ತದೆ. ಮನೆಯೊಂದರ ಚಪ್ಪರದಡಿ ನಿಲ್ಲುತ್ತಾಳೆ. ಆ ಮನೆಯ ಪುರುಷ ಮಳೆಯಲ್ಲಿ ತೋಯಿಸಿಕೊಂಡು ನಡುಗುತ್ತಿದ್ದ ವೀಣಾಳನ್ನು ಮನೆಯೊಳಗೆ ಕರೆಯುತ್ತಾನೆ. ಅವಳಿಗೆ ಕುಡಿಯಲು ಕಾಫಿ ಕೊಟ್ಟು ಉಪಚಾರ ಮಾಡುತ್ತಾನೆ. ಮಳೆ ಜೋರಾಗಿ ಬೀದಿಯ ದೀಪಗಳೆಲ್ಲ ಆರಿ ಹೋಗುತ್ತವೆ. ವೀಣಾಳ ಹೃದಯ ಹೆಂಗಸ ರಿಲ್ಲದ ಆ ಮನೆಯಲ್ಲಿ ಭೀತಿಯಿಂದ ನಡುಗುತ್ತದೆ. ಅವಳ ಮನಸ್ಸು ಅಸ್ತವ್ಯಸ್ತವಾಗು ತ್ತದೆ. ಅಲ್ಲಿಂದ ಹೊರಡಲು ನಿರ್ಧರಿಸಿದಾಗ ಆ ಪುರುಷ ಒಳ್ಳೆಯ ಭಾವನೆಯಿಂದಲೇ ಕೈ ಹಿಡಿದು ಹೊರಗೆ ಕತ್ತಲಲ್ಲಿ ಹೋಗದಂತೆ ತಡೆಯಲು ಪ್ರಯತ್ನಿಸುತ್ತಾನೆ. ಪರಿ ಸ್ಥಿತಿಯ ಒತ್ತಡಕ್ಕೆ ಸಿಕ್ಕು ಇಬ್ಬರೂ ತಮ್ಮ ಸಂಯಮವನ್ನು ಕಳೆದುಕೊಳ್ಳುತ್ತಾರೆ. ಈ ಘಟನೆಯೇ ವೀಣಾ ಗರ್ಭಿಣಿಯಾಗಲು ಕಾರಣ.

ಆಕಸ್ಮಿಕವಾಗಿ ಗರ್ಭಿಣಿಯಾದ ವೀಣಾ ಪಾಪ ಪ್ರಜ್ಞೆಯಿಂದ ತೊಳಲುತ್ತಾಳೆ. ವೀಣಾಳ ಮಗ ಪ್ರಕಾಶ ತನಗರಿವಿಲ್ಲದಂತೆ ತನ್ನ ಜನನಕ್ಕೆ ಕಾರಣವಾದ ವ್ಯಕ್ತಿಯ ಮಗಳನ್ನೆ ಮದುವೆಯಾಗಬೇಕಾದ ಸಂದರ್ಭ ಬರುತ್ತದೆ. ಮದುವೆಯ ಸಮಯದಲ್ಲಿ ತನ್ನ ಸೊಸೆಯಾಗಲಿದ್ದ ವಾಸಂತಿಯ ತಂದೆಯ ಭಾವಚಿತ್ರ ವೀಣಾಳ ಕಣ್ಣಿಗೆ ಬೀಳುತ್ತಲೆ ಅವಳು ಪ್ರಜ್ಞೆ ಕಳೆದುಕೊಳ್ಳುತ್ತಾಳೆ.

ಹೀಗೆ ಕಾದಂಬರಿಯ ಘಟನೆಗಳೆಲ್ಲ ಸಿನಿಮಿಯವೆನಿಸುತ್ತದೆ. ವೀಣಾ ಮನೆ ಗೊಂದು ಮಗುವಾಗಲೆಂದು ತನ್ನ ಜೀವನದಲ್ಲಿ ನಡೆದ ಘಟನೆಯನ್ನು ರಹಸ್ಯವಾಗಿಡು ತ್ತಾಳೆ. ಆ ಘಟನೆ ಅವಳ ಸುಪ್ತ ಪ್ರಜ್ಞೆಯಲ್ಲುಳಿದು ಅವಳು ಮನೋರೋಗಿಯಾಗು ತ್ತಾಳೆ. ಅವಳ ಮಾನಸಿಕ ತೊಳಲಾಟ ಸಮರ್ಪಕವಾಗಿದೆ. ಮಳೆ, ಗುಡುಗು, ಸಿಡಿಲುಗಳ

ರಭಸದಲ್ಲಿಯೇ ಆ ಘಟನೆ ನಡೆಯುವದರಿಂದ ಗುಡುಗು, ಸಿಡಿಲು, ಜೋರಾದಾಗ ಅವಳು ಬೆಚ್ಚಿಬೀಳುತ್ತಾಳೆ. ಅವಳ ಪತಿ ಆದಿತ್ಯ ಪ್ರಕಾಶನನ್ನು 'ನಿನ್ನ ಮಗ' ಎಂದು ಹೇಳಿದಾಗ ಆತಂಕಗೊಳ್ಳುತ್ತಾಳೆ. ತನ್ನ ಗರ್ಭಧಾರಣೆಗೆ ಕಾರಣನಾದ ಪುರುಷನ ಫೋಟೊ ಕಣ್ಣಿಗೆ ಬಿದ್ದಾಗ ಅವಳಿಗೆ 'ಶಾಕ್' ಆಗಿ ಪ್ರಜ್ಞೆ ಕಳೆದುಕೊಳ್ಳುತ್ತಾಳೆ. ಸುಪ್ತ ಚಿತ್ತದಲ್ಲಿದ್ದ ನೆನಪನ್ನು ಫೋಟೋ ಜಾಗ್ರತಗೊಳಿಸುತ್ತದೆ.

ವಿಜ್ಞಾನದಲ್ಲಿ ಪದವೀಧರನಾಗಿದ್ದೂ ಆದಿತ್ಯ ತನ್ನ ಹೆಂಡತಿ ಗರ್ಭಧಾರಣೆಯ ಬಗೆಗೆ ಯೋಚಿಸುವದಿಲ್ಲ. ಅವಳನ್ನು ಮನೋವೈದ್ಯರಿಗೆ ತೋರಿಸಿದ್ದರೆ ಸಮಸ್ಯೆ ಇಲ್ಲಿ ಗಂಭೀರವಾಗುತ್ತಿತ್ತು. ಲೇಖಕಿ ನಡೆದ ಘಟನೆಯ ಮೇಲಷ್ಟೇ ಗಮನವಿಟ್ಟಿರುವದರಿಂದ 'ಸಮಸ್ಯೆ'ಯನ್ನು ಎಲ್ಲಾ ಮಗ್ಗುಲಗಳಿಂದ ನೋಡಿಲ್ಲ. ಅನಿರೀಕ್ಷಿತವಾಗಿ ವ್ಯಕ್ತಿಗಳ ಜೀವನದಲ್ಲಿ ನಡೆದ ಘಟನೆಗಳು ಕುಟುಂಬದಲ್ಲುಂಟುಮಾಡುವ ಪರಿಣಾಮವನ್ನು ಇಲ್ಲಿ ಕಾಣುತ್ತೇವೆ.

'ಹೆಣ್ಣಿನ ಆಕಾಂಕ್ಷೆ' :

ಶ್ರೀಮತಿ ಎಂ. ಕೆ. ಇಂದಿರಾ ಅವರ ಈ ಕಾದಂಬರಿ ೧೯೬೩ರ 'ಮಲ್ಲಿಗೆ' ಮಾಸ ಪತ್ರಿಕೆಯಲ್ಲಿ ಎರಡು ವರ್ಷಗಳವರೆಗೆ ಧಾರಾವಾಹಿಯಾಗಿ ಪ್ರಕಟವಾಗಿ ೧೯೬೭ರಲ್ಲಿ ಪುಸ್ತಕರೂಪದಲ್ಲಿ ಪ್ರಥಮಮುದ್ರಣ ಕಂಡಿದೆ. ಸಂಸಾರದ ಕಷ್ಟ-ಸುಖಗಳನ್ನು ಇಲ್ಲಿ ಚಿತ್ರಿಸಿದ್ದಾರೆ.

"ನನ್ನ ಈ ಕಾದಂಬರಿಯನ್ನು ಮೊದಲು ಧಾರಾವಾಹಿಯಾಗಿ ಹರಿಯಬಿಟ್ಟವರು ನಾಡಿಗೇರರು. ಮತ್ತು 'ಹೆಣ್ಣಿನ ಆಕಾಂಕ್ಷೆ' ಎಂದು ನಾಮಕರಣ ಮಾಡಿದವರೂ ಅವರೇ. ಆಗಿನ ಕಾಲಕ್ಕೆ ಹೆಚ್ಚು ಎನ್ನಬಹುದಾದಷ್ಟು ಮೌಲ್ಯವನ್ನು ಶ್ರೀ ಬಿ. ಎಸ್. ಗುಪ್ತ ಅವರಿಂದ ನನಗೆ ಕೊಡಿಸಿದವರು ಅವರೇ ಪ್ರತಿ ವರ್ಷದ ದೀಪಾವಳಿ ಸಂಚಿಕೆಗೆ ನನ್ನ ಕತೆ, ಲೇಖನಗಳನ್ನು ತೆಗೆದುಕೊಂಡು ಪ್ರಕಟಿಸಿದರು.[1] ಎಂದು ಇಂದಿರಾ ಅವರು ನಾಡಿಗೇರ ಕೃಷ್ಣರಾಯರಿಂದ ತಮಗೆ ದೊರೆತ ಪ್ರೋತ್ಸಾಹ ವನ್ನು ಅಭಿಮಾನದಿಂದ ನೆನೆದಿದ್ದಾರೆ. ಇಂದಿರಾ ಅವರು ೧೯೬೩ರಲ್ಲಿಯೇ ಪ್ರಥಮ ಕಾದಂಬರಿ 'ತುಂಗಭದ್ರ'ದಿಂದ ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿದ್ದರು. ಅದೇ ವರ್ಷವೇ ನಾಡಿಗೇರ ಕೃಷ್ಣರಾಯರ ಪ್ರೋತ್ಸಾಹದಿಂದ 'ಹೆಣ್ಣಿನ ಆಕಾಂಕ್ಷೆ' ಧಾರಾ ವಾಹಿಯಾಗಿ ಬೆಳಕಿಗೆ ಬಂದಿತು.

ಅನಂತಯ್ಯನವರ ಸಂಸಾರದ ಕತೆ ಇಲ್ಲಿದೆ. ಅವರ ಸಂಸಾರದಲ್ಲಿ ಒಂದರ ಮೇಲೊಂದು ದುರ್ಘಟನೆಗಳು ನಡೆದು ಅವರ ಮೊಮ್ಮಗಳು ವಂಶದ ಏಕೈಕ ಕುಡಿ ಲೋಲಳ ಮದುವೆಯಲ್ಲಿ ಕಾದಂಬರಿ ಮುಕ್ತಾಯವಾಗುತ್ತದೆ. ಮಕ್ಕಳ ಸಾವು,

---

1. ಎಂ. ಕೆ. ಇಂದಿರಾ 'ನಾಡಿಗೇರ ಸಂಭಾವನಾ ಗ್ರಂಥ' ಪುಟ-101.

ಹೆಂಡತಿಯ ಸಾವು, ಸೊಸೆ, ನಂತರ ಮಗ ಇವರೆಲ್ಲರೂ ಸಾವಿನಿಂದಾದ ನೋವನ್ನು ಸಹಿಸುತ್ತಾರೆ. ಬಂದ ಕಷ್ಟಗಳಿಗೆಲ್ಲ ಎದೆಯೊಡ್ಡುತ್ತಾರೆ. ಮೊಮ್ಮಗಳಿಗಾಗಿ ಎಲ್ಲ ನೋವನ್ನು ನುಂಗಿ ಬದುಕುತ್ತಾರೆ. ಅವರ ಮದುವೆಯಾಗಿ ಒಂದು ಮಗುವಿನ ತಾಯಿಯಾಗುವ ಸೂಚನೆ ದೊರೆತಾಗ ಸಮಾಧಾನ ನಿಟ್ಟುಸಿರು ಬಿಡುತ್ತಾರೆ. 'ಹೆಣ್ಣಿನ ಆಕಾಂಕ್ಷೆ' ಹೆಸರೇ ಸೂಚಿಸುವಂತೆ ಹೆಣ್ಣಿನ ಕಷ್ಟ-ಸುಖಗಳನ್ನು ಪದರು ಪದರುಗಳಲ್ಲಿ ಚಿತ್ರಿಸಿದ್ದಾರೆ.[2] ಹೇರಳವಾದ ಆಸ್ತಿಯುಳ್ಳ ಅನಂತಯ್ಯನವರದು ಸಮೃದ್ಧ ಕುಟುಂಬ. ಹಿರಿಯ ಮಗಳು ಲಲಿತೆಯ ಮದುವೆ ನಿಶ್ಚಯವಾದಾಗ ಮದುವೆ ಹಿಂದಿನ ರಾತ್ರಿ ಮಹಡಿ ಇಳಿಯುವಾಗ ಕಾಲು ಜಾರಿ ಬಿದ್ದು ಮೂಗು ಒಡೆದು ಸಾವಿಗೀಡಾಗುತ್ತಾಳೆ. ಇದು ಅನಂತಯ್ಯನವನ ಬದುಕಿನಲ್ಲಾದ ಮೊದಲ ಆಘಾತ. ಅಂಜುತ್ತ, ಅಳುಕುತ್ತ ಎರಡನೆಯ ಮಗಳು ಜಯಳ ಮದುವೆಯನ್ನು ನಿಶ್ಚಯಿಸುತ್ತಾರೆ. ಮದುವೆ ಎಂಟು ದಿನಗಳಿವೆ ಎನ್ನುತ್ತಿರುವಾಗ ಗಂಟಲು ನೋವು ಕಾಣಿಸಿಕೊಳ್ಳುತ್ತದೆ. ಔಷಧೋಪಚಾರವೆಲ್ಲ ವ್ಯರ್ಥವಾಗಿ ಉಸಿರು ಕಟ್ಟಿ ಸಾಯುತ್ತಾಳೆ. ಎರಡುಬಾರಿ ಧನಹಾನಿ, ಮಾನಹಾನಿ, ಪ್ರಾಣಹಾನಿಯಾಗಿ ಇಬ್ಬರು ಮಕ್ಕಳನ್ನು ಕಳೆದುಕೊಂಡ ಅನಂತಯ್ಯನವರು ದಿಙ್ಮೂಢರಾಗುತ್ತಾರೆ. ಮದುವೆ ಎಂದರೆ ಅಂಜುವಂತಾಗುತ್ತದೆ. ಅವರ ಪತ್ನಿ ಮೀನಾಕ್ಷಮ್ಮನವರು ಈ ಆಘಾತಗಳ ಹೊಡೆತದಿಂದ ಚೇತರಿಸಿಕೊಳ್ಳಲು ಸಾಧ್ಯವಾಗದೆ ಕೆಲವೇ ದಿನಗಳಲ್ಲಿ ಮರಣ ಹೊಂದುತ್ತಾರೆ. ಉಳಿದವನೆಂದರೆ ಕಿರಿಯಮಗ ರಂಗಸ್ವಾಮಿಯೊಬ್ಬನೇ. ಉಳಿದೊಂದು ಕರುಳಿನ ಕುಡಿಗಾಗಿ ತಮ್ಮ ಪ್ರಾಣವನ್ನು ಹಿಡಿದು ಅನಂತಯ್ಯನವರು ಬದುಕುತ್ತಾರೆ.

ಈ ಕುಟುಂಬದ ಎಲ್ಲ ಕಷ್ಟ ಸುಖಗಳಿಗೆ ಬೆನ್ನುಕೊಟ್ಟು ಅನಂತಯ್ಯನವರ ಸೋದರಿ ಪಾತಮ್ಮ ಹಾಗೂ ದಿಕ್ಕಿಲ್ಲದ ವಿಧವೆ ನಾಗು ಇವರ ಕತೆಯೂ ಕಾದಂಬರಿಯಲ್ಲಿ ಹೆಣೆದುಕೊಂಡಿದೆ. ಅವರ ಆಶ್ರಯದಲ್ಲಿದ್ದ ನಾಗು ಹಾಗೂ ಪಾತಮ್ಮ ಇಬ್ಬರೂ ರಂಗಸ್ವಾಮಿಗಾಗಿ ಎಲ್ಲ ದುಃಖವನ್ನು ಸಹಿಸುತ್ತಾರೆ.

ರಂಗಸ್ವಾಮಿಯ ಸ್ನೇಹಿತ ರಾಧಾಕೃಷ್ಣನ ಮದುವೆಗೆ ಹೋದಾಗ ಅಲ್ಲಿನ 'ಕನ್ನಿಕಾಪರಮೇಶ್ವರಿ' ದೇವಾಲಯದ ಅರ್ಚಕರ ಮಗಳಾದ ಮಂಗಳೆಯನ್ನು ಮೆಚ್ಚಿಕೊಳ್ಳುತ್ತಾನೆ. ರಂಗಸ್ವಾಮಿಯ ಮದುವೆ ಮಂಗಳೆಯೊಡನೆ ಹಿರಿಯರ ಸಮ್ಮುಖದಲ್ಲಿ ನಡೆದು ಹೋಗುತ್ತದೆ. ಮಂಗಳೆ ಬಡವರ ಮನೆಯ ಹುಡುಗಿಯಾದರೂ ಗುಣವಂತೆ. ಮಂಗಳೆ ಅನಂತಯ್ಯನವರ ಮನೆಯ ಗೃಹಲಕ್ಷ್ಮಿಯಾಗುತ್ತಾಳೆ. ರಂಗಸ್ವಾಮಿಯ ಸುಂದರ ಜೀವನವನ್ನು ಕಂಡು ಹಿರಿಯರು ನೆಮ್ಮದಿ ಕಾಣುತ್ತಾರೆ. ಅವರಿಗೆ ಹುಟ್ಟಿದ ಮಗಳು ಲೋಲ, ಲೋಲಳ ಆಟ-ಪಾಟದಲ್ಲಿ ಹಿರಿಯರು ತಮ್ಮ

2. ಹಾ.ಮಾ.ನಾ. 'ಕನ್ನಡ ನುಡಿ' ಸಂಪುಟ-20, ಸಂಚಿಕೆ-11 ನವಂಬರ್ 1967 ಪು-24.

ದುಃಖ-ದುಮ್ಮಾನಗಳನ್ನು ಮರೆಯುತ್ತಾರೆ. ಮಂಗಳೆ ಎರಡನೆಯ ಬಾರಿ ಗರ್ಭಿಣಿಯಾದಾಗ ಅನಾರೋಗ್ಯ, ಸುಸ್ತು ಕಾಣಿಸಿಕೊಳ್ಳುತ್ತದೆ. ಹೆರಿಗೆಯಲ್ಲಿ ತಾಯಿ ಹಾಗೂ ಹುಟ್ಟಿದ ಮಗು ಇಬ್ಬರೂ ತೀರಿಹೋಗುತ್ತಾರೆ. ಆ ದೊಡ್ಡ ಸಂಸಾರಕ್ಕೆ ಉಳಿದ ಒಂದೇ ಒಂದು ದೀಪವೆಂದರೆ ಲೋಲ.

ಸೋಮಣ್ಣ ಚಂದ್ರಮೌಳಿ, ಶೇಷಗಿರಿರಾಯರು ಅನಂತಯ್ಯನವರ ಕುಟುಂಬದ ಹಿತೈಷಿಗಳು. ಅವರೆಲ್ಲ ಅನಂತಯ್ಯನವರಿಗೂ ರಂಗಸ್ವಾಮಿಗೂ ಸಮಾಧಾನ ಹೇಳುತ್ತಾರೆ.

"ಮೊದಲೇ ನಿಶ್ಯಕ್ತರಾದ ಅನಂತಯ್ಯನವರು ಕೊರಗಿ ಕಡ್ಡಿಯಾದರು. ಪಾತಮ್ಮನವರು ಗಡಿಯಾರದಂತೆ ಕರ್ತವ್ಯ ಜರುಗಿಸಿದರು. ಅವರ ಅಂತರಂಗದ ವಿಪ್ಲವ ಜಗದೊಡಯನಿಗೆ ವಿದಿತ.[1]

ನಾಗು ದಿಕ್ಕು ತೋರದೆ ಮತ್ತೆ ತನ್ನ ಕೆಲಸದಲ್ಲಿ ತೊಡಗುತ್ತಾಳೆ, ಮೇಲಿಂದ ಮೇಲೆ ಸಂಭವಿಸಿದ ಸಾವಿನಿಂದ ಭೀತಿಗೊಂಡ ಅನಂತಯ್ಯನವರು ಹಳೆಯ ಮನೆಯನ್ನು ಬಿಟ್ಟು ಹೊಸ ಮನೆಗೆ ಬರುತ್ತಾರೆ. ರಂಗಸ್ವಾಮಿ ಮಗಳಿಗೆ ಯಾವ ಕೊರತೆಯೂ ಬರದಂತೆ ನೋಡಿಕೊಳ್ಳುತ್ತಾನೆ. ಲೋಲ, ನಾಗೂ ಹಾಗೂ ಪಾತಮ್ಮನವರ ಆರೈಕೆಯಲ್ಲಿ ಬೆಳೆದು ದೊಡ್ಡವಳಾಗುತ್ತಾಳೆ. ಸುಮಿತ್ರೆ, ಮಾಲತಿ, ಅವಳ ಗೆಳತಿಯರು ಶಿವಮೊಗ್ಗೆಯಲ್ಲಿ ಕಾಲೇಜು ಸೇರುತ್ತಾಳೆ.

ರಂಗಸ್ವಾಮಿ ಒಂದು ದಿನ ಸೋಮಣ್ಣನ ಕೆಲಸಕ್ಕಾಗಿ ಶಿಕಾರಿಪುರಕ್ಕೆ ಕಾರಿನಲ್ಲಿ ಹೊರಡುತ್ತಾರೆ. ಮರಳಿ ಬರುವಾಗ 'ಹೊನ್ನಾಳಿ'ಯ ಸಮೀಪದಲ್ಲಿ ಗುಡುಗು ಸಿಡಿಲುಗಳ ಆರ್ಭಟ ಜೋರಾಗುತ್ತದೆ. ಕಾರು ಕೆಟ್ಟು ನಿಲ್ಲುತ್ತದೆ. ಕಾರನ್ನು ಸರಿಪಡಿಸಿ ಇನ್ನೇನು ಹತ್ತಬೇಕು ಎನ್ನುವಷ್ಟರಲ್ಲಿ ಬಿರುಗಾಳಿ ಬೀಸಿ ಎತ್ತರವಾದ ಮರದಿಂದ ಬಿಲ್ವಪತ್ರೆಯ ಕಾಯೊಂದು ಬೀಸಿ ಬಂದು ರಂಗಸ್ವಾಮಿಯ ನೆತ್ತಿಯನ್ನಪ್ಪಳಿಸುತ್ತದೆ. ಆ ಪೆಟ್ಟಿನಲ್ಲಿಯೇ ಅವರ ಪ್ರಾಣಪಕ್ಷಿ ಹಾರಿ ಹೋಗುತ್ತದೆ.

ಅನಂತಯ್ಯನವರಿಗೆ ಇದು ಚೇತರಿಸಿಕೊಳ್ಳಲಾರದ ಪೆಟ್ಟು. ಇಲ್ಲಿಯವರೆಗೆ ಕಾದಂಬರಿಯಲ್ಲಿ ದುರ್ಘಟನೆಗಳು ಸಂಭವಿಸುತ್ತವೆ. ಮುಂದೆ ಲೋಲಳ ಕತೆಗೆ ಹೆಚ್ಚಿನ ಪ್ರಾಧಾನ್ಯ ದೊರಕಿದೆ. ವಿದ್ಯಾಭ್ಯಾಸಕ್ಕಾಗಿ ಲೋಲ ಬೆಂಗಳೂರಿಗೆ ಹೊರಡುತ್ತಾಳೆ. ಗೆಳತಿ ಸುಮಿತ್ರೆಯ ಮನೆಯಲ್ಲಿ ಇದ್ದ ದಿಕ್ಕಿಲ್ಲದ ಯುವಕ ಶಾಂತ ಮುರಲಿಯ ಸ್ವಭಾವವನ್ನು ಮೆಚ್ಚಿಕೊಳ್ಳುತ್ತಾಳೆ. ಸುಮಿತ್ರೆ ಅವಳ ಗಂಡ ಭಾಸ್ಕರ ಲೋಲ-ಮುರಲಿಯ ಮದುವೆ ನಡೆಯುವಂತೆ ಹಿರಿಯರಿಗೆ ತಿಳಿಸಿ ಏರ್ಪಾಡು ಮಾಡುತ್ತಾರೆ. ಮೊಮ್ಮಗಳ ಸಂಸಾರ ಕಂಡು ಅನಂತಯ್ಯ ನೆಮ್ಮದಿ ಹೊಂದುತ್ತಾರೆ.

1. ಎಂ. ಕೆ. ಇಂದಿರಾ 'ಹೆಣ್ಣಿನ ಆಕಾಂಕ್ಷೆ' ಪುಟ-30.

ಈ ಕಾದಂಬರಿಯ ಗಟ್ಟಿ ಪಾತ್ರಗಳೆಂದರೆ ಅನಂತಯ್ಯ, ಹಾಗೂ ಪಾತಮ್ಮ ನಾಗು ಈ ಮೂವರೂ ಬದುಕಿನಲ್ಲಿ ಅಪಾರ ನೋವುಂಡವರು. ದುಃಖವೊಂದೇ ಇವರ ಪಾಲಿಗಿದೆ. ಅನಂತಯ್ಯನವರ ಸಂಸಾರದ ಕಷ್ಟ-ಕೋಟಲೆಗಳಲ್ಲಿ ಭಾಗಿಯಾಗಿ ಆ ಸಂಸಾರದ ನೆಮ್ಮದಿಗಾಗಿ ಸದಾ ದುಡಿಯುವ ನಾಗು, ಪಾತಮ್ಮ ಓದುಗರ ಗಮನ ಸೆಳೆಯುತ್ತಾರೆ. ಅನಂತಯ್ಯನವರ ಮೌನ, ನಿಟ್ಟುಸಿರು ಕಾದಂಬರಿಯ ಗಾಂಭೀರ್ಯವನ್ನು ಹೆಚ್ಚಿಸಿವೆ.

ನಾಗುವಿನ ಕರುಣಾಜನಕ ವೃತ್ತಾಂತವನ್ನು ಲೇಖಕಿ ಓದುಗರ ಮನ ಮಿಡಿವಂತೆ ಚಿತ್ರಿಸಿದ್ದಾರೆ. ಅಸಹಾಯಕ ವಿಧವೆಯ ಬಗ್ಗೆ ಲೇಖಕಿ ತೀವ್ರವಾಗಿ ಸ್ಪಂದಿಸಿದ್ದಾರೆ. ಕೇವಲ ನಾಲ್ಕು ವರ್ಷಗಳವರೆಗೆ ಮಾತ್ರ ಗಂಡನೊಡನೆ ಬಾಳ್ವೆ ಮಾಡಿದ ನಾಗು ಹದಿನೆಂಟನೆಯ ವಿಧವೆಯಾಗುತ್ತಾಳೆ. ಕೇಶಮುಂಡನ ಮಾಡಿಸಿ ಕೆಂಪು ಸೀರೆ ಉಡಿಸಿ ಅವಳ ರೂಪವನ್ನು ವಿಕಾರಗೊಳಿಸುತ್ತಾರೆ.

ಅವಳ ಬಾಳು ಓರಗಿತ್ತಿಯ ಮನೆಯ ಚಾಕರಿಗೆ ಮೀಸಲಾಗುತ್ತದೆ. ಓರಗಿತ್ತಿ ಊರಲ್ಲಿಲ್ಲದಾಗ ಅವಳ ಭಾವ ನಿಂಗಪ್ಪನಿಂದಲೇ ಅವಳ ಶೀಲ ಹರಣವಾಗುತ್ತದೆ. ನಾಗು ಗರ್ಭಿಣಿಯಾಗುತ್ತಾಳೆ. ವಿಷಯತಿಳಿದ ಓರಗಿತ್ತಿ ತನ್ನ ಗಂಡನ ಸ್ವಭಾವ ತಿಳಿದಿದ್ದರೂ ನಾಗುವಿನ ಮೇಲೆ ಅಪವಾದ ಹೊರೆಸಿ ಮನೆಯಿಂದ ಹೊರಗೆ ಹಾಕುತ್ತಾಳೆ. ತಾನು ಸಿರಾಳಕೊಪ್ಪಕ್ಕೆ ಹೋದಾಗ ಏನೋ 'ಭಾನಗಡಿ' ಮಾಡಿರಬೇಕೆಂದು ಅವಳ ಮೇಲೆ ತಪ್ಪು ಹಾಕಿ ಮನೆಯಿಂದ ಹೊರಗೆ ಹಾಕಿಸುವುದರಲ್ಲಿ ಮುಂದಾಗುತ್ತಾನೆ. ನಾಲ್ಕು ತಿಂಗಳ ಗರ್ಭಿಣಿ ನಾಗು ತವರಿನ ಆಶ್ರಯಕ್ಕೆ ಬರುತ್ತಾಳೆ. 'ಹೊಳೆ ಬಿದ್ದು ಸಾಯಿ' ಎಂದು ತಾಯಿಯೂ ಕಟು ನುಡಿಗಳನ್ನಾಡುತ್ತಾಳೆ. ತವರುಮನೆ-ಗಂಡನಮನೆ ಯಿಂದ ಬಹಿಷ್ಕೃತಳಾದ ನಾಗು ಸಮಾಜದಿಂದಲೂ ಬಹಿಷ್ಕೃತೆಯಾಗುತ್ತಾಳೆ. ಹೊಳೆ ಯಲ್ಲಿ ಬಿದ್ದು ಜೀವವನ್ನು ಕೊನೆಗಾಣಿಸಬೇಕೆನ್ನುವಷ್ಟರಲ್ಲಿ ಅನಂತಯ್ಯನವರ ಪತ್ನಿ ಮೀನಾಕ್ಷಮ್ಮನವರಿಗೆ ವಿಷಯ ತಿಳಿಯುತ್ತದೆ. ನಾಗುವಿನ ಬಗೆಗೆ ಕನಿಕರಗೊಂಡು ಅವಳಿಗೆ ಆಶ್ರಯ ಕೊಡುತ್ತಾರೆ. ಮೀನಾಕ್ಷಮ್ಮನವರ ಔದಾರ್ಯ ನಾಗುವನ್ನು ಬದುಕಿಗೆ ಎಳೆದು ತರುತ್ತದೆ. ಸೂಲಗಿತ್ತಿಯನ್ನು ಕರೆಸಿ ಬಾಣಂತಿತನ ಮಾಡಿಸುತ್ತಾರೆ. ಅವಳಿಗೆ ಹುಟ್ಟಿದ ಹೆಣ್ಣು ಮಗುವನ್ನು ಸೂಲಗಿತ್ತಿ ಮರಿಯಮ್ಮನಿಗೆ ಸಾಕಲು ಕೊಡುತ್ತಾರೆ.

ನಾನು ತನ್ನ ಹೊಟ್ಟೆಯ ಕಂದನನ್ನು ಪರರಿಗಿತ್ತು ತನ್ನ ಇಡೀ ಬದುಕನ್ನು ಅನಂತಯ್ಯನವರ ಸಂಸಾರದ ಸೇವೆಗೆ ಮೀಸಲಿಡುತ್ತಾಳೆ. ಅಸಹಾಯಕ ಮುಗ್ಧ ಹೆಣ್ಣು ಮಕ್ಕಳ ಬಾಳನ್ನು ತಮ್ಮ ಕ್ಷಣಿಕ ದೈಹಿಕ ಅಪೇಕ್ಷೆಗಾಗಿ ಹಾಳು ಮಾಡಿದ ನಿಂಗಪ್ಪ ನಂತಹವರು ಸಮಾಜದಲ್ಲಿ ಎಂದಿಗೂ ಇದ್ದಾರೆ. ಪುರುಷ ಪ್ರಧಾನ ಸಮಾಜವ್ಯವಸ್ಥೆಯಲ್ಲಿ ಪುರುಷನ ದೌರ್ಜನ್ಯಕ್ಕೆ ಒಳಗಾಗಿ ಜೀವನವನ್ನುಕಣ್ಣೀರಿನಲ್ಲಿ ಕೈತೊಳೆದ ಸ್ತ್ರೀಯರು

ಸಮಾಜದಲ್ಲಿ ಅನೇಕ ಕುಟುಂಬಗಳಲ್ಲಿ ಕಾಣಸಿಗುತ್ತಾರೆ. ಶೀಲಭಂಗ ಮಾಡಿದವನು ಗಂಡಸೇ ಆಗಿದ್ದರೂ ಸಮಾಜವು ಕೇವಲ ಸ್ತ್ರೀಯನ್ನು ತಿರಸ್ಕಾರದಿಂದ ನೋಡುವುದನ್ನು ಕಾಣುತ್ತೇವೆ. ಶೀಲ ನೀತಿ ನಿಯಮಗಳನ್ನು ಹೆಣ್ಣಿಗಷ್ಟೇ ಅಂಟಿಸಿ ನೋಡುತ್ತಾರೆ.

ನಾನು ಪುರುಷನ ದೌರ್ಜನ್ಯಕ್ಕೆ ಒಳಗಾದ ಅಸಹಾಯಕ ಹೆಣ್ಣಿನ ಪ್ರತೀಕ. ಆನಂದಯ್ಯನವರು, ಮೀನಾಕ್ಷಮ್ಮನಂತಹ ವಿಶಾಲ ಹೃದಯದ ವ್ಯಕ್ತಿಗಳು ಮನಸ್ಸು ಮಾಡಿದರೆ ಅವಳು ಬದುಕಲು ಸಾಧ್ಯ.

ಒಂಭತ್ತು ತಿಂಗಳವರೆಗೆ ಹೊತ್ತು ಹೆತ್ತ ಮಗಳೇ ಕೊನೆಗೆ ಡಾಕ್ಟರಳಾಗಿ ತಾನಿದ್ದ ಊರಿಗೆ ಬಂದಾಗಲೂ ಮಗಳನ್ನು ಮಗಳೆಂದು ಕರೆಯುವ ಅಧಿಕಾರ ನಾಗುವಿಗಿಲ್ಲ. ಇದು ನಾಗುವಿನ ಬಾಳಿನಲ್ಲಿ ವಿಧಿ ನಡೆಸಿದ ಕ್ರೂರ ಸಂಚು.

ಈ ಸಂಸಾರದ ಆಧಾರ ಸ್ತಂಭವಾದ ಪಾತಮ್ಮನವರದು ಒಂದು ದಾರುಣ ಕಥೆ. ಒಂಭತ್ತನೆಯ ವರ್ಷಕ್ಕೆ ವಿಧವೆಯಾಗಿ ಅಂಧ ಸಮಾಜದ ಕಪಿಮುಷ್ಟಿಯಲ್ಲಿ ಸಿಲುಕಿ ಪಾತಮ್ಮ ಬದುಕಿನ ಸುಖಗಳಿಂದ ವಂಚಿತರಾಗಿ ಉಳಿದಿದ್ದಾರೆ. ಹದಿನೈದನೆಯ ವರ್ಷಕ್ಕೆ ಕೇಶಮುಂಡನ, ಬಿಳಿಸೀರೆ, ಒಪ್ಪತ್ತೂಟ ಅವರ ಪಾಲಿಗೆ ಶಾಶ್ವತವಾಗುತ್ತದೆ. ಅವರ ಸಹನೆ ಪವಿತ್ರ ಬದುಕು. ಜೀವನಶ್ರದ್ಧೆ ಮಾನವಕೋಟಿಯಲ್ಲಿ ಅವರಿಟ್ಟ ಅಂತಃ ಕರುಣ ಓದುಗರ ಮನದಲ್ಲಿ ಶಾಶ್ವತವಾಗಿ ನಿಲ್ಲುತ್ತದೆ. ಅವರ ಮರಣದ ಸನ್ನಿವೇಶ ವಂತೂ ಓದುಗರ ಭಾವನೆಗಳನ್ನು ಎತ್ತರಕ್ಕೆ ಕೊಂಡೊಯ್ಯುತ್ತದೆ. ಏಕಾದಶಿ, ಸೋಮ ವಾರದಂದು ಅವರ ಮರಣ ಅತ್ಯಂತ ನಿರಾಯಾಸಾಗಿ ಬರುತ್ತದೆ.

"ಸತತ ಅರವತ್ತು ವರುಷ ತಪಸ್ವಿ ಬಾಳ್ವೆ ನಡೆಸಿ ಅನಂತ ಯಾತನೆಗಳನ್ನು ಸಹಿಸಿ ಕೊನೆಯಲ್ಲಿ ಶುಭವನ್ನು ಕಂಡ ಕಣ್ಣುಗಳು ಅಂತರ್‌ಮುಖಿಯಾಗಿದ್ದವು.[1]

"ನೈದಿಲೆಯ ನೀರಿನಂತೆ ಪವಿತ್ರವಾದ ಅವರ ಆತ್ಮಾರ್ಪಣೆ ಕಲುಷಿತ ಜಗತ್ತಿನಿಂದ ತನ್ನ ಸೂಕ್ಷ್ಮ ಬಂಧನಗಳನ್ನು ಹಗುರದಲ್ಲೆ ಬಿಡಿಸಿಕೊಂಡು ಹತ್ತಿಯ ಕಣದಂತೆ ಹಾರಿ ಹೋಗಿತ್ತು"[2]

ಸದ್ದಿಲ್ಲದೆ ಪರರಿಗಾಗಿ ಬದುಕನ್ನು ಕಳೆದು ಹೋದ ಜೀವಿಗಳನ್ನು ಇಂದಿರಾ ಅವರು ಗೌರವಿಸುತ್ತಾರೆ.

ಹೊಂಗೆಯ ನೆರಳಿನಂತೆ ತಮ್ಮ ಜೀವಕ್ಕೆ ಸದಾ ತಂಪನ್ನಿತ್ತ ತಂಗಿಯನ್ನು ಕಳೆದು ಕೊಂಡು ದುಃಖಿಸುತ್ತಿದ್ದ ಅನಂತಯ್ಯನವರನ್ನು ಸಾಂತ್ವನಗೊಳಿಸುತ್ತ ಡಾಕ್ಟರರು ಹೇಳುವ ಮಾತುಗಳು ಪಾತಮ್ಮನವರ ವ್ಯಕ್ತಿತ್ವದ ಭವ್ಯತೆಯನ್ನೇ ಸಾರುತ್ತವೆ.

---

1. ಎಂ. ಕೆ. ಇಂದಿರಾ 'ಹೆಣ್ಣಿನ ಆಕಾಂಕ್ಷೆ' ಪುಟ. 251–252.
2. ಅದೇ ಪುಟ.

"ಏಳಿ ರಾಯರೇ" ದುಃಖಿಸಬೇಕು ಆದರೆ ಹೆಚ್ಚು ದುಃಖಿಸುವದಿಲ್ಲ. ಈಗ ಅಮ್ಮನವರದು ರಾಗದ್ವೇಷಾದಿಗಳಿಂದ ದೂರವಿದ್ದ ಪವಿತ್ರ ಆತ್ಮ, ಪರಿಶುದ್ಧವಾದ ತನುಮನಗಳು ಕರ್ಮಲೇಪವನ್ನು ಸವೆಸಿಕೊಂಡು ಹೋಗುವ ಮಟ್ಟಿಗೇ ಜೀವಧಾರಣೆ ಮಾಡಿದ್ದರೋ ಏನೂ ಆಕೆ...ಯಾವ ಯೋಗಿಗಳಿಗೆ ತಾನೇ ಇರುತ್ತವೆ. ಈ ನಿರ್ಲಿಪ್ತತೆ ಜೀವನ್ಮುಕ್ತರು ಇಚ್ಛಾಮರಣಿಗಳು ಶರಣರ ಗುಟ್ಟು ಮರಣದಲ್ಲಿ"[1]

ಬದುಕಿನಲ್ಲಿ ಕಷ್ಟಗಳ ಹೊಡೆತನವನ್ನು ತಿಂದ ಪಾತಮ್ಮನವರದು ಪೂಜನೀಯ ವ್ಯಕ್ತಿತ್ವ ಅವರ ಮರಣದ ಸನ್ನಿವೇಶ ಓದುಗರನ್ನು ಭಾವ ಲೋಕಕ್ಕೆ ಒಯ್ಯುತ್ತದೆ.

ಇತ್ತೀಚಿಗೆ ಪ್ರಕಟವಾದ (೧೯೭೬) ಫಣಿಯಮ್ಮ ಹೆಣ್ಣಿನ ಆಕಾಂಕ್ಷೆಯಲ್ಲಿ ಪಾತಮ್ಮನ ರೂಪದಲ್ಲಿ ೧೯೬೪ ರಲ್ಲಿಯೇ ಕಾಣಿಸಿಕೊಂಡಿದ್ದಾಳೆನ್ನಬಹುದು. ಲೋಲಳ ಮದುವೆಯ ನಂತರ ಅನಂತಯ್ಯನವರ ಸಂಸಾರ ಹೊನ್ನಾಳಿಯನ್ನು ಬಿಟ್ಟು ಬೆಂಗಳೂರಿಗೆ ಹೊರಟಾಗ ಊರಿಗೆ ಊರೇ ಕಣ್ಣೀರು ಮಿಡಿಯುತ್ತದೆ. ಈದು ಕಾದಂಬರಿಯಲ್ಲಿ ಗಮನ ಸೆಳೆವ ಮತ್ತೊಂದು ಭಾಗ.

ಡಾಕ್ಟರರ ಸಂಸಾರವೆಲ್ಲ ಕೈ ಜೋಡಿಸಿ ಅಳುತ್ತಿದ್ದರು. ಡಾಕ್ಟರರ ತಾಯಿ "ಐನೋರೆ, ಮುಣುಗಿ ಹೋಗ್ತಾ ಇದ್ದ ನಮ್ಮ ಸಂಸಾರ ನೆಟ್ಟಗೆ ಮಾಡಿ ಪುಣ್ಯ ಕಟ್ಕೊಂಡ್ರಿ ಈಗ ನಮ್ಮನ್ನೆಲ್ಲ ಬಿಟ್ಟು ಹೋಗ್ತಾ ಇದ್ದೀರಿ...ಹೆಂಗಾರ ಆಗ್ಲಿ ಇನ್ನು ಮುಂದೆಯಾದರೂ ನೀವು ನೆಮ್ಮದಿ ಕಾಣಬೇಕು ರಾಯರೆ?' ಎಲ್ಲಿದ್ದರೂ ನಿಮ್ಮ ಧರ್ಮ ನಿಮ್ಮನ್ನು ಕಾಯ್ತದೆ. ಅನಂತಯ್ಯನವರು ಆತ್ಮೀಯತೆಯಿಂದ ಮಾತಾಡಿದರು, "ನಮ್ಮದೇನೂ ಇಲ್ಲ ರುದ್ರವ್ವ ವಿಧಿ ಒಯ್ದಲ್ಲಿಗೆ ನಡೆಯಬೇಕಾಗಿದೆ"[2]

ಇದು ಅನಂತಯ್ಯನವರು ಬದುಕಿನಲ್ಲಿ ಕಂಡುಕೊಂಡ ಸತ್ಯ. ಹೊನ್ನಾಳಿಯಲ್ಲಿ ಅನಂತಯ್ಯನವರು ಗಳಿಸಿದ ಜನಾದರಣೆ ಎರಡು ಸಂಸಾರಗಳ ಆತ್ಮೀಯತೆ, ಅಗಲಿಕೆಯ ವ್ಯಥೆ ಅವರು ಬೆಂಗಳೂರಿಗೆ ಹೊರಟ ಸನ್ನಿವೇಶದಲ್ಲಿ ಹೃದಯಸ್ಪರ್ಶಿಯಾಗುವಂತೆ ಲೇಖಕಿ ಚಿತ್ರಿಸಿದ್ದಾರೆ. ಸುಮಿತ್ರ, ಡಾಕ್ಟರ್ ಸಾವಿತ್ರಮ್ಮ, ರುದ್ರವ್ವ ಈ ಪಾತ್ರಗಳು ಅಷ್ಟರ ಮಟ್ಟಿಗೆ ತಮ್ಮ ಕೆಲಸ ನಿರ್ವಹಿಸುತ್ತದೆ. ಪಾರ್ವತಿ, ಚಂದ್ರು ಈ ಪಾತ್ರಗಳು ಕಾದಂಬರಿಯ ಬೆಳವಣಿಗೆಯ ದೃಷ್ಟಿಯಿಂದ ಅವಶ್ಯ ಎನ್ನಿಸುವದಿಲ್ಲ. ಮಾಲತಿಯ ವಿಫಲ ದಾಂಪತ್ಯ ಜೀವನ ಲೋಲಳ ಮನಸ್ಸಿನ ಮೇಲೆ ಪರಿಣಾಮ ಬೀರುತ್ತವೆ.

ಕಾದಂಬರಿಯ ಆರಂಭದಲ್ಲಿ (ನಲವತ್ತೆರಡು ಪುಟಗಳವರೆಗೆ ಅನಂತಯ್ಯನವರ ಕುಟುಂಬದ ಸುಖ–ದುಃಖಗಳೇ ಮುಖ್ಯವಾಗಿರುವದರಿಂದ ಓದುಗರ ಮೇಲೆ ಗಹನ ವಾದ ಪರಿಣಾಮ ಬೀರುತ್ತವೆ. ಆದರೆ ಮುಂದೆ ಲೋಲಳಿಗೇ, ಹೆಚ್ಚಿನ ಪ್ರಾಧಾನ್ಯತೆ

---

1. ಅದೇ–ಪುಟ. 322
2. ಅದೇ ಪುಟ

ದೊರಕಿ ಕತೆ ಜಾಳು ಜಾಳಾದಂತೆ ತೋರುತ್ತದೆ. ಆದರೆ ರಂಗಸ್ವಾಮಿ ಮರಣ ಪಾತಮ್ಮನವರ ಸಾವು, ಅನಂತಯ್ಯನವರು ಹೊನ್ನಾಳಿ ಬಿಟ್ಟು ಬೆಂಗಳೂರಿಗೆ ಹೊರಡುವ ಸನ್ನಿವೇಶ ಇವೆಲ್ಲ ಹೃದಯ ವೇಧಕ ಬರವಣಿಗೆಯಿಂದ ಸತ್ವಶಾಲಿಯಾಗಿದೆ.

ಕಾದಂಬರಿಯಲ್ಲಿ ನಡೆಯುವ ಘಟನೆಗಳನ್ನು ಲೇಖಕಿ ಕೆಲವು ಶಕುನಗಳ ಮೂಲಕ ಸೂಚಿಸುತ್ತಾರೆ. ಮಂಗಳೆಯನ್ನು ಮೆಚ್ಚಿಕೊಂಡ ರಂಗಸ್ವಾಮಿ ದೇವಸ್ಥಾನಕ್ಕೆ ಹೋಗುತ್ತಿದ್ದಂತೆಯೇ ಅರ್ಚಕರು ದೇವಾಲಯದ ಗಂಟೆಯನ್ನು ಬಾರಿಸುವುದು ಶುಭ ಸೂಚನೆಯಾಗಿದೆ. ಅದರಂತೆ ರಂಗಸ್ವಾಮಿಯ ಮದುವೆ ಮಂಗಳೆಯೊಡನೆ ನಡೆಯುತ್ತದೆ, ಅದೇ ರೀತಿ ಲೋಲ ವೀಣೆ ನುಡಿಸುತ್ತಿರುವಾಗ ವೀಣೆಯ ತಂತಿ ಕಿತ್ತು ಹೋಗುವದು. ರಂಗಸ್ವಾಮಿಯ ಆಕಸ್ಮಿಕ ಸಾವಿಗೆ ಮುನ್ಸೂಚನೆಯಾಗಿದೆ. ಕೃಷ್ಣನನ್ನು ಆರಾಧಿಸುವ ಲೋಲ ತನಗೂ ವೇಣುಗೋಪಾಲನಂತಹ ಪತಿ ದೊರೆತರೆ ಸಾಕು ಎಂದು ಪ್ರಾರ್ಥಿಸುವಾಗ 'ಹಲ್ಲಿ' ನುಡಿಯುವದು ಲೋಲಳ ಮದುವೆ ಮುರಲಿಯೊಂದಿಗೆ ನಡೆಯುವದನ್ನು ಸೂಚಿಸುತ್ತದೆ.

ನೊಂದ ಹಿರಿಯರ ಸೇವೆ, ಲೋಲಳ ಬದುಕಿನ ಧ್ಯೇಯ. ಅವಳ ಆಶೆ–ಆಕಾಂಕ್ಷೆ ಗಳು ಕೊನೆಯಲ್ಲಿ ನೆರವೇರಿವೆ. ಅನಂತಯ್ಯನವರ ಬದುಕಿನಲ್ಲಿ ಉಳಿದಿದ್ದ ಒಂದೇ ಆಶೆ ಅದೆಂದರೆ ತಮ್ಮ ಮನೆತನದ ದೀಪವಾಗಿದ್ದ ಲೋಲಾಕ್ಷಿಯ ಮದುವೆಯನ್ನು ಕಾಣು ವದು. ಅವರ ಆಶೆಯೂ ಈಡೇರಿದೆ.

ವಿಧಿ ಒಡ್ಡಿದ ಸವಾಲುಗಳನ್ನು ಎದುರಿಸಿದ ಅನಂತಯ್ಯನವರದು ಸೋಲದ ಜೀವ. ಅವರನ್ನು ಓದುಗರು ಮರೆಯಲಾರರು. ಕುಟುಂಬ ಜೀವನದ ಕಷ್ಟಗಳನ್ನು ಲೇಖಕಿ ಹೃದಯಂಗಮವಾಗಿ ಈ ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ. ಕತ್ತಲೆ ಕಳೆದ ನಂತರವೇ ಜೀವನದಲ್ಲಿ ಬೆಳಕು ಇಲ್ಲಿ ಕಾಣಿಸುತ್ತದೆ.

'ತಾಳಿದವರು' :

ತಾಳಿದವರು ಈ ಕಾದಂಬರಿಯಲ್ಲಿ ಒಬ್ಬ ವಿಧವೆ ತಾಯಿ, ಮಗಳು, ಮಗ ಇವರು ಬದುಕಿನುದ್ದಕ್ಕೂ ಸಂಸಾರದಲ್ಲಿ ಬಂದ ಕಷ್ಟಗಳನ್ನು ಬೇರೊಬ್ಬರಿಗೆ ಉಸುರದೇ 'ತಾಳಿದವರು ಬಾಳಿಯಾರು' ಎಂಬ ನಂಬಿಕೆಯಿಂದ, ಶ್ರದ್ಧೆಯಿಂದ ಜೀವನವನ್ನು ಎದುರಿಸುತ್ತಾರೆ.

ಅನೇಕ ವರ್ಷಗಳಿಂದ ಪರಿಚಯವಿರುವ ಈ ವ್ಯಕ್ತಿಗಳೆಲ್ಲ ನನ್ನ ಕಣ್ಣೆದುರಿಗೇ ಈಗಲೂ ಇದ್ದಾರೆ. ಎಂದು ಇಂದಿರಾ ಅವರು ಕಾದಂಬರಿಯ 'ನಾಂದಿ'ಯಲ್ಲಿ ಹೇಳಿದ್ದಾರೆ.

ಕುಟುಂಬದಲ್ಲಿ ಸಜ್ಜನರಿಗೆ ಬರುವ ಕಷ್ಟಗಳು, ದಾಯಾದಿಗಳ ಕಿರುಕುಳ ಹೆಣ್ಣು ಮಕ್ಕಳಿಗೆ ಅತ್ತೆ ಮನೆಯುವರು ಕೊಡುವ ತೊಂದರೆ ಗಂಡ–ಹೆಂಡಿರ ವಿರಸ, ಶ್ರೀಮಂತ ಕುಟುಂಬದವರಿಂದ ಬಡವರಿಗಾಗುವ ಅನ್ಯಾಯ, ಮೋಸ, ಹೀಗೆ ಕೌಟುಂಬಿಕ ಜೀವನದ ಹಲವಾರು ಕಷ್ಟನಷ್ಟಗಳನ್ನು ಲೇಖಕಿ ಇಲ್ಲಿ ಚಿತ್ರಿಸಿದ್ದಾರೆ.

ಮಗಳು, ತಾಯಿ, ಮಗ ಮೂವರು ತಮ್ಮ ಸಂಸಾರದ ಕಷ್ಟಗಳನ್ನು ಇಲ್ಲಿ ಆತ್ಮ ಕತೆಯ ಮೂಲಕ ತೋಡಿಕೊಂಡಿದ್ದಾರೆ, ತಾಯಿಯ ಪಾತ್ರದಲ್ಲಿರುವ ಸ್ತ್ರೀ ತನ್ನ ಗಂಡನ ಮರಣದ ನಂತರ ಅನೇಕ ಕಷ್ಟನಷ್ಟಗಳಿಗೆ ಗುರಿಯಾಗುತ್ತಾಳೆ. ಅವಳ ಅಕ್ಕ ಹಾಗೂ ಭಾವ ಇವಳ ಆಸ್ತಿಯನ್ನು ಲಪಟಾಯಿಸುತ್ತಾರೆ. ತನ್ನ ಎರಡು ಮಕ್ಕಳನ್ನು ಕಟ್ಟಿಕೊಂಡು ಐದು ರೂಪಾಯಿಯ ಬಾಡಿಗೆ ಮನೆಯೊಂದರಲ್ಲಿ ದಿನಕಳೆಯಬೇಕಾಗುತ್ತದೆ ಜೀವನೋಪಾಯಕ್ಕಾಗಿ ಹೂ ತರಿಸಿ ಮಾಲೆ ಕಟ್ಟಿ ಮಾರಿ ಬಂದ ಸಂಪಾದನೆಯಲ್ಲಿ ಮಕ್ಕಳನ್ನು ಸಾಕಿ ಸಲಹುತ್ತಾಳೆ. ಅವಳ ತಮ್ಮ ಅವಳ ಮಗಳಿಗೆ ಒರಟು ಸ್ವಭಾವದ ವರನನ್ನು ಗಂಟು ಹಾಕುತ್ತಾನೆ. ಎದುರು ಮನೆಯ ಹೆಣ್ಣು ಮಗಳ ಕಿತಾಪತಿಯಿಂದ ಶ್ರೀಮಂತರ ಮನೆಯ ಹುಡುಗಿ ಸೊಸೆಯಾಗಿ ಬರುತ್ತಾಳೆ. ಸೊಸೆ ಮಗನೊಡನೆ ವಿರಸ ಮಾಡಿಕೊಂಡು ತವರಿಗೆ ಹೊರಟಾಗ ಮಗನ ಒಳಿತನ್ನು ಹಾರೈಸಿ ತಾನೇ ಕೆಲವು ದಿನ ಮನೆ ಬಿಟ್ಟು ಹೊರಟು ಹೋಗುತ್ತಾಳೆ ಬಡತನದಲ್ಲಿ ಅಸಹಾಯಕಳಾದರೂ ಮಕ್ಕಳಿಗಾಗಿ ಬದುಕಿನುದ್ದಕ್ಕೂ ಸಹನೆಯಿಂದ ಕಷ್ಟಗಳನ್ನು ಎದುರಿಸುತ್ತಾಳೆ. ಅದರಂತೆ ಮಗಳು ಸೋದರ ಮಾವನ ಮೋಸದಿಂದ ಒರಟು ಸ್ವಭಾವದ ಗಂಡನೊಡನೆ ಸಹನೆಯ ಬಾಳು ನಡೆಸುತ್ತಾಳೆ. ಮಗನಾದವನು ಕಷ್ಟಪಟ್ಟು ವಿದ್ಯೆ ಕಲಿತು ಶ್ರೀಮಂತರ ಮನೆಯ ಕನ್ಯೆಯನ್ನು ಮದುವೆಯಾಗಿ ಅನೇಕ ಕಿರುಕುಳಗಳನ್ನು ಅನುಭವಿಸುತ್ತಾನೆ.

ಈ ಕಾದಂಬರಿಯಲ್ಲಿ ಕೆಟ್ಟವರು ಹಾಗೂ ಒಳ್ಳೆಯವರು ಎಂಬ ಎರಡು ಬಗೆಯ ಸ್ವಭಾವದ ತೀರ ಸರಳ ಪಾತ್ರಗಳಿವೆ. ಯಾವ ಪಾತ್ರವೂ ಮೈ ತುಂಬಿಕೊಂಡಿಲ್ಲ. ಸಂಸಾರ ಜೀವನದಲ್ಲಿ ಕಷ್ಟಗಳು ಬಂದರೂ ಅದನ್ನು ಎದುರಿಸುವ, ಮನೋಸ್ಥೈರ್ಯ, ಸಹನೆ. ಇವು ಮುಖ್ಯ ಎಂಬುದನ್ನು ಈ ವ್ಯಕ್ತಿಗಳ ಬಾಳಿನಿಂದ ಕಂಡುಕೊಳ್ಳ ಬಹುದು.

'ಶಾಂತಿಧಾಮ' :

ಈ ಕಾದಂಬರಿ ೧೯೬೮ರ 'ಕನ್ನಡ ಪ್ರಭ' ಪತ್ರಿಕೆಯಲ್ಲಿ ದೈನಿಕ ಧಾರಾವಾಹಿ ಯಾಗಿ ಬಂದು ೧೯೭೦ರಲ್ಲಿ ಬೆಂಗಳೂರಿನ ಸುದರ್ಶನ ಪ್ರಕಾಶನದಿಂದ ಪ್ರಥಮ ಮುದ್ರಣ ಕಂಡಿತು.

ವಕೀಲ ಶ್ರೀನಿವಾಸರಾಯರ ನಂದಗೋಕುಲದಂತಹ ಸಂಸಾರ ವಿಧಿಯ ಕ್ರೂರ ಹಿಡಿತಕ್ಕೆ ಸಿಕ್ಕು ನುಚ್ಚು ನೂರಾಗುತ್ತದೆ. ಇದು 'ಶಾಂತಿಧಾಮ' ಕಾದಂಬರಿಯ ವಸ್ತು. ಸ್ವಸಾಮರ್ಥ್ಯದಿಂದ ಪುರುಷಾರ್ಥಗಳನ್ನು ಅನುಭವಿಸಿದ ಶ್ರೀನಿವಾಸರಾಯರು ಅವರ ಬದುಕಿಗೆ ಸಂಬಧಿಸಿದ ಒಂಭತ್ತು ಮಕ್ಕಳು, ಹಾಗೂ ಹಲವಾರು ವ್ಯಕ್ತಿಗಳ ಜೀವಂತ ಚಿತ್ರಣ ಇಲ್ಲಿದೆ. ಅವರ ಬದುಕಿನ ಏರಿಳಿತಗಳನ್ನು ಈ ಕಾದಂಬರಿಯಲ್ಲಿ ಕಾಣುತ್ತೇವೆ.

ಕೌಟುಂಬಿಕ ಜೀವನದ ಮೌಲ್ಯಗಳು ಏರು ಪೇರಾಗುತ್ತಿರುವದನ್ನು ಲೇಖಕಿ ಇಂದಿರಾ ಅವರು ಸಾಂಕೇತಿಕವಾಗಿ ಈ ಕಾದಂಬರಿಯುದ್ದಕ್ಕೂ ಸೂಚಿಸಿದ್ದಾರೆ.

ವೆಂಕಪ್ಪನವರ ಮಗ ಶ್ರೀನಿವಾಸ ಆಗಿನ ಕಾಲಕ್ಕೆ ವಕೀಲ ಸುಬ್ಬರಾಯರ ಮನೆಯಲ್ಲಿದ್ದುಕೊಂಡು ಬಿ.ಎ. ಮುಗಿಸುತ್ತಾನೆ. ಅವರ ಸಲಹೆಯಂತೆಯೇ ಬೊಂಬಾಯಿಯಲ್ಲಿದ್ದು ಎಲ್. ಎಲ್. ಬಿ. ಪಾಸು ಮಾಡುತ್ತಾನೆ. ಶಿಕ್ಷಣ ಇನ್ನು ಒಂದು ವರ್ಷವಿದೆ ಎನ್ನುವಾಗ ಬೇಸಿಗೆ ರಜೆಯಲ್ಲಿ ಹದಿಮೂರು ವರ್ಷದ ಪದ್ಮಾವತಿಯೊಡನೆ ಇಪ್ಪತ್ತು ಮೂರು ವರ್ಷದ ಶ್ರೀನಿವಾಸನ ಮದುವೆಯಾಗುತ್ತದೆ. ಶಿಕ್ಷಣ ಮುಗಿದು ಒಂದು ವರ್ಷದಲ್ಲಿ ವೃತ್ತಿಯೊಂದಿಗೆ ಹರ್ಷ, ಉತ್ಸಾಹದ ಸಂಸಾರ ಜೀವನವು ಪ್ರಾರಂಭವಾಗುತ್ತದೆ. ಮನೆಯ ಮುಂದೆ ಬೋರ್ಡು ಹಾಕಿದ ಆರೇಳು ವರ್ಷಗಳಲ್ಲಿಯೇ ಜನರ ನಂಬಿಕೆ ಗಳಿಸುತ್ತಾರೆ. ಗೌರವ, ಹಣ, ಕೀರ್ತಿ ಎಲ್ಲವೂ ಶ್ರೀನಿವಾಸರಾಯರನ್ನು ಅರಸಿಕೊಂಡು ಬರುತ್ತದೆ.

ಸಮೃದ್ಧಿಯ ಕಾಲ, ಹತ್ತು ವರ್ಷ ಕಳೆಯುವಷ್ಟರಲ್ಲಿ ರಾಯರದು ತುಂಬು ಜೀವನದ ಸಂಸಾರವಾಗುತ್ತದೆ. ಮನೆಯಲ್ಲಿ ಬೆಳೆದುನಿಂತ ಸುಂದರ ಮಕ್ಕಳು, ಪತಿಯನ್ನನುಸರಿಸಿ ನಡೆವ ಪತ್ನಿ ವಾರದ ಹುಡುಗರು, ನೆಂಟರು, ಬಸಿರು, ಬಾಣಂತಿತನ, ಹಾಲು-ಹೈನು, ಹಬ್ಬ-ಹರಿದಿನಗಳಿಂದ ಮನೆ ನಂದಗೋಕುಲವಾಗುತ್ತದೆ. ಮನೆಯಲ್ಲಿ ಖರ್ಚು ಹೆಚ್ಚುತ್ತದೆ. ಆದರೆ ಸ್ವಭಾವತಃ ಉದಾರಿಗಳಾದ ಶ್ರೀನಿವಾಸರಾಯರು ಹಾಗೂ ಪದ್ಮಮ್ಮನವರು ಯಾವುದರಲ್ಲೂ ಕೊರತೆ ಕಾಣದಂತೆ ಸಂಸಾರ ಸಡೆಸಿಕೊಂಡು ಬರುತ್ತಾರೆ.

ಹಿರಿಯ ಮಗಳು ಜಯಲಕ್ಷ್ಮಿಯ ಮದುವೆಯನ್ನು ವೈಭವದಿಂದ ನಡೆಸುತ್ತಾರೆ. ಹಿರಿಯ ಮಗ ಕೇಶವ 'ಲಾ' ಓದಲು ಇಚ್ಛಿಸುತ್ತಾನೆ. ಇದೇ ಸಮಯಕ್ಕೆ ವಿಧಿ ರಾಯರ ಸಂಸಾರದ 'ಪಗಡೆಯಾಟದಲ್ಲಿ ಅಡ್ಡದಾಳಿ' ಹಾಕುತ್ತದೆ. ಶ್ರೀನಿವಾಸರಾಯರ ಸಹಪಾಠಿ ಅಸಹನೆಯ ಸ್ವಭಾವದ ಕಾಶೀಪತಯ್ಯ ಅವರ ಹೆಂಡತಿ ಪುಟ್ಟತಾಯಮ್ಮ ತಮ್ಮ ಮಗಳು ಶಾರದೆಯನ್ನು ಕೇಶವನಿಗೆ ಕೊಡುವ ಹಂಚಿಕೆ ಮಾಡುತ್ತಾರೆ.

ಶ್ರೀನಿವಾಸರಾಯರ ಎರಡನೆಯ ಮಗಳಾದ ರಾಜಲಕ್ಷ್ಮಿ, ಮೂರನೆಯವಳಾದ ಸೀತಾಲಕ್ಷ್ಮಿ ಇವರ ಮದುವೆಯಾಗುತ್ತದೆ. ಸ್ವಭಾವತಃ ಸಿಡುಕು, ಅಸಹನೆಯ

ಸ್ವಭಾವದ ಕೇಶವನ ಮನಸ್ಸಿನಲ್ಲಿ ಕಾಶೀಪತಯ್ಯ ಹಾಗೂ ಪುಟ್ಟತಾಯಮ್ಮ ಇಬ್ಬರೂ ವಿಷದ ಬೀಜ ಬಿತ್ತುತ್ತಾರೆ. ಶಾರದೆ ಹಾಗೂ ಕೇಶವನ ದರ್ಪ, ವಿನಾಕಾರಣ ಸಿಡುಕಿನಿಂದಾಗಿ ನಂದಗೋಕುಲದಂತಿದ್ದ ಸಂಸಾರದಲ್ಲಿ ಕ್ರಮೇಣ ಬಿರುಕು ಕಾಣಿಸಿಕೊಳ್ಳತೊಡಗುತ್ತದೆ. ಮನೆಯ ಖರ್ಚು ಈ ದಿನಕ್ಕೆ ಬೆಳೆಯುತ್ತಿದ್ದರೂ ಕೇಶವ ಅವರ ನೆರವಿಗೆ ಬರುವದಿಲ್ಲ.

ಭಾಗ್ಯಳ ಮದುವೆಗಾಗಿ ಪದ್ಮಮ್ಮನವರು ತಮ್ಮ 'ಡಾಬು'ವನ್ನೇ ಮುರಿಸಿ ಹೊಸ ಒಡವೆಗಳನ್ನು ಮಾಡಿಸುತ್ತಾರೆ. 'ಸತ್ಯ' ಪುಂಡನಾಗಿ ಅಡ್ಡದಾರಿ ಹಿಡಿಯುತ್ತಾನೆ. ಕೃಷ್ಣಮೂರ್ತಿ ಉನ್ನತ ವ್ಯಾಸಂಗಕ್ಕಾಗಿ ವಿದೇಶಕ್ಕೆ ಹೊರಡುತ್ತಾನೆ. ಇಷ್ಟರಲ್ಲಿ ಭಾಗ್ಯಳ ಗಂಡ ಮೋಟಾರ್ ಬೈಕ್ ಅಪಘಾತದಲ್ಲಿ ಮರಣ ಹೊಂದುತ್ತಾನೆ. ವಿಧವೆಯಾದ ಭಾಗ್ಯ ತವರಿಗೆ ಬರುತ್ತಾಳೆ. 'ಸತ್ಯ' ಮನೆಯಲ್ಲಿನ ಶಾರದೆಯ 'ನೆಕ್ಲೇಸ್ (ಸರ)' ಕಳುವು ಮಾಡಿ ಅದನ್ನು ಮಾರಿ ಮುಂಬೈಗೆ ಹೋಗುತ್ತಾನೆ. ಕೊನೆಯ ಮಗಳು ವಾಸಂತಿಯ ಮದುವೆ ನಿಶ್ಚಯವಾಗಿರುತ್ತದೆ. ಅವಳ ಮದುವೆಗಾಗಿ ಪದ್ಮಮ್ಮನವರು ತಮ್ಮ ಮಾಂಗಲ್ಯವೊಂದನ್ನು ಬಿಟ್ಟು ಉಳಿದೆಲ್ಲ ಒಡವೆಗಳನ್ನು ಮಾರಿ ಹಣ ಕೂಡಿಸುತ್ತಾರೆ. ಮದುವೆ ಚಪ್ಪರದಲ್ಲಿ ವರನ ತಂದೆಯು ವರದಕ್ಷಿಣೆಯ ದುರಾಸೆಯ ಕಾರಣದಿಂದಾಗಿ ಗೊತ್ತಾದ ವರನೊಂದಿಗೆ ನಡೆಯಬೇಕಿದ್ದ ಮದುವೆ ನಿಂತು ಹೋಗುತ್ತದೆ. ಶ್ರೀನಿವಾಸರಾಯರ ಹಿತೈಷಿಯೂ ಅವರ ಸಂಬಂಧಿಯೂ ಆದ ತಿಪ್ಪುವಿನ ಸ್ಥೈರ್ಯ, ಸಾಹಸದಿಂದ ಮನೆಯಲ್ಲಿಯೇ ಮೊದಲಿನಿಂದಲೂ ವಿದ್ಯಾಭ್ಯಾಸಕ್ಕಾಗಿ ಇದ್ದ ಅನಂತುವಿನೊಡನೆ ವಾಸಂತಿಯ ಮದುವೆ ಅದೇ ಚಪ್ಪರದಲ್ಲಿ ನಡೆದು ಹೋಗುತ್ತವೆ.

ಇನ್ನೇನು ತಮ್ಮ ಪಾಲಿನ ಕರ್ತವ್ಯಗಳು ಮುಗಿಯುತ್ತ ಬಂದಿವೆ. ಎಂದು ರಾಯರು ಅಂದುಕೊಳ್ಳುವಷ್ಟರಲ್ಲಿ ಕಿರಿಯಮಗ ಮೃದು ಸ್ವಭಾವದ ಆನಂದ ಪರೀಕ್ಷೆಯಲ್ಲಿ ರ್‍ಯಾಂಕ್ ಬಂದಿದ್ದರೂ ರ್‍ಯಾಂಕ್ ಲಿಸ್ಟ್ ನೋಡದೆ ತಾನು ಅನುತ್ತೀರ್ಣನಾಗಿರುವೆನೆಂದು ತಿಳಿಯುತ್ತಾನೆ. ಕೇಶವನಿಂದ ಬರಬಹುದಾದ ಕಟುನುಡಿಗಳನ್ನು ನೆನೆದುಕೊಂಡು ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಇದು ಶ್ರೀನಿವಾಸರಾಯರ ಬದುಕನ್ನೇ ಅಲುಗಿಸುತ್ತದೆ. ಅವರ ಸಂಸಾರಕ್ಕೆ ಚೇತರಿಸಿಕೊಳ್ಳಲಾರದ ಪೆಟ್ಟು, ಇಷ್ಟರಲ್ಲಿ ಮನೆಯ ಆರ್ಥಿಕ ಪರಿಸ್ಥಿತಿಯೂ ಸಂಪೂರ್ಣವಾಗಿ ಹದಗೆಟ್ಟು ಮನೆ ಬರಿದಾಗುತ್ತದೆ.

ಸಂಸಾರದ ಎಲ್ಲ ಸಂಕಷ್ಟಗಳನ್ನು ಅನುಭವಿಸಿ ಕ್ಲೇಶಗಳಿಂದ ಮನನೊಂದು ರಾಯರು ಪದ್ಮಮ್ಮನವರೊಂದಿಗೆ ತೀರ್ಥಯಾತ್ರೆಗೆ ಹೊರಡುತ್ತಾರೆ. ವಿಧವೆ 'ಭಾಗ್ಯ' ಬೆಂಗಳೂರಿನಲ್ಲಿ 'ಟೀಚರ್ಸ್ ಟ್ರೇನಿಂಗ್ ಸೇರುತ್ತೇನೆಂದು ಸುಳ್ಳು ಹೇಳಿ' ನರ್ಸ್ ಆಗಿ ವಿಲಾಸದಿಂದ ಸ್ವೇಚ್ಛೆ ಜೀವನ ನಡೆಸಿರುತ್ತಾಳೆ. ಸಂಪ್ರದಾಯಶೀಲರಾದ ದಂಪತಿಗಳಿಗೆ

ಎಲ್ಲ ರೀತಿಯಿಂದಲೂ ಜಿಗುಪ್ಸೆಯುಂಟಾಗಿ ಸಂಸಾರದ ಬಗೆಗೆ ವೈರಾಗ್ಯ ತಾಳುತ್ತಾರೆ.

ಯಾತ್ರೆಗೆ ಹೊರಟಾಗ ನಂಜನಗೂಡಿನಲ್ಲಿ ಪದ್ದಮ್ಮನವರಿಗೆ ಅನಾರೋಗ್ಯವುಂಟಾಗುತ್ತದೆ. ಬದುಕಿನುದ್ದಕ್ಕೂ ಶ್ರೀನಿವಾಸರಾಯರ ನೆರಳಿನಂತಿದ್ದ ಪದ್ದಮ್ಮನವರು ಇಹದ ಯಾತ್ರೆ ಮುಗಿಸುತ್ತಾರೆ. ಬದುಕಿನಲ್ಲಿ ಎಲ್ಲವನ್ನೂ ಕಳೆದುಕೊಂಡು ನಿರಾಶರಾಗಿ ಏಕಾಂಗಿಯಾದ ಶ್ರೀನಿವಾಸರಾಯರು 'ಶಾಂತಿಧಾಮ' ದೆಡೆಗೆ ಪ್ರಯಾಣ ಬೆಳೆಸುತ್ತಾರೆ.

ರೇಲ್ವೆಬೋಗಿಯೊಂದರಲ್ಲಿ ಜನರ ಗದ್ದಲದ ನಡುವೆಯೂ ಏಕಾಂಗಿಯಾಗಿ ಕುಳಿತ ಶ್ರೀನಿವಾಸರಾಯರ ಗತಜೀವನದ ಸ್ಮರಣೆಯಿಂದ ಕಾದಂಬರಿಯು ಪ್ರಾರಂಭವಾಗುತ್ತದೆ.

ಕುರುಡ ಭಿಕ್ಷುಕನೊಬ್ಬ ಹತ್ತು ವರ್ಷದ ಬಾಲಕನೊಂದಿಗೆ 'ಯಾರಿಗೆ ಯಾರುಂಟು ಎರವಿನ ಸಂಸಾರ' ಎಂದು ಹಾಡತೊಡಗುತ್ತಾನೆ. ಈ ಹಾಡು ಶ್ರೀನಿವಾಸರಾಯರ ಬದುಕಿನ ಸ್ಥಿತಿಯೂ ಹೌದು. ಅವರ ಮನಸ್ಸಿನಲ್ಲಿ ನಡೆದ ಮಂಥನವೂ ಅಹುದು.

ಎದುರಿಗೆ ಕುಳಿತ ಗೃಹಿಣಿ ರಾಯರ ಬದುಕಿಗೆ ಪ್ರೀತಿ ಅಂತಃಕರಣ, ಗೌರವವನ್ನು ತೋರಿಸಿದ 'ನರಸು' ಇವಳನ್ನು ನೆನಪಿಗೆ ತರುತ್ತಾಳೆ. ಶ್ರೀನಿವಾಸರಾಯರು ತಮ್ಮ ಕಳೆದ ಬದುಕಿನುದ್ದಕ್ಕೂ ಕಣ್ಣು ಹಾಯಿಸುತ್ತಾರೆ. ಗತ ಜೀವನದ ನೆನಪಿನ ಸುರುಳಿ ಬಿಚ್ಚಿಕೊಂಡಂತೆ ಅವರ ಜೀವನದಲ್ಲಿ ನಡೆದ ಒಂದೊಂದು ಘಟನೆಗಳೂ ಕಣ್ಮುಂದೆ ಬಂದು ನಿಲ್ಲುತ್ತವೆ. ಫ್ಲ್ಯಾಷ್‌ಬ್ಯಾಕ್ (ಹಿನ್ನೋಟ) ತಂತ್ರದ ಉಪಯೋಗ ಇಲ್ಲಿ ಯಶಸ್ವಿಯಾಗಿದೆ.

ಶ್ರೀನಿವಾಸರಾಯರು ಹಾಗೂ ಅವರ ಒಂಭತ್ತು ಮಕ್ಕಳಾದ ಸೀತಾಲಕ್ಷ್ಮಿ, ಜಯಲಕ್ಷಿ, ಕೇಶವ, ರಾಜಲಕ್ಷ್ಮಿ, ಭಾಗ್ಯಲಕ್ಷ್ಮಿ, ಕೃಷ್ಣಮೂರ್ತಿ, ಸತ್ಯ, ವಾಸಂತಿ, ಆನಂದ, ಇವರೆಲ್ಲರದೂ ಭಿನ್ನ ಅಭಿರುಚಿ, ಒಂದೊಂದು ರೀತಿಯ ಗುಣ, ಸ್ವಭಾವ. ಈ ಪಾತ್ರಗಳ ಬೆಳವಣಿಗೆಯ ಜೀವಂತ ಚಿತ್ರಣ ಇಲ್ಲಿದೆ. ಅಲ್ಲದೆ ಈ ಕಾದಂಬರಿಯ ಅನುಷಂಗಿಕ ಪಾತ್ರಗಳಾದ ತಿಪ್ಪು, ನರಸು, ಸರಸು, ಅನಂತ, ಮೀನಾಕ್ಷಮ್ಮ ಈ ಎಲ್ಲ ಪಾತ್ರಗಳ ಸಮಗ್ರ ಬದುಕಿನ ಚಿತ್ರಣವನ್ನು ಇಲ್ಲಿ ಕಾಣುತ್ತೇವೆ.

ಕಾದಂಬರಿಯ ಮುಖ್ಯ ಪಾತ್ರವಾದ ಶ್ರೀವಾಸರಾಯರ ಬದುಕು ಓದುಗರಲ್ಲಿ ಗಂಭೀರ ಪರಿಣಾಮವನ್ನುಂಟು ಮಾಡುತ್ತದೆ. ಸುಸಂಸ್ಕೃತ ಸಂಪ್ರದಾಯಸ್ಥ ಕುಟುಂಬದಲ್ಲಿ ಹುಟ್ಟಿ ಬೆಳೆದ ಶ್ರೀನಿವಾಸರಾಯರು ನಿಷ್ಠೆಯಿಂದ ಶಿಕ್ಷಣ ಮುಗಿಸಿ ಗೃಹಸ್ಥ ಧರ್ಮ ಸ್ವೀಕರಿಸುತ್ತಾರೆ. ಹಿರಿಯರಲ್ಲಿ ಅಚಲವಾದ ಭಕ್ತಿ ಮನೆತನದ ಎಲ್ಲ ಸಂಪ್ರದಾಯಗಳನ್ನು ಶ್ರದ್ಧೆಯಿಂದ ಮುಂದುವರಿಸಿಕೊಂಡು ಹೋಗುತ್ತಾರೆ.

ಒಂಬತ್ತು ಮಕ್ಕಳಿಗೆ ಯಾವ ಕೊರತೆಯೂ ಆಗದಂತೆ ನೋಡಿಕೊಳ್ಳುತ್ತಾರೆ. ಬಡವಿದ್ಯಾರ್ಥಿಗಳಲ್ಲಿ ಅವರಿಗೆ ಅಷ್ಟೇ ಕನಿಕರ. ಮನೆಯಲ್ಲಿ ಅವರಿಗೆ ವಿದ್ಯಾಭ್ಯಾಸಕ್ಕೆ

ಅನುಕೂಲ ಮಾಡಿಕೊಡುತ್ತಾ ಅವರ ಮಕ್ಕಳು ಬೆಳೆದಂತೆ ಅವರ ಸ್ವಭಾವವು ಬೇರೆ ಬೇರೆಯಾಗಿರುತ್ತವೆ.

ಸಮೃದ್ಧಿಯ ಕಾಲದಲ್ಲಿ ಜಯಲಕ್ಷ್ಮಿ, ರಾಜಲಕ್ಷ್ಮಿಯ ಮದುವೆ ವೈಭವದಿಂದ ನಡೆಯುತ್ತದೆ. ಕೇಶವ ದೊಡ್ಡವನಾದಂತೆ ಕುಹಕಿಯಾದ. ಕಾಶೀಪತಯ್ಯ ಅವನಿಗೆ ಆಪ್ತನಾಗುತ್ತಾನೆ. ಸಿಡುಕು ಸ್ವಭಾವದವನಾದ ಕೇಶವನಿಗೆ ಸಂಸಾರದಲ್ಲಿ ತನ್ನ ತಂದೆ ವಿನಾಕಾರಣ ಖರ್ಚು ಮಾಡುತ್ತಾರೆಂದು ಭಾವಿಸುತ್ತಾನೆ. ಬಡವಿದ್ಯಾರ್ಥಿಗಳನ್ನು ಮನೆಯಲ್ಲಿಟ್ಟುಕೊಳ್ಳುವದು-ಅವನಿಗೆ ಸಹಿಸುವುದಿಲ್ಲ. ಹಣಗಳಿಸುವುದೇ ಅವನ ಮುಖ್ಯ ಧ್ಯೇಯವಾಗುತ್ತದೆ. ಮನೆಯಲ್ಲಿ ತಂದೆ-ತಾಯಿ ತಮ್ಮ-ತಂಗಿಯರೊಡನೆ ಪ್ರೀತಿಯಿಂದ ನಡೆದುಕೊಳ್ಳುವುದಿಲ್ಲ. ಅವನ ದರ್ಪ ದಿನದಿನಕ್ಕೆ ಹೆಚ್ಚುತ್ತ ಹೋಗುತ್ತದೆ.

ಮನೆಯಲ್ಲಿ ಹುಡುಗರು ಊಟ-ತಿಂಡಿಯ ಬಗೆಗೆ ತಕರಾರು ಮಾಡಿದಾಗ ತಾಯಿಗೆ-

"ಏನಮ್ಮ ನೀವು ಒಬ್ಬೊಬ್ಬರಿಗೆ ಒಂದೊಂದು ಥರ ಮಾಡಿ ಹಾಕ್ತೀರಿ. ಅತಿ ದರ್ಬಾರಾಯಿತು ಇವರದೆಲ್ಲ, ಒಂದು ಥರ ಮಾಡಿ ಬಡಿಸಿ ಬೇಕಾದರೆ ತಿನ್ನಲಿ ಸಾಕಾದರೆ ಬಿಡಲಿ" ಒಬ್ಬರಿಗಿಂತ ಒಬ್ಬರು ದೊಡ್ಡ ಬಾಜೀರಾಯರಾಗಿದ್ದಾರೆ'[1] ಎಂದು ಕರುಳಿಗೆ ಬರೆ ಇಟ್ಟಂತೆ ಮಾತನಾಡುತ್ತಾನೆ.

ಆತನ ಅಸಹನೆ ಸಿಡುಕು ಎಷ್ಟೊಂದು ವಿನಾಶಕಾರಿಯಾಗಿದೆಯೆಂದರೆ ಮೃದು ಮನದ ಆನಂದನ ಬಾಳನ್ನೇ ಬಲಿ ತೆಗೆದುಕೊಳ್ಳುತ್ತದೆ. ಮನೆಯ ಆರ್ಥಿಕ ಪರಿಸ್ಥಿತಿ ದಿನದಿನಕ್ಕೇ ಬಿಗಡಾಯಿಸುತ್ತಿದ್ದರೂ ಒಂದು ಕಾಸನ್ನೂ ತಂದೆಗೆ ಕೊಡುವುದಿಲ್ಲ. ವಸಂತಿಯ ಮದುವೆಗಾಗಿ ಮನೆಯ ಒಡವೆಗಳನ್ನೆಲ್ಲ ಮಾರಿ ಹಣ ಕೂಡಿಸಬೇಕಾಗಿ ಬಂದರೂ, ಕೇಶವ ದೂರ ಸರಿಯುತ್ತಾನಲ್ಲದೆ, ತಂದೆಯ ಮನೆಯ ಎದುರಿಗೇ ರಾಜಾರೋಷವಾಗಿ ದೊಡ್ಡ ಮನೆಯನ್ನು ಕಟ್ಟಿಸುತ್ತಾನೆ. ಮನೆ ಕಟ್ಟಿಸಲು ಸಾಲ ಮಾಡಿದೆನೆಂದು ಸುಳ್ಳು ಹೇಳುತ್ತಾನೆ.

ಹಣ ಹಾಗೂ ಪ್ರತಿಷ್ಠೆಯ ಮುಂದೆ ತಂದೆ, ತಾಯಿ, ಬಂಧು-ಬಳಗ ಎಲ್ಲವೂ ಅವನಿಗೆ ತೃಣಸಮಾನ, ಕಾದಂಬರಿಯ ಕೊನೆಯವರೆಗೂ ಆತನ ಪಾತ್ರ ಬೆಳವಣಿಗೆ ಅತ್ಯಂತ ಸಹಜವಾಗಿ ಚಿತ್ರಿತವಾಗಿದೆ.

ಶಾಂತಸ್ವಭಾವದ ಹಿರಿಯ ಮಗಳು ಜಯಲಕ್ಷ್ಮಿ ತುಂಬು ಸಂಸಾರದಲ್ಲಿ ತೃಪ್ತಿಯಿಂದಲೇ ಬಾಳ್ವೆ ಮಾಡಿದ್ದಾಳೆ. ಗಂಭೀರ ಸ್ವಭಾವದ ರಾಜಲಕ್ಷ್ಮಿ ಡಾ. ರಂಗನಾಥನ ಕೈಹಿಡಿದು ಸಹನೆಯಿಂದ ಜೀವನ ಸಾಗಿಸುತ್ತಾಳೆ. ಕೊನೆಕೊನೆಗಂತೂ ಪತಿಯ ಅಟ್ಟಹಾಸ, ವಿಲಾಸ, ಶ್ರೀಮಂತಿಕೆ ಇವು ಅವಳಿಗೆ ಬಾಳಿನಲ್ಲಿ ಒಂದು ರೀತಿಯ ಅಸಮಾಧಾನ

---

1. ಎಂ. ಕೆ. ಇಂದಿರಾ 'ಶಾಂತಿಧಾಮ' ಪುಟ-65

ತರುತ್ತವೆ. ಆದರೂ ಅದನ್ನು ತೋರಗೊಡುವದಿಲ್ಲ. ಅವಳ ತಿಳುವಳಿಕೆ, ಗಂಭೀರ ಸ್ವಭಾವ ತಾಳ್ಮೆ ಓದುಗರ ಗಮನ ಸೆಳೆಯುತ್ತದೆ.

ಹೊಟ್ಟೆಕಿಚ್ಚಿನ ಅಸಹನೆಯ ಸ್ವಭಾವದವಳಾದ ಸೀತಾಲಕ್ಷ್ಮಿಯ ಸ್ವಭಾವ ಕೊನೆಯ ವರೆಗೂ ಎದ್ದು ಕಾಣುತ್ತದೆ. ವಿನಯಶೀಲನಾದ ಒಳ್ಳೆಯ ವರನಿಗೆ ಕೊಟ್ಟು ಮದುವೆ ಮಾಡಿದ್ದರೂ ತನ್ನ ಗಂಡ ರಾಜಲಕ್ಷ್ಮಿ, ಜಯಲಕ್ಷ್ಮಿಯ ಗಂಡಂದಿರಂತೆ ಶ್ರೀಮಂತರಲ್ಲವೆಂಬುದೇ ಅವಳಿಗೆ ಅಸಮಾಧಾನ.

ದುರ್ಬಲ ಮನದ, ಮೃದುಸ್ವಭಾವದ ಆನಂದ ಕಾವ್ಯಜೀವಿ ಧ್ಯೇಯಾದರ್ಶಗಳ ಕನಸು ಕಟ್ಟಿಕೊಂಡವನು. ಪರೀಕ್ಷೆಯಲ್ಲಿ ಹೆಚ್ಚಿನ ಅಂಕ ಗಳಿಸಿ ಉನ್ನತ ಸ್ಥಾನ ಪಡೆದಿದ್ದೂ ಪರೀಕ್ಷೆಯಲ್ಲಿ ಉತ್ತೀರ್ಣರಾದವರ ಪಟ್ಟಿಯಲ್ಲಿ ತನ್ನ ಹೆಸರು ಇಲ್ಲದ್ದನ್ನು ಕಂಡು ನಿರಾಶನಾಗುತ್ತಾನೆ. ಕಟ್ಟಿಕೊಂಡ ಧ್ಯೇಯಾದರ್ಶಗಳು ಮಣ್ಣುಪಾಲಾದು ವೆಂದು ಭಾವಿಸುತ್ತಾನೆ. ಅಣ್ಣ ಕೇಶವನಿಂದ ಬರಬಹುದಾದ ನಿಷ್ಠೂರವಾದ ಮಾತು ಗಳನ್ನೂ ಕಟುನಿಂದೆಗಳನ್ನು ನೆನೆದು ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ.

'ಸತ್ಯ' ಎಳೆತನದಿಂದಲೇ ದುಷ್ಟನಾಗಿ, ಪುಂಡನಾಗಿ ಕಾಣಿಸಿಕೊಂಡಿದ್ದಾನೆ. ಓದುಬರಹ ಆತನಿಗೆ ಆಗದು. ಕಳವು ಮಾಡುವುದು ಸುಳ್ಳು ಹೇಳುವದು, ಮನೆ ಯಲ್ಲಿದ್ದ ಬಡವಿದ್ಯಾರ್ಥಿಗಳಿಗೆ ತೊಂದರೆ ಕೊಡುವದು ಅವನ ಸ್ವಭಾವ. ಬರ ಬರುತ್ತ ದುಶ್ಚಟಗಳ ದಾಸನಾಗುತ್ತಾನೆ. ಶಾಲೆಯಲ್ಲಿ ನಡೆದ ದಂಗೆಯಲ್ಲೂ ಭಾಗ ವಹಿಸಿ ಜೈಲಿಗೆ ಹೋಗುತ್ತಾನೆ. ಮನೆಯಲ್ಲಿಟ್ಟ ಅತ್ತಿಗೆಯ ಬಂಗಾರದ ಸರವನ್ನೂ ಕಳವು ಮಾಡುತ್ತಾನೆ. ಅವನ ಮೇಲೆ ಸಂಶಯವಿದ್ದ ಪದ್ದಮ್ಮನವರು ವಿಚಾರಿಸಿ ದಾಗ ತಂದೆ-ತಾಯಿಗಳಿಗೆ ಕೊಡುವ ಉತ್ತರ ತಿರಸ್ಕಾರದ ಕಟುನುಡಿಗಳು ಅವನ ದುಷ್ಟತನದ ಪರಮಾವಧಿಯನ್ನೇ ತೋರಿಸುತ್ತವೆ.

ಪದ್ದಮ್ಮನವರು ಸರದ ಬಗ್ಗೆ ಸತ್ಯವನ್ನು ವಿಚಾರಿಸಿದಾಗ 'ನಾನ್ಯಾಕಮ್ಮ ಕಾಣಲಿ ? ಅದು ಎಂಥ ಸರವೋ ನಾನು ಕಣ್ಣಲ್ಲೂ ಕಾಣೆ, ನನಗೇನು ಗೊತ್ತು ? ಎಲ್ಲಾ ಬಿಟ್ಟು ನೀನು ನನ್ನ ಯಾಕಮ್ಮ ಕೇಳ್ತಿ ?'[1] ಎಂದಾಗ ಪದ್ದಮ್ಮನವರಿಗೆ ಸಿಟ್ಟು ಬಂತು-

"ನಿನ್ನ ಒಬ್ಬನ್ನೇ ಏನೋ ಮನೆ ಮಂದೀನೆಲ್ಲ ಕೇಳಿದಿನಿ ಪಾಪ, ಆ ಕೂಲಿ ಯೋರನ್ನೆಲ್ಲ ಹೊಡೆಸಿಯಾಯ್ತು, ನೀನು ಮನೆಯೋನೆ ತಾನೆ ಅದಕ್ಕೆ ಕೇಳ್ದೆ" ಅವನ ದನಿ ಬಿರುಸಾಯಿತು-"ನನಗೂ ಗೊತ್ತಮ್ಮ ನಾನು ಸುಮ್ಮನೇ ಕೂತಿರೋನು ಅಂತ ನನ್ನ ಮೇಲೆ ಅನುಮಾನ ನಿನಗೆ. ಹಾಗೇ ಆನಂದ, ತಿಪ್ಪ, ಅನಂತು, ಎಲ್ಲಾರನ್ನೂ

1. ಎಂ. ಕೆ. ಇಂದಿರಾ 'ಶಾಂತಿಧಾಮ' ಪುಟ-169

ಕೇಳಬೇಕಿತ್ತು ?"[1] ಎಂದು ತಾಯಿಯನ್ನೇ ಕೇಳುತ್ತಾನೆ. ಪದ್ದಮ್ಮನವರಿಗೆ ಅವನ ಅಧಿಕ ಪ್ರಸಂಗದ ಮಾತುಗಳಿಂದ ಅವನ ಬಗೆಗೆ ಜಿಗುಪ್ಸೆಯಾಯಿತು. ಸಹನೆ ಮೀರಿದ ಪದ್ದಮ್ಮನವರು–

"ಪ್ರಾರಬ್ಧವೇ, ಗೋವಿನ ಹೊಟ್ಟೇಲಿ ನಾಯಿ ಹುಟ್ಟಿದ ಹಾಗೆ ಯಾಕೆ ಹುಟ್ಟಿದೆ ನೀನು ನನ್ನ ಹೊಟ್ಟೇಲಿ? ಎಂದು ದುಃಖ, ಅವಮಾನದಿಂದ ಅರಚಿದಾಗ–

"ಗೋವು ನಾಯಿಯ ಜೊತೆ ಕೂಡಿರಬೇಕು, ಅದಕ್ಕೆ ನಾಯಿ ಹುಟ್ಟಿದೆ.[2] ಎಂಬ ದುಷ್ಟತನದ ಮಾತುಗಳನ್ನು ತಾಯಿಗೆ ಆಡುತ್ತಾನೆ. ಛಟೀರನೇ ಬಿದ್ದಿತು ಸತ್ಯನ ಕೆನ್ನೆಗೆ, ರಾಯರು ಆರ್ಭಟಿಸಿದರು.

"ಭ್ರಷ್ಟ, ಅವಿವೇಕಿ, ಚಾಂಡಾಲ...ತೊಲಗು ಮನೆಯಿಂದ, ಮೊದಲು ಸಾಯಿ, ಸಾಯಿ, ಎಂದು ಸತ್ಯನ ಮೇಲೆ ಮತ್ತೆ ಕೈ ಚಾಚಿದರು.

"ಶ್ರೀನಿವಾಸರಾಯರೇ, ನಿಮ್ಮ ಪೌರುಷ ನನ್ನ ಮೇಲೆ ಏನೂ ತೋರಿಸಬೇಡಿ. ನಾನೇನು ನಿಮ್ಮ ಗಂಟು ನುಂಗಿಲ್ಲ. ನಿಮ್ಮ ಕಕ್ಷಿಗಾರನೂ ಅಲ್ಲ. ನೀವು ಈಗ ನನ್ನ ಹೊಡೆಯೋ ವಯಸ್ಸೂ ಅಲ್ಲ, ನೀವು ಇನ್ನು ನಾಲಕ್ವರ್ಷ ಈ ಊರಲ್ಲಿ ಬಾಳಬೇಕು ಅಂತ ಆಸೆ ಇದ್ರೆ ನನ್ನ ಸುದ್ದಿಗೆ ಬರಬೇಡಿ"[3] ಎಂದು ದೇವರಂತಹ ತಂದೆ–ತಾಯಿಗಳಿಗೇ ತಿರುಗಿ ನಿಲ್ಲುತ್ತಾನೆ. ಬದುಕಿನಲ್ಲಿ ಅದುವರೆಗಿದ್ದ ಶ್ರೀನಿವಾಸರಾಯರ ಹಾಗೂ ಪದ್ದಮ್ಮನವರ ತಾಳ್ಮೆ ಒಂದೇ ಒಂದು ಬಾರಿ ಇಲ್ಲಿ ಸ್ಫೋಟಗೊಂಡಿದೆ. ಅನ್ಯಾಯವನ್ನು ಸಹಿಸದ ಭೀಷಣ ರೋಷ ಇಲ್ಲಿದೆ. ತಂದೆ–ತಾಯಿಯ ಯೋಗ್ಯತೆಯನ್ನು ತಿಳಿಯದ 'ಸತ್ಯ'ನ ಉದ್ಧಟತನದ ಅವಿವೇಕದ ಪರಮಾವಧಿಯನ್ನು ಕಾಣುತ್ತೇವೆ, ಶ್ರೀನಿವಾಸರು ಬದುಕಿನುದ್ದಕ್ಕೂ ಸಂಚಯಿಸಿದ್ದ ಸಹನೆ ಸ್ಫೋಟಗೊಳ್ಳುವ ರೀತಿ ಈ ಸನ್ನಿವೇಶದಲ್ಲಿ ಅತ್ಯಂತ ಹೃದಯಸ್ಪರ್ಶಿಯಾಗಿದೆ.

ಶ್ರೀನಿವಾಸರಾಯರ ಮನೆಯಲ್ಲಿದ್ದ ಹಣ, ಬರಿದಾಗಿ ವಸ್ತು, ಒಡವೆಗಳನ್ನೆಲ್ಲ ಮಾರಿ ದಿನ ತಳ್ಳುತ್ತಿರುತ್ತಾರೆ, ಅಂತಹ ಸಮಯದಲ್ಲಿ ಸೀತಾಲಕ್ಷ್ಮಿಯ ಮಗಳು ಹಳದೀ ಬಣ್ಣದ ಜರೀ ಲಂಗಕ್ಕೆ ಹಣ ಬೇಡಿದಾಗ ಸೀತಾಲಕ್ಷ್ಮಿ ಮಗಳಿಗೆ 'ದರಿದ್ರ ರಂಡೆ, ನಿಮ್ಮಪ್ಪನ ಕೇಳು ಹಳದೀ ಕಣದ ಲಂಗಾನ, ನನ್ನ ಹತ್ರ ಯಾಕೇ ಬಡಕೋತಿಯಾ ? ಏನು ಪುಣ್ಯ ಮಾಡಿ ಹುಟ್ಟಿದ್ದಿಯೋ ನನ್ನ ಹೊಟ್ಟೇಲಿ ಎಲ್ಲ ನನ್ನ ಪ್ರಾರಬ್ಧ.[4] ಎಂದು ಬಯ್ಯುವದು ಅಸಹನೆ, ಅಸಮಾಧಾನವನ್ನೇ ತೋರಿಸುತ್ತದೆ.

---

1. ಎಂ. ಕೆ. ಇಂದಿರಾ 'ಶಾಂತಿಧಾಮ' ಪುಟ–180.
2. —ಅದೇ— ಪುಟ–180.
3. —ಅದೇ— ಪುಟ–181.
4. ಎಂ. ಕೆ. ಇಂದಿರಾ "ಶಾಂತಿಧಾಮ" ಪುಟ–203.

ದಿಟ್ಟ ಸ್ವಭಾವದ ಅಲಂಕಾರಪ್ರಿಯೆ, ವಿಲಾಸೀ ಮನೋಭಾವನೆಯ ಭಾಗ್ಯ, ದಿಟ್ಟಳಾಗಿ ಸ್ವತಂತ್ರ ಮಾರ್ಗವನ್ನೇ ಹುಡುಕಿಕೊಂಡಿದ್ದಾಳೆ. ವರನನ್ನು ಆಯ್ಕೆ ಮಾಡುವದರಿಂದ ಹಿಡಿದು ಗಂಡ ಸತ್ತಮೇಲೆ ನರ್ಸ ಆಗಿ ಸ್ವತಂತ್ರ್ಯವಾಗಿ ವರ್ತಿಸುತ್ತಾಳೆ.

ಮೃದುಸ್ವಭಾವದ ವಾಸಂತಿ ಭಾವನಾ ಜೀವಿ ಕಾದಂಬರಿಯಲ್ಲಿ ಅವಳ ವ್ಯಕ್ತಿ ಚಿತ್ರಣ ಅಷ್ಟೇ ಕೋಮಲವಾಗಿದೆ. ಮನೆಯ ಪರಿಸ್ಥಿತಿಯನ್ನೆಲ್ಲ ಅರ್ಥಮಾಡಿ ಕೊಂಡ ಸೂಕ್ಷ್ಮಸ್ವಭಾವದ ವಾಸಂತಿ ತಂದೆ–ತಾಯಿಗಾಗಿ ಅವರ ಕಷ್ಟದ ಬದುಕಿಗಾಗಿ ಮನದಲ್ಲೇ ನೋಯುತ್ತಾಳೆ. ಮನೆಯಲ್ಲಿ ವಿದ್ಯಾಭ್ಯಾಸಕ್ಕಾಗಿ ಇದ್ದ ಶಾಂತ ಸ್ವಭಾವದ ಅನಂತನನ್ನು ಮೆಚ್ಚಿಕೊಂಡಿದ್ದಾಳೆ, ಆದರೂ ಅದನ್ನು ಹಿರಿಯರಿಗೆ ಹೇಳುವದಿಲ್ಲ. ತಂದೆ–ತಾಯಿ ಒಪ್ಪಿದ ವರನನ್ನು ಮದುವೆಯಾಗಲು ಸಿದ್ಧಳಾಗು ತ್ತಾಳೆ. ಪದ್ಮಮ್ಮನವರು ತನ್ನ ಮದುವೆಗಾಗಿ ಒಡವೆಗಳನ್ನು ತೆಗೆದುಕೊಟ್ಟಾಗ ಅನ್ನ–ನೀರು ಬಿಟ್ಟು ದುಃಖಿಸಿದ್ದಾಳೆ.

'ಹೆಣ್ಣಿನ ಆಕಾಂಕ್ಷೆ'ಯ 'ಲೋಲಾಕ್ಷಿ'ಯಂತೆಯೇ ಇವಳೂ ಗೋಪಾಲನ ಮೂರ್ತಿಯನ್ನು ಆರಾಧಿಸುತ್ತಾಳೆ. 'ಉಡುಪಿ ಕಿಸ್ನಾ ಪೊಡವಿಗೊಡೆಯ' ಇದು ಇಂದಿರಾ ಅವರು ಬಾಲ್ಯದಲ್ಲಿ ಕಲಿತ ಹಾಡು. ಅದನ್ನೇ ಇಲ್ಲಿ ವಾಸಂತಿಯ ಮೂಲಕ ನೆನೆದಿದ್ದಾರೆ.

ವರದಕ್ಷಿಣೆ ಜಗಳದಿಂದ ಅವಳ ಮದುವೆ ಗೊತ್ತಾದ ವರನೊಂದಿಗೆ ನಡೆಯದೇ ಅವಳ ಪ್ರೀತಿಗೆ ಪಾತ್ರನಾದ ಅನಂತನೊಂದಿಗೆ ನಡೆಯುತ್ತದೆ.

ಶ್ರೀನಿವಾಸರಾಯರ ಇನ್ನೊಬ್ಬಮಗ ಕೃಷ್ಣಮೂರ್ತಿ ಬುದ್ಧಿಶಾಲಿ, ಹಾಗೂ ವಿವೇಕಿ. ಮನೆಯ ಪರಿಸ್ಥಿತಿಯ ಅರಿವು ಅವನಿಗಿದೆ. ಅಣ್ಣ ಕೇಶವನ ಸ್ವಭಾವವೂ ತಿಳಿದಿದೆ. ತಾನು ವಿದ್ಯೆ ಕಲಿತು ತಂದೆ–ತಾಯಿಗಳಿಗೆ ನೆಮ್ಮದಿಯನ್ನು ಕೊನೆಗಾಲ ದಲ್ಲಾದರೂ ನೀಡಬೇಕೆಂಬ ಧ್ಯೇಯ ಉಳ್ಳವನು. ಅವನ ಉನ್ನತ ಶಿಕ್ಷಣಕ್ಕೆ ವಿದೇಶಕ್ಕೆ ಹೋದಾಗಲೇ ಮನನೊಂದ ಶ್ರೀನಿವಾಸರಾಯರು ಪದ್ಮಮ್ಮನವರೊಂದಿಗೆ ಯಾತ್ರೆಗೆ ಹೊರಡುತ್ತಾರೆ. ಯಾತ್ರೆಯಲ್ಲಿಯೇ ಪದ್ಮಮ್ಮನವರ ಮರಣವಾಗುತ್ತದೆ. ಶ್ರೀನಿವಾಸರಾಯರು 'ಶಾಂತಿಧಾಮ'ಕ್ಕೆ ನಡೆಯುತ್ತಾರೆ. ಹೀಗಾಗಿ ಅವನ ಆಶೆ ನೆರವೇರುವದಿಲ್ಲ.

ಮನೆಯಲ್ಲಿ ಹೆತ್ತ ಮಕ್ಕಳಿಂದ ಪಡೆಯಲಾಗದ ಗೌರವ ಪ್ರೀತಿ, ಅಂತಃಕರಣ ವನ್ನು ಶ್ರೀನಿವಾಸರಾಯರು ಸಂಬಂಧಿಗಳೂ, ಹಿತೈಷಿಗಳಾದ ತಿಪ್ಪು. ಅವನ ಹೆಂಡತಿ ನರಸು, ಹಾಗೂ ವಿದ್ಯಾರ್ಥಿ ಅನಂತ, ದತ್ತಾತ್ರಿ ಇವರಿಂದ ಪಡೆಯುತ್ತಾರೆ.

'ತಿಪ್ಪು' ಶ್ರೀನಿವಾಸರಾಯರ ಅಕ್ಕನಮಗ. ಒಳ್ಳೆಯ ಗೃಹಸ್ಥ, ಕೇಶವ ತಂದೆಯಿಂದ ದೂರಾದರೂ 'ತಿಪ್ಪು' ರಾಯರ ಹಾಗೂ ಪದ್ಮಮ್ಮನವರ ಎಲ್ಲ ಕಷ್ಟ–

ಸುಖಗಳಲ್ಲಿ ಮಗನಂತೆ ಹೆಗಲು ಕೊಟ್ಟಿದ್ದಾರೆ. ಪದ್ದಮ್ಮನವರು ಮಕ್ಕಳ ಮದುವೆ ಖರ್ಚಿಗಾಗಿ ಒಡವೆಗಳನ್ನೆಲ್ಲ ತೆಗೆದಾಗ ಪ್ರೀತಿಯ ಮಗನಂತೆ ದುಃಖಿಸಿದ್ದಾನೆ. ಅವನ ಅಂತಃಕರಣ, ಧೈರ್ಯ, ಶ್ರೀನಿವಾಸರಾಯರಿಗೆ ಯಾವಾಗಲೂ ತಂಪು ಕೊಡುತ್ತದೆ. ವರದಕ್ಷಿಣೆಯಿಂದಾಗಿ ವಾಸಂತಿಯ ಮದುವೆ ನಿಂತು ಹೋಗುತ್ತಿದ್ದ ಸಮಯದಲ್ಲಿ ಅನಂತನಿಂದ ವಾಸಂತಿಗೆ ಮಾಂಗಲ್ಯಕಟ್ಟಿಸಿ ರಾಯರ ಮನೆತನದ ಗೌರವವನ್ನು ಕೊನೆಯವರೆಗೂ ಕಾಪಾಡುತ್ತಾನೆ.

'ನರಸು' ತಿಪ್ಪುವಿಗೆ ತಕ್ಕಹೆಂಡತಿ, ಸದ್ಗೃಹಿಣಿ, ಉದಾರಿ. ಮಲತಾಯಿಯ ಕೈಯಲ್ಲಿ ನೊಂದವಳು. ಸಹನೆ ಅವಳಿಗೆ. ತಾನೇ ತಾನಾಗಿ ಬಂದದ್ದು ವಿದ್ಯೆಯಿಲ್ಲ ದಿದ್ದರೂ 'ಜೀವನ ಕಲೆ'ಯಲ್ಲಿ ಮುಂದಾಗಿದ್ದಾಳೆ. ರಾಯರನ್ನು ತಂದೆಯಂತೆ ಕಂಡಿದ್ದಾಳೆ. ನರಸು ಆದರ್ಶ ಹಿಂದೂ ನಾರಿ.

ವಿನಯಶೀಲನಾದ ಅನಂತ ಕಷ್ಟಪಟ್ಟು ವಿದ್ಯೆ ಕಲಿಯುತ್ತಾನೆ. ಉಗ್ರನರಸಿಂಹ ನಂತೆ ಇದ್ದ ತಂದೆಯ ಕೈಯಲ್ಲಿ ಹೆಣಗಾಡಿದ ತಾಯಿಯನ್ನು ಕೊನೆಗಾಲದಲ್ಲಿಯಾದರೂ ಸುಖದಿಂದ ಇಡಬೇಕು ಎಂದು ಕನಸು ಕಟ್ಟಿಕೊಂಡಿರುತ್ತಾನೆ. ಅವನ ಜೀವನಕ್ಕೆ ಸಾಕಾಗುವಷ್ಟು ಆಸ್ತಿಯಿದ್ದರೂ, ತಂದೆಯ ಜಿಪುಣತನದಿಂದ ಇವನಿಗೆ ಏನೂ ದಕ್ಕುವು ದಿಲ್ಲ. 'ಸತ್ಯ' ಕೊಟ್ಟ ಕಿರಿಕಿರಿಯನ್ನು ಸಹಿಸಿ ರಾಯರ ಮನೆಯಲ್ಲಿದ್ದು ಶಿಕ್ಷಣ ಪಡೆಯು ತ್ತಾನೆ. ಪರದೇಶಿಯಾಗಿ ಮಲತಾಯಿಯ ಕೈಯಲ್ಲಿದ್ದ 'ಸರಸು'ವನ್ನು ಮನದಲ್ಲೇ ಮೆಚ್ಚಿಕೊಳ್ಳುತ್ತಾನೆ. ಆದರೆ ತಂದೆಯ ವಿರೋಧದಿಂದಾಗಿ ಆತನ ಮದುವೆ ಅವ ಳೊಂದಿಗೆ ನಡೆಯುವುದಿಲ್ಲ, ಆದರೆ ಕೊನೆಗೆ ವಿಧಿ ವೈಚಿತ್ರ್ಯದಿಂದಾಗಿ ತನಗೆ ಆಶ್ರಯ ವಿತ್ತು, ಪ್ರೀತಿಯಿಂದ ಶಿಕ್ಷಣಕೊಟ್ಟ ಶ್ರೀನಿವಾಸರಾಯರ ಮಗಳು ವಾಸಂತಿಯನ್ನೇ ಮದುವೆಯಾಗಬೇಕಾಗುತ್ತದೆ.

'ನರಸು'ನ ತಂಗಿ 'ಸರಸ' ಅಕ್ಕನಂತೆಯೇ ಸಹನಶೀಲಳು ಅನಂತನನ್ನು ಮನದಲ್ಲೇ ಮೆಚ್ಚಿದ್ದಾಳೆ. ಆದರೆ ನರಸಿಂಹಯ್ಯನ ಹಟದಿಂದಾಗಿ ಅನಂತನೊಂದಿಗೆ ನಡೆಯುವ ಮದುವೆ ತಪ್ಪಿ ಬೇರೊಬ್ಬ ವರನೊಂದಿಗೆ ನಡೆಯುತ್ತದೆ. ಬಂದದ್ದನ್ನು ಸ್ವೀಕರಿಸುವ ಸಮಾಧಾನಿ ಅವಳು.

ವಿಧವೆ 'ಬೆಳ್ಳಮ್ಮ'ನವರು ಪದ್ದಮ್ಮನವರಿಗೆ ತಾಯಿಯಾಗಿ ಬಾಳಿದ್ದಾರೆ. ಅವರ ಸಂಸಾರಕ್ಕಾಗಿ ಹಗಲಿರುಳು ನಿಸ್ವಾರ್ಥ ಸೇವೆ ಸಲ್ಲಿಸಿದ್ದಾರೆ. ಆ ಸಂಸಾರದ ಕಷ್ಟಸುಖ ಗಳಲ್ಲಿ ಭಾಗಿಯಾದಿದ್ದಾರೆ. ಅವರ ಗಾಂಭೀರ್ಯ ಮೌನ ಓದುಗರ ಗಮನ ಸೆಳೆಯುತ್ತದೆ.

ವಾರಾನ್ನದ ಹುಡುಗ ದತ್ತಾತ್ರೇಯನ ಭಕ್ತಿ ಹೆಚ್ಚಿನದು, ಮೈಸೂರಿನಲ್ಲಿ ರಾಯರನ್ನು-ಪದ್ದಮ್ಮನವರನ್ನೂ ತನ್ನ ಮನೆಗೆ ಕರೆದುಕೊಂಡು ಹೋಗಿ ಅವರಿಗೆ ಸತ್ಕಾರ ಮಾಡುತ್ತಾನೆ. ಹೆತ್ತ ಮಗನಿಂದ ಪಡೆಯಲಾರದ ಪ್ರೀತಿಯನ್ನು ವಾರಾನ್ನದ ಹುಡುಗನಿಂದ ಪಡೆಯುತ್ತಾರೆ ಈ ದಂಪತಿಗಳು.

ಪದ್ಮಮ್ಮನವರು 'ಭಾಗ್ಯ'ಳ ಮದುವೆಗಾಗಿ ಚಿನ್ನದ ಡಾಬನ್ನು ಮುರಿಸುವದನ್ನು ಕಂಡ ಅಕ್ಕಸಾಲಿ ಸೋಮಾಚಾರಿ ಕೂಡ ಮನದಲ್ಲಿ ದುಃಖಿಸುತ್ತಾನೆ. ಶ್ರೀನಿವಾಸರಾಯರ ಸಂಸಾರದ ಬಗೆಗೆ ಅವನಿಟ್ಟಿರುವ ಗೌರವ, ನಿಷ್ಠೆ ಓದುಗರ ಮನದಲ್ಲಿ ನಿಲ್ಲುತ್ತದೆ.

ವಾಸಂತಿಯ ಮದುವೆಗಾಗಿ ತಮ್ಮ ಮಾವನವರು ಕೊಟ್ಟ ಬೆಳ್ಳಿ ತಂಬಿಗೆಯನ್ನು ಒಡೆಸಬೇಕಾದ ಸ್ಥಿತಿ ಬರುತ್ತದೆ. ಇದೆ ಶ್ರೀನಿವಾಸರಾಯರ ಸಂಸಾರ ಒಡೆಯುವದನ್ನೇ ಸೂಚಿಸುತ್ತದೆ.

ಶ್ರೀನಿವಾಸರಾಯರ ಸುಂದರ ಸಂಸಾರ ಒಡೆಯಲು ಕಾರಣ ಕಾಶೀಪತಯ್ಯ ಹಾಗೂ ಪುಟ್ಟತಾಯಮ್ಮನಂತಹ ಕುಹಕಿಗಳು. ಇಂತಹ ವ್ಯಕ್ತಿಗಳು ನಮ್ಮ ಸಮಾಜದಲ್ಲಿ ಕಾಣುವ ಪಾತ್ರಗಳು. ಮತ್ತೊಬ್ಬರ ಸಂಸಾರಕ್ಕೆ ಬೆಂಕಿ ಹಚ್ಚಿ ತಮ್ಮ ಬೇಳೆಬೇಯಿಸಿ ಕೊಂಡು ಹಿಂದಿನಿಂದ ನಗುವ ಜನರ ಪ್ರತೀಕ ಇವರು. ಕೇಶವನಿಗೆ ದುರ್ಬೋಧೆಯನ್ನು ಮಾಡುತ್ತಾರೆ.

"ಮೊದಲಿನ ಕಾಲವಲ್ಲಪ್ಪ ಇದು, ಪಾಪ, ನಿಮ್ಮ ತಂದೆ, ತಾಯೀದು ಒಳ್ಳೇ ಮನಸ್ಸು. ಕೈ ತೊರೆದು ಖರ್ಚು ಮಾಡಿ, ಅಭ್ಯಾಸ, ಈಗಾಗಲೇ ಮೂರು ಮದುವೆ ಮಾಡಿದ್ದಾರೆ. ಇನ್ನು ಸಾಲು ಸಾಲು ಮದುವೆ ಮುಂಜಿ ಮಾಡೋದಿದೆ. ಈಗ ನಡೆದ ಹಾಗೆ ಮುಂದೂ ನಡೆಯುತ್ತೆ ಅಂತ ಹೇಳೋಕಾಗೊಲ್ಲ. ನೀನೂ ಹಾಗೆ ಕೈ ಢೀಲ ಮಾಡಿಕೋ ಬಾರದು"[1]

ಇದು ಕಾಶೀಪತಯ್ಯನ ಉಪದೇಶವಾದರೆ ಪುಟ್ಟತಾಯಮ್ಮನದೂ ಅದೇ. ಆದರೆ ಅವಳು ಹೇಳುವ ರೀತಿ ಬೇರೆ–

"ಚೆನ್ನಾಯ್ತು ಬಿಡಿ ಅಂದ್ರೆ ನೀವೂ! ಅವರೇನು ಎಳೆಯ ಕೂಸೇ, ಎಲ್ಲಾ ಹೇಳಿಕೊಡೋಕೆ. ಈಗಲೇ ಇವರೇನು ಸಂಸಾರದ ಜವಾಬ್ದಾರಿ ಹೊರಬೇಕೆ ? ನಾಲ್ಕು ದಿನ ಹುಡುಗರ ಹಾಗೆ ಓಡಾಡಿಕೊಂಡಿರಲಿ"[2] ಎಂದು ಉಪದೇಶಿಸುತ್ತಾಳೆ.

ಇಲ್ಲೆಲ್ಲ ಲೇಖಕಿ ಇಂದಿರಾ ಅವರ ಸೂಕ್ಷ್ಮ ನಿರೀಕ್ಷಣಾ ಶಕ್ತಿಯನ್ನು ಕಾಣುತ್ತೇವೆ. ಕಾಶೀಪತಯ್ಯ ಪುಟ್ಟ ತಾಯಮ್ಮನ ಕುಹಕತನ, ಅಸಹನೆಯ ಸ್ವಭಾವವನ್ನು ಇಂದಿರಾ ಅವರು ಅತ್ಯಂತ ವ್ಯಂಗ್ಯವಾಗಿ ಚಿತ್ರಿಸಿದ್ದಾರೆ.

ದೊಡ್ಡ ಪಾತ್ರೆಯಲ್ಲಿ ನಾಲ್ಕಾರು ತಿಂಡಿಗಳನ್ನು ತೆಗೆದುಕೊಂಡು ಬೀದಿಯ ಹೆಂಗಸರಿಗೆಲ್ಲ ಬೀಗರ ಮನೆಗೆ ಪಾತ್ರೆಯ ತುಂಬ ತಿಂಡಿಗಳನ್ನು ಒಯ್ಯುತ್ತೇನೆಂದು ಹೇಳುವ ಪುಟ್ಟತಾಯಮ್ಮನ ಢೋಂಗಿತನವನ್ನು ಅಣಕವಾಗಿಮಾಡಿದ್ದಾರೆ.

---

1. ಅದೇ ; ಪುಟ–22.
2. ಅದೇ ; ಪುಟ

ಇಂದಿರಾ ಅವರು ತಮ್ಮ ಅನೇಕ ಕಾದಂಬರಿಗಳಲ್ಲಿ ಮುಂದೆ ನಡೆಯುವ ಘಟನೆಗಳನ್ನು ಸಾಂಕೇತಿಕವಾಗಿ ಸೂಚಿಸುತ್ತಾರೆ. ಇಲ್ಲಿಯೂ ಸಹ ದೇವರಿಗೆ ದೀಪ ಇಡುವಾಗ ಕಾಲುದೀಪ ಉರುಳುವದು, ಆನಂದನ ದುರ್ಮರಣವನ್ನು ಸಾಂಕೇತಿಕ ವಾಗಿ ಸೂಚಿಸುತ್ತದೆ.

ಅದೇ ರೀತಿ ವಾಸಂತಿಯ ಮದುವೆ ಸಮಯದಲ್ಲಿ ಮನೆಗೆ ಸುಣ್ಣ ಬಣ್ಣ ಹಚ್ಚುವಾಗ ಮನೆಯ ಕುಲದೈವ ವೆಂಕಟರಮಣ ಸ್ವಾಮಿಯ ಫೋಟೋ ಚೂರಾಗುವುದು ಮುಂದಿನ ದುರ್ಘಟನೆಗಳನ್ನು ಸೂಚಿಸುತ್ತದೆ.

ಶ್ರೀನಿವಾಸರಾಯರು ಪದ್ದಮ್ಮನವರೊಂದಿಗೆ ಯಾತ್ರೆಗೆ ಹೋದಾಗ ಪದ್ದಮ್ಮನ ಕೈಯಲ್ಲಿದ್ದ ನೈವೇದ್ಯದ ದೊನ್ನೆಯನ್ನು ದೊಡ್ಡ ಹದ್ದೊಂದು ಎತ್ತಿಕೊಂಡೊಯ್ಯುವದು ಪದ್ದಮ್ಮನವರ ಪ್ರಾಣ ಹೋಗುವದನ್ನು ಸಾಂಕೇತಿಕವಾಗಿ ಸೂಚಿಸುತ್ತದೆ.

ಈ ಕಾದಂಬರಿ ತುಂಬಿಲ್ಲ ಇಂದಿರಾ ಅವರು ಮನ ಮಿಡಿದ ಸನ್ನಿವೇಶಗಳನ್ನು ತಂದಿದ್ದಾರೆ.

ಸೀತೆಯ ಮಗಳು ಹಳದೀ ಜರತಾರಿ ಲಂಗಕ್ಕಾಗಿ ಹಟ ಮಾಡಿದಾಗ ರಾಯರು ಮೊಮ್ಮಗಳನ್ನು ಎತ್ತಿಕೊಂಡು

"ಬಾ ಕೂಸು, ನಿನಗೆ ಕಣದ ಲಂಗ ಕೊಡಿಸ್ತೀನಿ" ಮಗು ಅಜ್ಜನ ಹೆಗಲ ಮೇಲೆ ಒರಗಿಕೊಂಡಿತು. ರಾಯರು ಪೇಟೆಯ ಕಡೆಗೆ ಹೊರಟರು. ಅವರಿಗೆ ಮಕ್ಕಳನ್ನು ಸರಿಯಾಗಿ ಎತ್ತಿಕೊಳ್ಳಲೂ ಬಾರದು. ಹೆಂಗಸರಂತೆ ಸೊಂಟದ ಮೇಲೆ ಎತ್ತಿಕೊಂಡಿದ್ದಾರೆ. ಅದು ಜಾರಿ ಹೋಗುತ್ತಿದೆ. ಮತ್ತೆ ಮತ್ತೆ ಮೇಲೆರಿಸುತ್ತಾರೆ"[1]

ಇಂದಿರಾ ಅವರು ಇಲ್ಲಿ ಅಜ್ಜನ ವಾತ್ಸಲ್ಯ, ಪ್ರೀತಿಯನ್ನು ಮನಮುಟ್ಟುವಂತೆ ಚಿತ್ರಿಸಿದ್ದಾರೆ.

ಒಂದು ಕಾಲಕ್ಕೆ ದೊಡ್ಡ ಕುಟುಂಬದ, ಸುಂದರ ಸಂಸಾರದ ಪುತ್ರನಾಗಿ, ಒಡೆಯನಾಗಿ ಭವ್ಯ ಬಾಳನ್ನು ಬಾಳಿದ ಶ್ರೀನಿವಾಸರಾಯರು ಬಸ್ಸಿಗೆ ಕೊಡಲು ದುಡ್ಡು ಇಲ್ಲದೆ ಹರಿದ ಒಳಅಂಗಿಯಲ್ಲಿ ರಣರಣ ಬಿಸಿಲಲ್ಲಿ ಬರಿಗಾಲಲ್ಲಿ ಮುತ್ತಿನ ಸರಕ್ಕೆ ನಡೆದು ಹೋಗಬೇಕಾಗುತ್ತದೆ. ಇದು ವಿಧಿಯ ವಿಪರ್ಯಾಸ.

ಪದ್ದಮ್ಮನವರಲ್ಲಿದ್ದ ಕೇವಲ ನಾಲ್ಕಾರು ಸೀರೆಗಳನ್ನೇ ಕೊನೆಯ ಮಗಳಿಗೆ ಮಡಿಲು ತುಂಬಿ ಕಳುಹಿಸುವರು. ಸೀತೆಯ ಮಗಳ ಲಂಗಕ್ಕಾಗಿ ಕತ್ತರಿಸಿ ಉಳಿದ ಒಂದು ತುಂಡು ರೇಶಿಮೆಯ ಸೀರೆಯನ್ನು ವಾಸಂತಿಯ ಮಗಳಿಗೆ ಕೊಡುತ್ತ 'ಇದಿಷ್ಟೇ ಕಾಣಿಕೆ ಈ ಅಜ್ಜಿಯದು' ಎನ್ನುವ ಪದ್ದಮ್ಮನವರ 'ತ್ಯಾಗಮೂರ್ತಿ' ಓದುಗರ ಹೃದಯದಲ್ಲಿ ಶಾಶ್ವತವಾಗಿ ನಿಲ್ಲುತ್ತದೆ.

1. ಅದೇ ಪುಟ-213.

ಪದ್ಮಮ್ಮನವರ ಮರಣದ ಸನ್ನಿವೇಶವಂತೂ ಕರುಣಾಜನಕವಾದದ್ದು. ಬದುಕಿನ ಹೊಡೆತಕ್ಕೆ ಸಿಕ್ಕು ತತ್ತರಿಸಿ, ಎಲ್ಲವನ್ನೂ ಕಳೆದುಕೊಳ್ಳುತ್ತಿದ್ದಾರೆ, ತಮ್ಮ ತಾಯಿ ಬಾಲ್ಯದಲ್ಲಿ ಕಟ್ಟಿದ್ದ ಉಡಿದಾರವನ್ನೇ ಮಾರಿ ಹೆಂಡತಿಯ ಕರ್ಮ ಮಾಡುತ್ತಾರೆ.

೧೯೭೦ರ ವೇಳೆಗೆ ಕನ್ನಡದಲ್ಲಿ ಸಾಕಷ್ಟು ಮಹಿಳಾ ಸಾಹಿತಿಗಳು ಲೇಖನ ಕ್ಷೇತ್ರ ದಲ್ಲಿ ಸಾಕಷ್ಟು ಕೃಷಿ ನಡೆಸಿದ್ದರು. ಆದರೆ ಸತ್ವಶಾಲಿ ಕೃತಿಗಳ ಕೊರತೆಯೇನೂ ಕಡಿಮೆ ಯಾಗಲಿಲ್ಲ. ಅಂಥ ಸಮಯದಲ್ಲಿ ಬೆಳಕು ಕಂಡ ಎಂ. ಕೆ. ಇಂದಿರಾ ಅವರ ಶಾಂತಿ ಧಾಮವು ನಿಜವಾಗಿಯೂ ಒಂದು ಸತ್ವಶಾಲೀ ಸಫಲ ಸಾಹಿತ್ಯಕೃತಿ"[1] ಎಂದು ಸುದಾರ್ಥಿಯವರು ಸರಿಯಾಗಿಯೇ ಹೇಳಿದ್ದಾರೆ.

"ಹಲವಾರು ಪಾತ್ರಗಳನ್ನು ಅಳವಡಿಸಿಕೊಂಡು ಅವುಗಳ ಸಮಗ್ರ ಜೀವನದ ನಿರೂಪಣೆಯ ಮೂಲಕ ಯಶಸ್ವಿಯಾಗಿ ಜೀವಂತ ಚಿತ್ರಣ ನೀಡಿದ್ದಾರೆ"[2] ಎಲ್ಲ ಪಾತ್ರ ಗಳೂ ಓದುಗರ ಮೇಲೆ ಪ್ರಭಾವ ಬೀರುತ್ತವೆ. ಶ್ರೀನಿವಾಸರಾಯರ ಬದುಕು ಅಂತರ್ಯ ದಲ್ಲಿ ಗಹನವಾದ ಪರಿಣಾಮವನ್ನುಂಟು ಮಾಡುತ್ತದೆ. ಅವರಿಗೆ ಸಂಬಂಧಿಸಿದ ಎಲ್ಲ ವ್ಯಕ್ತಿಗಳೂ ಘಟನೆಗಳೂ ಪರಿಣಾಮ ಬೀರುತ್ತವೆ. ಕಾದಂಬರಿಯು ಆರಂಭದಿಂದ ಹಿಡಿದು ಕೊನೆಯವರೆಗೂ ಬೆಳವಣಿಗೆಯಲ್ಲಿ ತೀರ ಸಹಜವಾಗಿವೆ.

ಲೇಖಕಿಯು ಬದುಕಿನ ಬಗೆಗೆ ಇರುವ ಸಮಗ್ರವಾದ ಗಟ್ಟಿಯಾದ ಅನುಭವ ಈ ಕಾದಂಬರಿಯಲ್ಲಿ ಮೂರ್ತತೆ ಹೊಂದಿದೆ.

ಇದೊಂದು ಸಫಲ, ಸತ್ವಶಾಲೀ ಕೌಟುಂಬಿಕ ಕಾದಂಬರಿ. ಕೌಟುಂಬಿಕ ಕಾದಂಬರಿಗಳಲ್ಲಿ ಇಂದಿರಾ ಅವರ 'ಶಾಂತಿಧಾಮ' ಕಾದಂಬರಿಗೆ ನಿಜವಾಗಿಯೂ ಒಂದು ಮಹತ್ವದ ಸ್ಥಾನವಿದೆ. ಎಂದರೆ ಅತ್ಯುಕ್ತಿಯಾಗಲಾರದು.

ಹಳೆ–ಹೊಸ ತಲೆಮಾರುಗಳ ಸಂಘರ್ಷವನ್ನು ಈ ಕಾದಂಬರಿಯಲ್ಲಿ ಕಾಣುತ್ತೇವೆ ಶ್ರೀನಿವಾಸರಾಯರು ತಮ್ಮ ಬಾಳ ಸಂಜೆಯಲ್ಲಿ ಎದ್ದು ನಿಂತ ಹೊಸ ಸಮಾಜದೊಡನೆ ಸಂಘರ್ಷದಲ್ಲಿ ಸಿಲುಕಿ ತತ್ತರಿಸಿ ಮನನೊಂದಿದ್ದಾರೆ.

ಧರ್ಮ–ಸಂಸ್ಕೃತಿಗಳಲ್ಲಿ ಅಚಲವಾದ ನಂಬಿಕೆ ಇಟ್ಟು ನಿಷ್ಠಾವಂತ ಜೀವನ ನಡೆಸಿದ ಶ್ರೀನಿವಾಸರಾಯರು ಹಳೆಯ ತಲೆಮಾರಿಗೆ ಸೇರಿದವರು. ಅವಿಭಕ್ತ ಕುಟುಂಬದಲ್ಲಿ ವಿಶ್ವಾಸವನ್ನುಳ್ಳವರು. ಪದ್ಮಮ್ಮನವರು ಹಳೆಯ ತಲೆಮಾರಿನ ಗೃಹಿಣಿ ಅವಳ ತ್ಯಾಗ ಹೃದಯ ಸಂಸ್ಕಾರ ಹಿರಿದಾದುದು, ಸಾಲು, ಸಾಲಾಗಿ ಒಂಬತ್ತು ಮಕ್ಕಳಿಗೆ ಜನ್ಮವಿತ್ತು

1. ಶ್ರೀ ಸುದಾರ್ಥಿ 'ತ್ರಿವೇಣಿ ಕೃತಿಗಳ ಒಳನೋಟ ಪುಟ–180.
2. ಗೀತಾದೇಸಾಯಿ 'ಪ್ರಗತಿ ಪಥದಲ್ಲಿ ಕರ್ನಾಟಕದ ಮಹಿಳೆಯರು' ಎಂಬ ಪುಸ್ತಕ 'ಲಲಿತ ಸಾಹಿತ್ಯಕ್ಕೆ ಮಹಿಳೆಯರ ಕೊಡುಗೆ' (ಎಂಬ ಲೇಖನ) ಪು–30.

ಪತಿಯ ನೆರಳಿನಲ್ಲಿಯೇ ನಡೆದು ಧರ್ಮ, ಅರ್ಥ, ಕಾಮ, ಮೋಕ್ಷದಲ್ಲಿ ಭಾಗಿಯಾಗುತ್ತಾಳೆ. ಹಿರಿಯರಲ್ಲಿ ಭಕ್ತಿ, ಕಿರಿಯರಲ್ಲಿ ಪ್ರೀತಿಯನ್ನಿಟ್ಟರು. ಮನೆತನದ ಸಂಪ್ರದಾಯಗಳನ್ನು ನಿಷ್ಠೆಯಿಂದ ನಡೆಸಿಕೊಂಡು ಬರುತ್ತಾರೆ.

ಶ್ರೀನಿವಾಸರಾಯರು ಮಗಳ ಮದುವೆಗಾಗಿ ಬೆಳ್ಳಿ ತಂಬಿಗೆಯನ್ನು ಮುರಿಸಿದಾಗ ಹೆಂಡತಿಯ ಆಭರಣಗಳನ್ನು ಮಾರಿದಾಗ ಅಪಾರ ನೋವನ್ನು ಅನುಭವಿಸುತ್ತಾರೆ. ಹಿರಿಯರಿಂದ ಬಂದ ವಸ್ತು-ಒಡವೆಗಳನ್ನು ಮಾರುವದೆಂದರೆ ಮನೆತನಕ್ಕೆ ತಾನೇ ಅಪಚಾರ ಬಗೆದಂತೆ ನೋಯುತ್ತಾರೆ. ಇಂತಹ ಯಾವ ಭಾವನೆಗಳೂ ಕೇಶವನನ್ನು ಕಾಡುವದಿಲ್ಲ.

ಅತ್ತೆ-ಮಾವಂದಿರ ಪ್ರೀತಿಯ ಸೊಸೆಯಾಗಿ, ಮನೆತನಕ್ಕೆ ತಕ್ಕ ಹಿರಿಯ ಹೃದಯದ ಗೃಹಿಣಿಯಾಗಿ ಆದರ್ಶ ಪತ್ನಿಯಾಗಿ ಮಾತೆಯಾಗಿ, ಅಜ್ಜಿಯಾಗಿ ಬಾಳಿ ಬದುಕುತ್ತಾರೆ. ಇಲ್ಲಿ ಪದ್ಮಮ್ಮನವರು ಶ್ರೀನಿವಾಸರಾಯರ ಅರ್ಧಾಂಗಿಯಾಗಿ ಬಾಳಿ ಮುತ್ತೈದೆ ಸಾವನ್ನು ಪಡೆಯುತ್ತಾರೆ. ಈ ದೃಷ್ಟಿಯಿಂದ ಅವರದು ಯಶಸ್ವಿಬದುಕು.

ಆಂಗ್ಲ ಸಂಸ್ಕೃತಿಯ ಸಂಪರ್ಕದಿಂದಾಗಿ ಭಾರತೀಯ ಸಮಾಜದಲ್ಲಿ ಬೀಸಿದ ಆಧುನಿಕತೆಯ ಗಾಳಿ, ವ್ಯಕ್ತಿ, ಕುಟುಂಬದಲ್ಲೂ ಹೇಗೆ ಪರಿಣಾಮವನ್ನುಂಟು ಮಾಡಿದೆ ಎಂಬುದನ್ನು ಈ ಕಾದಂಬರಿಯಲ್ಲಿ ಕಾಣುತ್ತೇವೆ.

ಆಧುನಿಕ ಸಮಾಜದಲ್ಲಿ ಧರ್ಮ, ಸಂಸ್ಕೃತಿಗಳಲ್ಲಿ ನಂಬಿಕೆ ಶಿಥಿಲವಾಗಿ ವ್ಯಕ್ತಿ ನಿಷ್ಠತೆಗೆ ಪ್ರಾಧಾನ್ಯತೆ ಬಂದಿದೆ. ಈ ಮಾತಿಗೆ ಒಳ್ಳೆಯ ನಿದರ್ಶನ ಶ್ರೀನಿವಾಸರಾಯರ ಮಗ ಕೇಶವ. ಶ್ರೀನಿವಾಸರಾಯರು ಅವಿಭಕ್ತಕುಟುಂಬ, ಧರ್ಮ, ಸಂಸ್ಕೃತಿಗಳನ್ನು ನಂಬಿ ಬಾಳಿದರೆ ಕೇಶವ ಬಹು ಬೇಗನೆ ಎಲ್ಲರಿಂದ ದೂರವಾಗಿ ಬೇರೆ ಮನೆ ಕಟ್ಟಿಸುತ್ತಾನೆ.

ಹಳೆಯ ತಲೆಮಾರಿನವರಾದ ವಿಧವೆ 'ಬೆಳ್ಳಮ್ಮ' ನವರು ಅಡಿಗೆ ಮನೆಯಲ್ಲೇ ತಮ್ಮ ಇಡೀ ಆಯುಷ್ಯವನ್ನು ಕಳೆದರೆ 'ಭಾಗ್ಯ' ವಿಧವೆಯಾದರೂ ಶಿಕ್ಷಣ ಪಡೆಯುತ್ತಾರೆ. ಸ್ವತಂತ್ರ ಜೀವನ ನಡೆಸುತ್ತಾಳೆ. ಅವಳೂ ಕೂಡ ವೈಯಕ್ತಿಕ ಬದುಕಿಗೆ ಮಹತ್ವ ಕೊಟ್ಟಿರುವದನ್ನು ಕಾಣುತ್ತೇವೆ.

ರಾಜಲಕ್ಷ್ಮಿಯ ಗಂಡ ಡಾ॥ ರಂಗನಾಥ ಆಂಗ್ಲ ಸಂಸ್ಕೃತಿಗೆ ಸಂಪೂರ್ಣವಾಗಿ ಮಾರುಹೋಗುತ್ತಾನೆ. ಮಕ್ಕಳಿಗೆ ಕನ್ನಡದಲ್ಲಿ ಅಮ್ಮ ಎಂದು ಕಲಿಸದೆ ಇಂಗ್ಲಿಷ್ ಶಿಕ್ಷಣ ಕೊಡಿಸಿದ್ದಾನೆ. ವೇಷ-ಭೂಷಣ, ರೀತಿ-ನೀತಿ, ಉಡಿಗೆ-ತೊಡಿಗೆ ಎಲ್ಲದರಲ್ಲೂ ಆಂಗ್ಲ ಸಂಸ್ಕೃತಿಯ ಅನುಕರಣೆ ಕಂಡುಬರುತ್ತದೆ.

ಪದ್ಮಮ್ಮನವರು ಹದಿಮೂರು ವರ್ಷಕ್ಕೆ ತಂದೆತಾಯಿಗಳು ಒಪ್ಪಿದ ವರನನ್ನೇ ಮದುವೆಯಾಗಿ ತುಂಬುಜೀವನ ನಡೆಸಿದ್ದಾರೆ. ಆದರೆ ಭಾಗ್ಯ ವರನನ್ನು ಆಯ್ಕೆ

ಮಾಡುವದರಿಂದ ಹಿಡಿದು ಸ್ವತಂತ್ರ ಬದುಕನ್ನು ಆರಿಸಿಕೊಳ್ಳದ ಆಧುನಿಕ ಮಹಿಳೆಯನ್ನು ಪ್ರತಿನಿಧಿಸುತ್ತಾಳೆ.

ಸಹನೆ, ತ್ಯಾಗ, ಔದಾರ್ಯ, ಪ್ರೀತಿ, ಧರ್ಮ, ಸಂಸ್ಕೃತಿಗಳಲ್ಲಿ ನಂಬಿಕೆ ಹಿರಿಯರಲ್ಲಿ ಭಕ್ತಿ ಗೌರವ, ಈ ಮೊದಲಾದ ಕೌಟುಂಬಿಕ ಮೌಲ್ಯಗಳು ಸಂಕ್ರಮಣಾವಸ್ಥೆಯಲ್ಲಿರುವ ಇಂದಿನ ಸಮಾಜದ ಕುಟುಂಬಗಳಲ್ಲಿ ಏರು-ಪೇರಾಗುತ್ತಿರುವದನ್ನು ಚಿತ್ರಿಸಿದ್ದಾರೆ. ನೋವು-ನುಂಗಿ ಬಾಳುವ ಹಳೆಯ ತಲೆಮಾರಿನ ಹಿರಿಯ ವ್ಯಕ್ತಿಗಳ ಜೀವನದ ಸಮಗ್ರ ಜೀವಂತ ಚಿತ್ರಣ ಇಲ್ಲಿದೆ.

ಅವಿಭಕ್ತ ಕುಟುಂಬಗಳು ಒಡೆದು ಹೋಗುತ್ತಿರುವದನ್ನು ಇಲ್ಲಿ ಚಿತ್ರಿಸಿದ್ದಾರೆ.

'ತುಂಗಭದ್ರ' :

ಶ್ರೀಮತಿ ಎಂ. ಕೆ. ಇಂದಿರಾ ಅವರ ಈ ಕಾದಂಬರಿ ೧೯೬೩ರಲ್ಲಿ ಧಾರವಾಡದ ಸುಪ್ರಸಿದ್ಧ ಮನೋಹರ ಗ್ರಂಥಮಾಲೆಯಾಲ್ಲಿ ಪ್ರಕಟವಾಗಿದೆ. ಈ ಕಾದಂಬರಿ ಮತ್ತೆ ೧೯೭೦ರಲ್ಲಿ ಎರಡನೆಯ ಹಾಗೂ ೧೯೭೮ರಲ್ಲಿ ಮೂರನೆಯ ಮುದ್ರಣವಾಗಿದೆ. ಅವರ ಈ ಪ್ರಥಮ ಕಾದಂಬರಿಯ ಕತೆ ಮಲೆನಾಡಿನ ಹವ್ಯಕರ ಕುಟುಂಬಕ್ಕೆ ಸಂಬಂಧಿಸಿದುದಾಗಿದೆ. ಈ ಘಟನೆಯನ್ನು ಲೇಖಕಿ ಬಾಲ್ಯದಲ್ಲಿ ತೀರ್ಥಹಳ್ಳಿಯಲ್ಲಿದ್ದಾಗ ಕಂಡಿದ್ದು. ಹವ್ಯಕರ ಕುಟುಂಬದಲ್ಲಿ ಜನಿಸಿದ 'ಗಂಗೆ-ಗೌರಿ' ಎಂಬ ಇಬ್ಬರು (ಅವಳಿ) ಹುಟ್ಟು ಕುರುಡಿಯರು. ಮೂಕಯಾತನೆಯಲ್ಲಿ ಅನುಭವಿಸಿ ಕುರುಡುತನಕ್ಕೆ ಬೇಸತ್ತು ಹೊಳೆಯಲ್ಲಿ ಮುಳುಗಿ ಆತ್ಮಹತ್ಯೆ ಮಾಡಿಕೊಂಡಿದ್ದರು.

ಈ ಹಿಂದೆಯೆ ಎರಡನೆಯ ಅಧ್ಯಾಯದಲ್ಲಿ ವಿವರಿಸಿದಂತೆ ಕಳೆದುಹೋದ ಹಸ್ತಪ್ರತಿಯಲ್ಲಿ ಅವರು ಆತ್ಮಹತ್ಯೆ ಮಾಡಿಕೊಂಡಂತೆಯೇಬರೆದಿದ್ದರು. ಆದರೆ ಎರಡನೆಯ ಬಾರಿ ಕೇವಲ ನೆನಪಿನ ಆಧಾರದಿಂದ ಕೃತಿ ರಚಿಸಿದಾಗ ಅದರಲ್ಲಿ ತುಂಗ-ಭದ್ರೆಯರಿಗೆ ಬದುಕನ್ನು ಕೊಟ್ಟಿದ್ದಾರೆ. ಅವರಿಗೂ ಮದುವೆಯಾಗಿ ಜೀವನ ಮುಂದುವರಿಯುತ್ತದೆ. ಹುಟ್ಟು-ಸಾವುಗಳ ನಡುವಿರುವ ಬದುಕಿಗೆ ಲೇಖಕಿ ಇಲ್ಲಿ ಮಹತ್ವ ಕೊಟ್ಟಿದ್ದಾರೆ. ಜೀವನದ ಸಂಸ್ಕಾರಗಳಿಂದ ಇಲ್ಲಿ ಯಾರೂ ತಪ್ಪಿಸಿಕೊಂಡಿಲ್ಲ ತುಂಗಭದ್ರೆ, ಶಂಭು, ರಾಘು, ಮಂದಾಕಿನಿ ಇವರೆಲ್ಲರಿಗೂ ಮದುವೆಯಾಗಿ ಅವರ ಜೀವನ ಮುಂದುವರಿಯುತ್ತದೆ. ಜೀವನ ನದಿ ಮುಂದುವರಿಯುವ ಸಂಕೇತ ಇಲ್ಲಿದೆ.

ಈ ಶತಮಾನದ ಆರಂಭಕಾಲದ ಸಾಮಾಜಿಕ ಹಿನ್ನೆಲೆ ಈ ಕಾದಂಬರಿಗಿದೆ. "ಮೂರನೇ ದಶಕದ ಆದಿಭಾಗ, ಧರ್ಮದ ಅಂಧತೆ ಕಾರ್ಮೋಡದಂತೆ ಕವಿದ ಕಾಲ, ಏನೇ ಆದರೂ 'ಅಪ್ಪ ನೆಟ್ಟ ಆಲದ ಮರಕ್ಕೆ ನೇಣು ಹಾಕಿಕೊಳ್ಳುವ' ಕೂಪ ಮಂಡೂಕತ್ವ ಜನರಲ್ಲಿ ವ್ಯಾಪ್ತಿಯಿತ್ತು."

ಮೂಢನಂಬಿಕೆ, ಸ್ವರ್ಗ–ನರಕ, ಪಾಪ–ಪುಣ್ಯಗಳನ್ನು ಜನರು ಬಲವಾಗಿ ನಂಬಿದ್ದರು, ಸ್ತ್ರೀ ಸ್ವಾತಂತ್ರ್ಯವಿರಲಿಲ್ಲ. ಬಾಲ್ಯ ವಿವಾಹ ಪದ್ಧತಿ ಪ್ರಬಲವಾಗಿತ್ತು. ಇಂತಹ ಒಂದು ಸಮಾಜದಲ್ಲಿ ಮಲೆನಾಡಿನ ಮೂಲೆಯಲ್ಲಿದ್ದ ಹೆಚ್ಚಿನ ನಾಗರಿಕತೆಯನ್ನು ಕಾಣದ ತೀರ್ಥಹಳ್ಳಿಯ ದುಗ್ಗಾಭಟ್ಟರ ಸಂಸಾರ ಒಂದು ವಿಚಿತ್ರ ಸಮಸ್ಯೆಯಲ್ಲಿ ಸಿಲುಕಿತ್ತು. ಅದೆಂದರೆ ಹುಟ್ಟು ಕುರುಡಿಯರಾದ ತುಂಗ–ಭದ್ರೆಯರ ಮದುವೆಯ ಸಮಸ್ಯೆ.

ಈ ಕಾದಂಬರಿಯಲ್ಲಿ ದುಗ್ಗಾಭಟ್ಟರ ಹಾಗೂ ನಾಗಾಭಟ್ಟರ ಸಂಸಾರಗಳೆರಡೂ ಒಂದನ್ನೊಂದು ಬಿಟ್ಟು ಬದುಕಲು ಸಾಧ್ಯವೇ ಇಲ್ಲದಂತೆ ಗಟ್ಟಿಯಾಗಿ ಹೆಣೆದು ಕೊಂಡಿವೆ. ಆದ್ದರಿಂದ ಈ ಸಮಸ್ಯೆ ಎರಡೂ ಸಂಸಾರಗಳಿಗೆ ಸಂಬಂಧಿಸಿಯೇ ಬಂದಿದೆ. ಈ ಸಮಸ್ಯೆಗೆ ಪರಿಹಾರ ಆ ಎರಡೂ ಸಂಸಾರದ ಕಣಜದ ಗಟ್ಟಿ ಕಾಳು ದುಗ್ಗಾಭಟ್ಟರ ವಂಶದ ಏಕೈಕ ಕುಡಿ ಮುದ್ದುರಾಮನಿಂದಲೇ ದೊರಕಿದೆ.

ಹೀಗಾಗಿ ಈ ಕಾದಂಬರಿಯಲ್ಲಿನ ಸಮಸ್ಯೆ ಸಮಾಜದ ಒಂದು ಗಂಭೀರ ಸಮಸ್ಯೆ ಎನಿಸದೇ ಕೌಟುಂಬಿಕ ಸಮಸ್ಯೆಯಾಗಿ ಪರಿಣಮಿಸಿದೆ. ಆದ್ದರಿಂದ ಮುಖ್ಯವಾಗಿ ಇದು ಕೌಟುಂಬಿಕ ಕಾದಂಬರಿ. ಈ ಕಾದಂಬರಿಯಲ್ಲಿನ ಪಾತ್ರಗಳೆಲ್ಲ ಜೀವನದಲ್ಲಿ ಬಂದುದನ್ನು ಸುಲಭವಾಗಿ ಸ್ವೀಕರಿಸುತ್ತಾರೆ. ಒಪ್ಪಿಕೊಳ್ಳುತ್ತಾರೆ.

ತನ್ನ ಸಂಸಾರಕ್ಕಾಗಿ ಮೊದಲಿನಿಂದಲೂ ಹೆಣಗಾಡಿದ ಅಸಹಾಯಕರಾದ ಮಾವ ನಾಗಾಭಟ್ಟರ ಸಂಸಾರವನ್ನು ಸಮಾಜದ ಅಜ್ಞಾನ, ಹಾಗೂ ಬಹಿಷ್ಕಾರದಿಂದ ತಪ್ಪಿಸಲು ತಾನೇ ಮುಂದಾಗುತ್ತಾನೆ. ತುಂಗ-ಭದ್ರೆಯರನ್ನೂ, ಮಂದಾಕಿನಿಯನ್ನೂ ಮದುವೆಯಾಗಿ ನಾಗಾಭಟ್ಟರ ಸಂಸಾರಕ್ಕೆ ಆಸರೆಯಾಗಿ ನಿಲ್ಲುತ್ತಾನೆ. ಪೆದ್ದನಾದ ಶಂಭುವಿನ ಮದುವೆ ಮಾಡಲು ಮುಂದಾಗುತ್ತಾನೆ. ತಾನೂ ಬದುಕುವದರ ಜತೆಗೆ ಇತರರಿಗೂ ಬದುಕಲು ಅವಕಾಶ ಕಲ್ಪಿಸಿ ಅವರ ಭವಿಷ್ಯ ಜೀವನವನ್ನು ಸುಂದರವಾಗಿಸಲು ನಿರ್ಧರಿಸುತ್ತಾನೆ.

ದುಗ್ಗಾಭಟ್ಟರು ಹುಣಸೇಕೊಪ್ಪಲಿನಲ್ಲಿ ತೋಟ-ಸಟ್ಟಿ ಸಮೃದ್ಧಿಯಾಗಿ ತೀರ್ಥಹಳ್ಳಿಯಲ್ಲಿ ನೆಮ್ಮದಿಯುತವಾದ ಜೀವನವನ್ನು ಸಾಗಿಸುತ್ತಿರುವಾಗಲೇ ಅವರ ಹೆಂಡತಿ ಹತ್ತು ವರ್ಷದ ಮುದ್ದುರಾಮನನ್ನು ಪತಿಯ ಕೈಗೊಪ್ಪಿಸಿ ತೀರಿ ಹೋಗಿರುತ್ತಾಳೆ. ದುಗ್ಗಾಭಟ್ಟರು ಏಕಾಂಗಿಯಾಗಿ ಜೀವನ ಕಳೆಯುತ್ತಿರುವಾಗ ಅವರ ಮಗಳು ಭಾಗಮ್ಮ ವಿಧವೆಯಾಗುತ್ತಾಳೆ. ವಿಧವೆ ಮಗಳನ್ನು ಭಾವ–ಮೈದುನರ ಮನೆಯಲ್ಲಿ ಬಿಡಲಾರದೆ ಅವಳನ್ನೂ ಅವಳ ಮೂರು ವರ್ಷದ ಮಗಳು ಕೃಷ್ಣವೇಣಿಯನ್ನು ಮನೆಗೆ ಕರೆದು ಕೊಂಡು ಬರುತ್ತಾರೆ. ತಂದೆ–ಮಗಳು ಒಬ್ಬರಿಗೊಬ್ಬರು ಆಸರೆಯಾಗಿ ತಮ್ಮ ನೋವನ್ನು ಮರೆತು ಎಳೆಯ ಜೀವಿಗಳಾಗಿ ಬದುಕುತ್ತಾರೆ.

ದುರ್ಗಾಭಟ್ಟರ ತಂಗಿ ಮೂಕಮ್ಮನನ್ನು ಪರದೇಶಿಯಾಗಿ ಮನೆಗೆ ಬಂದ ಸಾತ್ವಿಕ ಸ್ವಭಾವದ ನಾಗಭಟ್ಟರಿಗೆ ಕೊಟ್ಟು ಮದುವೆ ಮಾಡುತ್ತಾರೆ. ಅವರಿಗೆ ಹುಟ್ಟಿದ ಮೊದಲನೆಯ ಮಗ ಶಂಭು ಪೆದ್ದ. ಎರಡನೆಯವರಾದ ತುಂಗ-ಭದ್ರೆಯರು ಹುಟ್ಟು ಕುರುಡಿಯರು. ಮೂರನೆಯವಳೇ ಮಂದಾಕಿನಿ.

ಕಾದಂಬರಿಯ ಆರಂಭಕ್ಕೆ ಮುದ್ದುರಾಮು ಅವನ ಜೀವದ ಗೆಳೆಯ ರಾಘು. ಮಂದಾಕಿನಿ, ಶಂಭು, ತುಂಗಭದ್ರೆ ಇವರೆಲ್ಲ ಬಾಳೆಂಬುದನ್ನು ಅರಿಯದ ಮುಗ್ಧರು ಆದರೆ ಕಾದಂಬರಿಯು ಬೆಳವಣಿಗೆಯಾದಂತೆ ಈ ಪಾತ್ರಗಳೂ ಬೆಳೆಯುತ್ತವೆ. ಬಾಳಿನಲ್ಲಿ ಅನೇಕ ಸಮಸ್ಯೆಗಳ ಹೊಡೆತಕ್ಕೆ ಸಿಕ್ಕು ತಮ್ಮ ಬಾಳಿನಿಂದಲೇ ತಿಳಿವಳಿಕೆ ಹೊಂದಿದ ಪ್ರಭುದ್ಧ ವ್ಯಕ್ತಿಗಳಾಗಿ ನಮ್ಮ ಕಣ್ಮುಂದೆ ಬೆಳೆದು ನಿಲ್ಲುತ್ತಾರೆ.

ಆ ಸಂಸಾರದ ಹಿರಿಯ ಜೀವಿಗಳಾದ ದುರ್ಗಾಭಟ್ಟರು ಇನ್-ಫ್ಲೂ-ಎಂಜಾ ಕಾಯಿಲೆಗೆ ತುತ್ತಾಗುತ್ತಾರೆ. ಭಾಗಮ್ಮ ಬೆನ್ನಿನಲ್ಲಿ ಕಾಣಿಸಿಕೊಂಡ ಹುಣ್ಣಿನಿಂದ ನರಳಿ ಕೊನೆಯುಸಿರೆಳೆಯುತ್ತಾಳೆ. ಈ ನಡುವೆ ತುಂಗ-ಭದ್ರೆಯರು ಮೈನೆರೆಯುತ್ತಾರೆ.

ಭಾಗಮ್ಮನ ಸಾವು ಮುದ್ದುರಾಮನ ಹೆಂಡತಿ ಬಾಣಂತಿಯಾಗಿದ್ದ ಕೃಷ್ಣವೇಣಿಯ ಮನಸ್ಸಿನ ಮೇಲೆ ಪರಿಣಾಮವಾಗುತ್ತದೆ. ತುಂಗಭದ್ರೆಯರು ದೊಡ್ಡವರಾದಾಗ ಸುತ್ತು-ಮುತ್ತಲಿನವರು ತನಿಖೆ ಪ್ರಾರಂಭಿಸುತ್ತಾರೆ. ಕೆಲವರು ಕುಹಕಿಗಳು ಅವರಿಗೆ ಬೇಗನೆ ಮದುವೆ ಮಾಡದಿದ್ದರೆ ಶೃಂಗೇರಿ ಸ್ವಾಮಿಗಳಿಂದ ಬಹಿಷ್ಕಾರ ಹಾಕಿಸುವದಾಗಿ ಹೆದರಿಸುತ್ತಾರೆ.

ತಾಯಿಯ ಸಾವಿನಿಂದ 'ಟೈಫಾಯಿಡ್' ಕಾಯಿಲೆಗೀಡಾದ ಕೃಷ್ಣವೇಣಿ ಕಾಯಿಲೆ ಉಲ್ಬಣಿಸಿದಾಗ ಮಂದಾಕಿನಿಗೆ ಚೇಷ್ಟೆಮಾಡಿ ಮುದ್ದುರಾಮನನ್ನೇ ಮದುವೆಯಾಗಿ ತುಂಗಭದ್ರೆಯರನ್ನು ನೋಡಿಕೊಂಡಿರುವಂತೆ ಹೇಳುತ್ತಾಳೆ. ಮೊದಲಿನಿಂದಲೂ ತುಂಗ ಭದ್ರೆಯರ ಜೀವನಕ್ಕೊಂದು ದಾರಿ ಮಾಡಬೇಕೆಂಬ ಯೋಚನೆಯಲ್ಲಿದ್ದ ಅವಳು ತುಂಗಭದ್ರೆಯರನ್ನು ಮದುವೆಯಾಗುವಂತೆ ಆಗಾಗ ಮುದ್ದುರಾಮನಿಗೆ ಸೂಚನೆ ಕೊಟ್ಟಿರುತ್ತಾಳೆ.

ಕೃಷ್ಣವೇಣಿಯ ಸಾವಿನ ನಂತರ ಮುದ್ದುರಾಮು ಜೀವನದಲ್ಲಿ ನಿರಾಸಕ್ತನಾಗುತ್ತಾನೆ. ತುಂಗಾನದಿಗೆ ಮಹಾಪೂರ ಬಂದು ಮೂಕಮ್ಮನ ಮನೆ ಕೊಚ್ಚಿಕೊಂಡು ಹೋದ ನಂತರ ಅವರ ಸಂಸಾರ ಸಂಪೂರ್ಣವಾಗಿ ಮುದ್ದುರಾಮನ ನೆರಳಲ್ಲಿಯೇ ನಿಲ್ಲುತ್ತದೆ.

ತುಂಗಭದ್ರೆಯರಿಗೆ ಮದುವೆ ಮಾಡದಿದ್ದರೆ ಕುಟುಂಬಕ್ಕೆ ಬಹಿಷ್ಕಾರ ತಪ್ಪಿದ್ದಲ್ಲ. ಆದರೆ ಹುಟ್ಟುಕುರುಡಿಯರಾದ ಅವರನ್ನು ಮದುವೆಯಾಗಲು ಯಾರೂ ಮುಂದೆ ಬರುವದಿಲ್ಲ. ಅವರಿಬ್ಬರ ಮದುವೆಯಾಗದೆ ಬೆಳೆದು ನಿಂತ ಮಂದಾಕಿನಿಗೆ ಮದುವೆ

ಯಾಗುವಂತಿಲ್ಲ. ಈ ಸಮಸ್ಯೆಯು ಆ ಕುಟುಂಬದಲ್ಲಿ ತಲೆದೋರುತ್ತದೆ. ಮಂದಾಕಿನಿಯನ್ನು ಮದುವೆಯಾಗಬಯಸುವವರು ತುಂಗ-ಭದ್ರೆಯರಿಗೂ ಮಾಂಗಲ್ಯ ಕಟ್ಟಬೇಕು. ಅವರ ಕನ್ಯಾಸೆರೆ ಬಿಡಿಸಿದ ನಂತರವೇ ಮಂದಾಕಿನಿಗೆ ಮದುವೆ.

ಹೆಂಡತಿಯು ಅಗಲಿಕೆಯಿಂದ ನೊಂದು ಜೀವನದಿಂದ ವಿಮುಖನಾದ ಮುದ್ದುರಾಮನಿಗೆ ಅವರ ಪರಿಸ್ಥಿತಿ ಅರಿವಿಗೆ ಬರುವುದಿಲ್ಲ. ಮೇಗರವಳ್ಳಿಯ ಶ್ರೀಮಂತ ಚಿನ್ನಯ್ಯ (ಕುಂಟ) ಮೂವರನ್ನು ಮದುವೆಯಾಗಲು ಮುಂದೆ ಬರುತ್ತಾನೆ. ಆದರೆ ತುಂಗಭದ್ರೆಯರಿಗೆ ಮಂದಾಕಿನಿಗೆ ಆ ಸಂಸಾರವನ್ನು ಬಿಟ್ಟು ಹೋಗಲು ಮನಸ್ಸೇ ಇರುವದಿಲ್ಲ. ಇದೇ ಚಿಂತೆಯಲ್ಲಿ ಕೊರಗಿದ ಮಂದಾಕಿನಿ ಹೊಳೆಗೆ ಹಾರಿ ತನ್ನ ಪ್ರಾಣ ಕಳೆದುಕೊಳ್ಳಲು ನಿರ್ಧರಿಸುತ್ತಾಳೆ. ನಟ್ಟನಡುರಾತ್ರಿ ಬಾಗಿಲು ಕಿರ್ರೆಂದು ಸಪ್ಪಳವಾದಾಗ ಮುದ್ದುರಾಮನಿಗೆ ಎಚ್ಚರವಾಗುತ್ತದೆ. ಮಂದಾಕಿನಿ ಹಾಸಿಗೆಯಲ್ಲಿಲ್ಲದ್ದನ್ನು ಕಂಡು ಹೊಳೆಗೆ ಧಾವಿಸುತ್ತಾನೆ. ಅವಳ ಮನಸ್ಸನ್ನು ಅರಿತುಕೊಳ್ಳುತ್ತಾನೆ. ತನ್ನ ಜವಾಬ್ದಾರಿ ಎಷ್ಟೆಂಬುದು ಆತನಿಗೆ ತಿಳಿಯುತ್ತದೆ. ತುಂಗ-ಭದ್ರೆಯನ್ನು ಮಂದಾಕಿಯನ್ನೂ ಮದುವೆಯಾಗುತ್ತಾನೆ.

ಮುದ್ದುರಾಮನೇ ಈ ಕಾದಂಬರಿಯ ಕೇಂದ್ರವ್ಯಕ್ತಿ. ಈ ಕಾದಂಬರಿಯಲ್ಲಿ ಬರುವ ಸಮಸ್ಯೆಗಳ ಪರಿಹಾರ ಅವನಿಂದ ಸಾಧ್ಯವಾಗಿದೆ, ಹೃದಯ ಶ್ರೀಮಂತಿಕೆ ಮುದ್ದುರಾಮನಿಗೆ ಜನ್ಮಜಾತಕವಾಗಿ ಬಂದದ್ದು. ಅವನು ಇತರರಂತೆಯೇ ಸರಳ. ಅಂತೆಯೇ ಅವನು ಎಲ್ಲರ ಬದುಕಿಗೆ ಆಶ್ರಯದಾತ. ಶರಣಾಗತಿಯೇ ಅವನ ಬಾಳಿನ ಸಾರ್ಥಕತೆ. ಬಂದುದನ್ನು ಅತ್ಯಂತ ಸರಳವಾಗಿ ಒಪ್ಪಿಕೊಳ್ಳುತ್ತಾನೆ.

ಕೃಷ್ಣವೇಣಿಯನ್ನು ಮದುವೆಯಾಗುವಾಗ ಅವಳು ಅಶಿಕ್ಷಿತಳೆಂಬ ಭಾವನೆ ಅವನಲ್ಲಿರುತ್ತದೆ. ಆದರೆ ಮದುವೆಯ ನಂತರ ಅವಳ ವಿವೇಕ, ಔದಾರ್ಯ, ಇವುಗಳನ್ನು ಕಂಡ ಅವನ ಸಂಶಯ ತೊಲಗಿಹೋಗುತ್ತದೆ. ಅವಳೊಡನೆ ಸರಸದಾಂಪತ್ಯ ಜೀವನವನ್ನು ಕಳೆಯುತ್ತಾನೆ.

ಕೃಷ್ಣವೇಣಿಯು ಬಗ್ಗೆ ಇದ್ದ ಅಸಮಾಧಾನವನ್ನು ಮುದ್ದುರಾಮನಿಂದ ರಾಘು ದೂರ ಮಾಡಿದಂತೆ, ರಾಘುವಿನ ತಂದೆ ತುಳಸಿಯನ್ನು ಮದುವೆಯಾಗಿ ಬಂದಾಗ, ಅವಳು ಅವನಲ್ಲಿ ಆಸಕ್ತಳಾಗಿ ಪತ್ರ ಬರೆದಾಗ ಮನೆಬಿಟ್ಟು ಓಡಿಹೋದಾಗ ಕಷ್ಟದ ಸಮಯದಲ್ಲಿ ಅವನಿಗೆ ನೆರವು ನೀಡುತ್ತಾನೆ.

"ತೋರಿಕೆಗೆ ಈ ಕಾದಂಬರಿ ಇಂದಿನ ಯಾವ ಕಾದಂಬರಿಯಂತೆಯೇ ಕಾಣುತ್ತಿದ್ದರೂ ಆದರ ಮೂಲ ರೂಪ ಒಂದು ಜಾನಪದ ಕತೆಯಂತೆಯೇ ಇದೆ.[1] ಎಂದು ಶ್ರೀ ಕೆ. ಡಿ. ಕುರ್ತಕೋಟಿಯವರು ಹೇಳಿರುವದು ಸರಿಯಾಗಿದೆ.

---

1. K. D. Kurtkoti : paper presented in All India seminar on 'Woman writers of fiction and woman in Fiction.'

"ಈ ಕಾದಂಬರಿಯಲ್ಲಿನ ಪಾತ್ರಗಳು ಸಮಸ್ಯೆಯನ್ನು ಎದುರಿಸುವಾಗ ಸುಶಿಕ್ಷಿತರಂತೆ ಸಂಘರ್ಷಕ್ಕೆ ಒಳಗಾಗುವದಿಲ್ಲ. ಕಾದಂಬರಿಯ ನಾಯಕ ಮುದ್ದುರಾಮ ಮೂವರನ್ನೂ ಮದುವೆಯಾಗಲು ಸರಳವಾಗಿ ಒಪ್ಪಿಕೊಳ್ಳುತ್ತಾನೆ. ಆದರೆ ಮುದ್ದುರಾಮನ ಜೀವದ ಗೆಳೆಯ ರಾಘು ಒಬ್ಬನೇ ಇಂತಹ ಒಂದು ಸಂಘರ್ಷಕ್ಕೆ ಒಳಗಾಗುತ್ತಾನೆ. ಮುದಿ ತಂದೆಯ ಹೊಸ ಹೆಂಡತಿ (ಮಲತಾಯಿ) ತನ್ನಲ್ಲಿ ಆಸಕ್ತಳಾಗಿರುವದನ್ನು ತಿಳಿದಾಗ ಮನೆಬಿಟ್ಟು ಹೋಗುತ್ತಾನೆ. ಈ ಸನ್ನಿವೇಶವನ್ನು ಜಾನಪದ ಕತೆಯಲ್ಲಿರುವಂತೆಯೇ ಬಂದಿದೆ.

"ರಾಘುನ ಪ್ರೀತಿಗೆ ಪಾತ್ರಳಾದ ಮಧುರಾಳ ಮದುವೆ ಸಂಸಾರದ ವಿರಸದಿಂದ ಅವನೊಂದಿಗೆ ನಡೆಯದೆ ಒಬ್ಬ ಮುದುಕನೊಂದಿಗೆ ನಿಶ್ಚಯವಾಗುತ್ತದೆ. ಅವನನ್ನು ಮದುವೆಯಾಗಲು ಅವಳಿಗೆ ಎಳ್ಳಷ್ಟೂ ಮನಸ್ಸು ಇರುವದಿಲ್ಲ. ಆದರೆ ಅದನ್ನು ಹಿರಿಯರಿಗೆ ತಿಳಿಸುವ ಧೈರ್ಯವೂ ಇರುವದಿಲ್ಲ ಮದುವೆ ಮುಹೂರ್ತ ಸಮೀಪಿಸುತ್ತಿದ್ದಂತೆಯೇ ತನ್ನ ಮದುವೆಯನ್ನು ತಪ್ಪಿಸಿಕೊಳ್ಳುವದಕ್ಕಾಗಿ ಹಸಿವು-ನೀರಡಿಕೆಯನ್ನೂ ತಡೆದು ದನದ ಕೊಟ್ಟಿಗೆಯಲ್ಲಿ ಎರಡುದಿನ ಅಡಗಿ ಕುಳಿತುಕೊಳ್ಳುತ್ತಾಳೆ.[2]

"ಇಂಥ ಸನ್ನಿವೇಶ ನಮ್ಮ ಸುಶಿಕ್ಷಿತರ ಕಾದಂಬರಿಯಲ್ಲಿ ಬರುವದು ಸಾಧ್ಯವಿಲ್ಲ. ಬಂದರೂ ಅದು ಕೇವಲ ವಿನೋದಕ್ಕಾಗಿಯೇ ಹೊರತು. ಗಂಭೀರವಾದ ಸಮಸ್ಯೆಯೊಂದರ ಗಂಭೀರ ಪರಿಹಾರಕ್ಕಾಗಿಯಲ್ಲ. ಈ ಘಟನೆ ನಮ್ಮ ಹಳ್ಳಿಯ ಜಾನಪದ ಕತೆಗಳನ್ನು ನೆನಪಿಗೆ ತರುವಂತಿವೆಯಲ್ಲದೆ ಕಾದಂಬರಿಯ ಕಥಾನಕದಲ್ಲಿ ಏನೂ ನಿಜಸಂಗತಿ ಕೋರದಂತೆ ಹೊಂದಿಕೆಯಾಗಿಬಿಟ್ಟಿದೆ.[3]

This novel, I belive is born out of the milean of our folk literature. It does not mean that the main action of the novel takes place in a village ; on the other hand it takes place in a town like Tirthalli. But the charecters do not face the problems which the sophisticated charecters fact. Only Raghu the friend of the hero suffers from an inner conflict, but the problem he faces the problem itself in the form of the infaculation of his young stepmother for him belongs to the world of folk tales.

2. ಗುಲ್ವಾಡಿ ವೆಂಕಟರಾಯರ 'ಇಂದಿರಾಬಾಯಿ ಅಥವಾ ಸದ್ಧರ್ಮ ವಿಜಯ' (1899) ಎಂಬ ಕಾದಂಬರಿಯಲ್ಲಿ ನಾಯಕ ಇಂದಿರೆ ಕೀರ್ತನಕಾರರಿಂದಾಗುವ ಅಪಾಯವನ್ನು ತಪ್ಪಿಸಿಕೊಳ್ಳಲು, ಅಡಗಿ ಕುಳಿತ ಸನ್ನಿವೇಶವನ್ನು ನೆನಪಿಗೆ ತರುತ್ತದೆ.
3. ಶ್ರೀ ಕೆ. ಡಿ. ಕುರ್ತಕೋಟಿ 'ತುಂಗಭದ್ರ' ಕಾದಂಬರಿ ಮುನ್ನುಡಿ.

ಇವೇ ರೀತಿ ಮುದ್ದುರಾಮ ಕೃಷ್ಣವೇಣಿಯನ್ನು ಮದುವೆಯಾದ ಮೊದಲನೆಯ ರಾತ್ರಿ ಅವಳನ್ನು ತನ್ನ ಹತ್ತಿರ ಸೆಳೆದುಕೊಳ್ಳಲು ಕಿಟಕಿಯಲ್ಲಿ ಅಗಸೇ ಮರವನ್ನು ತೋರಿಸಿ ಅಲ್ಲಿ ಕೊಳ್ಳಿದೆವ್ವ ಜೋಕಾಲಿ ಆಡುತ್ತಿದೆ ಎಂದು ಹೆದರಿಸುತ್ತಾನೆ. ಇವೆಲ್ಲ ಜಾನಪದ ಕತೆಯ ಅಂಶಗಳನ್ನೇ ನೆನಪಿಗೆ ತರುತ್ತವೆ.

ಈ ಕಾದಂಬರಿಯ ಪ್ರಪಂಚವೇ ಒಂದು ಮುಗ್ಧರ ಲೋಕ ಶಾಲೆಯ ಶಿಕ್ಷಣಕ್ಕಿಂತ ಬದುಕಿನ ಅನುಭವದಿಂದ ಪಡೆದ ಶಿಕ್ಷಣ ಇಲ್ಲಿ ಮುಖ್ಯ ಈ ಕಾದಂಬರಿಯಲ್ಲಿನ ಎಲ್ಲ ಪಾತ್ರಗಳ ಬೆಳವಣಿಗೆಯಲ್ಲಿ ಇದನ್ನು ನಾವು ಕಾಣುತ್ತೇವೆ.

ಕಾದಂಬರಿಯ ಆರಂಭದಲ್ಲಿ ಕೃಷ್ಣವೇಣಿ ಹುಡುಗಾಟವಾಡುವಾಗ ಗಂಡುಬೀರಿಯಂತೆ ಕಂಡರೂ ಕಾದಂಬರಿ ಮುಂದುವರಿದಂತೆ ಅವಳಿಗೆ ಜೀವನದ ತಿಳುವಳಿಕೆ ಎಲ್ಲಕ್ಕಿಂತ ಮಿಗಿಲಾಗಿ ಬಂದಿದೆ. ತುಂಗಭದ್ರೆಯರ ಬಗೆಗೆ ಅವಳು ತೋರಿಸುವ ಅನುಕಂಪ, ಅವರ ಮದುವೆ ಸಮಸ್ಯೆಗಾಗಿ ಅವಳು ಸೂಚಿಸುವ ಪರಿಹಾರ ಇವು ಅವಳ ವಿವೇಕವನ್ನೇ ತೋರಿಸುತ್ತವೆ. ಅಲ್ಲದೆ ಮಲತಾಯಿಯ ವರ್ತನೆಗೆ ಬೇಸತ್ತ ರಾಘು ಮನೆಬಿಟ್ಟು ಹೋದಾಗ, ಮಲಗಿದ ಮುದ್ದುರಾಮನನ್ನು ಎಬ್ಬಿಸಿ ಅವನನ್ನು ಹುಡುಕಿಕೊಂಡು ಬರಲು ಕಳಿಸುತ್ತಾಳೆ. ಅದೇ ರೀತಿ ಮಹಾಪೂರ ಬಂದಾಗ ನಾಗಭಟ್ಟರ ಮನೆ ಕೊಚ್ಚಿಕೊಂಡು ಹೋಗುತ್ತಿರುವದನ್ನು ಕಂಡು ಅವರನ್ನು ರಕ್ಷಿಸಿ ತನ್ನ ಮನೆಗೆ ಕರೆತರುತ್ತಾಳೆ. ಇಲ್ಲೆಲ್ಲ ಮುದ್ದುರಾಮನಿಗಿಂತ ಕೃಷ್ಣವೇಣಿಯ ಪಾತ್ರವೇ ಹೆಚ್ಚಾಗಿದೆ. ತುಂಗಭದ್ರೆಯರನ್ನೂ, ಮಂದಾಕಿದಿಯನ್ನು ಮದುವೆಯಾಗಲು ಮುದುಕನೊಬ್ಬ ಮುಂದೆ ಬಂದಾಗ ಅವರನ್ನು ಬಯ್ದು ಕಳಿಸುವ ದಿಟ್ಟತನವೂ ಅವಳಲ್ಲಿದೆ. ತುಂಗಭದ್ರೆಯರನ್ನು ಮದುವೆಯಾಗಲು ತನ್ನ ಗಂಡನಿಗೇ ಉಪದೇಶ ಮಾಡುವ ಹೃದಯವಂತಿಕೆ, ಔದಾರ್ಯ ಅವಳಲ್ಲಿದೆ.

ಶ್ರೀರಂಗರು ಹೇಳಿದಂತೆ 'ಅಶಿಕ್ಷಿತ ಗಂಡುರಾಮೆಯಾದ ಹೆಂಡತಿ ಕೃಷ್ಣವೇಣಿ ಮುದ್ದುರಾಮನಿಗಿಂತ ಉನ್ನತ ಸ್ಥಾನ ಪಡೆಯುತ್ತಾಳೆ.' ಪ್ರತಿಯೊಂದು ಪ್ರಾಣಿಗೆ ಪ್ರಕೃತಿಯೇ ಒಂದು ಸಂಸ್ಕಾರವನ್ನು ಕೊಟ್ಟಿದೆ. ಅನುಭವರೂಪದಲ್ಲಿ ಪಡೆದ ಶಿಕ್ಷಣ ಕಡಿಮೆಯೇನಲ್ಲ. ಇದು ಮನುಷ್ಯನು ಶಾಲೆಯಲ್ಲಿ ಪಡೆದ ಶಿಕ್ಷಣ ಸಂಸ್ಕಾರಗಳಿಗಿಂತಲೂ ಹೆಚ್ಚು ಉಪಯುಕ್ತ ಎಂಬುದನ್ನು ಮುದ್ದುರಾಮ ಕೃಷ್ಣವೇಣಿಯಿಂದ ಕಲಿಯುತ್ತಾನೆ.[1]

ನಾಗಾಭಟ್ಟರ ಪಾತ್ರವಂತೂ ಬದುಕಿನಲ್ಲಿ ಅನೇಕ ಕಷ್ಟಗಳನ್ನು ಎದುರಿಸಿ ಮಾಗಿದ ಒಂದು ಪಾತ್ರವೆನ್ನಬೇಕು. ಅವರಿಗೆ ಜೀವನದಲ್ಲಿ ಸುಖವೆಂಬುದೇ ಇಲ್ಲ. ಬಡತನವಿದೆ. ಅಂಗವಿಕಲರಾದ ಮಕ್ಕಳು, ಮಹಾಪೂರ ಬಂದ ನಂತರ ಇದ್ದ ಒಂದಿಷ್ಟು

---

1. ಪ್ರಜಾವಾಣಿ. 17–10–1965. ಪುಟ–10.

ಮನೆಯೂ ಕೊಚ್ಚಿಕೊಂಡು ಹೋಗುತ್ತದೆ. ಒಟ್ಟಿನಲ್ಲಿ ಅವರ ಬದುಕಿನ ನಿರ್ವಹಣೆ ಯಲ್ಲಿ ಸಂಪೂರ್ಣವಾಗಿ ಮುದ್ದುರಾಮನನ್ನೇ ಅವಲಂಬಿಸಿದೆ. ಇಷ್ಟಾದರೂ ಆ ನೋವನ್ನು ಯಾರೆದುರಿಗೂ ಉಸುರುವದಿಲ್ಲ. ದುಗ್ಗಾಭಟ್ಟರು ತೀರಿಕೊಂಡ ಮೇಲೆ ಅವರ ಆಸ್ತಿ-ಪಾಸ್ತಿಯು ಸಂಪೂರ್ಣ ಜವಾಬ್ದಾರಿ ಇವರದೇ. ಮುದ್ದುರಾಮು ಕೆಲದಿನ ಶೋಕಿಗೆ ಒಳಗಾದಾಗ ವಯೋಮಾನ ಸಹಜ ಆಶೆ ಪೂರೈಸಿಕೊಳ್ಳಲಿ ಎಂದು ಸುಮ್ಮ ನಿದ್ದುಬಿಡುತ್ತಾರೆ. ಆದರೆ ಅವರಿಗೆ ಮುದ್ದುರಾಮನ ಮೇಲೆ ಅಧಿಕಾರವಿಲ್ಲವೆಂದಲ್ಲ. ಆ ಅಧಿಕಾರವನ್ನು ಜೀವನದಲ್ಲಿ ಒಂದೇ ಒಂದು ಬಾರಿ ಉಪಯೋಗಿಸಿಕೊಳ್ಳುತ್ತಾರೆ. ಅದೂ ಅವನ ಒಳ್ಳೆಯದಕ್ಕಾಗಿಯೇ. ಮುದ್ದುರಾಮು ಹೆಂಡತಿ ಕೃಷ್ಣವೇಣಿಯು ಸಾವಿನಿಂದ ಬದುಕಿನಲ್ಲಿ ನಿರಾಸಕ್ತನಾಗಿ ಊಟ-ತಿಂಡಿಯನ್ನು ತೊರೆದು ಮಹಡಿಯಲ್ಲೇ ಉಳಿಯುತ್ತಾನೆ.

ದಿಕ್ಕು ತೋರದ ನಾಗಭಟ್ಟರು ಅವನನ್ನು ಎಚ್ಚರಿಸಲು ಅವನ ಹತ್ತಿರ ಮಗು ಮುದ್ದುಕೃಷ್ಣನನ್ನು ಕುಳ್ಳಿರಿಸಿ—

"ಇಕ್ಕಳ್ಳಾ ನಿನ್ನ ಮಗನ್ನ ನೀನೇ ಇಟ್ಕ, ನಾವೆಲ್ಲ ಈಗ್ಲೆ ಹೊಳೆ ಹಾಕ್ತಿವಿ, ಯಾತಕ್ಕೆ ಬದಕ್ಬೇಕು ನಾವಿಲ್ಲಿ ? ಏನದೆ ನಮಗಿಲ್ಲಿ ? ನಾ ನೋಡ್ಲಾರೆ ಕಣಾ ಈ ಭವ ಣೇನು ನಿನ್ನ ಮನೆ ನಿನ್ನ ಬಾಗ್ಲು ನಿನ್ನ ಮಾಣಿ ಏನಾರಮಾಡ್ಕ. ನನ್ನ-ಕುಂಟು- ಕುರುಡು ಕಟ್ಕಂಡು ನಾ ಹಾಯಾಗಿ ಪ್ರಾಣಬಿಡ್ತನಿ. ಈ ಮನೆ ಋಣ ಭಾಳ ತಿಂದಾತು ಬಿಡು. ಇನ್ನೆಷ್ಟು ದಿನ ಇದ್ರೂ ಇಷ್ಟೇ ಸೈಯಲ್ಲ ನಾ ಹೋಗ್ತನಿ. ನಡೀಗೆ ಎಲ್ಲ," ಎನ್ನುತ್ತ ತಮ್ಮ ಮಕ್ಕಳನ್ನೆಲ್ಲ ಕರೆದುಕೊಂಡು ಹೊರಡುತ್ತಾರೆ. ಆದಿನ ಸನ್ನಿವೇಶ, ಅವರು ಹೊರಟ ರೀತಿ ಮುದ್ದುರಾಮನನ್ನು ಎಚ್ಚರಿಸಿತು.

"ಏನ ಮಾಡಾವೋ ಮುದ್ದು, ಯಲ್ಲರಿಗೂ ಬಂದ ಕಷ್ಟ ನಮಗೂ ಬಂದದೆ ; ಈ ಪ್ರಾಯದಾಗೆ ನಿಂಗೆ ಇಂಥ ಕಷ್ಟ ಬರಬಾರದಾಗಿತ್ತು. ಸೈಸಾದು ಕಷ್ಟ ಏನ್ಮಾಡಾದಾ ? ಈ ಪಾಟಿ ದುಕ್ಕ ಒಂದೇ ಪಟಕ್ಕೆ ಕಡಿಮೆಯಾಗಾದಲ್ಲ ಕಣಾ ನಾಕ್ದಿನ ಸುದಾರ್ಸಿಗಳ್ಳಾ. ನಿಮ್ಮಪ್ಪ, ನಿಮ್ಮಮ್ಮ ಹೋದಮ್ಯಾಲೆ ಎಷ್ಟ ಬದುಕಿದ್ದು ನಿನಗೆ ತಿಳಿದಾ ? ನಿಂಗೋ ಸ್ಕರ ಅಲ್ಲನ ಅವರ ಒದ್ದಾಟಯಲ್ಲ ? ಈಗ ನೀಗೂ ಒಂದು ಮಾಣಿ ಆದೆ ಅದ್ರ ಮಕ ನೋಡ್ಕಂಡು ದಿನ ತಳ್ಬೇಕು"—ಎಂದು ಅವನ ಮನಸ್ಸನ್ನು ಬದುಕಿನತ್ತ ಎಳೆಯು ತ್ತಾರೆ. ಕ್ಷಣ ಕ್ಷಣಕ್ಕೂ ಬದುಕಲು ಪ್ರಚೋದಿಸುತ್ತಾರೆ. ನಾಗಭಟ್ಟರ ಪಾತ್ರ ಬೆಳವಣಿಗೆ ಈ ಸನ್ನಿವೇಶದಲ್ಲಿ ಇಂದಿರಾ ಅವರ ಪರಿಪಕ್ವವಾದ ಅನುಭವದ ಮೂರ್ತತೆ ಯನ್ನಿಲ್ಲಿ ಕಾಣುತ್ತೇವೆ.

ಮೂಕಮ್ಮ, ಫಣಿಯಮ್ಮ, ಭಾಗ್ಯಮ್ಮ, ದುಗ್ಗಾಭಟ್ಟ, ನಾಗಾಭಟ್ಟ, ಇವರೆಲ್ಲ ವಾತ್ಸಲ್ಯ ಜೀವಿಗಳಾಗಿ ಚಿತ್ರಿತರಾಗಿದ್ದಾರೆ.

"ದುಗ್ಗಾಭಟ್ಟರು, ಮೂಕಮ್ಮ, ಫಣಿಯಮ್ಮ, ಭಾಗಮ್ಮ ಇನ್ನುಳಿದ ಪಾತ್ರಗಳು ನಮ್ಮ ಬದುಕಿನಲ್ಲಿ ಇಳಿಯಲು ಹವಣಿಸುತ್ತದೆ. ಈ ಎಲ್ಲ ಪಾತ್ರಗಳೂ ಸದಾ ನಮ್ಮ ನೆನಪಿನಲ್ಲಿ ಉಳಿಯುತ್ತವೆ.[1]

ದುಗ್ಗಾಭಟ್ಟರು, ಭಾಗಮ್ಮ ಗೋದುಬಾಯಿ ಯೌವ್ವನದಲ್ಲಿಯೇ ತನ್ನ ಜೀವನ ಸಂಗಾತಿಯನ್ನು ಕಳೆದುಕೊಂಡಿದ್ದಾರೆ. ಆದರೆ ಆ ನೋವನ್ನು ಸಹಿಸಿ ತಮ್ಮ ಮಕ್ಕಳಿಗಾಗಿ ಬದುಕುತ್ತಾರೆ. ಫಣಿಯಮ್ಮನ ಅಂತಃಕರಣ, ಅವಳ ವಾತ್ಸಲ್ಯ ಜೀವನ ಶ್ರದ್ಧೆ, ಇವು ನಮ್ಮ ಮನದಲ್ಲಿ ನಿಲ್ಲುತ್ತವೆ. ಇವರೆಲ್ಲರ ಜೀವನದಲ್ಲಿ ಬಡತನವಿದೆ. ರೋಗ ರುಜಿನಗಳು ಬರುತ್ತವೆ, ಅಂಗವಿಕಲರಾದ ಮಕ್ಕಳು ಹುಟ್ಟಿದ್ದಾರೆ. ಸಾವು-ನೋವುಗಳು ಸಂಭವಿಸುತ್ತವೆ. ಮಹಾಪೂರ ಬರುತ್ತದೆ. ಮನೆ-ಮಠಗಳೂ ಕೊಚ್ಚಿಕೊಂಡು ಹೋಗುತ್ತವೆ. ಇವು ಯಾವವೂ ಇವರ ಬದುಕಿಗೆ ತಡೆಯನ್ನೊಡ್ಡುವದಿಲ್ಲ. ಬದುಕಿನಲ್ಲಿ ಬಂದದ್ದನ್ನೆಲ್ಲ ಎದುರಿಸುವ ಮನೋಸ್ಥೈರ್ಯ ಇವರೆಲ್ಲರಲ್ಲಿ ಇದೆ. ಒಟ್ಟಿನಲ್ಲಿ ಇವರದೆಲ್ಲ ಹೋರಾಟದ ಬದುಕು.

ಕಾದಂಬರಿಯಲ್ಲಿ ಒಂದೇ ಕ್ಷಣ ಕಾಣಿಸಿಕೊಳ್ಳುವ ದುಗ್ಗಜ್ಜಿ, ತಗ್ಗಿನಮನೆ, ಶಂಕ್ರಪ್ಪನವರ ಹೆಂಡತಿ, ಗಂಗಮ್ಮ ಇವರೆಲ್ಲ ಜೀವನ ಶ್ರದ್ಧೆಯಿಂದ ನಮ್ಮ ಗಮನ ಸೆಳೆಯುತ್ತಾರೆ.

ತಗ್ಗಿನಮನೆ ಶಂಕ್ರಪ್ಪ, ಅಪ್ಪಾಣ್ಣಾಚಾರ್ಯ, ಸೇತುರಾಯರು ಇವರೆಲ್ಲ ಆ ಕಾಲದ ಸಮಾಜದ ಪ್ರತೀಕವಾಗಿದ್ದಾರೆ. ಧರ್ಮಯ್ಯನವರು, ಮುದ್ದುರಾಮ ಆಧುನಿಕ ಪ್ರಭಾವಕ್ಕೆ ಒಳಗಾಗುತ್ತಾರೆ. ಧರ್ಮಯ್ಯನವರು ಊರಿಗೆ (ಗಡಿಯಾರ) ಸೈಕಲ್ಲು, ಗ್ರಾಮಫೋನು, ಬಸ್ಸು ತಂದು ಕ್ರಾಂತಿಯನ್ನು ಮಾಡುತ್ತಾರೆ. ಮುದ್ದುರಾಮು ಅವರ ಪ್ರಭಾವಕ್ಕೆ ಒಳಗಾಗಿ ಹೊಸ ತರಹದ ಉಡುಪುಗಳನ್ನು ಹೊಲಿಸಿಕೊಳ್ಳುತ್ತಾನೆ. ಸುಗಂಧ ತೈಲವನ್ನು ಬಳಸುತ್ತಾನೆ. ಜುಟ್ಟು ಕತ್ತರಿಸಿ ಕ್ರಾಪು ಬೆಳೆಸುತ್ತಾನೆ. ಬಿ. ವೆಂಕಟಾಚಾರ್ಯರ ಕಾದಂಬರಿಗಳು ಅವನ ಮೇಲೆ ಪ್ರಭಾವ ಬೀರುತ್ತವೆ.

ಇವೆಲ್ಲ ಸಂಕ್ರಮಣಾವಸ್ಥೆಯಲ್ಲಿರುವ ಸಮಾಜ, ವ್ಯಕ್ತಿಗಳ ಮೇಲೆ ಪ್ರಭಾವ ಬೀರುವದನ್ನು ಕಾಣುತ್ತೇವೆ.

---

1. C. H. P. R. Mys India 1963. "The River of Life" (Page 15), Smt. Indiras Tungabhadra is rich in Charcterisation Dugga-Batta, Mukambika, Phaniamma and other Charcters lives in our memory. There is Sadness in their lives which effects us deeply.

ಈ ಕಾದಂಬರಿಯಲ್ಲಿ ಯಾವ ಘಟನೆಯೂ ಅನವಶ್ಯಕವಾಗಿ ಬಂದಿಲ್ಲ. ಎಲ್ಲ ಘಟನೆಗಳು ಒಂದಿಲ್ಲೊಂದು ರೀತಿಯಲ್ಲಿ ಪಾತ್ರಗಳ ಮೇಲೆ ಪರಿಣಾಮ ಬೀರುತ್ತವೆ.

'ಭಕ್ತ ಪ್ರಲ್ಹಾದ' ನಾಟಕ ನೋಡಿದ ಕೃಷ್ಣವೇಣಿ ಆ ನಾಟಕದಲ್ಲಿರುವಂತಹ ಒಂದು ಪುಟ್ಟ ಮಗು (ವಾಣಿ) ತನಗೂ ಬೇಕು ಎಂದು ಗಂಡನ ಮುಂದೆ ತನ್ನ ತಾಯ್ತನದ ಬಯಕೆಯನ್ನು ವ್ಯಕ್ತಪಡಿಸುತ್ತಾಳೆ.

"ಅದೇ ರೀತಿ 'ವಿಷಮ ವಿವಾಹ' ನಾಟಕ ತುಳಸಿ, ಹಾಗೂ ರಾಘು ಇಬ್ಬರ ಮನಸ್ಸಿನ ಮೇಲೆ ಪರಿಣಾಮ ಬೀರುತ್ತದೆ. ಈ ನಾಟಕವೇ ತುಳಸಿ, (ಮಲತಾಯಿ) ರಾಘುವಿಗೆ ಪತ್ರ ಬರೆದಾಗ ಅವನು ಮನೆ ಬಿಟ್ಟು ಹೋಗಲು ಕಾರಣವಾಗುತ್ತದೆ"[1]

ವರದಾಚಾರ್ಯರನ್ನು ಸನ್ಮಾನಿಸುವಲ್ಲಿ ಆ ಊರಿನ ಜನರ ಉತ್ಸಾಹ, ರಸಿಕತೆ, ಕಲಾಭಿಮಾನ ವ್ಯಕ್ತವಾಗುತ್ತದೆ. ನಾಟಕದ ಟಿಕೆಟ್ಟುಗಳನ್ನು ಮಾರಲು ಮುದ್ದುರಾಮ, ರಾಘು ಹಳ್ಳಿ ಹಳ್ಳಿಗೆ ತಿರುಗಿ ಉತ್ಸಾಹದಿಂದ ಕೆಲಸ ಮಾಡುತ್ತಾರೆ. ಅವರ ಕಾರ್ಯೋತ್ಸಾಹ ಅವರ ಜೀವನೋತ್ಸಾಹವೇ ಆಗಿದೆ. ಇಂದಿರಾ ಅವರ ಅಜ್ಜ ಹೊಯ್ಸಳರೂ ಕಾದಂಬರಿಯಲ್ಲಿ ಕಾಣಿಸುತ್ತಾರೆ.

'ಇಸ್‌ಬೆಲ್' ಬಾಲೆಯ ಕತೆ ತುಂಗಭದ್ರೆಯರ ಮನಸ್ಸಿನ ಮೇಲೆ ಪರಿಣಾಮ ಬೀರುತ್ತದೆ. ಕೃಷ್ಣವೇಣಿ ಮುದ್ದುರಾಮ ಇವರ ದಾಂಪತ್ಯ ಜೀವನ ಶೃಂಗಾರ ಲೀಲೆ ಅವರ ತುಂಬು ಜೀವನದ ಶ್ರೀಮಂತಿಕೆಯ ಅಂಶಗಳಾಗಿ ಬಂದಿವೆ.

ತುಂಗಭದ್ರೆಯರು ಮೈನೆರೆತಾಗ ಸುತ್ತಲಿನವರು ತನಿಖೆ ಮಾಡುವದು, ಅವರ ಪ್ರತಿಕ್ರಿಯೆ ಸ್ವಾಭಾವಿಕವಾಗಿ ಬಂದಿವೆ. ಮುದ್ದುರಾಮ ವಿಧುರನಾದಾಗ ಕ್ಷೌರಿಕ ನರಸ ಕೂಡ ಮರು ಮದುವೆಯಾಗಲು ಉಪದೇಶ ಮಾಡುತ್ತಾನೆ. ದೈನಂದಿನ ಚಟುವಟಿಕೆಗಳು ಸಹ ಕಾದಂಬರಿಗೆ ಸೊಗಸನ್ನೇ ಕೊಟ್ಟಿವೆ. ಪ್ರತಿದಿನವೂ ಕೇಳುವ ಸುಬ್ಬಾಭಟ್ಟನ ವೀಣೆ, ರಾಮಮಂಟಪ, ತುಂಗಾನದಿ, ದೇವಾಸ್ಥಾನ, ಕಾದಂಬರಿಯಲ್ಲಿ ನಡೆಯುವ ಘಟನೆಗಳಿಗೆಲ್ಲ ಮೂಕ ಸಾಕ್ಷಿ. ಮುದ್ದುರಾಮ ಅವುಗಳನ್ನು ಬಾಲ್ಯದಲ್ಲಿಯೂ ನೋಡಿದ್ದ–ಕೃಷ್ಣವೇಣಿಯನ್ನು ಮದುವೆಯಾದ ಮೇಲೆಯೂ ನೋಡಿದ್ದ. ಮಂದಾಕಿನಿಯನ್ನು ಮದುವೆಯಾದಾಗ ಅವೆಲ್ಲ ಮುದ್ದುರಾಮನಿಗೆ ಹೊಸ ಸಂದೇಶವನ್ನು ಕೊಡುತ್ತವೆ. ಕ್ಷೌರಿಕ ನರಸನ ಉಪದೇಶವೂ ಅವನ ನೆನಪಿಗೆ ಬರುತ್ತದೆ.

---

1. ಮುದುಕ ಚಕ್ರವರ್ತಿಯನ್ನು ಮದುವೆಯಾದ ಶರಾವತಿ ಬಲವಮಗನನ್ನು ಮೋಹಿಸಿ ಪ್ರಣಯ ಭಂಗ ಹೊಂದುತ್ತಾಳೆ. ಅವನ ಕೊಲೆಗೂ ಪ್ರಯತ್ನಿಸುತ್ತಾಳೆ. ಮಂತ್ರಿಯ ತಂತ್ರದಿಂದ ಬಲಮಗ ಕಮಲಾಕರ ಉಳಿಯುತ್ತಾನೆ. ವಿಷತಿಂದ ಶರಾವತಿ ಸಾಯುತ್ತಾಳೆ. ನಾಟಕದ ಈ ಘಟನೆ ರಾಘುವಿಗೆ ದಿಗಿಲನ್ನುಂಟುಮಾಡುತ್ತದೆ.

"ತುಂಗಾನದಿ, ಕಲ್ಲುಸಾರ ದೇವಸ್ಥಾನಗಳಂತೆಯೇ ಸುಬ್ಬಾಭಟ್ಟನ ವೀಣೆಯೂ ಒಂದು ನಿತ್ಯ ಸತ್ಯವೇ ಆಗಿದೆ. ನಶ್ವರವಾದ ಅನುಭವ ನಿತ್ಯ ತತ್ವಗಳ ಮೂಲಕ ತಾನೂ ನಿತ್ಯವಾಗುತ್ತದೆ."[1]

ಈ ಕಾದಂಬರಿಯ ಇನ್ನೊಂದು ವಿಶೇಷವೆಂದರೆ ಸ್ತ್ರೀ ಪಾತ್ರಗಳಿಗೆಲ್ಲ ಹೆಚ್ಚಾಗಿ ಇಲ್ಲಿ ನದಿಯ ಹೆಸರುಗಳನ್ನೇ ಇಡಲಾಗಿದೆ. ಉದಾ: ಭಾಗಮ್ಮ, ಗಂಗಮ್ಮ, ತುಂಗಭದ್ರ, ಕೃಷ್ಣ ಗೋದುಬಾಯಿ, ಮಂದಾಕಿನಿ ಇವೆಲ್ಲ ನದಿಯ ಹೆಸರುಗಳೇ. ಈ ನದಿಯ ಹೆಸರುಗಳೆಲ್ಲ ಸಾಂಕೇತಿಕವಾಗಿವೆ.

ಕಾದಂಬರಿಯ ಪಾತ್ರಗಳ ಬೆಳವಣಿಗೆಯೂ ಮಲೆನಾಡಿನ ನಿಸರ್ಗದಷ್ಟೇ ಮುಗ್ಧ ಸರಳ, ಸುಂದರ. ತುಂಗಾನದಿ, ಕಲ್ಲುನಾರ, ರಾಮಮಂಟಪ, ಕುರುವಳ್ಳಿ, ಜಾರು ಬಂಡೆ, ದೇವಸ್ಥಾನ ಲೇಖಕಿಗೆ ಬಾಲ್ಯದಿಂದಲೂ ಚಿರಪರಿಚಿತ ಸ್ಥಳಗಳು.

ತುಳಸಿಯ ಸ್ವಭಾವ ಅವಳ ವರ್ತನೆಯನ್ನು ಲೇಖಕಿ ಅತ್ಯಂತ ಸಹಜವಾಗಿಯೇ ಚಿತ್ರಿಸಿದ್ದಾರೆ. ತುಳಸಿ ದಾಂಪತ್ಯ ಜೀವನದ ಬಗೆಗೆ ಹೊಂಗನಸುಗಳನ್ನು ಕಂಡವಳು. ಆದರೆ ಅಪ್ಪಣ್ಣಾಚಾರ್ಯನಿಂದ ತನ್ನ ತಂದೆ ತೆಗೆದುಕೊಂಡ ಸಾಲವನ್ನು ಮುಟ್ಟಿಸುವ ಕ್ಕಾಗಿ ಮುದಿ ಅಪ್ಪಣ್ಣಾಚಾರ್ಯನನ್ನು ಮದುವೆಯಾಗಬೇಕಾಗುತ್ತದೆ. ಮದುವೆಗೆ ನಿಂತ ಮಗನನ್ನು ಮನೆಯಲ್ಲಿಟ್ಟುಕೊಂಡು ಮುದಿವಯಸ್ಸಿನಲ್ಲಿ ತನ್ನನ್ನು ಮದುವೆ ಯಾದುದರಿಂದ ಅವನ ಮೇಲೆ ತಿರಸ್ಕಾರವುಂಟಾಗುತ್ತದೆ. ಸತ್ತ ಸವತಿಯ ಮೇಲೆ ಮತ್ಸರ ಉಂಟಾಗುತ್ತದೆ. ರಾಘುವನ್ನು ನೋಡಿದಾಗ ಅವಳ ಮನಸ್ಸಿನ ಸುಪ್ತ ಕಾಮನೆಗಳು ಜಾಗೃತವಾಗುತ್ತವೆ. ಮನಸ್ಸಿನ ತಳಮಳವನ್ನು ತಾಳಲಾರದೇ ರಾಘುವಿಗೆ ಪತ್ರ ಬರೆಯುತ್ತಾಳೆ. ರಾಘು ಮನೆಬಿಟ್ಟು ಹೋದಾಗ ತನ್ನ ದುಡುಕಿಗೆ ಪಶ್ಚಾತ್ತಾಪ ಪಡುತ್ತಾಳೆ. ಹೀಗೆ ಅವಳ ವರ್ತನೆ ಮಾನವ ಸಹಜ ಸ್ವಭಾವದಿಂದ ಕೂಡಿದೆ.

ಶಂಭುವಿನಂತಹ ಪಾತ್ರವೂ ಕಾದಂಬರಿಯಲ್ಲಿ ವ್ಯರ್ಥವಾಗಿಲ್ಲ. ಪಶುಪಾಲನೆ ಮಾಡುತ್ತಾನೆ. ತುಂಗಭದ್ರೆಯರಿಗೆ ಊರುಗೋಲಾಗುತ್ತಾನೆ. ಈ ಪಾತ್ರದಲ್ಲಿ ಲೇಖಕಿಯ ಅನುಕಂಪವಿದೆ. ಅವನಿಗೂ ಎಲ್ಲರಿಗಿರುವಂತೆ ಹೃದಯವೆನ್ನುವದಿದೆ. ಆಶೆ ಆಕ್ಷಾಂಕ್ಷೆಗಳಿವೆ ಎಂಬುದನ್ನು ಸೂಚಿಸುತ್ತಾರೆ. ಮುದ್ದುರಾಮ ಹೊಸ ಬಟ್ಟೆಗಳನ್ನು ತಂದಾಗ ತನಗೆ ಅಂತಹ ಬಟ್ಟೆ ಬರದದಕ್ಕಾಗಿ ಸಿಟ್ಟಿಗೇಳುತ್ತಾನೆ. ಅದಮ್ಯ ಸುಪ್ತ ಬಯಕೆಯಿಂದ ಅವನು ಮರ ಕಡಿಯುತ್ತಾನೆ. ಇವೆಲ್ಲ ಅತೃಪ್ತ ಮನಸ್ಸಿನ ಪ್ರತಿ ಕ್ರಿಯೆಗಳು.

---

1. ಶ್ರೀ ಕೆ. ಡಿ. ಕುರ್ತಕೋಟಿ 'ತುಂಗಭದ್ರಾ' ಕಾದಂಬರಿಗೆ ಮುನ್ನುಡಿ.

ಮುದ್ದುರಾಮು ಹಾಗೂ ರಾಘು ಶಿವಮೊಗ್ಗೆಯ ಹೈಸ್ಕೂಲು ಸೇರಲು ಹೊರಟಾಗ ಅದುವರೆಗೂ ಒಂದು ದಿನವೂ ಬಿಟ್ಟಿರದ ತಮ್ಮ ಮಕ್ಕಳನ್ನು ಪರ ಊರಿಗೆ ಕಳಿಸುವಾಗ ದುಃಖಿಸುವುದು, ಗಾಡಿ ಮರೆಯಾಗುವವರೆಗೂ ಅವರ ಊಟ–ತಿಂಡಿಯ ಬಗೆಗೆ ಎಚ್ಚರಿಕೆ ಹೇಳುವುದು. ಇಲ್ಲೆಲ್ಲ ಗಾಡಿಯ ಹಿಂದೆ ಹೊರಡುವ ಭಾಗಮ್ಮ, ಗೋದುಬಾಯಿ ಕರುಳಿನ ಸೆಳೆತ ಅಂತಃಕರಣ ಓದುಗರ ಮನ ಮಿಡಿಯುತ್ತವೆ.

ಕಾದಂಬರಿಯ ಸ್ತ್ರೀ ಪಾತ್ರಗಳೆಲ್ಲ ಹೆಂಡತಿಯಾಗಿ, ತಾಯಿಯಾಗಿ ಗೃಹಿಣಿಯಾಗಿ ತಮ್ಮ ಕಾರ್ಯವನ್ನು ಸಮರ್ಥವಾಗಿ ನಿರ್ವಹಿಸಿದ್ದಾರೆ.

ಕಾದಂಬರಿಗೆ 'ತುಂಗಭದ್ರೆ' ಎಂದು ಹೆಸರಿಟ್ಟಿದ್ದರೂ ಮುದ್ದುರಾಮನೇ ಇಲ್ಲಿ ಕೇಂದ್ರ ಪಾತ್ರವಾಗಿದ್ದಾನೆ. ಆದರೆ ಕುರುಡಿಯರಾದ ತುಂಗಭದ್ರೆಯರ ಬಗೆಗೆ ಓದುಗರ ಗಮನ ಸೆಳೆಯಲು ಆ ಹೆಸರನ್ನು ಲೇಖಕಿ ಇಟ್ಟಿದ್ದಾರೆ.[1]

"ತುಂಗಭದ್ರೆಯರನ್ನು ನಾನು ಬೆಳಕಿಗೆ ತಂದೆ" ಎಂದು ಲೇಖಕಿ ಇಂದಿರಾ ಅವರು ಹೇಳುತ್ತಾರೆ. ಮಲೆನಾಡಿನ ನಿಸರ್ಗ, ಅಲ್ಲಿನ ಆಡುನುಡಿಯ ಸೊಗಡನ್ನು ಹೀರಿ ಕೊಂಡ ಈ ಕಾದಂಬರಿಯ ಜೀವದರ್ಶನ ಅದರ ಪ್ರಾದೇಶಿಕತೆಯಿಂದ ಮೂರ್ತವಾಗಿದೆ.

ಈ ಕಾದಂಬರಿಯ ತುಂಬೆಲ್ಲ ಹೆಣ್ಣು ಮಕ್ಕಳಿಗೆ ಮಾತ್ರ ವೇದ್ಯವಾಗಿರುವ ಜೀವನ ದರ್ಶನ ಹರಡಿದೆ. ಜೀವನದ ಬಗ್ಗೆ ಇರುವ ಗೌರವವೇ ಅದರ ಮೂಲ ಸೂತ್ರ ವಾಗಿದೆ. ತುಂಬಿದ ಬಸುರಿಯನ್ನು ಬೆಳೆಯುವ ಮಗುವನ್ನು ನೋಡಿಕೊಂಡತೆ ಈ ವ್ಯಕ್ತಿಗಳೆಲ್ಲ ಜೀವನದ ಮೌಲ್ಯಗಳನ್ನು ಎಚ್ಚರದಿಂದ ಕಾಪಾಡಿಕೊಂಡಿದ್ದಾರೆ. ಪಿಡುಗು, ಬೇನೆ, ಮರಣ ತುಂಬಿಬಂದ ಹೊಳೆ, ಮಲತಾಯಿಯ ಕಾಟ, ಇವುಗಳಿಂದಲೂ ಜೀವನಧರ್ಮ ನಾಶವಾಗುವದಿಲ್ಲ. ಆರೋಗ್ಯಕರವಾದ ಜೀವನದ ಅಂಶವೊಂದಕ್ಕೆ ಕನ್ನಡಿ ಹಿಡಿದು ಅದರ ಚೆಲುವು–ವಿಕಾರಗಳೊಡನೆಯೇ ಅದರ ತಳಹದಿಗಿರುವ ಶ್ರದ್ಧೆ ಯನ್ನೂ ವಿವೇಕವನ್ನೂ ಈ ಲೇಖಕಿ ಕಾಣಿಸಿಕೊಟ್ಟಿದ್ದಾರೆ"

ಸ್ವಾರ್ಥ, ತ್ಯಾಗ, ವಿವೇಕ ಔದಾರ್ಯ, ಅಂತಃಕರಣ ಇವು ಕಾದಂಬರಿಯ ಪಾತ್ರ ಪೋಷಣೆ ಜೀವನ ಮೌಲ್ಯಗಳಾಗಿರುವದರಿಂದ ಅಸಹಾಯಕರಾದ ಹುಟ್ಟುಕುರುಡಿಯರ ಬಾಳಿನ ಸಾರ್ಥಕತೆಗೆ ಅವರೆಲ್ಲ ಮುಂದಾಗುತ್ತಾರೆ. ಅಂಧಕಾರಮಯವಾಗಿದ್ದ ಅವರ

---

1 L. S. Sheshgiri Rao Indian Express 1976. Inadequencies of women writers and M. K. Indira. 'Tunga-Bhadra' the tittle refers to two blind sisters but it realy center around Muddu Ramu. He a boy when the novel opens but has grown up into a man by the end. The tittle suggests that the writer was attracted to the theme of the blind sisters.

ಭವಿಷ್ಯ ಜೀವನಕ್ಕೆ ಬೆಳಕನ್ನು ತಂದುಕೊಡುತ್ತಾರೆ—ಎಂದು ಮನೋಹರ ಗ್ರಂಥ ಮಾಲೆಯ ಪ್ರಕಾಶಕರು ಹೇಳಿದ್ದಾರೆ. ಈ ಕಾದಂಬರಿಯಲ್ಲಿನ ಸಮಸ್ಯೆ ಅಂದಿನ ಕಾಲಕ್ಕೆ ಸಂಬಂಧಿಸಿದ್ದಾದರೂ ಮಿಡಿಯುವ ಮಾನವೀಯ ಮೌಲ್ಯಗಳಿಂದಾಗಿ ಇದು ಇಂದಿರಾ ಅವರ ಯಶಸ್ವೀ ಕೃತಿಯಾಗಿದೆ. ಈ ಕಾದಂಬರಿ ಪ್ರಾದೇಶಿಕ ಪ್ರಶಸ್ತಿಯನ್ನು ಪಡೆದಿದೆ. ಬೆಂಗಳೂರು ವಿಶ್ವವಿದ್ಯಾಲಯ ಬಿ.ಕಾಂ. ಪ್ರಥಮ ವರ್ಷಕ್ಕೆ ಪಠ್ಯಪುಸ್ತಕವಾಗಿದೆ.

(ಕ) ಸಾಮಾಜಿಕ ಸಮಸ್ಯೆಗಳನ್ನೊಳಗೊಂಡ ಕಾದಂಬರಿಗಳು :

ಸಮಾಜದ ಕಟ್ಟುಪಾಡಿನಲ್ಲಿ ಹುಟ್ಟಿಕೊಂಡ ಬಾಲ್ಯವಿವಾಹ, ವೇಶ್ಯಾ ಸಮಸ್ಯೆ, ಆರ್ಥಿಕ ಅವ್ಯವಸ್ಥೆಯಿಂದ ಹುಟ್ಟಿಕೊಂಡ ಬಡತನ, ವರದಕ್ಷಿಣೆ, ಅಂಗವಿಕಲತೆ, ಮಠ-ಮಾನ್ಯಗಳಲ್ಲಿ ನಡೆಯುವ ಮೋಸ, ಕಪಟ ಸನ್ಯಾಸಿಗಳ ಡಾಂಭಿಕತೆ, ಮೂಢನಂಬಿಕೆ, ಅವೈಚಾರಿಕತೆ, ಸ್ತ್ರೀಶೋಷಣೆ, ನಗರ ಜೀವನದ ವಸತಿ ಸಮಸ್ಯೆ, ಜಾತಿ ಸಮಸ್ಯೆ, ಮದುವೆ ಸಮಸ್ಯೆ, ಯುವಜನಾಂಗ ಎದುರಿಸುವ ಸಮಸ್ಯೆಗಳು, ಇವೇ ಮುಂತಾದ ಸಮಸ್ಯೆಗಳು ಇಂದಿರಾ ಅವರ ಕಾದಂಬರಿ ಸಾಮಾಜಿಕಗಳ ವಸ್ತುವಾಗಿವೆ.

ಆಭರಣ, ಕಲೆಗಾರ, ತಾಪದಿಂದ ತಂಪಿಗೆ ಯಾರು ಹಿತವರು, ಮುಸುಕು, ಪೂರ್ವಾಪರ ಚಿದ್ವಿಲಾಸ, ಹೂಬಾಣ, ನೂರೊಂದು ಬಾಗಿಲು, ಈ ಕಾದಂಬರಿಗಳೆಲ್ಲ ಸಾಮಾಜಿಕ ಕಥಾವಸ್ತುವುಳ್ಳವುಗಳಾಗಿವೆ.

ಹಸಿವು, ಬಿದಿಗೆ ಚಂದ್ರಮ, ಡೊಂಕು, ಜಾತಿ ಕೆಟ್ಟವಳು, ಟುಲೆಟ್, ಮನೆ ಕೊಟ್ಟು ನೋಡಿ, ತಪೋವನದಲ್ಲಿ, ಗೆಜ್ಜೆ ಪೂಜೆ, ಸದಾನಂದ, ಮಧುವನ, ಫಣಿಯಮ್ಮ, ಈ ಕಾದಂಬರಿಗಳಲ್ಲಿ ಸಮಾಜದ ಗಂಭೀರ ಜ್ವಲಂತ ಸಮಸ್ಯೆಗಳ ಚಿತ್ರಣವಿದೆ.

ನವೋದಯ ಕಾದಂಬರಿಗಳ ಆದರ್ಶವಾದ ಇವರ ಕಾದಂಬರಿಗಳಲ್ಲಿ ಹುದುಗಿದ್ದರೂ ವಾಸ್ತವತೆ ಇದೆ. ಪ್ರಗತಿಪರ ಧೋರಣೆ ಇದೆ ಬಾಲ್ಯ ವಿಧವೆಯರ ಪುನರ್ ವಿವಾಹ, ಕಪಟ ಸನ್ಯಾಸಿಗಳ ವಂಚನೆ, ವೇಶ್ಯೆಯರ ಬದುಕಿನ ಆಂತರಿಕ ಸಮಸ್ಯೆ. (ಹೆಣ್ಣಿನ ದೃಷ್ಟಿಯಿಂದ) ಬಡತನದ ವಾಸ್ತವ ಚಿತ್ರಣವಿದೆ, ಮೂಢನಂಬಿಕೆ, ಅವೈಚಾರಿಕತೆ, ಇವುಗಳನ್ನು ಎತ್ತಿ ತೋರಿಸಿದ್ದಾರೆ. ಸ್ತ್ರೀ ಶೋಷಣೆಗೆ ತೀವ್ರ ಸ್ಪಂದಿಸಿದ್ದಾರೆ. ವೈಜ್ಞಾನಿಕತೆ, ವೈಚಾರಿಕತೆ, ಈ ನೆಲಕ್ಕಂಟಿದ ವಾಸ್ತವತೆ ಸಾಮಾಜಿಕ ಪ್ರಜ್ಞೆ. ಬದುಕಿನ ಬಗೆಗೆ ಇರುವ ಆಳವಾದ ಶ್ರದ್ಧೆ, ಜೀವನಾನುಭವ, ಇವರ ಸಾಮಾಜಿಕ ಕಾದಂಬರಿಗಳ ಜೀವಾಳ, ನವೋದಯ ಹಾಗೂ ಪ್ರಗತಿಶೀಲ ಎರಡೂ ಸತ್ವವನ್ನು ಹೀರಿಕೊಂಡ ಇವರ ಕೃತಿಗಳಲ್ಲಿ ಸಮನ್ವಯವಿದೆ. ಫಣಿಯಮ್ಮ ಕೃತಿಯಲ್ಲಿ ಅವರು ಸಂಪ್ರದಾಯದಿಂದ ಸಂಪೂರ್ಣವಾಗಿ ಹೊರಬಂದ, ಸಮಾಜ ವ್ಯವಸ್ಥೆಯ ವಿರುದ್ಧ ಬಂಡಾಯದ ಮನೋಧರ್ಮವನ್ನು ವ್ಯಕ್ತಪಡಿಸಿದುದನ್ನು ಸ್ಪಷ್ಟವಾಗಿ ಕಾಣುತ್ತೇವೆ.

'ತಾಪದಿಂದ ತಂಪಿಗೆ', 'ವರ್ಣಲೀಲೆ', 'ಕತೆಗಾರ', 'ಸುಖಾಂತ', 'ಮನೋಮಂದಿರ' ಈ ಕಾದಂಬರಿಗಳಲ್ಲಿ ಪ್ರಣಯಿಗಳ ಜೀವನದ ಸುತ್ತ ಹೆಣೆದಿರುವ ಕತೆಯಿದೆ.

ಕಾದಂಬರಿಕಾರ್ತಿ ಇಂದಿರಾ ಅವರ 'ತಾಪದಿಂದ ತಂಪಿಗೆ', 'ಕತೆಗಾರ', ವರ್ಣಲೀಲೆ, 'ಮನೋಮಂದಿರ', ಈ ಕಾದಂಬರಿಗಳಲ್ಲಿ ಬಗ್ನಪ್ರಣಯದ ಕಥಾವಸ್ತುವಿದೆ.

'ತಾಪದಿಂದ ತಂಪಿಗೆ' ಮತ್ತು 'ವರ್ಣಲೀಲೆ' ಈ ಕಾದಂಬರಿಗಳಲ್ಲಿ ಕಥಾನಾಯಕರು ಭಗ್ನಪ್ರಣಯಿಗಳಾಗಿ ಮತ್ತೆ ಸುಸಂಸ್ಕೃತ ಸ್ತ್ರೀಯರನ್ನು ಮದುವೆಯಾಗಿ ಜೀವನ

ದಲ್ಲಿ ನೆಮ್ಮದಿಯನ್ನು ಕಾಣುತ್ತಾರೆ. ಆದರೆ 'ಕತೆಗಾರ' 'ಸುಖಾಂತ' ಮತ್ತೆ 'ಮನೋ ಮಂದಿರ' ಈ ಎರಡೂ ಕಾದಂಬರಿಗಳಲ್ಲಿ ನಾಯಕ–ನಾಯಕಿಯರು ಭಗ್ನಪ್ರಣಯಿ ಗಳಾಗಿ ಉಳಿಯುತ್ತಾರೆ.

ಲೇಖಕಿ ಈ ಕಾದಂಬರಿಯನ್ನು 'ಬೋಧಪ್ರದ' ಕಾದಂಬರಿ ಎಂದು ಕರೆದಿದ್ದಾರೆ. ಕಥಾನಾಯಕ 'ಬಾಲು' ಚಿಟ್ಟೆಯಂತಿದ್ದ ಹೆಣ್ಣಿನ ಸಹವಾಸ ಮಾಡಿ ಮೋಸ ಹೋಗು ತ್ತಾನೆ. ಅವಳ ಪ್ರೇಮದಿಂದ ವಂಚಿತನಾಗಿ ಭ್ರಮಾಧೀನನಾಗುತ್ತಾನೆ. ವೈದ್ಯರ ಸಲಹೆಯಂತೆ ಪ್ರಕರ್ತಿ ಚಿಕಿತ್ಸೆಗಾಗಿ ಮಲೆನಾಡಿಗೆ ಬರುತ್ತಾನೆ. ಸ್ನೇಹಿತ ಸೀತಾ ರಾಮನ ತಂಗಿ 'ಗಂಗೆ'ಯನ್ನು ಮದುವೆಯಾಗಿ ಜೀವನದಲ್ಲಿ ಸಂತೃಪ್ತಿಯನ್ನು ಕಾಣು ತ್ತಾನೆ. ಈ ಕಥೆಯೇ ಕಾದಂಬರಿಯ ಜೀವಾಳ.

ತಂಪಿನ ತಾಣವೆನಿಸಿದ ಮಲೆನಾಡಿನಹಳ್ಳಿ ಶೀಗವಾನಿಯ ನಿಸರ್ಗರಮ್ಯ ವಾತಾ ವರಣ, ಅಲ್ಲಿಯ ಜನರ ಮುಗ್ಧ, ಸರಳ, ಆತ್ಮೀಯ ಸಹವಾಸದಲ್ಲಿ ಬಾಲು ಮನದ ನೋವನ್ನು ಮರೆಯುತ್ತಾನೆ. ಸೀತಾರಾಮನ ತಂಗಿ ಗಂಗೆ ಹಳ್ಳಿಯ ಮುಗ್ಧೆ, ಚೆಲುವೆ, ಸದ್ಗುಣಿ, 'ಚಿತ್ರಾ'ಳಿಂದ ವಂಚಿತನಾಗಿ ಮನದ ನೆಮ್ಮದಿ ಕಳೆದುಕೊಂಡ ಬಾಲು ಗಂಗೆ ಯಿಂದ ನೆಮ್ಮದಿ ಕಾಣುತ್ತಾನೆ.

ತೆಳುವಾದ ಹಂದರದ ಮೇಲೆ ರಚಿತವಾದ ಈ ಕಾದಂಬರಿ ಸರಾಗವಾಗಿ ಓದಿಸಿ ಕೊಂಡು ಹೋಗುತ್ತದೆ.

ವರ್ಣಲೀಲೆ ಈ ಕಾದಂಬರಿಯಲ್ಲಿ ಹೇಮಕೂಟ ಎಸ್ಟೇಟಿನ ಆದಿನಾಥರ ಏಕೈಕ ಪುತ್ರ ಕೀರ್ತಿನಾಥ ಎಸ್ಟೇಟಿನ ಕರಣಿಕ ವೀರವರ್ಮರ ಮಗಳಾದ ರಸವಂತಿಯನ್ನು ಪ್ರೀತಿಸುತ್ತಾನೆ. ಅವರು ಬಾಲ್ಯದಿಂದ ಕೂಡಿ ಆಡಿ ಬೆಳೆದವರು. ಅವರ ಸ್ನೇಹ ಪ್ರೇಮವಾಗಿ ಬೆಳೆಯುತ್ತದೆ. ಉಚ್ಚ ಶಿಕ್ಷಣಕ್ಕೆ ವಿದೇಶಕ್ಕೆ ಹೊರಟ ಕೀರ್ತಿನಾಥ 'ರಸವಂತಿ'ಗೆ ಅವಳನ್ನು ಮದುವೆಯಾಗುವ ಮನೋಭಿಲಾಷೆಯನ್ನು ತಿಳಿಸುತ್ತಾನೆ. ವಿದೇಶದಿಂದ ಮರಳಿದ ನಂತರ ರಸವಂತಿಯನ್ನು ಮದುವೆಯಾಗುವದಾಗಿ ವೀರ ವರ್ಮರಿಗೂ ತಿಳಿಸಿದಾಗ, ಕರಣಿಕ ವೀರವರ್ಮರು, ತಮಗೂ ಆದಿನಾಥರಿಗೂ ಇರುವ ಸಾಮಾಜಿಕ ಅಂತಸ್ತು ಸ್ಥಾನಮಾನ ಇವುಗಳ ಅಂತರವನ್ನು ತಿಳಿದು ತಮ್ಮ ಮಗಳನ್ನು ಬೇರೆ ವರನಿಗೆ ಕೊಟ್ಟು ಮದುವೆ ಮಾಡುತ್ತಾರೆ. ಮತ್ತು 'ಹೇಮಕೂಟ' ಎಸ್ಟೇಟನ್ನು ಬಿಟ್ಟು ಬೇರೆ ಕಡೆ ನೆಲೆಸುತ್ತಾರೆ.

ಅವನ ಸ್ನೇಹಿತ ಜಯದೇವನ ಸಹವಾಸದಿಂದ ಅವನ ವ್ಯಥೆ ಕಡಿಮೆಯಾಗು ತ್ತದೆ. ವೈನಾಡಿನ ಶ್ರೀಮಂತ ಕುಟುಂಬದ ಸುಸಂಸ್ಕೃತ ಕನ್ಯೆ ನಿರ್ಮಲೆ ಕೀರ್ತಿನಾಥನ ಮನಸ್ಸನ್ನು ಗೆಲ್ಲುತ್ತಾಳೆ. ಕೀರ್ತಿನಾಥನ ಸಮಸ್ಯೆ ಪರಿಹಾರವಾಗುತ್ತದೆ. ಇದು ಕಾದಂಬರಿಯ ಕಥಾವಸ್ತು.

ಸಂಪ್ರದಾಯಪ್ರಿಯ ಜೈನ ಕುಟುಂಬದ ದರ್ಬಾರು ಹಾಗೂ ದೌಲತ್ತನ್ನು ಇಲ್ಲಿ ಭವ್ಯವಾಗಿ ಚಿತ್ರಿಸಲಾಗಿದೆ. ಆದಿನಾಥರ ಬಂಗಾರದರಸಿ ಶಾಪಂತಿ ಅವರ ಧರ್ಮಪತ್ನಿಯಂತೆ ಬಾಳಿದರೂ ಅವಳನ್ನು ಕುರಿತು ಆದಿನಾಥರು ತಾಳುವ ನಿಲುವು ಸಂಕುಚಿತವಾದದ್ದು. ಶಾಪಂತಿ ತನ್ನ ಮೌನದಿಂದ ಓದುಗರ ಮನಸ್ಸನ್ನು ಗೆಲ್ಲುತ್ತಾಳೆ.

"ದುರ್ಬಲ ವ್ಯಕ್ತಿತ್ವದ ಕೀರ್ತಿಯ ಮನಸ್ಸು ಧೃಡವಾಗುವಂತೆ ರೂಪಿಸುವಲ್ಲಿ ಶ್ರಮಪಡುವ, ಅವನ ಹಿತಕೋರುವ ಪಾತ್ರಗಳ ಪ್ರಭಾವ ಹೆಚ್ಚಾಗಿದೆ. ರಸವಂತೆಯದು ಒಂದು ಚಿಕ್ಕ ಪಾತ್ರವಾದರೂ ಅವಳ ಪ್ರಭಾವ ಮಾತ್ರ ಇಡೀ ಕಾದಂಬರಿಯನ್ನು ಆವರಿಸುತ್ತದೆ."[1]

'ಪ್ರೇಮ ಕ್ಷಣಿಕ' ಎಂಬುದನ್ನು ಲೇಖಕಿ ಇಲ್ಲಿ ನಿರೂಪಿಸಲು ಯತ್ನಿಸಿದ್ದಾರೆ. ವರ್ಣಲೀಲೆ ಶೀರ್ಷಿಕೆಗೆ ವಿಶೇಷ ಅರ್ಥವಿದೆ. ಎಂದು ಮುನ್ನುಡಿಯಲ್ಲಿ ಬರೆದಿದ್ದಾರೆ. ಬದಲಾಗುವ ಜೀವನದ ಗತಿ ಅಥವಾ ಕ್ಷಣಕಾಲ ಉನ್ಮಾದಗೊಳಿಸುವ ಪ್ರೇಮ ಎಂದು ಹೇಳಬಹುದು. ಕೇವಲ ಮನೋದೌರ್ಬಲ್ಯದಿಂದ ತಮ್ಮ ಜೀವನ ರಾಜ್ಯ, ಕೋಶ, ಶೀಲ, ಸಂಪತ್ತುಗಳನ್ನು ಕಳೆದುಕೊಂಡು ತಮ್ಮ ಬದುಕನ್ನೆ ವ್ಯರ್ಥಮಾಡಿಕೊಂಡ ವ್ಯಕ್ತಿಗಳು ಅನೇಕರು. ಅದೇ ರೀತಿ ಇಲ್ಲಿ ಕೀರ್ತಿನಾಥನ ಮನೋದೌರ್ಬಲ್ಯದಿಂದ ಇಡೀ ಮನೆತನ ಪತನವಾಗಲಿದ್ದುದನ್ನು ಲೇಖಕಿ ಚಿತ್ರಿಸಿದ್ದಾರೆ. ಇಂತಹ ಸಮಸ್ಯೆಯ ಪರಿಹಾರವನ್ನು ವಿವೇಕದಿಂದ ಯೋಚಿಸಿ, ಜೀವನವನ್ನು ಸುಗಮಗೊಳಿಸಿಕೊಳ್ಳಬೇಕೆಂಬುದೇ ಲೇಖಕಿಯ ಆಶಯವಾಗಿದೆ.

'ಕತೆಗಾರ' :

ಎಂ. ಕೆ. ಇಂದಿರಾ ಅವರ 'ಕತೆಗಾರ' ಕರ್ಮವೀರದಲ್ಲಿ ಧಾರಾವಾಹಿಯಾಗಿ ಬಂದದ್ದು ವಾಸವಾಂಬಾ ಪ್ರಕಾಶನದಿಂದ ೧೯೭೦ರಲ್ಲಿ ಪ್ರಕಟವಾಗಿದೆ.

"ಇದು ಒಂದು ಆಕರ್ಷಣೀಯ ಕಾದಂಬರಿ. ಕತೆಗಾರ ಮೂರ್ತಿ ತನ್ನ ಕಣ್ಣೆದುರಿಗೆ ನಡೆದ ಘಟನೆಗಳನ್ನು ಹತ್ತಿರದಿಂದ ನೋಡಿದ ವ್ಯಕ್ತಿಗಳನ್ನು ಕಾದಂಬರಿಗೆ ಅಳವಡಿಸಿಕೊಳ್ಳಲು ಪಟ್ಟ ಪ್ರಯತ್ನ ಇಲ್ಲಿದೆ. ವಯಸ್ಸಿನ, ಮನಸ್ಸಿನ, ಅಧಿಕಾರಕ್ಕೆ, ಮೋಹಕ್ಕೆ ಒಳಗಾಗಿ ತನ್ನ ಸ್ಥಾನಮಾನ ನಿಲುವು ಎಲ್ಲವನ್ನು ತೃಣೀಕರಿಸಿ ಸಲ್ಲದ ವ್ಯಕ್ತಿಯನ್ನು ಪ್ರೀತಿಸಿ, ತನ್ನ ಸುಖಮಯ ಬದುಕನ್ನು ದುರಂತಮಯ ಮಾಡಿಕೊಂಡ ನೇತ್ರಾವತಿ ಗುಪ್ತಗಾಮಿಯಾಗಿದ್ದು ಯಾವ ಜೀವಕ್ಕೂ ನೋವುಕೊಡದಂತೆ ಎಚ್ಚರವಾಗಿ ನಡೆದುಕೊಂಡರೂ ತನಗೆ ತಿಳಿಯದಂತೆ ಒಂದು ಜೀವ ತನ್ನಿಂದಲೇ ದುಃಖಕ್ಕೀಡಾಗಿ ನರಳುತ್ತಿದ್ದರೂ 'ಏನೂ ಮಾಡಲಾರದ ಅಸಹಾಯಕ ಪರಿಸ್ಥಿತಿಗೆ ಸಿಲುಕಿರುವ ಮಧುರ

1. ಎನ್. ಎ. ವಿಮಲ, 'ಸಾಹಿತ್ಯ ವಾರ್ಷಿಕ' 1975 ಪುಟ–52,

ಇಂತಹ ಪಾತ್ರಗಳನ್ನು ಕೃತಿಯಲ್ಲಿ ತಂದು ಕೃತಿಯನ್ನು ವೈಶಿಷ್ಟ್ಯವನ್ನಾಗಿ ಮಾಡುವ ಹಂಬಲವುಳ್ಳ ಕತೆಗಾರ ಮೂರ್ತಿಯ ಚಿತ್ರಣ ಇಲ್ಲಿ ಚೆನ್ನಾಗಿ ಬಂದಿದೆ..."[1]

ಮಲೆನಾಡಿನ ಗುಡ್ಡಗಳು, ಸಹ್ಯಾದ್ರಿ ಶಿಖರಗಳೂ, ದಟ್ಟವಾದ ಗಿಡಮರ, ಸ್ನಾನಘಟ್ಟ, ಸೋಪಾನಗಳು, ಪ್ರಕೃತಿ ಸೊಬಗಿನ ಸುಂದರ ಪರಿಸರ, ಹಳ್ಳಿಯ ಆತ್ಮೀಯ ಜನಜೀವನ ಮಧ್ಯಮವರ್ಗದ ಕುಟುಂಬದಲ್ಲಿ ಹುಟ್ಟಿದ 'ಮೂರ್ತಿ'ಯ ಮನಸ್ಸಿನ ಮೇಲೆ ಪ್ರಭಾವಬೀರಿ ಅವನನ್ನು ಸಾಹಿತಿಯನ್ನಾಗಿ ರೂಪಿಸಿವೆ. ಹಳ್ಳಿಯ ಮುಗ್ಧ ಪರಿಸರ, ನಿಸರ್ಗ ಸೌಂದರ್ಯವನ್ನು ಕಲಾವಿದ ಮೂರ್ತಿಯ ಕಣ್ಣುಗಳಿಂದ ನಿರೂಪಿಸಲಾಗಿದೆ.

ಕತೆಗಾರನಾಗುವ ಹಂಬಲವುಳ್ಳ ಮೂರ್ತಿ ತನ್ನ ಸ್ನೇಹಿತ ಮಧುರನಾಥನ ಜೀವನದ ಬಗೆಗೆ ವಿಶೇಷ ಆಸಕ್ತಿಯನ್ನು ವಹಿಸುತ್ತಾನೆ. ಮಧುರನಾಥ ಬಡಕುಟುಂಬ ದಲ್ಲಿ ಜನಿಸಿದವನು. ಮೆಟ್ರಿಕ್ ಪರೀಕ್ಷೆ ಮುಗಿಸಿ ಕೆಲಸಕ್ಕಾಗಿ ಪ್ರಯತ್ನಿಸುತ್ತಾನೆ. ಮನೆಯಲ್ಲಿ ವಿಧವೆ ತಾಯಿ, ಮೂವರು ತಂಗಿಯರು, ಒಬ್ಬ ತಮ್ಮ ಇಷ್ಟು ಜನರ ಜೀವನ ನಡೆಯಬೇಕು. ಆ ಊರಿನ ಶಾನುಭೋಗರ ಎರಡು ಚಿಕ್ಕ ಕೋಣೆಗಳ ಮನೆಯಲ್ಲಿ ಇವರ ವಾಸ. ಮಧುರನಾಥನ ತಾಯಿ ಮಂಗಳಮ್ಮ ಸಹನಶೀಲೆ. ಊರ ಜನರ ಮನೆಗೆಲಸ ಮಾಡಿ ಮಕ್ಕಳನ್ನು ಸಾಕುತ್ತಾಳೆ. ಅವರೆಲ್ಲ ಬಡವರಾದರೂ ತಮ್ಮ ಸದ್ಗುಣಗಳಿಂದ ಊರ ಜನರಿಗೆಲ್ಲ ಬೇಕಾದವರು. ಮಧುರನಾಥ ಆ ಊರಿನ ಬಸ್ಸಿನ ಡ್ರೈವರ್ ತಿಮ್ಮಪ್ಪನ ಸಹಾಯದಿಂದ ಡ್ರೈವಿಂಗ್ ಕಲಿತು, ಅವನ ನೆರವಿನಿಂದಲೇ 'ತುರಬೆ' ಹಳ್ಳಿಯ ಎಸ್ಟೇಟಿನ ಮಾಲೀಕರ ಮನೆಯ ಕಾರಿನ ಡ್ರೈವರನಾಗುತ್ತಾನೆ,

ಮೂರ್ತಿಗೆ ಮಧುರನಾಥನ ಜೀವನದ ಬಗೆಗೆ ಆಸಕ್ತಿ ಬೆಳೆಯುತ್ತದೆ. ಮಾಲೀಕರಾದ ಅನಂತರಾಮಯ್ಯನವರ ಮಗಳು 'ನೇತ್ರಾವತಿ' ಮಧುರನಾಥನನ್ನು ಪ್ರೀತಿಸುತ್ತಿರುವುದು ಕತೆಗಾರನಾಗಿ ಬೆಳೆಯುತ್ತಿರುವ ಮೂರ್ತಿಯ ಅಂತರಂಗಕ್ಕೆ ತಿಳಿಯುತ್ತದೆ. ಮೂರ್ತಿಯೇ ನೇತ್ರಾವತಿಯ ಸೌಂದರ್ಯಕ್ಕೆ ಆಕರ್ಷಿತನಾಗುತ್ತಾನೆ. ಕತೆಗಾರ ಮೂರ್ತಿಗೆ ತನ್ನ ಮೊದಲ ಕಾದಂಬರಿಯ ಹೊಳಹು ಕಾಣಿಸತೊಡಗುತ್ತದೆ. ಅವನ ಅಂತರಂಗದಲ್ಲಿ ಮಧುರನಾಥ ಹಾಗೂ ನೇತ್ರಾವತಿ ಕಾದಂಬರಿಯ ಮುಖ್ಯ ಪಾತ್ರಗಳಾಗಿ ಕಾಣಿಸಿಕೊಂಡು ಕಥಾವಸ್ತು ಬೆಳೆಯತೊಡಗುತ್ತದೆ.

ಮಧುರನಾಥ ಊರಿಗೆ ಮರಳಿ ತನ್ನ ತಂಗಿಯಾದ ಶಾರದೆಯನ್ನು ಧಾರೆ ಎರೆಯುವ ಕಾರಣಕ್ಕಾಗಿ ತನ್ನ ಸೋದರ ಮಾವನ ಮಗಳಾದ ನೀಲವೇಣಿಯನ್ನು ಮದುವೆಯಾಗುತ್ತಾನೆ. ಭಗ್ನ ಪ್ರೇಮಿಯಾದ ನೇತ್ರಾವತಿ ಮನೋರೋಗಿಯಾದಾಗ

1. ಎನ್. ವಿ. ವಿಮಲ 'ಸಾಹಿತ್ಯವಾರ್ಷಿಕ' ಪುಟ–58–59

ಅವನು ಅಸಹಾಯಕನಾಗಿ ಉಳಿಯುತ್ತಾನೆ. ಆದರೆ ಬಡತನ, ಸಿರಿವಂತಿಕೆ, ಸಾಮಾಜಿಕ ಪ್ರತಿಷ್ಠೆಯಿಂದಾಗಿ ನೇತ್ರಾವತಿಯ ಪ್ರೇಮ ಕಮರಿಹೋಗುತ್ತದೆ. ಸುಖಮಯವಾಗಬಹುದಾಗಿದ್ದ ನೇತ್ರಾವತಿಯ ಬದುಕು ದುರಂತಮಯವಾಗುತ್ತದೆ.

ಮನಸತನದ ಸ್ಥಿತಿಗತಿಯನ್ನು ಅರಿತುಕೊಂಡು ತನ್ನ ಬದುಕಿನಲ್ಲಿ ವಿವೇಕದ ದಾರಿಯನ್ನು ಕಂಡುಕೊಂಡ ಮಧುರನಾಥ ಹಾಗೂ ಸಾಮಾಜಿಕ ಪ್ರತಿಷ್ಠೆ, ಅಂತಸ್ತುಗಳನ್ನು ಮೀರಿ ಬಡ ಯುವಕನನ್ನು ಪ್ರೀತಿಸಿ ಹತಾಶಳಾದ ನೇತ್ರಾವತಿ ಇವರ ಪಾತ್ರ ಚಿತ್ರಣ ಇಲ್ಲಿದೆ. ಕತೆಗಾರನ ಮೂಲಕ ಲೇಖಕಿ ಭಗ್ನ ಪ್ರಣಯವನ್ನು ವ್ಯಕ್ತಿ ಸಮಾಜದ ಸಂಬಂಧವನ್ನು ಇಲ್ಲಿ ಚಿತ್ರಿಸಿದ್ದಾರೆ.

'ಮನೋಮಂದಿರ' :

ಶ್ರೀಮತಿ ಇಂದಿರಾ ಅವರ ಈ ಕಾದಂಬರಿ ೧೯೮೩ ರಲ್ಲಿ ಹೇಮಂತ ಸಾಹಿತ್ಯ ದಿಂದ ಬೆಳಕಿಗೆ ಬಂದಿದೆ.

ಜಾತಿ, ಮತ, ಕುಲ. ಶೀಲ, ಸಂಸ್ಕೃತಿ ಅಂತಸ್ತು ಇತ್ಯಾದಿ ಸಾಮಾಜಿಕ ಕಟ್ಟುಪಾಡುಗಳಲ್ಲಿ ಸಿಲುಕಿದ ಗೃಹಿಣಿಯ ಭಗ್ನ ಪ್ರೇಮವನ್ನು ಇಲ್ಲಿ ಚಿತ್ರಿಸಿದ್ದಾರೆ. ಇದೇ ರೀತಿ ಸಾಮಾಜಿಕ ಕಟ್ಟುಪಾಡುಗಳಲ್ಲಿ ಸಿಲುಕಿ ನರಳಿದ ಇನ್ನು ಹಲವಾರು ಅಸಹಾಯಕ ವ್ಯಕ್ತಿಗಳ ಬದುಕಿಗೆ ಲೇಖಕಿ ಇಲ್ಲಿ ಸ್ಪಂದಿಸಿದ್ದಾರೆ.

ತನ್ನ ಜಾತಿಯವನಲ್ಲದ ಯುವಕನನ್ನು ಮನದಲ್ಲಿ ಮೆಚ್ಚಿಕೊಂಡು ಅದನ್ನು ಸಮಾಜದಲ್ಲಿ ಬಹಿರಂಗ ಪಡಿಸದೇ ತನ್ನ ಮನೆತನದ ಸಂಸ್ಕೃತಿ, ಮಾನ ಮರ್ಯಾದೆ ಇವುಗಳಿಗೆ ಬದ್ಧಳಾಗಿ. ಆತನನ್ನು ಕೊನೆಯವರೆಗೂ ಮನೋಮಂದಿರದಲ್ಲಿ ಆರಾಧಿಸಿ, ಎರಡು ಮಕ್ಕಳಾದ ನಂತರ ಬದುಕಿನಲ್ಲಿ ನಿರಾಸಕ್ತಿ ಹೊಂದಿ ನಾಯಕಿ 'ಚಿನ್ನ' ಪಾಂಡಿಚೇರಿಯನ್ನು ಸೇರುತ್ತಾಳೆ.

ತಾನು ಮೆಚ್ಚಿಕೊಂಡ ಮಾಲೀಕ 'ಶಾಂತಾರಾಮ'ನನ್ನು ಈ ಜನ್ಮದಲ್ಲಿ ಪಡೆಯುವದು ಸಾಧ್ಯವಿಲ್ಲವೆಂದು ಅರಿತ 'ಚಿನ್ನ' ಮದುವೆಯನ್ನು ಸಾಹುಕಾರ ಮನೆಯ ಸೊಸೆಯಾಗಲು 'ಮೌನ'ವಾಗಿ ಒಪ್ಪಿಕೊಳ್ಳುತ್ತಾಳೆ. ರಾಮಚಂದ್ರ ದುಡುಕು ಸ್ವಭಾವದವನು, ಶ್ರೀಮಂತಿಕೆಯ ಗತ್ತಿನಲ್ಲಿ ಬೆಳೆದವನು. 'ಚಿನ್ನ' ಕಲಿತವಳಲ್ಲವೆಂದು ಅವಳನ್ನು ತಾತ್ಸಾರದಿಂದ ಕಾಣುತ್ತಾನೆ. 'ಚಿನ್ನ' ಬಹಿರಂಗದಲ್ಲಿ ಸುಖಿಯಾಗಿದ್ದರೂ ಆಂತರ್ಯದಲ್ಲಿ ಅಸುಖಿಯಾಗಿರುತ್ತಾಳೆ, ಮಾನಸಿಕ ದ್ವಂದ್ವದಲ್ಲಿ ತೊಳಲುತ್ತಾಳೆ. ಪತಿಯ ಪ್ರೀತಿಯನ್ನೇ ಕಾಣದ ಅವಳಿಗೆ ಬದುಕಿನಲ್ಲಿ ನಿರಾಸಕ್ತಿಯುಂಟಾಗುತ್ತದೆ. ಶಾಂತಾರಾಮನನ್ನು ಅವಳು ಮರೆಯಲೆತ್ನಿಸಿದಷ್ಟು ಅವನು ಅವಳಿಗೆ ಹತ್ತಿರ ವಾಗುತ್ತಾನೆ. ಚಿನ್ನಮ್ಮ ಭಗ್ನ ಪ್ರಣಯಿಯಾಗಿ ಮನೆಯಿಂದ ಹೊರಟು ಹೋಗುತ್ತಾಳೆ.

ಈ ಕಾದಂಬರಿಯ ಮತ್ತೊಂದು ಪಾತ್ರವೆನಿಸಿದ ಶಾಂತಾರಾಮನ ತಾಯಿ ಗಿರಿಜಮ್ಮ ಅಂಥ ಸಮಾಜದ ಕಪಿಮುಷ್ಟಿಯಲ್ಲಿ ಸಿಲುಕಿಕೊಂಡವಳು ಮೇಲ್ವರ್ಗದವರ ಅವೈಚಾರಿಕತೆ. ಡಾಂಭಿಕತೆಯನ್ನು ಲೇಖಕಿ ಇಲ್ಲಿ ಎತ್ತಿತೋರಿಸಿದ್ದಾರೆ.

ಗಿರಿಜಮ್ಮನ ಮುತ್ತಜ್ಜಿಗೆ ಬಾಲ್ಯದಲ್ಲಿ ವಿವಾಹವಾಗಿರುತ್ತದೆ. ಅವಳು ಗಂಡನ ಮನೆಗೆ ಹೋದಾಗ ಅವಳಿಗೆ ಕೇವಲ ಹದಿನೈದು ವರ್ಷ. ಒಂದು ವರ್ಷದಲ್ಲಿಯೇ ಅವಳ ಗಂಡ ಶೃಂಗೇರಿಯ ಹೊಳೆಯಲ್ಲಿ ಮುಳುಗಿ ಮರಣ ಹೊಂದುತ್ತಾನೆ. ಗಂಡ ಸಾಯುವ ವೇಳೆಗೆ ಅವಳಾಗಲೇ ಗರ್ಭಿಣಿಯಾಗಿರುತ್ತಾಳೆ. ಅದು ಯಾರ ಗಮನಕ್ಕೂ ಬಂದಿರುವುದಿಲ್ಲ. ಊರಲ್ಲೆಲ್ಲ ಪಂಚಾಯ್ತಿಯಾಗಿ ನರಸಿಂಹಭಾರತಿ ಸ್ವಾಮಿಗಳು ಅರಿಯದ ಮುಗ್ಧ ಹೆಣ್ಣಿಗೆ ಬಹಿಷ್ಕಾರ ಹಾಕುತ್ತಾರೆ. ಕೇಶಮುಂಡನ ಮಾಡಿಸಿ, ಅವಳ ಘಟಶ್ರಾದ್ಧವನ್ನು ಮುಗಿಸಿ ಅವಳನ್ನು ಜಾತಿಯಿಂದ ಗಿರಿಜಮ್ಮನ ಅಜ್ಜಿ ಒಬ್ಬ ಬ್ರಾಹ್ಮಣನೊಡನೆ ಪತ್ನಿಯಂತೆ ನಡೆದುಕೊಂಡರೂ ಅವಳಿಗೆ ಮದುವೆ ಸಂಸ್ಕಾರವಿಲ್ಲ. ಅದರಂತೆ ಗಿರಿಜಮ್ಮನ ತಾಯಿಗೆ ಹುಟ್ಟಿದ ಮಗಳಿಗೂ ಮದುವೆ ಸಂಸ್ಕಾರವಿಲ್ಲ. ಬ್ರಾಹ್ಮಣ ಸಮಾಜ ವೈಚಾರಿಕತೆಯ ತಳಹದಿಯಿಲ್ಲದೆ ಸ್ತ್ರೀಶೋಷಣೆಯನ್ನು ಮುಂದುವರೆಸಿಕೊಂಡು ಬಂದಿರುವದನ್ನು ಕಾದಂಬರಿಕಾರ್ತಿ ವ್ಯಂಗವಾಗಿ ಚಿತ್ರಿಸಿದ್ದಾರೆ.

ಗಿರಿಜಮ್ಮನ ಮಗ ಶಾಂತಾರಾಮ ವಿದ್ಯಾವಂತನಾಗಿದ್ದರೂ ಕೀಳರಿಮೆಯನ್ನು ಹೊಂದಿರುತ್ತಾನೆ. ತಮ್ಮ ಯೌವನದಲ್ಲಿ ಒಬ್ಬ ಬಾಲವಿಧವೆಯನ್ನು ಮದುವೆಯಾಗಿ ಕ್ರಾಂತಿಮಾಡಿ ಮನೆಯಿಂದ ದೂರವಾದ ಕೇಶವಮೂರ್ತಿಗಳು ತಮ್ಮ ಮಗಳನ್ನು ಶಾಂತಾರಾಮನಿಗೆ ಕೊಡಲು ನಿರ್ಧರಿಸುತ್ತಾರೆ. ಆಗ ಶಾಂತಾರಾಮ ದ್ವಂದ್ವಕ್ಕೆ ಸಿಲುಕುತ್ತಾನೆ.

ಶಾಂತಾರಾಮ ಪಾಂಡಿಚೇರಿಯಲ್ಲಿ ಗ್ರಂಥಾಲಯಕ್ಕೆ ಭೇಟಿಕೊಡಲು ಹೋದಾಗ ವಿಧವೆಯ ವೇಷದ ಚಿನ್ನ ಅವನ ಕಣ್ಣಿಗೆ ಬೀಳುತ್ತಾಳೆ. 'ಚಿನ್ನ'ಳ ಮಾನಸಿಕ ತೊಳಲಾಟ, ಪ್ರೀತಿ, ಪ್ರೇಮದ ಬಗೆಗಿನ ಅವಳ ವಿಚಾರಗಳು ಶಾಂತಾರಾಮನಿಗೆ ಬರೆದ ಪತ್ರದಲ್ಲಿ ಸ್ಪಷ್ಟವಾಗಿ ವ್ಯಕ್ತವಾಗುತ್ತವೆ.

ಪ್ರೀತಿ ನಿಸರ್ಗ ಸಹಜ, ಸಮಾಜದ ಕಟ್ಟುಪಾಡುಗಳು. ಅದಕ್ಕೆ ಮುಳ್ಳಿನ ಬೇಲಿಯಾದಾಗ ವ್ಯಕ್ತಿಗಳ, ಜೀವನ ದುರಂತವಾಗಿ ಆ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗುತ್ತದೆ. ವ್ಯಕ್ತಿ–ವ್ಯಕ್ತಿಗಳ. ವ್ಯಕ್ತಿ ಸಮಾಜದ ಒಂದು ಮುಖವನ್ನು ಇಲ್ಲಿ ಲೇಖಕಿ ಚಿತ್ರಿಸಿದ್ದಾರೆ. ಸಮಾಜದ ಕಟ್ಟುಪಾಡಿನಲ್ಲಿ ಸಿಕ್ಕ ಹಲವಾರು ವ್ಯಕ್ತಿಗಳ ಬದುಕಿನ ಸಮಸ್ಯೆ ಇಲ್ಲಿ ಮೂಡಿಬಂದಿದೆ.

'ಸುಖಾಂತ' : *

'ಸುಖಾಂತ' ಮೊದಲು 'ಪ್ರಜಾವಾಣಿ' ದೀಪವಾಳಿ ಸಂಚಿಕೆಯಲ್ಲಿ ಪ್ರಕಟವಾದ ನಾಲ್ಕು ಪುಟಗಳ ಸಣ್ಣಕತೆ ಅಭಿಮಾನಿಗಳ ಆಗ್ರಹಕ್ಕಾಗಿ ಅದಕ್ಕೆ ಕಾದಂಬರಿರೂಪ ಕೊಟ್ಟಿರುವದಾಗಿ ಇಂದಿರಾ ಅವರು 'ಬಿನ್ನಹದಲ್ಲಿ' ಹೇಳಿದ್ದಾರೆ. ಸುಖಾಂತರ ೧೯೭೨ರಲ್ಲಿ ಮೊದಲನೆಯ ಮುದ್ರಣ ಕಂಡ ಈ ಕಾದಂಬರಿ ೧೯೭೯ ರಲ್ಲಿ ದ್ವಿತೀಯ ಮುದ್ರಣವಾಗಿದೆ.

ಅತ್ತಿಗೆ–ನಾದಿನಿಯರ ಜಗಳದಿಂದಾಗಿ ಪ್ರೇಮಿಗಳಾದ ಅವರ ಮಕ್ಕಳ ಜೀವನ ದುರಂತವಾಗುತ್ತದೆ. ತೀರಾ ಕ್ಷುಲ್ಲಕ ಕಾರಣಕ್ಕಾಗಿ ಅವರಲ್ಲಿ ವೈಮನಸ್ಸು ಬೆಳೆದಿರುತ್ತದೆ. ರಾಮು–ಕಮಲಿ ಬಾಲ್ಯದಿಂದ ಕೂಡಿ ಆಡಿ ಬೆಳೆದವರು ಯೌವನದಲ್ಲಿ ಪ್ರೇಮಿಗಳು. ಅತ್ತಿಗೆ ನಾದಿನಿಯಲ್ಲಿನ ವಿರಸದಿಂದಾಗಿ ಅವರ ಮದುವೆ ನೆರವೇರುವದಿಲ್ಲ ಅವರಿಬ್ಬರೂ ಸಂಪ್ರದಾಯದ ವಾತಾವರಣದಲ್ಲಿ ಹುಟ್ಟಿ, ಬೆಳೆದವರಾದ್ದರಿಂದ ತಂದೆ ತಾಯಿಗಳನ್ನು ಎದುರಿಸಿ ಅವರ ಮನಸ್ಸಿಗೆ ನೋವು ಕೊಡಲು ಇಚ್ಛಿಸುವದಿಲ್ಲ. ಕಮಲಿ ತಂದೆ ತಾಯಿಗಳಿಗೆ ಹೊರೆಯಾಗಬಾರದೆಂದು ಯೋಚಿಸಿ ಅವರು ಗೊತ್ತು ಮಾಡಿದ ವರನನ್ನು ಮದುವೆಯಾಗುತ್ತಾಳೆ.

ಮೂವತ್ತಾರು ವರ್ಷದ ಶಿವರಾಂ ಹೆಂಡತಿಯಿಲ್ಲದೆ ಒಂಟಿಯಾಗಿ ಬಾಳಲಾರದೆ ಕಮಲಿಯನ್ನು ಮದುವೆಯಾಗಿರುತ್ತಾನೆ. ತನಗೆ ಮಕ್ಕಳಾಗುವ ಸಾಧ್ಯತೆಗಳಿಲ್ಲವೆಂಬ ಅಂಶ ಕಮಲಿಗೆ ಮೊದಲು ತಿಳಿದಿರುವುದಿಲ್ಲ. ಸರಸ–ರಸಿಕತೆಯಿಲ್ಲದ ಗಂಭೀರ ಸ್ವಭಾವದ ಶಿವರಾಮನೊಂದಿಗೆ ಕಮಲಿಯ ಜೀವನ ನೀರಸವಾಗುತ್ತದೆ.

ಶಿವರಾಂ ಹಾಗೂ ಕಮಲಿ ರವೀಂದ್ರ ಕಲಾಕ್ಷೇತ್ರದ ನೃತ್ಯ ಕಾರ್ಯಕ್ರಮಕ್ಕೆ ಹೋದಾಗ ಅಲ್ಲಿ ಕಮಲಿಗೆ ರಾಮನ ಭೇಟಿಯಾಗುತ್ತದೆ. ಕಾದಂಬರಿಗೆ ಇದೊಂದು ಮುಖ್ಯ ತಿರುವು. ಕಮಲಿ ರಾಮುನನ್ನು ತನ್ನ ಮನೆಗೆ ಆಹ್ವಾನಿಸುತ್ತಾಳೆ. ಶಿವರಾಮು ಹಾಗೂ ರಾಮು ಇಬ್ಬರಿಗೂ ಪರಸ್ಪರ ಪರಿಚಯವಾಗುತ್ತದೆ. ರಾಮು ತನ್ನ ಕಚೇರಿಯ ಕೆಲಸದ ನಿಮಿತ್ಯ ದೆಹಲಿಗೆ ಹೊರಟಿರುವದಾಗಿ ತಿಳಿಸುತ್ತಾನೆ. ರಾಮುನೊಂದಿಗೆ ದೆಹಲಿಯ ಪ್ರವಾಸಕ್ಕೆ ಹೊರಡಲು ಶಿವರಾಮು ಕಮಲಿಗೆ ಅನುಮತಿ ಕೊಡುತ್ತಾನೆ. ಪ್ರವಾಸಕ್ಕೆ ಹೋದಾಗ ಕಮಲಿ–ರಾಮು ಇಬ್ಬರ ಸುಪ್ತಮನದ ಬಯಕೆಗಳು ಬಿಚ್ಚಿಕೊಳ್ಳುತ್ತವೆ ಅಗಲಿದ ಪ್ರೇಮಿಗಳು ಒಂದಾಗುತ್ತಾರೆ.

ತನ್ನ ಗಂಡನೊಂದಿಗೆ ಮತ್ತೆ ಜೀವನದಲ್ಲಿ ತೊಡಗಿಕೊಳ್ಳುವದು ಸಾಧ್ಯವೇ ? ಎಂದು ಕಮಲಿ ಯೋಚನಾಪರಳಾಗುತ್ತಾಳೆ. ಶೀಲ ಕಳೆದುಕೊಂಡು ಅಪವಿತ್ರಳಾದೆ

---

* ವಿ. ಸೂ. ದಿ॥ ಪುಟ್ಟಣ್ಣ ಕಣಗಾಲ ಅವರು ಈ ಕಾದಂಬರಿಯನ್ನು ಚಲನ ಚಿತ್ರವಾಗಿಸಲು ನಿರ್ಧರಿಸಿದ್ದರು. ಅದು ಸಾಧ್ಯವಾಗದೆ ಹೋದದ್ದು ಕನ್ನಡಿಗರ ದೌರ್ಭಾಗ್ಯ.

ನೆಂದು ಅಪರಾಧಿ ಮನೋಭಾವದಿಂದ ತೊಳಲುತ್ತಾಳೆ. ರಾಮುನನ್ನು ಬಿಟ್ಟಿರಲು ಸಾಧ್ಯವಾಗದೇ ಆತ್ಮಹತ್ಯೆಯ ತೀರ್ಮಾನಕ್ಕೆ ಬರುತ್ತಾಳೆ. ಕಮಲಿ-ರಾಮು ಇಬ್ಬರೂ ಸಾಗರದಲ್ಲಿ ಮುಳುಗಿ ತಮ್ಮ ಜೀವನವನ್ನು ದುರಂತಗೊಳಿಸಿಕೊಳ್ಳುತ್ತಾರೆ. ಪ್ರೇಮಿಗಳಿಗೆ ಅದೂ ಸುಖಾಂತರವಾದರೂ ಸಮಾಜ ದೃಷ್ಟಿಯಿಂದ ದುರಂತ.

ಈ ಕಾದಂಬರಿಯಲ್ಲಿ ಮುಖ್ಯವಾಗಿ ಪ್ರೇಮಿಗಳ ದುರಂತಕ್ಕೆ ಕಾರಣ ಕೌಟುಂಬಿಕ ಒಳಜಗಳ. ಸಮಸ್ಯೆಯ ಸುಳಿಗೆ ಸಿಕ್ಕ ಕಮಲಿಯ ಪಾತ್ರದಲ್ಲಿ ಸೃಜತೆ ಇದೆ, ಆತ್ತಿಗೆ ನಾದಿನಿಯರ ಮನೆಯ ನಡುವಿನ ಅರ್ಧ ಕುಸಿದ ಮಣ್ಣಿನ ಗೋಡೆ, ಅಲ್ಲಿನ ಪೇರಲ ಮರ, ಆ ಕುಟುಂಬದ ವಿರಸಕ್ಕೆ ಮೂಕ ಸಾಕ್ಷಿಯಾಗಿವೆ, ಕುಟುಂಬದಲ್ಲಿ ಸಣ್ಣ ಸಂಗತಿಗಳೇ ದೊಡ್ಡ ಸಮಸ್ಯೆಗಳಾಗಿ ಅನಾಹುತಕ್ಕೆ ಕಾರಣವಾಗುತ್ತದೆ ಎಂಬುದನ್ನು ಲೇಖಕಿ ಸೂಚ್ಯವಾಗಿ ನಿರೂಪಿಸಿದ್ದಾರೆ.

'ಹಸಿವು' :

ಶ್ರೀಮಂತಿ ಎಂ ಕೆ. ಇಂದಿರಾ ಅವರ ಹಸಿವು ಕಾದಂಬರಿ ಮಾನವನ ಬದುಕಿನ ಹಸಿವಿನ ಹಲವು ಸ್ತರಗಳನ್ನೊಳಗೊಂಡಿದೆ. ಈ ಕಾದಂಬರಿಯಲ್ಲಿ ಬಡ ಕುಟುಂಬದಲ್ಲಿ ಹುಟ್ಟಿದ, ಕಾಲು ಊನವಾದ ಹೆಣ್ಣುಮಗಳೊಬ್ಬಳ ಮದುವೆಯ ಸಮಸ್ಯೆ ಇದೆ. ಅವಳ ಬಡತನ ಹಾಗೂ ಜೀವನದ ಸಮಸ್ಯೆಗಳು ಇಲ್ಲಿ ನಿರೂಪಿತವಾಗುತ್ತವೆ,

ಮೂವರು ಅಕ್ಕಂದಿರು ಹಾಗೂ ಒಬ್ಬ ಅಣ್ಣನ ನಂತರ ಹುಟ್ಟಿದ ಶಾರದೆ ಕುಂಟಿಯಾಗಿದ್ದ ಕಾರಣ ಮನೆಯಲ್ಲಿ ತಾಯಿಯಿಂದ ದೊರೆಯುವ ಪ್ರೀತಿ ವಾತ್ಸಲ್ಯಗಳಿಂದ ವಂಚಿತಳಾಗುತ್ತಾಳೆ. ಶಾರದೆ ಪ್ರತಿದಿನ ತಾಯಿಯಿಂದ ಚುಚ್ಚು ಮಾತುಗಳನ್ನು ಕೇಳಬೇಕಾಗುತ್ತದೆ. ಶಾರದೆಯ ಮದುವೆಯಾಗದೇ ಅಣ್ಣ ಶ್ರೀನಾಥನ ಮದುವೆಯಾಗುವಂತಿಲ್ಲ. ಮುಂದಿನ ಎರಡು ಮೂರು ವರ್ಷಗಳಲ್ಲಿ ಶಾರದೆಗೆ ಜೀವನ ನೀರಸವಾಗುತ್ತದೆ. ಅವಳ ತನು ಮನಗಳು ವಯೋಸಹಜವಾಗಿ ಪ್ರೀತಿ ಪ್ರೇಮಕ್ಕಾಗಿ ಹಂಬಲಿಸುತ್ತವೆ, ಉಂಡು ಉಡುವದಕ್ಕೆ ಕೊರತೆಯಿಲ್ಲದಿದ್ದರೂ ಮಾನಸಿಕ ತುಮುಲಕ್ಕೊಳಗಾಗುತ್ತಾಳೆ.

ಗಣಪತಿ ಉತ್ಸವದಲ್ಲಿ ಹಾಡಲು ಬಂದ ಕುರುಡ ದಿವಾಕರನನ್ನು ಕಂಡಾಗ ಶಾರದೆಯ ಮನಸ್ಸಿನಲ್ಲಿ ಹೊಸ ಆಸೆ ಚಿಗುರುತ್ತದೆ. ಶ್ರೀಧರನಂತೆ ತಾನೂ ಯಾರ ಹಂಗಿನಲ್ಲಿರದೆ ತನ್ನ ಬದುಕಿನ ಸ್ವತಂತ್ರ ಮಾರ್ಗವನ್ನು ಕಂಡುಕೊಳ್ಳಬೇಕೆಂದು ನಿರ್ಧರಿಸುತ್ತಾಳೆ. ಪುರುಷರ ಆಶ್ರಯವಿಲ್ಲದೆ ಬದುಕಲಾರೆನೆಂಬ ನಿರ್ಧಾರಕ್ಕೆ ಬಂದು ಕುರುಡ ದಿವಾಕರನ ಕೈಹಿಡಿಯುತ್ತಾಳೆ.

ಕಾದಂಬರಿಯಲ್ಲಿ ಹುಟ್ಟು ಕುರುಡನನ್ನು ಕಂಡು ಆತನ ಗಾನ-ಸುಧೆಗೆ ಮೈಮರೆತ ಶಾರದೆ ಅವನನ್ನು ಮದುವೆಯಾಗುವದಕ್ಕೆ ತೆಗೆದುಕೊಳ್ಳುವ ನಿರ್ಧಾರದಲ್ಲಿ ಬೆಳವಣಿಗೆ

ಕಂಡು ಬರುವದಿಲ್ಲ. ಕಥಾನಾಯಕಿಯ ತಾಯಿ ಅಸಂಸ್ಕೃತ ಹೆಣ್ಣಾಗಿ ಚಿತ್ರಿತಳಾಗಿದ್ದಾಳೆ. ತನ್ನ ಹೊಟ್ಟೆಯ ಮಗಳು ಕುಂಟಿ ಎಂಬ ತಾತ್ಸಾರದ ಮನೋಭಾವನೆ ಅವಳಲ್ಲಿದೆ.

ಅದುವರೆಗಿನ ತನ್ನ ಪಾಲಿನ ಕರ್ತವ್ಯಗಳನ್ನು ತಾನೇ ಮಾಡಿಕೊಂಡಂತೆ ತನ್ನ ಭವಿಷ್ಯ ಜೀವನವನ್ನು ಸುಖಮಯವನ್ನಾಗಿ ಮಾಡಿಕೊಳ್ಳಲು ಶಾರದೆ ನಿರ್ಧರಿಸುತ್ತಾಳೆ 'ಅಂಗವಿಕಲರ ಆಶ್ರಮ'ದಲ್ಲಿದ್ದ ಬಾಬೂಜಿಯವರಿಗೆ ತನ್ನ ಅಳಲನ್ನೆಲ್ಲ ತೋಡಿಕೊಂಡು ದಿವಾಕರನನ್ನೂ ಮದುವೆಗೆ ಒಪ್ಪಿಸುತ್ತಾಳೆ. ಆತನಿಗೂ ಹೊಸ ಬದುಕಿನ ಅರಿವನ್ನುಂಟು ಮಾಡಿಕೊಡುವದರೊಂದಿಗೆ ತನ್ನ ಸಮಸ್ಯೆಗೂ ಪರಿಹಾರ ಕಂಡುಕೊಳ್ಳುತ್ತಾಳೆ.

ಒಟ್ಟಿನಲ್ಲಿ ಈ ಕಾದಂಬರಿಯಲ್ಲಿ ಬಡ ಹೆಣ್ಣೊಂದರ ನೈಜ ಸಮಸ್ಯೆ ಚಿತ್ರಿತವಾಗಿದೆ. 'ಹಸಿವು' ಮಾನವನ ಹಸಿವಿನ ಹಲವು ಸ್ತರಗಳನ್ನು ಸೂಚಿಸುತ್ತದೆ. ಶಾರದೆಯ ತಾಯ್ತನ ಬದುಕಿನ ಪ್ರವಾಹ ಮುಂದೆ ಹರಿಯುವದನ್ನು ಸಾಂಕೇತಿಕವಾಗಿ ಸೂಚಿಸುತ್ತದೆ.

'ಬಿದಿಗೆ ಚಂದ್ರಮ ಡೊಂಕು':

ಈ ಕಾದಂಬರಿಯಲ್ಲಿ ಬಡತನದ ಬವಣೆ ಹಾಗೂ ಅಂಗವಿಕಲರ ಸಮಸ್ಯೆಗಳನ್ನು ಚಿತ್ರಿಸಿದ್ದಾರೆ. ಶ್ರೀಮಂತ ಕುಟುಂಬದ ಸೀತಾಬಾಯಿ ಹಾಗೂ ಬಿಂದುರಾಯರ ಏಕೈಕ ಪುತ್ರ ವಸಂತ. ಆತ ವಿದ್ಯಾವಂತನಾಗಿ ಮಿಲಿಟರಿ ಕೆಲಸಕ್ಕೆ ಸೇರಿದ ಕೆಲವೇ ದಿನಗಳಲ್ಲಿ ವಿಮಾನ ಅಪಘಾತದಲ್ಲಿ ಕಾಲುಗಳನ್ನು ಕಳೆದುಕೊಂಡು ಮನೆಗೆ ಬರುತ್ತಾನೆ. 'ಏಕೈಕ ಪುತ್ರ ಅಂಗವಿಕಲನಾಗಿ ಬಂದಾಗ ತಂದೆ ತಾಯಿಗಳು ಮನದಲ್ಲೆ ಕೊರಗುತ್ತಾರೆ. ತಮ್ಮ ತರುವಾಯ ಮಗನಿಗೆ ಯಾರು ದಿಕ್ಕು? ಅವನನ್ನು ನೋಡಿಕೊಳ್ಳುವವರಾರು? ಎನ್ನುವ ಕೊರಗು ವಿದ್ಯಾವಂತ, ರೂಪಲಾವಣ್ಯದ ಯುವತಿಯರು ತಮ್ಮ ಮಗನನ್ನು ಕೈಹಿಡಿಯಲು ಒಪ್ಪುವದಿಲ್ಲ ಎಂಬ ಅರಿವು ಅವರಿಗಿದೆ. ಆದುದರಿಂದಲೇ ಸೀತಾಬಾಯಿ ರುಕ್ಮಿಣಿಬಾಯಿಯ ಮಗಳ ಮದುವೆಗೆ ಬಂದಾಗ ಅಡಿಗೆ ಸುಬ್ಬಣ್ಣಾಚಾರ್ಯರ ಮಗಳನ್ನು ಆಯ್ಕೆ ಮಾಡುತ್ತಾರೆ. ಮದುವೆಯ ಮನೆಯಲ್ಲಿ ಪಕ್ಕದಲ್ಲಿ ಕುಳಿತ ಹೆಣ್ಣು ಮಗಳೊಡನೆ ಸಲುಗೆ ಬೆಳೆಸಿ ಬೃಂದಾಳ ಕುಲಗೋತ್ರ ಅವರ ಮನೆಯ ಪರಿಸ್ಥಿತಿ ಇವುಗಳ ಬಗೆಗೆ ತಿಳಿದುಕೊಳ್ಳುತ್ತಾಳೆ. ರುಕ್ಮಿಣಿಬಾಯಿಯೊಡನೆ ವಿಷಯ ಪ್ರಸ್ತಾಪಿಸಿ ತನ್ನ ಮಗನ ಮದುವೆ ಕಾರ್ಯಕ್ಕೆ ಮುಂದಾಗುತ್ತಾಳೆ. 'ಬೃಂದಾ' ತನ್ನ ಮನೆಯ ಬಡತನದ ನಿವಾರಣೆಗೆ, ಸ್ವಾರ್ಥತ್ಯಾಗ ಮಾಡಿ ಅಂಗವಿಕಲನನ್ನು ಕೈಹಿಡಿಯಲು ನಿರ್ಧರಿಸುತ್ತಾಳೆ.

ಕಾದಂಬರಿಯಲ್ಲಿ ನಾಯಕಿ ಬೃಂದಾಳ ಪಾತ್ರ ಚಿತ್ರಣದಲ್ಲಿ ಕಾದಂಬರಿಕಾರ್ತಿ ತ್ಯಾಗಮಯಿಯೊಬ್ಬಳನ್ನು ಚಿತ್ರಿಸಿದ್ದಾರೆ. ವಸಂತನನ್ನು ಕಾದಂಬರಿಕಾರ್ತಿ ಒಬ್ಬ ಆದರ್ಶ ಪುರುಷನನ್ನಾಗಿ ಚಿತ್ರಿಸಿದ್ದಾರೆ. ಆತ ಮೃದು ಸ್ವಭಾವದ ಯುವಕ ತನ್ನ ಮದುವೆಯ ವಿಷಯಕ್ಕೆ ಆತನೇ ಹೇಳುವಂತೆ—"ಖರೇ ಅಂದರ ನನಗೆ ನೂರಕ್ಕೆ-ನೂರು ಬ್ಯಾಡಿತ್ತು. ನನಗೆ ವೈರಾಗ್ಯ ಅಂತಲ್ಲ. ನಮ್ಮ ಸುಖಕ್ಕಂತ ಒಂದು ಅಭೋದ ಹೆಣ್ಣು ಜೀವನ ಯಾಕ ಹಾಳ ಮಾಡಬೇಕು ಆಶಾ ಎಂಬುದು ಎಲ್ಲರಿಗೂ ಒಂದೇ ಸೈಯಲ್ಲ. ನಮ್ಮ ಸಿರಿವಂತಿಕೆಗೆ ಬಡವರನ್ನು ಯಾಕೆ ಬಲಿಕೊಡಬೇಕು.[1] ಎನ್ನುವ ವಿವೇಕ ಅವನಲ್ಲಿದೆ.

ಈ ಕಾದಂಬರಿಯಲ್ಲಿ ಬೃಂದಾಳ ಮನೆಯ ಕಡುಬಡತನ ಹಾಗೂ ವಸಂತನ ಅಂಗವಿಕಲತೆ ಈ ಎರಡೂ ಸಮಸ್ಯೆಗಳಿಗೆ ಪರಿಹಾರ ಸಾಧ್ಯವಾಗಿದೆ.

ಕಾದಂಬರಿಯ ಕೊನೆಗೆ ಬೃಂದಾ ಗರ್ಭಿಣಿಯಾಗಿರುವ ಬದುಕಿನ ಮುಂದುವರಿಕೆಯ ಸಂಕೇತವಾಗಿದ್ದಾಳೆ. ತ್ಯಾಗ ಹೃದಯವಂತಿಕೆ ಇವು ಬದುಕಿನ ಹಲವು ಸಮಸ್ಯೆಗಳಿಗೆ ಪರಿಹಾರ ಒದಗಿಸಬಲ್ಲವೆಂಬುದನ್ನು ಲೇಖಕಿ ಈ ಕಾದಂಬರಿಯಲ್ಲಿ ಸೂಚಿಸಿದ್ದಾರೆ.

'ನೂರೊಂದು ಬಾಗಿಲು' :

ಎಂ. ಕೆ. ಇಂದಿರಾ ಅವರ ಈ ಕಾದಂಬರಿ ಹೇಮಂತ ಸಾಹಿತ್ಯದಿಂದ ೧೯೮೦ ರಲ್ಲಿ ಪ್ರಥಮ ಮುದ್ರಣವಾಗಿದೆ.

ಮಲೆನಾಡಿನ ಆಗರ್ಭ ಶ್ರೀಮಂತರ ನೂರೊಂದು ಬಾಗಿಲ ಮನೆಯಲ್ಲಿ ನಡೆದ ಕೊಲೆಯ ರಹಸ್ಯವನ್ನು ಬಯಲು ಮಾಡುವ ಪ್ರಯತ್ನ ಈ ಕಾದಂಬರಿಯಲ್ಲಿದೆ. ಆದ್ದರಿಂದ ಇದನ್ನು ಒಂದು ಪತ್ತೇದಾರಿ ಮಾದರಿಯ ಕಾದಂಬರಿ ಎಂದರೆ ಹೆಚ್ಚು ಸೂಕ್ತ.

ಮಾನಭಂಗಕ್ಕೆ ಪ್ರಯತ್ನಿಸಿದ ಯುವಕನನ್ನು, ತನ್ನ ಮಾನರಕ್ಷಿಸಿಕೊಳ್ಳಲು ಯುವತಿಯೊಬ್ಬಳು ಒನಕೆಯಿಂದ ಹೊಡೆದಾಗ ಅವನು ಮರಣ ಹೊಂದುತ್ತಾನೆ. ಇದು ಈ ಕಾದಂಬರಿಯಲ್ಲಿ ನಡೆದ ಘಟನೆ.

ರುಕ್ಮಿಣಮ್ಮ ನೂರೊಂದು ಬಾಗಿಲ ಮನೆಯ ಆಗರ್ಭ ಶ್ರೀಮಂತ ನಾಗೇಶ ರಾಯರ ಪತ್ನಿ. ಹಳೆಯ ತಲೆಮಾರಿನ ಅವಿಭಕ್ತ ಕುಟುಂಬ ಜೀವನ, ಆ ಕಾಲದ ಸುಖ-ಸಮೃದ್ಧಿಯ ಚಿತ್ರಣವಿದೆ. ನಾಗೇಶರಾಯರ ಕಾಲಕ್ಕೆ ಹಳೆಯದಾಗಿದ್ದ ಮನೆ ಆಧುನೀಕರಣಗೊಂಡಿತು. ರಾಯರ ನೆಮ್ಮದಿಯ ಜೀವನದಲ್ಲಿ ಜನಿಸಿದವರು ಮಂಜುನಾಥ

1. ಎಂ. ಕೆ. ಇಂದಿರಾ : 'ಬದಿಗೆ ಚಂದ್ರಮ ಡೊಂಕು', ಪು-67.

ಹಾಗೂ ವರದೆ, ಮಂಜುನಾಥ ಮದುವೆಯಾಗಿ ಹೆಂಡತಿಯೊಡನೆ ಪ್ರವಾಸಕ್ಕೆ ಹೋದಾಗ ಬಸ್ ಅಪಘಾತಕ್ಕೀಡಾಗಿ ಮರಣ ಹೊಂದುತ್ತಾನೆ. ಅದೇ ವ್ಯಥೆ ನಾಗೇಶರಾಯರನ್ನೂ ಬಲಿ ತೆಗೆದುಕೊಳ್ಳುತ್ತದೆ. ರುಕ್ಮಿಣಮ್ಮನವರಿಗೆ ಪತಿ ಹಾಗೂ ಮಗ, ಸೊಸೆಯ ಅಗಲಿಕೆಯ ವ್ಯಥೆ ಒಂದೆಡೆಯಾದರೆ ದೆವ್ವದಂತಹ ಮನೆಗೆ, ತಮ್ಮ ಆಸ್ತಿಯನ್ನು ಜವಾಬ್ದಾರಿಯಿಂದ ನೋಡಿಕೊಳ್ಳುವ ಅಳಿಯ ದೊರೆತಾನೆ ! ಎಂದು ಮಗಳ ಭವಿಷ್ಯದ ಚಿಂತೆ. ಇಂತಹ ಸ್ಥಿತಿಯಲ್ಲಿ ಅವರಿಗೆ ಆಸರೆಯಾಗಿ ಉಳಿದವರು ಮನೆಯ ಕರಣಿಕ ಗಿರಿಯಪ್ಪನವರು. ಹಾಗೂ ಮನೆಯಲ್ಲಿ ದೇವರ ಪೂಜೆ ಮಾಡುವ ಅರ್ಚಕ ಚೆನ್ನ ಭಟ್ಟರು. ಮನೆಯಲ್ಲಿ ನಡೆದ ದುರ್ಘಟನೆಗಳ ಸಂಕಟದಲ್ಲಿರುವಾಗಲೇ ನೂರೊಂದು ಬಾಗಿಲ ಮನೆಯಲ್ಲಿ ರಹಸ್ಯಮಯ ಕೊಲೆ ಸಂಭವಿಸಿ ದೊಡ್ಡ ಕೋಲಾಹಲ ಪ್ರಾರಂಭ ವಾಗುತ್ತದೆ. ಕೊಲೆಯಾದ ವ್ಯಕ್ತಿ ನಾಗೇಶರಾಯರ ತಾಯಿಯ ತಂಗಿಯ ಮೊಮ್ಮಗ.

ಶಿವಮೊಗ್ಗೆಯ ಕಾಲೇಜಿನಲ್ಲಿ ನಾಲ್ಕಾರು ಬಾರಿ ಅನುತ್ತೀರ್ಣನಾಗಿ ತಂದೆಯೊಡನೆ ಜಗಳಾಡಿ ಆರೆಂಟು ಸಾವಿರ ರೂ. ಹಣವನ್ನು ಕಿತ್ತುಕೊಂಡು ದುಶ್ಚಟಗಳನ್ನು ಕಲಿತಿರು ತ್ತಾನೆ. ರುಕ್ಮಿಣಮ್ಮನವರ ಮನೆಗೆ ಆಗಾಗ ಬಂದು ಊಟ ಮಾಡುವದು ಅವನ ರೂಢಿ ಯಾಗಿತ್ತು. ಆದಿನ ಊಟ ಮುಗಿಸಿ ಉಪ್ಪರಿಗೆಗೆ ಹೋದವನು ಮಧ್ಯಾಹ್ನದ ಕಾಫಿಯ ವೇಳೆಗೆ ಬರುವದಿಲ್ಲ. ಎಲ್ಲ ಕೊಣೆಗಳ ದೀಪಗಳನ್ನು ನೋಡಿಬರಲು ಹೋದ ಚೆನ್ನ ಭಟ್ಟರ ಮಗ ಅನಂತ ಸತ್ತು ಬಿದ್ದ ವಿಷಯವನ್ನು ತಿಳಿಸುತ್ತಾನೆ. ಹತ್ತು ನಿಮಿಷದಲ್ಲಿ ಗದ್ದಲ ಪ್ರಾರಂಭವಾದಾಗ ಎಲ್ಲರೂ ಗಾಬರಿಯಾಗಿ ನಿಲ್ಲುತ್ತಾರೆ. ವರದೆ ಪ್ರಜ್ಞೆ ತಪ್ಪಿ ಬೀಳುತ್ತಾಳೆ.

ಕರಣಿಕ ಗಿರಿಯಪ್ಪನವರು ಸಹಾಯಕ್ಕೆ ನಿಲ್ಲುತ್ತಾರೆ. ಚೆನ್ನಭಟ್ಟರ ಹೆಂಡತಿಯ ತಮ್ಮ 'ಪಾಂಡು'ಕೊಪ್ಪದ ಪೋಲೀಸ ಸ್ಟೇಶನ್ನಿಗೆ ಫೋನು ಮಾಡಿ ವಿಷಯ ತಿಳಿಸಿ ಜೊತೆಗೆ ಡಾಕ್ಟರರನ್ನು ಕರೆತರಲು ಹೇಳುತ್ತಾನೆ.

ಇನ್‌ಸ್ಪೆಕ್ಟರ್, ದಫೇದಾರರು, ನಾಲ್ಕು ಜನ ಕಾನ್‌ಸ್ಟೇಬಲಗಳು ಫೋಟೋ ಗ್ರಾಫರ್ ಹಾಗೂ ಡಾ॥ ಶಿವಪ್ರಸಾದ ಎಲ್ಲರೂ ಧಾವಿಸಿ ಬರುತ್ತಾರೆ. ತನಿಖೆ ಪ್ರಾರಂಭ ವಾಗುತ್ತದೆ. ಹೆಣವಿರುವ ಕೋಣೆ, ನಂತರ ಶವದ ಪರೀಕ್ಷೆ ನಡೆಯುತ್ತದೆ. ವೈದ್ಯರು ಪರೀಕ್ಷಿಸಿ ನೆತ್ತಿಗೆ ಬಲವಾದ ಪೆಟ್ಟು ಬಿದ್ದು, ಪ್ರಾಣ ಹೋಗಿದೆ, ಶವವನ್ನು ಪೋಸ್ಟ ಮಾರ್ಟಂಗೆ ಕಳಿಸಬೇಕೆಂದು ತಿಳಿಸುತ್ತಾರೆ. ತನಿಖೆ ಮುಂದುವರಿಯುತ್ತದೆ. ಅನಂತನ ವಿಪರೀತ ಕುಡಿತದಿಂದಾಗಿ ತಲೆ ತಿರುಗಿ ಬಿದ್ದು ನೆತ್ತಿಗೆ ಪೆಟ್ಟಾಗಿ ಪ್ರಾಣ ಹೋಗಿದೆ. ಎಂದು ವೈದ್ಯರು ನಿರ್ಣಯಿಸುತ್ತಾರೆ. ಆದರೆ ಕಾದಂಬರಿಯ ಕೊನೆಗೆ ಕೊಲೆಗಾರ್ತಿಯೇ ತನ್ನ ಪ್ರಿಯತಮನಾಗಿರುವ ಪೋಲೀಸ ಖಾತೆಯ ಜಗದೀಶನೆದುರು ತಾನೇ ಕೊಲೆ ಮಾಡಿದವಳೆಂಬ ರಹಸ್ಯವನ್ನು ಬಯಲು ಮಾಡುತ್ತಾಳೆ ಆತನ ಸಾವಿಗೆ ಕಾರಣಳಾದ

ವಳು. ಬೇರೆ ಯಾರೂ ಆಗಿರದೇ ರುಕ್ಮಿಣಮ್ಮನವರ ಮಗಳು ವರದೆಯೇ ಎಂಬ ಸತ್ಯ ಬಯಲಾಗುತ್ತದೆ.

ಈ ಕೊಲೆಯ ಪ್ರಸಂಗವನ್ನು ಕಣ್ಣಾರೆ ಕಂಡಪ ಮನೆಯಲ್ಲಿ ಕೆಲಸಕ್ಕಿದ್ದ ಆಳು ಮೂಕ (ಮೂಗ). ತನಗೆ ಅದುವರೆಗೆ ಆಶ್ರಯ ನೀಡಿದ ಒಡತಿಯ ಮೇಲಿನ ನಿಷ್ಠೆ ಯಿಂದ ರಹಸ್ಯವನ್ನು ಕಾಪಾಡಲು ಒಪ್ಪಿಕೊಳ್ಳುತ್ತಾನೆ. ತಾನು ಮಾಡಿದ ಕೊಲೆ ಉದ್ದೇಶಪೂರ್ವಕವಲ್ಲ; ತನ್ನ ಶೀಲ ರಕ್ಷಣೆಗೋಸ್ಕರ ಹೆದರಿಕೆಯಿಂದ ನಡೆದ ತಪ್ಪು: ಎಂದು ಜಗದೀಶನಿಗೆ ಒಂದು ಕಾಗದದಲ್ಲಿ ಬರೆದು ತಿಳಿಸುತ್ತಾಳೆ.

ಪತ್ತೇದಾರಿ ಕಾದಂಬರಿಗೆ ಬೇಕಾದ ಅವಶ್ಯಕ ಪಾತ್ರಗಳೆಂದರೆ ಸಿ.ಐ.ಡಿ. ಹಾಗೂ ಪೋಲೀಸ್ ಖಾತೆಯವರು. ಹಂತ ಹಂತವಾಗಿ ಕೊಲೆಯ ತನಿಖೆ ನಡೆದಾಗ 'ನಾಗರು' ಎಂಬುವನಿಂದ ಅನಂತನಿಗೆ ಹೆಂಗಸಿನ ಹುಚ್ಚು ಇತ್ತು ; ಎಂಬುದಾಗಿ ತಿಳಿದು ಬರುತ್ತದೆ. ಹಳ್ಳಿಯ ಒಕ್ಕಲುಗಳಿಂದಲೂ ಈ ವಿಷಯ ತಿಳಿದು ಬರುತ್ತದೆ. ಗುತ್ತಿ; ಲಕ್ಕಿ ಇವ ರೊಡನೆ ಇನ್‌ಸ್ಪೆಕರ್ ಉತ್ತರ ಹೊರಡಿಸುವ ಜಾಣಾಕ್ಷತನ ಅವರ ರೀತಿ, ಚೆನ್ನಾಗಿ ಮೂಡಿ ಬಂದಿದೆ. ಹಳ್ಳಿಯ ಒಕ್ಕಲುಗಳೊಡನೆ ನಡೆಯುವ ಸಂಭಾಷಣೆ ಅವರ ಆಡು ಮಾತಿನಲ್ಲಿಯೇ ಬಂದಿರುವದರಿಂದ ಅವರ ಸಂಸ್ಕೃತಿ, ಅವರ ಜೀವನ ಕ್ರಮ ಸಹಜವಾಗಿ ಚಿತ್ರಿತವಾಗಿದೆ.

ಪೋಲಿಸ್ ಇನ್‌ಸ್ಪೆಕ್ಟರ್‌ನೊಳಗೊಂಡು ದಫೇದಾರರು ಪೋಲೀಸ್ ಕಾನ್ ಸ್ಟೇಬಲ್‌ಗಳು, ಡಾಕ್ಟರರು ಹಾಗೂ ಫೋಟೋ ತೆಗೆಯುವವರು ಎಲ್ಲರೂ ಆಗಮಿಸಿ ದಾಗ ನಾಗೇಶರಾಯರ ಮನೆಯ ಒಕ್ಕಲುಗಳೆಲ್ಲ ತಮ್ಮನ್ನು ಪೋಲಿಸರು ಲಾಕಪ್‌ನಲ್ಲಿ ಹಾಕುತ್ತಾರೆಂದು ಹೆದರಿ ಗುಡಿಸಲುಗಳನ್ನು ಸೇರುತ್ತಾರೆ.

ನೂರೊಂದು ಬಾಗಿಲ ಮನೆಯ ಚಿತ್ರಣ ಕುತೂಹಲಕಾರಿಯಾಗಿದೆ. ಆ ಮನೆಯ ಕೋಣೆಗಳು ದಿವಾನಖಾನೆ. ಬಾಗಿಲುಗಳು ಇತ್ಯಾದಿಗಳನ್ನು ಪೋಲೀಸಿನವರು, ಐ.ಜಿ.ಪಿ. ಸೂಕ್ಷ್ಮವಾಗಿ ಪರೀಕ್ಷಿಸುತ್ತಾರೆ. ಕೊಲೆಯಾದ ವ್ಯಕ್ತಿ ಅನಂತ ಇಳಿದು ಕೊಳ್ಳುತ್ತಿದ್ದ ಕೋಣೆಯ ಪರೀಕ್ಷೆ ಪೋಲೀಸಖಾತೆಯವರಿಂದ ನಡೆಯುತ್ತದೆ. ವೈದ್ಯರು ಶವದ ಪರೀಕ್ಷೆ ನಡೆಸುತ್ತಾರೆ. ಶವದ ಅಂಗಿಯ ಜೇಬನ್ನು ಜಪ್ತಿ ಮಾಡಿದಾಗ ಕತ್ತರಿ ಮಾರ್ಕಿನ ಸಿಗರೇಟು ಪ್ಯಾಕ್ ಸಣ್ಣ ಬೆಂಕಿ ಪೊಟ್ಟಣ, ಕೊಳಕಾದ ಕರವಸ್ತ್ರ, ಒಂದು ಬೀಗದ ಕೈಗೊಂಚಲು ಒಂದು ಸಣ್ಣ ಓಪನರ್ ಇವು ಲಭ್ಯವಾಗುತ್ತವೆ. ಸೂಟಕೇಸಿನಲ್ಲಿ ಬ್ರಾಂದಿ, ವಿಸ್ಕಿ ಬಾಟಲುಗಳು ಆತ ಒಬ್ಬ ಉಡಾಳನೆಂದು ಸಾಬೀತು ಪಡಿಸುತ್ತವೆ ; ಅವನಿಗೆ ಸಂಬಂಧಿಸಿದಂತೆ ಹಳ್ಳಿಗರಿಂದ ಹಲವು ವಿಷಯಗಳನ್ನು ಪೋಲೀಸ್ ಖಾತೆಯ ವರು ಸಂಗ್ರಹಿಸುತ್ತಾರೆ. ಸಿ.ಐ.ಡಿ ಮುರಳಿ ತಾನು ಪತ್ರಿಕಾವರದಿಗಾರನೆಂದು ಹೇಳಿ ಕೊಂಡು ಕೊಲೆಯಾದ ಸ್ಥಳಕ್ಕೆ ಧಾವಿಸುತ್ತಾನೆ. ಮಾಲೇರ ಸಾಚಿ ತಾನು ಹಿಂದಿನ ದಿನ ತಾನು ಅನಂತಯ್ಯನನ್ನು ನೋಡಿದುದಾಗಿ ಹೇಳುತ್ತಾಳೆ. ಹತ್ತು ವರ್ಷದ ಲಲಿತೆ ಹಾಗೂ

ಸುಬ್ಬನ ಫೋಟೋವನ್ನು ಆಕೆ ತೆಗೆದುಕೊಂಡುದಾಗಿ ತಿಳಿಸುತ್ತಾಳೆ. ಅನಂತ ಒಬ್ಬ ವಿಕೃತ ಕಾಮುಕ ವ್ಯಕ್ತಿಯಾಗಿದ್ದನೆಂಬ ಊಹೆ ಅಲ್ಲಿ ಎಲ್ಲರಿಗೂ ಸ್ಪಷ್ಟವಾಗಿ ತಿಳಿದು ಹೋಗುತ್ತದೆ. ಇನ್‌ಸ್ಪೆಕ್ಟರರು ತಮ್ಮ ಜೇಬಿನಲ್ಲಿದ್ದ ಒಂದು ಫೋಟೋ ತೋರಿಸಿ ಅದು ಯಾರು ಎಂದು ಕೇಳಿದಾಗ ಲಲಿತೆ, ಆ ತರುಣಿ ಉಟ್ಟ ಸೀರೆ ವರದಕ್ಕನದೆಂಬ ಸತ್ಯವನ್ನು ಹೇಳುತ್ತಾಳೆ.

ಸಿ.ಐ.ಡಿ ಮುರಳಿ ಸಾದರಿ ಮರದ ತಂಪಿನಲ್ಲಿ ಅಡ್ಡಾಡುವಾಗ ಗುಂಗುರು ಕೂದಲಿನ ಎಳೆಯೊಂದು ಸಿಗುತ್ತದೆ. ಮಹಡಿಯಲ್ಲಿ ಓಡಾಡುವಾಗ ಕೆಂಪು ಬಳೆಯ ಚೂರು ಸಿಕ್ಕಿರುತ್ತದೆ. ಅವನಿಗೆ ವರದೆಯ ಮೇಲೆ ಸಂಶಯ ಬಲವಾಗುತ್ತದೆ. ವರದೆಯ ಸ್ನೇಹಿತೆ ರಾಮೇಶ್ವರಿಗೆ ತನ್ನ ಸಂಶಯ ವ್ಯಕ್ತ ಪಡಿಸಿ ಈ ಕೊಲೆ ಉದ್ದೇಶಪೂರ್ವಕ ವಲ್ಲವಾದ್ದರಿಂದ ಮನೆಯ ಪರಿಸ್ಥಿತಿ ನೋಡಿ ಸಾಧ್ಯವಾದಷ್ಟು ಮಟ್ಟಿಗೆ ಕೇಸು ಮುಚ್ಚಿ ಹಾಕುವದಾಗಿ ತಿಳಿಸುತ್ತಾನೆ. ರಾಮೇಶ್ವರಿ ವರದೆಗೆ ಏಕಾಂತದಲ್ಲಿ ವಿಷಯ ತಿಳಿಸಿದಾಗ, ಆಕೆ ಒಂದು ಕಾಗದದಲ್ಲಿ ಬರೆದು ತಾನೇ ತನ್ನ ಮಾನರಕ್ಷಣೆಗಾಗಿ ಅನಂತನ ಮೇಲೆ ಒನಕೆ ಬೀಸಿದುದಾಗಿ ತಿಳಿಸುತ್ತಾಳೆ. ಕೆಂಪು ಬಳೆ ಚೂರು, ಹಾಗೂ ಕೂದಲೆಳೆ ತನ್ನದೇ ಎಂದು ಒಪ್ಪಿಕೊಳ್ಳುತ್ತಾಳೆ. ಹೀಗಾಗಿ ಕೊಲೆಯ ರಹಸ್ಯ ಜಗದೀಶ ರಾಮೇಶ್ವರಿ, ಮುರಳಿ ಈ ಮೂವರಲ್ಲೇ ಉಳಿದು ಬಿಡುತ್ತದೆ.

ರುಕ್ಮಿಣಮ್ಮ, ಅಕ್ಕಮ್ಮ ಈ ಪಾತ್ರಗಳು ತಮ್ಮ ಹಿರಿತನದಿಂದಾಗಿ ಓದುಗರಲ್ಲಿ ಗೌರವ ಭಾವನೆ ಮೂಡಿಸುತ್ತವೆ. 'ಅಕ್ಕಮ್ಮ' ಬಾಲವಿಧವೆ, ಆದರೆ ಧೈರ್ಯದ ಹೆಣ್ಣುಮಗಳು. ಮಲೆನಾಡಿನ ಸರಳ ಆತಿಥ್ಯ ಆತ್ಮೀಯತೆಯ ಚಿತ್ರಣವಿದೆ.

ಕೊಲೆಯಾದ ವ್ಯಕ್ತಿ ಅನಂತ ದುಶ್ಚಟಗಳ ದಾಸನಾಗಿ ಈ ಅವಸ್ಥೆಯನ್ನು ತಂದು ಕೊಳ್ಳಲು ಕಾರಣ ಅದರ ಹಿನ್ನೆಲೆ ಅಕ್ಕಮ್ಮನವರಿಂದ ತಿಳಿಯುತ್ತದೆ. ಹೆತ್ತ ತಾಯಿಯ ವಾತ್ಸಲ್ಯ ಮಮತೆಯಿಂದ ವಂಚಿತನಾದ ಅನಂತ ಮಲತಾಯಿಯ ಕಟುನುಡಿ, ತಂದೆಯ ಹೊಡೆತ-ಬಡಿತವನ್ನು ತಿಂದು ಮೊಂಡಾಗಿ ಒರಟಾಗಿ ಬೆಳೆಯುತ್ತಾನೆ. ಪುಂಡ ಹುಡುಗರ ಸಹವಂಶದಲ್ಲಿ ದುರ್ವ್ಯಸನಗಳಿಗೆ ಬಲಿಯಾಗುತ್ತಾನೆ.

"ಲಗ್ನದ ಪ್ರಾಯ ಹೆಣ್ಣು ನೋಡೋರಿಲ್ಲ ಲಗ್ನ ಮಾಡೋರಿಲ್ಲ ಅದಕ್ಕೇ ಬುದ್ಧಿ ಭ್ರಮಣೆಯಾಗಿತ್ತೋ ಏನು ಸುಡುಗಾಡೊ ಯಾರಿಗ್ಗೊತ್ತು ಅನ್ಯಾಯ ಬಂದು ಪ್ರಾಣ ಒಪ್ಪಿಸ್ತು [1] ಎನ್ನುವ ಅಕ್ಕಮ್ಮನ ಅನುಭವಪೂರ್ಣ ಮಾತುಗಳಲ್ಲಿ ಇಂದಿರಾ ಅವರು ಅನಂತನ ಮನಸ್ಸು ವಿಕೃತವಾಗುವದಕ್ಕೆ ಆತನ ಕೌಟುಂಬಿಕ ಹಿನ್ನೆಲೆ ಕಾರಣ ಎಂಬುದನ್ನು ಸೂಚಿಸಿದ್ದಾರೆ. ವ್ಯಕ್ತಿಯ ಜೀವನವನ್ನು ರೂಪಿಸುವಲ್ಲಿ ಕುಟುಂಬ, ಸುತ್ತಲಿನ ಪರಿಸರ ಅತ್ಯಂತ ಮುಖ್ಯವಾದದ್ದು. ತಂದೆ, ತಾಯಿಯ ಪ್ರೀತಿ

---

1. ಎಂ. ಕೆ. ಇಂದಿರಾ : 'ನೂರೊಂದು ಬಾಗಿಲು' ಪುಟ-219

ಆತ್ಮೀಯತೆ ಲಭ್ಯವಾಗದಿದ್ದರೆ ಎಂತೆಂತಹ ಅನಾಹುತಗಳು ನಡೆಯುತ್ತವೆ ಎಂಬುದಕ್ಕೆ ಅನಂತನ ದುರ್ಮರಣವೇ ಸಾಕ್ಷಿ. ಸಾಮಾಜಿಕ ದೋಷವನ್ನು ಲೇಖಕಿ ಎತ್ತಿ ತೋರಿಸಿದ್ದಾರೆ. ಕೌಟುಂಬಿಕ ಅವ್ಯವಸ್ಥೆಯ ದುಷ್ಪರಿಣಾಮಗಳನ್ನು ಇಲ್ಲಿ ಕಾಣಬಹುದಾಗಿದೆ.

'ಯಾರು ಹಿತವರು' ? :

ಧ್ಯೇಯವಾದಿ ಯುವಕನ ಕಥೆ ಈ ಕಾದಂಬರಿಯ ವಸ್ತು. ಜೀವನದಲ್ಲಿ ಎದುರಾಗುವ ಸಮಸ್ಯೆಗಳಿಗೆ ಆತ ಕಂಡುಕೊಳ್ಳುವ ಪರಿಹಾರವನ್ನು ಕಾದಂಬರಿಕಾರ್ತಿ ಇಲ್ಲಿ ನಿರೂಪಿಸಿದ್ದಾರೆ. ಈ ಕಾದಂಬರಿಯ ನಾಯಕ ಪ್ರಸನ್ನನಿಗೆ ಎದುರಾದ ಸಮಸ್ಯೆಗಳೆಲ್ಲ ವೈಯಕ್ತಿಕ. ಅವನ ಸಮಸ್ಯೆಗಳು ಆತ ಹುಟ್ಟಿದ ಕುಟುಂಬ,ಹಳ್ಳಿಯ ಪರಿಸರದಲ್ಲಿಯೇ ಹುಟ್ಟಿಕೊಳ್ಳುತ್ತವೆ.

ದೊಡ್ಡಪ್ಪನ ಮನೆಯಲ್ಲಿ ಬೆಳೆಯುತ್ತಿದ್ದ ಪ್ರಸನ್ನ, ಹುಟ್ಟಾ ಸ್ವಾಭಿಮಾನಿ ಹಾಗೂ ಛಲವಾದಿ. ಬಾಲ್ಯದಲ್ಲೇ ತಂದೆಯನ್ನು ಕಳೆದುಕೊಂಡಿದ್ದಾನೆ. ತಾಯಿ ಶಿವಮ್ಮ. ಕಾಯಿಲೆಯಿಂದ ಹಾಸಿಗೆ ಹಿಡಿದು ಮಲಗಿ, ಅರೆ ಪ್ರಜ್ಞೆಯಲ್ಲಿರುತ್ತಾಳೆ. ಪ್ರಸನ್ನನ ತಂದೆಗೆ ಆಸ್ತಿಯಲ್ಲಿ ಪಾಲು ಇದ್ದರೂ ದೊಡ್ಡಪ್ಪ (ರುದ್ರಪ್ಪ) ಅದನ್ನು ಕಬಳಿಸುವ ಹಂಚಿಕೆಯಲ್ಲಿರುತ್ತಾನೆ. ಅವನು ಬೆಳೆದು ದೊಡ್ಡವನಾದಂತೆ ಆ ಮನೆಯಲ್ಲಿ ತನ್ನ ನಿಲುವು ಏನು ಎಂಬ ತಿಳುವಳಿಕೆ ಮೂಡುತ್ತದೆ. ಅಲ್ಲದೆ ಅವರಿವರು ಮಾತಾಡಿಕೊಳ್ಳುವಾಗ ತನ್ನ ತಂದೆಯ ಮರಣದ ಹಿಂದೆ ರುದ್ರಪ್ಪನ ಕೈವಾಡವಿದೆಯೆಂದು ತಿಳಿದುಬರುತ್ತದೆ. ಹೀಗಾಗಿ ಮನೆಯಲ್ಲಿ ದೊಡ್ಡಪ್ಪ. ದೊಡ್ಡವ್ವ ಹಾಗೂ ಅವರ ಮಕ್ಕಳಿಂದ ಬರುವ ಕಿರುಕುಳಗಳನ್ನು ಪ್ರತಿಭಟಿಸಲು ಪ್ರಾರಂಭಿಸುತ್ತಾನೆ.

ದೊಡ್ಡಪ್ಪನ ಮನೆಯಿಂದ ಪಾರಾಗಿ ಸ್ವತಂತ್ರವಾಗಿ ಬದುಕಬೇಕೆಂಬ ಹಂಬಲ ಆತನಲ್ಲಿ ಬೆಳೆಯುತ್ತದೆ. ಆದರೂ ಆತನ ಜೀವನ ಮತ್ತೊಬ್ಬರ ಕೈಯಲ್ಲಿರುವುದರಿಂದ ಆತನ ಸ್ಥಿತಿ ಅತಂತ್ರವಾಗಿರುತ್ತವೆ. ಎಸ್.ಎಸ್.ಎಲ್.ಸಿ.ಯಲ್ಲಿ ಹತ್ತನೆಯ ಸ್ಥಾನ ಪಡೆದು ಪಾಸಾದಾಗ ತಾನು ಕಾಲೇಜು ಸೇರಿ ವಿದ್ಯಾವಂತನಾಗಿ ಸ್ವಂತ ಸಂಪಾದನೆ ಮಾಡಬೇಕೆಂದು ಕನಸು ಕಾಣುತ್ತಾನೆ. ಆದರೆ ದೊಡ್ಡಪ್ಪನ ಮನೆಯಲ್ಲಿ ಆತನ ವಿಜಯಕ್ಕೆ ಯಾರಾದರೂ ಸಂತೋಷ ಪಡದೇ ಕಟುನುಡಿಗಳನ್ನೇ ಆಡುತ್ತಾರೆ.

ಇಂತಹ ಸ್ಥಿತಿಯಲ್ಲೂ ಅವನ ಮನಸ್ಸಿಗೆ ನೆಮ್ಮದಿ ಕೊಡುತ್ತಿದ್ದವರೆಂದರೆ ಆತನ ಬಾಲ್ಯ ಸಂಗಾತಿಗಳಾದ ಶರ್ವಾಣಿ ಹಾಗೂ ರೇಣುಕೆ. ಶರ್ವಾಣಿ ಪ್ರಸನ್ನನ ಅತ್ತೆಯ ಮಗಳು. ಅತ್ತೆ ಗೀರ್ವಾಣಿಯಲ್ಲೇ ಆತ ತಾಯಿಯ ವಾತ್ಸಲ್ಯ-ಮಮತೆಗಳನ್ನು ಕಾಣುತ್ತಾನೆ. ರೇಣುಕೆ ಊರ ಸಾಹುಕಾರ ಸಿದ್ಧಲಿಂಗಶೆಟ್ಟರ ಮೊಮ್ಮಗಳು. ಸಿದ್ಧಲಿಂಗಶೆಟ್ಟರಿಗೂ ಮತ್ತು ರುದ್ರಪ್ಪನವರಿಗೂ ನಾಲ್ಕಾರು ತಲೆಮಾರುಗಳಿಂದ

ಬೆಳೆದು ಬಂದ ದಾಯಾದಿ ಮತ್ಸರ. ಆದರೂ ಪ್ರಸನ್ನನ ಬಗೆಗೆ ಸಿದ್ಧಲಿಂಗಶೆಟ್ಟರಿಗೆ ವಿಶೇಷ ಪ್ರೀತಿ ಹಾಗೂ ಅನುಕಂಪ.

ಪ್ರಸನ್ನನ ಕಾಲೇಜು ಶಿಕ್ಷಣದ ಹಂಬಲವನ್ನು ತಡೆಹಾಕಲು ರುದ್ರಪ್ಪ ಅವನ ತಂದೆಯ ಪಾಲಿನ ಹೊಲವನ್ನು ಬಿಡಿಸಿಕೊಡುವ ನಾಟಕವಾಡುತ್ತಾನೆ. ಪ್ರಸನ್ನ ತನ್ನ ಹೊಲದಲ್ಲಿ ದುಡಿದು ಹಣ ಗಳಿಸಿ ಯಾರ ಹಂಗಿಲ್ಲದೆ ಶಿಕ್ಷಣ ಪಡೆಯಬಹುದೆಂಬ ಹುಮ್ಮಸ್ಸಿನಲ್ಲಿ ಕಷ್ಟಪಟ್ಟು ದುಡಿಯುತ್ತಾನೆ. ರುದ್ರಪ್ಪ ಮೋಸದಿಂದ ಹೋಲದಲ್ಲಿ ಬೆಳೆದ ಅವರೇಕಾಯಿಯನ್ನು ಕಡಿಮೆ ಧಾರಣೆಗೆ ಮಾರಾಟ ಮಾಡಿಸುವದಲ್ಲದೆ, ಹೊಲದಲ್ಲಿನ ಅವರೇಕಾಯಿಯನ್ನು ಗುತ್ತಿಗೆದಾರನಿಂದಲೇ ಕಳುವು ಮಾಡಿಸುತ್ತಾನೆ. ಈ ಪ್ರಸಂಗದಿಂದ ಪ್ರಸನ್ನನ ಬಹುದಿನದ ಆಸೆ ನುಚ್ಚುನೂರಾಗುತ್ತದೆ.

ಇದೇ ಸಮಯವನ್ನು ಕಾಯುತ್ತಿದ್ದ ಸಿದ್ಧಲಿಂಗಶೆಟ್ಟರು ಪ್ರಸನ್ನನಿಗೆ ಸಹಾಯ ಹಸ್ತವನ್ನು ಚಾಚುತ್ತಾರೆ. ಅವರ ಸಹಾಯದಲ್ಲೂ ಸ್ವಾರ್ಥವಿದೆ ಎಂಬ ಭಾವನೆ ಪ್ರಸನ್ನನಿಗೆ ಬರುವದಿಲ್ಲ. ಅವರಿಂದ ದೊರೆತ ಆರ್ಥಿಕ ಸಹಾಯದಿಂದ ಪ್ರಸನ್ನ ಮೈಸೂರಿನಲ್ಲಿ ಕಾಲೇಜು ಸೇರುತ್ತಾನೆ. 'ಸಿದ್ಧಲಿಂಗಶೆಟ್ಟರ ಗುರುತಿನವಳೇ ಆದ' ಲಿಂಗಮ್ಮನ ಖಾನಾವಳಿಯಲ್ಲಿ ಪ್ರಸನ್ನನಿಗೆ ಊಟ ವಸತಿಯ ವ್ಯವಸ್ಥೆಯಾಗಿತ್ತು. ಶ್ರಮವಹಿಸಿ ಓದಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಪಡೆಯುತ್ತಾನೆ. ಆದರೆ ಆತನಿಗೆ ಅಲ್ಲಿಯೂ ಸದಾ ರೇಣುಕೆ ಹಾಗೂ ಶರ್ವಾಣಿಯ ನೆನಪು. ಪ್ರಸನನ್ನ ಏಳಿಗೆ ಯನ್ನು ಕಂಡು ಸಿದ್ಧಲಿಂಗಶೆಟ್ಟರು ಅನುಕಂಪ, ಹಾಗೂ ಪ್ರೀತಿಯ ಜಾಲದಲ್ಲಿ ಆತನಿಗೆ ತಮ್ಮ ಮೊಮ್ಮಗಳು ರೇಣುಕೆಯನ್ನು ಕೊಡಬೇಕೆಂದು ಬಯಸುತ್ತಾರೆ. ಸಿದ್ಧಲಿಂಗ ಶೆಟ್ಟರಿಗೆ ಗಂಡು ಸಂತಾನವಿಲ್ಲದ ಕಾರಣ ತಮ್ಮ ಮಗಳಿಗೆ ಮದುವೆಮಾಡಿ ಅಳಿಯ ನನ್ನು ಮನೆಯಲ್ಲಿಟ್ಟುಕೊಂಡಿರುತ್ತಾರೆ. ಮಗಳಿಗೂ ಗಂಡು ಸಂತಾನವಿಲ್ಲದ ಕಾರಣ ಅವರ ಅಪಾರ ಆಸ್ತಿಗೆ ರೇಣುಕೆಯೇ ವಾರಸುದಾರಳು.

ಸಿದ್ಧಲಿಂಗಶೆಟ್ಟರು ರೇಣುಕೆಯನ್ನು ಕೊಡಬೇಕೆಂದಿರುವ ವಿಷಯವನ್ನು ಶರ್ವಾಣಿಯೇ ಪ್ರಸನ್ನನಿಗೆ ತಿಳಿಸುತ್ತಾಳೆ, ಅತ್ತೆ ತನ್ನ ಮಗಳು ಶರ್ವಾಣಿಯನ್ನು ಪ್ರಸನ್ನನಿಗೆ ಕೊಟ್ಟು ತಮ್ಮ ವಂಶದ (ತವರಿನ)ಬಾಂಧವ್ಯವನ್ನು ಗಟ್ಟಿಮಾಡಿಕೊಳ್ಳುವ ಬಯಕೆ, ರೇಣುಕೆ ಹಾಗೂ ಶರ್ವಾಣಿ ಇಬ್ಬರಲ್ಲಿ ಯಾರನ್ನು ಮದುವೆಯಾದರೂ ಒಂದು ಹೆಣ್ಣು ಜೀವಕ್ಕೆ ನೋವು ಕೊಟ್ಟಂತೆ ಈ ಸಮಸ್ಯೆಯಲ್ಲಿ ಸಿಲುಕಿದ ಪ್ರಸನ್ನ ತೊಳಲಾಡುತ್ತಾನೆ. ಪರಿಣಾಮ ಕೊನೆಯ ವರ್ಷದ ಪರೀಕ್ಷೆಯಲ್ಲಿ ಅನುತ್ತೀರ್ಣ ನಾಗುತ್ತಾನೆ. ಸಮಸ್ಯೆಯಲ್ಲಿ ಸಿಕ್ಕ ಪ್ರಸನ್ನ ಮನೋದೌರ್ಬಲ್ಯಕ್ಕೊಳಗಾಗಿ ಆತ್ಮ ಹತ್ಯೆಗೆ ಪ್ರಯತ್ನಿಸುತ್ತಾನೆ.

ಆತ್ಮಹತ್ಯೆಗೆ ಪ್ರಯತ್ನಿಸುತ್ತಿದ್ದ ರಾತ್ರಿಯೇ ಆತನನ್ನು ವಾಸ್ತವ ಜಗತ್ತಿಗೆ ಎಳೆದು ತರುವ ಘಟನೆಯೊಂದು ನಡೆಯುತ್ತದೆ. ಅದೇ ಹಳ್ಳಿಯ (ಮೈಸೂರಿನ

ಹತ್ತಿರದ ಹಳ್ಳಿ)'ಗಂಗಿ' ಎಂಬ ಹದಿನಾರು ವರ್ಷದ ಯುವತಿಗೆ ಚೇಳು ಕಡಿಯುತ್ತದೆ. ಆಕೆ ಬೇರೆ ಯಾರೂ ಆಗಿರದೇ ತನ್ನ ತಾಯಿ ಬದುಕಿದ್ದಾಗ ಆಕೆಯ ಸೇವೆ ಮಾಡಿದ ಶಿವಮ್ಮನ ಮೊಮ್ಮಗಳು.

ಅಂದಿನ ರಾತ್ರಿ ಶಿವಮ್ಮನ ಗುಡಿಸಲಿನಲ್ಲಿ ಕಳೆದ ಪ್ರಸನ್ನನ ಮಾನಸಿಕ ಸಮಸ್ಯೆಗಳಿಗೆ ಪರಿಹಾರ ದೊರೆಯುತ್ತದೆ. ಕಡು ಬಡತನದಿಂದ ಕೂಲಿಮಾಡಿ ಗಂಜಿ ಕುಡಿದು ಬದುಕುವ ಅವರ ಜೀವನದ ರೀತಿ, ಗುಡಿಸಲಿನಲ್ಲಿ ವಾಸಿಸುವ ಜನರ ಅನುಭವದ ಮಾತುಗಳನ್ನು ಪ್ರಸನ್ನನು ಬದುಕಿನತ್ತ ಕಣ್ದೆರೆದು ನೋಡುವಂತೆ ಮಾಡುತ್ತದೆ. ಈ ಭಾಗ ಕಾಂಬರಿಯ ಬಹು ಮುಖ್ಯವಾದ ಭಾಗವೂ ಹೌದು. ಹಾಗೂ ಕಾದಂಬರಿ ಕಾರ್ತಿಗೆ ಬದುಕಿನ ಬಗೆಗೆ ಇರುವ ಗಾಢವಾದ ಆಸಕ್ತಿಗೆ ನಿದರ್ಶನವೂ ಹೌದು.

ಯಾರೋ ಮೈಸೂರಿಗೆ ಹೋಗಿ ಆ ದಿನವೇ ಬಂದವನೊಬ್ಬ ಹೇಳಿದ–"ಐ ಏನು ಓಡಾಟ ಬಿಡವ್ವ, ನಿನ್ನೆ ಮೊನ್ನೆಯೆಲ್ಲ ಅದೇನ ಪರೀಕ್ಷೆ ರಿಜಲ್ಟಂತೆ ಯಾವನೋ ಪೇಲಾದ ಹುಡ್ಗ ಕುಕ್ಕಳ್ಳಿ ಕೆರೆ ಬಿದ್ನಂತೆ. ಮತ್ಯಾರೋ ಇಸ ತಗಂಡು ಸತ್ನಂತೆ ಹಾಂಗಂತ ಟೆಸನ್ನಾಗೆ ಮಾತಾಡಕಾತಾ ಇದ್ರು...ಪರೀಕ್ಷೆ ಪೇಲಾದ್ರೆ ಜೀವ ತಕ್ಕಳದಾ ? ಇನ್ನೊಂದಪ ಓದಿದ್ರಾತಪ್ಪ. ಸತ್ರೆ ಏನ್ ಕಡದಂಗಾತು ?"[1]

"ಯಾರಿಗೆ ತಿಳೀತದೆ ಈ ಹೈಕಳ ಬುದ್ಧಿ"[2]—"ಅದ ಒಂದ್ಕಡೀಕೆ ಮಡ್ಗು; ಪಾದಳ್ಳಿ ದಾಸಪ್ಪನ ಮಗ ಎಕ್ಟೆಂನ್ ಕಿರಿಸ್ತಾನರ ಹುಡ್ಗೀನ ಮದಿವ್ಯಾಗ್ತೀನಿ ಅಂದ್ನಂತೆ ಹಂಗಾದ್ರೆ ನಿನ್ನ ಮನೆ ಒಳೀಕೆ ಸೇರಸಾಕಿಲ್ಲ ಒಂಟೋಗು ಅಂದಿದಕ್ಕೆ ಒಟ್ಕ ಕ್ವಾಣ್ಯಾಗ ನಿದ್ದೆ ಗುಳಿಗಿ ನುಂಗಿ ಸತ್ತಿದ್ದಲ್ವಾ; ಯಲ್ಲಾ ಬಿಟ್ಟು ಹೆತ್ತೋರ ಹೊಟ್ಟೆಗೆ ಬೆಂಕಿ ಇಟ್ಟು ಪ್ರಾಣ ಕಳಕಳಾದಾ ?"

ತೀರಾ ವಯಸ್ಸಾದ ಅಜ್ಜನ ಗೊಗ್ಗರ ದನಿ ಕೇಳಿತು. "ಕಲಿಕಾಲ ಬಂದೈತೆ, ರಾಮಾಣ್ಯದಾಗೆ ಭಾರತದಾಗೆ ಆವರೆಲ್ಲಿ ಹನೆಲ್ಡು ವರ್ಷ ಅನುಬೋಸುದ್ರು, ಯುದ್ಧ ಮಾಡಿದ್ರಾ ಗೆದ್ದು..."[3]

ಇಂತಹ ಅನುಭವದ ಮಾತುಗಳು ಆ ಜನರಿಗೆ ಜೀವನದಲ್ಲಿರುವ ಸಮಸ್ಯೆಗಳು ಅವುಗಳೊಡನೆ ಸೆಣಸಾಡುತ್ತಲೇ ಬದುಕುವ ಅವರ ಶ್ರದ್ಧೆ ಪ್ರಸನ್ನನಿಗೆ ಬದುಕುವ ಛಲ ತುಂಬುವಂತೆ ಓದುಗರಿಗೂ ಪರಿಣಾಮವನ್ನುಂಟು ಮಾಡುತ್ತವೆ. ದರಿದ್ರ ಜೀವನದಲ್ಲಿ ಪ್ರಕಟವಾಗುವ ವಿಸ್ಮಯ, ಸಹಜತೆ, ಕಾದಂಬರಿಯ ಮಹತ್ವದ ಭಾಗವಾಗಿ ಕಾಣಿಸುತ್ತದೆ.

---

1. ಎಂ. ಕೆ. ಇಂದಿರಾ : ಯಾರು ಹಿತವರು ?' ಪುಟ–159
2. –ಅದೇ– ಪುಟ–160
3. –ಅದೇ– ಪುಟ–161

ಪ್ರಸನ್ನ ಶ್ರಮವಹಿಸಿ ಓದಿ ಬಿ.ಇಡಿ. ಮುಗಿಸುತ್ತಾನೆ. ತನ್ನ ಹಳ್ಳಿಗೆ ಬರುವ ವಿಚಾರದಲ್ಲಿದ್ದಾಗ ಹಳ್ಳಿಯಲ್ಲಿ ಅನೇಕ ಬದಲಾವಣೆಗಳೂ ಆಗಿರುತ್ತವೆ. ಸಿದ್ಧಲಿಂಗಪ್ಪ ನವರು ತಾವು ಕಟ್ಟಿಸಿದ ಹೈಸ್ಕೂಲಿಗೆ ಹೆಡ್‌ಮಾಸ್ತರನ್ನಾಗಿ ಪ್ರಸನ್ನನನ್ನೇ ನೇಮಿಸಿ ಕೊಳ್ಳುವ ಏರ್ಪಾಡಿನಲ್ಲಿರುತ್ತಾರೆ. ರೇಣುಕೆಯ ಶ್ರೀಮಂತಿಕೆಯ ಸಂಕೋಲೆಯಲ್ಲಿ ಸಿಕ್ಕಿಕೊಳ್ಳುವ ಬಯಕೆ ಪ್ರಸನ್ನನಿಗಿಲ್ಲ. ಆದರೆ ಅತ್ತೆಯ ಮಗಳು ಶರ್ವಾಣಿಯನ್ನು ಮದುವೆಯಾಗಿ ರೇಣುಕೆಯ ಮನಸ್ಸಿಗೆ ನೋವು ಕೊಡಲೂ ಮನಸ್ಸಿಲ್ಲ. ಪ್ರಸನ್ನನ ಭವಿಷ್ಯ ಜೀವನಕ್ಕಾಗಿ ಶರ್ವಾಣಿ ತನ್ನ ಪ್ರೀತಿಯನ್ನು ತ್ಯಾಗ ಮಾಡಲು ಸಿದ್ಧಳಾಗಿರು ತ್ತಾಳೆ.

ಅಂಗವಿಕಲೆ ಗಂಗಿಯ ಮದುವೆಯಾಯಿತೆಂಬ ಸುದ್ದಿ ಶರ್ವಾಣಿಯಿಂದ ಪ್ರಸನ್ನ ನಿಗೆ ತಿಳಿಯುತ್ತದೆ. ಗಂಗಿಯ ಮದುವೆಯೂ ಕೂಡ ಪ್ರಸನ್ನನಿಗೆ ಸಮಸ್ಯೆಗೆ ಪರಿಹಾರ ವಾಗಿ ಬರುತ್ತದೆ. ಆತನ ಜೀವನದಲ್ಲಿ ಮಹತ್ವದ ಪಾತ್ರ ವಹಿಸಿದವಳೆಂದರೆ 'ಗಂಗೆ' ಯೆಂದೇ ಹೇಳಬೇಕಾಗುತ್ತದೆ. ಬಿ.ಇಡಿ. ಮುಗಿಸಿದ ಪ್ರಸನ್ನ ಅರವಿಂದ, ರಾಮಕೃಷ್ಣ ವಿವೇಕಾನಂದ ಮೊದಲಾದ ಮಹಾಪುರುಷರ ಚರಿತ್ರೆಗಳನ್ನು ಓದುತ್ತಾನೆ. ಮೊದಲಿನ ಸಿಟ್ಟು ಉದ್ವೇಗ ಕಡಿಮೆಯಾಗುತ್ತದೆ.

ಇದೇ ವೇಳೆಗೆ ಸ್ನೇಹಿತ ಸುಧಾಕರನ ಆಗ್ರಹದ ಮೇರೆಗೆ ರಜೆಯ ದಿನಗಳಲ್ಲಿ ಮಂಗಳೂರಿಗೆ ಹೋಗುತ್ತಾನೆ. ಮಂಗಳೂರಿನ ಸಾಗರದ ದಂಡೆ, ಅಲ್ಲಿನ ಚರ್ಚಿನ ಗಂಟೆಯ ಗಂಭೀರ ಧ್ವನಿ ಆತನಿಗೆ ಶುಭ ಸಂಕೇತವಾಗುತ್ತದೆ. ತನ್ನ ಬದುಕಿನ ಹಾದಿ ಯನ್ನು ಕಂಡುಕೊಳ್ಳುತ್ತೇನೆ ಎಂಬ ಸಂಕಲ್ಪದಿಂದ ಹೊರಡುತ್ತಾನೆ. ಯಾರಿಗೂ ನೋವು ಕೊಡದ ಆತನ ಮಾನವೀಯ ಭಾವನೆಗಳೊಂದಿಗೆ ಕಾದಂಬರಿ ಮುಕ್ತಾಯ ವಾಗುತ್ತದೆ.

ಡೋಲಾಯಮಾನವಾದ ನಾಯಕನ ಮನಸ್ಥಿತಿಯನ್ನು ಅತ್ಯಂತ ಸ್ವಾಭಾವಿಕ ವಾಗಿ ಚಿತ್ರಿಸಲಾಗಿದೆ. ಪ್ರಸನ್ನ ಸ್ವಾಭಿಮಾನಿಯಾಗಿದ್ದರೂ ಸಮಸ್ಯೆಗಳನ್ನು ಎದುರಿಸು ವಾಗ ಆತ ಮನೋದೌರ್ಬಲ್ಯಕ್ಕೊಳಗಾಗಿದ್ದಾನೆ. ತಾನು ಸಾಧಿಸಬೇಕೆಂಬ ಧ್ಯೇಯ ವನ್ನು ಸಾಧಿಸಿದ್ದಾನೆ. ಪ್ರಸನ್ನನ ಪಾತ್ರದಲ್ಲಿ ಕಂಡು ಬರುವ ಬೆಳವಣಿಗೆ ಉಳಿದ ಪಾತ್ರಗಳಲ್ಲಿ ಕಂಡು ಬರುವದಿಲ್ಲ.

ರುದ್ರಪ್ಪ, ರುದ್ರವ್ವ, ಇವರು ಸ್ವಾರ್ಥಿಗಳಾಗಿ ಚಿತ್ರಿಸಲ್ಪಟ್ಟಿದ್ದಾರೆ. ಸಿದ್ಧಲಿಂಗ ಶೆಟ್ಟರು ಪ್ರಸನ್ನನನ್ನು ತಮ್ಮೆಡೆಗೆ ಸೆಳೆದುಕೊಳ್ಳುವಲ್ಲಿ ಹಳ್ಳಿಗಳ ರಾಜಕೀಯ ವ್ಯಕ್ತ ವಾಗುತ್ತದೆ. ಅದೇ ರೀತಿ ರುದ್ರವ್ವ ಕಾರು ತಂದಾಗ ಮೆರೆದಾಡುವದು ದಾಯಾದಿ ಗಳಲ್ಲಿನ ಮತ್ಸರಕ್ಕೆ ಕಾರಣವಾಗುತ್ತದೆ.

ಪ್ರಸನ್ನನ ಅಕ್ಕ, ತನ್ನ ತಮ್ಮನ ಮೇಲೆ ತೋರುವ ನಿರ್ಮಲ ಅಂತಃಕರಣ ಓದುಗರ ಮನಸೆಳೆಯುತ್ತದೆ. ಆದೇ ರೀತಿ 'ಶಿವಮ್ಮ' ಕೂಡ ಓದುಗರ ಗಮನ ಸೆಳೆವ ಪಾತ್ರ.

'ಬಸ್ಯ, 'ಸಂಪಂಗಿ' 'ಮಲ್ಲೇಶಿ' ಅಷ್ಟಷ್ಟರ ಮಟ್ಟಿಗೆ ತಮ್ಮ ಕಾರ್ಯ ನಿರ್ವಹಿಸುತ್ತಾರೆ. 'ಶರ್ವಾಣಿ' ದಿಟ್ಟೆಯಾಗಿ 'ರೇಣುಕೆ' ಮೃದು ಸ್ವಭಾವದ ಕೋಮಲೆಯಾಗಿಯೂ ಚಿತ್ರಿಸಲ್ಪಟ್ಟಿದ್ದಾರೆ.

ದಾಯಾದಿಗಳ ಕೈಯಲ್ಲಿ ಸಿಕ್ಕ ಧೈಯವಾದಿ ಯುವಕನ ವೈಯಕ್ತಿಕ ಸಮಸ್ಯೆ, ಅವುಗಳನ್ನು ಎದುರಿಸಿದ ರೀತಿ, ಹಳ್ಳಿಯ ಜೀವನ ಇವುಗಳನ್ನು ಇಲ್ಲಿ ಚಿತ್ರಿಸಲಾಗಿದೆ.

'ಮುಸುಕು' :

ಪ್ರತಿಷ್ಠಿತ ಸಮಾಜದ 'ಮುಸುಕಿ'ನಲ್ಲಿ ನಡೆದ ರಹಸ್ಯಮಯ ಘಟನೆಗಳನ್ನು ಈ ಕಾದಂಬರಿಯಲ್ಲಿ ತೆರೆದು ತೋರಿಸುವದು ಲೇಖಕಿಯ ಉದ್ದೇಶವಾಗಿದೆ. ಪ್ರತಿಷ್ಠೆ, ಶ್ರೀಮಂತಿಕೆ, ಆಚಾರ ಇವುಗಳ ಮುಸುಕಿನಲ್ಲಿ ಆಕಸ್ಮಿಕವಾಗಿಯೋ, ಅನಿವಾರ್ಯವಾಗಿಯೋ ಈ ಸಮಾಜ ಬಾಹಿರ ಘಟನೆಗಳು ನಡೆಯುತ್ತವೆ. ಈ ಘಟನೆಗಳಿಗೆ ಆಚಾರ ಪ್ರತಿಷ್ಠೆಯ ಮುಸುಕನ್ನು ಎಳೆದಾಗ ಅವು ರಹಸ್ಯವಾಗಿ ಉಳಿದರೂ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಅಂತರಂಗದಲ್ಲಿ ಅನೇಕ ಕ್ಲಿಷ್ಟ ಸಮಸ್ಯೆಗಳಿಗೆ ಗುರಿಯಾಗಿ ತೊಂದರೆಗಳನ್ನು ಅನುಭವಿಸುತ್ತಾರೆ, ಎಂಬುದನ್ನು ಈ ಕಾದಂಬರಿಯಲ್ಲಿ ಕಾಣುತ್ತೇವೆ.

ಪಂಚವಟಿ ಎಸ್ಟೇಟಿನ ಮಾಲೀಕ ವಾಸುದೇವರಾಯರು ತುಂಬು ಪ್ರಾಯದಲ್ಲಿಯೇ ವಿಧುರರಾಗುತ್ತಾರೆ. ಹಣ ಹಾಗೂ ಯೌವ್ವನದ ಉತ್ಸಾಹದಲ್ಲಿ ಮರು ಮದುವೆಯನ್ನು ನಿರಾಕರಿಸಿ ಸ್ವತಂತ್ರವಾಗಿ ಬದುಕುವ ನಿರ್ಧಾರ ಮಾಡುತ್ತಾರೆ. ಎಸ್ಟೇಟು ವಿಸ್ತರಿಸಿದಂತೆ ಅವರ ಅಡಿಗೆ ಮನೆಯ ಜವಾಬ್ದಾರಿಯನ್ನು ನೋಡಿಕೊಳ್ಳಲು ಬಡವರಾದ ವೆಂಕಣ್ಣ ಹಾಗೂ ಆತನ ಪತ್ನಿ ಯಶೋಧಬಾಯಿ ರಾಯರ ಮನೆಗೆ ಬರುತ್ತಾರೆ. ವಿಧುರರಾಗಿದ್ದ ರಾಯರ ದೃಷ್ಟಿ ವೆಂಕಣ್ಣನ ಮಡದಿ ಯಶೋದಾ ಬಾಯಿಯ ಮೇಲೆ ಬೀಳುತ್ತದೆ. ಒಮ್ಮೆ ರಾಯರು ವೆಂಕಣ್ಣನನ್ನು ನೆಪ ಹೂಡಿ 'ಕಡೂರಿ'ಗೆ ಕಳಿಸಿ ಯಶೋದಾಬಾಯಿಯ ಎದುರು ನಿಲ್ಲುತ್ತಾರೆ, ಅವಳಾದರೂ ತಮಗೆ ಅನ್ನಕೊಟ್ಟು ಸಲಹುವ ಧಣಿ ಎಂಬ ಭಾವನೆಯಿಂದ ಅಸಹಾಯಕಳಾಗಿ ತನ್ನನ್ನು ರಾಯರಿಗೆ ಒಪ್ಪಿಸಿಕೊಳ್ಳುತ್ತಾಳೆ. ರಾಯರ ಸಂಬಂಧದಿಂದಾಗಿ 'ಮಾಧು' ಜನಿಸುತ್ತಾನೆ. 'ಪತಿಯೇ ಪರದೈವ' ಎಂದು ಭಾವಿಸಿದ ಮುಗ್ಧ ಮಹಿಳೆ ಯಶೋದಾ ಬಾಯಿ ತನ್ನ ಶೀಲ ಅಪವಿತ್ರವಾಯಿತೆಂದು ಪಾಪ ಪ್ರಜ್ಞೆಯಲ್ಲಿ ತೊಳಲುತ್ತಾಳೆ. ಅದೇ ಕೊರಗಿನಲ್ಲಿ ಎರಡು ವರ್ಷದ ಮಗುವನ್ನು ರಾಯರ ಕೈಗೊಪ್ಪಿಸಿ ಅವನ ಜನ್ಮ ರಹಸ್ಯವನ್ನು ಕಾಪಾಡಬೇಕೆಂದು ಅಂಗಲಾಚಿ ಬೇಡಿ ಕೊನೆಯುಸಿರೆಳೆದಳು.

ಮಾಧು 'ವಾಸ್ತವದಲ್ಲಿ ರಾಯರ ಮಗನಾಗಿದ್ದರೂ ಸಮಾಜದ ದೃಷ್ಟಿಯಲ್ಲಿ ಅಡಿಗೆಯ ವೆಂಕಣ್ಣನ ಮಗನಾಗಿ ಬೆಳೆಯುತ್ತಾನೆ. ಮಂದ ಬುದ್ಧಿಯ ವೆಂಕಣ್ಣ ನಾದರೂ 'ಮಾಧು' ತನ್ನ ಮಗನೆಂದೇ ತಿಳಿದು ಅವನ ಲಾಲನೆ ಪಾಲನೆ ಮಾಡುತ್ತಾನೆ.

'ಮಾಧು' ಎರಡು ವರ್ಷದವನಿದ್ದಾಗ ರಾಯರ ಜೀವನದಲ್ಲಿ ಮತ್ತೊಂದು ಹೆಣ್ಣಿನ ಪ್ರವೇಶವಾಗುತ್ತದೆ. ಅವಳು ವಿಧವೆ. ಯಾರಿಂದಲೋ ಮೋಸ ಹೋಗಿ ಗರ್ಭಿಣಿಯಾದ ಆಕೆ ತನ್ನ ಮಾನ ಕಾಪಾಡಿಕೊಳ್ಳಲು ಕೆರೆಗೆ ಹಾರಿ ತನ್ನ ಪ್ರಾಣ ಕಳೆದು ಕೊಳ್ಳಲು ಹವಣಿಸುತ್ತಿದ್ದ ಸನ್ನಿವೇಶದಲ್ಲಿ ರಾಯರು ಅನುಕಂಪದಿಂದ ಅವಳಿಗೆ ಧೈರ್ಯ ಹೇಳಿ ಮನೆಗೆ ಕರೆತರುತ್ತಾರೆ. ಅವಳನ್ನು ಸೋದರಿ ಎಂಬ ಭಾವನೆಯಿಂದ ಉಪಚರಿಸಿ ತಮ್ಮ ಮನೆಯಲ್ಲೇ ಆಶ್ರಯಕೊಡುತ್ತಾರೆ. ಆ ವಿಧವೆಯಲ್ಲಿ ಹುಟ್ಟಿದವಳೇ ಶಾಂತಲೆ ಹೆರಿಗೆಯಾದ ಕೆಲವೇ ದಿನಗಳಲ್ಲಿ ವಿಪರೀತ ಔಷಧಿ ಸೇವಿಸಿ ಆತ್ಮಹತ್ಯೆ ಮಾಡಿ ಕೊಳ್ಳುತ್ತಾಳೆ. 'ಶಾಂತಲೆ' ರಾಯರ ಸಂಬಂಧದಿಂದಾಗಿಯೇ ವಿಧವೆಯಲ್ಲಿ ಜನಿಸಿದವ ಳೆಂದು ಸಮಾಜ ಭಾವಿಸುತ್ತದೆ. ಶಾಂತಲೆಯೂ ಸಹ ವಾಸುದೇವರಾಯರೇ ತನ್ನ ತಂದೆ ಎಂದು ತಿಳಿದುಕೊಳ್ಳುತ್ತಾಳೆ.

ವಿಧವೆ ಸಾಯುವವರೆಗೂ ತನ್ನ ಹೆಸರು. ಊರು ಹಾಗೂ ತನ್ನ ಬಸಿರಿಗೆ ಕಾರಣನಾದ ವ್ಯಕ್ತಿಯ ಬಗೆಗೆ ಉಸುರುವದಿಲ್ಲ. ಹೀಗಾಗಿ ಶಾಂತಲೆಯ ತಂದೆ ಯಾರು ? ಎಂಬುದು ಒಂದು ಪ್ರಶ್ನೆಯಾಗಿ ಉಳಿಯುತ್ತದೆ. ರಾಯರು ಶಾಂತಲೆ ಯನ್ನು, ಮಾಧುವನ್ನು ಒಂದೇ ಬಗೆಯ ಪ್ರೀತಿಯಿಂದ ನೋಡಿಕೊಂಡರೂ 'ಮಾಧು' ತಾನು ಅಡಿಗೆಯವನ ಮಗನೆಂಬ ಕೀಳರಿಮೆಯನ್ನು ಬೆಳೆಸಿಕೊಳ್ಳುತ್ತಾನೆ. ಹೆಚ್ಚಿನ ಶಿಕ್ಷಣ ಪಡೆಯುವದನ್ನು ನಿರಾಕರಿಸಿ ತನ್ನನ್ನು ಸಾಕಿ ಸಲುಹುತ್ತಿರುವ ಧಣಿಯ ಋಣ ತೀರಿಸುವದಕ್ಕಾಗಿ ಎಸ್ಟೇಟಿನ ಮೇಲ್ವಿಚಾರಣೆಗೆ ನಿಲ್ಲುತ್ತಾನೆ.

ಶಾಂತಲೆ ವೈದ್ಯಳಾಗಬೇಕೆಂಬ ಹಂಬಲದಿಂದ ಮೆಡಿಕಲ್ ಕಾಲೇಜಿಗೆ ಸೇರುತ್ತಾಳೆ ಸಹಪಾಠಿಗಳಾಗಿದ್ದ ಹೇಮಂತ ಹಾಗೂ ಶಾಂತಲೆ ಪರಸ್ಪರ ಪ್ರೀತಿಸುತ್ತಾರೆ. ಹೇಮಂತನ ತಾಯಿ ಶಾಂತಲೆಯನ್ನು ಸೊಸೆಯಾಗಿ ಸ್ವೀಕರಿಸಲು ಸಿದ್ಧಳಾದರೂ ಅವನ ತಂದೆ ಈ ಮದುವೆಯನ್ನು ನಿರಾಕರಿಸುತ್ತಾನೆ. ಕಾರಣ ಹೇಮಂತನ ತಂದೆಯೇ ಶಾಂತಲೆಯ ಜನ್ಮಕೊಟ್ಟ ತಂದೆ, ಶಾಂತಲೆ ಹಾಗೂ ಹೇಮಂತ ಇವರಿಗೆ ತಮ್ಮ ತಂದೆಯನ್ನು ವಿರೋಧಿಸಿ ಮದುವೆಯಾಗುವ ಇಷ್ಟವಿರುವುದಿಲ್ಲ.

ವಾಸುದೇವರಾಯರಿಗೆ 'ಮಾಧು' ನನ್ನು ಮನೆಯಿಂದ ಹೊರಗೆ ಕಳುಹಿಸುವ ಮನಸ್ಸಿಲ್ಲ. ರಾಯರು ಸಂದಿಗ್ಧದಲ್ಲಿ ಸಿಲುಕಿ ಅನಾರೋಗ್ಯಕ್ಕೀಡಾಗುತ್ತಾರೆ. ಸಂಸಾರ ಬೇಡವೆಂದ ರಾಯರ ಜೀವನದಲ್ಲಿ ಎರಡು ಹೆಣ್ಣುಗಳ ಪ್ರವೇಶದಿಂದ ಅವರ ಬದುಕಿನ ರೀತಿಯೇ ಬದಲಾಗುತ್ತದೆ. ತಾವಾಗಿ ಬಂದು ತೊಡರಿದ ಈ ಸಂಕಲೆಗಳನ್ನು ಬಿಡಿಸಿ ಕೊಳ್ಳಲು ನಿರ್ಧರಿಸಿದ ರಾಯರು ಶಾಂತಲೆಗೆ ಒಂದು ಪತ್ರವನ್ನು ಬರೆದು 'ಮಾಧು'

ತಮ್ಮ ಮಗನೆಂದೂ, ಶಾಂತಲೆಯ ತಂದೆ ಯಾರೆಂದು ಮಾತ್ರ ತಮಗೆ ತಿಳಿದಿಲ್ಲವೆಂಬ ವಾಸ್ತವ ಸತ್ಯವನ್ನು ತಿಳಿಸುತ್ತಾರೆ. ಕಾದಂಬರಿಯ ಕೊನೆಗೆ ಮಾಧು ಹಾಗೂ ಶಾಂತಲೆಗೆ ಅವರವರ ಜನನದ ರಹಸ್ಯ ತಿಳಿಯುತ್ತದೆ. ಹೇಮಂತ ಹಾಗೂ ಅವನ ತಂದೆಯ ನಡುವೆ ನಡೆದ ಸಂಭಾಷಣೆಯಿಂದ ಹೇಮಂತನ ತಂದೆಯೇ ಶಾಂತಲೆಗೆ ಜನ್ಮ ಕೊಟ್ಟ ತಂದೆಯೆಂಬುದನ್ನು ಲೇಖಕಿ ಅತ್ಯಂತ ಸೂಚ್ಯವಾಗಿ ಹೇಳಿದ್ದಾರೆ.

"ನಮ್ಮಂತ ಸಂಪ್ರದಾಯಶೀಲರ ಮನೆಗಳಲ್ಲಿಯೇ ಕತ್ತಲೆಯಲ್ಲಿ ನಡೆಯಬಾರದ್ದೆಲ್ಲ ನಡೆದು ಹೋಗುತ್ತದೆ. ಇದು ಅನಾದಿ ಕಾಲದಿಂದ ನಡೆದು ಬಂದ ಮಾತು. ಮನೆಯ ಹಿರಿಯರೇ ಆ ಕೆಲಸ ಮಾಡಿ ಮನೆಯ ಮಕ್ಕಳನ್ನು ದಂಡಿಸುವ ಕಾಲ. ಒಳಗೊಳಗೆ ನಡೆಯುವ ಈ ಅನಾಚಾರಗಳಿಗೆ ಒಂದು ಆಚಾರದ ಮುಸುಕು ಹಾಕಿದರೆ ಆಯಿತು.

...ಆದರೆ ನನಗೆ ಚೆನ್ನಾಗಿಗೊತ್ತಿದೆ. ಹುಡಗಿಯ ತಂದೆ ಯಾರು? ಅನ್ನೋದು. ನಿಮ್ಮಮ್ಮನಿಗೆ ಗೊತ್ತಿಲ್ಲ ಅದು ತಿಳಿಯಬಾರದು ಎಂದು ನನ್ನ ಇಷ್ಟ"[1] ಎಂದು ಹೇಮಂತನ ತಂದೆ ಹೇಳುವ ಮಾತುಗಳನ್ನೇ ಮಗ ಪ್ರೀತಿಸಿದಾಗ ತಂದೆಗೆ ಆಗುವ ಮಾನಸಿಕ ಯಾತನೆ, ವ್ಯಥೆ ಇಲ್ಲಿ ಸೂಚ್ಯವಾಗಿ ವ್ಯಕ್ತವಾಗಿವೆ. ಹೇಮಂತ ಹಾಗೂ ಶಾಂತಲೆಗೆ ಈ ಪ್ರಶ್ನೆ ಒಗಟಾಗಿ ಉಳಿಯುವದರಿಂದ ಅವರ ಭವಿಷ್ಯ ಜೀವನಕ್ಕೆ ಯಾವ ತೊಂದರೆಯಾಗುವದಿಲ್ಲ.

ವಿಧುರರಾಗಿದ್ದ ರಾಯರು ವಿಧವೆಯನ್ನು ಮನೆಗೆ ಕರೆತಂದಾಗ ಅವಳ ಬಗೆಗೆ ಸೋದರಿಕೆಯ ಭಾವನೆ ಮೂಡುತ್ತದೆ. ಕಾರಣ ವಿಧವೆಯ ತಾಯಿಗೂ ವಾಸು ದೇವರಾಯರ ತಂದೆಗೂ ಸಂಬಂಧವಿದ್ದುದರಿಂದಲೇ ಅವಳು ವಾಸುದೇವ ರಾಯರ ತಂಗಿ. ಶಾಂತಲೆಯ ತಾಯಿಯೂ ಸಹ ವಿಧವೆಯಲ್ಲಿ ಜನಿಸಿದವಳೇ. ಆದುದರಿಂದ ಅವಳು ಮನೆಯಲ್ಲಿ ಎಲ್ಲರ ತಾತ್ಸಾರಕ್ಕೆ ಗುರಿಯಾಗುತ್ತಾಳೆ. ಹೇಮಂತನ ತಂದೆ ಯಿಂದ ವಂಚಿತಳಾಗುತ್ತಾಳೆ. ಹೆಣ್ಣು–ಗಂಡಿನ ಸಂಬಂಧದ ಹಲವು ಮುಖಗಳನ್ನು ಇಲ್ಲಿ ತೋರಿಸಲಾಗಿದೆ. ಸಮಾಜದ ಕುರುಡು ಕಟ್ಟಳೆಗಳು ಹೆಣ್ಣು–ಗಂಡಿನ ಲೈಂಗಿಕ ಸಂಬಂಧಕ್ಕೆ ವಿಧವೆಯ ಬಾಳಿಗೆ ಕಷ್ಟನಷ್ಟಗಳನ್ನು ತುಂಬಿ ಅವರ ಬದುಕನ್ನು ಹೇಗೆ ದುರಂತಮಯವನ್ನಾಗಿ ಮಾಡುತ್ತದೆ ಎಂಬುದನ್ನು ಇಲ್ಲಿ ಕಾಣಬಹುದಾಗಿದೆ,

ಶಾಂತಲೆಯು ರಾಯರ ತಂಗಿಯ ಮಗಳು. 'ಮಾಧು' ರಾಯರ ಮಗ. ಸೋದರತ್ತೆಯ ಮಗಳೊಡನೆ 'ಮಾಧು'ನ ಮದುವೆ. ಇವೆಲ್ಲದರ ಹಿಂದೆ ಕಾಣದ ಕೈಯೊಂದರ ಕೈವಾಡ ಮಾನವನ ಬದುಕನ್ನು ಆಡಿಸುತ್ತಿದೆ ಎಂದು ಅನ್ನಿಸದೇ ಇರದು.

ಕಾದಂಬರಿಕಾರ್ತಿ ಇಂದಿರಾ ಅವರ ಕಣ್ಣು ಸಮಾಜದ ಪ್ರತಿಷ್ಠೆಯ ಮುಸುಕಿನಲ್ಲಿ ನಡೆದ ರಹಸ್ಯಗಳನ್ನು ಸೂಕ್ಷ್ಮ ದೃಷ್ಟಿಯಿಂದ ಕಂಡಿದೆ. ಕಾದಂಬರಿಯುದ್ದಕ್ಕೂ

1. ಎಂ. ಕೆ. ಇಂದಿರಾ : 'ಮಂಸಂಕು' ಪುಟ–216.

ಕುತೂಹಲಕಾರಿ ಸನ್ನಿವೇಶಗಳು ಹೆಣೆದುಕೊಂಡಿವೆ. ಫ್ಲಾಷ್ ಬ್ಯಾಕ್ ತಂತ್ರವನ್ನು ಕಾದಂಬರಿ ಅಳವಡಿಸಿಕೊಂಡಿದೆ. ಕುತೂಹಲಕಾರಿ ಘಟನೆ, ಸನ್ನಿವೇಶ ನಿರ್ಮಾಣದ ಕೌಶಲ್ಯ ಇವುಗಳಿಂದ ಕಾದಂಬರಿ ವಾಚನೀಯವಾಗಿದೆ. ಕಾದಂಬರಿಗಿಟ್ಟ 'ಮುಸುಕು' ಎಂಬ ಶೀರ್ಷಿಕೆ ಸಾರ್ಥಕವಾಗಿದೆ.

'ಹೂಬಾಣ' :

ಶ್ರೀಮತಿ ಎಂ. ಕೆ. ಇಂದಿರಾ ಅವರ 'ಹೂಬಾಣ' ೧೯೭೦ರಲ್ಲಿ ಪ್ರಕಟವಾಗಿದೆ. ಈ ಕಾದಂಬರಿ 'ಮುತ್ತು ಒಂದು ಮುತ್ತು' ಎಂಬ ಹೆಸರಿನಲ್ಲಿ ಚಲನಚಿತ್ರವೂ ಆಗಿವೆ.

ತಾಯಿಯ ಅನೈತಿಕ ವ್ಯವಹಾರದಿಂದ ಬಾಲ್ಯದಲ್ಲಿ ಮಾನಸಿಕ ಆಘಾತಕ್ಕೀಡಾಗಿ ಮಾತನಾಡುವ ಶಕ್ತಿಯನ್ನೇ ಕಳೆದುಕೊಂಡ ಹತ್ತೊಂಭತ್ತು ವರ್ಷದ ಯುವತಿಯ ಮನೋರೋಗದ ಸಮಸ್ಯೆ ಈ ಕಾದಂಬರಿಯಲ್ಲಿದೆ.

ಎಣ್ಣೆಮಿಲ್ಲಿನಲ್ಲಿ ಕೆಲಸಕ್ಕಿದ್ದ 'ಮುತ್ತು'ನ ತಂದೆ ದುಶ್ಚಟಗಳ ದಾಸನಾಗಿ ಮಿಲ್ಲಿನ ಐದುಸಾವಿರ ರೂಪಾಯಿಗಳನ್ನು ರೇಸಿನಲ್ಲಿ ಕಳೆದು ಅವಮಾನಿತನಾಗಿ ಆತ್ಮ ಹತ್ಯೆ ಮಾಡಿಕೊಳ್ಳುತ್ತಾನೆ. 'ಮುತ್ತು'ನ ತಾಯಿ ಒಂದು ಶಾಲೆಯಲ್ಲಿ ಶಿಕ್ಷಕಿಯಾಗಿ ಕೆಲಸಕ್ಕೆ ಸೇರುತ್ತಾಳೆ. ತಾರುಣ್ಯದಲ್ಲಿ ವಿಧವೆಯಾದ ಅವಳು ಒಂದು ದಿನ ತನ್ನ ಆರು ವರ್ಷದ ಮಗುವನ್ನು ಮನೆಯ ಹೊರಜಗುಲಿಯಲ್ಲಿ ಕುಳ್ಳಿರಿಸಿ ಪರಪುರುಷ ನೊಂದಿಗೆ ಓಡಿಹೋಗುತ್ತಾಳೆ. 'ಮುತ್ತು'ವಿಗೆ ತಂದೆಯಂತೂ ಮೊದಲೇ ಇಲ್ಲ. ತಾಯಿಯೂ ಬಿಟ್ಟು ಹೋದಾಗ ಅವಳ ಮನಸ್ಸಿಗೆ ಆಘಾತ (ಶಾಕ್)ವಾಗಿ ಪರಿಣಮಿ ಸುತ್ತದೆ. ತಂದೆ ತಾಯಿಯ ಪ್ರೀತಿ, ಕರುಣೆ. ವಾತ್ಸಲ್ಯದಿಂದ ವಂಚಿತಳಾದ 'ಮುತ್ತು' ಮಾತಾಡುವ ಶಕ್ತಿಯನ್ನೇ ಕಳೆದುಕೊಳ್ಳುತ್ತಾಳೆ,

'ಮುತ್ತು'ನಂತೆಯೇ ಕೌಟುಂಬಿಕ ಜೀವನದಲ್ಲಿ ತಂದೆಯ ಅವ್ಯವಹಾರ ಭಾವನ ಹಗರಣ ಇವುಗಳಿಗೆ ಬೇಸತ್ತ ಯುವಕ ವೈದ್ಯ 'ಮಧುಕರ'ನ ಜೀವನದಲ್ಲಿಯೂ ಅನೇಕ ವೈಯಕ್ತಿಕ ಸಮಸ್ಯೆಗಳಿವೆ. ಮಲೆನಾಡಿನ ಪ್ರಶಾಂತ ವಾತಾವರಣದಲ್ಲಿ ಜೀವನ ಕಳೆಯಲು ನಿರ್ಧರಿಸಿ ಮಧುಕರ ವರ್ಗವಾಗಿ ಮಲೆನಾಡಿನ 'ಸಾಗರ'ಕ್ಕೆ ಬಂದು ನೆಲೆ ಸುತ್ತಾನೆ. ಮಧುಕರ ವಾಯುವಿಹಾರಕ್ಕೆ ಹೋದಾಗ ಸುರಗಿ ಹೂವಿನ ಬಾಣ ವೊಂದು ಅವನ ಎದೆಗೆ ತಾಗಿ ಅವನ ಮನಸ್ಸನ್ನು ಅಲ್ಲೋಲಕಲ್ಲೋಲವಾಗಿಸುತ್ತದೆ. ಆ ಬಾಣವನ್ನು ಎಸೆದವಳು ಬೇರೆ ಯಾರೂ ಆಗಿರದೆ 'ಮುತ್ತು'ವೇ ಆಗಿರುತ್ತಾಳೆ. ವಿಚಿತ್ರ ವೇಷಭೂಷಣದ ಪ್ರಾಣಿಗಳಂತೆ ಕೂಗುವ 'ಕೋಗಿಲೆ'ಯಂತೆ ಉಲಿಯುವ ವಿಲಕ್ಷಣ ಮೌನದ 'ಮುತ್ತು' ಮಧುಕರನ ಹೃದಯದಲ್ಲಿ ಪ್ರೇಮತರಂಗಗಳನ್ನೆಬ್ಬಿ ಸುತ್ತಾಳೆ. ಮನಶ್ಶಾಸ್ತ್ರ ಅಭ್ಯಸಿಸಿದ ಮಧುಕರನಿಗೆ ಕುತೂಹಲಕಾರಿ ಸವಾಲನ್ನು ಎಸೆಯುತ್ತಾಳೆ. ಅವರ ಪ್ರಯೋಗಕ್ಕೆ ವಸ್ತುವಾಗುತ್ತಾಳೆ,

'ಮುತ್ತು'ನ ವರ್ತನೆ ಮಾತ್ರ ವಿಚಿತ್ರ. ಆಕೆ ಕಿವುಡಿಯಲ್ಲದೆ ಮೂಕಿ. ಒಮ್ಮೊಮ್ಮೆ ತನ್ನದೇ ಆದ ಭಾವನಾಲೋಕದಲ್ಲಿ ವಿಹರಿಸುವ ಮತ್ತೊಮ್ಮೆ ಪೆದ್ದಿಯಂತೆ ಹುಚ್ಚಿಯಂತೆ ವರ್ತಿಸುವ 'ಮುತ್ತು'ನ ಮೌನಕ್ಕೆ ಕಾರಣ ಕಂಡು ಹಿಡಿಯಲು ಮಧುಕರ ಮುಂದಾಗುತ್ತಾನೆ. ಅವಳಿಗೆ ಹೆಚ್ಚಿನ ಚಿಕಿತ್ಸೆ ಕೊಡಿಸಲು ನಿರ್ಧರಿಸಿ ಅವಳನ್ನು ಮದುವೆಯಾಗುತ್ತಾನೆ.

'ಮುತ್ತು' ಚಿಕಿತ್ಸೆಗೊಳಪಡುವ ಮೊದಲೇ ಆಕಸ್ಮಿಕ ಘಟನೆ ನಡೆದು ಅವಳ ಮಾನಸಿಕ ಆಘಾತಕ್ಕೆ ಕಾರಣರಾದವರು ಅವಳ ಕಣ್ಣೆದುರು ಬಂದಾಗ ಮೂರ್ಛೆ ಹೋಗುತ್ತಾಳೆ. ಅವಳ ಸುಪ್ತಮನದಲ್ಲಿದ್ದ ಚಿತ್ರಗಳು ಅಳಿಸಿ ಅವಳಿಗುಂಟಾಗಿದ್ದ ಅವ್ಯಕ್ತ ಭೀತಿ ಇನ್ನಿಲ್ಲವಾಗಿ ಮಾತಾಡುವ ಶಕ್ತಿಯನ್ನು ಮರಳಿ ಪಡೆಯುತ್ತಾಳೆ. ಅವಳ ಮಾನಸಿಕ ಆಘಾತಕ್ಕೆ ಕಾರಣರಾದ ವ್ಯಕ್ತಿಗಳು ಭೆಟ್ಟಿಯಾಗುವ ಘಟನೆ ಇಲ್ಲಿ ಸಿನಿಮೀಯವಾಗಿ ಕಂಡರೂ, ಮನೋರೋಗದ ಇತಿಹಾಸದಲ್ಲಿ ಮುತ್ತುವಿನಂಥ ನಿದರ್ಶನಗಳು ಅಪರೂಪವೇನಲ್ಲ. ಮಾನಸಿಕ ಆಘಾತ ದೈಹಿಕ ಕ್ರಿಯೆಯ ಮೇಲೆ ಅಗಾಧ ಪರಿಣಾಮಬೀರುವವೆಂಬ ಸಂಗತಿಯು ವಿಲಕ್ಷಣ ಮೌನದಿಂದ ಮೂಕಿಯಾದ ಮುತ್ತುವಿನಲ್ಲಿ ಮಾರ್ಮಿಕವಾಗಿ ವ್ಯಕ್ತವಾಗುತ್ತದೆ. 'ಮುತ್ತು' ಬೆಳೆದು ದೊಡ್ಡವಳಾದಂತೆ ಅವಳ ತಾಯಿ ಹಾಗೂ 'ತಾಯಿ'ಯ ಪ್ರಿಯಕರನ ಚಿತ್ರಗಳು ಮನಃಪಟಲದಿಂದ ಅಳಿಸದೆ ಅವಳ ಸುಪ್ತಚಿತ್ರದಲ್ಲಿ ಸ್ಪಷ್ಟವಾಗಿ ಬಿಂಬಿತವಾಗುತ್ತದೆ. ಆದ್ದರಿಂದಲೇ 'ಮುತ್ತು' ಒಂದು ಹೆಣ್ಣಿನ ಮತ್ತು ಒಂದು ಗಂಡಿನ ಬೊಂಬೆಯನ್ನು ಮಾಡಿ ಚುಚ್ಚಿ ಹಾಕುತ್ತಾಳೆ.

ಮಣ್ಣಿನ ಬೊಂಬೆಗಳನ್ನು ಜಜ್ಜಿ ಹಾಕಿ ವಿಕಾರಗೊಳಿಸುವದು ಅವಳ ಜಾಗೃತ ಮನಸ್ಸಿನ ಈರ್ಷೆ, ಕೋಪ, ಆಕ್ರೋಶ, ದ್ವೇಷ ಇವುಗಳನ್ನು ವ್ಯಕ್ತಪಡಿಸುತ್ತದೆ. ಪ್ರಾಣಿಗಳಂತೆ ಕೂಗುವದು ಪಕ್ಷಿಗಳಂತೆ ಉಲಿಯುವದು ಇವೆಲ್ಲ ಮಾತನಾಡುವ ಶಕ್ತಿಯನ್ನು ಕಳೆದುಕೊಂಡ 'ಮುತ್ತು' ವಿನ ಭಾವನೆಗಳನ್ನು ಅಭಿವ್ಯಕ್ತಗೊಳಿಸುವ ಭಾಷೆಗಳು. ಅವಳ ಮೌನಕ್ಕೆ ಕಾರಣ ಕಂಡು ಹಿಡಿಯುವದು ವೈದ್ಯನಾದ ಮಧುಕರನಿಗೆ ಅಸಾಧ್ಯವೇನಲ್ಲ. 'ಮುತ್ತು'ವನ್ನು ಸುಪ್ತಾವಸ್ಥೆಗೆ ಒಳಪಡಿಸಿ ಅವಳ ಮನೋರೋಗಕ್ಕೆ ಕಾರಣ ಕಂಡು ಹಿಡಿಯಬಹುದಾಗಿತ್ತು. ಆದರೂ ಸಹ ಮಧುಕರ ಅವನ ಅಜ್ಜ ಹಾಗೂ ಮಂಜಯ್ಯನವರಿಂದ ಮಾಹಿತಿ ಸಂಗ್ರಹಿಸುವ ವಿಧಾನ ವೈಜ್ಞಾನಿಕವೂ ಕ್ರಮಬದ್ಧವೂ ಆಗಿದೆ. ತಂದೆ–ತಾಯಿಯ ಪ್ರೀತಿ, ಮಮತೆ, ಪ್ರತಿಯೊಂದು ಮಗುವಿಗೂ ಬಾಲ್ಯದಲ್ಲಿ ಅತ್ಯಂತ ಅವಶ್ಯ. ಅವುಗಳಿಂದ ವಂಚಿತವಾದ ಮಗು ಬೆಳೆದು ದೊಡ್ಡವಳಾ(ನಾ)ದಾಗ ಸಾಮಾಜಿಕ ಹೊಂದಾಣಿಕೆಗೆ ಹೇಗೆ ಬಾಧೆಯನ್ನುಂಟು ಮಾಡುತ್ತದೆಂಬುದಕ್ಕೆ 'ಮುತ್ತು' ಉತ್ತಮ ದೃಷ್ಟಾಂತ, ಆದ್ದರಿಂದಲೇ

ಅವಳು ತನ್ನ ಏಕಾಕಿತನವನ್ನು ಮರೆಯಲು ಮನೆಯ ದನಕರು. ಹೂವಿನ ಗಿಡ, ಬಳ್ಳಿಗಳೊಡನೆ ಸ್ನೇಹ ಬೆಳೆಸಿ ಮೌನ ಸಂಭಾಷಣೆ ನಡೆಸುತ್ತಾಳೆ.

'ಮುತ್ತು'ನ ಮನೋರೋಗಕ್ಕೆ ಕಾರಣರಾದವರು ಅವಳ ತಾಯಿ ಹಾಗೂ ಮಧುಕರನ ತಂದೆ, ವ್ಯಕ್ತಿಗಳ ಜೀವನದ ಮೇಲೆ ಕೌಟುಂಬಿಕ, ಸಾಮಾಜಿಕ ಸಂಬಂಧ ಗಳೂ ಹೇಗೆ ಪರಿಣಾಮ ಬೀರುತ್ತವೆಂಬುದನ್ನು ಈ ಕಾದಂಬರಿಯಲ್ಲಿ ಕಾಣಬಹು ದಾಗಿದೆ. 'ಮುತ್ತು'ನ ತಾಯಿ ಹಾಗೂ ಮಧುಕರನ ತಂದೆಯ ಅವ್ಯವಹಾರಕ್ಕೆ ಅವರ ವೈವಾಹಿಕ ಜೀವನದಲ್ಲಿದ್ದ ಅತೃಪ್ತಿಯೇ ಕಾರಣವಾಗಿದ್ದು ಅವರ ನಡತೆ ಅವರ ಕುಟುಂಬದಲ್ಲಿ ಮಕ್ಕಳ ಮೇಲೆ ಪರಿಣಾಮ ಬೀರುತ್ತದೆ.

ವೆಂಕಟಭಟ್ಟರು ಹಾಗೂ ಬಂದಮ್ಮನವರ ಹೋರಾಟದ ಬದುಕಿನ ಚಿತ್ರಣ ಸತ್ವಶಾಲಿಯಾಗಿ, ಬಂದಿದೆ. ಬಡತನ, ರೋಗ-ರುಜಿನ, ಪೆದ್ದಮಗ, ಹರೆಯಕ್ಕೆ ಬಂದ ಮೂಕಿಯಾದ ಮೊಮ್ಮಗಳು ಇಷ್ಟೆಲ್ಲ ಇದ್ದರೂ ಅವರ ಬದುಕಿಗೆ ಅಡೆತಡೆ ಉಂಟಾಗಿಲ್ಲ. ಈ ಹಿರಿಯ ಪಾತ್ರಗಳು ಜೀವಂತವಾಗಿ ಮೂಡಿ ಬಂದಿವೆ.

ಕಾದಂಬರಿಯಲ್ಲಿ ಮಧುಕರ ಆದರ್ಶ ವ್ಯಕ್ತಿತ್ವದ ಹೂಮನದ ಯುವಕನಾಗಿ ಚಿತ್ರಿತನಾಗಿದ್ದಾನೆ. ಅವನಲ್ಲಿರುವ ಮಾನವೀಯ ಅಂತಃಕರಣ ಓದುಗರ ಮನ ಸೆಳೆಯುತ್ತದೆ. ಮುತ್ತು ಹಾಗೂ ಮಧುಕರನ ಅಕ್ಕ ವೇದ ಇವರು ಸುಸಂಸ್ಕೃತ ಸ್ತ್ರೀ ಪಾತ್ರಗಳು, ವೇದ ಪುರುಷನ ದಬ್ಬಾಳಿಕೆಯಿಂದ ನೊಂದವಳು. ಅವಳ ನೋವು 'ಮೌನ'ದ ಮೂಲಕ ವ್ಯಕ್ತವಾಗುತ್ತದೆ. 'ಮುತ್ತು' ಮುಗ್ಧ ಸ್ವಭಾವದ ಯುವತಿ.

'ಮುತ್ತು'ನ ತಾಯಿ ಮಧುಕರನ ತಂದೆಯೊಡನೆ ಓಡಿಹೋಗುವದು ಅಪಘಾತ ದಲ್ಲಿ ಇಬ್ಬರೂ ಸಾಯುವುದು, ಕೊನೆಯ ಸನ್ನಿವೇಶದಲ್ಲಿ 'ಮುತ್ತು'ವಿನ ಕಣ್ಣಿಗೆ ಬೀಳುವದು ಇವೆಲ್ಲ ಕಾದಂಬರಿಯಲ್ಲಿ ಆಕಸ್ಮಿಕ ಘಟನೆಗಳಂತೆ ತೋರುತ್ತವೆ. ಇಂತಹ ಘಟನೆಗಳಿಂದಾಗಿ ಸಮಸ್ಯೆಯ ಪರಿಹಾರ ಸುಲಭವಾಗುತ್ತದೆ. ಮಧುಕರ ಪ್ರಯೋಗ ಪ್ರಾರಂಭವಾಗುವದಕ್ಕೆ ಮೊದಲೇ ಸಮಸ್ಯೆ ತಾನಾಗಿ ಪರಿಹಾರವಾಗುತ್ತದೆ. ಹೀಗಾಗಿ ಸಿನಿಮಾಯಾ ತಂತ್ರಗಳು ಕಾದಂಬರಿಯಲ್ಲಿ ಕಾಣಸಿಗುತ್ತವೆ.

ಲೇಖಿಕೆಗೆ ಮನೋವೈಜ್ಞಾನಿಕ ಕ್ಷೇತ್ರದ ಬಗೆಗೆ ಇರುವ ಸೀಮಿತ ಪರಿಚಯವೂ ಕಾದಂಬರಿಯಲ್ಲಿ ಇಂತಹ ಆಕಸ್ಮಿಕ ಘಟನೆಗಳ ಸೃಷ್ಟಿಗೆ ಕಾರಣವಾಗುತ್ತದೆ. ಈ ದೃಷ್ಟಿಯಿಂದ ನೋಡಿದಾಗ ದಿ. ತ್ರಿವೇಣಿಯವರ 'ಬೆಕ್ಕಿನ ಕಣ್ಣು' 'ಶರಪಂಜರ' ಇಂತಹ ಮನೋವೈಜ್ಞಾನಿಕ ಕಥಾವಸ್ತುವನ್ನೊಳಗೊಂಡ ಕಾದಂಬರಿಗಳು ಹೆಚ್ಚು ಯಶಸ್ವಿಯಾಗಿವೆ. ಮೊದಲು ಈ ಕಾದಂಬರಿ 'ಪ್ರಜಾಮತ'ದಲ್ಲಿ ಧಾರಾವಾಹಿಯಾಗಿ ಬಂದದ್ದು, ಹೀಗಾಗಿ ಸಾಮಾನ್ಯ ಓದುಗರನ್ನು ಗಮನದಲ್ಲಿಟ್ಟುಕೊಂಡು ಬರೆದ

ಈ ಕಾದಂಬರಿ ವಾಚನೀಯವಾಗಿದೆ. ಮಲೆನಾಡಿನ ಜನರ ಜೀವನ, ಅಲ್ಲಿಯ ಆಡು ನುಡಿಯು ಬಳಕೆ ಕಾದಂಬರಿಗೆ ಮೆರುಗು ನೀಡಿವೆ. ಕಾದಂಬರಿಯ ಕಥಾವಸ್ತು ಮನೋವೈಜ್ಞಾನಿಕ ಹಾಗೂ ಸಾಮಾಜಿಕ ಉದ್ದೇಶವನ್ನು ಈಡೇರಿಸಿಕೊಂಡಿವೆ.

'ಆಭರಣ' :

ಶ್ರೀಮತಿ ಎಂ. ಕೆ. ಇಂದಿರಾ ಅವರ 'ಆಭರಣ' ಎಂಬತ್ತೆಂಟು ಪುಟಗಳ ಈ ಕೃತಿ ೧೯೭೮ರಲ್ಲಿ ಪ್ರಕಟವಾಗಿದೆ. ಜಾನಪದ ಹಾಡುಗಳು ಸಂಗ್ರಹ ವಿಷಯ ಈ ಕಾದಂಬರಿಯಲ್ಲಿದೆ.

ಜಾನಪದ ಸಾಹಿತ್ಯದಲ್ಲಿ ಡಾಕ್ಟರೇಟ್ ಪದವಿಗಾಗಿ ಅಧ್ಯಯನ ಮಾಡುತ್ತಿದ್ದ ಕಥಾನಾಯಕ ಮೂರ್ತಿ, ಜನಪದ ಸಂಪದ ಸಂಗ್ರಹಕ್ಕಾಗಿ ಹಳ್ಳಿ ಹಳ್ಳಿಗಳನ್ನು ಸುತ್ತಿದಾಗ ದೊಡ್ಡ ಕಾಡೂರು ಎಂಬ ಹಳ್ಳಿಯಲ್ಲಿ ಆತ ಪಡೆದ ಅನುಭವ ಈ ಕಾದಂಬರಿಯ ಕಥಾವಸ್ತು.

ಜನಪದ ಸಾಹಿತ್ಯ ಸಂಗ್ರಹಕ್ಕೆ ಬೇಕಾದ ಸಲಕರಣೆಗಳೆಂದರೆ ಟೇಪ್ ರಿಕಾರ್ಡರ್, ಜನಪದ ಗೀತೆಗಳನ್ನು ಬರೆದುಕೊಳ್ಳಲು ಕೆಲವು ಪುಸ್ತಕಗಳು ಇವುಗಳೊಂದಿಗೆ ಆತ ದೊಡ್ಡ ಕಾಡೂರಿಗೆ ಬರುತ್ತಾನೆ.

ಶ್ಯಾನುಭೋಗರ ಮಗಳು 'ಸಾತಿ' ವಿಧವೆ ಯುವತಿ. ಕಷ್ಟ ಸುಖಗಳ ಅಂತರವನ್ನು ತಿಳಿಯದ ಹಳ್ಳಿಯ ಮುಗ್ಧೆ, ವಿಧವೆಯಾದ ಹರೆಯದ ಮಗಳ ಕೈಯಿಂದಲೇ ಬಾಣಂತಿತನ ಮಾಡಿಸಿಕೊಳ್ಳುವ ಶ್ಯಾನುಭೋಗರ ಹೆಂಡತಿಯ ಅಜ್ಞಾನದ ಬಗೆಗೆ ಬೇಸರ ತಾಳುವದರ ಜೊತೆಗೆ ಮೂರ್ತಿಗೆ ಸಾತಿಯ ಬಗೆಗೆ ಕನಿಕರವೂ ಇದೆ. ಅವಳ ಸೌಜನ್ಯ, ಸಹಜ ಸೌಂದರ್ಯದತ್ತ ಮೂರ್ತಿ ಆಕರ್ಷಿತನಾಗುತ್ತಿರುವನೇನೋ ಎಂದು ಓದುಗರು ಭಾವಿಸುವಷ್ಟರಲ್ಲಿ ಕಾದಂಬರಿ ಮುಕ್ತಾಯವಾಗುತ್ತದೆ. ನಾಯಕ ಅವಳ ಸ್ಥಿತಿಯ ಬಗೆಗೆ ಕನಿಕರ ತೋರಿಸುತ್ತಾನೆಯೇ ವಿನಃ ಅದಕ್ಕೆ ಪರಿಹಾರ ನೀಡುವುದಿಲ್ಲ. ಆತ ಅಸಹಾಯಕನಾಗಿ, ಮಾತೃವಾಕ್ಯ ಪರಿಪಾಲನೆಗಾಗಿ ಉಳಿದು ಬಿಡುತ್ತಾನೆ. ಅವಳನ್ನು ತನ್ನ ಮದುವೆಗೆ ಕರೆಸಿ, ಅವರಿಂದ ಹಾಡು ಹೇಳಿಸಿ. ತನ್ನ ಕೃತಜ್ಞತೆಯನ್ನು ಸಲ್ಲಿಸುತ್ತಾನೆ.

ಇದೊಂದು ಸಾಧಾರಣ ಮಟ್ಟದ ಕಾದಂಬರಿ ಎನ್ನಬಹುದು. ಮಲೆನಾಡಿನ ಹಳ್ಳಿಗರ ಮುಗ್ಧ ಬದುಕಿನ ಚಿತ್ರಣ ಸ್ವಾಭಾವಿಕವಾಗಿ ಮೂಡಿ ಬಂದಿದೆ.

'ಡಾಕ್ಟರ್' :

ಈ ಕಾದಂಬರಿ ೧೯೬೬ರಲ್ಲಿ ಇಂದಿರಾ ಪ್ರಕಾಶನದಿಂದ ಬೆಳಕಿಗೆ ಬಂದಿದ್ದು ೧೯೮೧ ಮೂರನೆಯ ಬಾರಿ ಪ್ರಕಟವಾಗಿದೆ.

"ಹಲವು ವರ್ಷಗಳ ಕಾಲ ಕನ್ನಡನಾಡಿನ ಮೂಲೆ ಮೂಲೆಗಳಲ್ಲಿ ಸಂಚರಿಸಿ ಅನುಭವ ಪಡೆದ ಡಾಕ್ಟರೊಬ್ಬರಿಂದ ಕೇಳಿ ತಿಳಿದು ಸಂಗ್ರಹಿಸಿದ ವಿಷಯಗಳಿಗೆ ಕಾದಂಬರಿಯ ರೂಪ ಕೊಟ್ಟಿರುವುದಾಗಿ ಲೇಖಕಿ 'ಕಾದಂಬರಿಗೆ ಮುನ್ನ' ಹೇಳಿದ್ದಾರೆ. ಸಮಾಜದ ಮೂಢನಂಬಿಕೆ, ಅಜ್ಞಾನ ಇವುಗಳಲ್ಲಿ ಈ ಕಾದಂಬರಿಯ ಮೂಲಕ ಎತ್ತಿ ತೋರಿಸಿದ್ದಾರೆ.

ಡಾಕ್ಟರರ ಅನುಭವಗಳಲ್ಲಿ ರವ್ಯವಿದೆ, ಸ್ವಾರಸ್ಯವಿದೆ, ರೋಮಾಂಚಕತೆ ಇದೆ. ಭೀಭತ್ಸ-ಭೀಕರವೂ ಇದೆ.

ಅನುಕಂಪ ಮೂಡಿಸುವ ಸನ್ನಿವೇಶಗಳಿವೆ. ಜಿಗುಪ್ಸೆ ತರಿಸುವ ಸಂದರ್ಭಗಳಿವೆ, ವಿನೋದಮಯ ಘಟನೆಗಳೂ ಇವೆ.

ಈ ಕಾದಂಬರಿಯನ್ನು ದಿ॥ ಎಚ್. ಆರ್. ಇಂದಿರಾ ಅವರ ಸ್ನೇಹ ಪೂರ್ವಕ ಒತ್ತಾಯದ ಮೇರೆಗೆ ಕೇವಲ ಇಪ್ಪತ್ತು ದಿನಗಳಲ್ಲಿ ಬರೆದು ಮುಗಿಸಿರುವದಾಗಿ ಲೇಖಕಿ ಹೇಳಿದ್ದಾರೆ.

ಮಲೆನಾಡಿನ ಕೊಂಪೆಗೆ ವರ್ಗವಾಗಿ ಬಂದ ಉತ್ಸಾಹೀ ವೈದ್ಯನ ಅನುಭವವೇ ಈ ಕಾದಂಬರಿಯ ವಸ್ತು. ಮಲೆನಾಡಿನ ಹಳ್ಳಿ ಹಳ್ಳಿಗಳಲ್ಲಿ ತುಂಬಿರುವ ಅಜ್ಞಾನ; ಅವರ ಮೂಢನಂಬಿಕೆಯನ್ನು ಈ ಕಾದಂಬರಿಯಲ್ಲಿ ಚಿತ್ರಿಸಲಾಗಿದೆ. ಈ ಕಾದಂಬರಿಯಲ್ಲಿ ಬರುವ ಹಳ್ಳಿ, ನಮ್ಮ ದೇಶದ ಯಾವುದೇ ಹಳ್ಳಿಯನ್ನು ಪ್ರತಿನಿಧಿಸುತ್ತದೆ.

ವಿವಿಧ ಬಗೆಯ ರೋಗಿಗಳು, ಅವರ ವಿಚಿತ್ರ ಸ್ವಭಾವ ಅವರ ಅಜ್ಞಾನ ಇವುಗಳನ್ನು ನಿರೂಪಿಸುವಲ್ಲಿ ಲೇಖಕಿಯ ಸಹಾನುಭೂತಿಪರ ಹಾಸ್ಯ ಮಿಂಚಿದೆ.

ಈ ಕಾದಂಬರಿಯಲ್ಲಿ ವೈದ್ಯನಿಗೆ ಹೆಜ್ಜೆ ಹೆಜ್ಜೆಗೂ ಸಮಸ್ಯೆಗಳು ಎದುರಾದರೂ, ಕರ್ತವ್ಯ ಪ್ರಜ್ಞೆಯಿಂದ; ಸಹನೆ, ಶಾಂತ ಸ್ವಭಾವದಿಂದ ಅವುಗಳನ್ನು ನಿವಾರಿಸುತ್ತಾನೆ.

ಮೂರು ದಿನಗಳ ಪ್ರಸವ ವೇದನೆಯಿಂದ ನರಳುತ್ತಿದ್ದರೂ, ಕೊನೆಯಗಳಿಗೆಯಲ್ಲಿ ವೈದ್ಯರಲ್ಲಿಗೆ ಧಾವಿಸಿ ಬರುವ ಹಳ್ಳಿಗರ ಅಜ್ಞಾನವನ್ನು ಇಲ್ಲಿ ನಿರೂಪಿಸಿದ್ದಾರೆ. ಬಾಲ್ಯ ವಿವಾಹದ ದುಷ್ಪರಿಣಾಮದಿಂದ, ತಾಯಿಯ ಜನನದ್ವಾರ ಚಿಕ್ಕದಾಗಿದ್ದುದರಿಂದ ಮಗುವನ್ನು ತುಂಡುಮಾಡಿ ತೆಗೆಯಬೇಕಾಗುತ್ತದೆ. ಮೃದು ಸ್ವಭಾವದ ವೈದ್ಯರೂ ಇಂತಹ ಸನ್ನಿವೇಶದಲ್ಲಿ ಕಠೋರ ಹೃದಯದವರಾಗಬೇಕಾಗುತ್ತದೆ.

ಇಲ್ಲೆಲ್ಲ ಹಳ್ಳಿಯ ಜನರ ಅಜ್ಞಾನದಿಂದ ಸಮಾಜದಲ್ಲಾಗುವ ದುರಂತವನ್ನು ಕಾಣುತ್ತೇವೆ.

ಚುಚ್ಚುಮದ್ದು, ಕೆಂಪು ಬಣ್ಣದ ಔಷಧಿ ಕುಡಿದರೆ ಮಾತ್ರ ತಮ್ಮ ರೋಗ ಗುಣವಾಗುವದೆಂದು ನಂಬಿದ ಪಟೇಲ, ಹಳ್ಳಿಯ ಹುಡುಗರ ಮೂಢತನಕ್ಕೆ ಓದುಗರು ನಗುವಂತಾಗುತ್ತದೆ.

ಅರ್ಧ ರಾತ್ರಿಯಲ್ಲಿ ಒಂದೇ ಸಮನೆ ಸುರಿವ ಮಳೆಯಲ್ಲಿ ಎರಡು ತಾಸು ಚಿಕ್ಕ ಮಗು ಕಿರುಚಿಕೊಂಡರೂ ಗಾಢ ನಿದ್ರೆಯಲ್ಲಿ ಮೈಮರೆತು, ಗಾಬರಿಯಿಂದ ಎದ್ದು ನಿಂತ ಕಂಟಿ ಮಾಸ್ತರರ ನಿದ್ದೆ ಪ್ರಸಂಗ ಮೋಜಿನದಾಗಿದೆ.

ತೊಟ್ಟಿಲಲ್ಲಿ ಚೇಳು ಸೇರಿಕೊಂಡು ಮಗುವನ್ನು ಕಚ್ಚಿ ಹಿಂಸಿಸುತ್ತಿದ್ದರೂ; ತೊಟ್ಟಿಲ ಹಾಸಿಕೆಯನ್ನು ಸರಿಪಡಿಸದೆ ವೈದ್ಯರಲ್ಲಿ ಗಾಬರಿಯಿಂದ ಓಡಿ ಬರುವ ಶ್ಯಾನುಭೋಗರ ಮಗಳ ಒಂದೂವರೆ ವರ್ಷದ ಮಗುವಿನ ಅಳುವ ಪ್ರಸಂಗವೂ ಅಷ್ಟೇ ಕುತೂಹಲಕಾರಿಯಾಗಿ ನಿರೂಪಿತವಾಗಿದೆ.

ಮಗುವಿನ ವಿಷಯದಲ್ಲಿ ಹಳ್ಳಿಗರು ತೋರುವ ತಾತ್ಸಾರ ಅವರ ವರ್ತನೆ ಸ್ವಾಭಾವಿಕ ಮೂಡಿದೆ.

ಶ್ರೀಮಂತಿಕೆಯ ಅಮಲಿನಲ್ಲಿ ಅರವತ್ತು ವರ್ಷದ ವೃದ್ಧಾಪ್ಯದಲ್ಲೂ ಯುವತಿಯನ್ನು ಮದುವೆಯಾಗಿ ಅವಳ ಬದುಕನ್ನು ಹಾಳು ಮಾಡಿದ ಶ್ರೀಮಂತ ವ್ಯಕ್ತಿಯ ಕಾಮುಕತೆ ಸಮಾಜದ ಅಸ್ವಸ್ಥ್ಯಕ್ಕೆ ಕಾರಣವಾಗುತ್ತದೆ. ಹಾಗೂ ವ್ಯಕ್ತಿಗಳ ಬದುಕನ್ನು ಅಡ್ಡದಾರಿಗೆಳೆಯುತ್ತದೆ.

ಹದಿವಯದ ಹಳ್ಳಿಯ ಹುಡುಗಿಯರಿಗೆ ಪಟ್ಟಣದ ಪದವೀಧರ ಯುವಕರನ್ನು ಮದುವೆಯಾಗುವ ಮೋಹ, ಮನೆಯ ಬಡತನ, ಅಸಹಾಯಕತೆಯಿಂದಾಗಿ ಆಸೆ ಕೈಗೂಡದೆ ಹೋದಾಗ ನಿರಾಶೆಯಿಂದ ಆತ್ಮಹತ್ಯೆ ಮಾಡಿಕೊಂಡು ಕುಟುಂಬದಲ್ಲಿ ಅನೇಕ ಸಮಸ್ಯೆಗಳಿಗೆ ಕಾರಣಳಾಗುತ್ತಾಳೆ.

ಹದಿವಯದ ರುಕ್ಮಿಣಿಯ ಸಾವು (ಹೆರಿಗೆ ಸಂದರ್ಭ) ವೈದ್ಯನ ಬದುಕಿನಲ್ಲಿ ಮರೆಯಾಗದ ಪ್ರಸಂಗವಾಗಿ ನಿಲ್ಲುತ್ತವೆ.

ಮಲೆನಾಡಿನ ಮಳೆ, ಆ ಜನರ ಬದುಕು, ಅವರ ಹೋರಾಟದ ಜೀವನ; ಹಳೆಯ ಕಾಲದ ಮನೆಗಳು, ಅವರ ಔದಾರ್ಯ, ಅತಿಥಿ ಸತ್ಕಾರದ ರೀತಿ ಇವೆಲ್ಲವೂ ಕಾದಂಬರಿಯಲ್ಲಿ ಸ್ವಾಭಾವಿಕವಾಗಿ ಚಿತ್ರಿತವಾಗಿವೆ.

ಗರ್ಭಿಣಿ ಹೆಂಡತಿ ಕುಸುಮಳೊಂದಿಗೆ ವೈದ್ಯನ ಸರಸ ದಾಂಪತ್ಯದ ಚಿತ್ರಣ ಕಾದಂಬರಿಗೆ ಸೊಗಸನ್ನು ತಂದಿದೆ.

'ನಿಜವಾದ ವೈದ್ಯರು ಬರೆದರೇ ಬರಬಹುದಾದ ಪರಿಪೂರ್ಣತೆ ಇದರಲ್ಲಿ ಬಂದಿಲ್ಲವೆಂದು' ಲೇಖಕಿ ವಿನಮ್ರತೆಯಿಂದ ಹೇಳಿಕೊಂಡಿದ್ದಾರೆ. (ಕಾದಂಬರಿಗೆ ಮುನ್ನ)

ಲೇಖಕಿಯ ಕದನ ಕೌಶಲ್ಯದಿಂದಾಗಿ ಕಾದಂಬರಿ ಸಲೀಸಾಗಿ ಓದಿಸಿಕೊಂಡು ಹೋಗುತ್ತದೆ. ಮನರಂಜನೆ ನೀಡುತ್ತದೆ.

'ಪೂರ್ವಾಪರ' :

ಈ ಕಾದಂಬರಿ ೧೯೮೦ರಲ್ಲಿ ಪ್ರಕಟವಾಗಿದೆ. ಪೂರ್ವಾಪರ 'ಕಥಾನಾಯಕಿ' ಶಾರದೆಯ ವಿದೇಶ ಪ್ರವಾಸದ ಅನುಭವದ ಹಿನ್ನೆಲೆಯಲ್ಲಿ ರಚಿತವಾಗಿದೆ. ಈ ಕಾದಂಬರಿಯಲ್ಲಿ ಪಾಶ್ಚಾತ್ಯ. ಪೌರಾತ್ಯ ದೇಶಗಳ ಸಂಸ್ಕೃತಿಕ ಭಿನ್ನತೆಯನ್ನು ಎತ್ತಿ ತೋರಿಸಿದ್ದಾರೆ.

ಕಥಾನಾಯಕಿಯ ನೇರ ನಿರೂಪಣೆಯಿಂದ ಕಾದಂಬರಿ ಆರಂಭವಾಗುತ್ತದೆ. ಮಲೆನಾಡಿನ ಪ್ರಶಾಂತ ಮುಗ್ಧ ಪರಿಸರದಲ್ಲಿ ಹುಟ್ಟಿ ಬಾಳಿದ ಸಂಪ್ರದಾಯಸ್ಥ ಮನೆತನದ ಗೃಹಿಣಿ ಮಗಳು ಸುಲೋಚನೆ ಮದುವೆಯಾಗಿ ದೇಹಲಿಯಲ್ಲಿರುತ್ತಾಳೆ. ಮಗ 'ಸುಂದರ' ಮದುವೆಯಾಗಿ ಹೆಂಡತಿ 'ವನೀತ'ಳೊಂದಿಗೆ ಉನ್ನತ ಶಿಕ್ಷಣಕ್ಕಾಗಿ ನ್ಯೂಯಾರ್ಕಿಗೆ ಹೊರಡುತ್ತಾನೆ.

'ಸುಂದರ' ವಿದೇಶಕ್ಕೆ ಹೋದ ಎರಡು ವರ್ಷಗಳಲ್ಲಿ ಶಾರದೆಗೆ ಪತಿ ವಿಯೋಗ ವಾಗುತ್ತದೆ. ಮಗನನ್ನು ಕಾಣಲು ಕೆಲವು ತಿಂಗಳುಗಳ ಮಟ್ಟಿಗೆ ವಿದೇಶಕ್ಕೆ ಹೊರಡು ತ್ತಾಳೆ. ಆಕೆಯ ವಿದೇಶದ ಅನುಭವ ಇಲ್ಲಿದೆ. ವಿಮಾನದಿಂದಿಳಿದಾಗ ಸುಂದರ ಹಾಗೂ ಅವನ ಸ್ನೇಹಿತ ನರೇಂದ್ರ ಬಂದು ಮನೆಗೆ ಕರೆದೊಯ್ಯುತ್ತಾರೆ. ಪತಿಯನ್ನು ಕಳೆದು ಕೊಂಡು ನಂತರ ಮಗನನ್ನು ಎರಡು ವರ್ಷಗಳ ನಂತರ ಕಂಡಾಗ ಆಕೆಗೆ ದುಃಖ ಒತ್ತರಿಸಿ ಬರುತ್ತದೆ.

ವಿದೇಶದಲ್ಲಿ ಮಗನಿಗಿಂತ ಅವನ ಸ್ನೇಹಿತ ನರೇಂದ್ರನೇ ಹತ್ತಿರದವನಾಗುತ್ತಾನೆ. ಮಗ ಸೊಸೆ ಇಬ್ಬರೂ ಸಂಪೂರ್ಣ ವಿದೇಶಿಯರೇ ಆಗಿರುತ್ತಾರೆ. ಉಡಿಗೆ-ತೊಡಿಗೆ, ವೇಷ-ಭೂಷಣ, ನಡತೆ ಎಲ್ಲದರಲ್ಲಿ ಅಪ್ಪಟ ಪಾಶ್ಚಾತ್ಯ ಸಂಸ್ಕೃತಿಯನ್ನೇ ಅನುಕರಿಸು ತ್ತಾರೆ. ಮಗನ ಗುಂಗುರ ಕೂದಲು ಮಾಯವಾಗಿ 'ಅಮೇರಿಕನ್ ಕಟ್' ಆಗಿರುತ್ತದೆ. ಸೊಸೆಯ ಉದ್ದ ಜಡೆಯೂ ಕತ್ತರಿಸಲ್ಪಟ್ಟಿರುತ್ತದೆ. ಗಂಡನೇ ಬದುಕಿರುವಾಗ ಹೆಂಡತಿಯ ಕೂದಲನ್ನು ಕತ್ತರಿಸುವುದು ಅವಲಕ್ಷಣವೆಂದು ಅವಳ ಅನಿಸಿಕೆ. ಮೊಮ್ಮಗಳು ಚಿತ್ರಾಳಿಗೆ (ಚಿಟ್ಟೀ) ಕನ್ನಡವೇ ಗೊತ್ತಿರುವುದಿಲ್ಲ. ಶಾರದೆಗೆ ಏಕಾಕಿತನ ಭಾವನೆ ಆವರಿಸುತ್ತದೆ.

ಸುಂದರನಿಗಿಂತಲೂ ಮೊದಲೇ ವಿದೇಶದಲ್ಲಿ ನೆಲೆಸಿದ್ದರೂ ನರೇಂದ್ರ ಅಪ್ಪಟ ಭಾರತೀಯನಾಗಿ ಉಳಿದಿರುತ್ತಾನೆ. ಅವನ ತಂದೆ-ತಾಯಿ ಇಬ್ಬರೂ ವಿದೇಶದಲ್ಲಿ ಸ್ವೇಚ್ಛೆಯಾಗಿ ಜೀವನ ನಡೆಸಿ ತಮಗೆ ಮನ ಬಂದ ಹೆಣ್ಣು-ಗಂಡುಗಳನ್ನು ಕಟ್ಟಿಕೊಂಡು ಹೊರಟುಹೋಗಿರುತ್ತಾರೆ. ನರೇಂದ್ರನ ಮನಸ್ಸಿಗೆ ಅಘಾತವಾಗಿ ವಿದೇಶಿ ಸಂಸ್ಕೃತಿಯ ಬಗೆಗೆ ಜಿಗುಪ್ಸೆಯುಂಟಾಗಿರುತ್ತದೆ ಅವನು ಶಾರದೆಯೊಡನೆ ಭಾರತಕ್ಕೆ ಮರಳಿ ಮಲೆನಾಡಿನಲ್ಲಿ ಎಸ್ಟೇಟೊಂದನ್ನು ಖರೀದಿಸುತ್ತಾನೆ. ಹಳ್ಳಿಯ ಸುಸಂಸ್ಕೃತ ಮುಗ್ಧ ಕನ್ಯೆ 'ಅಂಬಿಕೆ'ಯನ್ನು ಮದುವೆಯಾಗಿ ಜೀವನದಲ್ಲಿ ನೆಮ್ಮದಿ ಕಾಣುತ್ತಾನೆ.

ಭಾರತೀಯ ಸಾಮಾಜಿಕ, ಕೌಟುಂಬಿಕ, ಜೀವನದಲ್ಲಿ ಸಿಗಬಹುದಾದ ಪ್ರೀತಿ, ವಿಶ್ವಾಸ, ವಾತ್ಸಲ್ಯ, ಪಾಶ್ಚಾತ್ಯರಲ್ಲಿ ಸಿಗಲಾರದೆಂದು ಲೇಖಕಿ ನರೇಂದ್ರನ ಜೀವನದ ಹಿನ್ನೆಲೆಯಲ್ಲಿ ತೋರಿಸಿದ್ದಾರೆ. ತಂದೆ, ತಾಯಿಯ ಪ್ರೀತಿ, ವಾತ್ಸಲ್ಯಗಳಿಂದ ವಂಚಿತ ನಾದ ನರೇಂದ್ರ ಶಾರದೆಯಲ್ಲಿ ಅದನ್ನು ಪಡೆಯುವ ಉದ್ದೇಶದಿಂದ ಭಾರತಕ್ಕೆ ಮರಳಿ ಬರುತ್ತಾನೆ. ಶಾರದೆಗೆ ಆಧಾರವಾಗಿ ನಿಲ್ಲುತ್ತಾನೆ.

ಭಾರತೀಯ ಕೌಟುಂಬಿಕ ಜೀವನದ ಸುಖ–ಶಾಂತಿ ಬಂಧು ಪ್ರೀಯತೆ, ತಂದೆ, ತಾಯಿ ಮಕ್ಕಳಲ್ಲಿರುವ ಅನ್ಯೋನ್ಯತೆ ಅಲ್ಲಿ ಇರುವುದಿಲ್ಲವೆಂಬುದನ್ನು ಒಪ್ಪಿಕೊಳ್ಳು ತ್ತಾರೆ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಮಕ್ಕಳನ್ನು ಬೆಳೆಸುವ ವೈಜ್ಞಾನಿಕ ಕ್ರಮ ಶಿಸ್ತು, ಇವುಗಳನ್ನು ಮೆಚ್ಚಿಕೊಳ್ಳುತ್ತಾರೆ. ವಿದೇಶಕ್ಕೆ ಹೋದ 'ಶಾರದೆ' ಸಂಪ್ರದಾಯಶೀಲ ಭಾರತೀಯ ಗೃಹಿಣಿ. ಅವಳಿಗೆ ಹೆಚ್ಚಿನ ಶಿಕ್ಷಣವಿಲ್ಲ. ಆದ್ದರಿಂದ ಆಕೆ ಅಲ್ಲಿ ನೋಡಿದ್ದು ತಿಳಿದದ್ದು ತೀರಾ ಸಾಮಾನ್ಯ ಸಂಗತಿಗಳು.

ಎಲ್ಲ ಕಾದಂಬರಿಗಳಲ್ಲಿರುವಂತೆ ಈ ಕಾದಂಬರಿಯಲ್ಲಿಯು 'ಬಾಲವಿಧವೆ' ಚಿಕ್ಕಮ್ಮನ ಪಾತ್ರವಿದೆ. ಹಿರಿಯ ವಾತ್ಸಲ್ಯಜೀವಿ ಅವರ ಬದುಕೆ ಪವಿತ್ರ. ಶಾರದೆಯ ಮನೆತನಕ್ಕೆ ಆಕೆ ಒಂದು ದೊಡ್ಡ ಆಸರೆ. ಲೇಖಕಿಯೇ ಮುನ್ನುಡಿಯಲ್ಲಿ ಹೇಳಿರುವಂತೆ ಅವರ ಹತ್ತಿರದ ಬಂಧುಗಳಲೊಬ್ಬಾಕೆ ವಿದೇಶದಲ್ಲಿದ್ದು ತಾನು ಕಂಡದ್ದನ್ನು ವಿವರಿ ಸಿದ್ದಾಳೆ. ಅದನ್ನೆ ಇಲ್ಲಿ ಬರೆದಿದ್ದಾರೆ.

'ವಿವರಣೆ ಆಕೆಯದಾದರೂ ಕಥಾಭಾಗ ನನ್ನದು' ಎಂದು ಹೇಳಿದ್ದಾರೆ. ನೋಡದೆ ಇರುವ ವಿದೇಶದ ಬಗೆಗೆ ಬರೆಯುವಾಗ ಲೇಖಕಿಗೂ ಬರೆದರೇ ಹೇಗೋ ಎಂಬ ಅಳುಕು ಉಂಟಾಗಿದೆ.

'ಚಿದ್ವಿಲಾಸ' :

'ಚಿದ್ವಿಲಾಸ' ಕನ್ನಡ ಜನಪ್ರಿಯ ಪತ್ರಿಕೆ ಪ್ರಜಾವಾಣಿಯಲ್ಲಿ ಧಾರವಾಹಿಯಾಗಿ ಪ್ರಕಟವಾಗಿ ೧೯೭೧ ರಲ್ಲಿ ಹೇಮಂತ ಸಾಹಿತ್ಯದಲ್ಲಿ ಪ್ರಥಮ ಮುದ್ರಣ ಕಂಡಿದೆ. ಕಾಲೇಜಿನ ಕೊನೆಯ ವರ್ಷದ ವಿದ್ಯಾರ್ಥಿಗಳು ಪರೀಕ್ಷೆ ಮುಗಿಸಿ ನಂದೀಬೆಟ್ಟಕ್ಕೆ ಪ್ರವಾಸಕ್ಕೆ ಬಂದ ಅವರ ಜೀವನ ಹೇಗೆ ಒಂದೊಂದು ದಿಕ್ಕಿನತ್ತ ಸಾಗುತ್ತದೆ ಎಂಬು ದನ್ನು ಈ ಕಾದಂಬರಿಯಲ್ಲಿ ಕಾಣುತ್ತೇವೆ.

ತ್ರಿವೇಣಿಯವರ 'ಕಂಕಣ' ಎಂ. ಕೆ. ಇಂದಿರಾ ಅವರ 'ಚಿದ್ವಿಲಾಸ' ಇವು ವಸ್ತುವಿನ ದೃಷ್ಟಿಯಿಂದ ಒಂದನ್ನೊಂದು ಹೋಲುವ ಕೃತಿಗಳು ತ್ರಿವೇಣಿಯವರ 'ಕಂಕಣ ಕಾದಂಬರಿಯ ರಮಾ, 'ಅಂಬಿಕೆ', ವೇದವಲ್ಲಿ, ಸುಶೀಲ, ಅಮೃತಾ, ಕಸ್ತೂರಿ ಆರು ಜನ ಅವಿವಾಹಿತ ಯುವತಿಯರ ಜೀವನದ ಸಮಸ್ಯೆಗಳ ಸುತ್ತ ಹೆಣೆಯಲ್ಪಟ್ಟಿದೆ. ಆರು ಜನ ಯುತಿಯರದು ಒಂದೊಂದು ಬಗೆಯ ಸ್ವಭಾವ. ಭಿನ್ನಮನೋಭಾವದವರು

ಅವರು ಜೀವನದಲ್ಲಿ ಎದುರಾಗುವ ಸಮಸ್ಯೆಗಳನ್ನು ಒಂದೊಂದು ವಿಧವಾಗಿ ಸ್ವೀಕರಿಸಿ, ಭಿನ್ನ ಮನೋಧರ್ಮದ ನಿಲುವುಗಳನ್ನು ಹೊಂದಿದವರು. ಅವರು ತಮ್ಮ ಬದುಕನ್ನು ಪರಿಸ್ಥಿತಿಗೆ ತಕ್ಕಂತೆ ರೂಪಿಸಿಕೊಳ್ಳುತ್ತಾರೆ.

ಮನೆಗೆ ಹಿರಿಯಳಾಗಿ ಜನಿಸಿದ ರಮಾ, ತಂದೆ ಗತಿಸಿದ ನಂತರ ತಂದೆಯ ಸ್ಥಾನದಲ್ಲಿ ನಿಂತು ತಾಯಿ, ತಂಗಿ, ತಮ್ಮ ಇವರನ್ನು ಸಾಕುವ ಹೊಣೆ ಹೊತ್ತುಕೊಳ್ಳುತ್ತಾಳೆ. ಹೊರಗೆ ಕಷ್ಟಪಟ್ಟು ದುಡಿದು ಸಂಪಾದಿಸಿ ಕೊನೆಗೆ ತನ್ನನ್ನು ಪ್ರೀತಿಸುತ್ತಿದ್ದ ನಾಗೇಂದ್ರನ ಪ್ರೀತಿಯನ್ನು ನಿರಾಕರಿಸಿ ತನ್ನನ್ನೇ ನೆಚ್ಚಿಕೊಂಡಿರುವ ಕುಟುಂಬದ ಉದ್ಧಾರಕ್ಕಾಗಿ ಶ್ರೀಮಂತರ ಮನೆಯ ಕುರುಡನ ಕೈ ಹಿಡಿಯಲು ನಿರ್ಧರಿಸುತ್ತಾಳೆ.

ಬದುಕಿನಲ್ಲಿ ಬಂದದ್ದನ್ನು ಸಂತೋಷದಿಂದ ಸ್ವೀಕರಿಸುವ 'ಅಂಬಿಕೆ' ಮದುವೆಯಾಗಿ ಜೀವನದಲ್ಲಿ ತೃಪ್ತಿ ಹೊಂದುತ್ತಾಳೆ.

ತಾನು ಕಪ್ಪು ಬಣ್ಣದವಳೆಂದು ಭಾವಿಸುತ್ತಿದ್ದ 'ವೇದವಲ್ಲಿ' ಮದುವೆ ತಡವಾದಾಗ, ಕ್ರಿಶ್ಚಿಯನ್ ಜಾತಿಯ ಸಿತಾರ್ ಮೇಷ್ಟ್ರನನ್ನು ಪ್ರೀತಿಸುತ್ತಾಳೆ, ಆತನನ್ನು ಮದುವೆಯಾದ ಕೆಲ ದಿನಗಳಲ್ಲಿಯೇ ಆತ, ಕುಡುಕ, ಹಾಗೂ ವ್ಯಭಿಚಾರಿಯೆಂದು ತಿಳಿದು ಹೋಗುತ್ತದೆ. ಅವಳ ದಾಂಪತ್ಯ ಜೀವನ ವಿಫಲವಾಗುತ್ತದೆ.

ದುರ್ಬಲ ಸ್ವಭಾವದ ಸುಶೀಲಳ ಮದುವೆ ಎಂ. ಎ. ಪಾಸಾದವನೊಂದಿಗೆ ನಿಶ್ಚಯವಾಗುತ್ತದೆ. ಆತ ನಿರುದ್ಯೋಗಿಯಾದ್ದರಿಂದ ಬೇಸತ್ತು ದೇಶಾಂತರ ಹೊರಟು ಹೋಗುತ್ತಾನೆ. ನಿರಾಶಳಾದ ಸುಶೀಲ ಕೆಲಸಕ್ಕೆ ಸೇರಿ ಸ್ವೇಚ್ಛೆಯಾದ ಜೀವನ ನಡೆಸುತ್ತಾಳೆ.

ತಾನು ಪ್ರೀತಿಸಿದ ಯುವಕನಿಂದ ವಂಚಿತಳಾದ 'ಕಸ್ತೂರಿ' ಭಗ್ನ ಹೃದಯಿಯಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಇಬ್ಬರು ತಮ್ಮಂದಿರ ಮದುವೆಯಾದರೂ 'ಅಮೃತ' ಕನ್ಯೆಯಾಗಿ ಉಳಿಯುತ್ತಾಳೆ. ಈ ಕಾದಂಬರಿಯ ಬಹು ಭಾಗವನ್ನು 'ರಮಾ' ಆಕ್ರಮಿಸುತ್ತಾಳೆ.

ಎಂ. ಕೆ. ಇಂದಿರಾ ಅವರ 'ಚಿದ್ವಿಲಾಸ' ಕಾದಂಬರಿ ಕಾಲೇಜು ವಿದ್ಯಾರ್ಥಿನಿಯರಾದ 'ಭಾವನಾ' ರಮಾ, ಹಂಸಾ, ಕರುಣಾ, ಪರಿಮಳ, ಕೋಕಿಲ, ವಿದ್ಯಾರ್ಥಿಗಳಾದ ವಿವೇಕಾನಂದ, ರಾಧಾಕೃಷ್ಣ, ಮನೋಹರ ಗುಪ್ತಾ, ಇವರಲ್ಲದೆ ಅನುಷಂಗಿಕ ಪಾತ್ರಗಳಾದ 'ವಾಣಿ', ಕನ್ನಡ ಲೆಕ್ಚರರ, ಹಿರಿಯ ಪ್ರೊಫೆಸರ್ ಇವರ ಜೀವನದ ಸುತ್ತ ಹೆಣೆಯಲ್ಪಟ್ಟಿದೆ.

ಕಾದಂಬರಿಯ ಆರಂಭದಲ್ಲಿ ನಂದೀಬೆಟ್ಟಕ್ಕೆ ಪ್ರವಾಸ ಬಂದ ವಿದ್ಯಾರ್ಥಿಗಳು ತಮ್ಮ ಮುಂದಿನ ಜೀವನದ ಬಗೆಗೆ ಒಬ್ಬೊಬ್ಬರು ಒಂದೊಂದು ರೀತಿಯ ಕನಸು ಕಟ್ಟುತ್ತಾರೆ.

ನಿರ್ಲಿಪ್ತ ಸ್ವಭಾವದ ಪ್ರತಿಭಾವಂತ 'ಕರುಣಾ' ತನ್ನ ತಾತನಿಗೆ ಇನಾಮತಿ ಬಂದಿದ್ದ ಜಮೀನನ್ನು ಕೊಟ್ಟವರೇ ಕಿತ್ತುಕೊಂಡದ್ದರಿಂದ. ಅದನ್ನು ಮತ್ತೆ ಪಡೆಯಲು 'ಲಾ' ಓದುತ್ತೇನೆಂದು ನಿರ್ಧರಿಸಿ, ಎಲ್.ಎಲ್.ಬಿ.ಗೆ ಸೇರುತ್ತಾಳೆ.

'ಪರಿಮಳಾ' ತಾನು 'ಡ್ಯಾನ್ಸರ್' ಆಗಿ ಮೆರೆಯಬೇಕೆಂಬ ಹಂಬಲ ಹೊತ್ತವಳು. ಮುದ್ದಣ್ಣನ ಕಾವ್ಯವನ್ನು ಕುರಿತು ವಿಶೇಷ ಚರ್ಚೆಗಳಲ್ಲಿ ಭಾಗವಹಿಸುತ್ತಿದ್ದ 'ವಿವೇಕಾನಂದ' ತಾನು ಬಿ.ಟಿ.ಗೆ ಸೇರುತ್ತೇನೆಂದು ಹೇಳುತ್ತಾನೆ. ಬಡ ಕುಟುಂಬದ ಮನೋರಮಾ ಶಿಕ್ಷಣವನ್ನು ನಿಲ್ಲಿಸಿ ಕೆಲಸಕ್ಕೆ ಸೇರುವದಾಗಿ ಹೇಳುತ್ತಾಳೆ. ಗಡಸು ಸ್ವಭಾವದ 'ಹಂಸ' ತಾನು ಡಾಕ್ಟರ್ ಆಗಬೇಕೆಂದು ಬಯಸಿ ಮೆಡಿಕಲ್ ಕಾಲೇಜು ಸೇರುವೆನೆಂದು ಹೇಳುತ್ತಾಳೆ. ಮಲೆನಾಡಿನ ಯುವಕ ರಾಧಾಕೃಷ್ಣ ಗಂಭೀರ, ಸೌಜನ್ಯ ಸ್ವಭಾವದವನು ತಾನು ಮಲೆನಾಡಿನಲ್ಲಿಯೇ ಉಳಿದು ವಂಶಪಾರಂಪರ್ಯವಾಗಿ ಬಂದ ಬೇಸಾಯವನ್ನು ಮುಂದುವರಿಸುವ ನಿರ್ಧಾರ ಮಾಡುತ್ತಾನೆ. 'ಮನೋಹರ ಗುಪ್ತ' ತಾನು ಪತ್ರಿಕೋದ್ಯೋಮಿಯಾಗಿ ಸುಪ್ರಸಿದ್ಧ ವಿಮರ್ಶಕನಾಗಬೇಕೆಂಬ ಹಂಬಲವನ್ನು ಹೊತ್ತವನು.

ಪ್ರೊಫೆಸರ್‌ರು ಬಡ ಕುಟುಂಬದಲ್ಲಿ ಹುಟ್ಟಿ ಬೆಳೆದು ವಾರಾನ್ನದಿಂದ ವಿದ್ಯಾರ್ಥಿ ಜೀವನ ಕಳೆದು ಮುಂದೆ ಬಂದವರು ತುಂಬು ಸಂಸಾರಿ ಅವರು ಮಧ್ಯವಯಸ್ಸಿನಲ್ಲೂ ಉತ್ಸಾಹಿಗಳು, ಸಂಘ ಜೀವಿಗಳು. ಆದರೆ ಕನ್ನಡ ಅಧ್ಯಾಪಕನೊಬ್ಬನ ಬದುಕು ಮತ್ತೊಂದು ಬಗೆಯದು. ಜಾತಿಭೇದವೆಣಿಸದೆ ಬಡವರ ಮನೆಯ ಹುಡುಗಿಯನ್ನು ಉದ್ಧಾರ ಮಾಡುವ ಹಂಬಲದಿಂದ ಮದುವೆಯಾಗುತ್ತಾರೆ. ಆದರೆ ಕ್ಷುಲ್ಲಕ ಬುದ್ಧಿಯ ಹುಡುಗಿಗೂ ಆದರ್ಶವಾದಿ ಕನ್ನಡ ಲೆಕ್ಚರನ ವಿಚಾರಗಳಲ್ಲಿ ಭಿನ್ನಮತ. ಆಕೆ ಯಾರೊಂದಿಗೋ ಓಡಿ ಹೋಗುತ್ತಾಳೆ. ಜೀವನದಲ್ಲಿ ಒಂದೇ ಬಾರಿ ಮದುವೆ ಎಂದು ನಂಬಿದ ಅಧ್ಯಾಪಕ ಮರು ಮದುವೆಯನ್ನು ನಿರಾಕರಿಸಿ ಏಕಾಂಗಿಯಾಗಿ ಉಳಿಯುತ್ತಾನೆ.

'ಮಂಗೋಲ' ಎಂಬ ಶ್ರೀಮಂತ ಯುವಕ ತಾನು ಸಿನಿಮಾ ಡೈರಕ್ಟರನಾಗಬೇಕೆಂಬ ಹವಣಿಕೆಯಲ್ಲಿರುತ್ತಾನೆ, ವಯಸ್ಸಿಗೆ ಮೀರಿದ ಗಾಂಭೀರ್ಯ, ತಿಳುವಳಿಕೆ, ಪುಕ್ಕಲು ಸ್ವಭಾವ 'ಭಾವನಾ', ತ್ರಿವೇಣಿಯವರ ಕಂಕಣ ಕಾದಂಬರಿಯ 'ರಮಾ'ನಂತೆ ಬಡ ಕುಟುಂಬದವಳು. ರೂಪಾ, ಪ್ರೇಮಾ, ಮಮತಾ, ಮೂವರು ತಂಗಿಯರು. ಒಬ್ಬ ತಮ್ಮ, ಹಾಗೂ ಕಾಯಿಲೆಯಿಂದ ಹಾಸಿಗೆ ಹಿಡಿದಿರುವ ವಿಧವೆ ತಾಯಿ ಇವರನ್ನು ಸಾಕುವ ಹೊಣೆ ಹೊತ್ತವಳು. ತಾನು ಬಿ. ಎಡ್. ಮುಗಿಸಿ ಕೆಲಸಕ್ಕೆ ಸೇರುವ ತೀರ್ಮಾನ ಕೈಗೊಳ್ಳುತ್ತಾಳೆ. ಪ್ರತಿಭಾವಂತೆಯೂ ಚೆಲುವೆಯೂ ಆದ ರೂಪಾ ದಿಟ್ಟೆ. ಮನೆಯ ಯಾವ ತಾಪತ್ರಯಗಳನ್ನು ಅಂಟಿಸಿಕೊಳ್ಳದೇ ಓಡಾಡು

ತ್ತಾಳೆ. ತಾನು ಪ್ರೀತಿಸಿದ ಯುವಕನೊಂದಿಗೆ ಅಂತರ್‌ಜಾತೀಯ ವಿವಾಹವಾಗಿ ದೆಹಲಿಗೆ ಹೊರಟು ಹೋಗುತ್ತಾಳೆ.

ಎರಡನೆಯ ತಂಗಿ 'ಮಮತಾ'ಗೆ ಮನೆಯ ಪರಿಸ್ಥಿತಿಯ ಅರಿವಿದೆ. ಆದ್ದರಿಂದ ಆಕೆ ತನ್ನ ಶಿಕ್ಷಣವನ್ನು ಹೈಸ್ಕೂಲಿಗೇ ಮುಗಿಸಿ ಮನೆಯಲ್ಲಿ ತಾಯಿಯ ಸೇವೆ. ಮನೆ ಗೆಲಸವನ್ನು ಮಾಡಿಕೊಂಡಿರುತ್ತಾಳೆ. ಪ್ರೇಮಾ, ಆತ್ಮ, ಇನ್ನೂ ಚಿಕ್ಕವರು. ಬೆಳೆದಂತೆ ಅವರ ಅಭಿರುಚಿಗಳೇ ಬೇರೆಯಾಗುತ್ತವೆ.

ಪರೀಕ್ಷೆಯ ಫಲಿತಾಂಶ ತಿಳಿದಾಗ 'ಗುಪ್ತಾ' ಹಾಗೂ 'ತೇಜಾ' ಇಬ್ಬರನ್ನು ಬಿಟ್ಟು ಉಳಿದವರೆಲ್ಲ ತೇರ್ಗಡೆಯಾಗುತ್ತಾರೆ. ಒಬ್ಬೊಬ್ಬರು ಒಂದೊಂದು ಮಾರ್ಗ ವನ್ನು ಹಿಡಿಯುತ್ತಾರೆ.

ಭಾವನಾ ಬಿ. ಎಡ್. ಗೆ ಸೇರುತ್ತಾಳೆ. 'ಕರುಣಾ' ಲಾಯರ್ ಆಗುತ್ತಾಳೆ. ಬಂದದ್ದನ್ನು ಸಂತೋಷದಿಂದ ಸ್ವೀಕರಿಸುವ 'ಕೋಕಿಲ' ತಂದೆ–ತಾಯಿ ಗೊತ್ತು ಮಾಡಿದ ಡಾಕ್ಟರೇಟ್ ಪದವೀಧರನೊಂದಿಗೆ ಮದುವೆಯಾಗಿ ಜೀವನದಲ್ಲಿ ತೃಪ್ತಿ ಪಡೆಯುತ್ತಾಳೆ, 'ಹಂಸ' ಮೆಡಿಕಲ್ ಕಾಲೇಜಿಗೆ ಸೇರುತ್ತಾಳೆ,

ಭಾವನಾಳ ಹೈಸ್ಕೂಲಿನ ಸಹಪಾಠಿ 'ವಾಣಿ' ಯ ಜೀವನ ಮತ್ತೊಂದು ಬಗೆಯದು. ಪರೀಕ್ಷೆ ಮುಗಿದ ಕೆಲವೇ ದಿನಗಳಲ್ಲಿ 'ವಾಣಿ' ಹಾಗೂ ಭಾವನಾ ಭೇಟಿ ಯಾಗುತ್ತಾರೆ. 'ವಾಣಿ'. ಬಡವರ ಮನೆಯ ಹುಡುಗಿ. ಮನೆಯಲ್ಲಿ ಹಿರಿಯ ಮಗಳು. ಮಲಅಣ್ಣ ಮನೆಯಿಂದ ದೂರವಾಗಿದ್ದಾನೆ. ಕಾಯಿಲೆಯಿಂದ ಹಾಸಿಗೆ ಹಿಡಿದ ತಂದೆ ಬಡತನದಿಂದಾಗಿ ವಾಣಿಯ ಶಿಕ್ಷಣ ಹೈಸ್ಕೂಲಿಗೇ ಮುಕ್ತಾಯವಾಗುತ್ತದೆ ವಾಣಿಯದು ಮುಗ್ಧ ಸ್ವಭಾವ ಸುಂದರ ರೂಪ ಖಾಸಗೀ ಸಂಸ್ಥೆಯೊಂದರಲ್ಲಿ ಅವಳಿಗೆ ಅನೀರಿಕ್ಷಿತವಾಗಿ ಕೆಲಸ ಸಿಗುತ್ತದೆ. ಕೆಲಸ ಕೊಡಿಸಿದವರ ಬಗೆಗೆ ಕೃತಜ್ಞತಾ ಮನೋ ಭಾವನೆ ತಾಳುತ್ತಾಳೆ. ಕೆಲವೇ ದಿನಗಳಲ್ಲಿ ಕೆಲಸ ಕೊಡಿಸಿದವನೇ ಆಕೆಯನ್ನು ಮದುವೆಯಾಗುತ್ತಾನೆ. ತನ್ನ ಮನೆಯ ಬಡತನದಿಂದಾಗಿ ಬರುವ ಸಂಬಳವನ್ನು ತನ್ನ ತಾಯಿಗೆ ಕೊಡುವುದಾಗಿ ಕರಾರು ಮಾಡಿರುತ್ತಾಳೆ. ಮದುವೆಯಾದ ಒಂದು ವರ್ಷ ದಲ್ಲಿ ಒಂದು ಮಗುವೂ ಆಗುತ್ತದೆ. ಮಗು ಹುಟ್ಟಿದ ಕೆಲವೇ ದಿನಗಳಲ್ಲಿ ಆಕೆಯ ಗಂಡ—"ನಿನ್ನ ಮಗೂನ ನೀನೇ ಕಟ್ಟಿಕೊಂಡು ಹೋಗು. ನನಗೆ ಯಾಕೆ ಈ ರಗಳೆ, ಸಂಬಳದ ದುಡ್ಡು ನಂಗ್ಯಾರಲ್ಲ, ನಿಮ್ಮಪ್ಪನ ಮನೆಯೋರು ಅಲ್ಲಿ ತೊಗೊಂಡು ಹೋಗಿ ಬಿಡು" ಎಂದು ರಗಳೆ ಪ್ರಾರಂಭಿಸಿದಾಗ ಬೇಸತ್ತ 'ವಾಣಿ' ಮಗುವಿನೊಂದಿಗೆ ತವರಿಗೆ ಬರುತ್ತಾಳೆ. ಒಂದು ವಾರದಲ್ಲಿ ಆಕೆಯ ಗಂಡನೇ ಅವಳನ್ನು ಕೆಲಸದಿಂದ ತೆಗೆದು ಹಾಕಿಸುತ್ತಾನೆ. ಮುಗ್ಧ ಸ್ವಭಾವದ ವಾಣಿಯ ಜೀವನ ಮೋಸದ ಬಲೆಯಲ್ಲಿ ಸಿಕ್ಕು ಆಕೆ ಚಿಂತೆಯಿಂದ ಮನೋರೋಗಿಯಾಗುತ್ತಾಳೆ. ಗಂಡಸರೆಲ್ಲ ಮೋಸಗಾರರು ಎಂಬ ತೀರ್ಮಾನಕ್ಕೆ ಬರುತ್ತಾಳೆ,

ಸೂಕ್ಷ್ಮ ಸ್ವಭಾವದ 'ಭಾವನಾ' 'ವಾಣಿ'ಯ ನೆನಪು ಬಂದೊಡನೆ ಈ ಜನ್ಮದಲ್ಲಿ ಮದುವೆಯೇ ಬೇಡ ಎಂದುಕೊಳ್ಳುತ್ತಾಳೆ. ಮತ್ತೆ ಮದುವೆಯಾದರೆ ತನ್ನ ಮನಸ್ಸಿನಲ್ಲಿರುವಂತಹ ವ್ಯಕ್ತಿಯನ್ನೇ ಮದುವೆಯಾಗುತ್ತೇನೆಂಬ ತೀರ್ಮಾನಕ್ಕೆ ಬರುತ್ತಾಳೆ.

ಕಾಂಗ್ರೆಸ್ ವಸ್ತು ಪ್ರದರ್ಶನದಲ್ಲಿ 'ಕರುಣಾ' ಮತ್ತು 'ಹಂಸ' ಇವರನ್ನು ಕಾಣುತ್ತಾಳೆ, ಸ್ಥಿತಪ್ರಜ್ಞೆ 'ಕರುಣಾ' ತನ್ನ ಕುಟುಂಬಕ್ಕೆ ಸಂಬಂಧಿಸಿದ 'ಜಮೀನನ್ನು ಬಿಡಿಸಿಕೊಳ್ಳಲು ನೆರವಿಗೆ ಬಂದ ಲಾಯರ್‌ನನ್ನು ಮದುವೆಯಾಗುತ್ತಾಳೆ. ತಾನು ಹಿಡಿದ ಕೆಲಸದಲ್ಲಿ ಯಶಸ್ವಿಯಾಗುತ್ತಾಳೆ,

ವಿವೇಕಾನಂದನ ಮದುವೆ ಮಲೆನಾಡಿನ ಮುಗ್ಧ ಕನ್ಯೆಯೊಡನೆ ನಡೆದು ಆತನ ಜೀವನ ಸುಖಮಯವಾಗುತ್ತದೆ. 'ಮಂಗೋಲ' ನಮಸ್ಕಾರ' ಎಂಬ ಸಿನಿಮಾ ತೆಗೆದು ತನ್ನ ಹಂಬಲವನ್ನು ತೀರಿಸಿಕೊಳ್ಳುತ್ತಾನೆ. ಅದೇ ಸಿನಿಮಾದಲ್ಲಿ 'ಪರಿಮಳ' ನರ್ತಕಿಯ ಪಾತ್ರವಹಿಸುತ್ತಾಳೆ. 'ಮನೋಹರ' 'ಗುಪ್ತಾ' ವಿಮರ್ಶಕನಾಗಿ ತನ್ನ ಮನದಾಸೆಯನ್ನು ನೆರವೇರಿಸುತ್ತಾನೆ.

ಕನ್ನಡ ಅಧ್ಯಾಪಕ ಮಾನಸಿಕ ಹಾಗೂ ಟಿ. ಬಿ. ಕಾಯಿಲೆಯಿಂದ ಬಳಲಿ ಮರಣಕ್ಕೀಡಾಗುತ್ತಾನೆ. ಆದರ್ಶದ ಮಾರ್ಗದಲ್ಲಿ ಹೆಜ್ಜೆ ಇಟ್ಟ ಆತನ ಬದುಕು ನಿರರ್ಥಕವಾಗುತ್ತದೆ.

ಮೆಡಿಕಲ್ ಕಾಲೇಜಿಗೆ ಸೇರಿದ್ದ 'ಹಂಸಾ' ತನ್ನ ಸ್ನೇಹಿತೆಯ ಭಾವೀ ಪತಿ ಇಂಜನೀಯರೊಡನೆ ಚೆಲ್ಲಾಟವಾಡಿ ಗರ್ಭಿಣಿಯಾಗುತ್ತಾಳೆ. ಆತನನ್ನೂ ಕೊಂದು ತಾನೂ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ.

ಭಾವನಾಳ ಕುಟುಂಬದ ಆತ್ಮೀಯರೂ ಹಿರಿಯರೂ ಆಗಿದ್ದ ಸಂಗಪ್ಪನವರ ಮಧ್ಯಸ್ತಿಕೆಯಿಂದ 'ಭಾವನಾ' ತನ್ನ ತಂಗಿ ಮಮತಾಳ ಮದುವೆ ಮಲೆನಾಡಿನ ಯುವಕ ಸಹಪಾಟಿ ರಾಧಾಕೃಷ್ಣನೊಂದಿಗೆ ನೆರವೇರುತ್ತದೆ.

ಮೋಸಹೋದ 'ವಾಣಿ'ಯ ಜೀವನ, ಕನ್ನಡ ಅಧ್ಯಾಪಕನ ಹಾಗೂ ಗೆಳತಿ ಹಂಸ ಇವರ ದುರಂತ. ಇವು ಭಾವನಾಳಿಗೆ ಸಮಸ್ಯೆಯಾಗಿ ಪರಿಣಮಿಸುತ್ತವೆ. ಜಾತಿ ಮತ ಇವುಗಳ ಕಟ್ಟುಪಾಡುಗಳನ್ನು ಕಳಚಿ ತನ್ನ ಇಷ್ಟದಂತೆ ಮದುವೆಯಾದ ಲಾಯರ್ 'ಕರುಣಾ'ಳ ಮದುವೆ ಭಾವನಾಳ ಸಮಸ್ಯೆಗೆ ಪರಿಹಾರ ಸೂಚಿಸುತ್ತದೆ. ತನ್ನ ತಂಗಿ 'ರೂಪಾ'ನ ಅಂತರ್ಜಾತಿಯ ವಿವಾಹಕ್ಕೆ ಒಪ್ಪಿಗೆ ಕೊಟ್ಟದ್ದು ಒಳ್ಳೆಯದೇ ಆಯಿತು. ಇಲ್ಲವಾದರೆ 'ಹಂಸಾ'ಳಂತೆ ಆಕೆಯ ಜೀವನವೂ 'ದುರಂತ'ವಾಗುತ್ತಿತ್ತೇನೋ ಎಂದು ಭಾವಿಸುತ್ತಾಳೆ. 'ರೂಪಾ' ಜೀವನದಲ್ಲಿ ಸುಖಿಯಾಗುತ್ತಾಳೆ.

ಬಡ ಕುಟುಂಬದ 'ಮನೋರಮಾ' ಕೆಲಸಕ್ಕೆ ಸೇರಿ ಕೊನೆಗೆ ತನ್ನ ಸಹೋದ್ಯೋಗಿಯೊಂದಿಗೆ ಹಿರಿಯರ ಸಮ್ಮತಿ ಪಡೆದು ಮದುವೆಯಾಗುತ್ತಾಳೆ. ಗಡಸು

ಸ್ವಭಾವದ 'ಹಂಸ' ಅವಿವೇಕದಿಂದ ತನ್ನ ಜೀವನವನ್ನು ಕೊನೆಗಾಣಿಸಿಕೊಳ್ಳುವುದಲ್ಲದೆ 'ಮಾಯಾ'ಳ ಭಾವೀ ಪತಿಯನ್ನು ಕೊಂದು ಮೂರೂ ಕುಟುಂಬಗಳಿಗೆ ಸಮಸ್ಯೆಯನ್ನು ತಂದೊಡ್ಡುತ್ತಾಳೆ. 'ಕಂಕಣ'ದ ರಮಾಳಂತೆ ಪುಕ್ಕಲು ಸ್ವಭಾವದವಳೂ, ಸಂಪ್ರದಾಯಶೀಲೆಯೂ ಆದ 'ಭಾವನಾ' ಜೀವನದಲ್ಲಿ ಎದುರಾಗುವ ಸಮಸ್ಯೆಗಳನ್ನು ಧೈರ್ಯದಿಂದ ಎದುರಿಸುತ್ತಾಳೆ. ಪರಿಸ್ಥಿತಿಗೆ ತಕ್ಕಂತೆ ಬದಲಾಗುವ ಅವಳ ಮನೋಭಾವನೆ ಎದುರಾಗುವ ಸಮಸ್ಯೆಗಳಿಗೆ ಆಕೆ ಕಂಡುಕೊಳ್ಳುವ ಪರಿಹಾರ ಇವುಗಳ ನಿರೂಪಣೆ ಸಹಜವಾಗಿ ಬೆಳವಣಿಗೆ ಹೊಂದಿದೆ. ತನ್ನ ತಾಯಿ ತಂಗಿಯರು, ತಮ್ಮ, ಇವರಿಗಾಗಿ ತನ್ನ ಯೌವ್ವನದ ಆಸೆ ಆಕಾಂಕ್ಷೆಗಳನ್ನು ಬದಿಗೊತ್ತಿ ತಂದೆಯ ಸ್ಥಾನದಲ್ಲಿ ನಿಂತು ಮನೆತನದ ಎಲ್ಲ ಜವಾಬ್ದಾರಿಗಳನ್ನು ತೂಗಿಸಿಕೊಂಡು ಹೋಗುತ್ತಾಳೆ. ಎಲ್ಲರ ಶಿಕ್ಷಣ, ಮದುವೆ ಮುಗಿಸಿ ಕೊನೆಗೆ ಏಕಾಕಿಯಾಗಿ ಉಳಿಯುತ್ತಾಳೆ.

ತ್ರಿವೇಣಿಯವರ 'ಕಂಕಣ' ಕಾದಂಬರಿಯಲ್ಲಿ ಕಾದಂಬರಿಯ ಬಹು ಭಾಗವನ್ನು 'ರಮಾ' ಆಕ್ರಮಿಸಿದಂತೆ ಇಂದಿರಾ ಅವರ ಈ ಕಾದಂಬರಿಯಲ್ಲಿ ಭಾವನಾ ಆಕ್ರಮಿಸಿದ್ದಾಳೆ.

'ಕಂಕಣ'ದ 'ಅಂಬಿಕಾ' ಚಿದ್ವಿಲಾಸ'ದ 'ಕೋಕಿಲ' ಇಬ್ಬರೂ ಜೀವನದಲ್ಲಿ ಬಂದಿದ್ದನ್ನು ಸಂತೋಷದಿಂದ ಸ್ವೀಕರಿಸುವರು. 'ಕಂಕಣದ ಕಸ್ತೂರಿ' ಹಾಗೂ ಚಿದ್ವಿಲಾಸದ 'ಹಂಸ' ಇವರಲ್ಲಿ ಹೆಚ್ಚಿನ ವ್ಯತ್ಯಾಸ ಕಂಡುಬರುವುದಿಲ್ಲ. 'ಕಸ್ತೂರಿ' ಭಗ್ನ ಹೃದಯಿಯಾಗಿ ಆತ್ಮಹತ್ಯೆ ಮಾಡಿಕೊಂಡರೆ 'ಹಂಸ' ಅದಕ್ಕೂ ಒಂದು ಹೆಜ್ಜೆ ಮುಂದೆ ಹೋಗಿ ತನ್ನನ್ನು ಪ್ರೀತಿಸಿದವನನ್ನೂ ಕೊಂದು ಸೇಡು ತೀರಿಸಿಕೊಳ್ಳುತ್ತಾಳೆ.

'ರಾಧಾಕೃಷ್ಣ' 'ವಿವೇಕಾನಂದ' ಇವರ ಸಂಯಮದ ಸ್ವಭಾವದಿಂದ ವಿವೇಕದಿಂದಾಗಿ ಅವರ ಜೀವನ ಸುಗಮವಾಗುತ್ತದೆ. 'ರೂಪಾ' ತನ್ನ ಮುಂದಿನ ಜೀವನದ ಬಗೆಗೆ ತೆಗೆದುಕೊಳ್ಳುವ ನಿರ್ಧಾರ, ದಿಟ್ಟ ನಿಲುವು ಮೆಚ್ಚುವಂತಹುದು. ಆಕೆ ತನ್ನ ಸಮಸ್ಯೆಗೆ ತಾನೇ ಪರಿಹಾರ ಕಂಡುಕೊಳ್ಳುತ್ತಾಳೆ. 'ಕಂಕಣ' ಕಾದಂಬರಿಯ 'ರಮಾಳ' ತಂಗಿ ಜಾನಕಿ, ಇಂದಿರಾ ಅವರ (ತ್ರಿವೇಣಿ) 'ಬಿದಿಗೆ ಚಂದ್ರನು ಡೊಂಕು' ಕಾದಂಬರಿಯ 'ಗೋದಾವರಿ' ಚಿದ್ವಿಲಾಸದ 'ರೂಪಾ' ಇವೆಲ್ಲ ಒಂದೇ ಬಗೆಯ ಪಾತ್ರಗಳು.

ಹಲವಾರು ಪಾತ್ರಗಳನ್ನು ಅಳವಡಿಸಿಕೊಂಡ 'ಚಿದ್ವಿಲಾಸ'ದ ಎಲ್ಲ ಪಾತ್ರಗಳು ಸ್ವಾಭಾವಿಕ ಬೆಳವಣಿಗೆ ಹೊಂದಿ ಕಾದಂಬರಿ ಮುಕ್ತಾಯವಾಗುತ್ತದೆ. ಇಂದಿನ ಯುವ ಪೀಳಿಗೆ ಎದುರಿಸುತ್ತಿರುವ ನಿರುದ್ಯೋಗ, ಬಡತನ, ಅಂತರ್ಜಾತಿಯ ವಿವಾಹದ ಸಮಸ್ಯೆ, ಈ ಮೊದಲಾದ ಸಮಸ್ಯೆಗಳನ್ನು ಬಿಡಿಸಿ ನೋಡುವ ಪ್ರಯತ್ನವನ್ನು ಕಾದಂಬರಿಕಾರ್ತಿ ಇಂದಿರಾ ಅವರು ಮಾಡಿದ್ದಾರೆ. ವ್ಯಕ್ತಿಯ ಜೀವನದ ಹಿಂದೆ ಇರುವ ವಿಧಿಯ ಕೈವಾಡವನ್ನೂ ಇಲ್ಲಿ ಕಾಣಬಹುದು. 'ತಾನೊಂದು ಬಗೆದರೆ ದೈವವೊಂದು ಬಗೆಯಿತು' ಎನ್ನುವಂತೆ, ಕನ್ನಡ ಅಧ್ಯಾಪಕ ಆದರ್ಶ ಸಾಧಿಸಲು ಹೋಗಿ ನಿರಾಶನಾಗು

ವುದು. 'ಭಾವನಾ'ಳ ಮೆಚ್ಚಿನ ಸಹಪಾಠಿಯೊಂದಿಗೆ ತಂಗಿ 'ಮಮತಾ'ಳ ಮದುವೆ ಅನಿರೀಕ್ಷಿತವಾಗಿ ನಡೆಯುವುದು ಹಾಗೂ ಪಂಸಾನ ದುರಂತ ಜೀವನ, ಇಲ್ಲೆಲ್ಲ ವಿಧಿ ವಿಲಾಸವನ್ನು ಕಾಣುತ್ತೇವೆ. ಬಡತನದಲ್ಲಿ ವಿದ್ಯಾರ್ಥಿ ಜೀವನ ಮುಗಿಸಿ ನೆಮ್ಮದಿಯ ಸಂಸಾರಹೊಂದಿ ತುಂಬು ಬಾಳನ್ನು ಬಾಳಿದ ಪ್ರೊಫೆಸರ್‌ರ ಜೀವನ ಸಾರ್ಥಕವಾಗುತ್ತದೆ.

೧೯೭೧ರಲ್ಲಿ ಬಂದ ಕಾದಂಬರಿಗಳನ್ನು ಸಮೀಕ್ಷೆ ಮಾಡಿದ ಜಿ.ಎಸ್. ಶಿವರುದ್ರಪ್ಪನವರು ಮಹಿಳೆಯರ ಕಾದಂಬರಿಗಳ ಬಗೆಗೆ ಬರೆಯುತ್ತ—

ವಾಣಿಯವರ 'ಅನಿರೀಕ್ಷಿತ' ಹಾಗೂ ಇಂದಿರಾ ಅವರ 'ಚಿದ್ವಿಲಾಸ' ಇವು ಇದ್ದುದರಲ್ಲಿಯೇ ಆ ವರ್ಷದಲ್ಲಿ ಬಂದ ಉತ್ತಮ ಕೃತಿಗಳೆಂದು ಹೆಸರಿಸಿದ್ದಾರೆ.[1] ಆರಂಭದಲ್ಲಿ ಕಾಲೇಜು ಹುಡುಗ ಹುಡುಗಿಯರು ನಂದೀ ಬೆಟ್ಟದಲ್ಲಿ ಪ್ರವಾಸ ಬಂದ ಸಂದರ್ಭ, ಅನಂತರ ಕಾಲೇಜು ತರಗತಿ ಪ್ರೊಫೆಸರ್‌ಗಳು ತರಗತಿಯಲ್ಲಿ ಪಾಠ ಮಾಡುವ ವಿಧಾನ ಇತ್ಯಾದಿಗಳನ್ನು ಓದುತ್ತಿದ್ದಂತೆ ಲೇಖಕಿ ತಮಗೆ ಬಹುಶಃ ಪರಿಚಿತವಲ್ಲದ ಹಾಗೂ ಅನುಭವಕ್ಕೆ ದೂರವಾದ ಇಂಥ ವಸ್ತುವನ್ನು ಯಾಕೆ ಎತ್ತಿಕೊಂಡರೋ ಅದರಿಂದಲೇ ಇಷ್ಟು ಕೃತಕವಾಗಿ ಬರೆಯುತ್ತಿದ್ದಾರೋ ಅನ್ನಿಸಿದರೂ ಕೆಲವು ಪುಟಗಳ ನಂತರ ಅವರ ಬರವಣಿಗೆ ತಮ್ಮತನಕ್ಕೆ ಬಂದು ನಿಲ್ಲುತ್ತದೆ. ಎಂಟು ವರ್ಷಗಳಲ್ಲಿ 'ಕ್ಲಾಸ್‌ಮೇಟ್'ಗಳಾಗಿದ್ದ ಒಬ್ಬೊಬ್ಬರ ಬದುಕೂ ಗಾಳಿಗೆ ಒಡ್ಡಿದ ಕಾಗದದ ಚೂರುಗಳಂತೆ ಚದುರಿ ಹೋಗುತ್ತದೆ. ಅದರಲ್ಲಿ ಭಾವನಾ ಎಂಬ ಹುಡುಗಿಯು ತಾನು ತಂದೆ–ತಾಯಿಂದಿರಿಲ್ಲದೆ ಮನೆಯಲ್ಲಿ ಜವಾಬ್ದಾರಿ ಹೊತ್ತು ಸಂಸಾರ ನಡೆಸುತ್ತಾಳೆ. ತನ್ನ ತಂಗಿಯರಲ್ಲಿ ಒಬ್ಬಳು ಅಂತರ್ ಜಾತಿಯ ವಿವಾಹ ಮಾಡಿಕೊಡುತ್ತಾಳೆ. ಇನ್ನೊಬ್ಬಳನ್ನು ಮಲೆನಾಡಿನ ವರನಿಗೆ ಕೊಟ್ಟು ಮದುವೆ ಮಾಡುತ್ತಾಳೆ. ಮಲೆನಾಡಿನ ಪರಿಸರದ ಚಿತ್ರಣ ಬಂದಾಗ, ನಮಗೆ ಇಂದಿರಾ ಅವರ ಹಿಂದಿನ ಕಾದಂಬರಿಗಳ ವಾತಾವರಣಕ್ಕೆ ಬಂದಂತಾಗುತ್ತದೆ. ಎಲ್ಲರಿಗೂ ಮದುವೆಮಾಡಿ ತಾನೊಬ್ಬಳು ಒಂಟಿಯಾಗಿ ನಿಲ್ಲುವ ಭಾವನಾಳ ಏಕಾಕಿತನದೊಂದಿಗೆ ಕಾದಂಬರಿ ಮುಕ್ತಾಯವಾಗುತ್ತದೆ. ಮನುಷ್ಯನ ಬದುಕಿನ ಸ್ಥಿತ್ಯಂತರ ಅದರ ನಡುವೆ ಅಸಹಾಯಕರಾಗಿ ನಿಂತ ವ್ಯಕ್ತಿಗಳ ಬದುಕು, ಅದರ ಹಿಂದೆ ಇರುವ ಕಾಣದ ಕೈಯೊಂದರ ಕೈವಾಡ ಇವುಗಳ ತಾತ್ವಿಕ ಪರಿಭಾವನೆಯ ಉದ್ದೇಶ ಸಾರ್ಥಕವಾಗಿದೆ.[2] ಎಂದಿದ್ದಾರೆ.

ಈ ಕಾದಂಬರಿಯಲ್ಲಿ ಇಂದಿರಾ ಅವರು ಎತ್ತಿಕೊಂಡ ಸಮಸ್ಯೆಗಳು ವಾಸ್ತವವಾದವುಗಳು. ಬಡತನದಿಂದಾಗಿ 'ಭಾವನಾ' ಕೆಲಸಕ್ಕೆ ಸೇರಿ ಎಲ್ಲ ಜವಾಬ್ದಾರಿ

---

1. ಜಿ. ಎಸ್. ಶಿವರುದ್ರಪ್ಪ 'ಸಾಹಿತ್ಯ ವಾರ್ಷಿಕ' 1971, ಪುಟ–109.
2. —ಅದೇ— ಪುಟ–110.

ಯನ್ನು ಹೊತ್ತು ತನ್ನನ್ನೇ ನೆಚ್ಚಿದ ತಾಯಿ ಹಾಗೂ ಒಡಹುಟ್ಟಿದವರಿಗಾಗಿ ಆಕೆ ತ್ಯಾಗ ಮಾಡುವದು ಅನಿವಾರ್ಯವಾಗುತ್ತದೆ.

ಅಂತರ್‌ಜಾತಿಯ ವಿವಾಹ ಇಂದಿನ ಸಮಾಜದ ಅನೇಕ ಕುಟುಂಬಗಳಲ್ಲಿ ಬಂದೊದಗುವ ಜಟಿಲ ಸಮಸ್ಯೆ. 'ರೂಪಾ' ಕಂಡುಕೊಳ್ಳುವ ಪರಿಹಾರವೇ ಇದಕ್ಕೆ ಸೂಕ್ತವಾದುದು.

ನಿರುದ್ಯೋಗಿ ಪುರುಷರ ಸಂಖ್ಯೆ ಹೆಚ್ಚುತ್ತಿರುವುದರಿಂದ ಅವಿವಾಹಿತ ಯುವತಿಯರ ಸಂಖ್ಯೆಯೂ ಬೆಳೆಯುತ್ತದೆ. ಬಡತನ, ಮಧ್ಯಮ ವರ್ಗದ ಕುಟುಂಬದ ವಿದ್ಯಾವಂತ ಮಹಿಳೆ ಹೊರಗೆ ದುಡಿಯುವದು ಅನಿವಾರ್ಯವಾಗುತ್ತದೆ. 'ಕಂಕಣ'ದ 'ರಮಾ' ಚಿದ್ವಿಲಾಸದ 'ಭಾವನಾ' ಮನೋರಮಾ ಇವರು ದುಡಿಯದೇ ವಿಧಿಯಿಲ್ಲ. ವಾಸ್ತವ ಸಮಸ್ಯೆಗಳನ್ನು ಈ ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ.

ಪಾತ್ರಗಳೇ ಪ್ರಧಾನವಾಗಿರುವ ಈ ಕಾದಂಬರಿ ತಾತ್ವಿಕವಾಗಿಯೂ ಗಹನವಾಗಿದ್ದು ವಸ್ತುವೂ ಗಂಭೀರವಾಗಿದೆ.

ಎಂ ಕೆ. ಇಂದಿರಾ ಅವರ ಅನೇಕ ಉತ್ತಮ ಕಾದಂಬರಿಗಳಲ್ಲಿ ಇದೂ ಒಂದು ತ್ರಿವೇಣಿಯವರ 'ಕಂಕಣ' ಹಾಗೂ 'ಚಿದ್ವಿಲಾಸ' ಇವು ಎರಡೂ ಯುವ ಜನಾಂಗದ ಸಮಸ್ಯೆಯನ್ನೊಳಗೊಂಡ ಉತ್ತಮ ಕಾದಂಬರಿಯೆನ್ನಬೇಕಾಗುತ್ತದೆ.

'ಟು-ಲೆಟ್' :

ಎಂ. ಕೆ. ಇಂದಿರಾ ಅವರ 'ಟು-ಲೆಟ್' ಕಾದಂಬರಿ 'ಪ್ರಜಾವಾಣಿ'ಯಲ್ಲಿ ಧಾರಾವಾಹಿಯಾಗಿ ಬೆಳಕಿಗೆ ಬಂದದ್ದು, ೧೯೭೯ರಲ್ಲಿ ಎಸ್. ಆರ್. ಪ್ರಕಾಶನದಿಂದ ಪುಸ್ತಕರೂಪದಲ್ಲಿ ಪ್ರಥಮ ಮುದ್ರಣ ಕಂಡಿದೆ. 'ಟು-ಲೆಟ್' ಕಾದಂಬರಿಯಲ್ಲಿ ಲೇಖಕಿ ಮಧ್ಯಮ ವರ್ಗದ ಪ್ರಜೆಗಳು ಬಾಡಿಗೆ ಮನೆಯಲ್ಲಿ ಪಡುವ ಬವಣೆಗಳನ್ನು ಅನುಭವಿಸಬೇಕಾದ ತೊಂದರೆಗಳನ್ನು ಚಿತ್ರಿಸಿದ್ದಾರೆ. 'ಮನೆಕೊಟ್ಟು ನೋಡಿ' ಕಾದಂಬರಿಯಲ್ಲಿ ಮನೆ ಮಾಲೀಕರು ಬಾಡಿಗೆದಾರರಿಂದ ಸಹಿಸಬೇಕಾದ ಕಿರುಕುಳಗಳನ್ನು ಚಿತ್ರಿಸಿದ್ದಾರೆ. ಹೀಗಾಗಿ ಈ ಎರಡೂ ಕಾದಂಬರಿಗಳೂ ಸಮಕಾಲೀನ ನಗರ ಜೀವನದಲ್ಲಿ ಮಧ್ಯಮ ವರ್ಗದ ಪ್ರಜೆಗಳ ಸಮಸ್ಯೆಗಳನ್ನು ಅವರ ಬದುಕಿನ ರೀತಿಯನ್ನೂ ಚಿತ್ರಿಸುತ್ತದೆ.

ವಿ. ಸೂ. : ಎಸ್. ವಿ. ವಿಮಲ ಅವರು 'ತ್ರಿವೇಣಿ' ವ್ಯಕ್ತಿ ಮತ್ತು ಸಾಹಿತ್ಯ ಎಂಬ ಗ್ರಂಥದಲ್ಲಿ ತ್ರಿವೇಣಿಯವರ 'ಕಂಕಣ' ಕಾದಂಬರಿಯ ವಿಮರ್ಶೆಯಲ್ಲಿ 'ಕಂಕಣ'ದೊಂದಿಗೆ ಎಂ. ಕೆ. ಇಂದಿರಾ ಅವರ 'ಚಿದ್ವಿಲಾಸ' ಹಾಗೂ ಎಸ್. ಎಲ್. ಭೈರಪ್ಪನವರ 'ದೂರ ಸರಿದರು' ಈ ಕಾದಂಬರಿಯನ್ನು ಹೋಲಿಸಿ ನೋಡಬಹುದು–ಎಂದಿದ್ದಾರೆ. ಅವರ ಸಲಹೆಯಂತೆ ಇಲ್ಲಿ ಎಂ. ಕೆ. ಇಂದಿರಾ ಅವರ 'ಚಿದ್ವಿಲಾಸ' ಹಾಗೂ 'ತ್ರಿವೇಣಿ' ಅವರ 'ಕಂಕಣ' ಎರಡೂ ಕಾದಂಬರಿಗಳನ್ನು ಹೋಲಿಸಲಾಗಿದೆ.

ಇಂದಿರಾ ಅವರ ಹನ್ನೊಂದು ಕಾದಂಬರಿಗಳನ್ನು ಸಮೀಕ್ಷೆ ಮಾಡಿದ ಕೆ. ವಿಜಯಶ್ರೀ ಅವರು 'ಟು–ಲೆಟ್' ಕಾದಂಬರಿಯನ್ನು ಕುರಿತು ಇವರ ಇತರ ಕಾದಂಬರಿಗಳಿಗಿಂತ ಬೇರೆಯಾದ ತನ್ನತನವನ್ನುಳಿಸಿಕೊಂಡ ಕೃತಿ 'ಟು–ಲೆಟ್' ಅದರಲ್ಲೂ ಶೀರ್ಷಿಕೆ ಇದರ ವೈಶಿಷ್ಟ್ಯ.[1] ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದಾರೆ.

ಈ ಕಾದಂಬರಿ ಪ್ರಜಾವಾಣಿಯಲ್ಲಿ ಪ್ರಕಟವಾದಾಗ ಓದುಗರು ಲೇಖಕಿಗೆ ಕೃತಿಯ ಬಗ್ಗೆ ತಮ್ಮ ಮೆಚ್ಚುಗೆ ಸೂಚಿಸಿ ಪತ್ರಗಳನ್ನು ಬರೆದಿದ್ದರು. ಕಹಿಯಾದ ಕಟು ಸತ್ಯವನ್ನೇ ಓದುತ್ತಿದ್ದರೂ ಉದ್ದಕ್ಕೂ ನಗುವೇ ಎದ್ದು ಕಂಡಿದೆ, ಎಂದು ಒಬ್ಬರು, ಒಳ್ಳೆ ಡಾಕ್ಯುಮೆಂಟರಿ ಇದ್ದ ಹಾಗಿದೆ ಎಂದವರು ಮತ್ತೊಬ್ಬರು. ಹೀಗೆ ಸಂತಸದ ಹಲವು ಅಭಿಪ್ರಾಯಗಳು ಬಂದವು.[2]

ಈ ಕಾದಂಬರಿಯಲ್ಲಿ ಲೇಖಕಿಯೇ ತಾನೊಂದು ಪಾತ್ರವಾಗಿ ಅನುಭವ ಗಳನ್ನು ನಿರೂಪಿಸುತ್ತ ಹೋಗುವುದರಿಂದ ಕಾದಂಬರಿಗೆ ಸ್ವಾರಸ್ಯ ಹೆಚ್ಚಿದೆ. ಶಿವಮೊಗ್ಗೆಯಲ್ಲಿ ಸ್ವಂತಮನೆಯಲ್ಲಿ ಸಂತೃಪ್ತಿಯಿಂದ ವಾಸಿಸಿದ ಲೇಖಕಿಯು ಪತಿಗೆ ಬೆಂಗಳೂರಿಗೆ ವರ್ಗವಾದಾಗ. ಮನೆಯ ಅನ್ವೇಷಣೆಗಾಗಿ ತಮ್ಮ ಸಮೀಪದ ಸಂಬಂಧಿ ರುಕ್ಕಮ್ಮನ ಮನೆಯಲ್ಲಿ ಇಳಿದುಕೊಳ್ಳುತ್ತಾರೆ. ಮನೆಯ ಅನ್ವೇಷಣೆ ಪ್ರಾರಂಭವಾಗುತ್ತದೆ.

ಲೇಖಕಿ ಕಂಡ ವಠಾರಗಳು ಹಲವಾರು. ಮೊದಲನೆಯ ವಠಾರದ ಮಾಲೀಕ ಮೇಸ್ತ್ರಿ. ಚಿಕ್ಕ ವಠಾರಗಳನ್ನು ಕಟ್ಟಿಸಿ ಮನೆ ಬಾಡಿಗೆಗೆ ಕೊಡುವುದು ನಗರಗಳಲ್ಲಿ ಒಂದು ಉದ್ಯಮವಾಗಿ ಬೆಳೆದಿದೆ. ಒಂದೇ ನಲ್ಲಿಯ ನೀರಿಗಾಗಿ ವಠಾರದ ಮನೆಗಳ ಹೆಂಗಸರು ನೀರಿಗಾಗಿ ಜಗಳಾಡುತ್ತಾರೆ. ಬೇರೆ ಬೇರೆ ಭಾಷೆಗಳನ್ನಾಡುವ ಬೇರೆ ಬೇರೆ ಜಾತಿಯ ಜನರು ಅವರೆಲ್ಲ ತೀರಾ ಬಡವರು. ನೀರಿನ ಕೊರತೆಯಿದ್ದರೂ, ಕೊಳಚೆಯಿಂದ ತುಂಬಿದ ವಠಾರದಲ್ಲಿ ಬದುಕಬೇಕಾಗಿದೆ.

ಎರಡನೆಯ ವಠಾರ ಕೃಷ್ಣಶಾಸ್ತ್ರಿಗಳದು. ರುಕ್ಕಮ್ಮನ ವಠಾರದ ಕಾಮಾಕ್ಷಮ್ಮ ನೊಡನೆ ಶಾಸ್ತ್ರಿಗಳ ವಠಾರಕ್ಕೆ ಹೋಗುತ್ತಾರೆ. ಹತ್ತೆಂಟು ಸಂದಿಗೊಂದಿಗಳನ್ನು ದಾಟಿ ಕತ್ತಲೆಯ ಜಾಗದಲ್ಲಿ ಮನೆಯನ್ನು ತೋರಿಸಿದಾಗ ಅದನ್ನು ಕಂಡ ಲೇಖಕಿಗೆ ರುಕ್ಕಮ್ಮನ ವಠಾರವೇ ಸಾವಿರಪಾಲು ವಾಸಿ ಎನಿಸುತ್ತದೆ. ಕೃಷ್ಣಶಾಸ್ತ್ರಿಗಳದು ಮಡಿ ಮೈಲಿಗೆಗಳ ಅವಾಂತರ. ಬೆಂಗಳೂರಿನಂತಹ ಪಟ್ಟಣಗಳಲ್ಲಿ ಇಂದ್ರಾಕ್ಷಿ ಯಂತ್ರ–ಮಂತ್ರ ಅವರಿಗೆ ಬದುಕುವ ಮಾರ್ಗವನ್ನೂ ತೋರಿಸಿದೆ. ಕಾರ್ಪೊರೇಶನ್

---

1. ಜೀವನ ಸಂ. 31, ಸಂಚಿಕೆ–1, 'ಇಂದಿರಾ ಅವರ ಕಾದಂಬರಿಗಳು ಒಂದು ಸಮೀಕ್ಷೆ' ಪುಟ–28.
2. ಎಂ. ಕೆ. ಇಂದಿರಾ 'ಟು–ಲೆಟ್' ಮುನ್ನುಡಿ

ನವರಿಗೆ ನೀರಿನ ಹಣ ಸಲ್ಲಿಸಬೇಕಾಗುವದರಿಂದ ಆ ವಠಾರದವನಿಗೆ ಬಾವಿಯ ನೀರೆ ಗತಿ.

ರುಕ್ಕಮ್ಮನ ಮನೆಗೆ ಆತ್ಮೀಯರಾಗಿದ್ದ ಕೋದಂಡುವಿನ ಜೊತೆಗೆ ಮನೆ ನೋಡಲು ಹೋದಾಗ 'ಟು–ಲೆಟ್' ಬೋರ್ಡು ಮಾಯವಾಗಿ 'ಟೂ–ಲೆಟ್' ಬೋರ್ಡನ್ನು ತಗುಲಿಸಿರುತ್ತಾರೆ. ಹಿಂದಿನ ದಿನ ಖಾಲಿ ಇದ್ದ ಮನೆ ಮರುದಿವಸಕ್ಕೆ ಭರ್ತಿಯಾಗಿರುತ್ತದೆ. ಇಂದಿನ ಪಟ್ಟಣಗಳಲ್ಲಿ ಬೆಳೆಯುತ್ತಿರುವ ಜನಸಂಖ್ಯೆಯನ್ನು ಇದು ತೋರಿಸುತ್ತದೆ.

ಕುಲ–ಗೋತ್ರ, ತಾತ–ಮುತ್ತಾತಂದಿರ ಪ್ರವರಗಳನ್ನು ವಿಚಾರಿಸಿ ಬಾಡಿಗೆ ದಾರರಿಗೆ ಮನೆಗಳನ್ನು ಕೊಡುವ ಮಾಲೀಕರಿಗೇನೂ ಕೊರತೆಯಿಲ್ಲ. ಲೈಸನ್ಸ್ ಇಲ್ಲದೇ ಪೋಲೀಸರಿಗೆ ಲಂಚಕೊಟ್ಟು ಮನೆಗಳನ್ನು ಕಟ್ಟಿ ಬಾಡಿಗೆ ಕೊಡುವ ಅವ್ಯವಹಾರ ಪಟ್ಟಣಗಳಲ್ಲಿ ಸರ್ವೇಸಾಮಾನ್ಯ. ಮಾಮೂಲು ತಪ್ಪಿದರೆ ಜಗಳಾಟ.

ಎಲ್ಲ ಸೌಕರ್ಯಯುತವಾದ ಐವತ್ತು ರೂಪಾಯಿಯ ಬಾಡಿಗೆ ಮನೆ ದೊರೆತಾಗ ನೆಮ್ಮದಿ ಎನಿಸಿದರೂ ಕೆಲವೇ ದಿನಗಳಲ್ಲಿ ಆ ಮನೆಯ ಒಡತಿ ಒಬ್ಬ ವೇಶ್ಯೆ ಎಂಬ ಸತ್ಯ ಬಯಲಾಗುತ್ತದೆ. ಕಳ್ಳ ವ್ಯಾಪಾರಿಯೊಡನೆ ಸಂಬಂಧವನ್ನಿರಿಸಿಕೊಂಡ ಆಕೆ ವೇಶ್ಯಾವಾಟಿಕೆಗೆ ಕಳ್ಳ ವ್ಯವಹಾರಕ್ಕೆ ಪ್ರೋತ್ಸಾಹ ಕೊಡುತ್ತಿರುವ ವಿಷಯ ತಿಳಿಯು ತ್ತದೆ.

ಲೇಖಕಿ ಕಂಡ ವಿವಿಧ ವಠಾರಗಳ ಚಿತ್ರಣ ವಿವಿಧ ಮನೋಭಾವನೆಯುಳ್ಳ ಮಾಲೀಕರು, ನೆರೆ–ಹೊರೆ ಅವರ ಮಾತಿನ ವೈಖರಿ ಅತ್ಯಂತ ಸ್ವಾರಸ್ಯಯುತವಾಗಿ ಮೂಡಿಬಂದಿವೆ. ದೊಡ್ಡ ದೊಡ್ಡ ನಗರಗಳಲ್ಲಿ ದಿನನಿತ್ಯ ನಡೆಯುವ ರಾಜಕೀಯ, ಕೊಲೆ, ಸುಲಿಗೆ, ಕಳ್ಳತನ, ಡಂಭಾಚಾರ, ಅವ್ಯವಹಾರ ಇತ್ಯಾದಿ ಇಂದಿನ ಸಾಮಾಜಿಕ ಚಿತ್ರಣ ಇಲ್ಲಿದೆ.

ಪ್ರಜೆಗಳೇ ಈ ಕಾದಂಬರಿಯ ನಾಯಕರು. ಶ್ರೀ ನಿರಂಜನ 'ರಂಗಮ್ಮನ ವಠಾರ' ಕಾದಂಬರಿಯಲ್ಲಿ ವಠಾರದ ಜೀವನ ಸಾಂಕೇತಿಕವಾಗಿ ಚಿತ್ರಿತವಾಗಿರುವಂತೆ 'ಟು–ಲೆಟ್' ಕಾದಂಬರಿಯಲ್ಲೂ 'ರುಕ್ಕಮ್ಮನ' ವಠಾರದ ಚಿತ್ರಿತವಾಗಿದೆ. ರುಕ್ಕಮ್ಮನ ವಠಾರ ವೆಂದರೆ ಒಂದು ಚಿಕ್ಕ ಪ್ರಪಂಚ. ಕಾದಂಬರಿಯನ್ನು ಕೈಗೆತ್ತಿಕೊಂಡಾಗ ಮೇಲ್ನೋಟಕ್ಕೆ ನಗರಗಳಲ್ಲಿ ಬಾಡಿಗೆಯ ಮನೆಯ ಸಮಸ್ಯೆ ಈ ಕಾದಂಬರಿ ವಸ್ತು ಎನಿಸಿದರೂ ಇಲ್ಲಿ ಒಂದು ಸಮಾಜದ ಜೀವನಕ್ರಮವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಲಾಗಿದೆ.

ಶ್ರೀ ನಿರಂಜನರು 'ರಂಗಮ್ಮನ ವಠಾರದ' ಬಗ್ಗೆ ಬರೆಯುತ್ತ—"ಇದು ವಾಸ್ತವ ಜೀವನವನ್ನು ಅವಲಂಬಿಸಿದ್ದೊಂದು ಕಟ್ಟುಕತೆ. ಇದನ್ನೋದುವಾಗ ಓದುಗರಿಗೆ ವಿವಿಧ ರಸಾನುಭವವಾದೀತು ಎನ್ನುವ ನನ್ನ ನಂಬುಗೆ ಓದಿಯಾದ ಮೇಲೂ ನಮ್ಮ ಸಮಾಜ ವೊಂದು ಜನ ವಿಭಾಗದ ಜೀವನ ಚಿತ್ರ ಅವರ ನೆನಪಿನಲ್ಲಿ ಉಳಿಯಬೇಕು. ಆ ಚಿತ್ರ

ಬದುಕಿನ 'ಏನು ?' 'ಯಾಕೆ'ಗಳನ್ನು ಪ್ರಚೋದಿಸುವಂತಾಗಬೇಕು" ಎಂದು ಹೇಳಿದ್ದಾರೆ.

ಈ ಕಾದಂಬರಿಯಲ್ಲೂ ವಿವಿಧ ವಠಾರಗಳ ಜೀವನ ಚಿತ್ರ ಕಣ್ಣಿಗೆ ಕಟ್ಟುತ್ತದೆ. ಹುಟ್ಟು, ಸಾವು, ಮದುವೆ, ಪರಾನ್ವೇಷಣೆ ಇತ್ಯಾದಿ ಬದುಕಿನ ಸಹಜ ವ್ಯಾಪಾರಗಳು, ಕಷ್ಟ-ಕೋಟಲೆಗಳು, ಗೇಣು ಹೊಟ್ಟೆಯ ಚೀಲವನ್ನು ತುಂಬಿಸಿಕೊಳ್ಳುವುದಕ್ಕಾಗಿ ಮಾನವನ ಪರದಾಟ ನಿರಂತರವಾಗಿ ನಡೆದಿರುವುದನ್ನು ಕಾಣಬಹುದು. ನಗರ ಜೀವನದ ಯಾಂತ್ರಿಕತೆ, ಕೃತಕತೆ, ಮೋಸ, ವ್ಯಭಿಚಾರ ಇವು ಈ ಕಾದಂಬರಿಯ ಒಂದೊಂದು ಸನ್ನಿವೇಶದಲ್ಲಿ ಕಾಣಸಿಗುತ್ತವೆ.

"ಹದಿನಾಲ್ಕು ಬ್ರಾಹ್ಮಣ ಸಂಸಾರಗಳ ವಠಾರವದು. ಚಿಳ್ಳೆ-ಪಿಳ್ಳೆ ಹುಡುಗರು, ಯುವಕರು, ಮುದುಕರು, ಮೋಟರು, ಮಡಿಹೆಂಗಸರು, ಮುತ್ತೈದೆಯರು ಬಸುರಿ ಬಾಣಂತಿಯರಿಂದ ತುಂಬಿ ಗಿಜಿಗುಡುತ್ತಿತ್ತು."

'ಇಡೀ ವಠಾರಕ್ಕೆ ಎರಡು ನಲ್ಲಿ, ಮೂರು ಕಕ್ಕಸು, ಆರು ಬಚ್ಚಲು ಮನೆಗಳಿದ್ದವು. ಜಗಳ—ಕದನಗಳಿಗೇನೂ ಅಲ್ಲಿ ಬರವಿಲ್ಲ. ಆದರೆ ಮಧ್ಯಾಹ್ನ ಊಟ ಕೆಲಸಗಳಾಗಿ ಎಲ್ಲ ಮನೆಯ ಹೆಂಗಸರೂ ಮೈ ಒದರಿಕೊಂಡು ಒಂದೆಡೆ ಸೇರಿದರೆ ಒಂದೇ ಮನೆಯವರಂತೆ, ಊಟ, ಅಡಿಗೆ ವಿಷಯ ಹರಟೆ ಹೊಡೆಯುವರು ಬೆಳಗ್ಗೆಯಿಂದ ನಡೆದ ನೂರಾರು ಕದನಗಳು ಒಬ್ಬರ ಮನಸ್ಸಿನಲ್ಲೂ ಉಳಿಯುತ್ತಿರಲಿಲ್ಲ.'[1]

ನೂರಾರು ಕಷ್ಟ-ಕೋಟಲೆಗಳ ನಡುವೆ ಸಹನೆಯಿಂದ ಬಾಳುತ್ತಿರುವ ರುಕ್ಕಮ್ಮ ನಿಶ್ಚಲತೆಯ ಸಂಕೇತವಾಗಿದ್ದಾಳೆ. ಅವಳು ವಾಚಾಳಿಯಾದರೂ ತನ್ನಂತೆಯೇ ಬಡವರಾದವರಿಗೆ ತನ್ನಲ್ಲಿದ್ದುದನ್ನು ಹಂಚಿ ತಿನ್ನುವ ಔದಾರ್ಯ ಅವಳಲ್ಲಿದೆ. ಆ ವಠಾರದಲ್ಲಿ ವಾಸಿಸುತ್ತಿರುವ ಎಲ್ಲರ ಆರ್ಥಿಕ ಸ್ಥಿತಿಯೂ ಒಂದೇ. ದೇವರ ದೀಪಕ್ಕೆಂದು ಸುಳ್ಳು ಹೇಳಿ ಒಂದು ಮಿಳ್ಳೆ ಎಣ್ಣೆಯನ್ನು ರುಕ್ಕಮ್ಮನಿಂದ 'ಕಡ' ತೆಗೆದುಕೊಂಡು ಅಡಿಗೆ ಮಾಡುವ ಸೀತಮ್ಮನ ದಾರಿದ್ರ್ಯ ಓದುಗರಲ್ಲಿ ಅನುಕಂಪ ಮೂಡಿಸುತ್ತವೆ. ಬದುಕಿನ ವಿವಿಧ ಬಗೆಯ ವೈಚಿತ್ರ್ಯವು 'ಕರಿಯು ಕನ್ನಡಿಯಲ್ಲಿ ಅಡಗುವಂತೆ' ಈ ಕಾದಂಬರಿಯಲ್ಲಿ ಚಿತ್ರಿತವಾಗಿದೆ.

ಇಂದಿರಾ ಅವರಿಗೆ ಸೂಕ್ಷ್ಮ ನಿರೀಕ್ಷಣಾ ಶಕ್ತಿ ಇದೆ. ಬದುಕಿನಲ್ಲಿ ಕಾಣುವ ವಿವಿಧ ವ್ಯಕ್ತಿಗಳ ಸ್ವಭಾವ ನಿರೀಕ್ಷಣೆ, ಕಾದಂಬರಿಯ ಪಾತ್ರ ಸೃಷ್ಟಿಯಲ್ಲಿ ಎದ್ದು ಕಾಣುತ್ತವೆ. ರುಕ್ಕಮ್ಮ ವಠಾರದ ಸೀತಮ್ಮ, ಕಾಮಾಕ್ಷಮ್ಮ ಇನ್ನೂ ಮುಂತಾದವರ ನಡತೆ ಒಮ್ಮೊಮ್ಮೆ ವಿಷಾದ, ಅನುಕಂಪ ಹುಟ್ಟಿಸುತ್ತದೆ. ಒಟ್ಟು ಅವರ ಬದುಕಿನ ರೀತಿ ಮರುಕ ಹುಟ್ಟಿಸುತ್ತದೆ. ನಮ್ಮ ಸಮಾಜದ ಆರ್ಥಿಕ ಅವ್ಯವಸ್ಥೆ ಇದಕ್ಕೆ ಕಾರಣ.

---

1. ಎಂ. ಕೆ. ಇಂದಿರಾ : 'ಟು–ಲೆಟ್' ಪುಟ–9.

ಬೃಹತ ಪ್ರಮಾಣದಲ್ಲಿ ಬೆಳೆಯುತ್ತಿರುವ ನಗರಗಳು, ಜನಸಂಖ್ಯಾ ಹೆಚ್ಚಳ, ನಿರುದ್ಯೋಗ ಸಮಸ್ಯೆ, ಉದ್ಯೋಗವನ್ನರಸಿ ಪಟ್ಟಣ ಸೇರುತ್ತಿರುವ ಹಳ್ಳಿಗರು, ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆ ಇತ್ಯಾದಿಗಳಿಂದ ಮಧ್ಯಮ ವರ್ಗದ ಪ್ರಜೆಗಳ ಬಾಳು ಗೋಳಾಗುತ್ತಿದೆ. ನಗರ ಜೀವನ ಸಂಕೀರ್ಣವಾಗುತ್ತದೆ. ಹಳೆಯ ಕಾಲದ ಕೌಟುಂಬಿಕ, ಸಾಮಾಜಿಕ ಮೌಲ್ಯಗಳು ಏರುಪೇರಾಗುತ್ತಿವೆ. ಒಟ್ಟಾರೆ ದಿನ ದಿನಕ್ಕೆ ಬದಲಾಗುತ್ತಿರುವ ಬದುಕಿನ ವ್ಯವಸ್ಥೆ, ಜೀವನದ ರೀತಿ–ನೀತಿ ವಿಧಾನಗಳು ವಠಾರದ ಮೂಲಕ ಸಾಂಕೇತಿಕವಾಗಿ ವ್ಯಕ್ತವಾಗಿದೆ.

ಬಾಡಿಗೆ ಮನೆಗಾಗಿ ಪರದಾಟ, ಸಿಕ್ಕ ಮನೆಗಳ ಅವಾಂತರ, ರುಕ್ಕಮ್ಮನ ವಠಾರದ ವೈಖರಿ, ಅವಳ ವಾಚಾಳಿತನ ಪ್ರತಿಯೊಂದು ಕಾದಂಬರಿಗೆ ಮೆರಗು ನೀಡಿವೆ. ಕಕ್ಕಸು, ನಲ್ಲಿ, ಬಚ್ಚಲು ಇತ್ಯಾದಿ ವಿವರ ಪದೇ ಪದೇ ಬರುತ್ತವೆ ಎನಿಸಿದರೂ ವಠಾರಗಳ ದೈನಂದಿನ ಚಟುವಟಿಕೆಗಳ ವಾಸ್ತವ ಚಿತ್ರಣ ಮೂಡಿದೆ. ಬದುಕಿನ ವೈವಿಧ್ಯಗಳ, ಮಧ್ಯಮ ವರ್ಗದ ಪ್ರಜೆಗಳ ಜೀವನ ಈ ಕಾದಂಬರಿಯಲ್ಲಿ ಪ್ರತಿಬಿಂಬಿತ ವಾಗಿವೆ

ವಠಾರದಲ್ಲಿ ಒಬ್ಬರಿಗೆ ಅನ್ನವಿದ್ದರೆ ಅದಕ್ಕೆ ಮಜ್ಜಿಗೆಯಿಲ್ಲ. ಕಾಮಾಕ್ಷಮ್ಮ ನಂತಹವರು ದೊಡ್ಡ ಹಬ್ಬದ ದಿನಗಳಲ್ಲೂ ಬಾಯಲ್ಲೇ ತುಪ್ಪ, ಮೊಸರು ಎಂದು ಹೇಳಿ ತೃಪ್ತಿಪಟ್ಟುಕೊಳ್ಳಬೇಕಾಗುತ್ತದೆ. ಇನ್ನೂ ಕೆಲವರಿಗೆ ಬೆಂಕಿ ಪೊಟ್ಟಣ, ಸಾಸಿವೆ ಕಾಳಿಗೂ ಗತಿಯಿಲ್ಲ. ಆದರೂ ಅವರ ಜೀವನ ನಿಲ್ಲುವದಿಲ್ಲ ಅವರದು ಹೋರಾಟದ ಬದುಕು.

ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಸಿನಿಮಾ ನೋಡುವ ಚಪಲ. ಅವು ಬೀರುವ ಪರಿಣಾಮಗಳು ಎಂತಹವು ಎಂಬುದನ್ನು ಲೇಖಕಿ ಸೂಚ್ಯವಾಗಿ ನಿರೂಪಿಸಿದ್ದಾರೆ. ಯುವಕರು ಅಶ್ಲೀಲ ಚಿತ್ರಗಳನ್ನು ನೋಡುವುದು. ಸಿನಿಮಾ ನಟ–ನಟಿಯರ ವೇಷ ಭೂಷಣ, ಅಲಂಕಾರಗಳನ್ನು ಅನುಕರಿಸುವುದು ಅಷ್ಟೇ ಸತ್ಯ ಸಂಗತಿ. ಯುವ ಪೀಳಿಗೆಯ ಆಶೋತ್ತರಗಳು ಎತ್ತ ಒಲಿದಿವೆ ಎಂಬುದನ್ನು ಇಲ್ಲಿ ತೋರಿಸಲಾಗಿದೆ.

ವಠಾರದ ಬಡಿವಾರದ ಹೆಂಗಸು ಕಾಮಾಕ್ಷಮ್ಮನ ಮಗಳಿಗೆ ಮೂವತ್ತು ವರ್ಷ ಗಳಾಗಿದ್ದರೂ ಅವಳಿಗೆ ವರ ಸಿಕ್ಕಿಲ್ಲ. ಜಾತಕಕ್ಕಾಗಿ ಶಾಲೆಯ ಸರ್ಟಿಫಿಕೇಟ್‌ನಲ್ಲಿ ಹುಟ್ಟಿದ ತಾರೀಖು ವರ್ಷಗಳನ್ನು ಬದಲಾಯಿಸಬೇಕಾಗುತ್ತದೆ. ಬಿ. ಸರೋಜಾ, ಲೀಲಾವತಿಯರಂತೆ ಅಲಂಕರಿಸಿಕೊಂಡು ವರಗಳನ್ನು ಮೆಚ್ಚಿಸಬೇಕಾಗುತ್ತದೆ. ಭಿಕ್ಷುಕರೂ ಸಹ ದಿನಕ್ಕೊಂದು ವೇಷ ಹಾಕಿಕೊಂಡು, ನಾಟಕವಾಡುತ್ತ ಬಂದ ಹಣ ದಿಂದ ಸಿನಿಮಾ ನೋಡಬಯಸುತ್ತಾರೆ. ಸನ್ಯಾಸಿಗಳೇ ಕೆಲವರು ಭಾರೀ ಬಂಗಲೆಗಳಲ್ಲಿ ವಾಸಮಾಡಿ ಅನೇಕ ರೀತಿಯ ಸಮಾಜ ಘಾತುಕ ಚಟುವಟಿಕೆಗಳಲ್ಲಿ ತೊಡಗುತ್ತಾರೆ.

ಇದ್ದುದರಲ್ಲೇ ತೃಪ್ತಿಹೊಂದಿ ಪರೋಪಕಾರಿಗಳಾಗಿರುವ ಕೋದಂಡು, ಲಕ್ಷ್ಮಿ, ರುಕ್ಕಮ್ಮನಂತಹ ಪರೋಪಕಾರಿಗಳು ಸರಳ ಸ್ವಭಾವದ ವ್ಯಕ್ತಿಗಳು ತೀರ ವಿರಳವಾಗಿ ಕಾಣಸಿಗುತ್ತಾರೆ. ಕಾಮಾಕ್ಷಮ್ಮ ಸೀತಮ್ಮನಂತಹವರು ನೆರೆಮನೆಯವರಿಗೆ ಹೊರೆಯಾಗುತ್ತಾರೆ. ಸೀತಮ್ಮನಿಗೆ ಒಮ್ಮೊಮ್ಮೆ ಐದು ಪೈಸೆಗೂ ಗತಿಯಿಲ್ಲ. ಮತ್ತೊಂದು ವಠಾರದ ಮೂಲಕ ಮೇಷ್ಟರದು ಮತ್ತೊಂದು ದಾರುಣ ಕತೆ. ಮನೆತುಂಬ ಕುಂಟ-ಕುರುಡು ಮಕ್ಕಳು ಗಂಡನನ್ನು ಬಿಟ್ಟು ಬಂದ ಮಗಳು ವಠಾರದ ಗಿಡದ ನೆರಳಿನಲ್ಲಿ ಮಲಗಬೇಕು.

'ಮನೆ ಕೊಟ್ಟು ನೋಡಿ' :

ಶ್ರೀಮತಿ ಇಂದಿರಾ ಅವರು 'ಟು-ಲೆಟ್' ಕಾದಂಬರಿಯಲ್ಲಿ ಮನೆ ಮಾಲೀಕರಿಂದ ಬಾಡಿಗೆದಾರರು ಅನುಭವಿಸಬೇಕಾದ ಬವಣೆಗಳನ್ನು ಚಿತ್ರಿಸಿದ್ದರೆ, ಈ ಕಾದಂಬರಿಯಲ್ಲಿ ಮನೆ ಮಾಲೀಕರು ಬಾಡಿಗೆದಾರರಿಂದ ಅನುಭವಿಸುವ ಕಿರುಕುಳಗಳನ್ನು ಚಿತ್ರಿಸಿದ್ದಾರೆ. ನಗರದಲ್ಲಿ ವಸತಿಯ ಸಮಸ್ಯೆ ಮಧ್ಯಮ ವರ್ಗದ ಪ್ರಜೆಗಳು ಎದುರಿಸುವ ಸಮಸ್ಯೆಗಳು ಕಟ್ಟಡ ನಿರ್ಮಾಣವಾದ ನಂತರ ಸಾಲಗಾರರಿಂದ ಬಂದೊದಗುವ ಆರ್ಥಿಕ ಅಡಚಣೆಗಳು, ಬಾಡಿಗೆದಾರರಿಂದ ಸಹಿಸಬೇಕಾದ ವಿಪತ್ತು ಇವುಗಳನ್ನು ಚಿತ್ರಿಸಿದ್ದಾರೆ.

ಆರ್ಥಿಕ ವ್ಯವಸ್ಥೆಯಿಂದಾಗಿ ಸಮಾಜದ ಭಿನ್ನ ಭಿನ್ನ ವರ್ಗಗಳ ಜನರ ಜೀವನ, ಸಂಕೀರ್ಣವಾಗುತ್ತಿರುವ ನಗರ ಜೀವನ, ಮಧ್ಯಮ ವರ್ಗದವರ ಜನರ ಜೀವನದಲ್ಲಾಗುವ ಪರಿಣಾಮಗಳನ್ನು ಈ ಕಾದಂಬರಿಯಲ್ಲಿ ಕಾಣಬಹುದು.

ವೇದಲರಾಜು, ವರದರಾಜು, ವೆಂಕಟರಾಯರು, ಶ್ರೀಧರ ಇವರು ಮಧ್ಯಮ ವರ್ಗದ ಗೃಹಸ್ಥರು. ವರದರಾಜು ಎಂಟು ಮನೆಗಳ ವಠಾರವನ್ನು ಕಟ್ಟಿಸಿ ಬಾಡಿಗೆ ಕೊಟ್ಟಾಗ ಅವನ ದಾಯಾದಿ ವೇದಲರಾಜು, ಪೈಪೋಟಿಯಿಂದ ಒಂದು ಲಕ್ಷ ರೂಪಾಯಿ ಹಾಕಿ ದೊಡ್ಡ ಬಂಗಲೆಯನ್ನು ಕಟ್ಟಿಸುತ್ತಾನೆ. ಆ ದೊಡ್ಡ ಮನೆ ಊರ ಹೊರಗಿರುವದರಿಂದ ಬಾಡಿಗೆದಾರರು ಅನೇಕ ರೀತಿಯ ತಂಟೆ-ತಕರಾರುಗಳನ್ನು ಒಡ್ಡುತ್ತಾರೆ. ಬೇಸತ್ತ ವೇದಲರಾಜು ವಿಧಿಯಿಲ್ಲದೆ ಒಂದು ಕಾರ್ಖಾನೆಯ ಕಂಟ್ರಾಕ್ಟುದಾರನಿಗೆ ಬಾಡಿಗೆಗೆ ಕೊಟ್ಟು ಅನೇಕ ರೀತಿಯ ತೊಂದರೆಗಳನ್ನು ಅನುಭವಿಸಬೇಕಾಗುತ್ತದೆ. ಅವನ ಮೋಸದ ಜಾಲದಲ್ಲಿ ಸಿಕ್ಕು ಬೀಳುತ್ತಾನೆ. ಕಂಟ್ರಾಕ್ಟುದಾರ ಹೇಳದೆ ಊರು ಬಿಟ್ಟು ಹೋದಾಗ ಅವ್ಯವಸ್ಥೆಗೀಡಾದ ಮನೆಯನ್ನು ಸುವ್ಯವಸ್ಥೆಗೆ ತರಬೇಕಾದರೆ ಎರಡು ಸಾವಿರ ಖರ್ಚಾಗುತ್ತದೆ. ಕೂಲಿಕಾರರು, ಸಿಕ್ಕಾಪಟ್ಟೆ ದೀಪ ಉರಿಸಿದ್ದರಿಂದ ವಿದ್ಯುಚ್ಛಕ್ತಿ ಮಂಡಳಿಯವರೂ, ಅಳತೆಯಿಲ್ಲದೆ ನೀರನ್ನು ಖರ್ಚು ಮಾಡಿದ್ದರಿಂದ ಹಣವನ್ನು ಕಟ್ಟದೆ ಹೋಗಿರುವುದರ ಪರಿಣಾಮ ಮೀಟರನ್ನು ಕಿತ್ತು ಹಾಕುತ್ತಾರೆ. ಹದಿನೈದು ದಿನಗಳ ಸತತ ದುರಸ್ತಿ ಮುಗಿದ ನಂತರ ಒಂದು ವರ್ಷದ

ವರೆಗೆ ಮನೆ ಬಾಡಿಗೆದಾರರಿಲ್ಲದೆ ಖಾಲಿ ಬೀಳುತ್ತದೆ. ಬೇಸತ್ತ ವೇದಲರಾಜು ಮನೆಯನ್ನು ಮಾರುವುದಾಗಿ ಪತ್ರಿಕೆಯಲ್ಲಿ ಜಾಹೀರಾತು ಕೊಡುವ ಸ್ಥಿತಿಗೆ ಬರುತ್ತಾನೆ. ಇದು ಭವ್ಯ ಬಂಗಲೆ ಕಟ್ಟಿಸಿದ ವೇದಲರಾಜುನ ಪಾಡು.

ವರದರಾಜು ಕಟ್ಟಿಸಿದ ಎಂಟು ಮನೆಗಳ ವಠಾರದಲ್ಲಿ ದಿನ ನಿತ್ಯ ಜಗಳ. ವಠಾರದಲ್ಲಿ ವಾಸಿಸುವವರೆಲ್ಲ ದುಡಿಯುವ ಕೂಲಿಕಾರರು. ಬಾಡಿಗೆದಾರರು ಹಗಲು–ರಾತ್ರಿ ಸುರಿಯುವ ನೀರನ್ನು ಮನಬಂದಂತೆ ಬಳಸಿಕೊಳ್ಳುತ್ತಾರೆ. ಕಂಗೆಟ್ಟ ವರದರಾಜು ಪ್ರತಿಯೊಂದು ಮನೆಯವರಿಗೂ ನೂರು ರೂಪಾಯಿ ಕೇಳಿದಾಗ ವಠಾರದ ಗೃಹಿಣಿಯರೂ, ಯುವಕರೂ ಪೈಪೋಟಿಯಿಂದ ಜಗಳ ಮಾಡುತ್ತಾರೆ. ಬಾಡಿಗೆ ಕೊಡುವದನ್ನೇ ನಿಲ್ಲಿಸುತ್ತಾರೆ. ಬಾಡಿಗೆ ನಿಂತ ಕಾರಣ ಕಾರ್ಪೋರೇಶನ್‌ನವರು ಮನೆಗೆ ನುಗ್ಗಿ ಗೃಹಿಣಿಯರ ಪಂಡಿಕೆ ಕುಡಿಕೆಗಳನ್ನು ಬೀದಿಗೆಸೆಯುತ್ತಾರೆ. ವಠಾರದವರು ಮನೆ ಮಾಲೀಕರೊಡನೆ ಜಗಳಾಡುವ ವೈಖರಿ ಸ್ವಾರಸ್ಯಯುತವಾಗಿ ಚಿತ್ರಿತವಾಗಿದೆ.

ಮತ್ತೊಂದು ವಠಾರದ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದ ವೆಂಕಟರಾಯರು ಮಧ್ಯಮ ವರ್ಗಕ್ಕೆ ಸೇರಿದವರು. ಅವರ ಹೆಂಡತಿ ನರಸಮ್ಮನಿಗೆ ತಾನೂ ಒಂದು ಹೊಸ ಮನೆಯನ್ನು ಕಟ್ಟಿಸಿ ಬಾಡಿಗೆಗೆ ಕೊಟ್ಟು ಹಾಯಾಗಿರಬೇಕೆಂಬ ಹಂಬಲ. ಹೆಂಡತಿಯ ಕೈಯಲ್ಲಿದ್ದ ಚಿನ್ನದ ಬಳೆಗಳನ್ನು ಮಾರಿ ಮನೆಯ ಜಾಗವನ್ನು ಹಿಡಿಯುತ್ತಾರೆ. ಮಹಾನಗರ ಸಭೆಗೆ, ಹೌಸಿಂಗ್ ಬೋರ್ಡಿನವರಿಗೆ ಪ್ರತಿಯೊಬ್ಬರಿಗೂ ಲಂಚ ಕೊಟ್ಟು ಕೆಲಸ ಮಾಡಿಸಿಕೊಳ್ಳಬೇಕಾಗುತ್ತದೆ. ಮನೆ ಕಟ್ಟಿಸುವಾಗ ಏನೇನು ತಕರಾರು ತನಿಖೆಗಳು ಆಗಬೇಕೋ ಎಲ್ಲ ಮುಗಿದು ಮನೆ ಸಿದ್ಧವಾಗುತ್ತದೆ. ತಾವು ಹಿಂದಿನ ಮನೆಯಲ್ಲಿದ್ದು ಮುಂದಿನ ದೊಡ್ಡ ಮನೆಯನ್ನು ಬಾಡಿಗೆಗೆ ಕೊಡುವದೆಂದು ನಿರ್ಧರಿಸುತ್ತಾರೆ. ಬಾಡಿಗೆದಾರರ ತಕರಾರುಗಳಿಂದಾಗಿ ಒಂದೂವರೆ ವರ್ಷಗಳವರೆಗೆ ಮನೆ ಖಾಲಿಯಾಗಿ ಉಳಿಯುತ್ತದೆ. ಕೊನೆಗೆ ಶ್ರೀಮಂತ ದಂಪತಿಗಳು ವೆಂಕಟರಾಯರ ದೊಡ್ಡ ಮನೆಗೆ ಬಾಡಿಗೆದಾರರಾಗಿ ಬಂದಾಗ ಅವರ ನಯ–ವಿನಯಗಳ ಮಾತಿಗೆ ಮರುಳಾಗಿ ಮನೆಯನ್ನು ಬಾಡಿಗೆ ಕೊಡುತ್ತಾರೆ. ವೆಂಕಟರಾಯರ ಪತ್ನಿ ನರಸಮ್ಮನಿಗೂ ಬಾಡಿಗೆದಾರಳಾಗಿ ಬಂದ ಸೀತಾಲಕ್ಷ್ಮಿಗೂ ಆತ್ಮೀಯತೆ ಬೆಳೆಯುತ್ತದೆ. ಆರು ತಿಂಗಳವರೆಗೆ ತಂಟೆಯಿಲ್ಲದೆ ಬಾಡಿಗೆ ಬರತೊಡಗಿದಾಗ ನರಸಮ್ಮನಿಗೆ ತೃಪ್ತಿಯಾಗುತ್ತದೆ. ಒಂದುದಿನ ಸೀತಾಲಕ್ಷ್ಮಿಯ ಮಾವ ತೀರಿಕೊಂಡನೆಂಬ ಸುದ್ದಿ ಬರುತ್ತದೆ. ಕರ್ಮಾಂತರಗಳ ಖರ್ಚು ಎಂದು ಆ ತಿಂಗಳು ಬಾಡಿಗೆ ಕೊಡುವುದನ್ನು ನೀಲ್ಲಿಸುತ್ತಾರೆ. ಪ್ರತಿ ತಿಂಗಳೂ ನೆವ ಹೂಡಿ ಬಾಡಿಗೆ ಕೊಡುವುದನ್ನು ನಿಲ್ಲಿಸುತ್ತಾರೆ.

ನರಸಮ್ಮ ತನ್ನ ತಮ್ಮನ ಮನೆಯ ಮದುವೆಗೆ ಹೋದಾಗ ಸೀತಾಲಕ್ಷ್ಮಿ ಯಾರಿಗೂ ತಿಳಿಯದಂತೆ ತನ್ನ ಮನೆಯ ಸಾಮಾನುಗಳನ್ನೆಲ್ಲ ಸಾಗಿಸಿ ಎಲ್ಲಿಗೋ ಹೊರಟುಹೋಗಿರುತ್ತಾರೆ. ಸೀತಾಲಕ್ಷ್ಮಿಯ ಗಂಡ ಕೆಲಸ ಮಾಡುತ್ತಿದ್ದ ಕಚೇರಿಯಲ್ಲಿ

ವಿಚಾರಿಸಿದಾಗ ರಘುನಾಥರಾಯನೆಂಬ ಹೆಸರಿನ ವ್ಯಕ್ತಿಯೇ ಅಲ್ಲಿಲ್ಲವೆಂಬ ಸತ್ಯ ತಿಳಿಯುತ್ತದೆ. ಹಾಲು ಮೊಸರಿನವರಿಗೆ ಸೌದೆ ಅಂಗಡಿಯವರಿಗೆ, ಮನೆ ಮಾಲೀಕರಿಗೆ ಎಲ್ಲರಿಗೂ ಸೀತಾಲಕ್ಷ್ಮಿ, ಮೋಸಮಾಡುತ್ತಾಳೆ. ಇದು ವೆಂಕಟರಾಯರು ಅನುಭವಿಸಿದ ತೊಂದರೆ. ಹನ್ನೆರಡು ವರ್ಷಗಳ ಹಿಂದೆ ವಠಾರವೊಂದನ್ನು ಕಟ್ಟಿಸಿ, ಕೇವಲ ಹದಿನೈದು ರೂಪಾಯಿಗೆ ಬಾಡಿಗೆಗೆ ಕೊಟ್ಟ ಮಾಲೀಕನಿಗೆ ಮತ್ತೊಂದು ಬಗೆಯ ತೊಂದರೆ. ಹತ್ತು ರೂಪಾಯಿ ಬಾಡಿಗೆ ಏರಿಸುವಂತೆ ಕೇಳಿದಾಗ 'ಬಾಡಿಗೆದಾರರು ಒಬ್ಬೊಬ್ಬರು ಒಂದೊಂದು ರೀತಿ ಹೇಳುತ್ತಾರೆ.

"ಯಾವ ಸೌಕರ್ಯವಿದೆ ಈ ದರಿದ್ರ ಮನೆಯಲ್ಲಿ? ಅಡಿಗೆ ಮನೆಯಲ್ಲಿ ಒಂದು ಕಿಟಕಿಯಿಲ್ಲ. ಹೊಗೆಯ ಗೂಡಿಲ್ಲ. ಸೌದೆ ಒಲೆಯಲ್ಲಿ ಅಡಿಗೆಮಾಡಿದರಂತೂ ಯಾರೂ ನಿಲ್ಲುವಂತಿಲ್ಲ" ಇತ್ಯಾದಿ ತಕರಾರುಗಳು ಬಾಡಿಗೆದಾರರಿಂದ ಆರಂಭವಾಗಿ ಒಮ್ಮೆ ನೀರಿನ ವಿಷಯಕ್ಕೆ ಹಣಾಹಣಿ ಜಗಳವಾಗಿ ಕೋರ್ಟಿಗೆ ಹೋಗುವವರೆಗೂ ಆ ಜಗಳ ಬೆಳೆಯುತ್ತದೆ.

ವಿಶೇಷ ವ್ಯಾಸಂಗಕ್ಕೆ ಹೋದ ಶ್ರೀಧರ ಆ ತನ್ನ ಆತ್ಮೀಯ ಸ್ನೇಹಿತನಿಂದಲೇ ಮೋಸ ಹೋಗುತ್ತಾನೆ. ವ್ಯವಹಾರಕುಶಲಿಯಲ್ಲದ ಶ್ರೀಧರ ವಿದೇಶಕ್ಕೆ ಹೊರಡುವಾಗ ತನ್ನ ಮನೆಯನ್ನು ತನ್ನ ಆತ್ಮೀಯ ಸ್ನೇಹಿತ ನರಸಿಂಹಮೂರ್ತಿಗೆ ಒಪ್ಪಿಸುತ್ತಾನೆ. ಶ್ರೀಧರ ವಿದೇಶಕ್ಕೆ ಹೋದನಂತರ ಆರು ತಿಂಗಳವರೆಗೆ ಬಾಡಿಗೆ ಹಣವನ್ನು ಬ್ಯಾಂಕಿಗೆ ಕಟ್ಟಿ ರಸೀದಿ ಕಳಿಸಿಕೊಡುತ್ತಾನೆ. ವಿದ್ಯಾಭ್ಯಾಸ, ಹೊಸ ವಾತಾವರಣದ ಉತ್ಸಾಹದಲ್ಲಿದ್ದ ಶ್ರೀಧರ ನಿಶ್ಚಿಂತನಾಗಿ ಉಳಿಯುತ್ತಾನೆ. ಅಲ್ಲಿಯೇ ಕೆಲಸವೂ ಲಭಿಸಿ ಭಾರತದವಳೇ ಆದ ಒಬ್ಬ ಕನ್ಯೆ ಅವನ ಜೀವನ ಸಂಗಾತಿಯಾಗುತ್ತಾಳೆ. ಈ ನಡುವೆ ನರಸಿಂಹಮೂರ್ತಿಯಿಂದ ಬರುತ್ತಿದ್ದ ಕಾಗದಗಳೂ ನಿಂತುಹೋಗುತ್ತವೆ. ಅವನ ಪತ್ರಗಳನ್ನು ನಿರೀಕ್ಷಿಸಿ ನಿರಾಶನಾದ ಶ್ರೀಧರ ಬ್ಯಾಂಕಿಗೆ ಪತ್ರ ಬರೆದಾಗ ಮೂರು ವರ್ಷಗಳಿಂದ ಹಣ ಬಂದಿಲ್ಲವೆಂಬ ವಿಷಯ ತಿಳಿದುಬರುತ್ತದೆ. ತನ್ನ ಹೆಂಡತಿಗೆ ಭಾರತದ ತನ್ನ ಮನೆ, ಕರ್ನಾಟಕದ ಶಿಲ್ಪಕಲೆ, ಸಂಸ್ಕೃತಿಯನ್ನು ಪರಿಚಯಿಸುವ ಹಂಬಲದಿಂದ ಶ್ರೀಧರ ಸ್ವದೇಶಕ್ಕೆ ಮರಳುತ್ತಾನೆ. ನರಸಿಂಹಮೂರ್ತಿಗೆ ಆ ಮನೆಯಲ್ಲಿ ನಾಲ್ಕೈದು ವರ್ಷಗಳವರೆಗೆ ನೆಮ್ಮದಿಯಾಗಿದ್ದು ಅಷ್ಟಿಷ್ಟು ಲಾಭ ಗಳಿಸುತ್ತಾನೆ. ಕ್ಯಾನ್ಸರ್ ಕಾಯಿಲೆಗೀಡಾದ ನರಸಿಂಹಮೂರ್ತಿ ತನಗೆ ಸಾವು ಖಚಿತವೆಂದು ತಿಳಿದಾಗ ಹೆಂಡತಿ ಮಕ್ಕಳನ್ನೆಲ್ಲ ಅವಳ ತೌರಿಗೆ ಕಳಿಸಿ ಮದ್ರಾಸಿಯೊಬ್ಬನಿಗೆ ಆ ಮನೆಯನ್ನು ಬಾಡಿಗೆಗೆ ಕೊಟ್ಟು ವೆಲ್ಲೂರಿಗೆ ಹೊರಟುಹೋಗಿರುತ್ತಾನೆ.

ಶ್ರೀಧರ ಭಾರತಕ್ಕೆ ಬಂದು ನೇರವಾಗಿ ತನ್ನ ಮನೆಯ ಮುಂದೆ ಇಳಿದಾಗ ನರಸಿಂಹಮೂರ್ತಿ ಸತ್ತು ಹೋಗಿದ್ದಾನೆಂದೂ ಮನೆಯ ವ್ಯವಹಾರವೆಲ್ಲ ನರಸಿಂಹ ಮೂರ್ತಿಯ ಭಾವಮೈದುನನಿಗೆ ಸಂಬಂಧಿಸಿದ್ದೆಂದು ಬಾಡಿಗೆದಾರರು ಹೇಳುತ್ತಾರೆ.

ನರಸಿಂಹಮೂರ್ತಿ ಎಂತಹ ವಂಚಕನೆಂಬ ಸತ್ಯ ಶ್ರೀಧರನಿಗೆ ಮೊದಲಬಾರಿಗೆ ತಿಳಿಯುತ್ತದೆ.

ಈ ಕಾದಂಬರಿಯಲ್ಲಿ ಲೇಖಕಿ ಇಂದಿರಾ ಅವರು ಐದು ಜನ ಮನೆ ಮಾಲೀಕರ ಉದಾಹರಣೆಗಳಿಂದ ಇಂದಿನ ನಗರಗಳಲ್ಲಿ ಮನೆ ಮಾಲೀಕರು ಬಾಡಿಗೆದಾರರಿಂದ ಅನುಭವಿಸಬೇಕಾಗಿ ಬರುವ ತೊಂದರೆಗಳನ್ನು ಸ್ವಾರಸ್ಯಯುತವಾಗಿ ಚಿತ್ರಿಸಿದ್ದಾರೆ.

ನರಸಮ್ಮ ಸ್ವಂತ ಮನೆಯಲ್ಲಿರಲು ಬಯಸಿ ಚಿನ್ನದ ಬಳೆಗಳನ್ನು ಮಾರಿ ಮನೆಕಟ್ಟಿಸುವಲ್ಲಿ ಯಶಸ್ವಿಯಾಗುತ್ತಾಳೆ. ಅದರ ಬಾಡಿಗೆ ಬಂದ ಸೀತಾಲಕ್ಷ್ಮಿಯ ನಯವಂಚನೆಯ ಜಾಲದಲ್ಲಿ ಸಿಕ್ಕಿಬೀಳುತ್ತಾಳೆ. ನರಸಿಂಹಮೂರ್ತಿ, ಸೀತಾಲಕ್ಷ್ಮಿ, ಕಂಟ್ರಾಕ್ಟುದಾರ, ಇವರೆಲ್ಲ ಸಮಯ ಸಾಧಕರು. ತಮ್ಮ ಕಾರ್ಯಸಾಧಿಸಿಕೊಳ್ಳುವಲ್ಲಿ ಯಶಸ್ವಿಯಾಗುತ್ತಾರೆ. ನಮ್ಮ ಸಮಾಜದ ಪ್ರತಿಯೊಂದು ಕ್ಷೇತ್ರದಲ್ಲೂ ತುಂಬಿರುವ ಲಂಚದ ಹಾವಳಿ, ಸ್ವಾರ್ಥ, ಮೋಸ, ಇತ್ಯಾದಿಗಳ ಚಿತ್ರಣ ಇಲ್ಲಿದೆ.

ಮೂರನೆಯ ವರ್ಗದ ಪ್ರಜೆಗಳ ಜೀವನ, ವಠಾರಗಳಲ್ಲಿ ಅವರು ಬದುಕುವ ರೀತಿ, ಅವರ ಜಗಳಾಟ, ಸೀತಾಲಕ್ಷ್ಮಿ, ನರಸಿಂಹಮೂರ್ತಿ ಇವರು ಜನರನ್ನು ವಂಚಿಸುವ ರೀತಿ ಇವೆಲ್ಲ ಸ್ವಾಭಾವಿಕವಾಗಿ ಮೂಡಿಬಂದಿವೆ.

ಈ ಕಾದಂಬರಿ ಸಮಕಾಲೀನ ನಗರ ಜೀವನಕ್ಕೆ, ಪ್ರಜೆಗಳ ಬದುಕಿಗೆ ಕನ್ನಡಿ ಹಿಡಿದಿದೆ.

'ಬ್ರಹ್ಮಚಾರಿ' :

ಈ ಎರಡೂ ಕಾದಂಬರಿಗಳಲ್ಲಿ ಇಂದಿರಾ ಅವರು ಕಪಟ ಸನ್ಯಾಸಿಗಳ ವಂಚನೆಯಿಂದ ವ್ಯಕ್ತಿ, ಕುಟುಂಬ ಹಾಗೂ ಸಮಾಜದ ಮೇಲಾಗುವ ಪರಿಣಾಮವನ್ನು ವಾಸ್ತವವಾಗಿ ಚಿತ್ರಿಸಿದ್ದಾರೆ. ಮನೋವಿಶ್ಲೇಷಣೆಯು ಈ ಕಾದಂಬರಿಯಲ್ಲಿ ಮುಖ್ಯ ಪಾತ್ರವಹಿಸುತ್ತದೆ.

ಶ್ರೀಮತಿ ಎಂ. ಕೆ. ಇಂದಿರಾ ಅವರ 'ಬ್ರಹ್ಮಚಾರಿ' ಕಾದಂಬರಿ ಗೀತಾ ಪಬ್ಲಿಕೇಶನ್ (ಬೆಂಗಳೂರು)ದಿಂದ ೧೯೭೭ರಲ್ಲಿ ಪ್ರಥಮ ಮುದ್ರಣವಾಗಿ ೧೯೭೯ರಲ್ಲಿ ದ್ವಿತೀಯ ಮುದ್ರಣ ಕಂಡಿದೆ.

ಭೂತಗರ್ಭದಲ್ಲಿ ಅಡಗಿ ಹೋಗಿದ್ದು ತಟ್ಟನೆ ಮೇಲೆದ್ದು ಬಂದ ಒಂದು ಸತ್ಯಘಟನೆ[1]ಯೇ ಈ ಬ್ರಹ್ಮಚಾರಿ ಕುರಿತ ವಸ್ತು. ಗೌರವಸ್ಥ ಮನೆತನದ ಸೊಸೆ ತಂಗಮ್ಮ ಊರಿಗೆ ಬಂದ ಗೋಸಾಯಿಯೊಬ್ಬನ ಹಿಂದೆ ಓಡಿಹೋದದ್ದೇ ಘಟನೆ.

1. ಕಾದಂಬರಿಯ ಮುನ್ನುಡಿ.

ಈ ಘಟನೆಯಿಂದ ಕುಟುಂಬದಲ್ಲಿ ವ್ಯಕ್ತಿಗಳ ಬದುಕಿನಲ್ಲಿ ತಲೆದೋರಬಹುದಾದ ಸಮಸ್ಯೆಗಳನ್ನು ಲೇಖಕಿ ಇಲ್ಲಿ ಚಿತ್ರಿಸಿದ್ದಾರೆ.

ಕಥಾನಾಯಕ ಶಿವ ಹದಿನೆಂಟು ವರ್ಷದವನಿದ್ದಾಗ ಈ ಘಟನೆ ನಡೆದಿದೆ. ತಾಯಿಗಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದ ಶಿವನ ಅತ್ತಿಗೆ ಊರಿಗೆ ಬಂದ ಕಳ್ಳ ಬೈರಾಗಿಗಳ ಬೆನ್ನುಹತ್ತಿ ಅವನ ಮುಂದೆಯೇ ಓಡಿಹೋಗುತ್ತಾಳೆ. ಇದು ಶಿವನ ಮೃದು ಮನಸ್ಸಿನ ಮೇಲೆ ಘೋರವಾದ ಪರಿಣಾಮವನ್ನುಂಟುಮಾಡುತ್ತದೆ.

ಆ ಹಳ್ಳಿಯಲ್ಲಿ ಮಾನ ಮರ್ಯಾದೆಯಿಂದ ಬದುಕಿ ಬಾಳಿದ ಗೌರವಸ್ಥರ ಮನೆಯ ಸೊಸೆ ಯಕಃಶ್ಚಿತ ಒಬ್ಬ ಬೈರಾಗಿಯ ಹಿಂದೆ ಓಡಿಹೋದುದು ಒಂದು ಕಪ್ಪು ಕಲೆಯಾಗಿ ಉಳಿಯುತ್ತದೆ.

ಈ ಅವಮಾನದಿಂದಾಗಿ ಕೊರಗಿನಲ್ಲಿ ಹೆಂಡತಿಯನ್ನು ಕಳೆದುಕೊಂಡ ವೆಂಕಟರಮಣಯ್ಯ ಎರಡು ಮಕ್ಕಳನ್ನು ತಬ್ಬಲಿಮಾಡಿ ಕಣ್ಮುಚ್ಚುತ್ತಾನೆ.

ತಾಯಿ ಲಕ್ಷ್ಮಮ್ಮನವರು ಅವಮಾನ, ವ್ಯಥೆಯಿಂದ ಕೊರಗಿ ಅರೆ–ಹುಚ್ಚಿಯಂತಾಗಿ ಸಾವನ್ನಪ್ಪುತ್ತಾರೆ. ಕೊನೆಯ ಮಗ ಶಿವನ ಮದುವೆಯನ್ನಾದರೂ ಮಾಡಬೇಕು ಎಂಬ ಅವರ ಹಂಬಲ ಹಂಬಲವಾಗಿಯೇ ಉಳಿಯುತ್ತದೆ.

ತಾಯಿಯನ್ನೂ. ಅಣ್ಣನನ್ನೂ ಕಳೆದುಕೊಂಡ ಶಿವ ಎರಡು ತಬ್ಬಲಿ ಮಕ್ಕಳೊಡನೆ ಕಷ್ಟವನ್ನು ಸಹಿಸಬೇಕಾಗುತ್ತದೆ. ನಡುರಾತ್ರಿ ವೇಷ ಮರೆಸಿಕೊಂಡು. ಪಿಶಾಚಿಯಂತೆ ವರ್ತಿಸಿ ಶೀಲಗೆಟ್ಟು, ಬಾವಾಜಿಯ ಹಿಂದೆ ಓಡಿಹೋದ ಅತ್ತಿಗೆಯನ್ನು ನೆನೆದರೆ ಶಿವ ಮೂರ್ಛೆಹೋಗುತ್ತಾನೆ. ಎಲ್ಲ ದೃಶ್ಯಗಳನ್ನು ಕಣ್ಣಾರೆ ಕಂಡ ಹದಿನೆಂಟು ವರ್ಷದ ಶಿವ ಆವೇಶದಲ್ಲಿ ತಾನು 'ಬ್ರಹ್ಮಚಾರಿ'ಯಾಗಿ ಉಳಿವುದಾಗಿ ಪ್ರತಿಜ್ಞೆಮಾಡುತ್ತಾನೆ.

ಇದು ಶಿವನ ಮನೆಯ ಪರಿಸ್ಥಿತಿಯಾದರೆ, ಗಿರಿಜೆಯದು ಇನ್ನೂ ಕರುಣಾಜನಕವಾದದ್ದು. ಗಿರಿಜೆ ಲಕ್ಷ್ಮಮ್ಮನವರ ಬಂಧು ಕಳಸಪ್ಪನವರ ಮಗಳು. ಮೊದಲಿನಿಂದಲೂ ಶಿವನಿಗೆ ಗಿರಿಜೆಯನ್ನು ತಂದುಕೊಳ್ಳಬೇಕೆಂಬ ಆಸೆ ಲಕ್ಷ್ಮಮ್ಮನವರದು. ಶಿವ 'ಬ್ರಹ್ಮಚಾರಿ'ಯಾಗಿ ಉಳಿಯುವ ಪ್ರತಿಜ್ಞೆ ಮಾಡಿದಾಗ ಗಿರಿಜೆ ಕನ್ಯೆಯಾಗಿಯೇ ಉಳಿಯಬೇಕಾಗುತ್ತದೆ. ಹದಿನಾರು ವರ್ಷಕ್ಕೇ ತಾಯಿಯನ್ನು ಕಳೆದುಕೊಂಡು ಗಿರಿಜೆ ತಮ್ಮ ತಂಗಿಯರಿಗೆ, ತಾನೇ ತಾಯಿಯಾಗಿ ಮನೆಯ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಪಾರ್ಶ್ವವಾಯುವಿನಿಂದ ನಿಶ್ಶಕ್ತರಾಗಿ ಹಾಸಿಗೆ ಹಿಡಿದ ತಂದೆಯನ್ನು ಜವಾಬ್ದಾರಿ ಅರಿಯದ ತಮ್ಮ–ತಂಗಿಯರ ಮೇಲೆ ಬಿಟ್ಟು ಅವಳು ಮದುವೆಯಾಗಿ ಹೋಗುವಂತಿಲ್ಲ.

ಕಾಲಕಳೆದಂತೆ ಊರ ಜನರು ವಿಷಯವನ್ನು ಮರೆತರೂ, ಶಿವನ ಮನಸ್ಸಿನಲ್ಲಿ ಅದು ಒಂದು ನಿರಂತರ ಕೊರಗಾಗಿ, ಸಮಸ್ಯೆಯಾಗಿ ಉಳಿಯುತ್ತದೆ. ಶಿವ ತನ್ನ

ನೋವನ್ನು ಮರೆಯಲು ನೂರೆಂಟು ಚಟುವಟಿಕೆಗಳಲ್ಲಿ ತೊಡಗಿದರೂ ಅವನು ಏಕಾಂಗಿಯಾಗಿಯೇ ಉಳಿಯುತ್ತಾನೆ.

ಮನೆಯ ಪರಿಸ್ಥಿತಿಯಿಂದಾಗಿ ಗಿರಿಜೆಯ ಮೇಲೆ ಹೆಚ್ಚಿನ ಜವಾಬ್ದಾರಿ ಬೀಳುತ್ತದೆ. ಗಿರಿಜೆಯ ಮನಸ್ಸು ಶಿವನೇ ತನ್ನ ಗಂಡನೆಂದು ಒಪ್ಪಿಕೊಂಡದ್ದರಿಂದ ಅವಳ ಹೊಂಗನಸುಗಳೂ ನುಚ್ಚು ನೂರಾಗುತ್ತವೆ. ಶಿವು ಅವಳನ್ನು ಮದುವೆಯಾಗಿದ್ದರೆ ಎರಡೂ ಮನೆಗಳಿಗೂ ಅವಳೇ ಆಸರೆಯಾಗುತ್ತಿದ್ದಳು. ಅವಳ ಸಂಕಲ್ಪ ಹಾಗೆಯೇ ಉಳಿದುಬಿಡುತ್ತದೆ. ತಾನು ಹೀಗೆ ಕನ್ಯೆಯಾಗಿ ಉಳಿದು ತನ್ನ ತಂದೆ, ತಮ್ಮ-ತಂಗಿಯರನ್ನು ನೋಡಿಕೊಂಡಿರುವುದೇ ತನ್ನ ಕೊನೆಯ ತೀರ್ಮಾನವೆಂದುಕೊಳ್ಳುತ್ತಾಳೆ. ಕಾಲ ಸರಿದಂತೆ ಕ್ರಮೇಣ ಶಿವನ ಮನಸ್ಸು ಗಿರಿಜೆಯನ್ನು ಬಯಸುತ್ತದೆ.

ಆದರೆ ಮಾಡಿದ ಪ್ರತಿಜ್ಞೆ, ಅತ್ತಿಗೆಯ ನೆನಪುಗಳಿಂದಾಗಿ ಮದುವೆಯೆಂದೊಡನೆ ಆತನ ಮನ ಹಿಂದೇಟು ಹಾಕುತ್ತದೆ. ಏಕಾಂಗಿಯಾದ ಆತನಿಗೆ ಬದುಕು ಯಾಂತ್ರಿಕವೆನಿಸುತ್ತದೆ. ಅತ್ತಿಗೆಯ ವಂಚನೆ, ತಾಯಿಯ ನೆನಪು. ನಾನಾ ರೀತಿಯ ಸಮಸ್ಯೆಗಳಿಗೆ ಸಿಕ್ಕು ಮಾನಸಿಕ ತುಮುಲಗಳಿಂದಾಗಿ ಅವನ ಮನೋದೌರ್ಬಲ್ಯ ಹೆಚ್ಚುತ್ತದೆ.

ಕಳಸಪ್ಪನವರಿಗೆ ತಮ್ಮ ಅನಾರೋಗ್ಯದ ನಡುವೆ ಬೆಳೆದು ನಿಂತ ಮಗಳ ಮದುವೆಯ ಕೊರಗು ಹೆಚ್ಚಾಗುತ್ತದೆ. ಗಿರಿಜೆಯನ್ನು ಬೇರೊಬ್ಬ ವರನಿಗೆ ತೋರಿಸುವ ಏರ್ಪಾಟು ನಡೆದಾಗ ಶಿವು ಮಾನಸಿಕವಾಗಿ ಅಸ್ವಸ್ಥನಾಗುತ್ತಾನೆ. ಗಿರಿಜೆ ತನ್ನ ಮನೆಯ ಜವಾಬ್ದಾರಿಯೊಂದಿಗೆ ಶಿವನ ಆರೈಕೆಗೂ ನಿಲ್ಲುತ್ತಾಳೆ. ಒಂದು ರಾತ್ರಿ ಶಿವನಿಗೆ ಗಿರಿಜೆಯೊಂದಿಗೆ ಏಕಾಂತದಲ್ಲಿ ಮಾತಾಡುವ ಸಂದರ್ಭ ಬರುತ್ತದೆ. ಶಿವ ಗಿರಿಜೆಯನ್ನು ಮದುವೆಯಾಗುವ ಇಚ್ಛೆಯನ್ನು ವ್ಯಕ್ತಪಡಿಸುತ್ತಾನೆ. ಇನ್ನೇನು ಅವರಿಬ್ಬರ ಸಮಸ್ಯೆಗಳೂ ಬಗೆಹರಿದು, ಎರಡೂ ಮನೆಗಳ ಸಮಸ್ಯೆಗಳೂ ಪರಿಹಾರವಾಗುತ್ತವೆ ಎನ್ನುವಷ್ಟರಲ್ಲಿ ಊರಿಗೆ ಮತ್ತೇ ಗೋಸಾಯಿಗಳು ಬರುತ್ತಾರೆ. ಶಿವನ ಮನಸ್ಸಿನಲ್ಲಿ ಸುಪ್ತವಾಗಿದ್ದ ಭೀತಿ ಮರುಕಳಿಸುತ್ತದೆ. ಗಿರಿಜೆಯನ್ನು ನೋಡಿ ಹೋಗಿದ್ದ ವರನ ಕಡೆಯವರು ಅವಳನ್ನು ಒಪ್ಪಿಕೊಂಡಿರುವುದಾಗಿ ಪತ್ರ ಬರೆಯುತ್ತಾರೆ. ಮೊದಲೇ ಮನೋರೋಗಿಯಾಗಿದ್ದ ಶಿವನಿಗೆ ಇದು ಮತ್ತೊಂದು ಪೆಟ್ಟು. ಶಿವನ ಕಾಯಿಲೆ ಉಲ್ಬಣಿಸಿ ಮಾನಸಿಕ ನೋವಿನಿಂದ ಮರಣ ಹೊಂದುತ್ತಾನೆ.

ದಿಕ್ಕು ತೋರದೆ ಗಿರಿಜೆ ತನ್ನ ತಂದೆಯನ್ನು, ಮಕ್ಕಳನ್ನು ಬಿಟ್ಟು ಹೋಗಲಾರದೆ ತಾನು ಕನ್ಯೆಯಾಗಿಯೇ ಉಳಿಯಲು ನಿರ್ಧರಿಸಿರುವುದಾಗಿ ಗಿರಿಜೆ ನಾರಾಯಣಮೂರ್ತಿಗಳಿಗೆ ಪತ್ರ ಬರೆಯುತ್ತಾಳೆ.

ಸಂಸಾರದ ಜಂಜಡಗಳಿಗೆ ಸಿಕ್ಕ ಶಿವ ಹಾಗೂ ಗಿರಿಜೆ ಇಬ್ಬರೂ ಓದುಗರ ಸಹಾನುಭೂತಿ ಗಳಿಸುತ್ತಾರೆ. ತಾರುಣ್ಯದಲ್ಲೇ ಮನೆಯ ಕಷ್ಟನಷ್ಟಗಳನ್ನೆಲ್ಲ ಎದುರಿಸಿದ ಗಿರಿಜೆಯ ಸಹನೆ, ಮನೋಸ್ಥೈರ್ಯ ಓದುಗರ ಮೆಚ್ಚುಗೆ ಗಳಿಸುತ್ತದೆ.

'ಬ್ರಹ್ಮಚಾರಿ'ಯಾಗಿ ಉಳಿಯಲು ನಿರ್ಧರಿಸಿದ ಶಿವನ ಮಾನಸಿಕ ತುಮುಲ, ಆತನ ಏಕಾಕಿತನದ ಪರಿಭಾವನೆ ಸಮರ್ಪಕವಾಗಿ ನಿರೂಪಣೆಗೊಂಡಿದೆ. ತಾಯಿಯ ಮರಣದ ನಂತರ ಶಿವ ಅಣ್ಣನ ಮಕ್ಕಳನ್ನು ಪಟ್ಟಣದ ಹಾಸ್ಟಲಿನಲ್ಲಿ ಬಿಟ್ಟು ಬರುತ್ತಾನೆ. ಆ ದೊಡ್ಡ ಮನೆಯಲ್ಲಿ ಉಳಿದ ಒಂದೇ ಒಂದು ಜೀವಂತ ಪ್ರಾಣಿ ಎಂದರೆ ಕರು-ಕಾಳಿಂದಿ. ಮಾನಸಿಕ ಅಶಾಂತಿಯಿಂದ ಅವನ ಮನಸ್ಸು ಕ್ಷಣಕ್ಕೊಮ್ಮೆ ಬದಲಾಗುತ್ತದೆ.

ಹಸಿವು-ನೀರಡಿಕೆಯಿಂದ ಕಂಗೆಟ್ಟು ನಿಂತ ಕರು-ಕಾಳೀದಿಗೆ ನೀರು ಕುಡಿಸಿ ಮನಸ್ಸಿಗೆ ತೃಪ್ತಿಪಟ್ಟುಕೊಳ್ಳುತ್ತಾನೆ ಅವನ ಮಾನಸಿಕ ಒಳತೋಟಿಯನ್ನು ಲೇಖಕಿ ಚೆನ್ನಾಗಿ ನಿರೂಪಿಸಿದ್ದಾರೆ.

ಅಡಿಗೆ ಮನೆಯ ಒಲೆಯ ಮೇಲೆ ಮಲಗಿದ ಬೆಕ್ಕು ಮ್ಯಾಯಾಂವ್ ಎಂದು ತನ್ನ ಕಣ್ಣುಗಳನ್ನು ಮುಂದಗೆ ತಿರುಗಿಸಿದಾಗ ಓಡಿಹೋದ ಅತ್ತಿಗೆಯ ಕಣ್ಣುಗಳನ್ನು ನೆನಪಿಗೆ ತರುತ್ತವೆ ತನ್ನ ಅತ್ತಿಗೆಯೇ ಬೆಕ್ಕಾಗಿ ಬಂದಿರಬಹುದೆಂಬ ಹುಚ್ಚು ವಿಚಾರದಲ್ಲಿ ತೊಡಗುತ್ತಾನೆ. ಬೆಕ್ಕನ್ನು ಹೊಡೆಯುವುದು, ಪೆಟ್ಟಿಗೆಯಲ್ಲಿದ್ದ ಅತ್ತಿಗೆಯ ರೇಶಿಮೆ ಸೀರೆಗಳನ್ನು ಸುಟ್ಟುಹಾಕುವುದರ ಮೂಲಕ ತನ್ನ ಮನಸ್ಸಿನ ಅಸಮಾಧಾನವನ್ನು ಹೊರಗೆಹಾಕಿ ಪ್ರತಿಕ್ರಿಯೆ ತೋರಿಸುತ್ತಾನೆ.

ಶಿವನ ಮನೋದೌರ್ಬಲ್ಯ ಹೆಚ್ಚಿದಂತೆ ಅವನ ನಿರ್ಧಾರ ಸಡಿಲವಾಗುತ್ತದೆ. ಎಲ್ಲ ಪ್ರಾಣಿಗಳಿಗೂ ಸ್ವಾಭಾವಿಕವಾಗಿರುವ ಮೂಲಭೂತ ಪ್ರವೃತ್ತಿಗಳನ್ನು ತಡೆಹಿಡಿದಾಗ ಅದರಲ್ಲಿ ಸೋಲುಂಟಾಗುವದನ್ನು ಶಿವನ ಪಾತ್ರದ ಮೂಲಕ ಲೇಖಕಿ ವಿಶ್ಲೇಷಿಸಿದ್ದಾರೆ. ಬೈರಾಗಿಗಳ ವೇಷಭೂಷಣ ಅವರ ವರ್ಣನೆ ಭಯಾನಕವೆನಿಸುತ್ತವೆ. ಯಂತ್ರ-ಮಂತ್ರ ಬೂದಿ ಚೀಟಿಗಳನ್ನು ಮಾಡಿಸಿಕೊಳ್ಳುವ ಮೂಢನಂಬಿಕೆ ಜನರಲ್ಲಿದೆ. ಊರ ಜನರು, ಅದರಲ್ಲೂ ಶಾಲೆಗೆ ಹೋಗುವ ಮಕ್ಕಳು ಬಾವಾಜಿಗಳ ಬಗೆಗೆ ಕುತೂಹಲವನ್ನು ಭಯವನ್ನು ಹೊಂದಿದವರಾಗುತ್ತಾರೆ.

ಬಾವಾಜಿಗಳು ಮಾಟ-ಮಂತ್ರ ಮಾಡುತ್ತಾರೆಂದೂ, ಅವರನ್ನು ನಂಬಕೂಡದೆಂದೂ ಹೇಳುವ ಊರ ಹಿರಿಯರೇ ಅವರಿಂದ ಮಂತ್ರ-ತಂತ್ರ ಮಾಡಿಸಿಕೊಳ್ಳುವುದನ್ನು ಸೂಕ್ಷ್ಮವಾಗಿ ಲೇಖಕಿ ನಿರೀಕ್ಷಿಸಿದ್ದಾರೆ.

ಅವಳ ಮೂಢನಂಬಿಕೆಯಿಂದಾಗಿಯೇ ಕುಟುಂಬಗಳಲ್ಲಿ ಸಮಸ್ಯೆಗಳು ಉದ್ಭವಿಸುತ್ತವೆ. ಬೈರಾಗಿ ವೇಷದ ಕಪಟ ಸನ್ಯಾಸಿಗಳು ನಮ್ಮ ಸಮಾಜದಲ್ಲಿ ಎಂದಿಗೂ ಇದ್ದಾರೆ. ಮೂಢನಂಬಿಕೆಗೆ ಬಲಿಯಾಗುವವರು ಹೆಚ್ಚಾಗಿ ಸ್ತ್ರೀಯರೇ ಎಂದು ಹೇಳಿದರೆ ತಪ್ಪಾಗಲಾರದು.

ಕೌಟುಂಬಿಕ ಸಮಸ್ಯೆಗಳಲ್ಲಿ ಸಿಕ್ಕ ಶಿವ, ಗಿರಿಜೆ, ಲಕ್ಷ್ಮಮ್ಮ, ವೆಂಕಟರಮಣಯ್ಯ ಇವರೆಲ್ಲ ಓದುಗರ ಸಹಾನುಭೂತಿಯನ್ನು ಗಳಿಸುತ್ತಾರೆ. ಅವರ ಬದುಕಿನ ಸ್ವಜ

ಚಿತ್ರಣ ಇಲ್ಲಿದೆ. ಮೂಢನಂಬಿಕೆಗಳಿಗೆ ಬಲಿಯಾಗಕೂಡದೆಂಬ ಎಚ್ಚರಿಕೆ, ಕಳಕಳಿಯನ್ನು ಲೇಖಕಿ ಇಲ್ಲಿ ತೋರಿಸಿದ್ದಾರೆ.

'ತಪೋವನದಲ್ಲಿ' :

ಈ ಕಾದಂಬರಿ ಕಾವಿ ಬಟ್ಟೆಯ ಕಪಟತನದ ವಿಷಯುವನ್ನೊಳಗೊಂಡಿವೆ. 'ತಪೋವನದಲ್ಲಿ' ಶ್ರೀಮತಿ ಇಂದಿರಾ ಅವರ ವಿಶಿಷ್ಟ ಕೃತಿ ನಮ್ಮ ದೇಶದಲ್ಲಿ ಕಪಟ ಸನ್ಯಾಸಿಗಳ ವಂಚನೆ ಎಂದಿಗೂ ಇದ್ದೇ ಇದೆ. ತಪೋವನದಲ್ಲಿ ನಡೆಯುವ ಕಪಟ ಸ್ವಾಮಿಗಳ ಮೋಸ ಅನ್ಯಾಯಗಳನ್ನು ಕಾದಂಬರಿಕಾರ್ತಿ ಇಲ್ಲಿ ದಿಟ್ಟತನದಿಂದ ಬಯಲಿಗೆಳೆದಿದ್ದಾರೆ. ಮಠಮಾನ್ಯಗಳಲ್ಲಿ, ದೇವರು ಧರ್ಮದ ಹೆಸರಿನಲ್ಲಿ ನಡೆಯುವ ಮೋಸ, ಅನ್ಯಾಯಗಳನ್ನು ಖಂಡಿಸಿ, ಬಸವರಾಜ ಕಟ್ಟೀಮನಿಯವರು 'ಜರತಾರಿ ಜಗದ್ಗುರು', ಶಿವರಾಮ ಕಾರಂತರು ಗರ್ಭಗುಡಿ (ನಾಟಕ) 'ಸನ್ಯಾಸಿಯ ಬದುಕು', ಜಗದೋದ್ಧಾರನ ಈ ಮೊದಲಾದ ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ. ಶ್ರೀಮತಿ ಎಂ. ಕೆ. ಇಂದಿರಾ ಅವರ 'ತಪೋವನದಲ್ಲಿ' ಇಂತಹ ಕೃತಿಗಳ ಸಾಲಿಗೆ ಸೇರುತ್ತದೆ.

'ಕತೆಗೆ ಮುನ್ನ' ಇಂದಿರಾ ಅವರು ಈ ಕಾದಂಬರಿಯ ಹಿನ್ನೆಲೆಯನ್ನು ಹೀಗೆ ವಿವರಿಸಿದ್ದಾರೆ :

ಪೋಲೀಸು ಇಲಾಖೆಯಲ್ಲಿದ್ದ ನಮ್ಮ ಆತ್ಮೀಯರೊಬ್ಬರು ಹೇಳಿದ ಒಂದು ಸಣ್ಣ ಸತ್ಯಕ್ಕೆ ಭೂತಗನ್ನಡಿ ಹಿಡಿದಿದ್ದೇನೆ. ಅಂದರೂ ಸರಿಯಾದೀತು. ಬಹಳ ದಿನಗಳಿಂದ ಮನದಲ್ಲಿ ನಿಂತ ಈ ಘಟನೆಗೆ ಪೂರಕವಾಗಿ ಇತ್ತೀಚಿನ ಕೆಲವು ಸಂಗತಿಗಳೂ ಸೇರಿ ಈ ಕಾದಂಬರಿ ಮೈದಾಳಿ ಬಂದಿತು.

ಅನಾದಿಕಾಲದಿಂದಲೂ ನಮ್ಮ ಭಾರತದಲ್ಲಿ ಕಪಟ ಸನ್ಯಾಸಿಗಳ ಕಾಟ ತಪ್ಪಿದ್ದಲ್ಲ. ಅದು ಇತ್ತೀಚೆಗೆ ಮಿತಿಮೀರಿ, ಸಮಾಜಕಂಟಕತನ ನಾರಿಯರ ಶೀಲಹರಣ ಹೀಗೆ ನಾನಾ ಬಗೆಯ ರೂಪ ತಳೆದಿದೆ.

ಮಹಿಳೆಯರು ಬಹು ಜಾಗ್ರತೆಯಾಗಿ ಬಲೆಗೆ ಬೀಳುವಂತೆ ಹಲವು ಬಗೆಯ ಪವಾಡ, ಐಂದ್ರಜಾಲಿಕ ವಿದ್ಯೆಗಳನ್ನು ಕಲಿತು ಈ ಕಪಟಿಗಳು ಸರ್ವತ್ರ ಜಾಲ ಹರಡುತ್ತಲಿದ್ದಾರೆ. ಎಂತಹ ವಿದ್ಯಾವಂತ ಸುಸಂಸ್ಕೃತ ನಾಗರಿಕರೂ ಈ ಜಾಲಕ್ಕೆ ಮೋಸ ಹೋಗುತ್ತಿರುವುದನ್ನು ನೋಡಿದರೆ ನಿಜಕ್ಕೂ ಹೆದರಿಕೆ ಎನಿಸುತ್ತದೆ. ಕೊನೆಯ ಪರಿಣಾಮ ಯಾರಿಗೂ ಮೊದಲು ಅರ್ಥವೇ ಆಗುವುದಿಲ್ಲ. ತಮ್ಮ ಸರ್ವಸ್ವವೂ ಸೂರೆಯಾದ ನಂತರವೇ ಇವರಿಗೆ ಜ್ಞಾನ ಬರುವುದು. ನಮ್ಮ ಸಮಾಜವು ಮೂಢನಂಬಿಕೆ, ಅಜ್ಞಾನಗಳಿಂದ ಹೆಜ್ಜೆ ಹೆಜ್ಜೆಗೂ ಮೋಸ ಹೋಗುತ್ತಿದೆ.

ಈ ಕಥಾವಸ್ತುವೇ 'ತಪೋವನದಲ್ಲಿ' ಮೂಡಿಬಂದಿದೆ. ನಮ್ಮ ಸೋದರಿಯರು ಇವನ್ನು ಅವಶ್ಯ ಓದಿ ಮನನ ಮಾಡಲಿ ಎಂದು ನನ್ನ ಹಂಬಲಿಕೆ. ಈ ನನ್ನ ಹಂಬಲ

ಎಷ್ಟರಮಟ್ಟಿಗೆ ಸಾರ್ಥಕ ಪಡೆಯುವುದೋ ನನಗೇ ತಿಳಿಯದು. ಬಹುತೇಕ ಇದು ಹೆಣ್ಣು ಮಕ್ಕಳಿಗಾಗಿಯೇ ಬರೆದ ಕಾದಂಬರಿ' ಎಂದಿದ್ದಾರೆ.

ಲೇಖಕಿಯ ಸಾಮಾಜಿಕ ಪ್ರಜ್ಞೆ, ಹೆಣ್ಣುಮಕ್ಕಳ ಬಗೆಗೆ ಇರುವ ಕಳಕಳಿ ಮೆಚ್ಚುವಂತಹದು.

ಮದುವೆಯಾಗಿ ಹದಿನೆಂಟು ವರ್ಷಗಳಾದರೂ ಮಕ್ಕಳಾಗದ ಕಾರಣ ದಂಪತಿಗಳಾದ ರಂಗರಾಯರು ಹಾಗೂ ಗಾಯತ್ರಿ 'ತಪೋವನದ' ಅಭಯಾನಂದ ಸ್ವಾಮಿಗಳ ದರ್ಶನಕ್ಕೆ ಬರುತ್ತಾರೆ.

ರಂಗರಾಯರ ಅಣ್ಣಂದಿರಿಗೆ ಇಬ್ಬರಿಗೂ ಮಕ್ಕಳಿಲ್ಲ. ಅವರ ಹೆಂಡತಿಯರಲ್ಲಿ ದೊಡ್ಡಾಕೆಗೆ ಹಲ್ಲು ಬಿದ್ದು ಮುದುಕಿ, ಎರಡನೆಯಾಕೆಗೆ ಮುಟ್ಟು ನಿಲ್ಲುವ ವಯಸ್ಸು ; ಅವರಿಬ್ಬರಿಗೂ ಮಕ್ಕಳಾಗುವ ಸಂಭವ ಇಲ್ಲವೆಂದು ತಿಳಿದ ರಂಗರಾಯರ ವೃದ್ಧ ತಾಯಿಗೆ ಹಗಲಿರುಳೂ ತಮ್ಮ ವಂಶ ಮುಂದುವರಿಯಲಿಲ್ಲವೆಂಬುದೊಂದೇ ಕೊರಗು. ಇನ್ನೂ ಉಳಿದವಳು ಗಾಯತ್ರಿಯೊಬ್ಬಳೇ. ಗಾಯತ್ರಿಯೂ ಸಾಂಪ್ರದಾಯಿಕವಾಗಿ ಮಾಡಿದ ಪೂಜೆ, ವ್ರತ, ನೇಮ, ಹರಕೆ, ನಾಗರ ಪ್ರತಿಷ್ಠೆ ಎಲ್ಲ ವಿಫಲವಾಗುತ್ತದೆ.

ದಿನದಿನಕ್ಕೆ ವೃದ್ಧ ತಾಯಿಗೆ, ತಮ್ಮ ವಂಶದ ಕುಡಿ ಇಲ್ಲವೆಂಬ ಚಿಂತೆ ಹೆಚ್ಚುತ್ತ ಹೋಗುತ್ತದೆ. ವೈದ್ಯರಲ್ಲಿ ಕರೆದೊಯ್ದು ತೋರಿಸಿ ಪರೀಕ್ಷೆ ಮಾಡಿಸುತ್ತಾರೆ. ರಂಗರಾಯರಿಗೂ ಸರ್ಜನರೊಬ್ಬರಿಂದ ಪರೀಕ್ಷೆ ಮಾಡಿಸುತ್ತಾರೆ. ಎಲ್ಲ ಪ್ರಯತ್ನಗಳೂ ವಿಫಲವಾದಾಗ 'ತಪೋವನದ ಮಹಿಮೆ' ಎಂಬ ಗ್ರಂಥದಲ್ಲಿ ವರ್ಣಿತವಾದ ಅಭಯಾನಂದ ಸ್ವಾಮಿಗಳ ಮಹಿಮೆ, ಹಾಗೂ ಸುತ್ತಣವರಿಂದ ಕೇಳಿದ ಸ್ವಾಮಿಗಳ ಪವಾಡ–ಇವುಗಳನ್ನು ತಿಳಿದ ದಂಪತಿಗಳು, ಕೊನೆಯ ಪ್ರಯತ್ನವೆಂಬಂತೆ 'ತಪೋವನಕ್ಕೆ' ಬರುತ್ತಾರೆ.

'ತಪೋವನದ' ಗಂಭೀರ, ಪ್ರಶಾಂತ, ವಾತಾವರಣ, ಭಕ್ತಾದಿಗಳ ಜನ ಜಂಗುಳಿಯನ್ನು ನೋಡಿದ ದಂಪತಿಗಳು, ಮುಗ್ಧರಾಗುತ್ತಾರೆ. ಎಲ್ಲ ಭಕ್ತರ ಕಷ್ಟಗಳನ್ನು ಪರಿಹಾರ ಮಾಡುವ ಅಭಯಾನಂದಸ್ವಾಮಿಗಳಿಂದ ಗಾಯತ್ರಿಗೂ ಕರೆ ಬರುತ್ತದೆ. ಸ್ವಾಮಿಗಳ ಆದೇಶದಂತೆ ಮೂರುದಿನ 'ಮಾರ್ಕಾಂಡೇಯ'ನಿಗೆ ರುದ್ರಾಭಿಷೇಕದ ಸೇವೆ ನಡೆಯುತ್ತದೆ.

ಮೂರು ದಿನವೂ ಇವರು ಇಳಿದುಕೊಂಡ ಮನೆಯಲ್ಲಿ ರಾತ್ರಿ ಔಪಚಾರಿಕವಾಗಿ ಕೊಟ್ಟ ಮಾದಕ ಹಾಲನ್ನು ಕುಡಿದ ಕೂಡಲೇ ಗಾಯತ್ರಿ ಪೂರ್ಣ ಪ್ರಜ್ಞೆ ಕಳೆದುಕೊಳ್ಳುತ್ತಾಳೆ. ಆಗಲೇ ಅಭಯಾನಂದ ಸ್ವಾಮಿಗಳಿಂದ ಅವಳ ಶೀಲ ಹರಣವಾಗುತ್ತದೆ. ಹೊನ್ನಾಚಾರಿ ಮೊದಲೇ ರಾತ್ರಿ ಸ್ವಪ್ನ ಬೀಳುತ್ತದೆಂದು ಸೂಚನೆ ಕೊಟ್ಟಿದ್ದರಿಂದ ಗಾಯತ್ರಿಗೆ ಏನೋ ಒಂದು ರೀತಿಯ ಸಂಶಯ ಬಂದರೂ ಅದು ಸ್ವಪ್ನವೆಂದು ತಿಳಿದುಕೊಳ್ಳುತ್ತಾಳೆ. ಮತ್ತೆ ಕೊನೆಯ ದಿನ ಸ್ವಾಮಿಗಳ ದರ್ಶನ ಪಡೆಯಲು ಅವಳು

ಹೋದಾಗ ರಾತ್ರಿ ತನ್ನ ಸ್ವಪ್ನದಲ್ಲಿ ಕಂಡ ಪುರುಷ ಈ ಸ್ವಾಮಿಯೇ ಇರಬಹುದೇ ಎಂಬ ಸಂಶಯ ಬಂದರೂ ಮೌನವಾಗಿದ್ದು ಬಿಡುತ್ತಾಳೆ. ದಂಪತಿಗಳು ತಮ್ಮ ಊರಿಗೆ ಹಿಂದಿರುಗುತ್ತಾರೆ.

ದಿನ, ವಾರ, ತಿಂಗಳು ಕಳೆಯುತ್ತವೆ. ಗಾಯತ್ರಿ ಗರ್ಭಿಣಿ ಎಂಬುದು ಮನೆಯವರಿಗೆಲ್ಲ ಖಚಿತವಾಗುತ್ತದೆ. ಮನೆಯಲ್ಲಿ ಗರ್ಭಿಣಿಗೆ ಹೂ, ಬಳೆ, ಸೀರೆ, ಕುಪ್ಪಸಗಳ ಸಂಭ್ರಮ ನಡೆಯುತ್ತದೆ. ಆದರೆ ಗಾಯತ್ರಿಗೆ ಏನೋ ಸಂದೇಹ! ಅವಳು ದಿನ ದಿನಕ್ಕೆ ಮಂಕಾಗುತ್ತ ಬರುತ್ತಾಳೆ, ಕಷ್ಟದ ಹೆರಿಗೆಯೂ ಆಗುತ್ತದೆ. ಗಾಯತ್ರಿ ತನ್ನ ವಂಶವನ್ನು ಬೆಳೆಸಿದಳೆಂಬ ಸಂಭ್ರಮದಲ್ಲಿ ಮಗುವಿನ ರೂಪದ ಬಗೆಗೆ ಯಾರೂ ಗಮನ ಕೊಡುವುದಿಲ್ಲ. ಆದರೆ ಗಾಯತ್ರಿಗೆ ಈ ಮಗು ತನ್ನ ಪತಿಯದಲ್ಲವೆಂದು ಖಚಿತವಾಗುತ್ತದೆ. ಮಗುವಿಗೆ ಹಾಲು ಕುಡಿಸುವುದನ್ನು ನಿರಾಕರಿಸುತ್ತಾಳೆ. ಅವಳ ಮನೋರೋಗ ಹೆಚ್ಚಾಗಿ ವೈದ್ಯರು 'ಹಿಸ್ಟೀರಿಯಾ' ಎಂದು ತೀರ್ಮಾನಿಸುತ್ತಾರೆ. ಗಾಯತ್ರಿ ಹುಚ್ಚಾಸ್ಪತ್ರೆ ಸೇರುತ್ತಾಳೆ. ಅಲ್ಲಿ ಮನೋವೈದ್ಯರು ಅವಳನ್ನು ಸುಪ್ತಾವಸ್ಥೆಗೆ ಒಳಪಡಿಸಿದಾಗ ಅವಳ ಬಾಯಿಂದ ಸತ್ಯ ಹೊರಬೀಳುತ್ತದೆ.

ಬಹಳ ದಿನಗಳ ನಂತರದ ಅಕ್ಕನ 'ಪುತ್ರೋತ್ಸವ'ವನ್ನು ಕಾಣಲು ಬಂದ ಗಾಯತ್ರಿಯ ತಮ್ಮ ಪೋಲಿಸ್ ಖಾತೆಯಲ್ಲಿದ್ದ ಜಗನ್ನಾಥನಿಗೆ ತನ್ನ ಅಕ್ಕ ಮೋಸ ಹೋದ ವಿಷಯ ತಿಳಿಯುತ್ತದೆ. ಇದ್ದ ಸತ್ಯ ಸಂಗತಿಯನ್ನು ಆತ ರಂಗರಾಯರಿಗೂ ತಿಳಿಸುತ್ತಾನೆ. ಉಳಿದವರಿಂದ ಬಚ್ಚಿಡುತ್ತಾನೆ. ಗಾಯತ್ರಿ ಸಾಯುವ ಮುನ್ನ ತಮ್ಮನಿಗೆ–

"ನಾನಿನ್ನು ಬದುಕೋದಿಲ್ಲ ಕಣೋ ಜಗನ್ನಾಥ, ಆಗಬಾರದ್ದು ಆಗಿ ಹೋಯ್ತು. ನನಗೆ ಏನಾದರೂ ಕಿಂಚಿತ್ತು ಒಳ್ಳೇದು ಮಾಡಬೇಕು ಅಂತ ನಿನ್ನ ಮನಸ್ಸಿನಲ್ಲಿ ಇದ್ದರೆ, ಆ ತಪೋವನದಲ್ಲಿ ಇರೋರನ್ನೆಲ್ಲ ಹಿಡಿದು ಜೈಲಿಗೆ ಹಾಕಬೇಕು. ಅಲ್ಲಿ ನಡೆಯೋದೆಲ್ಲ ಬರೀ ಮೋಸ. ನನ್ನ ಹಾಗೇ ಎಷ್ಟು ಜನ ಹೆಂಗಸರು ಕೆಟ್ಟು ಹೋಗಿದ್ದಾರೋ ಯಾರಿಗೆ ಗೊತ್ತು. ನನಗೆ ತಿಳಿದ ಹಾಗೆ ನಾಲ್ಕೈದು ಜನ ಹೆಂಗಸರು ಅಲ್ಲಿ ಹೋಗಿ ಮಕ್ಕಳನ್ನು ಹಡೆದು ಚೆನ್ನಾಗಿದ್ದಾರೆ. ಅವರ ಮನಸ್ಸು ಹೇಗೊ ಯಾರಿಗೆ ಗೊತ್ತು? ನಿಜವಾಗಿ ನನ್ನ ಮೇಲೆ ನಿನಗೆ ಪ್ರೀತಿ ಇದ್ದರೆ ಇಷ್ಟು ಕೆಲಸ ಮಾಡು ಇಲ್ಲದಿದ್ದರೆ ಇಲ್ಲಿಂದ ಹೊರಟು ಹೋಗು"[1]—ಎಂದು ಹೇಳಿದ ಮಾತುಗಳು ಪೋಲೀಸು ಖಾತೆಯ ಪ್ರಾಮಾಣಿಕ ಅಧಿಕಾರಿಯಾಗಿದ್ದ ಜಗನ್ನಾಥನ ಮನಸ್ಸಿನ ಮೇಲೆ ಗಾಢ ಪರಿಣಾಮ ಬೀರುತ್ತದೆ. 'ತಪೋವನ'ದ ಮೋಸ ಕಪಟ ಅನ್ಯಾಯವನ್ನು ಬಯಲಿಗೆಳೆಯಲು ಆತ ಕಂಕಣಬದ್ಧನಾಗುತ್ತಾನೆ.

1. ಎಂ. ಕೆ. ಇಂದಿರಾ : 'ತಪೋವನ'ದಲ್ಲಿ ಪುಟ–84.

ತನ್ನ ಹೆಂಡತಿ 'ವಿಮಲ'ಳಿಗೆ ಮೂಕಿಯಂತೆ ಅಭಿನಯಿಸಲು ತಿಳಿಸಿ ಗಂಡ ಹೆಂಡತಿಯರಿಬ್ಬರೂ ಅಣ್ಣ-ತಂಗಿಯರಾಗಿ ತಪೋವನವನ್ನು ಪ್ರವೇಶ ಮಾಡುತ್ತಾರೆ. ರಂಗರಾಯರು ಹಾಗೂ ಗಾಯತ್ರಿ ಹೋದಾಗ ಇಳಿದುಕೊಂಡಿದ್ದ ಅಕ್ಕಮ್ಮನ ಮನೆಯಲ್ಲಿಯೇ ಇಬ್ಬರೂ ತಂಗುತ್ತಾರೆ. ಇಬ್ಬರೂ ತೀರ ಸರಳವಾದ ವೇಷ ಧರಿಸಿಕೊಂಡು ತಪೋವನದಲ್ಲಿ ನಡೆಯುವ ಪ್ರತಿಯೊಂದು ಚಟುವಟಿಕೆಯನ್ನು ಕುತೂಹಲದಿಂದ ವೀಕ್ಷಿಸುತ್ತಾರೆ. ಅಭಯಾನಂದ ಸ್ವಾಮಿಗಳನ್ನು ಕಂಡ ತಕ್ಷಣ ಗಾಯತ್ರಿಗೆ ಹುಟ್ಟಿದ ಮಗ ಈ ಕಪಟ ಸನ್ಯಾಸಿಯದೇ ಎಂದು ಖಚಿತವಾಗುತ್ತದೆ.

'ತಪೋವನ'ದ ಸುತ್ತಲೂ ಪೋಲೀಸು ಪಡೆ ಕಾವಲಿರುತ್ತದೆ. ಪೋಲೀಸು ಖಾತೆಯವರು ತಪೋವನದ ಹೆಬ್ಬಾಗಿಲನ್ನು ಭದ್ರಪಡಿಸುತ್ತಾರೆ. ಮತ್ತು ಟೆಲಿಫೋನು ಮತ್ತು ಎಲೆಕ್ಟ್ರಿಕ್ ತಂತಿಗಳನ್ನು ಕಿತ್ತು ಹಾಕುತ್ತಾರೆ.

ತಪೋವನದಲ್ಲಿ, ನಾಟಕೀಯ ಮಾತುಗಳಿಂದ ಜನರನ್ನು ಬಲೆಗೆ ಹಾಕಿಕೊಳ್ಳುತ್ತಿದ್ದ ಅಕ್ಕಮ್ಮ, ರಾಧೆ, ಹೊನ್ನಯ್ಯ, ಮ್ಯಾನೇಜರ್, ದೇವಾಲಯದ ಅರ್ಚಕರು ಮತ್ತೆ ನಾಲ್ವರು ಮನೆಗಳವರನ್ನು ಬಂಧಿಸುತ್ತಾರೆ.

ಈ ಗದ್ದಲದಲ್ಲಿ ಅಭಯಾನಂದ ಸ್ವಾಮೀಜೀ ತಪ್ಪಿಸಿಕೊಂಡು ಓಡಿ ಹೋಗುತ್ತಾನೆ.

ತಪೋವನದ ಅಪರಾಧಿಗಳೆಲ್ಲ ಜೇಲು ಸೇರುತ್ತಾರೆ. ಪತ್ರಿಕೆಗಳಲ್ಲೆಲ್ಲ "ಕಳ್ಳ ಸ್ವಾಮಿಜಿ, ಸುಳ್ಳು ತಪೋವನ" ಸುಮಾರು ಹತ್ತು ವರ್ಷಗಳಿಂದ ಸಾರ್ವಜನಿಕರಿಗೆ ಬಹುಮುಖಗಳಲ್ಲಿ ಮೋಸಗೈದು ಕಳ್ಳನೋಟು ತಯಾರಿಸಿ ಕಪಟ ಯಂತ್ರ, ಮಂತ್ರ ಮಾಟಕೂಟಗಳಿಂದ ಸಾರ್ವಜನಿಕರ ಗಮನ ಸೆಳೆದು ಕೋಟಿಗಟ್ಟಲೆ ಕಳ್ಳ ನೋಟುಗಳ ಚಲಾವಣೆ ನಡೆಸುತ್ತಿದ್ದ ಕೇರಳದ ದತ್ತಾತ್ರೇಯ ಅತ್ರಿಯನ್ನು ಬಂಧಿಸಲು ಪೋಲಿಸರು ಯತ್ನಿಸಿದಾಗ ಮ್ಯಾನೇಜರ್ ಕಣ್ವಮೆನನ್ ಮತ್ತು ಹೊನ್ನಯ್ಯ ಎಂಬ ಹೆಸರಿನಿಂದ ತಪೋವನದಲ್ಲಿ ಚಾಕರನಂತೆ ಓಡಾಡುತ್ತಿದ್ದ ಹಳೆಯ ಕೇಡಿ ರಾಮಲಿಂಗ ಮತ್ತು ಸ್ವಾಮಿಜಿಯ ಅನುಯಾಯಿಗಳಾದ ರಾಧಾ, ಅಕ್ಕಮ್ಮ, ಅರ್ಚಕ ಶರಣಯ್ಯ ಮುಂತಾದವರು ಸಿಕ್ಕಿಬಿದ್ದು ಅಭಯಾನಂದ ಮಾತ್ರ ತಪ್ಪಿಸಿಕೊಂಡಿದ್ದಾನೆ. ಮುಂದಿನ ತನಿಖೆ ನಡೆಯುತ್ತದೆ ಎಂದು ಪ್ರಕಟವಾಗುತ್ತದೆ. ರಂಗರಾಯರು ಪತ್ರಿಕೆಯ ಸುದ್ದಿ ಓದಿ ವ್ಯಥಿತರಾಗಿ ತಿರುಪತಿಗೆ ಹೊರಟು ಹೋಗುವೆನೆಂದು ತಾಯಿಗೆ ಹೇಳಿ ದೇಶಾಂತರ ಹೊರಟುಬಿಡುತ್ತಾರೆ.

ತಪೋವನದಲ್ಲಿ ಹಂತ ಹಂತವಾಗಿ ತನಿಖೆ ಮುಂದುವರಿಯುತ್ತದೆ. ಅಭಯಾನಂದ ಕುಳಿತುಕೊಳ್ಳುತ್ತಿದ್ದ ಸ್ಥಳವನ್ನು ನೋಡಲು ಹೊರಡುತ್ತಾರೆ. ಅಭಯಾನಂದನ ಕುತಂತ್ರವೆಲ್ಲ ಒಂದೊಂದಾಗಿ ಹೊರಬೀಳುತ್ತದೆ. ಮ್ಯಾನೇಜರ್ ಆಗಿದ್ದ ಕಣ್ವನಿಗೆ ನಾಲ್ಕು ಛಡಿ ಏಟು ಬಿದ್ದಾಗ ಆತ ಸತ್ಯವನ್ನು ಹೊರಹಾಕುತ್ತಾನೆ.

ಪಕ್ಕದ ಕೋಣೆಯಲ್ಲಿದ್ದ ತಾಮ್ರದ ದತ್ತಾತ್ರೇಯನ ವಿಗ್ರಹದ ಎದೆಯಲ್ಲಿ ದೊಡ್ಡ ಬೀಗದ ಗೊಂಚಲು ಪತ್ತೆಯಾಗುತ್ತದೆ. ಅತ್ರಿಯ ಮಹಡಿ ಮೇಲಿನ ಕೋಣೆ ಯಲ್ಲಿ ಮುಖ್ಯವಾದದ್ದು ಆತನ ಮಲಗುವ ಕೋಣೆ ವೆಲ್ವೆಟ್ ಹಾಸಿಗೆ, ಬೆಲೆಬಾಳುವ ಮಂಚ, ಫೋನು ಬಗೆ ಬಗೆಯ ಮಾದಕ ದ್ರವ್ಯಗಳು ಪತ್ತೆಯಾಗಿ ಆತನ ವೈಭೋಗ ಜೀವನವನ್ನು ಬಯಲು ಮಾಡುತ್ತದೆ.

ಕಬ್ಬಿಣದ ಬೀರುಗಳಲ್ಲಿ, ಬೆಲೆಬಾಳುವ, ಗಿಡಮೂಲಿಕೆಗಳು, ಗಂಧದ ಕಡ್ಡಿ ಗಳು, ನಾನಾ ಬಗೆಯ ಮಣಿಸರಗಳು. ಬಗೆಬಗೆಯ ಕುಂಕುಮಗಳು, ಕೃತಕ ಗಡ್ಡ ಮೀಸೆ, ಕೂದಲು, (ವಿಗ್) ಜಟಾಜೂಟಗಳು, ಪತ್ತೆಯಾಗುತ್ತವೆ. ಅಲ್ಲದೆ ಬೆಲೆ ಬಾಳುವ ಬಟ್ಟೆಗಳು ಸುವಾಸನೆಯ ತೈಲಗಳು ಪೋಲೀಸರಿಗೆ ದಿಗ್ಭ್ರಮೆ ಹಿಡಿಸುತ್ತವೆ.

ನಾನಾ ಬಗೆಯ ಚಿತ್ರಗಳು, ಕೋಲುಗಳು, ರತ್ನಗಂಬಳಿಗಳು, ಇನ್ನೊಂದು ಪೆಟ್ಟಿಗೆಯಲ್ಲಿ ಮನುಷ್ಯನ ಬಲಗೈ ಹಸ್ತದ ಮೂಳೆ, ಮತ್ತು ತಲೆ ಬುರುಡೆ ಪತ್ತೆ ಯಾಗುತ್ತವೆ. ಅದೇ ರೀತಿ ಕಳ್ಳನೋಟುಗಳು ಯಂತ್ರವೂ ಪತ್ತೆಯಾಗುತ್ತದೆ. ಅಲ್ಲದೆ ದಿನನಿತ್ಯ ಲಿಂಗ ಪೂಜೆಗೆ ಹೇಳಿ ಮಾಡಿಸಿದ ಮುಖವಾಡಗಳು ಕಣ್ಣಿಗೆ ಬೀಳುತ್ತದೆ. ಅದೂ ಟೊಳ್ಳು ಲಿಂಗವೆಂಬುದು ಖಚಿತವಾಗುತ್ತದೆ.

ಸ್ವಾಮೀಜೀ ಪರಾರಿಯಾದ ಗುಪ್ತ ದ್ವಾರವೂ ಇವರಿಗೆ ತಿಳಿದುಹೋಗುತ್ತದೆ. ಹೀಗೆ ಒಂದೊಂದಾಗಿ ತಪೋವನದ ರಹಸ್ಯಗಳೆಲ್ಲ ಬಯಲಿಗೆ ಬೀಳುತ್ತವೆ.

ಕೋರ್ಟಿನಲ್ಲಿ ವಿಚಾರಣೆ ಪ್ರಾರಂಭವಾಗುತ್ತದೆ. ಮೊದಲು ವಿಚಾರಣೆಗೆ ಗುರಿ ಯಾದವಳು 'ಅಕ್ಕಮ್ಮ'. ಅವಳ ಸ್ವಂತ ಊರು 'ತಗಡೂ'ರೆಂದು ನಿಜವಾದ ಹೆಸರು 'ಮಹಾಲಕ್ಷ್ಮಮ' ಬಾಲ್ಯದಲ್ಲೇ ವಿಧವೆಯಾದಳೆಂದು ತಿಳಿಯುತ್ತದೆ. ಕೂಲಿ-ನಾಲಿ ಮಾಡುತ್ತಿದ್ದ ಆಕೆಯನ್ನು ಅತ್ರಿ ಕರೆದು ತಂದು ಹಣದ ಆಸೆತೋರಿಸಿ ತಾನು ಇಟ್ಟು ಕೊಂಡ ಸೂಳೆ 'ರಾಧೆ'ಯನ್ನು ಜೊತೆ ಮಾಡಿ ಒಂದು ಮನೆ ಮಾಡಿಕೊಟ್ಟನೆಂಬ ಸತ್ಯ ವನ್ನು ಬಯಲು ಮಾಡುತ್ತಾಳೆ.

ಅತ್ರಿ ಬಂದ ಹೆಣ್ಣುಮಕ್ಕಳಿಗೆಲ್ಲ ಮಂತ್ರ, ಯಂತ್ರ, ಬೂದಿಯಿಂದ ಮಂಕು ಮಾಡುತ್ತಿದ್ದನೆಂದು ವಶೀಕರಣ ಬೂದಿಯನ್ನು ಹಾಲಿನಲ್ಲಿ ಹಾಕಿಕೊಟ್ಟಾಗ ಕುಡಿದ ಹೆಣ್ಣುಮಕ್ಕಳು ತಾವಾಗಿಯೇ ಆತನಿದ್ದಲ್ಲಿಗೆ ನಡೆದುಕೊಂಡು ಹೋಗುತ್ತಿದ್ದರೆಂದು ವರದಿ ಒಪ್ಪಿಸುತ್ತಾಳೆ.

ಮೂರನೆಯ ದಿನ ರಾಧೆಯ ವಿಚಾರಣೆ ನಡೆದಾಗ ತನ್ನನ್ನು ಗಲ್ಲಿಗೇರಿಸಿದರೂ ತಾನೂ ಸತ್ಯವನ್ನು ಹೇಳುವದಿಲ್ಲವೆಂದು ಖಡಾಖಂಡಿತವಾಗಿ ನುಡಿಯುತ್ತಾಳೆ.

ಹೊನ್ನಯ್ಯನ ನಿಜವಾದ ಹೆಸರು ಮರಿಯಪ್ಪನೆಂದೂ ಆತನ ಊರು 'ಹಾಲು ಭಾವಿ', ತಾನು ಬಡಗಿ ಆಚಾರಿ ಎಂದೂ ನಿಜ ಹೇಳುತ್ತಾನೆ. ಅವನ ಆರು ಮಕ್ಕಳಲ್ಲಿ

'ರಾಧೆ'ಯೂ ಒಬ್ಬಳೆಂದು ಸತ್ಯ ಬಯಲು ಮಾಡುತ್ತಾನೆ. ಅವಳ ನಿಜವಾದ ಹೆಸರು 'ಚೆನ್ನಬಸ್ವಿ' ಎಂದೂ ಗೊತ್ತಾಗುತ್ತದೆ, ಚೆನ್ನಬಸ್ವಿ ಊರ ಬಸವಿಯಾಗಿದ್ದಳೆಂದು ನಿಜಾಂಶವೂ ಬಯಲಿಗೆ ಬರುತ್ತದೆ. ಹೆಣ್ಣು ಮಕ್ಕಳಿಗೆ ಬೂದಿ ತಂದುಕೊಡುವ ಕೆಲಸ ತನ್ನದೇ ಎಂದು ಒಪ್ಪಿಕೊಳ್ಳುತ್ತಾಳೆ.

ಅತ್ರಿಯ ಹತ್ತಿರ ನಾಲ್ಕೈದು ಕಾರುಗಳಿವೆಯೆಂದೂ ಆತ ದಿನಕ್ಕೊಂದು ವೇಷ ಹಾಕಿಕೊಂಡು ತಿರುಗುತ್ತಾನೆಂದೂ ಒಟ್ಟಿನಲ್ಲಿ ಆತನ ಗುಟ್ಟೆಲ್ಲ ಒಂದೊಂದಾಗಿ ಬಯಲಿಗೆ ಬರುತ್ತದೆ.

ದೇವಸ್ಥಾನದ ಅರ್ಚಕ 'ವೆಂಕಣ್ಣಭಟ್ಟ' ಪೆದ್ದುಪೆದ್ದಾಗಿದ್ದ ತಮ್ಮ ಮಗನನ್ನು ಅಭಯಾನಂದ ಸ್ವಾಮಿಜಿಯು ದರ್ಶನಕ್ಕೆ ಕರೆದುತಂದು ತಪೋವನದಲ್ಲಿಯೇ ಉಳಿದು ಕೊಂಡವನು. ಕಪಟ ಸ್ವಾಮಿಜಿಯು ಇವರ ಜೀವನಕ್ಕೆ ಸೌಕರ್ಯ ಮಾಡಿಕೊಟ್ಟಿದ್ದ ರಿಂದ ತಾನೂ ಇಲ್ಲಿಯೇ ಉಳಿದುದಾಗಿ ತಿಳಿಸುತ್ತಾನೆ.

ವೆಂಕಣ್ಣಭಟ್ಟರ ಸರದಿ ಮುಗಿದ ನಂತರ ಹೊಟೆಲ್‌ನ 'ಲಕ್ಷ್ಮಣ'. ಆತ ಕಾರ್ಕಳದವನೆಂದೂ ಬೆಂಗಳೂರಿನಲ್ಲಿ ಚಿಕ್ಕ ಹೊಟೇಲು ಇಟ್ಟುಕೊಂಡು ವಾಸವಾಗಿದ್ದ ಆತನನ್ನು ಕಣ್ವಮೆನನ್ ಕರೆತಂದನೆಂಬ ವಿಷಯ ತಿಳಿದುಹೋಗುತ್ತದೆ.

'ಹೊಳ್ಳ ಲಕ್ಷ್ಮಣ'ನ ನಂತರ ಕಣ್ವಮೆನನ್ ಆತನ ನಿಜವಾದ ಹೆಸರು 'ಪೆರಿಸ್ವಾಮಿ' ಆತನನ್ನು ಜೇಲಿನಿಂದ ಕೋರ್ಟಿಗೆ ಹೊರತಂದಾಗ ಆತನಿಗೆ ನಿಜಕ್ಕೂ ಪಾರ್ಶ್ವವಾಯು ಬಡಿದು ಮಾತು ನಿಂತು ಹೋಗಿರುತ್ತದೆ. ಕೋರ್ಟಿನಲ್ಲಿ ವಿಚಾರಣೆ ನಡೆದಾಗಲೇ (ಮಿಲಿಟರಿ ಆಫೀಸರ್) ಸಿಂಧಿ ದಂಪತಿಗಳು ಬಂದು ನ್ಯಾಯಾಧೀಶನಿಗೆ ತಮ್ಮ ನಾಲ್ಕು ಮಾತುಗಳನ್ನು ಕೇಳಬೇಕೆಂದು ಬಿನ್ನವಿಸಿಕೊಳ್ಳುತ್ತಾರೆ. ಮಿಲಿಟರಿ ಆಫೀಸರರ ಹೆಂಡತಿಯ ಭವ್ಯ ವ್ಯಕ್ತಿತ್ವ, ಅವಳ ಸೌಂದರ್ಯ ಮಾದಕ ಪರಿಮಳದಿಂದ ಕೋರ್ಟಿನಲ್ಲಿದ್ದವರೆಲ್ಲ ಮಂತ್ರ ಮುಗ್ಧರಾಗುತ್ತಾರೆ. ತಾವು ದತ್ತಾತ್ರಿಯ ಪ್ರಕರಣದ ಬಗ್ಗೆ ತಿಳಿಯಲು ಬಂದವರೆಂದು ಹೇಳುತ್ತಾರೆ.

ಮತ್ತೆ ರಾಧೆಯ ವಿಚಾರಣೆ ಪ್ರಾರಂಭವಾಗುತ್ತದೆ. ಅವಳು ಜೇಲಿನಲ್ಲಿ ಊಟವಿಲ್ಲದೆ ಸೋತು ಸುಸ್ತಾಗಿ ತನ್ನನ್ನು ಬಿಡುಗಡೆ ಮಾಡಿದರೆ ಸತ್ಯವನ್ನು ಹೇಳಲು ಸಿದ್ಧಳಾಗಿರುವೆನೆಂದು ಹೇಳುತ್ತಾಳೆ. 'ತಪೋವನ'ದಲ್ಲಿ ದೊರೆತ ಬಗೆಬಗೆಯ ವಸ್ತು ಗಳೆಲ್ಲ ಕೋರ್ಟಿನಲ್ಲಿ ಹಾಜರಾಗುತ್ತವೆ. ಅಭಯಾನಂದ, ದತ್ತಾತ್ರೆಯ, ಅಶಿತ್‌ಬಾಬು, ಮುರುಗ ಚೆಟ್ಟಿಯಾರ್, ಇವೆಲ್ಲ ಆ ಕಳ್ಳ ಸ್ವಾಮಿಜಿ ಇಟ್ಟುಕೊಂಡಿದ್ದ ಹೆಸರುಗಳೆಂದು ಸತ್ಯವನ್ನು ಹೊರಗೆಡುವುತ್ತಾಳೆ.

"ಇಷ್ಟೊಂದು ಗಂಧದ ಕಡ್ಡಿಗಳನ್ನು ಯಾತಕ್ಕೆ ಶೇಖರಿಸಿದ್ದಾನೆ ?" ಎಂದು ನ್ಯಾಯಾಧೀಶರು ಕೇಳಿದಾಗ—

"ಅಭಯಾನಂದನ ಸಭೆ ನಡೆಯುವಾಗ ಒಂದು ಬಗೆಯ ಧೂಪ ಕಡ್ಡಿ ಹಚ್ಚಿಡುತ್ತಿದ್ದರು. ಅದರ ವಾಸನೆ ಮೂಗಿಗೆ ತಾಗಿದರೆ ಸಾಕು, ಅಭಯಾನಂದನ ಮೇಲೆ ಎಲ್ಲಿಲ್ಲದ ಭಕ್ತಿ ಮೂಡುತ್ತಿತ್ತು.

ಇನ್ನೊಂದು ಸಮ್ಮೋಹಕ ಶಕ್ತಿಯ ಧೂಪ ಇದೆ. ಅದರ ಹೊಗೆ ಚಿತ್ತಕ್ಕೆ ಹೋದರೆ ಹೆಂಗಸು ಸಂಪೂರ್ಣವಾಗಿ ಅವನ ವಶವಾಗುತ್ತಾಳೆ. ಹೀಗೆ ಮೂರ್ಛೆ ಬರಿಸುವ, ಮರೆವು ತರೆಸುವ ಅನೇಕ ವಿಧದ ಗಂಧದ ಕಡ್ಡಿಗಳಿವೆ ಇದರಲ್ಲಿ." ಅನೇಕ ಹೆಂಗಸರಿಗೆ ಮಕ್ಕಳಾಗುವಂತೆ ಔಷಧಿ ಕೊಡುತ್ತಿದ್ದುದು ನಿಜವೇ ?"

ಔಷಧಿ ಏನೂ ಕೊಡುತ್ತಿರಲಿಲ್ಲ. ಗಂಡನಿಂದ ಮಕ್ಕಳನ್ನು ಪಡೆಯಲಾಗದ ಹೆಂಗಸರು ಇವನಿಂದ ಪಡೆಯುತ್ತಿದ್ದುದು ಅಷ್ಟೆ.

'ಈಗ್ಗೆ ವರ್ಷದ ಹಿಂದೆ ಹಾಗೆ ಯಾರಾದರೂ ಮಕ್ಕಳ ಸಲುವಾಗಿ ತಪೋವನಕ್ಕೆ ಬಂದಿದ್ದು ನಿನಗೆ ನೆನಪಿದೆಯೇ ?'

'ಇದೆ, ಬಂದವರು ನಾಲ್ಕಾರು ಮಂದಿಯಾದರೂ ಅದರಲ್ಲಿ ತುಂಬಾ ವಯಸ್ಸಾದವರು ಮೂರು ಜನ. ಅಂಥವರನ್ನು ಅಭಯಾನಂದ ಹತ್ತಿರ ಸೇರಿಸು ತ್ತಿರಲಿಲ್ಲ... ಪ್ರಾಯದ ಸುರೂಪಿ ಹೆಂಗಸರು ಬಂದರೆ ಮಾತ್ರ ಅವರನ್ನು ತನ್ನ ಹತ್ತಿರ ಬರಮಾಡಿಕೊಳ್ಳುತ್ತಿದ್ದ.

"ಕಳೆದ ವರ್ಷದಿಂದ ನಾನು ಮೂರು ಜನರಿಗೆ ಮಾತ್ರ ಆ ಔಷಧಿ ಕೊಟ್ಟೆ."

ಅವಳಲ್ಲಿ ಒಬ್ಬಳ ಹೆಸರು ಗಾಯತ್ರಿ...[1] ಎಂಬ ಕಟುಸತ್ಯ ರಾಧೆಯ ಬಾಯಿಂದ ಹೊರಬೀಳುತ್ತದೆ. ಎಲ್ಲ ಗಿಡಮೂಲಿಕೆ, ಪರಿಮಳ, ದ್ರವ್ಯ, ಮಾದಕವಸ್ತುಗಳ ಭಸ್ಮ ಲೇಖಗಳ ಪರೀಕ್ಷೆ ನಡೆಯುತ್ತದೆ. ಅರುಣಸಿಂಗ್ ದಂಪತಿಗಳು ಮತ್ತೆ ಕೋರ್ಟಿನಲ್ಲಿ ಹಾಜರಾಗುತ್ತಾರೆ. ಪ್ರತಿಯೊಂದು ವಸ್ತುವನ್ನು ನೋಡುತ್ತಾರೆ. ಅಲ್ಲಿರುವ ವಶೀಕರಣದ ಮಂತ್ರದಂಡವನ್ನು ಅರುಣಸಿಂಗ್‌ನ ಹೆಂಡತಿ ಮುಟ್ಟಿದ ಕೂಡಲೇ ಕೋರ್ಟಿನಲ್ಲಿದ್ದವರೆಲ್ಲ ಸುಷುಪ್ತಾವಸ್ಥೆಗೆ ಒಳಗಾಗಿ ಕಣ್ಣು ತೆಗೆಯುವುದರಲ್ಲಿ ಅಂದಕ್ಷತಿ ಗಳು ಅಲ್ಲಿರುವುದಿಲ್ಲ. ಆಫೀಸರನ ಹೆಂಡತಿ ಬೇರೆ ಯಾರೂ ಅಲ್ಲ. ಅಭಿಯಾನಂದ ಸ್ವಾಮೀಜಿಯೇ ಸ್ತ್ರೀವೇಷ ಹಾಕಿಕೊಂಡು ಬಂದು ಮಂತ್ರದಂಡವನ್ನು ತೆಗೆದುಕೊಂಡು ಓಡಿಹೋಗುತ್ತಾನೆ.

ಗಾಯತ್ರಿಗೆ ಹುಟ್ಟಿದ ಮಗು ರಂಗರಾಯರದಲ್ಲವೆಂಬ ಸತ್ಯ ಎಲ್ಲರಿಗೂ ತಿಳಿದು ಹೋಗುತ್ತದೆ. ರಂಗರಾಯರ ಮನೆಯವರಿಗೆಲ್ಲ ಬುದ್ಧಿ ಬರುತ್ತದೆ. ಮಗುವನ್ನು ಕ್ರೈಸ್ತರ ಅನಾಥಾಶ್ರಮಕ್ಕೆ ಒಪ್ಪಿಸುತ್ತಾರೆ. ಇದು 'ತಪೋವನ' ಕಾದಂಬರಿ ಕಥಾವಸ್ತು.

---

1. ಎಂ. ಕೆ. ಇಂದಿರಾ : 'ತಪೋವನದಲ್ಲಿ' ಪುಟ-143-144.

"ಇವರ ಕಾದಂಬರಿ ಮಾಲಿಕೆಯಲ್ಲಿ ಇದಕ್ಕೊಂದು ಮಹತ್ವದ ಸ್ಥಾನವುಂಟು. ಪ್ರಸ್ತುತ ವಿಷಯವನ್ನಾಧರಿಸಿ ಹಲವಾರು ಕಾದಂಬರಿಗಳು ಬೆಳಕು ಕಂಡಿದ್ದರೂ ಈ ಪ್ರಯತ್ನ ಮಾಡಿದ ಲೇಖಕಿಯರಲ್ಲಿ ಇವರೇ ಮೊದಲಿಗರು"[1]

ನಮ್ಮ ಸಂಬಂಧ ಅಜ್ಞಾನ ಮೂಢತನಗಳನ್ನು ಕಾದಂಬರಿ ಎತ್ತಿ ತೋರಿಸಿದೆ. ತಮ್ಮ ವಂಶದಲ್ಲಿ ಗಂಡಸರಲ್ಲೇ ದೋಷವಿದ್ದುದನ್ನು ತಿಳಿದೂ ವಿದ್ಯಾವಂತ ಸುಸಂಸ್ಕೃತ ಮನೆತನದ ರಂಗರಾಯರು, ಅಭಯಾನಂದ ಸ್ವಾಮಿಯ ಮೊರೆ ಹೋಗುವುದು, ಗಾಯಿತ್ರಿ ರಂಗರಾಯರು ಅವರ ಮನೆಯವರು ನಮ್ಮ ಸಮಾಜದ ಮೂಢತನದ ಪ್ರತೀಕವಾಗಿದ್ದಾರೆ, ಗಂಡ–ಹೆಂಡರಲ್ಲಿ ಯಾರೊಬ್ಬರಲ್ಲಿ ದೋಷವಿದ್ದರೂ ಮಕ್ಕಳಾಗುವುದಿಲ್ಲವೆಂಬುದು ವೈಜ್ಞಾನಿಕ ಸತ್ಯ. ಹೀಗಿದ್ದಾಗಲೂ ಆ ದಂಪತಿಗಳು ಅಭಯಾನಂದ ಸ್ವಾಮಿಗೆ ಶರಣಾಗಲು ನಮ್ಮ ಸಮಾಜವೇ ಕಾರಣ.

ಒಂದೆಡೆ ಸಮಾಜದಲ್ಲಿ 'ಬಂಜೆ'ಯೆಂಬ ಚುಚ್ಚುನುಡಿ, ಮನೆಯ ಜನರ ಚಿಂತೆ, ದಂಪತಿಗಳ ಬದುಕಿನ ನೀರಸತ್ಯವೆಲ್ಲ ಅವರನ್ನು ಹಾಗೆ ಮಾಡಲು ಹಚ್ಚಿವೆ. ಈ ರೀತಿ ಬಂಜೆಯರು, ಅಭಯಾನಂದನಿಂದ ಮಕ್ಕಳನ್ನು ಪಡೆದವರು ಬಹಳ ಜನ; ಎಂದು ಕಾದಂಬರಿಯಲ್ಲಿ ಲೇಖಕಿ ಸೂಚಿಸಿದ್ದಾರೆ. ಅವರೆಲ್ಲ ನಮ್ಮ ಸಮಾಜದ ಅಜ್ಞಾನಿಗಳು ಕೆಲವರು ಅದನ್ನು ಬಚ್ಚಿಟ್ಟುಕೊಂಡರೆ ಗಾಯಿತ್ರಿಯಂತಹ ಪತಿವ್ರತೆಯರು ಹಿಸ್ಟೀರಿಯಾ ರೋಗಕ್ಕೆ ಬಲಿಯಾಗಿ ಮನೆತನವೇ ಹಾಳಾಗುತ್ತದೆ.

ಶ್ರೀಮತಿ ಇಂದಿರಾ ಅವರು ತಾವು ಕೇಳಿದ ಸತ್ಯ ಸಂಗತಿಯನ್ನೇ ಆಧರಿಸಿ ಈ ಕೃತಿ ರಚಿಸಿದ್ದಾರೆ. ತಪೋವನದ ಮಹಿಮೆ, ವರ್ಣನೆ, ಸ್ವಾಮೀಜಿಯ ಮೋಸ, ಅನ್ಯಾಯ ಎಲ್ಲವನ್ನೂ ಇಂದಿರಾ ಅವರು ಚೆನ್ನಾಗಿ ವರ್ಣಿಸಿದ್ದಾರೆ. ಕೌಶಲ್ಯಪೂರ್ಣ ಕುತೂಹಲಮಯ ಸನ್ನಿವೇಶಗಳ ನಿರ್ಮಾಣ ಹಾಗೂ ಪಾತ್ರ ಸೃಷ್ಟಿಯಲ್ಲಿ ಲೇಖಕಿಯ ಚಮತ್ಕೃತಿ ಇದೆ.

ಕಾದಂಬರಿಯ ಸ್ತ್ರೀ ಪಾತ್ರ ಗಾಯಿತ್ರಿ, ವಿಮಲ, ರಾಧೆ ಅಕ್ಕಮ್ಮ ಎಲ್ಲ ಜೀವಂತ ಪಾತ್ರಗಳಾಗಿ ಕಂಗೊಳಿಸುತ್ತವೆ. ನಮ್ಮೆದುರು ನಿಲ್ಲುತ್ತವೆ.

ಸ್ವಾಮೀಜಿಯ ಅತ್ಯಾಚಾರಕ್ಕೆ ಬಲಿಯಾದ ಗಾಯಿತ್ರಿಯ ಪಾತ್ರ ಓದುಗರ ಕನಿಕರ ಸಹಾನುಭೂತಿ ಗಳಿಸುತ್ತದೆ.

ಅದೇ ರೀತಿ ಸ್ವಾಮೀಜಿಯ ಹಣದಾಸೆಗೆ ಬಲಿಯಾಗಿ ಕಪಟತನವನ್ನು ಮೈಗೂಡಿಸಿಕೊಂಡು ಜನರಿಗೆ ಮೋಸ ಮಾಡುವಲ್ಲಿ ಸಹಾಯ ಮಾಡುತ್ತಿದ್ದ ಅಕ್ಕಮ್ಮ, ರಾಧೆ, ಇವರ ನಾಟಕೀಯತೆ ಮಾತುಗಳು, ಇವರ ಕೃತಕ ನಡವಳಿಕೆ ಇವೆಲ್ಲ ಅತ್ಯಂತ ಸ್ವಾಭಾವಿಕ ಚಿತ್ರಣವನ್ನು ಒಳಗೊಂಡಿವೆ. ಸ್ವಾಮಿಾಜಿ, ಹೊನ್ನಯ್ಯ, ಕಣ್ವಮೇನನ್,

1. ಕೆ. ವಿಜಯಶ್ರೀ : 'ಕನ್ನಡ ನುಡಿ' 'ಇಂದಿರಾ ಅವರ ಕಾದಂಬರಿಗಳ ಸಮೀಕ್ಷೆ' ಪುಟ–27

ಲಕ್ಷ್ಮಣ ಹೊಳ್ಳ, ಇವರೆಲ್ಲ ಸಮಾಜ ಘಾತುಕರು. ತಮ್ಮ ಹೆಸರನ್ನು ಬದಲಿಸಿಕೊಂಡು ಸಮಾಜದ ಅಜ್ಞಾನವನ್ನು ದುರುಪಯೋಗಪಡಿಸಿಕೊಂಡು ನಾನಾ ವಿಧದ ಜಾಲವನ್ನು ಹರಡಿ ಮೋಸಮಾಡಿದ ಕುತಂತ್ರಿಗಳು ಹಾಗೂ ದೇಶದ್ರೋಹಿಗಳು.

ಕೋರ್ಟಿನಲ್ಲಿ ನಡೆಯುವ ವಿಚಾರಣೆ, ಸ್ವಾಮಿಜಿ ಹೆಣ್ಣುಮಕ್ಕಳಿಗೆ ಮೋಸ ಮಾಡುವ ರೀತಿ ಇವುಗಳ ವರ್ಣನೆ ಸಹಜವಾಗಿ ಬಂದಿದೆ.

ರಂಗರಾಯರ ಮನೆಯವರಿಗೆ, ಗಾಯಿತ್ರಿಗೆ ಹುಟ್ಟಿದ ಮಗು ಸ್ವಾಮಿಜಿಯವರ ದೆಂದು ತಿಳಿದಾಗ, ಆ ಕಪಟ ಸನ್ಯಾಸಿಯ ದೇಶದ್ರೋಹಿಯ ಮಗುವನ್ನು ಸಾಕಲು ಮನೆಯವರು ನಿರಾಕರಿಸುತ್ತಾರೆ. ಕ್ರಿಶ್ಚಿಯನ್ನರು ಅದನ್ನು ವಿಶಾಲ ಹೃದಯದಿಂದ ಸ್ವೀಕರಿಸುತ್ತಾರೆ.

ಲೇಖಕಿಯ ಬಂಡೇಳುವ ಮನೋಭಾವ ವೈಜ್ಞಾನಿಕ ದೃಷ್ಟಿಕೋನ ಕಾದಂಬರಿ ಯಲ್ಲಿ ಸ್ಪಷ್ಟವಾಗಿದೆ. ಪರಿಣಾಮಕಾರಿ ಬರವಣಿಗೆಯಿಂದ ಇಂತಹ ಒಂದು ಉತ್ತಮ ಕೃತಿಯನ್ನು ಕೊಟ್ಟು ಲೇಖಕಿ ಅಭಿನಂದನಾರ್ಹರಾಗಿದ್ದಾರೆ. ಅಜ್ಞರನ್ನು ಸುಲಭ ಶ್ರದ್ಧೆಯ ಜನರನ್ನು ಕಪಟ ಸನ್ಯಾಸಿಗಳು ಶೋಷಣೆಮಾಡುವ ರೀತಿಯನ್ನು ಈ ಕಾದಂಬರಿ ಚಿತ್ರಿಸುತ್ತದೆ. ಕಾವಿ ಬಟ್ಟೆಯ ಸೋಗು ಕಳಚಿ ಒಂದು ದಿನ ಅದರ ಹಿಂದೆ ಅಡಗಿದ ಧೂರ್ತನ ಸ್ವರೂಪ ಬಯಲಾಗಿ ಮೋಸ ಹೊರಬೀಳುತ್ತದೆ.

'ಜಾತಿ ಕೆಟ್ಟವಳು' :

ಈ ಕಾದಂಬರಿಯಲ್ಲಿ ಜಾತಿ ಸಮಸ್ಯೆಯನ್ನು ಬಿಡಿಸಿನೋಡುವ ಪ್ರಯತ್ನವಿದೆ. ಬಾಲ್ಯದಲ್ಲಿ ತಾವು ಕಂಡ ಸಂಗತಿಯನ್ನೇ ಶ್ರೀ ಎಂ. ವೆಂಕಟೇಶ ಅವರ ಸಲಹೆಯ ಮೇರೆಗೆ ಕಾದಂಬರಿ ರೂಪ ಕೊಟ್ಟಿರುವುದಾಗಿ 'ಸಂಧರ್ಭ'ದಲ್ಲೆ ಹೇಳಿದ್ದಾರೆ. ೧೩೩ ಪುಟಗಳ ಈ ಕಿರುಕಾದಂಬರಿಯನ್ನು ಒಂದು ವಾರದಲ್ಲೆ ಬರೆದು ಮುಗಿಸಿದ್ದಾರೆ.

ಈ ಶತಮಾನದ ಆರಂಭದ ದಶಕಗಳಲ್ಲಿ ಬ್ರಾಹ್ಮಣ ಸಮಾಜದಲ್ಲಿದ್ದ ಅಂಧಶ್ರದ್ಧೆ, ಮೂಢತನ ಇವುಗಳನ್ನು ಕಾದಂಬರಿಯಲ್ಲಿ ವ್ಯಂಗ್ಯವಾಗಿ ಟೀಕಿಸಿದ್ದಾರೆ. ಈ ಕಾದಂಬರಿಯ ತಂತ್ರ ಆತ್ಮಕಥನ ರೂಪದ್ದು. ಪ್ರತಿಯೊಂದು ಪಾತ್ರವೂ ತನ್ನ ಕಥೆ ಯನ್ನು ತಾನೇ ಹೇಳಿಕೊಂಡು ಹೋಗುತ್ತದೆ. ಇಲ್ಲಿ ಬರುವ ಮುಖ್ಯ ಪಾತ್ರಗಳೆಂದರೆ ವಾಸುದೇವ, ಸಾಂಬಯ್ಯ, ಬುಳ್ಳಮ್ಮ, ಪದ್ದ, ನೀರಜ, ನಾಗು.

"ಹಿಂದಿನ ಕಾಲದಲ್ಲಿ ಕುದುರೆಗಾಡಿಯ ಪ್ರಯಾಣ ಮಾಡುವವರು ಮೂವತ್ತು ನಲವತ್ತು ಮೈಲಿಗಳಿಗೊಂದರಂತೆ ಕುದುರೆಗಳನ್ನು ಬದಲಾಯಿಸುತ್ತಿದ್ದರು. ಕಾರಣ ಇಷ್ಟೇ. ಒಂದೇ ಕುದುರೆಗೆ ತುಂಬಾ ಆಯಾಸವಾಗಬಾರದು ಮತ್ತು ಅವುಗಳಿಗೆ ಆಯಾ ಪ್ರದೇಶದ ಪರಿಚಯ ಇರಬೇಕು. ಇಲ್ಲಿಯೂ ಹಾಗೆಯೇ! ನಾನೊಬ್ಬನೇ ಎಲ್ಲ ಹೇಳಿ ಕೊಂಡು ಹೋದರೆ ನಿಮಗೂ ಓದಲು ಬೇಜಾರಾಗುತ್ತದೆ. ನನಗೂ ದಣಿವಾಗುತ್ತದೆ,

ಆದ್ದರಿಂದ ನನ್ನ ಜೀವನ ಪಥದಲ್ಲಿ ನನ್ನ ಸಹಚರರಾಗಿ ನಡೆದುಬಂದ ಪ್ರಮುಖ ವ್ಯಕ್ತಿಗಳಿಂದ ಸ್ವಲ್ಪ ಸ್ವಲ್ಪ ಕಥೆ ಹೇಳಿಸುತ್ತೇನೆ"[1] ಎಂದು ವಾಸುದೇವನ ಪಾತ್ರದ ಮೂಲಕ ಹೇಳಲಾಗಿದೆ.

ಕಾದಂಬರಿಯಲ್ಲಿ ಬಹು ಭಾಗವನ್ನು ವಾಸುದೇವ ಆಕ್ರಮಿಸುತ್ತಾನೆ. ವಾಸುದೇವನ ಆತ್ಮವೃತ್ತಾಂತದಿಂದ ಕಾದಂಬರಿ ಆರಂಭವಾಗುತ್ತದೆ. ಕಾದಂಬರಿಯ ಘಟನೆಗೆ ಕಾರಣಳಾದವಳು ವಾಸುದೇವನ ಸಹಚರಿ ನೀರಜ. ಅಂದಿನ ಸಮಾಜದಲ್ಲಿ 'ಜಾತಿ ಕೆಟ್ಟವರು' ಎಂದು ಹೆಸರಾದವರ ಮನೆಯ ಹುಡುಗಿಯನ್ನು ಧೈರ್ಯವಾಗಿ ಮದುವೆಯಾಗಿ ವಾಸುದೇವ ಕ್ರಾಂತಿಕಾರಿ ಎನಿಸುತ್ತಾನೆ. ಬಾಲ್ಯದಿಂದಲೇ ವಿದ್ಯಾಭ್ಯಾಸದಲ್ಲಿ ಮುಂದಾದ ವಾಸುದೇವ ಆಧುನಿಕ ಶಿಕ್ಷಣದ ಪ್ರಭಾವಕ್ಕೆ ಒಳಗಾಗುತ್ತಾನೆ. ಬಿ. ವೆಂಕಟಾಚಾರ್ಯ, ಗಳಗನಾಥ ಇವರ ಕಾದಂಬರಿಗಳ ನಾಯಕರ ಧೈರ್ಯ, ಸಾಹಸ, ಛಲ ಅಂದಿನ ಯುವಕರಲ್ಲಿ ಹೊಸ ಉತ್ಸಾಹವನ್ನು ತುಂಬಿದಂತೆ, ವಾಸುದೇವನೂ, ಆ ಕಾದಂಬರಿಗಳಿಂದ ಪ್ರಭಾವಿತನಾಗಿರುತ್ತಾನೆ. ಸಮಾಜದ ರೀತಿ, ನೀತಿಗಳ ಬಗ್ಗೆ ಅವನ ಮನದಲ್ಲಿ ಜಿಜ್ಞಾಸೆ ಪ್ರಾರಂಭವಾಗುತ್ತದೆ. ಸಮಾಜದಲ್ಲಿ ಬೇರೂರಿದ್ದ ಅಂಧಶ್ರದ್ಧೆ, ಡಾಂಭಿಕತೆ ಇವುಗಳ ಪ್ರಜ್ಞೆಯುಳ್ಳವನಾದ ವಾಸುದೇವ ಸಮಾಜವನ್ನು ಧೈರ್ಯದಿಂದ ಎದುರಿಸಿ 'ಜಾತಿ ಇಲ್ಲದವರ' ಮನೆಯ ಹುಡುಗಿಯನ್ನು ಮದುವೆಯಾಗುತ್ತಾನೆ. ತಂದೆ ತಾಯಿ, ಕುಟುಂಬ, ಬಂಧು, ಬಳಗ, ಊರು, ಸಮಾಜ ಇವುಗಳಿಂದ ಅವನು ಪ್ರತ್ಯಕ್ಷವಾಗಿ ಅಲ್ಲದಿದ್ದರೂ ಪರೋಕ್ಷವಾಗಿ ಬಹಿಷ್ಕರಿಸಲ್ಪಡುತ್ತಾನೆ. ಸ್ವಸಂಪಾದನೆಯಿಂದ ಗಣ್ಯವ್ಯಕ್ತಿಯಾದಾಗ ಜಾತಿ ಕೆಟ್ಟವಳನ್ನು ಮದುವೆಯಾದನೆಂದು ಆತನಿಗೆ ಅಂಟಿದ ಕಳಂಕವೂ ಮಾಯವಾಗುತ್ತದೆ. ಕಾಲ ಕ್ರಮೇಣ ಸಮಾಜದ ಕಟ್ಟುಪಾಡುಗಳೂ ಸಡಿಲವಾಗತೊಡಗುತ್ತವೆ ಕಾಲ ಬದಲಾದಂತೆ ಸಮಾಜವೂ ಬದಲಾಗುತ್ತ ನಡೆಯುವುದನ್ನು ಇಲ್ಲಿ ಸೂಚ್ಯವಾಗಿ ಹೇಳಲಾಗಿದೆ.

ಸ್ತ್ರೀ ಶೋಷಣೆಯ ಹಿನ್ನೆಯಲ್ಲಿಯೇ ಈ ಕಾದಂಬರಿಯಲ್ಲಿ ಜಾತಿಸಮಸ್ಯೆ ಹುಟ್ಟಿಕೊಂಡಿದೆ. ಸ್ತ್ರೀಶೋಷಣೆ, ಹಾಗೂ ಜಾತಿ ವ್ಯವಸ್ಥೆ ಇವು ನಮ್ಮ ಸಮಾಜದಲ್ಲಿ ಶತಶತಮಾನಗಳಿಂದ ನಡೆದುಕೊಂಡು ಇಂದಿನವರೆಗೂ ಉಳಿದಿವೆ. ಸ್ತ್ರೀಯರ ಸ್ಥಾನ–ಮಾನಗಳಲ್ಲಿ ಇತ್ತೀಚೆಗೇನೋ ಒಂದಿಷ್ಟು ಸುಧಾರಣೆ ಕಂಡು ಬರುತ್ತಿದ್ದರೂ ಶೋಷಣೆಯ ವಿವಿಧ ಮುಖಗಳನ್ನು ದಿನನಿತ್ಯ ಕಾಣುತ್ತಲೇ ಇರುತ್ತೇವೆ.

ಈ ಕಾದಂಬರಿಯಲ್ಲಿ ಮುಖ್ಯವಾಗಿ ಹೇಳುವುದಾದರೆ ಬ್ರಾಹ್ಮಣ ಸಮಾಜವೇ ತನ್ನ ಜಾತಿಯ ಹೆಣ್ಣುಮಗಳಿಗೆ ಬಹಿಷ್ಕಾರ ಹಾಕುತ್ತದೆ. ಕಾರಣ ವಿಧವೆ ಗರ್ಭಿಣಿ ಎಂಬುದಕ್ಕಾಗಿ ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀಗೊಂದು ನೀತಿ, ಪುರುಷನಿಗೊಂದು

---

1. ಎಂ. ಕೆ. ಇಂದಿರಾ : 'ಜಾತಿ ಕೆಟ್ಟವಳು' ಪುಟ. 10–11.

ನೀತಿಯನ್ನು ರೂಪಿಸಲಾಗಿವೆ. ವಾಸ್ತವದಲ್ಲಿ ವಿಚಾರ ಮಾಡಿದರೆ ಶೀಲ, ಸಂಯಮ, ರೀತಿ, ನೀತಿ, ಚಾರಿತ್ರ್ಯ ಇವು ಸ್ತ್ರೀಪುರುಷ ಇಬ್ಬರಿಗೂ ಸಮಾನವಾಗಿ ಅನ್ವಯಿಸಲ್ಪಡುತ್ತದೆ. ಶೀಲ-ಚಾರಿತ್ರ್ಯಗಳ ದೃಷ್ಟಿಯಿಂದ ತಪ್ಪಿನಡೆದಾಗ ತಪ್ಪಿನಲ್ಲಿ ಸಿಗುವ ಸಾಧ್ಯತೆ ಸ್ತ್ರೀಗೆ ಹೆಚ್ಚಾಗಿರುವದರಿಂದ ಅವಳನ್ನೇ ಸಮಾಜವು ತಿರಸ್ಕರಿಸುತ್ತದೆ. ಪುರುಷನು ಪಾರಾಗುತ್ತಾನೆ. ಈ ಕಾದಂಬರಿಯಲ್ಲಿ ನಡೆದುದೂ ಹಾಗೆಯೇ.

ಹರೆಯದಲ್ಲೇ ವಿಧವೆಯಾದ 'ಬುಳ್ಳಮ್ಮ' ಬ್ರಾಹ್ಮಣ ಜಾತಿಯು ಜೋಯಿಸನಿಂದಲೇ ಬಸಿರಾಗಿದ್ದರೂ ಸಮಾಜದಲ್ಲಿ ಬಹಿಷ್ಕೃತಳಾಗಬೇಕಾಗುತ್ತದೆ. ಜೋಯಿಸ ಉಚ್ಚಕುಲದವನಾಗೇ ಉಳಿಯುತ್ತಾನೆ. ಜೋಯಿಸನಿಂದ ಹುಟ್ಟಿದ 'ನಾಗು' ಹಾಗೂ ಅವಳ ಮುಂದಿನ ಸಂತತಿಯೆಲ್ಲ 'ಜಾತಿಕೆಟ್ಟವರು' ಎಂದು ಸಮಾಜದಲ್ಲಿ ಬಾಳಬೇಕಾಗುತ್ತದೆ. ಊರಿನ ಸಾಹುಕಾರ ಕರ್ಣೀಕರೊಂದಿಗೆ ಸಂಬಂಧವಿರಿಸಿಕೊಂಡಿದ್ದ 'ನಾಗು' ಹಾಗೂ ಕರ್ಣೀಕರಿಂದ ಹುಟ್ಟಿದ ನೀರಜಳೂ ಸಹ ಜಾತಿಕೆಟ್ಟವಳಾಗಿ ಅಸ್ಪೃಶ್ಯರಂತೆ ಬಾಳಬೇಕಾಗುತ್ತದೆ. ತಂದೆಯ ಮುಖವನ್ನೇ ಕಾಣದ 'ಪದ್ದ', ಕೂಡ ಇದೇ ರೀತಿ ಸಮಾಜದ ಜಾತಿ ವ್ಯವಸ್ಥೆಯಲ್ಲಿ ಸಿಲುಕಿದ್ದಾನೆ.

ಮುಗ್ಧ ಸ್ವಭಾವದ 'ನೀರಜ', ವಾಸುದೇವನನ್ನು ಮೆಚ್ಚಿಕೊಂಡಿದ್ದಾಳೆ. ಆದರೂ ವಾಸುದೇವ ಬ್ರಾಹ್ಮಣ. ತಾನು ಕುಲಗೆಟ್ಟವಳು ಅವನನ್ನು ಮದುವೆಯಾದರೆ ಸಮಾಜ ತನ್ನನ್ನು ಸುಮ್ಮನೇ ಬಿಟ್ಟೀತೇ ? ಎನ್ನುವ ಆತಂಕವೂ ಅವಳಿಗಿದೆ. ತನ್ನಿಂದಾಗಿ ವಾಸುದೇವ ತಂದೆ, ತಾಯಿಗಳಿಂದ ದೂರಾಗಿ ಉಳಿಯಬೇಕಾಗುತ್ತದೆ. ಎಂಬ ಚಿಂತೆ. ಆದರೆ ವಾಸುದೇವನ ಧೈರ್ಯ, ವಿವೇಕ ಮೇಲಾಗಿ ಮಾಲೇರ ಜಾತಿಯವನೆನ್ನಿಸಿಕೊಂಡ ಪದ್ದನ ಜಾಣ್ಮೆ, ಸಾಹಸ, ಸಹಕಾರಗಳಿಂದಾಗಿ ಅವಳು ವಾಸುದೇವನ ಮಡದಿಯಾಗುತ್ತಾಳೆ. ಆಕೆ ಜನ್ಮದಿಂದಲೇ ಬ್ರಾಹ್ಮಣ ವಂಶದವಳೇ ಆಗಿದ್ದರೂ ಕೂಡ ಅತ್ತೆ-ಮಾವ, ಸುತ್ತಲಿನ ಸಮಾಜ ಇವುಗಳಿಂದ ದೂರವಾಗಿಯೇ ಉಳಿಯಬೇಕಾಗುತ್ತದೆ. ವಾಸುದೇವನ ಮೇಲಿರುವ ಅವಳ ಪ್ರೀತಿ ಪವಿತ್ರವಾದುದು. ಆದರೂ ತನ್ನಿಂದಾಗಿ ವಾಸುದೇವ ಎಲ್ಲರಿಂದ ದೂರವಾಗಬೇಕಾಯಿತೆಂದು ಮನನೊಂದು ವಾಸುದೇವನಿಗೆ ನೀವು ನಿಮ್ಮ ಅಪ್ಪಯ್ಯ ಅಮ್ಮ ಒಪ್ಪಿದ ಇನ್ನೊಂದು ಹುಡುಗೀನ ಲಗ್ನವಾಗಿ. ನನ್ನ ದೆಸೆಯಿಂದ ನೀವು ಮನೆಯೋರಿಗೆಲ್ಲ ದೂರ ಆಗಿಬಿಟ್ಟಿರಲ್ಲ, ಅಂತ ಮನಸ್ಸಿಗೆ ಕೊರೆಯುತ್ತೆ. ಅವರು ಹೇಳಿದ ಹೆಣ್ಣನ್ನು ಲಗ್ನ ಆಗಿದ್ದರೆ ಮುಪ್ಪಿನಲ್ಲಿ ಹಾಯಾಗಿ ಇರುತ್ತಿದ್ದಿರೋ ?[1]-ಎನ್ನುವ 'ನೀರಜ' ತನ್ನ ಮುಗ್ಧ ಪ್ರೇಮ, ಹಾಗೂ ಹಿರಿತನದಿಂದ ಬೆಳಗುತ್ತಾಳೆ. ಬುಳ್ಳಮ್ಮ ಓದುಗರ ಗಮನ ಸೆಳೆಯುವ ಜೀವಂತ ಪಾತ್ರ. ವಿಧವೆಯಾದ ಅವಳು ಜೋಯಿಸನಿಂದ ಗರ್ಭಿಣಿಯಾಗಿದ್ದರೂ ಮಾಲೇರ ಜಾತಿ ಸೇರಬೇಕಾಗುತ್ತದೆ. ಮೊದಲೇ ಅವಳು ನೊಂದ ಜೀವಿ. ಮನೆತನದಲ್ಲಿ ಬಂಜೆ

---

1. ಎಂ. ಕೆ. ಇಂದಿರಾ 'ಜಾತಿಕೆಟ್ಟವಳು' ಪುಟ-128-129.

ಎನಿಸಿಕೊಂಡಿದ್ದಳು. ಗಂಡನನ್ನು ಕಳೆದುಕೊಂಡ ನಂತರ ಮೈದುನನ ಮನೆಯಲ್ಲಿ ಆಳಾಗಿ ದುಡಿಯಬೇಕಾಗುತ್ತದೆ. ಯೌವ್ವನದಲ್ಲಿ ವಿಧವೆಯಾಗಿ ಲೈಂಗಿಕ ಅತೃಪ್ತಿಯಿಂದ ಬಳಲುತ್ತಿದ್ದ ಬುಳ್ಳಮ್ಮ, ಜೋಯಿಸನ ಮಾತಿಗೆ ಮರುಳಾಗುತ್ತಾಳೆ. ಹೇಗೂ ತನಗೆ ಮಕ್ಕಳಾಗುವಂತಿಲ್ಲ. ಎಂಬ ಧೈರ್ಯ ಅವಳಿಗಿದೆ. ಅಂದಿನ ಕಾಲದಲ್ಲಿ ಬಂಜೆತನಕ್ಕೆ ಹೆಣ್ಣೆ ಕಾರಣ ಎಂದು ತೀರ್ಮಾನಿಸಲಾಗುತ್ತಿತ್ತು. ಊರಿನ ಗಣ್ಯ ಸಾಹುಕಾರ ಕರ್ಣಿಕರು ಸಹ ಮೊದಲ ಹೆಂಡತಿಗೆ ಮಕ್ಕಳಾಗಲಿಲ್ಲವೆಂದು ಕೆಲವೇ ವರ್ಷಗಳಲ್ಲಿ ಮತ್ತೊಂದು ಮದುವೆಯಾಗುತ್ತಾರೆ. ಇದು ಅಂದಿನ ಸಮಾಜದ ಅಜ್ಞಾನ. ಚೆಲುವೆ ನಾಗಮ್ಮನನ್ನು ತಮ್ಮ ಬಂಗಾರದರಸಿಯನ್ನಾಗಿಟ್ಟುಕೊಳ್ಳುವದು ಅವರಿಗೊಂದು ಹೆಮ್ಮೆ.

ಬುಳ್ಳಮ್ಮನಿಗೆ ರಾಮಾಯಣ, ಮಹಾಭಾರತ ಕಾಲದಿಂದಲೂ ಹೆಣ್ಣು ಮಕ್ಕಳನ್ನು ನಡೆಸಿಕೊಂಡು ಬಂದಿರುವ ಸಮಾಜದ ರೀತಿನೀತಿಗಳ ಪ್ರಜ್ಞೆ ಇದೆ.

"ಕುಂತಿ ಎಂತಮೋ ತಮಾಷೆ ಮಾಡಾಕೆ ಹೋಗಿ ಕರ್ಣ ಹುಟ್ಟಿದ, ಮದಿವ್ಯಾಗಿರಲಿಲ್ಲಾಂತ ಹೆದರಿಕೊಂಡು ಕರ್ಣನ್ನ ಅತ್ಲಾಗೆ ತೇಲಿಬಿಟ್ಳು. ಆ ಕರ್ಣ ನಾನು ಸೂತ ಸೂತ ಅಂತ ಜೀವಮಾನೆಲ್ಲ ಕೊರಗಿವನಲ್ಲ. ಆ ಹುಟ್ಟಿಸಿವ ಪುಣ್ಯಾತ್ಮ ಒಂದೇ ಸಮ ಉರೀತಾನಲ್ಲ. ಅವನಾರ ಬಂದುಹೇಳ್ಬಾರ್ದಾ ಕರ್ಣಂಗೆ"[1]

"ಆ ಪರಾಶರ ಮುನಿಗಳನ್ನು ನೋಡಿದ್ರೆ ದೋಣಿ ಒಳಗೆ ವೇದವ್ಯಾಸರನ್ನು ಹುಟ್ಟಿಸಿ ನಡದ್ರು. ಕುಂತಿ ಹಾಂಗೆ ಯೋಜನ ಗಂಧಿಗೂ ಅನ್ನಕ ಮುಂಚೆನೆ ಬಾಣಂತಾನಾತು"[2]

"ಪಾಪ, ಐಜ್ಜನ ಗಂಡಂದ್ರು ಇದ್ಕಂಡು ಆ ಪ್ರಾಯದ ಹುಡುಗಿ ದಾಪತೀನ ಒಳಗೆ ಸೀರೆಬಿಚ್ತಾ ಇದ್ರೆ ಉದ್ದ ಒಡೆಯೂ ಗುದ್ಲೆ ಹಂಡೆ ಭಿಮ್ಮಗ ಕುಂತಿದ್ರಲ್ಲ ಅವರೆಲ್ಲ ಯಾತಕ್ಕೆ ಮಣ್ಣು ಹುಯ್ಯಾಕಳೂಕೆ ಐಜ್ಜನ"[3]

"ಆ ಸೀತೆ ಬಂಗಾರದಂಥ ಹುಡುಗಿ ಏನು ಖರ್ಮ ಮಾಡಿ ಆ ರಾಮನ ಕೈ ಹಿಡಿದ್ಲೋ; ಉದ್ದಕ್ಕೂ ಗೋಳೆ ಆತು"[4] ಇತ್ಯಾದಿ ಬುಳ್ಳಮ್ಮನವು ಎಂಬಂತೆ ಬಂದಿರುವ ವಿಚಾರಗಳೆಲ್ಲ ಇಂದಿರಾ ಅವರವೇ ಎಂಬುದು ಸ್ಪಷ್ಟವಾಗಿದೆ. ಬುಳ್ಳಮ್ಮನಿಗೆ ಸಮಾಜದ ಅಜ್ಞಾನ, ಪುರುಷನ ದೌರ್ಜನ್ಯ ಇವುಗಳ ಪ್ರಜ್ಞೆ ಇದ್ದರೂ ಅಂದಿನ ಕಾಲಕ್ಕೆ ಅವಳು ಅನಿವಾರ್ಯವಾಗಿ ಸಮಾಜದ ವ್ಯವಸ್ಥೆ ಒಪ್ಪಿಕೊಂಡಂತೆ ಬಾಳಬೇಕಾಗುತ್ತದೆ.

1. ಅದೇ ಪುಟ; 40–41,
2. ಅದೇ ಪುಟ. ,,
3. ಅದೇ ಪುಟ. 42
4. ಅದೇ ಪುಟ. ,,

ಬುಳ್ಳಮ್ಮನ ಮಗಳು 'ನಾಗೂ' ಸೌಭದ್ರಮ್ಮ ಕರ್ಣೀಕರ ಪತ್ನಿಯರು ಇವರೆಲ್ಲ ಸಂಪ್ರದಾಯ ಶೀಲ ಸಮಾಜದ ಬಾವಿಯ ತಳದಲ್ಲೇ ಉಳಿದರು. ವಾಸುದೇವ ಮದುವೆಯಾದ 'ನೀರಜ'ಳನ್ನು (ಸೊಸೆ) ಅವರು ಎಂದಿಗೂ ಮುಟ್ಟಿಸಿಕೊಳ್ಳುವದಿಲ್ಲ. ತನ್ನ ಗಂಡ ಬೇರೊಬ್ಬಳೊಡನೆ ಸಂಬಂಧವಿರಿಸಿಕೊಂಡಿದ್ದರೂ ಯಮುನಮ್ಮ ಅದನ್ನು ಗಂಭೀರವಾಗಿ ಯೋಚಿಸುವುದಿಲ್ಲ. ನೀರಜಳನ್ನು ಕೆಲವು ದಿನ ದೂರವಿಟ್ಟರೂ ಕಾಲಕ್ರಮೇಣ ಹೊಂದಿಕೊಳ್ಳುತ್ತಾಳೆ. ಕಾದಂಬರಿಯುದ್ದಕ್ಕೂ ಸಮಾಜದ ಅಜ್ಞಾನ, ಅವೈಚಾರಿಕತೆಯ ವ್ಯಂಗ್ಯ ವಿಡಂಬನೆ ಇದೆ.

೧೯೭೩ರಲ್ಲಿ ಬಂದ ಕಾದಂಬರಿಗಳ ಸಮೀಕ್ಷೆ ಮಾಡಿದ ಎನ್. ವಿ. ವಿಮಲ ಅವರು "ಎಂ. ಕೆ. ಇಂದಿರಾ ಅವರ 'ಜಾತಿಕೆಟ್ಟವಳು' ಕಾದಂಬರಿಯ ವಸ್ತು ಸಾಮಾನ್ಯವಾದುದಾದರೂ ಅದರ ನಿರೂಪಣೆಯಿಂದ ಆಕರ್ಷಕವಾಗಿದೆ. ರೋಚಕವಾಗಿದೆ. ವಾಸುದೇವ, ಪದ್ಮನಾಭ, ಬುಳ್ಳಮ್ಮ, ನೀರಜಾಕ್ಷಿ ಈ ಪಾತ್ರಗಳು ತಮ್ಮ ತಮ್ಮ ಪರಿಚಯವನ್ನು, ಕಥೆಯನ್ನು ತಾವೇ ಓದುಗರಿಗೆ ಕಥೆ ಹೇಳುವ ತಂತ್ರ ಆಡು ಮಾತಿನ ಸೊಗಡು ಇರುವದರಿಂದ 'ಜಾತಿಕೆಟ್ಟವಳು' ಬೇಸರವಿಲ್ಲದೆ ಕುತೂಹಲದಿಂದ ಓದಿಸಿಕೊಂಡು ಹೋಗುತ್ತದೆ"[1] ಎಂದು ಸರಿಯಾಗಿಯೇ ಹೇಳಿದ್ದಾರೆ. ಸಣ್ಣ ಕತೆಗೆ ಮೀರಿದ ಕಾದಂಬರಿಯ ಗಾತ್ರಕ್ಕೆ ಅಳವಡದ ಈ ವಸ್ತುವನ್ನು ಕಾದಂಬರಿಗೆ ಹಿಗ್ಗಿಸಿದ ತಂತ್ರದ ಜಾಣ್ಮೆ ಮೆಚ್ಚುವಂತಹದು.

ಇದು ಸಾಮಾಜಿಕವಾದ ಒಂದು ಗಂಭೀರ ಸಮಸ್ಯೆಯನ್ನೊಳಗೊಂಡ ಕಾದಂಬರಿ. ಕಾದಂಬರಿಕಾರ್ತಿಯ ಕಥನ ಕಲೆಯಿಂದ ಕಾದಂಬರಿ ಸ್ವಾರಸ್ಯಯುತವಾಗಿದೆ. ಮನರಂಜನೆ ನೀಡುತ್ತದೆ. 'ಜಾತಿ ಸಮಸ್ಯೆ' ನಮ್ಮ ಸಮಾಜದ ಒಂದು ಗಂಭೀರ ಸಮಸ್ಯೆಯಾಗಿರುವುದರಿಂದ ಮತ್ತು ಸ್ತ್ರೀಯ ಬಗೆಗಿನ ಸಾಮಾಜಿಕ ಧೋರಣೆ ಈ ಒಟ್ಟು ಪರಿಣಾಮದಿಂದ ಕಾದಂಬರಿ ಓದುಗರನ್ನು ವಿಚಾರಕ್ಕೀಡು ಮಾಡುತ್ತದೆ. ನಿಜವಾದ 'ಜಾತಿ ಕೆಟ್ಟವರು' ಯಾರು ?' ಎಂಬ ಪ್ರಶ್ನೆಗೆ ಉತ್ತರ ದೊರೆಯುತ್ತದೆ. ಸಾಹಿತ್ಯಿಕ ಹಾಗೂ ಸಾಮಾಜಿಕ ಎರಡೂ ದೃಷ್ಟಿಯಿಂದ ಇದು ಉತ್ತಮ ಕಾದಂಬರಿ ಎನ್ನಬಹುದು.

'ಗೆಜ್ಜೆ ಪೂಜೆ'

ಈ ಕಾದಂಬರಿ ೧೯೬೫ರಲ್ಲಿ ಜೂನ್ ತಿಂಗಳಿನಿಂದ ಅಕ್ಟೋಬರ್ ತಿಂಗಳವರೆಗೆ ಪ್ರಜಾವಾಣಿಯ ಸಾಪ್ತಾಹಿಕ ಪುರವಣಿಯಲ್ಲಿ ಧಾರವಾಹಿಯಾಗಿ ಪ್ರಕಟವಾಯಿತು. ೧೯೬೬ರಲ್ಲಿ ಪುಸ್ತಕವಾಗಿ ೧೯೭೦ ರಲ್ಲಿ ಚಲನಚಿತ್ರವಾಗಿ ಹೆಚ್ಚು ಜನಪ್ರಿಯವಾಯಿತು. ಪುಟ್ಟಣ್ಣ ಕಣಗಾಲ ನಿರ್ದೇಶನದ 'ಕಲ್ಪನ' ಅವರ ಅಮೋಘ ಅಭಿನಯದ ಈ ಚಿತ್ರ ರಾಷ್ಟ್ರ ಪ್ರಶಸ್ತಿಯನ್ನೂ ಗಳಿಸಿದೆ. ಇದುವರೆಗೆ ಈ ಕಾದಂಬರಿ ಎಂಟು ಮುದ್ರಣಗಳನ್ನು

---

1. 'ಸಾಹಿತ್ಯ ವಾರ್ಷಿಕ', 1973 ; ಪುಟ–68.

ಕಂಡು ಕರ್ನಾಟಕ ಸರಕಾರದ ವಿಶ್ವಕನ್ನಡ ಸಮ್ಮೇಳನದ ಸಾಹಿತ್ಯ ಮಾಲೆಯಲ್ಲೂ ಪ್ರಕಟವಾಗಿದೆ. ಇದನ್ನು ರಾಘವೇಂದ್ರರಾವ್ ಎನ್ನುವವರು ತೆಲುಗು ಭಾಷೆಗೆ ಅನುವಾದ ಮಾಡಿದ್ದಾರೆ. ಈಗ ಗುಜರಾತಿ ಭಾಷೆಗೆ ಶಶಿಕಾಂತ ಗಾಂಧಿ ಎನ್ನುವವರು ಅನುವಾದಿಸುತ್ತಿದ್ದಾರೆ. ಇದು ಜನಪ್ರಿಯವಾದ ಉತ್ತಮ ಕಾದಂಬರಿಯಾಗಿದೆ.

'ಗೆಜ್ಜೆಪೂಜೆ' ಕಾದಂಬರಿಯ ವಸ್ತು ವೇಶ್ಯಾಸಮಸ್ಯೆ ; ವೇಶ್ಯಾಪದ್ಧತಿ ನಮ್ಮ ಸಮಾಜದಲ್ಲಿ ಶತಮಾನಗಳಿಂದ ಅಂಟಿಕೊಂಡು ಬಂದಿರುವ ಒಂದು ಶಾಪ. ಕಾಯಿದೆ. ಮೂಲಕ ಈ ಪದ್ಧತಿಯನ್ನು ರದ್ದು ಮಾಡಲಾಗಿದ್ದರೂ ಬೇರೆ ಬೇರೆ ರೂಪಗಳಲ್ಲಿ ಅದು ಉಳಿದುಕೊಂಡೇ ಬಂದಿದೆ. ದೇವದಾಸಿ ಪದ್ಧತಿ ಮುತ್ತು ಕಟ್ಟುವುದು, ಬಸವಿ ಬಿಡುವುದು ಇವೆಲ್ಲ ವೇಶ್ಯಾಪದ್ಧತಿಯನ್ನು ಪೋಷಿಸಿಕೊಂಡು ಬಂದಿವೆ. ಬಡತನ ಅಜ್ಞಾನ, ಮೂಢನಂಬಿಕೆ ಮುಂತಾದುವು ವೇಶ್ಯಾಪದ್ಧತಿ ಹುಟ್ಟಿಕೊಳ್ಳುವುದಕ್ಕೆ ಕಾರಣ ವಾಗಿವೆ. ಹಣದ ವ್ಯಾಮೋಹ, ಹೆಣ್ಣಿನ ಅಸಹಾಯಕತೆ ಪುರುಷನ ಸ್ವಾರ್ಥ ಇವೆಲ್ಲವು ಗಳೂ ವೇಶ್ಯಾಪದ್ಧತಿಗೆ ಕಾರಣವಾಗುತ್ತವೆ.

'ಗೆಜ್ಜೆಪೂಜೆ' ಕಾದಂಬರಿಯಲ್ಲೂ ಸಹ ಸಂಗವ್ವನ ಧನದ ದಾಹ, ಅಪರ್ಣಳ ಅಸಹಾಯಕ ಪರಿಸ್ಥಿತಿ, ಅವಳನ್ನು ವೇಶ್ಯೆಯನ್ನಾಗಿ ಮಾಡಿವೆ, ಶ್ರೀಮತಿ. ಇಂದಿರಾ ಅವರು ಮೈಸೂರಿನಲ್ಲಿ ಕೆಲ ವರ್ಷ ನೆಲೆಸಿದಾಗ ಕಂಡ ಒಂದು ಘಟನೆ ಈ ಕಾದಂಬರಿಗೆ ಪ್ರೇರಣೆಯಾಗಿದೆ ಎಂದು ಅವರೇ ಹೇಳಿದ್ದಾರೆ.

'ಗೆಜ್ಜೆಪೂಜೆ' ಹೇಗೆ ನಡೆಯುತ್ತದೆ, ಎಂಬುದನ್ನು ಶ್ರೀಮಂತ ವೇಶ್ಯೆಯೊಬ್ಬರ ಮನೆಯಲ್ಲಿ ನೋಡಿದ್ದೆ. ಆದರೆ ಈ ಕಥೆ ಅವರ ಮನೆಯಲ್ಲಿ ನಡೆದುದಲ್ಲ, ಒಮ್ಮೆ ಮೈಸೂರಿನ ಮಧುವನದಲ್ಲಿ ಇಬ್ಬರು ಪ್ರಣಯಿಗಳು ಒಂದೇ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡರು. ಅವರಲ್ಲಿ ಹೆಣ್ಣು ವೇಶ್ಯೆಯರ ಮನೆಗೆ ಸೇರಿದವಳು, ಗಂಡು ಬ್ರಾಹ್ಮಣ. ಇವರ ಮದುವೆಗೆ ಮನೆಯವರ ಸಮ್ಮತಿ ಇರಲಿಲ್ಲ. ಇದೇ ದುರಂತಕ್ಕೆ ಕಾರಣ; ಕಾದಂಬರಿಗೆ ಪ್ರೇರಣೆ.

'ಈ ದುರಂತ ನಡೆದು ಮೂವತ್ತು ವರ್ಷಗಳಿಗೂ ಮೇಲಾಯಿತು ಆದರೆ ಅದು ನನ್ನಲ್ಲಿ ಕಾದಂಬರಿ ರೂಪ ತಳೆದು, ಆಮೇಲೆ ಪ್ರಕಟವಾಗಿ ಹೊರ ಬರುವ ಹೊತ್ತಿಗೆ ವೇಶ್ಯಾ ಪದ್ಧತಿ ರದ್ದಾಗಿತ್ತು'[1] ಎಂದು ಇಂದಿರಾ ಅವರು ಕಾದಂಬರಿಯ ಹಿನ್ನೆಲೆಯನ್ನು ವಿವರಿಸಿದ್ದಾರೆ.

ಧನದ ದಾಹವುಳ್ಳ ಸಂಗವ್ವನೆಂಬ ಮುದುಕಿ, ಹುಟ್ಟಿದ ತಿಂಗಳಲ್ಲೇ ತಬ್ಬಲಿ ಯಾಗಿ ನೆಂಟರೊಬ್ಬರ ಮನೆಯಲ್ಲಿ ಬೆಳೆಯುತ್ತಿದ್ದ 'ಅಪರ್ಣ'ಳನ್ನು ತಂದು ಸಾಕುತ್ತಾಳೆ.

---

1. ಸಂಯುಕ್ತ ಕರ್ನಾಟಕ ಸಾಪ್ತಾಹಿಕ ಮಂಜರಿ 3–5–1970. ಪುಟ-5.

ಅಪರ್ಣ ಬೆಳೆದು ದೊಡ್ಡವಳಾಗಿ ಯೌವನಕ್ಕೆ ಕಾಲಿಡುತ್ತಿದ್ದಂತೆಯೇ ಅದೇ ಹಳ್ಳಿಯ (ಮೂಗರು) ಚಂದ್ರಶೇಖರನೆಂಬ ಯುವಕನೊಡನೆ ಸ್ನೇಹವಾಗಿ ಗರ್ಭಿಣಿಯಾಗುತ್ತಾಳೆ. ಚಂದ್ರಶೇಖರ ಬ್ರಾಹ್ಮಣ ಮೇಲಾಗಿ ಸಂಗವ್ವನ ಥೈಲಿಯನ್ನು ತುಂಬುವಷ್ಟು ಸಾಹುಕಾರನೂ ಅಲ್ಲವಾದ್ದರಿಂದ ಮುದುಕಿ ಅಪರ್ಣಳನ್ನು ಮೈಸೂರಿಗೆ ಕರೆತಂದು ಲಕ್ಷಾಧಿಪತಿ ಪುಟ್ಟಣ್ಣಶೆಟ್ಟರಿಂದ 'ಗೆಜ್ಜೆಪೂಜೆ' ಮಾಡಿಸಿ ಅವಳನ್ನು ವೇಶ್ಯೆಯನ್ನಾಗಿ ಮಾಡುತ್ತಾಳೆ. ಚಂದ್ರಶೇಖರನಿಂದ ಜನಿಸಿದವಳೇ ಈ ಕಾದಂಬರಿಯ ನಾಯಕಿ ಚಂದ್ರ.

ಸಮಾಜದಲ್ಲಿ ಅಪರ್ಣ ಪುಟ್ಟಣ್ಣಶೆಟ್ಟರ ವೇಶ್ಯೆ ಎನಿಸಿ ಬಾಳಬೇಕಾಗುತ್ತದೆ. ಶಾಲೆಯಲ್ಲಿ ಸುತ್ತುಮುತ್ತಲಿನ ಪರಿಸರದಲ್ಲಿ ಚಂದ್ರಳನ್ನು 'ಸೂಳೆಯ ಮಗಳು' 'ಸೂಳೆ' ಎಂದೇ ಕರೆಯುತ್ತಾರೆ. ಚಂದ್ರ ಬೆಳೆದು ದೊಡ್ಡವಳಾಗಿ ವಿದ್ಯಾವಂತಳಾದಂತೆ ತನ್ನ ಮನೆಗೂ ಉಳಿದ ಸಂಸಾರಗಳಿಗೂ ಇರುವ ತಾರತಮ್ಯ ಸ್ಪಷ್ಟವಾಗುತ್ತದೆ. ಆಂತರಿಕ ಸಮಸ್ಯೆ ಅವಳ ಮನವನ್ನು ಕೊರೆಯುತ್ತದೆ. ಎದುರು ಮನೆಯ ಬ್ರಾಹ್ಮಣ ಯುವಕ ಸೋಮುವನ್ನು ಪ್ರೀತಿಸುತ್ತಾಳೆ. ಅವನೂ ಇವಳತ್ತ ಆಕರ್ಷಿತನಾಗುತ್ತಾನೆ. ಆದರೆ ಅವನ ಮನೆಯವರು ಸಂಪ್ರದಾಯಶೀಲರು. ಮದುವೆಯಾಗುವಂತಿಲ್ಲ. ಸಮಸ್ಯೆಗಳ ಹೊಡೆತಕ್ಕೆ ಸಿಕ್ಕ ಚಂದ್ರ ದ್ವಂದ್ವದಲ್ಲಿ ತೊಳಲುತ್ತಾಳೆ. ಸಂಗವ್ವ, ಚಂದ್ರಿಗೆ ದೊಡ್ಡ ಕುಳವೊಂದನ್ನು ಏರ್ಪಾಡು ಮಾಡುವುದಕ್ಕಾಗಿ ಊರಿಗೆ ಹೋದಾಗ ಅಪರ್ಣಳ ಹಿಂದಿನ ಪ್ರಿಯತಮ, ಚಂದ್ರಳ ತಂದೆ 'ಚಂದ್ರಶೇಖರ' ಬರುತ್ತಾನೆ. ತನ್ನ ತಂದೆಯಿಂದ ತನ್ನ ಹಾಗೂ ತಾಯಿಯ ಜನ್ಮ ವೃತ್ತಾಂತವನ್ನು ತಿಳಿದು ತಾನು ವೇಶ್ಯೆಯಲ್ಲವೆಂಬುದನ್ನು ಸಮಾಜಕ್ಕೆ ತೋರಿಸಬೇಕು ಎಂದು ಮನದಲ್ಲಿ ದೃಢ ನಿರ್ಧಾರ ಮಾಡುತ್ತಾಳೆ. ತಾನು ಪ್ರೀತಿಸುತ್ತಿದ್ದ ಸೋಮುವಿಗೆ ತನ್ನ ಜನ್ಮ ವೃತ್ತಾಂತವನ್ನು ತಿಳಿಸುತ್ತಾಳೆ. ಅವನು ಅವಳನ್ನು ಕೇವಲ ಭೋಗದ ವಸ್ತುವೆಂದು ತಿಳಿಯುತ್ತಾನೆ. ಅವನ ಇಚ್ಛೆಯಂತೆ ಒಂದು ಬಾರಿ ತನ್ನನ್ನು ಅವನಿಗೆ ಒಪ್ಪಿಸಿಕೊಳ್ಳುತ್ತಾಳೆ. ಅಷ್ಟರಲ್ಲಿ ಚಂದ್ರಶೇಖರನ ಮಗಳು 'ಜಯಲಕ್ಷ್ಮಿಯ ಮದುವೆ ಸೋಮುವಿನೊಂದಿಗೆ ನಿಶ್ಚಯವಾಗುತ್ತದೆ.

ಚಂದ್ರಶೇಖರ ಚಂದ್ರಳನ್ನು ಕರೆದೊಯ್ದು ತಮ್ಮ ಬಾಂಧವ್ಯದ ವಿಷಯವನ್ನು ಯಾರಿಗೂ ತಿಳಿಯದಂತೆ ಸಮಾಜದಲ್ಲಿ ತನ್ನ ಮರ್ಯಾದೆಯನ್ನು ಕಾಪಾಡಬೇಕೆಂದು ಅವಳಿಂದ ವಾಗ್ದಾನ ಪಡೆಯುತ್ತಾನೆ. ಒಂದೆಡೆ ಸಮಾಜ, ಮತ್ತೊಂದೆಡೆ ತಂದೆಗಿತ್ತ ವಚನ ಇವುಗಳ ನಡುವೆ ತತ್ತರಿಸಿದ ಚಂದ್ರಳ ಸಮಸ್ಯೆ ಜಟಿಲವಾಗುತ್ತದೆ. ದಿನ ದಿನಕ್ಕೆ ಅವಳ ವರ್ತನೆ ವಿಚಿತ್ರವಾಗಿ ಉನ್ಮಾದಿನಿಯಾಗುತ್ತಾಳೆ. ತನಗೀಗಲೆ ಕೋಟ್ಯಾಧೀಶನೊಡನೆ 'ಗೆಜ್ಜೆಪೂಜೆ' ಮಾಡೆಂದು ಸಂಗವ್ವನೆದುರು ಹಟ ಹಿಡಿಯುತ್ತಾಳೆ.

ಸಾಹುಕಾರ ಗಂಗಯ್ಯ ಚಂದ್ರಳಸೌಂದರ್ಯಕ್ಕೆ ಮನಸೋತು ಅವಳು ಕೇಳಿದಷ್ಟು ಹಣ ಸುರಿಯಲು ನಿರ್ಧರಿಸುತ್ತಾನೆ. 'ಗೆಜ್ಜೆಪೂಜೆ'ಯೂ ನಡೆಯುತ್ತದೆ. ಇನ್ನೇನು ಚಂದ್ರಿಯೂ ವೇಶ್ಯೆಯಾಗುತ್ತಾಳೆಂದು ಭಾವಿಸುವಷ್ಟರಲ್ಲಿ ತಂದೆಯಿಂದ ಪಡೆದ ವಜ್ರ

ದುಂಗರವನ್ನು ಪುಡಿಮಾಡಿ ಅರೆದು ಕುಡಿದು ತನ್ನ ಬಾಳನ್ನು ದುರಂತವಾಗಿ ಕೊನೆ ಗಾಣಿಸಿಕೊಳ್ಳುತ್ತಾಳೆ.

ಚಂದ್ರಿ ಕಾದಂಬರಿಯ ಕೇಂದ್ರವ್ಯಕ್ತಿ. ಅವಳ ಪಾತ್ರ ಚಿತ್ರಣದಲ್ಲಿ ಬೆಳವಣಿಗೆ ಕ್ರಮಬದ್ಧವಾಗಿದೆ. ಜೀವಂತಿಕೆಯಿಂದ ಮೈತುಂಬಿಕೊಂಡು ನಿಂತಿದೆ.

ಚಂದ್ರಿ ಪ್ರಥಮವಾಗಿ ಆವರಣದಲ್ಲಿ ಕಾಣಿಸಿಕೊಂಡದ್ದು ಪ್ರಾಥಮಿಕ ಶಾಲೆಯಲ್ಲಿ. ಶಾಲೆಗೆ ಸೇರಿಸುವಾಗ ಅಲ್ಲಿ ಅವಳ ಜಾತಿ–ಮತ, ತಂದೆ-ತಾಯಿ, ಅವರ ಉದ್ಯೋಗ ಇವುಗಳ ಪ್ರಶ್ನೆ ಬರುತ್ತದೆ. ಮುಗ್ಧ ಸ್ವಭಾವದ ಚಂದ್ರಿ ತಂದೆ ಇಲ್ಲವೆಂದು ಹೇಳ ಬೇಕಾಗುತ್ತದೆ. ಗೆಳತಿಯರೆಲ್ಲ ಅವಳು 'ಸೂಳೆಯ' ಮನೆಯ ಹುಡುಗಿ ಎಂದು ರೇಗಿಸುತ್ತಾರೆ. ಬೆಳೆಯುತ್ತಿದ್ದ 'ಚಂದ್ರಿ'ಗೆ ಸೂಳೆ ಎಂದರೇನು? ಎಂಬ ಪ್ರಶ್ನೆ ಮನದಲ್ಲಿ ಕಾಡುತ್ತವೆ.

ಗೆಳತಿಯ ಅಕ್ಕ ವಿಶಾಲಿಯ ಸಂಭ್ರಮದ ಮದುವೆ ಚಂದ್ರಿಯ ಮನಸ್ಸಿನಲ್ಲಿ ಮದುವೆಯ ಆಸೆಯನ್ನು ಮೂಡಿಸುತ್ತದೆ. ಮುಗ್ಧ ಚಂದ್ರಿ ಗೆಳತಿಯರ ಮುಂದೆ ತಾನೂ ಎಲ್ಲರಂತೆ ಮದುವೆಯಾಗುತ್ತೇನೆಂದು ಉತ್ಸಾಹದಿಂದ ಹೇಳಿದಾಗ 'ಸೂಳೆ'ಯ ರಿಗೆ ಮದುವೆಯಿಲ್ಲವೆಂದು ಹೇಳುತ್ತಾಳೆ.

ಮುಗ್ಧಳೂ, ಭಾವುಕಳಾಗಿಯೂ ಬಾಲ್ಯವನ್ನು ಕಳೆದ ಚಂದ್ರಿ ದೊಡ್ಡವಳಾದಂತೆ 'ತನ್ನ ಮನೆಯ ಪರಿಸ್ಥಿತಿ ಅರ್ಥವಾಗತೊಡಗುತ್ತದೆ. ಅದರಂತೆ ಅವಳಿಗೆ ತಾನು ಮದುವೆಯಾಗಬೇಕು ಎಂಬ ಹಂಬಲವೂ ದಿನದಿನಕ್ಕೆ ಬೆಳೆಯತೊಡಗುತ್ತದೆ. ಇತ್ತ ಸಂಗವ್ವನಾದರೋ ಚಂದ್ರಿಗೆ ಭಾರೀ ಕುಳವೊಂದನ್ನು ಗಂಟುಹಾಕಬೇಕೆಂಬ ಯೋಚನೆ ಯಲ್ಲಿರುತ್ತಾಳೆ. ಎಳೆತನದಲ್ಲಿ ಸೋಮುವಿನೊಂದಿಗಿದ್ದ ಸಲುಗೆ ಪ್ರೇಮಕ್ಕೆ ತಿರುಗುತ್ತದೆ.

ಗೆಳತಿ ಶಾಂತಿಯ ಮದುವೆ ದಿನದ ಉರುಟಣೆ, ಹಾಡು, ಪತಿಯೊಡನೆ, ಶಾಂತಿಯ ಪಿಸುಮಾತುಗಳು ಚಂದ್ರಿಯ ಮೈನವಿರೆಬ್ಬಿಸಿದವು. ತಂದೆ ಎಂದು ಕರೆಸಿ ಕೊಳ್ಳುತ್ತಿದ್ದ ಪುಟ್ಟಣ್ಣಶೆಟ್ಟರ ಬಗೆಗೆ ತಿರಸ್ಕಾರ ಉಂಟಾಗುತ್ತತೆ. ನಾಟಕ, ಸಿನಿಮಾ ಕತೆ, ಕಾದಂಬರಿಗಳಲ್ಲಿ ಕಾಣುವ 'ಸೂಳೆ' ಎನ್ನುವ ಪದ ಅವಳನ್ನು ಸಮಸ್ಯೆಗೀಡು ಮಾಡುತ್ತದೆ. ಏನಾದರಾಗಲಿ ತಾನು ಮದುವೆಯಾಗಲೇಬೇಕು ಎಂಬ ಹಟ ಅವಳಲ್ಲಿ ಬೆಳೆಯುತ್ತದೆ. ಅವಳ ಆಂತರಿಕ ಸಮಸ್ಯೆಯೂ ತೊಡಕಾಗುತ್ತದೆ.

"ದುನಿಯಾ–ನ–ಮಾನೆ" ಚಿತ್ರದಲ್ಲಿ ಮುದಿ ಲಾಯರ್ ನವಯುವಕನನ್ನು ಪಕ್ಕದಲ್ಲಿ ಕೂರಿಸಿಕೊಂಡು ತಾನೇ ಕನ್ಯೆಯನ್ನು ಮದುವೆಯಾಗುವುದು, ಈ ಮೋಸಕ್ಕೆ ಸಿಕ್ಕ ಕನ್ಯೆ ನಿರ್ಮಲೆಯ ಬದುಕು ಚಂದ್ರಿಯ ಮನಸ್ಸಿನ ಮೇಲೆ ಪರಿಣಾಮ ಬೀರಿ ಅವಳ ಮಾನಸಿಕ ಸಮಸ್ಯೆಯನ್ನು ಹೆಚ್ಚಿಸುತ್ತದೆ.

ತನ್ನ ತಾಯಿ ಪುಟ್ಟಣ್ಣಶೆಟ್ಟರೊಡನೆ ಹೆಂಡತಿಗಿಂತ ನಿಷ್ಠೆಯಿಂದ ನಡೆದುಕೊಂಡರೂ ಜನ 'ಸೂಳೆ' ಎಂದು ಏಕೆ ಭಾವಿಸುತ್ತಾರೆ? ಎಂಬ ಪ್ರಶ್ನೆ ಎದ್ದು ನಿಲ್ಲುತ್ತದೆ. ಅದೇ

ರೀತಿ 'ಕನ್ನಗಿ' ಚಿತ್ರದಲ್ಲಿ ಮನೆ-ಮಠ-ಪತ್ನಿ ಎಲ್ಲವನ್ನೂ ತೊರೆದು 'ಕೋಮಲ' ವೇಶ್ಯೆಯ ಮೋಹ ಜಾಲದಲ್ಲಿ ಬೀಳುತ್ತಾನೆ. ಎಲ್ಲವನ್ನೂ ಕಳೆದುಕೊಂಡ ನಂತರ ಉಳಿದವಳು ಅವನ ಪತ್ನಿ. ಪತಿವ್ರತಾ ಧರ್ಮವನ್ನು ಎತ್ತಿ ಹಿಡಿದ ಚಿತ್ರ. ಇದು ಅವಳ ಮನಸ್ಸಿಗೆ ಪರಿಣಾಮನ್ನುಂಟು ಮಾಡುತ್ತದೆ.

ಸೂಳೆಯ ಮನೆಗೆ ಹೋಗುತ್ತಿದ್ದ ಗೆಳತಿ 'ಲಕ್ಷ್ಮಿ' ಗರ್ಭಿಣಿಯಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಅದೇ ರೀತಿ 'ಯಶೋಧರ ಚರಿತೆ'ಯ ರಾಣಿಯ ಪ್ರಣಯ ಅವಳಿಗೆ ಜುಗುಪ್ಸೆಯನ್ನುಂಟು ಮಾಡುತ್ತದೆ. ದಿನದಿನಕ್ಕೆ ಪುಟ್ಟಣ್ಣಶೆಟ್ಟರ ಬಗೆಗೆ ತಿರಸ್ಕಾರ ಬೆಳದು ಅವನ ಮರಣ ಅವಳಿಗೆ ಸಂತಸವನ್ನುಂಟು ಮಾಡುತ್ತದೆ.

ತಾನು ಹಾಗೂ ತನ್ನ ತಾಯಿ ಇಬ್ಬರೂ ಸತ್ಕುಲಪ್ರಸೂತರೆಂದು ತಿಳಿದಾಗ ತಾನೂ 'ಸೂಳೆ' ಯಲ್ಲವೆಂದು ಸಮಾಜಕ್ಕೆ ತೋರಿಸಬೇಕು. ಎಂದು ನಿಶ್ಚಯಿಸುತ್ತಾಳೆ ತನ್ನ ಜನ್ಮವೃತ್ತಾಂತವನ್ನು ತನ್ನ ಪ್ರೀತಿಯ ಸೋಮುವಿಗೂ ತಿಳಿಸುತ್ತಾಳೆ, 'ಎಂದಿಗೂ ನಾನು ನಿನ್ನವಳು' ಎಂದು ಸೋಮುವಿಗೆ ತನ್ನ ತನು-ಮನಗಳನ್ನು ಅರ್ಪಿಸಿಕೊಳ್ಳು ತ್ತಾಳೆ. ಸೋಮುವಿನ ಮದುವೆ ತನ್ನ ತಂಗಿಯೊಡನೆ ನಿಶ್ಚಯವಾದಾಗ ತಂದೆಗೆ ಕೊಟ್ಟ ವಾಗ್ದಾನ ಹೀಗೆ ಅವಳ ಮನಸ್ಸು ನಿರಾಶೆಯ ಉಯ್ಯಾಲೆಯಲ್ಲಿ ತೂಗುತ್ತಿದ್ದಾಗ ಮದುವೆ ಆಸೆಯನ್ನು ಕೈ ಬಿಡುತ್ತಾಳೆ. ಅಜ್ಜಿ ಸಂಗವ್ವನ ಸಂತೋಷಕ್ಕಾಗಿ ಸಾಹುಕಾರ ಗಂಗಯ್ಯನಿಂದ ಸಾಕಷ್ಟು ಹಣವನ್ನು ಕಿತ್ತುಕೊಂಡ ಅದೇ ರಾತ್ರಿ ಎಂದೆಂದಿಗೂ ಸೋಮುವಿನವಳಾಗಿಯೇ ಉಳಿದು ತನ್ನ ಬದುಕನ್ನು ಅಂತ್ಯಗೊಳಿಸುತ್ತಾಳೆ ಅವಳು ತನ್ನ ಬದುಕನ್ನು ಕೊನೆಗಾಣಿಸಿ ಕೊಳ್ಳುವ ಸನ್ನಿವೇಶ ರೀತಿ ಅತ್ಯಂತ ಕ್ರೂರವಾಗಿಯೂ, ಹೃದಯವಿದ್ರಾಕವಾಗುವಂತೆ ಚಿತ್ರಿತವಾಗಿದೆ.

ಅಪರ್ಣಳ ಮೂಕ ವ್ಯಥೆ, ಅಸಹಾಯಕತೆ, ಅವಳ ಹಿರಿತನ, ಇವುಗಳಿಂದಾಗಿ ಓದುಗರ ಮನ ಮಿಡಿಯುತ್ತದೆ. ಚಂದ್ರಿಯ ಆತಂರಿಕ ತೊಡಕುಗಳನ್ನು ವಿಶ್ಲೇಷಿಸು ವಲ್ಲಿ ಅವುಗಳನ್ನು ಹೃದಯಸ್ಪರ್ಶಿಯಾಗಿ ನಿರೂಪಿಸುವಲ್ಲಿ ಲೇಖಕಿ ಸಂಪೂರ್ಣ ಯಶಸ್ಸುಗಳಿಸಿದ್ದಾರೆ.

ಕಾದಂಬರಿಯ ಆರಂಭದಿಂದ ಅಂತ್ಯದವರೆಗೂ ಹೃದಯಂಗಮವಾದ ಸನ್ನಿ ವೇಶಗಳಿವೆ. ಚಂದ್ರಿ ಶಾಲೆಗೆ ಸೇರುವ ದಿನ, ಅಪರ್ಣ-ಚಂದ್ರಶೇಖರ-ಚಂದ್ರ ಇವರ ಮಿಲನ ಸೋಮು-ಜಯಲಕ್ಷ್ಮಿಯ ಮದುವೆಯ ದಿನ ಚಂದ್ರ ಅವರ ಅಲಂಕೃತ ವಾದ ಶಯ್ಯಾಗೃಹವನ್ನು ನೋಡಿದಾಗ ಅವಳ ದುಃಖ ತಪ್ತವಾದ ಮನಸ್ಥಿತಿ, ಅವಳ ಬದುಕನ್ನು ಕೊನೆಗೊಳಗೊಂಡ ಸನ್ನಿವೇಶ, ಸೋಮು ಚಂದ್ರಳ ಶವವನ್ನು ಕಾಣಲು ಧಾವಿಸಿ ಓಡಿ ಹೋಗುವುದು, ಚಂದ್ರಶೇಖರನ ಅಸಹಾಯಕ ಮನಸ್ಥಿತಿ, ಇವುಗಳೆಲ್ಲ ಅಂತ್ಯಂತ ಪರಿಣಾಮಕಾರಿಯಾಗಿ ಚಿತ್ರಿತವಾಗಿವೆ. ಓದುಗರ ಹೃದಯವನ್ನು ತಟ್ಟುತ್ತವೆ.

ವೇಶ್ಯೆಯರನ್ನು ಕಂಡಾಗ ಸುತ್ತಮುತ್ತಲಿನವರು ತೋರುವ ಪ್ರತಿಕ್ರಿಯೆ ಸಹಜವಾಗಿ ಮೂಡಿಬಂದಿದೆ. ಸಂದರ್ಭಕ್ಕೆ ತಕ್ಕಂತೆ ಸುಳ್ಳು ಹೇಳುವ ಸಂಗವ್ವನ ಚಾಣಾಕ್ಷತನ ಅವಳ ಕುತ್ಸಿತ ಬುದ್ಧಿ ಇವುಗಳನ್ನು ಚೆನ್ನಾಗಿ ಚಿತ್ರಿಸಿದ್ದಾರೆ.

ಕಾದಂಬರಿಯಲ್ಲಿ ಇಳಿವಯಸ್ಸಿನ ಗಂಗಮ್ಮನವರು ಜೀವನಶ್ರದ್ಧೆ ಹಿರಿತನಗಳಿಂದ ಗಮನ ಸೆಳೆಯುತ್ತಾರೆ. ಅವರ ವಾತ್ಸಲ್ಯ, ಮೊಮ್ಮಕ್ಕಳ ಮೇಲಿರುವ ಪ್ರೀತಿ, ಓದುಗರ ಮೆಚ್ಚುಗೆ ಗಳಿಸುತ್ತದೆ. ಚಂದ್ರಶೇಖರ, ಸೋಮು ಇವರಿಬ್ಬರಲ್ಲಿ ಹೆಚ್ಚಿನ ವ್ಯತ್ಯಾಸ ವಿಲ್ಲ. ಇಬ್ಬರಿಗೂ ಸಮಾಜದ ಕಟ್ಟು-ಪಾಡುಗಳನ್ನು ಮುರಿದು ತಾವು ಪ್ರೀತಿಸಿದ ವೇಶ್ಯೆಯರ ಮನೆಯ ಹುಡುಗಿಯನ್ನು ಮದುವೆಯಾಗುವ ಧೈರ್ಯ ತೋರುವುದಿಲ್ಲ. ತಂದೆ-ತಾಯಿ ಒಪ್ಪಿದ ಹೆಣ್ಣನ್ನೇ ಮದುವೆಯಾಗಿ ತೃಪ್ತಿ ಪಡುತ್ತಾರೆ.

ಕಾದಂಬರಿಯ ಆರಂಭದ ದೃಶ್ಯ ಮುಂದೆ ನಡೆಯುವ ಘಟನೆಗಳನ್ನೆಲ್ಲ ಸಾಂಕೇತಿಕ ವಾಗಿ ಸೂಚಿಸುತ್ತದೆ.

ಹೊನ್ನಾವರದಲ್ಲಿ ಬಾಲಕ ಸೋಮು ಕೊಳಚೆ ತುಂಬಿದ ಕೆರೆಯಲ್ಲಿ ಅರಳಿದ ತಾವರೆಯನ್ನು ಬಯಸುವದು. ಮಡಿವಂತ ಹಿರಿಯರಿಂದ 'ಥೂ ಪ್ರಾರಬ್ಧ ಮುಂಡೆ ಗಂಡ'. ಯಾಕೋ ತಂದೆ ಆದ್ನ ನಡಿ ಬಚ್ಚಲು ಮನೆಗೆ ಬಿಸಾಕು ಅದ್ನ ತಿಪ್ಪೇಗುಂಡಿಗೆ ಎಲ್ಲಾ ಬಿಟ್ಟು ಆ ಹದ್ನೆಂಟು ಜಾತಿ ಹೊಲಸು ತರೋಕೊ ಹೊಗಿದಾನೆ.[1] ಎಂದು ಅವಹೇಳನ ಮಾಡಿಸಿಕೊಂಡು ಸ್ನಾನ ಮಾಡುವನು. ಕನಸಿನಲ್ಲಿ ಕೆಂದಾವರೆಯನ್ನು ಹಿಡಿಯಲು ಕೈಚಾಚಿದಾಗಲೇ ಹೂವನ್ನು ಹಿಡಿದು ಹೊಸಕಿ ಹಾಕುವದು ಇವೆಲ್ಲ ಸಂಪ್ರದಾಯಶೀಲ ಸಮಾಜವನ್ನು ಕಾದಂಬರಿಯ ಮುಂದಿನ ಘಟನೆಗಳನ್ನು ಸಾಂಕೇತಿಕ ವಾಗಿ ಸೂಚಿಸುತ್ತದೆ.

"ಲೇಖಕಿ ಹೆಣ್ಣಿನ ಜೀವನದ ಪರಮೋದ್ದೇಶ ವಿವಾಹ ಎನ್ನುವಂತೆ ಮಾಡಿದ್ದಾರೆ. ಚಂದ್ರಿ ವಿದ್ಯಾವತಿ. ತನ್ನ ಕೈಹಿಡಿವ ಧೈರ್ಯ ಗಂಡಿಗಿಲ್ಲ. -ಎಂದರಿ ತಾಗ ತನ್ನ ಶಿಕ್ಷಣದ ಸದುಪಯೋಗ ಸಾಧ್ಯವಿತ್ತು. ಅವಳ ಪ್ರಭಾವೀ ವ್ಯಕ್ತಿತ್ವ ಸುತ್ತಲ ನಂಬಿಕೆ ಗಳಿಸಲು ಸಮರ್ಥವಿತ್ತು. ಸಂಗವ್ವನನ್ನು ಎದುರಿಸುವ ಧೈರ್ಯ ವಿದೆ. ತಾಯಿಯ ಮನದ ಪರಿಚಯವಿದೆ. ಮಾನಸಿಕ ಎಂದೆಂದೂ ಸೋಮುವಿ ನವಳಾಗಿ ತನ್ನ ಭಾವನೆಗೂ ಬೆಲೆ ಕೊಡಬಹುದಾಗಿತ್ತು. ಈ ಎಲ್ಲ ಸಾಧ್ಯತೆಗಳನ್ನು ತಿರಸ್ಕರಿಸಿ ಮದುವೆಯೇ ಜೀವನದ ಮುಖ್ಯ ಧ್ಯೇಯವೆನ್ನುವಂತೆ ಮಾಡಿದ್ದಾರೆ.[2] ಎಂದೂ ಕೆ. ವಿಜಯಶ್ರೀಯವರೂ.

---

1. ಕಾದಂಬರಿಯ ಆರಂಭ
2. ಜೀವನ ಸಂಪುಟ 31. ಸಂ. 1 , 1971 'ಇಂದಿರಾ ಅವರ ಕಾದಂಬರಿಗಳ ಸಮೀಕ್ಷೆ' ಪುಟ 25-26.

"ವೇಶ್ಯೆಯರ ಬಗೆಗಾಗಲಿ, ಪುರುಷ ಸಮಾಜದ ಬಗೆಗೆ ದ್ವೇಷವಾಗಲಿ. ಟೀಕೆ ಯಾಗಲಿ ಖಂಡನೆಯಾಗಲಿ ಬಂದಿಲ್ಲ".[1] ವೇಶ್ಯಾ ಸಮಸ್ಯೆಯನ್ನು ಯಥಾಸ್ಥಿತಿ ಯಲ್ಲಿಡಲು ಪ್ರಯತ್ನಿಸಿದುದು "ಅದು ಅಂತೆಯೇ ಇರುವುದನ್ನು ನಿರೂಪಿಸುವಲ್ಲಿ ನೈಜತೆಗಿಂತ ಕಲ್ಪನೆಯ ಮೆರುಗೆ ಹೆಚ್ಚಾಗಿದೆ"[2] ಎಂದು ಶಕುಂತಲಾ ದುರ್ಗಿಯವರೂ ಅಭಿಪ್ರಾಯ ಪಟ್ಟಿದ್ದಾರೆ.

ಭಾವುಕಳಾದ 'ಚಂದ್ರ' ತನ್ನ ತಾಯಿ–ತಂದೆ ಎಲ್ಲರೂ ಉತ್ತಮ ಕುಲದಲ್ಲಿ ಜನಿಸಿದವರು ಎಂದು ತಿಳಿದಾಗ ತಾನು 'ಸೂಳೆ' ಎಂದು ಕರೆಯಿಸಿಕೊಳ್ಳುವುದಕ್ಕೆ ಅವಳ ಅಂತರಾತ್ಮ ಒಪ್ಪುವುದಿಲ್ಲ. ಸೋಮುವಿನೊಡನೆ ಮದುವೆ ಸಾಧ್ಯವಿಲ್ಲ ಎಂದು ಅರಿತಾಗ, ಗಂಗಯ್ಯನ ವೇಶ್ಯೆಯಾಗುವಂತೆ ನಟಿಸುತ್ತಾಳೆ. ಆದರೆ. ಅವಳ ಸಾವು ಇಡೀ ಸಮಾಜಕ್ಕೆ ತೋರಿಸುವ ಪ್ರತಿಭಟನೆಯಾಗಿದೆ. ತನಗಾಗುವ ಅನ್ಯಾಯದ ವಿರುದ್ಧ ತಲೆ ಎತ್ತಿ ನಿಲ್ಲುವುದನ್ನು ಕಾಣುತ್ತೇವೆ.

ವೇಶ್ಯಾ ಸಮಸ್ಯೆ ಬಹುತೇಕ ನಮ್ಮ ಎಲ್ಲಾ ಕಾದಂಬರಿಕಾರರಿಗೂ ವಸ್ತು ವನ್ನೊದಗಿಸಿದೆ. ತ್ರಿವೇಣಿಯವರ 'ಹೂ–ಹಣ್ಣಿನ' ರಮಾ ಯೌವನದಲ್ಲಿ ವಿಧವೆ ಯಾಗಿ ಸಮಾಜದಲ್ಲಿ ಕಾಮುಕ ಕಣ್ಣಿನಿಂದ ತಪ್ಪಿಸಿಕೊಳ್ಳಲಾರದೇ ತನ್ನ ಎಳೆಯ ಕಂದನ ಜೀವನಕ್ಕಾಗಿ ಸಮಾಜದೊಡನೆ ಹೋರಾಡಿ, ಕೊನೆಗೆ ಸೋತು ವೇಶ್ಯಾ ಜೀವನವನ್ನು ಅಪ್ಪಿಕೊಳ್ಳುತ್ತಾಳೆ. ತನ್ನ ಮಗಳ ಸಲುವಾಗಿ ಅವಳು ಮಾಡಿದ ತ್ಯಾಗ ಹಿರಿದಾದುದು. ಅಸಹಾಯಕತೆ, ಬಡತನ, ಸಮಾಜ ಇದು ಅವಳನ್ನು ವೇಶ್ಯಾ ಜೀವನಕ್ಕೆ ನೂಕುತ್ತದೆ. ವೇಶ್ಯೆಯಾದರೂ ಅವಳು ಎಂದಿಗೂ ತಾಯಿಯೇ.

'ಗೆಜ್ಜೆ ಪೂಜೆ' ಕಾದಂಬರಿಯಲ್ಲಿ ಹೆಣ್ಣಿಗೆ ಹೆಣ್ಣೇ ಶತ್ರುವಾಗಿ ವೇಶ್ಯಾವೃತ್ತಿಗೆ ನೂಕುವುದನ್ನು ಕಾಣುತ್ತೇವೆ.

'ಚಂದ್ರಳ ಸಾವಿನಿಂದ ಸಮಸ್ಯೆಯೊಂದನ್ನು ಬಿಡಿಸುವುದರಲ್ಲಿ ಯಾವ ಹೆಚ್ಚು ಗಾರಿಕೆ ಇದೆ ?' ಎಂಬ ಪ್ರಶ್ನೆಗೆ 'ಚಂದ್ರಳಿಗೆ ಸಾವು ಬಿಟ್ಟರೆ, ಗಂಗಯ್ಯನೊಡನೆ ಸಂಸಾರ ಮಾಡುವದೊಂದೇ ಉಳಿದಿತ್ತು. ಅವಳು ಗಂಗಯ್ಯನ ವೇಶ್ಯೆಯಾಗಿದ್ದರೆ ಕಾದಂಬರಿಯೇ ಕೆಡುತ್ತಿತ್ತು. ಆ ಸನ್ನಿವೇಶದಲ್ಲಿ ಅವಳು ಸಾಯಲೇಬೇಕಾಗಿತ್ತು.[3] ಎಂದು ಇಂದಿರಾ ಅವರೇ ಉತ್ತರಿಸಿರುವುದನ್ನು ಗಮನಿಸಬಹುದು.

---

1. 'ಆಧುನಿಕ ಕನ್ನಡದಲ್ಲಿ ಮಹಿಳಾ ಸಾಹಿತ್ಯ'–1982. (ಅಪ್ರಕಟಿತ ಮಹಾಪ್ರಬಂಧ) ಪುಟ–19
2. ಅದೇ–ಪುಟ–194.
3. 'ಕನ್ನಡ ನುಡಿ' : ಸಂಪುಟ 29, ಸಂ. 2, 1966. 'ಶ್ರೀಮಂತಿ ಇಂದಿರಾ ಅವರ ಕಾದಂಬರಿಗಳನ್ನು ಕುರಿತು ಪ್ರಶ್ನೋತ್ತರ ಕಾರ್ಯಕ್ರಮ' ಪುಟ–12.

'ವೇಶ್ಯಾ ಜೀವನದ ಬಗೆಗೆ ಇದುವರೆಗೆ ಅನೇಕ ಕಾದಂಬರಿಗಳು ಬಂದಿದ್ದರೂ ಇವೆಲ್ಲವುಗಳಿಗೆ 'ಗೆಜ್ಜೆಪೂಜೆ'ಕಲಶಪ್ರಾಯವಾಗಿದೆ_ಸಮಸ್ಯೆ ಹಳೆಯದಾದರೂ ಅದನ್ನು ಹೇಳುವ ಇಂದಿರಾ ಅವರ ಕೌಶಲ್ಯಪೂರ್ಣ ವಿಧಾನ, ಸ್ವಾಭಾವಿಕ ಸನ್ನಿವೇಶಗಳಿಂದ ಅದು ನಾವಿನ್ಯಪೂರ್ಣವೆನಿಸುತ್ತದೆ.[1] ಎಂದು ಹೇಳಿರುವ ಗೀತಾ ದೇಸಾಯಿಯವರ ಮಾತಿನಲ್ಲಿ ಅತಿಶಯೋಕ್ತಿ ಏನಿಲ್ಲ.

'ವೇಶ್ಯಾ ಸಮಸ್ಯೆಯ ಮೂಲವನ್ನು ಈ ಕಾದಂಬರಿಯಲ್ಲಿ ಕಾಣಬಹುದು. ಕ್ಲಿಷ್ಟ ಸಮಸ್ಯೆಗಳ ಹೊಡೆತಕ್ಕೆ ಸಿಕ್ಕು ಹೆಣ್ಣು ಕೆಟ್ಟಿತು- ಎಂಬುದನ್ನು ಈ ಕಾದಂಬರಿ ತೋರಿಸುತ್ತದೆ.

ಸಮಾಜದ ಒಂದು ಗಂಭೀರ ಸಮಸ್ಯೆಯನ್ನು ಎತ್ತಿಕೊಂಡಿರುವ ಈ ಕಾದಂಬರಿ ಒಂದು ಉತ್ತಮ ಸಾಹಿತ್ಯಕೃತಿ. ಸಮಸ್ಯೆಯನ್ನು ಹೆಣ್ಣಿನ ದೃಷ್ಟಿಯಿಂದ ಅತ್ಯಂತ ಕಲಾತ್ಮಕವಾಗಿ ಚಿತ್ರಿಸಿದ್ದಾರೆ.

'ಸದಾನಂದ' :

ಇದು ಶ್ರೀಮತಿ ಇಂದಿರಾ ಅವರ ಎರಡನೆಯ ಕಾದಂಬರಿ. ೧೯೬೫ ರಲ್ಲಿ ಧಾರವಾಡದ ಮನೋಹರ ಗ್ರಂಥಮಾಲೆಯಿಂದ ಬೆಳಕಿಗೆ ಬಂದಿದ್ದು, ಇದುವರೆಗೆ ಐದು ಮುದ್ರಣಗಳನ್ನು ಕಂಡಿದೆ. ೧೯೬೭ ರಲ್ಲಿ ರಾಜ್ಯ ಸಾಹಿತ್ಯ ಅಕ್ಯಾಡೆಮಿಯ ಪ್ರಶಸ್ತಿಯನ್ನೂ ಗಳಿಸಿದೆ.*

ಸ್ಥಿತ್ಯಂತರ ಹೊಂದುತ್ತಿರುವ ಸಮಾಜದಲ್ಲಿ, ಅರ್ಥಹೀನ ಸಂಪ್ರದಾಯಗಳ ಕಟ್ಟುಪಾಡುಗಳನ್ನು ಮುರಿಯುವ ಪ್ರಯತ್ನ 'ಸದಾನಂದ'.

ಈ ಕಾದಂಬರಿ 'ಬಾಲ್ಯವಿಧವಾ ವಿವಾಹ' ಹಾಗೂ 'ಅಂಗವಿಕಲ'ರ ಸಮಸ್ಯೆಯ ನ್ನೊಳಗೊಂಡಿದೆ. ಬಾಲ್ಯವಿಧವಾ ವಿವಾಹ ಸಮಸ್ಯೆಗೇ ಈ ಕೃತಿಯಲ್ಲಿ ಹೆಚ್ಚಿನ ಪ್ರಾಮುಖ್ಯತೆ ದೊರೆತಿದೆ.

ಧರ್ಮಶಾಸ್ತ್ರ, ಕುರುಡು ಸಂಪ್ರದಾಯಗಳನ್ನೇ ಬಲವಾಗಿ ನಂಬಿರುವ ಶಿಷ್ಟ ಸಮಾಜದಲ್ಲಿ ವಿಧವೆಯರ ಸ್ಥಿತಿ ಅತ್ಯಂತ ಶೋಚನೀಯವಾದುದು. ಮೇಲ್ವರ್ಗದವ ರಲ್ಲಿ 'ವಿಧವಾ ವಿವಾಹ'ಕ್ಕೆ ಅಡ್ಡಿ ಆತಂಕಗಳಿರುವಂತೆ, ಕೆಳವರ್ಗದವರಿಗೆ ಅದು ಸಮಸ್ಯೆ ಎನಿಸಲಾರದು. ವಿಧವೆಯರು ಕೂಡಿಕೆ ಮಾಡಿಕೊಂಡು ತಮ್ಮ ಬದುಕನ್ನು ಮುಂದು ವರಿಸುತ್ತಾರೆ.

---

1. ಅದೇ ಪುಟ–29.

* ಕರ್ನಾಟಕ ಫಿಲಂ ಕಾರ್ಪೊರೇಶನ್ 'ಛಾಯಾ ಚಿತ್ರಾಲಯ' ಲಾಂಛನದ ನಿರ್ಮಾಪಕರಾದ ಹೊನ್ನಪ್ಪ ಭಾಗವತರು 'ಸದಾನಂದ' ಕಾದಂಬರಿಯನ್ನು ಚಲನಚಿತ್ರಕ್ಕೆ ಅಳವಡಿಸಿ ದ್ದಾರೆ. ಆದರೆ ಕಾದಂಬರಿ ಕೊಟ್ಟ ಖುಷಿಯನ್ನು ಸಿನಿಮಾ ಕೊಡಲಿಲ್ಲ.

ಮುಖ್ಯವಾಗಿ ಸಮಾಜ, ಹಾಗೂ ಕುಟುಂಬಗಳಲ್ಲೇ ವಿಧವೆಯರನ್ನು ನೋಡುವ ದೃಷ್ಟಿ ಬದಲಾಗಬೇಕು. ಹಳೆಯ ತಲೆಮಾರಿನ ಹಿರಿಯರು ಸಂಪ್ರದಾಯದ ಕಟ್ಟಳೆಗಳನ್ನು ಮುರಿದು, ಬದಲಾದ ಹೊಸ ಪೀಳಿಗೆಯೊಡನೆ ಹೊಂದಿಕೊಂಡು, ತಮ್ಮ ವಿಚಾರಗಳನ್ನು ಬದಲಿಸಿಕೊಳ್ಳಬೇಕಾದ ಅಗತ್ಯವನ್ನು, ಲೇಖಕಿ ಈ ಕೃತಿಯಲ್ಲಿ ಪ್ರತಿಪಾದಿಸಿದ್ದಾರೆ.

ವಿದ್ಯಾವಂತ ಯುವಕರು ಧೀರ ಪುರುಷರು ವಿಧವೆಯರ ಕೈ ಹಿಡಿದು, ಅವರಿಗೊಂದು ಹೊಸ ಬಾಳನ್ನು ಕೊಟ್ಟಾಗ, ಈ ಸಮಸ್ಯೆ ಪರಿಹಾರವಾಗಬಲ್ಲದು ಎಂಬುದನ್ನು ಕಾದಂಬರಿಕಾರ್ತಿ ಅತ್ಯಂತ ಮನೋಜ್ಞವಾಗಿ ನಿರೂಪಿಸಿದ್ದಾರೆ.

ಇದೇ ರೀತಿ ಅಂಗವಿಕಲತೆಯೂ ಒಂದು ಗಂಭೀರ ಸಮಸ್ಯೆಯೇ. ಅವರ ಶರೀರ ಊನವಾಗಿದ್ದರೂ, ಮನಸ್ಸು ಎಲ್ಲರಿಗೂ ಒಂದೇ. ಅವರ ಅಂತರಂಗವನ್ನು ಅರ್ಥೈಸಿಕೊಂಡು, ಅವರ ಭವಿಷ್ಯ ಜೀವನದ ಹಿತವನ್ನು ಹಾರೈಸಿ, ವಿವೇಕಶೀಲ ತರುಣರು ಮಾನವೀಯತೆಯಿಂದ ಅವರಿಗೆ ಹೊಸ ಬದುಕನ್ನು ಕಲ್ಪಿಸಿದರೆ ಈ ಸಮಸ್ಯೆ ಪರಿಹಾರವಾಗಬಲ್ಲದೆಂಬುದನ್ನು ಲೇಖಕಿ ಈ ಕೃತಿಯಲ್ಲಿ ಹೇಳಬಯಸಿದ್ದಾರೆ.

ಚಿಕ್ಕಮಗಳೂರಿನ ರಾಮಣ್ಣನವರ ಸಂಸಾರ ವೃಕ್ಷದಲ್ಲಿ ಬಿಟ್ಟ ಮೂರು ಫಲ ರಾಜು, ಮೂರ್ತಿ, ಕಮಲ. ಇವರ ಬದುಕಿನ ಕಟುಮಧುರ ಇತಿಹಾಸ, ಮೂರು ಸಂಸಾರಗಳ, ಮೂರು ಸತ್ಯಘಟನೆಗಳ, ಮೂರು ವಿಭಿನ್ನ ಭಾವಗಳ ಸಂಗಮ ಈ ಕೃತಿಯಲ್ಲಿ ಸುಂದರವಾಗಿ ವ್ಯಕ್ತವಾಗಿದೆ.

ಚಿಕ್ಕಮಗಳೂರಿನ ರಾಮಣ್ಣನವರು ಸದ್ಗೃಹಸ್ಥರು. ಊರಿಗೇ ಆಪದ್ಬಾಂಧವರು. ಪುಟ್ಟಮ್ಮನವರು ರಾಮಣ್ಣನವರ ತಂಗಿ, ಗೌರಿ, ಅಮ್ಮಯ್ಯ, ಸಾಚಿ. ಶೀನಿ ಇವರೆಲ್ಲ ಪುಟ್ಟಮ್ಮನವರ ಮಕ್ಕಳು.

ಎರಡೂ ಸಂಸಾರಗಳಲ್ಲಿ ಆತ್ಮೀಯತೆ ಇದೆ. ಕರುಳಿನ ಎಳೆತವಿದೆ. ರಾಮಣ್ಣನವರ ಅಕ್ಕ 'ಯಂಟಿತ್ತೆ' ವಿಧವೆ. ಗಂಡ ಮಕ್ಕಳನ್ನು ಕಳೆದುಕೊಂಡು ರಾಮಣ್ಣನವರ ಆಶ್ರಯದಲ್ಲೇ ಇರುತ್ತಾಳೆ.

ಮನೆಯಲ್ಲಿ ಮಕ್ಕಳಿಗೆ ಪ್ರೀತಿಯ ಅತ್ತೆ, ಅಕ್ಕರೆಯ ಅಕ್ಕ. ಮಮತೆಯ ತಾಯಿ-ತಂದೆ, ಜೀವನಕ್ಕೆ ಬೇಕಾದ ಎಲ್ಲ ಸುಖ-ಸಮೃದ್ಧಿ ಇದ್ದರೂ ಆ ಮನೆಯಲ್ಲಿ ಒಂದು ಮೂಕ ವ್ಯಥೆ. ಅದೇ ಕಮಲ ಬಾಲ ವಿಧವೆ ಎಂಬುದು. ಹಿರಿಯರೆಲ್ಲ ಅವಳನ್ನು ಮನನೋಯದಂತೆ ಕರುಣೆಯಿಂದ ನೋಡಿಕೊಳ್ಳುತ್ತಾರೆ.

ಮಹಾದೇವ ಶಾಸ್ತ್ರಿಗಳು ಕಮಲಳ ಜಾತಕವನ್ನು ನೋಡಿ "ಕಮಲಳ ಮಾಂಗಲ್ಯ ಕೂಟ ಅಷ್ಟು ಸಮರ್ಪಕವಿಲ್ಲ"[1] ಎಂದಿದ್ದರೂ ಸಹ ಅಚ್ಚಮ್ಮನವರ ಅಭಿಲಾಷೆ

---

1. ಎಂ. ಕೆ. ಇಂದಿರಾ 'ಸದಾನಂದ' ಪುಟ–60.

ಯಂತೆ ಕಮಲಳ ಮದುವೆ ಹದಿನೈದನೆಯ ವರ್ಷಕ್ಕೆ ಸೋದರಮಾವ ನಾಗಭೂಷಣ ನೊಂದಿಗೆ ನಡೆಯುತ್ತದೆ. ಮದುವೆಯಾಗಿ ಒಂದು ತಿಂಗಳಲ್ಲಿ ರಾಮಣ್ಣನವರ ಸಂಬಂಧಿ ಮುದುಕಿಯೊಂದು ತೀರಿಹೋಗುತ್ತದೆ. ಅವಳ ಕರ್ಮಾಂತರ ಮುಗಿಸಿ ಇನ್ನೇನು ನಿಷೇಕಶಾಸ್ತ್ರ ಮುಗಿಸಬೇಕೆನ್ನುವಷ್ಟರಲ್ಲಿ ನಾಗಭೂಷಣ ಎಸ್ಟೇಟಿನಲ್ಲಿ ಹಾವು ಕಡಿದು ಮರಣ ಹೊಂದುತ್ತಾನೆ. ಕಮಲ ವಿಧವೆಯಾಗಿ ಉಳಿದಳು.

ಮನೆಯವರಿಗೆ ಕಮಲಳ ವೈಧವ್ಯ ಆಜನ್ಮ ಕೊರಗು. ಆದರೆ ಆದಕ್ಕೆ ಸರಿ ಯಾದ ಪರಿಹಾರವನ್ನು ಕೈಗೊಳ್ಳಲು ಸಾಧ್ಯವಾಗುವುದಿಲ್ಲ. ತಮ್ಮ ಆಸ್ತಿ ಒಂದು ಭಾಗ ಕಮಲಳಿಗೆ ಇಟ್ಟರಾಯಿತು, ಹೇಗೂ ಮಗಳು ಕೊನೆಯವರೆಗೂ ತಮ್ಮೊಂದಿಗೆ ಇರುವ ಳೆಂದು ಸಂಪ್ರದಾಯಶೀಲ ತಂದೆ-ತಾಯಿಗಳು ನಿರ್ಧರಿಸುತ್ತಾರೆ.

ಗೌರಿಯನ್ನು ರಾಮಣ್ಣನವರ ಹಿರಿಯ ಮಗ ಮೂರ್ತಿಗೆ ತಂದುಕೊಳ್ಳುವುದೆಂದು ಎರಡೂ ಮನೆಯ ಹಿರಿಯರ ಸಂಕಲ್ಪ ಆದರೆ ಎಂ.ಎಸ್.ಸಿ. ಕಲಿಯಲು ಬೆಂಗಳೂರಿನಲ್ಲಿ ನೆಲೆಸಿದ ಮೂರ್ತಿ, ಕಾಫೀ ಬೋರ್ಡಿನ ಡೈರೆಕ್ಟರ್‌ರಾದ ದೇಶಮುಖರ ಮಗಳು 'ಮುಕ್ತಾ'ಳನ್ನು ಪ್ರೀತಿಸುತ್ತಾನೆ. ಮುಕ್ತಾ ಮೂರ್ತಿಯ ಸಹಪಾಠಿ. ಮಹಾದೇವ ಶಾಸ್ತ್ರಿಗಳು ಮೂರ್ತಿ ಹಾಗೂ ಗೌರಿ ಇವರ ಜಾತಕವನ್ನು ನೋಡಿ 'ಮೂರು ತಿಂಗಳಾಗೆ ಇವೆರಡು ನಕ್ಷತ್ರಕ್ಕೂ ಕೂಡಿ ಬರುವುದಿಲ್ಲ'[1] ಎಂದು ಹೇಳಿದ ಭವಿಷ್ಯ ನಿಜವಾಗುತ್ತದೆ. ಗೌರಿಯೊಂದಿಗೆ ನಡೆಯಬೇಕಾದ ಮೂರ್ತಿಯ ಮದುವೆ ಮುಕ್ತಾಳೊಂದಿಗೆ ನಡೆದು ಹೋಗುತ್ತದೆ.

ಮನನೊಂದ ರಾಮಣ್ಣನವರು ಒಬ್ಬ ಯೋಗ್ಯವರನೊಂದಿಗೆ ಗೌರಿಯ ಮದುವೆಯನ್ನು ನಿಶ್ಚಯಿಸುತ್ತಾರೆ. ಲಗ್ನ ಪತ್ರಿಕೆಯ ಶುಭಕಾರ್ಯವನ್ನು ಮುಗಿಸಿ ಕೊಂಡು ಹೊರಟಾಗ ದಾರಿಯಲ್ಲಿ, ಬಸ್ ಅಪಘಾತವಾಗಿ ಗೌರಿ ಕಾಲು ಕಳೆದುಕೊಂಡು ಕುಂಟಿಯಾಗುತ್ತಾಳೆ.

'ಗೌರಿಗೆ ಸೋದರಿಕೆಯಲ್ಲೇ ಮದುವೆ'[2] ಎಂದು ಶಾಸ್ತ್ರಿಗಳು ಮತ್ತೆ ಭವಿಷ್ಯ ನುಡಿಯುತ್ತಾರೆ. ಇದು ಕಾದಂಬರಿಯ ಒಂದು ಘಟ್ಟ. ಇಲ್ಲಿಯೇ ಎರಡನೆಯ ಘಟ್ಟ ಆರಂಭವಾಗಿ ಸದಾನಂದ ಆಗಮನವಾಗುತ್ತದೆ. ಸದಾನಂದನ ಪ್ರವೇಶದೊಂದಿಗೇ ಬಾಲ್ಯವಿಧವಾ ವಿವಾಹ, ಹಾಗೂ ಅಂಗವಿಕಲರ ಸಮಸ್ಯೆಗಳು ಪ್ರಮುಖವಾಗುತ್ತವೆ.

ವಿಧುರ, ಸಮಾಜಸೇವಕ, ಆದರ್ಶವಾದಿ ಸದಾನಂದನ ಸಾನ್ನಿಧ್ಯದಲ್ಲಿ 'ರಾಜು', ಈ ಎರಡೂ ಸಮಸ್ಯೆಗಳಿಗೂ ಪರಿಹಾರ ಕಂಡುಕೊಳ್ಳುತ್ತಾನೆ. ರಾಜು ಕುಂಟಿಯಾದ ಗೌರಿಯನ್ನು ಮದುವೆಯಾಗುವುದಕ್ಕಾಗಿ ಮಲರೋಗಿಯಂತೆ ನಾಟಕವಾಡುತ್ತಾನೆ.

---

1. ಅದೇ; ಪುಟ-55.
2. ಅದೇ; ಪುಟ-100.

ಹೀಗಾಗಿ ಎದುರು ಮನೆಯ ಶ್ಯಾಮಣ್ಣನವರ ಮಗಳು ಜಾನಕಿಯೊಂದಿಗೆ ನಡೆಯ ಬೇಕಾಗಿದ್ದ ರಾಜುವಿನ ಮದುವೆ ತಪ್ಪಿಹೋಗುತ್ತದೆ.

ರಾಜು ಸಂಪ್ರದಾಯಶೀಲ ಹಿರಿಯರ ಮನಸ್ಸನ್ನು ತಿಳಿಯಾಗಿಸಿ ಬಾಲ ವಿಧವೆ ಕಮಲಳ ಮದುವೆಗೆ ಆಗ್ರಹಪಡಿಸುತ್ತಾನೆ. ಮಾನವ ಸಹಜ ಪ್ರಾಕೃತಿಕ ಬದುಕಿನ ಕಷ್ಟ–ಸುಖಗಳಿಂದ ವಂಚಿತಳಾಗಿ, ನಾಲ್ಕು ಗೋಡೆಗಳ ಮಧ್ಯೆ ಬದುಕನ್ನು ಕಳೆಯುತ್ತಿರುವ ವಿಧವೆ ಕಮಲಳನ್ನೂ ಒಪ್ಪಿಸುತ್ತಾನೆ. ಹೀಗಾಗಿ ಇಲ್ಲಿ ಸಮಸ್ಯೆಗಳು ಪರಿಹಾರವಾಗುತ್ತವೆ. ರಾಜು ಅಂಗವಿಕಲ 'ಗೌರಿ'ಯನ್ನು ಮದುವೆಯಾದರೆ, ಆದರ್ಶವಾದಿ ಸದಾನಂದ ವಿಧವೆ ಕಮಲಳನ್ನು ಸ್ವೀಕರಿಸುತ್ತಾನೆ.

ಈ ಕಾದಂಬರಿಯುದ್ದಕ್ಕೂ ಮಹಾದೇವ ಶಾಸ್ತ್ರಿಗಳ ಭವಿಷ್ಯ ನಿಜವಾಗುತ್ತದೆ. ಆದ್ದರಿಂದ ಮದುವೆ ಸಂಬಂಧಗಳಲ್ಲಿ ದೈವ ಇಲ್ಲಿ ಪಾತ್ರವಹಿಸುವುದನ್ನು ಕಾಣುತ್ತೇವೆ.

ಮಹಿಳಾ ಕಾದಂಬರಿಕಾರ್ತಿಯವರಲ್ಲಿ ವಸ್ತು ನಿರ್ವಹಣೆಯ ಬಗೆಗೆ ಚರ್ಚಿಸುತ್ತ ಗಿರಡ್ಡಿ ಗೋವಿಂದರಾಜ ಇವರು "ಶ್ರೀಮತಿ ಎಂ. ಕೆ. ಇಂದಿರಾ ಅವರ ಸದಾನಂದ ಕಾದಂಬರಿಯಲ್ಲಿ ಮೊದ ಮೊದಲು ವಸ್ತು ಸ್ಪಷ್ಟವಾಗುವುದಿಲ್ಲ. ಮದುವೆ ಸಂಬಂಧಗಳಲ್ಲಿ ದೈವದ ಪಾತ್ರ ಈ ಕಾದಂಬರಿಯ ವಸ್ತುವಿರಬಹುದೇನೋ ಎನಿಸುತ್ತದೆ, ಎಂದು ಮುಂದುವರೆದು ಕಾದಂಬರಿಯಲ್ಲಿ ಆದರ್ಶವಾದಿ, ವಿಧುರ ಲೇಖಕ ಸದಾನಂದ ಪ್ರದೇಶದೊಂದಿಗೆ ಸಮಸ್ಯೆಗೆ ಬೇರೆ ಸ್ವರೂಪವೇ ಬರುತ್ತದೆ"[1] ಎಂದಿರುವುದು ಸರಿಯಾದದ್ದೇ,

"ಕೃತಿಯದು ಸಾರ್ಥಕ ಶೀರ್ಷಿಕೆಯಲ್ಲಿ ಕಾದಂಬರಿಯ ಅರ್ಥದಲ್ಲಿ ಪ್ರವೇಶಿಸುವ ಸದಾನಂದನ ಹೆಸರು ಶಿರೋನಾಮೆಯ ಔಚಿತ್ಯ ಅರಿವಾಗುವುದಿಲ್ಲ"[2] ಎಂದು ಕೆ. ವಿಜಯಶ್ರೀಯವರು ತಮ್ಮ ಸಂದೇಹವನ್ನು ವ್ಯಕ್ತಪಡಿಸಿದ್ದಾರೆ.

ಸದಾನಂದನಿಂದಲೇ ಇಲ್ಲಿ ಸಮಸ್ಯೆಗಳ ಪರಿಹಾರ ಸಾಧ್ಯವಾಗುವುದರಿಂದ ಅವನೇ ಈ ಕೃತಿಯ ಪ್ರಮುಖ ಪಾತ್ರವಾಗುತ್ತಾನೆ. ಆದ್ದರಿಂದ ಲೇಖಕಿ ಕೃತಿಗೆ 'ಸದಾನಂದ' ಎಂದು ನಾಮಕರಣ ಮಾಡಿದ್ದಾರೆಂದು ಹೇಳಬಹುದಾಗಿದೆ. ಕಾದಂಬರಿಯ ಮೊದಲ ಘಟ್ಟದಲ್ಲಿ ಮೂಡಿಬರುವ ಸಮಸ್ಯೆಗಳಿಗೆ ಎರಡನೆಯ ಭಾಗದಲ್ಲಿ ಉತ್ತರ ದೊರೆಯುತ್ತದೆ.

---

1. ಡಾ॥ ಜಿ. ಎಸ್. ಶಿವರುದ್ರಪ್ಪ (ಸಂ) 'ಮಹಿಳೆ ಮತ್ತು ಕನ್ನಡ ಸಾಹಿತ್ಯ'. ಲೇಖನ– ಮಹಿಳಾ ಕಾದಂಬರಿಕಾರ್ತಿಯರಲ್ಲಿ ವಸ್ತು ನಿರ್ವಹಣೆ. ಪುಟ 31–32.
2. 'ಜೀವನ' ಸಂ. 31, ಸಂ, 1 'ಇಂದಿರಾ ಅವರ ಹನ್ನೊಂದು ಕಾದಂಬರಿಗಳ ಸಮೀಕ್ಷೆ' ಪುಟ–25.

"ಸದಾನಂದನ ಪಾತ್ರಸೃಷ್ಟಿ ಈ ಕಾದಂಬರಿಯ ಹೆಚ್ಚಳವಾಗಿದೆ. ಅವನ ಧೀರೋದಾತ್ತ ಚರಿತ, ವಾಸ್ತವಿಕವಾದ ಮರುಕ, ವಿನೋದಗಳಿಂದ, ನೈಜವಾದ ದುಃಖ-ದುಗುಡಗಳಿಂದ, ಅಸಹಜವಲ್ಲದ ನಡೆ-ನುಡಿಗಳಿಂದ, ಪಾರ್ಥಿವವೆನ್ನಬಹುದಾದ ಎಲ್ಲ ಅಂಶಗಳಿಂದ ಕೂಡಿಕೊಂಡು ಅಜ್ಞಾನ, ದಾರಿದ್ರ್ಯ, ವ್ಯಂಗ್ಯ, ವಿಕೃತಿ, ಮತ್ತು ದುರ್ದೈವಗಳ ಪ್ರತ್ಯಕ್ಷ ಪ್ರಪಂಚದಲ್ಲಿಯೇ ಪ್ರಕಟವಾಗುವ ವಿಸ್ಮಯ ಈ ಕಾದಂಬರಿಯ ಅದ್ಭುತ ಅಂಗವಾಗಿದೆ."[1]

ಈ ಕಾದಂಬರಿಯಲ್ಲಿ ಸದಾನಂದನನ್ನು ಲೇಖಕಿ ಒಬ್ಬ ಧೀರೋದಾತ್ತ ನಾಯಕನನ್ನಾಗಿ ಚಿತ್ರಿಸಿದ್ದಾರೆ.[2]

"ಲೇಖಕಿಯೇನೋ ಸದಾನಂದನ ಪಾತ್ರದಲ್ಲಿ ಅಹಂಭಾವವಿಲ್ಲದ ಆದರ್ಶವನ್ನು ಚಿತ್ರಿಸಲು ಸಾಕಷ್ಟು ಪ್ರಯತ್ನ ಪಟ್ಟಿದ್ದಾರೆ. ಹಾಗೆಯೇ ರಾಜು-ಗೌರಿಯರ ನಡುವಿನ ಸಂಬಂಧದಲ್ಲೂ ಇಂಥ ಭೂಮಿಕೆಯನ್ನು ಸಿದ್ಧಪಡಿಸಲು ಮರೆತಿಲ್ಲ. ಇದನ್ನೆಲ್ಲ ಒಪ್ಪಿಕೊಂಡರೂ ಈ ಬಗೆಯ ಪಾತ್ರಗಳಿಂದಾಗಿ, ಸಮಸ್ಯೆಯ ಪರಿಹಾರ ಸುಲಭವಾಗುತ್ತದೆ"[3] ಎನ್ನುವುದು ನಿಜ.

"ಈ ಕಾದಂಬರಿಯಲ್ಲಿ ಸದಾನಂದನೇ ಬುದ್ಧಿಪೂರ್ವಕವಾಗಿ ಕಾಂತ್ರಿಯ ವಾತಾವರಣವನ್ನು ನಿರ್ಮಿಸುತ್ತಾನೆ. ಸ್ಮಾರ್ತ ತಂದೆ, ಹವ್ಯಕ ತಾಯಿ, ಪಿತ್ರಾರ್ಜಿತ ಸಂಪತ್ತು, ಮೆರಗಿನ ರೂಪ ಆರೋಗ್ಯಗಳಿದ್ದರೂ, ಕಳೆದ ಹೆಂಡತಿಯ ಸ್ಮರಣೆಗೆ ನಿಷ್ಠನಾದ ವಿಧುರ, ಮೂವತ್ತೆರಡನೆಯ ವಯಸ್ಸಿಗೆ ಅನುಭವಜನ್ಯ ತತ್ವಜ್ಞಾನ ಹೊಗೆಸೊಪ್ಪಿನ ದುರಾಭ್ಯಾಸ ಮಾತ್ರಿಲ್ಲದ ಸಮಾಜಸೇವೆ ಜನಪ್ರಿಯ ಕಾದಂಬರಿಕಾರ. ಪ್ರಾಮಾಣಿಕತೆ ಮತ್ತು ಧೈರ್ಯ ಹೀಗೆ ಹಂಡ(–ಬಂಡ)ಸ್ವರೂಪದ ಆದರ್ಶಪ್ರಾಯನಾಗಿದ್ದರೂ ಬರಲಿಕ್ಕುಂಟೋ ಎಂಬ ಸಹಜ ಶೈಲಿಯಿಂದ ಜೀವಂತನಾಗಿದ್ದಾನೆ"[4] ಎಂದು ದಿ॥ ಶ್ರೀರಂಗರೂ ಅಭಿಪ್ರಾಯಪಟ್ಟಿದ್ದಾರೆ.

---

1. ಕೆ. ಡಿ. ಕುರ್ತಕೋಟಿ 'ಸದಾನಂದದ' ಬಗ್ಗೆ.
2. ಧೀರೋದಾತ್ತ : 'ಧೀರೋದಾತ್ತ ನಾಯಕ ಪರಿಪಕ್ವ ಸ್ವಭಾವದವನು. ಸುಖ–ದುಃಖಗಳ ತೀವ್ರತೆಯಿಂದ ವಿಚಲಿತನಾಗದ ಮಹಾಸತ್ವ, ಗಾಂಭೀರ್ಯ ಕ್ಷಮೆ ಆತ್ಮಶ್ಲಾಘನೆ ಮಾಡಿಕೊಳ್ಳದಿರುವುದು, ಧೈರ್ಯ ವಿನಯದಿಂದ ಮುಚ್ಚಿದ ಅಹಂಕಾರ ಹಿಡಿದ ಕೆಲಸ ಸಾಧಿಸುವ ಸಾಮರ್ಥ್ಯ ಇವನ ಗುಣಗಳು—ಓ. ಎಲ್. ನಾಗಭೂಷಣಸ್ವಾಮಿ ವಿಮರ್ಶೆಯ ಪರಿಭಾವ ಪುಟ–202.
3. ಗಿರಡ್ಡಿ ಗೋವಿಂದರಾಜ, ಜಿ. ಎಸ್. ಶಿವರುದ್ರಪ್ಪ (ಸಂ) ಮಹಿಳೆ ಮತ್ತು ಕನ್ನಡ ಸಾಹಿತ್ಯ, ಕಾದಂಬರಿಕಾರ್ತಿಯಲ್ಲಿ ವಸ್ತು ನಿರ್ವಹಣೆ—ಪುಟ–32.
4. ಪ್ರಜಾವಾಣಿ—17–10–1965.

ಒಟ್ಟಿನಲ್ಲಿ ಹೇಳುವುದಾದರೆ ಸಮಸ್ಯೆಯ ಪರಿಹಾರಕ್ಕಾಗಿಯೇ ಸೃಷ್ಟಿಸಿದ ಪಾತ್ರ ಸದಾನಂದ. ಅವನದು ಬಹುಮುಖ ಪ್ರತಿಭೆಯ ವ್ಯಕ್ತಿತ್ವ, ಉದಾರ ಅಂತಃಕರಣ, ವಿಚಾರವಾದಿ, ಆದರ್ಶವಾದಿ. ತಮ್ಮ ವೈಚಾರಿಕತೆಯ ಅಭಿವ್ಯಕ್ತಿಗಾಗಿಯೇ ಲೇಖಕಿ ಸದಾನಂದನ ಪಾತ್ರವನ್ನು ಸೃಷ್ಟಿಮಾಡಿದ್ದಾರೆ. ಅದು ಕಾದಂಬರಿಕಾರರ ಗುಣವೂ ಹೌದು.

ವಿಧವಾ ವಿವಾಹ ಉದಾತ್ತ ಹೃದಯದ ಸದಾನಂದನಿಗೆ ಒಂದು ಸಮಸ್ಯೆಯೇ ಅಲ್ಲ, ಆದ್ದರಿಂದ ಕಮಲಳನ್ನು ಮದುವೆಯಾಗಲು ಸರಳವಾಗಿ ಒಪ್ಪಿಕೊಳ್ಳುತ್ತಾನೆ.

ಅಜ್ಞಾನ, ದುರ್ದೈವ ದಾರಿದ್ರ್ಯ, ವಿಕೃತಿಯಿಂದ ಕೂಡಿದ ಪ್ರಪಂಚದಲ್ಲಿ ಬದುಕಿನ ವಿವಿಧ ಮುಖಗಳನ್ನು ರಾಜುವಿಗೆ ಪರಿಚಯಿಸಿದ ಸದಾನಂದ, ಬದುಕು ಎಲ್ಲರಿಗೂ ಇದೆ ಎಂಬುದನ್ನು ತೋರಿಸುತ್ತಾನೆ.

ಸದಾನಂದನ ಮನೆಯಲ್ಲಿ ಮಂತ್ರಿಯಂತಿದ್ದ ತಂತ್ರಿಯ ಹೆಂಡತಿ 'ಅಂಬಕ್ಕ' ಮೂಕಿ. ಆದರೂ ಅವಳ ಮೂಕತನ ಬದುಕಿಗೆ ಯಾವ ತಡೆಯನ್ನುಂಟು ಮಾಡಿಲ್ಲ. ಮಕ್ಕಳನ್ನು ಹೆತ್ತು, ಶ್ರದ್ಧೆಯಿಂದ ಜೀವನ ಸಾಗಿಸುತ್ತಾಳೆ. ಬದುಕಿನ ಬಗೆಗೆ ಇರುವ ಗೌರವವನ್ನೇ ಇಲ್ಲಿ ಕಾಣುತ್ತೇವೆ.

ಮನೆಯಲ್ಲಿ ಕೆಲಸಕ್ಕಿದ್ದ 'ಬಾಗೂರ' ಕೊಂಕು ಕಪಟವರಿಯದ ಮುಗ್ಧ. ತನ್ನ ಹೆಂಡತಿ ಬೇರೆಯವರಿಂದ ಗರ್ಭ ಧರಿಸಿದ್ದರೂ ಅವನಿಗೆ ತಿಳಿಯದು. 'ತನ್ನ ಹೆಂಡತಿ,' 'ತನ್ನ ಮಗು'ಎಂದು ಅವನು ತೋರುವ ಪ್ರೀತಿ, ಬದುಕನ್ನು ಕುರಿತ ಇರುವ ಪ್ರೀತಿಯೇ ಆಗಿದೆ,

ಕಣಿವೆ ಕೆಳಗಿನ ಭಂಟರ ಬದುಕಿನಲ್ಲಿ ವಿಕೃತಿ ಇದೆ. ನಮಗೆ ಅದು ಹೀನ ಸಂಸ್ಕೃತಿಯಾದರೂ ಅವರಿಗೆ ಅದೇ ಬದುಕು. ಅದೇ ರೀತಿ ಕುಂಟಿಯಾದ ನಂಜಿ ಹೆಗ್ಗಡತಿ ಕೆಳವರ್ಗದವಳು. ವಿಧವಾತನ ಅವಳಿಗೆ ಸಮಸ್ಯೆಯೇ ಅಲ್ಲ. ಮೊದಲ ಮದುವೆಯಲ್ಲಿ ನಾಲ್ಕಾರು ಮಕ್ಕಳಿದ್ದರೂ ವಿಧವೆಯಾದ ನಂತರ ಮತ್ತೇ 'ಕೂಡಿಕೆ' ಮಾಡಿಕೊಂಡು ಜೀವವನ್ನು ಮುಂದುವರಿಸುತ್ತಾಳೆ.

ನಂಜಿ ಹೆಗ್ಗಡತಿಯ ಕಾಲು, ಕುಂಟಿಯಾದ 'ಗೌರಿ' ಹಾಗೂ ವಿಧವೆ 'ಕಮಲ' ಇವರ ಭವಿಷ್ಯ ಜೀವನವನ್ನು ರೂಪಿಸುತ್ತದೆ.

ಕಾದಂಬರಿಯ ಪಾತ್ರ ಚಿತ್ರಣ ಹಾಗೂ ಅಂತರಂಗದ ತುಮುಲನ್ನು ನಿರೂಪಿಸುವಲ್ಲಿ ಲೇಖಕಿ ಸಫಲರಾಗಿದ್ದಾರೆ.

ರಾಮಣ್ಣ, ತಮ್ಮಯ್ಯ, ದೇಶಮುಖ-ಅಚ್ಚಮ್ಮ, ಯಂಟತ್ತೆ, ಪುಟ್ಟಮ್ಮ, ಜಾಲಜಾಕ್ಷಮ್ಮ ಈ ಎಲ್ಲ ಪಾತ್ರಗಳು 'ಜೀವಂತ'ವಾಗಿ ನಮ್ಮೆದುರು ನಿಲ್ಲುತ್ತವೆ,

ಬದುಕು ಒಡ್ಡಿದ ಸವಾಲಗಳನ್ನು ಎದುರಿಸುವ ಮನೋಸ್ಥೈರ್ಯ ಈ ಪಾತ್ರಗಳಿಗಿವೆ. ವಾತ್ಸಮಯಿ 'ಯಂಟತ್ತೆ' ಓದುಗರ ಹೃದಯದಲ್ಲಿ ಅಚ್ಚಳಿಯದೇ ನಿಲ್ಲುತ್ತಾಳೆ. ರಾಮಣ್ಣ, ಅಚ್ಚಮ್ಮನವರ 'ಮೌನ' ಓದುಗರ ಹೃದಯವನ್ನು ತಟ್ಟುತ್ತದೆ. ಮಕ್ಕಳೊಡನೆ ಮಕ್ಕಳಾಗಿ ನಲಿಯುವ ಪುಟ್ಟಮ್ಮ, ಯಂಟತ್ತೆ ಈ ಎಲ್ಲಾ ಪಾತ್ರ ಚಿತ್ರಣದಲ್ಲಿ ಇಂದಿರಾ ಅನುಭವದ ಪರಿಪಾಕವಿದೆ.

ಬಾಲವಿಧವೆ ಕಮಲಳ ಪಾತ್ರ ಚಿತ್ರಣ ಪರಿಪೂರ್ಣವಾಗಿಲ್ಲದಿದ್ದರೂ, ಬಂದ ಸನ್ನಿವೇಶಗಳಲ್ಲೇ ಅವಳ ಅಸಾಹಕತೆ ಹಾಗೂ ಆಂತರಿಕ ದುಃಖವನ್ನು ಹೃದಯ ಸ್ಪರ್ಶಿಯಾಗಿ ನಿರೂಪಿಸಿದ್ದಾರೆ.

"ಜಾನಕಿ ರಾಜು ದುಂಡು ಮಲ್ಲಿಗೆಗೆ ಹೊರಟಾಗ, ಕಮಲ ಉತ್ಸುಕತೆಯಿಂದ ಕೇಳಿದಳು. 'ನಾನು ಹೋಗಲೇನಮ್ಮ'. ಯಾಕೋ ಅಚ್ಚಮ್ಮನವರಿಗೆ ಮನವಿಲ್ಲ. ಬೇಡವೆನ್ನಲೂ ಬಾಯಿಲ್ಲ. ಎಂಟು ವರ್ಷಗಳಿಂದ ಮನೆಯೊಳಗೆ ಕುಳಿತು ಅದಕ್ಕೂ ಬೇಜಾರಲ್ಲವೇ ? ಲಕ್ಷಣವಾಗಿ ಗಂಡನೊಂದಿಗೆ ನಕ್ಕುನಲಿಯುವ ವಯಸ್ಸು, ಬರಡು ಮರದಂತೆ ಬದುಕಿರುವದೇ ಇದರ ಹಣೆಬರಹವಾಯಿತು. ಬೇಡವೆಂದರೆ ನೊಂದು ಕೊಳ್ಳುತ್ತದೆ".[1] ಎಂದು ಅಚ್ಚಮ್ಮನವರು ಅನುಕಂಪ ತೋರಿಸುತ್ತಾರೆ.

"ಆಟವಾಡುತ್ತಿದ್ದ ತನ್ನ ಸಮವಯಸ್ಕರನ್ನು ನೋಡುತ್ತಿದ್ದಳು ಕಮಲ. ಅಲ್ಲೊಂದು ನಂದ ಗೋಕುಲವೇ ನೆರೆದಿದೆ. ಬಾಲ್ಯವೇ ಬಾಲ್ಯ. ಅವಳ ಬದುಕಿನಲ್ಲಿ ಈ ರಸ ಮನ್ವಂತರ ನೀರಸವಾಗಿ ಕಳೆದುಹೋಗಿದೆ.

ಗೌರಿ, ರಾಜು, ಶೀನಿ ಚಿಕ್ಕವರಲ್ಲ. ಎಲ್ಲ ಜವ್ವನಿಗರು ಆದರೂ ಈ ನಿಸರ್ಗದ ತೊಟ್ಟಿಲಲ್ಲಿ ಅವರೆಲ್ಲ ಕಂದಮ್ಮಗಳು. ತಾನು ಈ ಚಿರಯೌವ್ವನದಲ್ಲಿ ಮುದುಕಿ. ಗಂಟಲವರೆಗಿನ ಬಂದ ನಿಡಿಯುಸಿರನ್ನು ನುಂಗಿದಳು ಕಮಲ.[2]

ಮತ್ತೊಂದು ಸನ್ನಿವೇಶ ಶಂಕರನಾರಾಯಣ ಹಾಗೂ ಅವನ ಹೆಂಡತಿ ಶಾರದೆಯ ಸರಸ-ಸಲ್ಲಾಪವನ್ನು ನೋಡುತ್ತಿದ್ದ ಕಮಲಳ ಮನಸ್ಸು 'ಜಿಲ್' ಎಂದಿತು.

"ಇನ್ನು ಅತ್ತ ನೋಡಬಾರದು ಅಂದುಕೊಂಡಳು. ಅಂದುಕೊಂಡದ್ದಷ್ಟೇ, ಆದರೆ ಕಣ್ಣು ಅತ್ತಲೇ ಇತ್ತು. ಎಲ್ಲಾ ನೋಡಿದಳು, ಯಾಕೋ ಅವಳಿಗೆ ಬಳಲಿಕೆ ಎನಿಸಿತು. ಅಲ್ಲೇ ರಾಜುವಿನ ಮಂಚದಲ್ಲಿ ಉರುಳಿ ಕಣ್ಣುಮುಚ್ಚಿದಳು.

ಅವಳ ಬದುಕಿನ ಇಪ್ಪತ್ತೆಂಟು ವರ್ಷಗಳನ್ನು ಮನಸ್ಸು ಇಲ್ಲಿಂದಲ್ಲಿಯವರೆಗೆ ಅಳೆದು ನೋಡಿತು.

---

1. ಎಂ. ಕೆ. ಇಂದಿರಾ "ಸದಾನಂದ" ಪುಟ-64.
2. ಅದೇ ; ಪುಟ-69.

ಹನ್ನೆರಡನೆಯ ವರ್ಷಗಳವರೆಗೆ ಏನು ನಡೆಯಿತೆಂಬುದು ಅವಳಿಗೆ ನೆನಪಿಲ್ಲ. ಕಟ್ಟಿದ ಕೆಲವೇ ದಿನಗಳಲ್ಲಿ ಮಾಂಗಲ್ಯ ತೆಗೆದಾಯಿತು. ಒಂದು ನೋಹಿ ವ್ರತಗಳಿಲ್ಲ, ಪೂಜೆ-ಪುರಸ್ಕಾರಗಳಿಲ್ಲ, ಬ್ರಾಹ್ಮಣ ಮುತ್ತೈದೆಯರ ಸೇವೆಯಿಲ್ಲ. ಮನೆಯ ಒಳ ಕೋಣೆಯಲ್ಲೇ ಉಂಡುಟ್ಟು ಸುಖದಿಂದ ಸರಿಯಿತು ಹನ್ನೆರಡು ವರ್ಷ. ಮತ್ತೆ ನೂರು ವರ್ಷ ಬದುಕಿದ್ದರೂ ಉಂಡು ಉಡುವದಕ್ಕೆ ನೆಮ್ಮದಿ. ಆದರೆ ಇದು ಸುಖವೇ ? ಸಂತೋಷವೇ ? ನೆಮ್ಮದಿಯೇ ? ಇಷ್ಟರಿಂದ ಬದುಕಿನ ಸಾರ್ಥಕತೆ ಯಾಯಿತೇ ?".[1]

ಇವೆಲ್ಲ ಬಾಲವಿಧವೆ ಕಮಲಳ ಅಂತರಂಗವನ್ನು ಒಳಹೊಕ್ಕು ನೋಡಿದ್ದಾರೆ. ಆ ಮೂಲಕ ಚಿಂತನೆಯನ್ನು ವ್ಯಕ್ತಪಡಿಸಿದ್ದಾರೆ.

ಕಮಲಳ ಮದುವೆಗೆ ರಾಜು ರಾಮಣ್ಣನವರನ್ನು ಒಪ್ಪಿಸುವ ಸಂದರ್ಭದಲ್ಲಿ ಈ ರೀತಿಯ ಆ ದ್ವಂದ್ವವನ್ನು ಸಮರ್ಥವಾಗಿ ಚಿತ್ರಿಸಿದ್ದಾರೆ.

"ಅಕ್ಕನಿಗೊಂದು ಮದುವೆ ಮಾಡ್ಬೇಕಪ್ಪ ! ರಾಮಣ್ಣನವರ ವಿಚಾರಶಕ್ತಿ ತಂಡಾಯಿತು. ಎದುರಿಗೆ ತೋಟದಲ್ಲಿದ್ದ ನೀರು ಕುಡಿದು ಕುರ್ಚಿಗೆ ಒರಗಿ ಕುಳಿತರು. ರಾಜು ಸುಮ್ಮನೆಯೇ ಕುಳಿತಿದ್ದ; ಹತ್ತು ನಿಮಿಷ ಬಿಟ್ಟು ತೊದಲಿದರು ತಂದೆ—

"ಈಗ ನೀನು ಏನಂದೆ . ?

"ಅಕ್ಕನಿಗೊಂದು ಮದುವೆ ಮಾಡಬೇಕೂಂದೆ"

ರಾಮಣ್ಣನವರಿಗೆ ಮುಗುಳು ನಗೆ ಬಂದಿತು. "ಇದಕ್ಕೇ ನೋಡು ಹುಡುಗುತನ ಅನ್ನೋದು, ಬ್ಯಾಡಪ್ಪ ಅಷ್ಟು ದೊಡ್ಡ ಚೇಷ್ಟೆ ನಾವು ಮಾಡಬಾರದು". "ಆದ್ರೆ ನಂದು ಅಕ್ಕಂದು ಇಬ್ರದ್ದೂ ಆಗಬೇಕು ಇಲ್ಲದಿದ್ರೆ ನಂಗೂ ಬೇಡಪ್ಪ ಮದ್ವೆ".

ರಾಮಣ್ಣನವರ ಬಾಯಿ ಕಟ್ಟಿತು, ಅವರು ವಿಚಾರಿತರಾದರು.

ರಾಮಣ್ಣನವರು ನಿಧಾನವಾಗಿ ಅಂದರು–"ಏನೇ ಆದರೂ ಇದು ನಮ್ಮ ಜನಕ್ಕೆ ಬಂದದ್ದಲ್ಲ ಕಣೋ ರಾಜು. ಏನೋ ಮೊದಲೇ ಮನಸ್ಮಾಡಿದ್ರೆ ಇನ್ನೂ ಸ್ವಲ್ಪ ಓದಿಸಬೋದಾಗಿತ್ತು. ಯಾತಕ್ಕೆ ಓದಬೇಕು ಹೇಳು. ಅವಳೇನು ಹೋಗಿ ಸಂಪಾದ್ನೆ ಮಾಡಬೇಕೆ. ಯಾವುದಕ್ಕೂ ಕೊರತೆ ಮಾಡಿಲ್ಲಪ್ಪ ಅವಳಿಗೆ. ರಾಜು ಬಹು ಮೆಲ್ಲಗೆ ಮಾತಾಡಿದ—

"ಇದಕ್ಕೇ ನಾವೆನೆಲ್ಲಪ್ಪ ಬರೀ ಉಂಡು ತಿಂದು ನಿದ್ದೆಮಾಡೋದೇ ಒಂದು ಜೀವನಾಂತ ಅಂದ್ರೆ ಒಂದು ಕಾಡು ಮರಕ್ಕೂ ನಮಗೂ ಏನು ವ್ಯತ್ಯಾಸಾನೇಯಿಲ್ವ. ನಾವೆಲ್ಲ ಮದ್ವೆಮಾಡ್ಕಂಡು ಲೋಲಾಪ್ತಿ ಪಡೋದು, ಅವಳೊಬ್ಳು ಸಂನ್ಯಾಸಿ

ಹಾಗೀರೋದಂದ್ರೆ ನಂಗಂತೂ ತುಂಬಾ ಬೇಜಾರಪ್ಪ. ಗಂಡಸರಿಗಾದ್ರೆ ಇಷ್ಟು ಹೊತ್ತಿಗೆ ಮೂರು ಮದ್ವೆ ಆಗಿರ್‍ತಿತ್ತು".

ನೋವಿನಿಂದ ರಾಜುವಿನ ದನಿ ತಗ್ಗಿತು. ಅಂತಃಕರಣಕ್ಕೆ ಮುಟ್ಟುವ ಅವನ ಮಾತು ಆ ತಂದೆತನವನ್ನು ಬಡಿದೆಬ್ಬಿಸಿತು. ಇಡೀ ಅವರ ಬದುಕಿನಲ್ಲಿ ಇಂತಹ ಪ್ರಶ್ನೆಯೊಂದನ್ನು ಯಾರೂ ಕೇಳಿರಲಿಲ್ಲ. ಇದು ಅವರ ಸ್ವಂತದ ಪ್ರಶ್ನೆ. ಕೇಳುತ್ತಿರುವವನು ತಮ್ಮ ಮಗನೇ".[1]

ಇಲ್ಲೆಲ್ಲ ಲೇಖಕಿಯು ವಿಧವೆಯರನ್ನು ಕುರಿತು ಕಳಕಳಿ ವ್ಯಕ್ತವಾಗಿದೆ. ಸ್ತ್ರೀಯರ ಬಗೆಗೆ ಸಮಾಜದ ಪಕ್ಷಪಾತದ ಧೋರಣೆಯನ್ನು ಪ್ರಶ್ನಿಸಿದ್ದಾರೆ. ಹಾಗೆಯೇ ಜೀವನದ ಮೂಲಭೂತ ಪ್ರಶ್ನೆಗಳನ್ನೆತ್ತಿದ್ದಾರೆ.

ರಾಮಣ್ಣನವರು ಯೋಚಿಸಿದರು—"ಕುರುಡು ಸಂಪ್ರದಾಯಗಳ ಅಮಲಿನಲ್ಲಿ ತಮ್ಮ ಮಗಳ ಬದುಕನ್ನೇ ಹಾಳು ಮಾಡಿದ ತಮ್ಮ ಮೂಢತ್ವವೆಲ್ಲಿ ? ಎಲ್ಲ ನಿಂದೆ ನಿಷ್ಠುರಗಳಿಗೂ ಎದೆಕೊಟ್ಟು ಗೌರಿ–ಕಮಲೆಯರ ಬದುಕನ್ನು ಹಸನುಮಾಡಲು ನಿಂತ ಆ ಎಳೆಯ ರಾಜುವಿನ ಅಗೋಚರ ಅಂತಃಕರಣವೆಲ್ಲಿ ?"

ಎಲ್ಲ ವಿಧವೆಯರಂತೆ ಇವಳೂ ಇರುತ್ತಾಳೆ; ಎಂದುಕೊಂಡಿದ್ದ ರಾಮಣ್ಣನವರು ಈಗ ಒಟ್ಟು ಬಾಲವಿಧವೆಯರ ಬದುಕಿನುದ್ದಕ್ಕೂ ಕಣ್ಣು ಹಾಯಿಸಿದರು.

ರಾಜು ಹೇಳಿದಂತೆ ತಿಂದು ಜೀವಿಸುವದಲ್ಲದೆ ಮತ್ತೇನಿದೆ ಅವರಿಗೆ. ಮಕ್ಕಳು ಸಂಸಾರ ಇದ್ದವರದು ಒಂದು ಬಗೆ. ಗಂಡನ ಮೈಯನ್ನು ಮುಟ್ಟದ ತಮ್ಮ ಮಗಳು ಹದಿನಾಲ್ಕು ವರ್ಷಗಳನ್ನು ಹೇಗೆ ಕಳಿದಿರಬಹುದು.

ಮರುಗಳಿಗೆ ಅವರಿಗೆ ಸದಾನಂದರ ನೆನಪು. ಹೇರಳ ಆಸ್ತಿ, ಅಷ್ಟು ಆಸ್ತಿಗೂ ಅವನೇ ವಾರಸುದಾರ. ನೋಡಿದರೆ ಕಣ್ಣುತುಂಬುವ ಆಕರ್ಷಕ ರೂಪ".[2]

ನಿಜವಾಗಿಯೂ ತಮ್ಮ ಮಗಳು ಸುಖಿಯಾದಳು ಎಂಬ ಒಂದು ಭರವಸೆ ಹೃದಯದಂಚಿಗೆ ಬಂದು ನಿಂತು ಕರೆಯಿತು.

ತಮ್ಮ ಮಗಳ ಭವಿಷ್ಯಕ್ಕಾಗಿ ರಾಮಣ್ಣನವರು ಕುರುಡು ಕಟ್ಟಳೆಗಳನ್ನು ಕಿತ್ತೊಗೆದು, ಹೊಸ ಜನಾಂಗದ ವಿಚಾರಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ ಹಳೆಯದರಿಂದ ಸಂಪೂರ್ಣ ಮುಕ್ತರಾಗದೇ, ಹೊಸ ಮೌಲ್ಯಗಳನ್ನು ಸ್ವೀಕರಿಸುವಾಗ ಉಂಟಾಗುವ ಸಂಘರ್ಷವನ್ನು ರಾಮಣ್ಣನವರಲ್ಲಿ ಕಾಣುತ್ತೇವೆ.

1. ಅದೇ–ಪುಟ. 344–345.
2. ಅದೇ, ಪುಟ, 349–350.

ರಾಜುವಿನ ಪಾತ್ರ ಚಿತ್ರಣದಲ್ಲೂ ಲೇಖಕಿ ಹೆಚ್ಚಿನ ಮಮತೆಯನ್ನೇ ತೋರಿಸಿದ್ದಾರೆ, ಹೆಂಗರಳಿನ ರಾಜು ಮನೆಮಂದಿಗಷ್ಟೇ ಅಲ್ಲ, ಊರವರಿಗೆಲ್ಲ ಜನಪ್ರಿಯ ವ್ಯಕ್ತಿ. ವಿಧವೆ ಅಕ್ಕನ ಮನಸ್ಸಿನ ನೆಮ್ಮದಿಗಾಗಿ ಹಗಲಿರಳೂ ಶ್ರಮಿಸಿದ್ದಾನೆ. ಅವನಿಂದಲೇ ವಿಧವೆ ಕಮಲಳ ಬಾಳು ಬಂಗಾರವಾಗುತ್ತದೆ. ಕಾದಂಬರಿಯ ಆರಂಭದಿಂದಲೇ ಗೌರಿ ಹಾಗೂ ರಾಜುವಿನಲ್ಲಿರುವ ಅವ್ಯಕ್ತವಾಗಿದ್ದ ಪ್ರೀತಿ, ಅವಳು ಕುಂಟಿಯಾದಾಗ ಮದುವೆಯಾಗಲೂ ದಾರಿಮಾಡಿಕೊಡುತ್ತದೆ.

ಗೌರಿ ನಿಸರ್ಗದ ಕುವರಿ. ಕಷ್ಟಗಳನ್ನೆಲ್ಲ ಸುಖದಂತೆ ಸ್ವೀಕರಿಸುವ ಮನೋಸ್ಥೈರ್ಯ ಅವಳಿಗಿವೆ. ಹಿರಿತನ, ಔದಾರ್ಯ, ಪರರಿಗೆ ಒಳಿತನ್ನೇ ಹಾರೈಸುವ ಉದಾತ್ತ ಹೃದಯ ಅವಳದು.

ಮೂರ್ತಿಯ ಪಾತ್ರಬೆಳವಣಿಗೆ ಸ್ವಾಭಾವಿಕವಾಗಿ ಪರಿಪೂರ್ಣವಾಗಿದೆ. ಸುಶಿಕ್ಷಿತನಾದ 'ಮೂರ್ತಿ' ಹೊಸ ಸಮಾಜದ ಹೊಸ ಜನಾಂಗದ ಪ್ರತೀಕ. ವ್ಯಕ್ತಿನಿಷ್ಠತೆ ಮೂರ್ತಿಗೆ ಉತ್ತಮ ನಿದರ್ಶನ. ಆದ್ದರಿಂದಲೇ ತನ್ನ ಮನ 'ಮೆಚ್ಚಿದ' ಮುಕ್ತಾಳನ್ನು ಮದುವೆಯಾಗಲು ಸಿದ್ಧನಾಗುತ್ತಾನೆ. ಆತನಲ್ಲಿ ಮೊದಲಿದ್ದ ಅಹಂ ಕಾದಂಬರಿಯ ಕೊನೆಗೆ ಇಲ್ಲವಾಗಿ 'ಗೌರಿ' ಕುಂಟಿಯಾದ ನಂತರ ಅವನು ಸಂಪೂರ್ಣ ಬದಲಾಗುತ್ತಾನೆ.

ನೂಕೋ ನರಸಿಂಹ, ಅದರ 'ರಥೋತ್ಸವ' ಕಾದಂಬರಿಯುದ್ದಕ್ಕೂ ಗಮನ ಸೆಳೆಯುತ್ತದೆ. ಬಚ್ಚನಂತಹ ವಿಚಿತ್ರವೂ ಲೇಖಕಿಯ ಸಂಪೂರ್ಣ ಗಮನ ಪಡೆದಿದೆ. ಗೌರಿಯ ಕರುಣೆ, ಪ್ರೀತಿಗೆ ಪಾತ್ರನಾದ ಬಚ್ಚ ಅವಳು ಕುಂಟಿಯಾದ ನಂತರ ಅವಳಿಗೆ ಊರುಗೋಲಾಗಿ ನಿಲ್ಲುತ್ತಾನೆ.

ಹೇಮತಿಗುಡ್ಡ ದುಂಡುಮಲ್ಲಿಗೆಯ ನಿಸರ್ಗ ಚೇತೋಹಾರಿಯಾಗಿದೆ. ಆಡುನುಡಿಯ ಸೊಗಡು ಕಾದಂಬರಿಗೆ ಸೊಗಸೆನ್ನಿಸಿದೆ. ಎರಡೂ ಸಂಸಾರಗಳ ಮಧುರ ಬಾಂಧ್ಯವ, ನೋವು–ನಲಿವುಗಳನ್ನು ಚಿತ್ರಿಸುವಲ್ಲಿ ಲೇಖಕಿಯ ಅನುಭವದ ಮೂರ್ತತೆಯನ್ನು ಕಾಣುತ್ತೇವೆ. ಪುಣೆ, ಮಂಗಳೂರು, ಮಲೆನಾಡಿನ ಆಡುನುಡಿಯ ಬಳಕೆ ಸಮರ್ಥವಾಗಿ ಮೂಡಿದೆ.

"ಶ್ರೀಮತಿ ಇಂದಿರಾ ಅವರ ಈ ಕಾದಂಬರಿ ಮಲೆನಾಡಿನ ಪ್ರಕೃತಿ ರಮ್ಯ ವಾತಾವರಣವನ್ನು ಕಥನಕ್ರಿಯೆಗೆ ಆರಿಸಿಕೊಂಡು ಬೆಳೆದು ಬಂದದ್ದಾಗಿದೆ. ಜೀವನದ ಸಹಜವಾದ ವ್ಯಾಪಾರವನ್ನು ಅದರ ಮೂಲಭೂತ ಶಕ್ತಿ ಮತ್ತು ಅವ್ಯಕ್ತವಾದ ಪ್ರೇರಣೆಯೊಂದಿಗೆ ಶ್ರೀಮತಿಯವರು ಚಿತ್ರಿಸಿದ್ದಾರೆ. ಇಲ್ಲಿಯ ಪಾತ್ರಗಳು ಒಂದೊಂದು ಒಂದೊಂದು ವಿಧವಾಗಿ ಊನವಾಗಿ, ಪ್ರಕೃತಿಯ ವಿಕಾರಗಳಿಗೆ ಈಡಾಗಿದ್ದರೂ, ಕರುಳಿನ ಎಳೆತದಿಂದ ತಾರುಣ್ಯದ ಸ್ನೇಹದಿಂದ, ಅಂತರಂಗದ ಐಶ್ವರ್ಯದಿಂದ

ಸ್ಮರಣೆ–ಕರುಣೆಗಳಿಂದ ಬದುಕು ಬಂಗಾರವಾಗಬಹುದೆಂಬ ಸತ್ಯವನ್ನು ಕಾದಂಬರಿ ಸ್ವಾಭಾವಿಕವಾಗಿ ನಿರೂಪಿಸುತ್ತದೆ'"[1]

ಇಂತಹ ಜೀವನ ಶ್ರದ್ಧೆಯಿರುವದರಿಂದಲೇ ಕಾದಂಬರಿಯ ವ್ಯಕ್ತಿಗಳಿಗೆ ಬದುಕು ಉಸಿರಾಟದಷ್ಟು ಸುಲಭವಾಗಿದೆ.

ವಸ್ತು, ಪಾತ್ರಚಿತ್ರಣ, ಶೈಲಿ, ಮುಂತಾಗಿ ಸಾಹಿತ್ಯಿಕ ದೃಷ್ಟಿಯಿಂದ ಸಫಲವಾದ ಈ ಕೃತಿ–ಸಾಮಾಜಿಕವಾಗಿಯೂ ಮಹತ್ವದ್ದಾಗಿದೆ. ಕೃತಿಯಲ್ಲಿ ಸಂಪ್ರದಾಯ ಸೋತು, ವೈಚಾರಿಕತೆಗೆ ಗೆಲುವು ಸಾಧಿಸಿದೆ.

ಮಧುವನ :

ಎಂ. ಕೆ. ಇಂದಿರಾ ಅವರ ಈ ಕಾದಂಬರಿ ವಿಧವಾ ಪುನರ್‌ವಿವಾಹದ ವಿಷಯವನ್ನೊಳಗೊಂಡಿದೆ. ಇದು 'ಸದಾನಂದ' ಕಾದಂಬರಿಯ ಮುಂದಿನ ಭಾಗ. 'ಸದಾನಂದ' ಪ್ರಕಟವಾದ ಹತ್ತು ವರ್ಷಗಳ ನಂತರ ಈ ಕಾದಂಬರಿ ಪ್ರಕಟವಾಗಿದೆ. 'ಸದಾನಂದ' ಕಾದಂಬರಿಯನ್ನು ಮೆಚ್ಚಿಕೊಂಡ ಓದುಗರು ಅಭಿಮಾನದಿಂದ 'ಧಿರೋದಾತ್ತ ಪುರುಷ ಸದಾನಂದನ ಪಾತ್ರ ಮತ್ತು ಆತನ ದಿವ್ಯ ಭವ್ಯ ವ್ಯಕ್ತಿತ್ವ ಆ ಕಾದಂಬರಿಯಲ್ಲಿ ಪೂರ್ಣವಾಗಿಲ್ಲ'. ಬಾಲವಿಧವೆ ಕಮಲಳನ್ನು ಆತ ವಿವಾಹವಾದ ಎಂಬಲ್ಲಿಗೆ ಆ ಕೃತಿ ನಿಂತಿದೆ. ಅದರ ಮುಂದಿನ ಭಾಗ ಬರೆಯಿರಿ.[2] ಎಂದು ಕಾದಂಬರಿ ಕಾರ್ತಿಯನ್ನು ಒತ್ತಾಯ ಪಡಿಸಿದ್ದರಿಂದ ಓದುಗರ ಕೋರಿಕೆಯನ್ನು ಮನ್ನಿಸಿ ಇಂದಿರಾ ಅವರು ೧೯೭೭ರಲ್ಲಿ 'ಮಧುವನ' ಕಾದಂಬರಿಯನ್ನು ಬರೆದರು.

ಕಾದಂಬರಿಕಾರ್ತಿಯೇ ಹೇಳಿದಂತೆ 'ಸದಾನಂದ' ಎಂಬ ದಿನಮಣಿಯ ಹೊಂಗಿರಣದ ಸೇಚನದಿಂದ ಇದುವರೆಗೆ ವೈಧವ್ಯದ ಅಂಧಕಾರದಲ್ಲಿ ಮುದುಡಿ ಕುಳಿತಿದ್ದ ಕಮಲಳ ಜೀವನ ವಿಕಾಸ ಹೇಗಾಯಿತೆಂಬುದೆ ಈ ಮಧುವನದ ಕಥೆ.

ವಿಧುರ ಸದಾನಂದನ ಜೀವನ ಸಂಗಾತಿಯಾದ ಕಮಲಳ ಬದುಕಿನ ವಿಕಾಸ ಜೊತೆಗೆ ಸದಾನಂದನ ಧೀರೋದಾತ್ತ ವ್ಯಕ್ತಿತ್ವದ ಔದಾರ್ಯದ ಚಿತ್ರಣವೇ ಈ ಕಾದಂಬರಿಯಲ್ಲಿ ಮುಖ್ಯವಾಗಿದೆ.

ಗಂಡ, ಮಕ್ಕಳನ್ನು ಕಾಣದೆ ಯೌವ್ವನದಲ್ಲೇ ವಿಧವೆಯರಾದ ಹೆಣ್ಣು ಮಕ್ಕಳ ಬದುಕು ಹಿಂದೂ ಸಮಾಜದಲ್ಲಿ ಅತ್ಯಂತ ಅಸಹನೀಯವಾಗಿ ಪರಿಣಮಿಸುತ್ತದೆ. ಹುಟ್ಟಿದ ಮನೆ ಇಲ್ಲವೆ ಕೊಟ್ಟ ಮನೆಯಲ್ಲಿ ಆಶ್ರಯಕ್ಕಾಗಿ ಎಲ್ಲ ಕಟುನಿಂದೆಗಳನ್ನು ಸಹಿಸಿಕೊಂಡು ತನ್ನ ಇಡೀ ಜೀವಿತವನ್ನು ವ್ಯರ್ಥವಾಗಿ ಕಳೆಯಬೇಕಾಗುತ್ತದೆ.

---

1. ಕೆ. ಡಿ. ಕುರ್ತುಕೋಟಿ 'ಸದಾನಂದ'ದ ಬಗ್ಗೆ.
2. ಎಂ. ಕೆ. ಇಂದಿರಾ : 'ಮಧುವನ' ಮುನ್ನುಡಿ.

ಸಮಾಜದ ಕಟ್ಟುಪಾಡುಗಳಲ್ಲಿ ಹುಟ್ಟಿಕೊಂಡು ಈ ಸಮಸ್ಯೆಗೆ ಸಮಾಜದಿಂದಲೇ ಪರಿಹಾರ ಸಾಧ್ಯವಿದೆ. ಸಂಪ್ರದಾಯದ ಧೂಳನ್ನು ಕೊಡವಿಕೊಂಡು ಕುಟುಂಬದ ವ್ಯಕ್ತಿಗಳೆಲ್ಲರೂ ಮಾನವೀಯತೆಯಿಂದ ಹೆಣ್ಣುಮಗಳ ಬಾಳನ್ನು ಪರಿಪೂರ್ಣಗೊಳಿಸಲು ಮುಂದಾದರೆ ಅವರ ಜೀವನ ಸುಖಮಯವಾಗಬಲ್ಲದು. ವಿಧವೆಯರನ್ನು ಮದುವೆಯಾಗಲು ವಿದ್ಯಾವಂತ ಪುರುಷರೂ ಧೈರ್ಯದಿಂದ ಮುಂದಾಗಬೇಕು ಎಂಬುದು ಲೇಖಕಿಯ ಆಶ್ರಯವಾಗಿದೆ.

'ಸದಾನಂದ' ವಿಶಾಲಹೃದಯವುಳ್ಳ ಧೀರೋದಾತ್ತ ವ್ಯಕ್ತಿ. ಆತನೇ ಕಾದಂಬರಿಯ ಪ್ರಮುಖ ಸಮಸ್ಯೆಗಳಿಗೆ ಪರಿಹಾರ ಸೂಚಿಸುತ್ತಾನೆ. ವಿಧವೆ ಕಮಲಳನ್ನು ಮದುವೆಯಾದ ನಂತರ ಸಮಾಜದ ನಡುವೆ ಇದ್ದುಕೊಂಡು ಅವಳೊಡನೆ ಹೇಗೆ ಬದುಕನ್ನು ನಿರ್ವಹಿಸಿದ ? ಎರಡು ಕುಟುಂಬದವರೂ ಸಮಾಜವನ್ನು ಹೇಗೆ ಎದುರಿಸಿದರು ? ಅವರ ದಾಂಪತ್ಯಜೀವನ ಯಶಸ್ವಿಯಾಯಿತೇ ? ಎಂಬಿವೇ ವಿಷಯಗಳು ಇಲ್ಲಿ ಮುಖ್ಯವಾಗಿ ವಿವರಗೊಂಡಿವೆ.

ಕತ್ತಲೆ ಕೋಣೆಯಲ್ಲಿ ಮುರುಟಿ ಹೋಗುತ್ತಿದ್ದ ಕಮಲಳ ಬಾಳು, ಸದಾನಂದನ ಔದಾರ್ಯದಿಂದ ಪರಿಪೂರ್ಣವಾಯಿತು. ಸಂಸ್ಕಾರಗೊಂಡು ವಿಕಸಿತವಾಯಿತು; ಎಂಬುದನ್ನು ಕಾದಂಬರಿಯಲ್ಲಿ ನಿರೂಪಿಸಿದ್ದಾರೆ.

'ಸದಾನಂದ' ಕಾದಂಬರಿಯ ಮುಕ್ತಾಯ ವಿಧುರ 'ಸದಾನಂದ' ಹಾಗೂ ವಿಧವೆ 'ಕಮಲ' ಇವರ ಮಧುರ ಮಿಲನದೊಂದಿಗೆ ಮುಕ್ತಾಯವಾಗಿದ್ದರೆ, 'ಮಧುವನ'ದ ಪ್ರಾರಂಭ ಸುಮಂಗಲಿಯಾಗಿರುವ ಕಮಲಳ ಬಾಳಿನ ಹೊಂಬೆಳಕಿನೊಂದಿಗೆ ಆರಂಭವಾಗುತ್ತದೆ. ಅವಳ ಬದುಕಿನಲ್ಲಿ ಬಂದ ಆ ಬೆಳಕು ಅತ್ಯಂತ ಸುಂದರ, ಭಾವನಾಮಯ ಬೆಳಕು.

'ಸದಾನಂದ' ಕಮಲಳಿಗೆ ಪತಿಯಾಗಿ ಗುರುವಾಗಿ ಅವಳನ್ನು ಮಾತುಕತೆ, ಚರ್ಚೆ ವಿನೋದಗಳಲ್ಲಿ ಭಾಗವಹಿಸುವಂತೆ ಮಾಡಿದುದಲ್ಲದೆ, ದಕ್ಷಿಣ, ಉತ್ತರ ಭಾರತದಲ್ಲೆಲ್ಲ ಪ್ರವಾಸಕ್ಕೂ ಕರೆದೊಯ್ದು ಹೊರಪ್ರಪಂಚದ ಅರಿವನ್ನು ಮಾಡಿಕೊಡುತ್ತಾನೆ. ಅತ್ತೆಯ ವಾತ್ಸಲ್ಯ, ಪ್ರೀತಿ, ಸರಳ ಸೌಜನ್ಯದ ಆತ್ಮೀಯ ವಾತಾವರಣದಲ್ಲಿ ಕಮಲಳ ಜೀವನ ದಿನದಿನಕ್ಕೆ ವಿಕಾಸವಾಗುತ್ತದೆ.

ಕಮಲಳನ್ನು ಮಧುವನದಲ್ಲಿ ಬಿಟ್ಟು ಬಂದ ತಂದೆ ರಾಮಣ್ಣನವರಿಗೆ ಚಿಕ್ಕಮಗಳೂರಿನಲ್ಲಿ ಸುತ್ತುಮುತ್ತಲಿನ ಜನರಿಂದ ಬರುವ ನೂರೆಂಟು ಪ್ರಶ್ನೆಗಳಿಗೆ ಉತ್ತರ ಹೇಳುವುದು ಹೇಗೆ ಎಂಬ ಚಿಂತೆ. ಅಲ್ಲದೆ ಹುಟ್ಟಿನಿಂದ ಒಂದು ಗಳಿಗೆಯೂ ತಮ್ಮನ್ನು ಬಿಟ್ಟಿರದ ಮಗಳನ್ನು ಅತ್ತೆಯ ಮನೆಗೆ ಕಳುಹಿಸಿದ ಅಗಲಿಕೆಯ ನೋವು, ವ್ಯಥೆ, ಅಪಾರ. ಮಗಳ ಜೀವನ ಅಮೃತಮಯವಾದುದನ್ನು ಕಣ್ಣಾರೆ ಕಂಡಿದ್ದರೂ, ಸಂಪ್ರದಾಯಶೀಲ ದಂಪತಿಗಳಿಗೆ ಒಂದು ರೀತಿಯ ಮುಜುಗುರ. ತಾವು ಮಾಡ

ಬಾರದ ತಪ್ಪನ್ನು ಮಾಡಿದ ಅನುಭವ ರಾಮಣ್ಣನವರ ಅಕ್ಕ "ಯಂಕಟಮ್ಮ"ನವರ ಸಲಹೆಯಂತೆ ಕೆಲವು ದಿನ ಚಿಕ್ಕಮಗಳೂರನ್ನು ಬಿಟ್ಟು ತಂಗಿಯಮನೆ 'ದುಂಡು ಮಲ್ಲಿಗೆ'ಗೆ ಹೊರಡುತ್ತಾರೆ. ದುಂಡುಮಲ್ಲಿಗೆಯ ಪ್ರಶಾಂತ ವಾತಾವರಣ, ತಂಗಿಯ ಪ್ರೀತಿ ಆತ್ಮೀಯತೆಯಿಂದಾಗಿ ಅವರ ಮನದ ವ್ಯಥೆ ದಿನದಿನಕ್ಕೆ ದೂರವಾಗುತ್ತದೆ.

ಕಮಲಳಿಗೂ ಹಳೆಯ ಬದುಕಿನ ಕಹಿ ನೆನಪು ಮಾಸಿ. ಅವಳ ಹೊಸ ಬಾಳು ಸುಂದರವಾಗುತ್ತದೆ. ಸದಾನಂದ ಹಾಗೂ ಕಮಲ ಇವರ ಸುಂದರ ದಾಂಪತ್ಯ ಜೀವನದಲ್ಲಿ ಪುಟ್ಟ 'ಮಧುರ' ಜನಿಸಿಸುತ್ತಾಳೆ.

'ಸದಾನಂದ' ಕಾದಂಬರಿಯಲ್ಲಿರುವ ಎಲ್ಲ ಪಾತ್ರಗಳೂ ಇಲ್ಲಿವೆ. ಈ ಕಾದಂಬರಿ ಯಲ್ಲಿ ಕಂಡುಬರುವ ಹೊಸ ಪಾತ್ರಗಳೆಂದರೆ ಸದಾನಂದನ ಅಕ್ಕ 'ಪ್ರೇಮಕಲಾ' ಹಾಗೂ ಅವಳ ಪತಿ ಹಾಗೂ ಸದಾನಂದನ ಪ್ರಕಾಶನ ಸಂಸ್ಥೆಯಲ್ಲಿ ಕೆಲಸ ಮಾಡುವ ಕಲಾವಿದ.

ಈ ಕಾದಂಬರಿಯಲ್ಲಿಯೂ ನಾಯಕ 'ಸದಾನಂದ'ನ ಧಿರೋದಾತ್ತ ಚರಿತ ವನ್ನು ಮನದಟ್ಟು ಮಾಡಿಕೊಂಡು ಲೇಖಕಿ ಸಾಕಷ್ಟು ಪ್ರಯತ್ನ ಪಟ್ಟಿದ್ದಾರೆ. ಅವನ ಅಗಾಧ ಪತ್ನಿಪ್ರೇಮ, ಮಾತೃಭಕ್ತಿ, ಕಲಾವಿದ, ಸಂಗೀತಗಾರ, ಕಾದಂಬರೀಕಾರ, ಬಡವರ ಬಂಧು ಇತ್ಯಾದಿ ಆದರ್ಶ ಗುಣಗಳ ವಿವಿಧ ಮುಖಗಳ ಪರಿಚಯವಾಗುತ್ತದೆ. ಸದಾನಂದನೇ ಕಮಲಳನ್ನು ಮದುವೆಯಾದ ಉದ್ದೇಶವನ್ನು ತಿಳಸುವಂತೆ ಆಳವಾದ ಮಡುವಿನಲ್ಲಿ ಮುಳುಗಿ ಪಾಚಿಕಟ್ಟಿ ಹೋಗಿದ್ದ, ಒಂದು ಅಡ್ಡಾದಿಡ್ಡಿಯಾಗಿದ್ದ ಅಮೃತಶಿಲೆಯನ್ನು ಮೇಲೆ ತಂದು, ಅದನ್ನು ಶುಭ್ರಗೊಳಿಸಿ ಒಂದು ಸುಂದರ ಕಮನೀಯ ದೇವಿಯ ವಿಗ್ರಹವನ್ನು ಮಾಡುವ ಸಂಕಲ್ಪ[1] ಎಂದು ತಿಳಿಸುತ್ತಾನೆ.

ಮತ್ತೊಂದು ಸಂದರ್ಭದಲ್ಲಿ ತನ್ನ ತಾಯಿ ಜಲಜಾಕ್ಷಮ್ಮನವರಿಗೆ—

"ಈ ಕಮಲಳನ್ನು ಅವರ ಅಪ್ಪನ ಮನೇಲಿ ಹದಿನೈದು ವರ್ಷದಿಂದ ಕತ್ತಲೇ ಕ್ವಾಣಿ ಉಪ್ಪಿನಕಾಯಿ ಮಾಡಿಟ್ಟಿದ್ದಾರೆ. ಅವಳಿಗೆ ಪ್ರಪಂಚ ಎಂದರೆ ಏನು ಎಂಬುದು ಗೊತ್ತಿಲ್ಲ. ನಾನು ಇವಳನ್ನು ಲಗ್ನವಾದದ್ದು ಯಾತಕ್ಕೆಂದು ಗೊತ್ತುಂಟೆ? ನನಗೆ ಹೆಂಡತಿ ಬೇಕಂತ ಅಲ್ಲ, ಮತ್ತೆ ನಿನಗೆ ಮೊಮ್ಮಕ್ಕಳನ್ನು ಹೆರಲಿಕ್ಕೆ ಒಂದು ಸೊಸೆ ಬೇಕಂತ ಅಲ್ಲ. ಒಂದು ಒಳ್ಳೆಯ ಜೀವ ಸುಮ್ಮನೆ ಕೊಳೆತು ಹೋಗ್ತದಲ್ಲ, ಅಂತ"[2] ಎಂದು ಸದಾನಂದನ ಮೂಲಕ ತಿಳಿಸುವ ವಿಚಾರಗಳು ಇಂದಿರಾ ಅವರ ಮನೋಧರ್ಮ ವನ್ನೇ ಸೂಚಿಸುತ್ತವೆ,

---

1. ಎಂ. ಕೆ. ಇಂದಿರಾ ಮಧುವನ ಪುಟ-32

2. ಅದೇ, ಪುಟ–38.

ಸದಾನಂದ ಕಾದಂಬರಿಯ ಬಗೆಗೆ ವಿಮರ್ಶಕರು ರಾಜು ಕುಂಟ ಗೌರಿಯನ್ನು, ಸದಾನಂದ ವಿಧವೆ ಕಮಲಳನ್ನು ಮದುವೆಯಾಗಲು ಒಪ್ಪಿಕೊಳ್ಳುವ ಸನ್ನಿವೇಶ ಅಸಹಜವಾಗಿದೆ ; ಅಸಮರ್ಪಕವಾಗಿದೆ–ಎಂದು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

ಶ್ರೀರಂಗರೂ ಸಹ 'ಸದಾನಂದ' ಕಾದಂಬರಿಯ ಬಗ್ಗೆ ಬರೆಯುತ್ತ 'ರಾಜುವು ಕುಂಟ ಗೌರಿಯನ್ನು ಮತ್ತು ಸದಾನಂದ ರಾಜುವಿನ ಅಕ್ಕ ಬಾಲ ವಿಧವೆ. ಕಮಲಳನ್ನು ಮದುವೆಯಾಗುವ ಪ್ರಸ್ತಾಪ ಅಸಹಜವೆನಿಸುವಷ್ಟೇ ಅಸಮರ್ಪಕ[1] ಎಂದಿರುವ ಅಭಿಪ್ರಾಯಕ್ಕೆ ಉತ್ತರ ಎನ್ನುವಂತೆ ಇಂದಿರಾ ಅವರು ಈ 'ಮಧುವನ' ಕಾದಂಬರಿಯಲ್ಲಿ ಸದಾನಂದನ ಮೂಲಕ ವಿವರಿಸಿದ್ದಾರೆ. ಸದಾನಂದ ತನ್ನ ಹಾಗೂ ರಾಜುವಿನೊಡನೆ ನಡೆದ ಮಾತುಕತೆಯ ಸಂದರ್ಭವನ್ನು ಕಮಲಳಿಗೆ ತಿಳಿಸುತ್ತಾ ನೀವು ನಿಮ್ಮ ಅಕ್ಕನಿಗೆ ಮತ್ತೊಂದು ಲಗ್ನ ಯಾಕೆ ಮಾಡಬಾರದು ಎಂದಾಗ ಅವರೇನೆಂದರು ಗೊತ್ತುಂಟಾ ?' 'ನನ್ನ ಅಕ್ಕ ಅದಕ್ಕೆ ಒಪ್ಪುದಿಲ್ಲ, ತಂದೆ ತಾಯಿ ಹಳೇ ಸಂಪ್ರದಾಯದವರು, ಅವರೂ ಒಪ್ಪುವುದಿಲ್ಲ, ಅಸಲು ಅವಳ ವೈಧವ್ಯದ ಸಂಗತಿ ತಿಳಿದೂ ಅವಳನ್ನು ಮದುವೆಯಾಗುವ ಮಹಾನುಭಾವ ಯಾರಿದ್ದಾರೆ ಅಂದರು. ಅಷ್ಟರಲ್ಲಿ ನಿಮ್ಮ ಗೌರಮ್ಮನ ಸುದ್ದಿ ಬಂತು. ರಾಜಣ್ಣನಿಗೆ ಗೌರಮ್ಮನನ್ನು ಮದುವೆಯಾಗುವ ಮನ ಉಂಟೆಂದು ನನಗೇನು ಗೊತ್ತು ? ನಿನ್ನ ದೊಡ್ಡ ತಮ್ಮನ ಕಾರುಬಾರೆಲ್ಲ ತಿಳಿದ ಮೇಲೆ ಸಹಜವಾಗಿ ನಾನೆಂದೆ :

'ನೀವೇಕೆ ಗೌರಮ್ಮನನ್ನು ಮದುವೆಯಾಗಬಾರದು ?' ಕೆಲವು ಗಳಿಗೆ ಅವರು ಸ್ವಲ್ಪ ಚಿಂತಿಸಿದ್ದುಂಟು. ನಂತರ ತುಸು ಸಂಕೋಚದಿಂದ ಅಂದರು.

ಮನೆಯ ಹಿರಿಯರು ಈ ಮೊದಲೇ ನನಗೊಂದು ಕನ್ಯೆಯನ್ನು ನೋಡಿಟ್ಟಿದ್ದಾರೆ. ಹುಡುಗಿಯೂ ನನ್ನನೇ ಮೆಚ್ಚಿಕೊಂಡಂತೆ ಕಾಣುತ್ತದೆ. ನಾನು ಕೂಡಲೇ ಹೇಳಿದೆ : 'ನಿಮ್ಮ ಕುಂಟಿಯನ್ನು ನಾನು ಲಗ್ನ ಆಗ್ತೇನೆ' ಆದರೆ ಕೂಡಲೇ ಅವರು ಮನ ಬದಲಿಸಿದರು. ನನ್ನ ಕೈ ಹಿಡಿದು ಹೇಳಿದರು.

ಹಾಗಾದರೆ ಗೌರಿಯನ್ನು ನಾನು ಮದುವೆ ಆಗ್ತೇನೆ ನೀವು ನನ್ನ ಅಕ್ಕನನ್ನು ಮದುವೆಯಾಗಿ—ಎಂದು.

"ನಿಜ ಹೇಳ್ತಾ, ಇದ್ದೇನೆ ರಾಜಣ್ಣನ ಹೇಳಿಕೆಯಿಂದ ಮತ್ತು ಒಂದೇ ಕ್ಷಣದ ನಿನ್ನ ದರ್ಶನದಿಂದ ಯಾಕೋ ನೀನು ನನ್ನ ಮನದಲ್ಲಿ ನಿಂತೆ... ನಿನ್ನನ್ನು ಕಂಡದ್ದು ಒಂದು ಕ್ಷಣವಾದರೂ, ನಂತರ ಅನೇಕ ಬಾರಿ ನೀನು ನನ್ನ ಮನದ ಮುಂದೆ ಸುಳಿದಾಡಿದೆ. ಆದರೆ, ಹೀಗೆ ನನಗೆ ಲಭ್ಯಳಾಗುವಿ ಎಂಬ ಭರವಸೆ ಖಂಡಿತಾ ಇರಲಿಲ್ಲ. ಅಂದು ರಾಜಣ್ಣ ಹೇಳಿದ ಕೂಡಲೇ ನನಗೆ ನನ್ನ ಬಯಕೆಯ ಲೋಕದ ಬಾಗಿಲು ತೆರೆದಂತಾಗಿ

1. ಪ್ರಜಾವಾಣಿ, 17-10-1965.

ಮುಂದಿನ ಪರಿಸ್ಥಿತಿ ಏನೆಂದು ಯೋಚಿಸದೆ ಒಪ್ಪಿಕೊಂಡೆ"[1] ಎಂದು, ಸದಾನಂದ ಹೇಳುವ ಮಾತುಗಳನ್ನು ಗಮನಿಸಬಹುದು—ರಾಜು ಅಂತರಂಗದಲ್ಲಿ ಗೌರಿಗೆ ಒಲಿದಿರುವಂತೆ, ಸದಾನಂದ ಕಮಲಳಿಗೆ ಒಲಿದಿದ್ದಾನೆ. ಆದ್ದರಿಂದ ರಾಜು, ಗೌರಿಯನ್ನು ಬಿಟ್ಟು ಕೊಡದೆ ತಾನೇ ಅವಳನ್ನು ಮದುವೆಯಾಗಲು ಒಪ್ಪಿಕೊಂಡು, ಸದಾನಂದನಿಗೆ ಕಮಲಳನ್ನು ಮದುವೆಯಾಗುವಂತೆ ಸೂಚಿಸುತ್ತಾನೆ.

ಸದಾನಂದ ಎಷ್ಟೇ ವಿಚಾರವಾದಿಯಾಗಿದ್ದರೂ ಕೆಲವು ಸಂದರ್ಭಗಳಲ್ಲಿ ಅವನ ಘೋಷಣೆಗಳು ವೈಚಾರಿಕ ತಳಹದಿಯಿಲ್ಲದೆ ಕೇವಲ ಘೋಷಣೆಗಳಾಗಿ ಉಳಿದು ಬಿಡುತ್ತವೆ. ಒಮ್ಮೆ ಕಮಲಳಿಗೆ ಹೆಣ್ಣು-ಗಂಡಿನ ಸಂಬಂಧದ ಬಗೆಗೆ ಪ್ರಾಣಿ ಜಾತಿಗೂ ಇರುವ ವ್ಯತ್ಯಾಸವನ್ನು ವಿವರಿಸುತ್ತ—

"ಕತ್ತೆಗೂ ಕುದುರೆಗೂ ಆಕಾರದಲ್ಲಿ ಸ್ವಲ್ಪ ವ್ಯತ್ಯಾಸವಿರುವದು ನಿಜ. ಮತ್ತೆ ಅಂಗರಚನೆ ಎರಡಕ್ಕೂ ಒಂದೇ ಉಂಟು ಅಲ್ಲ. ಬೇಕಾದರೆ ಒಂದು ಹೆಣ್ಣು ಕತ್ತೆಯನ್ನು ಒಂದು ಗಂಡು ಕುದುರೆಯನ್ನು ಒಂದೇ ದೊಡ್ಡಿಯೊಳಗೆ ಮೂರು ತಿಂಗಳು ಕೂಡಿ ಹಾಕು. ಅವು ಒಂದಕ್ಕೊಂದು ಕೂಡಲಿಕ್ಕಿಲ್ಲ. ಅವು ಮೂಕ ಪ್ರಾಣಿಗಳು. ಬುದ್ಧಿ ಇಲ್ಲದವು. ಶಾಸ್ತ್ರ-ಸಂಪ್ರದಾಯ, ಜಾತಿ-ಮತಗಳ ಕಟ್ಟಿಲ್ಲ, ಅದಕ್ಕೂ ಕಾಮದ ಉದ್ರೇಕವುಂಟು. ಆದರೆ ಅವು ಕೂಡುವುದಿಲ್ಲ. ಇದಕ್ಕೆ ಏನಂತಿ? ಅದೇ ಮನುಷ್ಯ ಜಾತಿಯ ಪ್ರಾಯದ ಕೊಂಗರ ಹೆಣ್ಣನ್ನು ಒಬ್ಬ ಶ್ರೀಮಂತ. ಸಭ್ಯ ಮನುಷ್ಯನನ್ನು ಒಂದು ರಾತ್ರಿಯ ಮಟ್ಟಿಗೆ ಒಂದು ಕೋಣೆಯಲ್ಲಿ ಬಿಟ್ಟು ನೋಡಬೇಕು"[2] ...ಎಂದು ಸದಾನಂದ ಹೇಳುವ ಮಾತುಗಳು ವೈಚಾರಿಕ ತಳಹದಿ ಇಲ್ಲದ ಕೇವಲ ಘೋಷಣೆಯ ಮಾತುಗಳಾಗಿ ಉಳಿದಿದೆ.

"ಒಂದು ಸಾಧಾರಣ ಕೃತಿ; ಒಂದು ಉತ್ತಮ ಕೃತಿಯೋ ಎಂದಿಟ್ಟುಕೋ ಹತ್ತು ದರ್ಜೆಯ ಕೃತಿಗಳು ಪ್ರಕಟವಾಗುತ್ತವೆ. ಸಹಸ್ರಾರು ಜನ ಓದುಗರಿರುತ್ತಾರೆ. ಒಬ್ಬೊಬ್ಬರದು ಒಂದೊಂದು ಬಗೆಯ ಅಭಿರುಚಿ. ಅವರವರ ಸಂಸ್ಕೃತಿಗೆ ತಕ್ಕ ಹಾಗೆ ಮಾಡಿಕೊಳ್ಳುವುದುಂಟು. ಪತ್ರಿಕೆಯ ವಿಮರ್ಶೆ ಒಬ್ಬ ಮನುಷ್ಯನ ಅಭಿರುಚಿ. ಆತ ಸಕಲಶಾಸ್ತ್ರ ಪಂಡಿತನೇ? ಅದನ್ನು ಒಪ್ಪಿ ಕೊಳ್ಳುವರ್‍ಯಾರು?"[3]

"ಪ್ರತಿಭಾವಂತ ಹೆಣ್ಣುಮಕ್ಕಳಿಗೆ ಬರೆಯಬೇಕೆಂಬ ಹಂಬಲವಿದ್ದರೂ ನಾನಾ ಬಗೆಯ ಅಡಚಣೆಗಳಿರುತ್ತವೆ. ಅದರಿಂದ ಉತ್ತಮ ಸಾಹಿತ್ಯ ಹೆಚ್ಚು ಬರಲು ಅಡ್ಡಿಯಾಗಿದೆ. ಗಂಡಸರಿಗಿರುವಷ್ಟು ಸ್ವಾತಂತ್ರ್ಯ ಸೌಲಭ್ಯ ಅವಕಾಶಗಳು ನಮ್ಮ ಹೆಣ್ಣುಮಕ್ಕಳಿಗಿದ್ದರೆ ಗಂಡಸರಿಗಿಂತಲೂ ಉತ್ತಮ ಸಾಹಿತ್ಯ ಅವರಿಂದ ಖಂಡಿತ

1. ಅದೇ ; ಪುಟ–32.
2. ಅದೇ ; ಪುಟ–37.
3. ಅದೇ ; ಪುಟ–108.

ವಾಗಿಯೂ ರಚನೆಯಾಗ್ತಾ ಇತ್ತು"[1] ಎನ್ನುವ ಸದಾನಂದನ ವಿಚಾರಗಳೆಲ್ಲ ಎಂ. ಕೆ. ಇಂದಿರಾ ಅವರ ವಿಚಾರಗಳು ಎಂಬುದು ಸ್ಪಷ್ಟ.

ಕಮಲಳ ಪಾತ್ರ ಚಿತ್ರಣ ಅತ್ಯಂತ ಸುಕೋಮಲವಾಗಿ ಮೂಡಿ ಬಂದಿದೆ. ಸದಾನಂದನಿಗೆ ತಕ್ಕ ಹೆಂಡತಿಯನ್ನಾಗಿ ಚಿತ್ರಿಸಲು ಲೇಖಕಿ ಸಾಕಷ್ಟು ಪ್ರಯತ್ನಪಟ್ಟಿದ್ದಾರೆ.

ಅಚ್ಚಮ್ಮ, ಯಂಟತ್ತೆ, ಪುಟ್ಟತ್ತೆ, ರಾಮಣ್ಣ ಇವರೆಲ್ಲ ನಮ್ಮ ಜೀವನಕ್ಕೆ ತೀರ ಹತ್ತಿರದ ಪಾತ್ರಗಳಾಗಿ ನಿಲ್ಲುತ್ತವೆ.

ನಂಜಿ ಹೆಗ್ಗಡತಿ ಹಾಗೂ ಊರವರ ಕರುಣೆಯ ಕೂಸಾಗಿ ಬೆಳೆದು ಪ್ರೌಢನಾಗಿರುವ 'ಬಚ್ಚ' ಈ ಎಲ್ಲ ಪಾತ್ರಗಳೂ ಲೇಖಕಿಯ ಸಂಪೂರ್ಣ ಗಮನ ಪಡೆದಿವೆ.

ಬದುಕಿನುದ್ದಕ್ಕೂ ನೋವನ್ನೇ ಉಂಡು ತಮ್ಮನ ಮನೆಯ ಕಷ್ಟ-ಸುಖಗಳಿಗೆ ಹೆಗಲು ಕೊಟ್ಟು, ಸರಳ ಮನದ ವಾತ್ಸಲ್ಯದ ಮೂರ್ತಿ ಯಂಟಮ್ಮನವರ ಜೀವನ ಶ್ರದ್ಧೆ ಬೆರಗುಗೊಳಿಸುತ್ತದೆ.

ಎಸ್. ವಿ. ವಿಮಲ ಅವರು ಮಧುವನ ಕಾದಂಬರಿಯನ್ನು ಕುರಿತು ಆಡುಮಾತಿನ ಸಂಭಾಷಣೆಯ ಸೊಗಸಿನಿಂದ ಕೂಡಿದ ಈ ಕಾದಂಬರಿಯು ಮನರಂಜನೆ ನೀಡುತ್ತದೆ"[2] ಎಂದು ಸರಿಯಾಗಿಯೇ ಹೇಳಿದ್ದಾರೆ.

ಕಾಲ ಬದಲಾದಂತೆ ಸಮಾಜ ಬದಲಾಗುವುದನ್ನು, ಸಂಪ್ರದಾಯದ ಕುರುಡ ನಂಬಿಕೆಗಳು ಮಾಯವಾಗಿ ವೈಚಾರಿಕತೆ ನೆಲೆಗೊಳ್ಳುವುದನ್ನು ಇಲ್ಲಿ ಕಾಣುತ್ತೇವೆ.

ಪ್ರತಿಯೊಂದು ಜೀವಿಗೂ ತನ್ನದೇ ಆದ ಬಾಳ ಸಂಸ್ಕಾರವಿರಬೇಕು. ಅರ್ಧದಲ್ಲಿಯೇ ನಿಂತು ಹೋಗಿದ್ದ ಕಮಲಳ ಬಾಳು ಪೂರ್ಣ ಸಂಸ್ಕಾರಗೊಂಡಿದೆ. ಈ ಕಾದಂಬರಿಯು 'ಸದಾನಂದ' ಕಾದಂಬರಿಯ ಮುಂದಿನ ಭಾಗವಾದರೂ ಪ್ರತ್ಯೇಕವಾಗಿಯೂ ಓದಬಹುದು.

ಸಮಾಜದ ಒಂದು ಗಂಭೀರ ಸಮಸ್ಯೆಗೆ ಕಾದಂಬರಿಕಾರ್ತಿ, ಪರಿಹಾರವನ್ನು ಸೂಚಿಸಿದ್ದಾರೆ. ಇದು ಲೇಖಕಿಯ ಸುಧಾರಿಕ ಮನೋಧರ್ಮ ಹಾಗೂ ಸಾಮಾಜಿಕ ಕಾಳಜಿಯನ್ನು ತೋರಿಸುತ್ತದೆ.

'ಫಣಿಯಮ್ಮ' :

ಶ್ರೀಮತಿ ಎಂ. ಕೆ. ಇಂದಿರಾ ಅವರ ಮಹತ್ವದ ಕಾದಂಬರಿ 'ಫಣಿಯಮ್ಮ' ೧೯೭೭ರಲ್ಲಿ ಧಾರವಾಡದ ಮನೋಹರ ಗ್ರಂಥಮಾಲೆಯಿಂದ ಬೆಳಕಿಗೆ ಬಂದಿದೆ. ಇದುವರೆಗೆ ಮೂರು ಮುದ್ರಣ ಕಂಡಿದೆ. ೧೯೭೭ರಲ್ಲಿ ರಾಜ್ಯ ಸಾಹಿತ್ಯ ಅಕ್ಯಾಡೆಮಿಯ

---

1. ಅದೇ ಪುಟ–201
2. 'ಸಾಹಿತ್ಯ ವಾರ್ಷಿಕ' : 1976, ಪುಟ–72.

ಬಹುಮಾನ ಪ್ರಶಸ್ತಿಯನ್ನೂ ಗಳಿಸಿ ಇಂದಿರಾ ಅವರಿಗೆ ಅಪಾರ ಖ್ಯಾತಿಯನ್ನೂ ತಂದು ಕೊಟ್ಟಿದೆ.

'ತುಂಗಭದ್ರ' ಸದಾನಂದ ಕಾದಂಬರಿಗಳ ನಂತರ ಇಂದಿರಾ ಅವರು ಇಪ್ಪತ್ತೇಳು ಕಾದಂಬರಿಗಳನ್ನು ಬರೆದಿದ್ದರೂ ಅವುಗಳಲ್ಲಿ ಒಂದನ್ನೂ ಮನೋಹರ ಗ್ರಂಥಮಾಲೆಗೆ ಕೊಟ್ಟಿರಲಿಲ್ಲ. ಆ ಎರಡೂ ಕೃತಿಗಳಿಗೂ ಕಡಿಮೆಯಿಲ್ಲದ ಮತ್ತೊಂದು ಯೋಗ್ಯಕೃತಿ ಬಂದಾಗ ಕೊಡಬೇಕೆಂದು ನಿರ್ಧರಿಸಿದ್ದರು. 'ಫಣಿಯಮ್ಮ' ಮನೋಹರ ಗ್ರಂಥ ಮಾಲೆಗೆ ಯೋಗ್ಯ ಕೃತಿ ಎನ್ನಿಸಿದ್ದರಿಂದ ಜಿ. ಬಿ. ಜೋಶಿಯವರಿಗೆ ಅದನ್ನು ಎಂದಿ ನಂತೆಯೇ ಅಭಿಮಾನದಿಂದ ಸ್ವೀಕರಿಸಿ ಪ್ರಕಟಿಸಿದ್ದಾರೆ.

ಈ ಕಾದಂಬರಿ ಪ್ರೇಮಾಕಾರಂತರ ನಿರ್ದೇಶನದಲ್ಲಿ ಚಲನಚಿತ್ರವಾಗಿ ಅಂತರರಾಷ್ಟ್ರೀಯ ಪ್ರಶಸ್ತಿಯನ್ನು ಗಳಿಸಿದೆ. ಇಂದಿರಾ ಅವರು ಚಿತ್ರೀಕರಣದ ಪ್ರತಿ ಯೊಂದು ಹಂತದಲ್ಲೂ ಮಾರ್ಗದರ್ಶನ ಮಾಡಿದ್ದಾರೆ.*

ಕಥಾನಾಯಕಿ ಫಣಿಯಮ್ಮ ಇಂದಿರಾ ಅವರ ಅಜ್ಜನ ತಂಗಿ, ಕಾದಂಬರಿ ನೂರೈವತ್ತು ವರ್ಷಗಳ ಹಿಂದಿನ ಸಾಮಾಜಿಕ ಜೀವನವನ್ನು ದಟ್ಟವಾಗಿ ಚಿತ್ರಿಸುತ್ತದೆ. ಕೂಪಮಂಡೂಕವೃತ್ತಿ, ಅಂಧಶ್ರದ್ಧೆ, ಅವೈಚಾರಿಕತೆ, ಮಂಡಿವಂತಿಕೆ, ತುಂಬಿದ್ದ ಸಮಾಜದ ಕಪಿಮುಷ್ಟಿಯಲ್ಲಿ ಸಿಲುಕಿದ ಫಣಿಯಮ್ಮನ ಜೀವನ ಸಂಪ್ರದಾಯ, ವಿರೋಧ ಕಾದಂಬರಿಯ ವಸ್ತು.

ಅಜ್ಞಾನದ ಅಂಧಕಾರ ಕವಿಯ ಕ್ರೂರ ಸಮಾಜದಲ್ಲಿ ಬಾಳಿದ ಫಣಿಯಮ್ಮ ಒಂಭತ್ತು ವರ್ಷಕ್ಕೆ ವಿಧವೆಯಾಗಿ ನೂರಾಹನ್ನೆರಡು ವರ್ಷಗಳವರೆಗೆ, ಜೀವನದ ಸುಖ-ದುಃಖಗಳಿಂದ ವಂಚಿತಳಾಗಿ ತಪಸ್ವಿನಿಯಂತೆ ಸುದೀರ್ಘ ಜೀವನವನ್ನು ಕಳೆಯು ತ್ತಾಳೆ.

ನೂರಾ ಹನ್ನೆರಡು ವರ್ಷಗಳ ದೀರ್ಘ ಜೀವನವನ್ನು ನಿಷ್ಕಲಂಕ ರೀತಿಯಿಂದ ಬಾಳಿ ಬದುಕಿದ ಫಣಿಯಮ್ಮನನ್ನು ಇಂದಿರಾ ಅವರು ಕಣ್ಣಾರೆ ಕಂಡಿದ್ದಾರೆ. ಲೇಖಕಿಯ ತಾಯಿಗೂ ಫಣಿಯಮ್ಮನಿಗೂ ಇದ್ದ ಆತ್ಮೀಯತೆಯಿಂದಾಗಿ ಫಣಿಯಮ್ಮನ ಜೀವಿತದಲ್ಲಿ ನಡೆದ ಕೆಲ ರಹಸ್ಯ ಘಟನೆಗಳೂ ಇಲ್ಲಿ ಬೆಳಕಿಗೆ ಬಂದಿವೆ.

"ಕಾದಂಬರಿ ಎಂದಾಕ್ಷಣ ಇವೆಲ್ಲವೂ ಸ್ವಕಪೋಲ ಕಲ್ಪಿತವೂ ಅಲ್ಲ, ನಡೆದದ್ದೂ ಅಲ್ಲ ಅರ್ಧ ಹಾಗೆ, ಅರ್ಧ ಹೀಗೆ, ಕಥಾನಾಯಕಿ ನನ್ನ ಅಜ್ಜನವರ ತಂಗಿ ನಡೆದ ಕೆಲ

---

* ವಿ. ಸೂ. : ಈ ಕಾದಂಬರಿ ಕರ್ನಾಟಕ ವಿಶ್ವವಿದ್ಯಾಲಯದ ಬಿ.ಎ. ಮೊದಲನೆಯ ವರ್ಷಕ್ಕೆ 1984-85-86-87-88 ಈ ವರ್ಷಗಳವರೆಗೆ ಪಠ್ಯಪುಸ್ತಕವಾಗಿ ಆಯ್ಕೆಯಾಗಿದೆ. ಕಾದಂಬರಿ ಮಲೆಯಾಳಿ ಭಾಷೆಗೂ ಅನುವಾದವಾಗಿದೆ. ಡಿ. ಸಿ. ಬುಕ್ಸ್, ಕೊಟ್ಟಾಯಂ ಇವರು ಪ್ರಕಟಿಸಿದ್ದಾರೆ.

ಘಟನೆಗಳೂ ಸುಳ್ಳಲ್ಲ. ಅಂದರೂ ಕೆಲ ಕೆಲವು ಪಾತ್ರಗಳನ್ನೂ ಸಂಗತಿಗಳನ್ನೂ ಅನಿವಾರ್ಯವಾಗಿ ಬದಲಿಸಬೇಕಾಯಿತು." ಎಂದು ಲೇಖಕಿ (ನನ್ನಿಂಗಿತದಲ್ಲಿ) ಹೇಳಿ ಕೊಂಡಿರುವುದರಿಂದ ಕಾದಂಬರಿಯು ಆಶಯಗಳಿಗೆ ತಾವು ಎಷ್ಟರಮಟ್ಟಿಗೆ ಜವಾಬ್ದಾರ ರೆಂಬುದನ್ನು ಮೊದಲೇ ಪ್ರಸ್ತುತ ಪಡಿಸಿದ್ದಾರೆ. ಕಥಾನಾಯಕಿ ಫಣಿಯಮ್ಮನನ್ನು ಶೋಧಿಸುವಲ್ಲಿ ಬಹು ಮಟ್ಟಿಗೆ ಯಶಸ್ವಿಯಾಗಿದ್ದಾರೆ.

೧೮೪೦ರಲ್ಲಿ ಹೆಬ್ಬಲಿಗೆಯ ಅಂಚೆಮನೆತನದ ಅವಿಭಕ್ತ ಕುಟುಂಬದಲ್ಲಿ ಜನಿಸಿದ 'ಫಣಿಯಮ್ಮ', ಸಂಪ್ರದಾಯಗಳ ನೂರೆಂಟು ಗದ್ದಲದಲ್ಲಿ ಸದ್ದಿಲ್ಲದೆ ಪ್ರಶಾಂತವಾಗಿ 'ಮಲ್ಲಿಗೆ ಬಳ್ಳಿಯಂತೆ' ಬೆಳೆದಳು.

ಅಂದಿನ ಸಂಪ್ರದಾಯಕ್ಕೆ ತಕ್ಕಂತೆ ಫಣಿಯಮ್ಮನ ಮದುವೆ ಒಂಬತ್ತನೆಯ ವರ್ಷಕ್ಕೆ ಮೇಳಿಗೆಯ ನೀಲಕಂಠ ಭಟ್ಟರ ಹದಿನೈದು ವರ್ಷದ ನಂಜುಂಡನೊಡನೆ ನಡೆಯುತ್ತದೆ. ಮದುವೆಯಾದ ಎರಡು ತಿಂಗಳಲ್ಲಿಯೇ ತೀರ್ಥಹಳ್ಳಿಯ ಎಳ್ಳಮ ವಾಸ್ಯೆ ಜಾತ್ರೆಯೆಂದು ಫಣಿಯಮ್ಮನ ಜಡೆ 'ಜಡೆಬಂಗಾರ' ಸಹಿತ ಕತ್ತರಿಸಲ್ಪಡುತ್ತದೆ. ಇದು ಅವಳ ಜೀವನದಲ್ಲಿ ಕಾಣಿಸಿಕೊಂಡ ಅಪಶಕುನ ಮೊದಲ ದುರಂತ ಛಾಯೆ.

ಈ ಘಟನೆ ನಡೆದ ಒಂದು ತಿಂಗಳಲ್ಲಿಯೇ ಫಣಿಯಮ್ಮನ ಗಂಡ ನಂಜುಂಡ ಹಾವು ಕಡಿದು ಸಾಯುತ್ತಾನೆ. ಮದುವೆ ಗಂಡ ಎಂಬುದರ ಅರ್ಥವನ್ನೂ ತಿಳಿಯದ ಫಣಿಯಮ್ಮನ ಬದುಕುವ ಹಕ್ಕನ್ನು ಸಮಾಜ ಕಸಿದುಕೊಳ್ಳುತ್ತದೆ. ಅವಳು ಜೀವಿತದ ಕೊನೆಯುಸಿರು ಇರುವವರೆಗೂ ಪರರಿಗಾಗಿಯೇ ತನ್ನ ಬದುಕನ್ನು ದುಡಿಸಿಕೊಳ್ಳುತ್ತಾಳೆ.

ಫಣಿಯಮ್ಮನ ಸುದೀರ್ಘ ಆಯುಷ್ಯದಲ್ಲಿ ಅವಳನ್ನು ಲೌಕಿಕದಿಂದ ಮೇಲೆತ್ತುವ ಹಲವಾರು ಘಟನೆಗಳು ನಡೆಯುತ್ತವೆ. ಸಂಕಟದ, ಸಂತಸದ, ಕ್ರೂರ, ಭೀಭತ್ಸಕರ, ಭೀಕರ, ಅಸಹ್ಯಕರ, ಕರುಣಾಜನಕ ಘಟನೆಗಳಿಂದಾಗಿ, ಸಂತೋಷ, ದುಃಖ–ದುಗುಡ ಗಳ ಸೀಮಾರೇಖೆಯನ್ನು ದಾಟಿ ನಿಲ್ಲುತ್ತಾಳೆ. ಫಣಿಯಮ್ಮನೇ ಹೇಳಿದಂತೆ 'ಕಸುವಿನ ಎಲೆಯ ಮೇಲಿನ ನೀರಿನ ಹಾಗೆ' ಇದ್ದು ಸರ್ವರಿಗೂ ಬೇಕಾಗಿ ಪವಿತ್ರ ಆತ್ಮಳಾಗಿ ಬದುಕಿ ಬಾಳಿದವಳು. ಅವಳ ಅಂತ್ಯವೂ ಅಷ್ಟೇ ಸರಳ ಜಾತಿ–ಮತಗಳ ಭೇದವಿಲ್ಲದೆ ಊರವರೆಲ್ಲ ಸೇರಿ ಅವಳ ಗುಣಗಾನ ಮಾಡುತ್ತ ರುದ್ರಭೂಮಿಗೆ ಬರುತ್ತಾರೆ.

ಯಾರಿಗೂ ಸಮಸ್ಯೆಯಾಗದಂತೆ ತನ್ನ ಬದುಕನ್ನು ರೂಢಿಸಿಕೊಂಡ ಫಣಿಯಮ್ಮ-ಪೆಟ್ಟಿನ ಮೇಲೆ ಪೆಟ್ಟು ತಿಂದು ಪೂಜನೀಯ ವಿಗ್ರಹದಂತೆ ಪೂಜನೀಯಳಾಗುತ್ತಾಳೆ.

ತನ್ನ ಪಾಲಿಗೆ ಬಂದ ಅನುಭವಗಳ ಮೂಲಕ ಸಂಸ್ಕರಣಗೊಂಡು ತನ್ನ ಸುತ್ತಲಿ ನವರ ಮೇಲೆ ಸತ್‌ಪ್ರಭಾವ ಬೀರುವ ಶಕ್ತಿಯಾಗಿ ಒಂದು ಹಿರಿಯ ಚೇತನವಾಗಿ ನಮ್ಮೆ ದುರು ಬೆಳೆದು ನಿಲ್ಲುತ್ತಾಳೆ.

ಹತ್ತಾರು ಪಾತ್ರಗಳು ಹಲವಾರು ಸಂಗತಿಗಳು ಒಂದರೊಡನೊಂದು ಹೆಣೆದು ಕೊಂಡು ಕಾದಂಬರಿಗೆ ಸಂಕೀರ್ಣ ಸ್ವರೂಪವನ್ನು ಒದಗಿಸಿ ಶ್ರೀಮಂತವಾಗಿಸುತ್ತವೆ. ಫಣಿಯಮ್ಮನ ವ್ಯಕ್ತಿತ್ವ ಓದುಗರ ಮೇಲೆ ಗಾಢ ಪರಿಣಾಮ ಬೀರಿ ಮನದಲ್ಲಿ ಅಚ್ಚಳಿ ಯದೆ ನಿಲ್ಲುವಂತೆ ರೂಪಿಸುತ್ತವೆ.

ಸಮಾಜದ ಕುರುಡು ಕಟ್ಟಳೆ, ಅಂಧಶ್ರದ್ಧೆ ಇವು ಬಾಲ ವಿಧವೆಯರ ಬದುಕಿನಲ್ಲಿ ತುಂಬಬಹುದಾದ ನಷ್ಟವನ್ನು ದುರಂತವನ್ನು ಲೇಖಕಿ ಫಣಿಯಮ್ಮನ ಮೂಲಕ ತೋರಿಸಿದ್ದಾರೆ.

ಒಟ್ಟಾರೆ ಲೇಖಕಿ ಇಲ್ಲಿ ನಮ್ಮ ಸಮಾಜ ವ್ಯವಸ್ಥೆಯಲ್ಲಿ ಸ್ತ್ರೀ ಸಮುದಾಯದ ಶೋಷಣೆ ಹಾಗೂ ಬಿಡುಗಡೆಯ ಬಗೆಗೆ ತೀವ್ರವಾಗಿ ಸ್ಪಂದಿಸಿದ್ದಾರೆ.

ಕಾದಂಬರಿಯ ಆರಂಭದಿಂದಲೇ ಲೇಖಕಿ ಸ್ತ್ರೀ ಶೋಷಣೆಯಲ್ಲಿ ಪುರುಷವರ್ಗ ಅದರಲ್ಲೂ ಬ್ರಾಹ್ಮಣ ಸಮಾಜದ ಮಠ–ಮಾನ್ಯಗಳ ಕೈವಾಡ ಹಾಗೂ ತೆಗೆದುಕೊಳ್ಳುವ ಅಮಾನುಷ ತೀರ್ಮಾನಗಳನ್ನು ವ್ಯಂಗ್ಯವಾಗಿ ನಿರ್ದಾಕ್ಷಿಣ್ಯವಾಗಿ ಟೀಕಿಸುತ್ತಾ, ಗೇಲಿ ಮಾಡುತ್ತಾರೆ.

"ಆಗಿನ ಕಾಲದಲ್ಲಿ ಬಲವಾಗಿ ಬೇರೂರಿದ್ದೆಂದರೆ ವಿಪರೀತ ಮಡಿವಂತಿಕೆ ಅದರ ಜೊತೆಗೆ ಸಂಪ್ರದಾಯಂಶಾಸ್ತ್ರ ಮತ್ತೂ ಹೆಚ್ಚಿನದೆಂದರೆ ಕೂಪ ಮಂಡೂಕತ್ವ ಆಗ ಶ್ರೀ ಶ್ರೀ ಶ್ರೀ ನೃಸಿಂಹ ಭಾರತಿ ಸ್ವಾಮಿಗಳು ಪಟ್ಟಕ್ಕೆ ಬಂದ ಕಾಲ. ಮಾತು ಎತ್ತಿದರೆ ಬಹಿಷ್ಕಾರ. ಯಾವಳಾದರೂ ಬಾಲ ವಿಧವೆ ಬಸಿರಾದಳೆಂದರೆ ಮುಗಿಯಿತು. ಆಕೆ ಯನ್ನು ಬಸಿರು ಮಾಡಿದವರೇ ಶೃಂಗೇರಿಗೆ ಹೋಗಿ ಆಕೆಯ ಬಗ್ಗೆ ಸ್ವಾಮಿಗಳಲ್ಲಿ ದೂರು ಹೇಳಿ ಆಕೆಯನ್ನು ಜಾತಿಯಿಂದ ಹೊರಗೆ ಹಾಕಿಸಿ ಬರುತ್ತಿದ್ದರು. ಸ್ವಾಮಿ ಗಳಾದರೂ ಹೇಳಿಕೇಳಿ ಸನ್ಯಾಸಿ ಸದಾ ಈ ವ್ಯಭಿಚಾರದ ಪುರಾಣ ಕೇಳುವುದು ತಮ್ಮ ಬ್ರಹ್ಮಚರ್ಯಕ್ಕೆ ಕುಂದು ಎಂದು ತಿಳಿಯರು. ಅವರು ಕೇಳಿ ಕೈ ಸನ್ನೆಯಿಂದಲೇ ಅದನ್ನು ಮಠದ ಧರ್ಮಾಧಿಕಾರಿಗಳಿಗೆ ವಹಿಸಿಬಿಡುತ್ತಿದ್ದರು. ಕೇಳಬೇಕೆ? ತೋಳನಿಗೆ ಕುರಿ ಕಾಯಲು ಬಿಟ್ಟಂತೆ"[1] ಇತ್ಯಾದಿ.

ಈ ರೀತಿ ಮಠಮಾನ್ಯಗಳ ವ್ಯಭಿಚಾರವನ್ನು ಲೇಖಕಿ ನಿರ್ದಾಕ್ಷಿಣ್ಯವಾಗಿ ತರಾಟೆಗೆ ತೆಗೆದುಕೊಳ್ಳುತ್ತಾರೆ.

ಫಣಿಯಮ್ಮ ವಿಧವೆಯಾದಾಗ ಇನ್ನೂ ಮೈನೆರೆದಿರಲಿಲ್ಲ. ಇಂತಹ ಸಮಸ್ಯೆ ಅದುವರೆಗೆ ಆ ಪ್ರಾಂತ್ಯದಲ್ಲಿ ಉದ್ಭವಿಸಿರಲಿಲ್ಲ.

1. ಎಂ. ಕೆ. ಇಂದಿರಾ 'ಫಣಿಯಮ್ಮ' ಪುಟ–10.

ಸ್ವತಃ ತಮ್ಮಯ್ಯನವರೇ ಹೋಗಿ ಪಾರುಪತ್ತೆದಾರರ ಮುಖಾಂತರ ಏನು ಮಾಡಬೇಕೆಂದು ಕೇಳಿಕೊಂಡರು. ಉತ್ತರ ಬರಲು ಎರಡುದಿನ ಕಾಯಬೇಕಾಯಿತು. ಕಡೆಗೊಮ್ಮೆ ಕಡ್ಡಾಯದ ಉತ್ತರ ಆಜ್ಞೆ ಬಂದಿತು.

"ಹುಡುಗಿ ಇನ್ನೂ ಕನ್ಯೆಯಾಗಿರುವುದರಿಂದ ಹನ್ನೊಂದನೇ ದಿನ ಸೌಮಾಂಗಲ್ಯದ ಚಿಹ್ನೆಗಳನ್ನೆಲ್ಲ ತೆಗೆದು ತಲೆಗೂದಲನ್ನು ಮಾತ್ರ ಹಾಗೇ ಬಿಟ್ಟಿರಬೇಕು. ಮತ್ತು ಬಿಳೀ ಸೀರೆ ಉಡಿಸಿರಬೇಕು. ಮೈನೆರೆಯುವವರೆಗೆ ಯಾರಿಗೂ ಮುಖ ತೋರಿಸಕೂಡದು. ಯಾವ ಮಡಿ ಕೆಲಸವನ್ನೂ ಮಾಡಿಸಕೂಡದು. ಮೈ ನೆರೆದ ನಾಲ್ಕನೇ ದಿನವೇ ಶಿರೋಮುಂಡನ ಮಾಡಿಸಿ ಆಜನ್ಮ ಮಡಿ ಹಿಡಿಸಬೇಕು. ಇದರಲ್ಲಿ ಏನಾದರೂ ಹೆಚ್ಚು ಕಡಿಮೆ ಯಾದರೆ ಇಡೀ ಮನೆತನಕ್ಕೆ ಬಹಿಷ್ಕಾರ."[1]

ಮಾನವ ಧರ್ಮಕ್ಕೇ ವಿರೋಧವಾದ ಇಂತಹ ನಿರ್ದಯೆಯ ಅಮಾನುಷ ನಿರ್ಣಯಗಳ ಬಗೆಗೆ ಲೇಖಕಿ ಕ್ರೋಧಗೊಳ್ಳುವದು ಸ್ವಾಭಾವಿಕ.

"ಸೂತಕದ ಮನೆಯಿಂದ ಬಂದವರಾದ ತಮ್ಮಯ್ಯನವರಿಗೆ ಮಠದೊಳಗೆ ಹೋಗಲು ಪರವಾನಿಗೆ ದೊರೆಯಲಿಲ್ಲ. ಮನವಿಯನ್ನು ಪಾರುಪತ್ತೇದಾರರಿಗೆ ಕಳಿಸಿಲ್ಲ. ಮೂರು ದಿನಗಳ ನಂತರ ಈ ಉತ್ತರ ಬಂದಿತು. ಅದು ನೃಸಿಂಹಭಾರತಿ ಸ್ವಾಮಿಗಳ ತನಕ ಮುಟ್ಟಿತೆಂಬುವದರಲ್ಲಿ ಯಾವ ಸಂದೇಹವೂ ಇಲ್ಲ. ಸ್ವಾಮಿಗಳ ಸರ್ವಸಚಿವರು ಪಾರುಪತ್ತೇಗಾರರು. ಅವರ ಆಜ್ಞೆಯೆಂದರೆ ಸ್ವಾಮಿಗಳದೇ ಎಂದು ಎಲ್ಲರೂ ನಂಬಬೇಕು. ಅರಮನೆ–ಗುರುಮನೆಗಳ ವ್ಯವಹಾರಗಳೇ ಹಾಗೆ. ಸೊಂಟದೊಳಗಿನ ಹತ್ತಾರು ಬೆಳ್ಳಿ ರೂಪಾಯಿಗಳು ಸರ್ವಸಚಿವರ ಸೊಂಟಕ್ಕೆ ಸೇರುವ ವರೆಗೂ ಉತ್ತರ ಬರುವದಿಲ್ಲ."[2] ಮಠದಂತಹ ಧಾರ್ಮಿಕ ಸಂಸ್ಥೆಗಳಲ್ಲಿ ನಡೆಯುವ ಭ್ರಷ್ಟಾಚಾರ ಅವ್ಯವಹಾರಗಳನ್ನು ಲೇಖಕಿ ಬಯಲಿಗೆಳೆಯುತ್ತಾರೆ.

ಫಣಿಯಮ್ಮನ ಗಂಡ ಸತ್ತ ಹನ್ನೊಂದನೆ ದಿನವೇ ಊರ ಹಿರಿಯರು, ಮುದುಕಿಯರು ಸಂಪ್ರದಾಯದ ಅಂಧಕಾರದಲ್ಲಿ ಮುಳುಗಿ ನಿಷ್ಕರುಣೆಯಿಂದ ಒಂಭತ್ತು ವರ್ಷದ ಅಬೋಧ ಬಾಲಿಕೆ ಫಣಿಯಮ್ಮನ ಬಳೆ ಒಡೆದರು.

ಅಂಧಶ್ರದ್ಧೆ ತುಂಬಿದ್ದ ಸಮಾಜದ ಸಂಪ್ರದಾಯಕ್ಕೆ ನಿಷ್ಠರಾದ ಸ್ತ್ರೀ ಸಮಾಜದಿಂದಲೇ ಮತ್ತೊಬ್ಬ ಸ್ತ್ರೀಯ ಶೋಷಣೆ ನಡೆದು ಬರುವ ಅಜ್ಞಾನಕ್ಕೆ ಲೇಖಕಿ ಮರುಗಿದ್ದಾರೆ. ನಾಲ್ಕು ವರ್ಷಗಳನ್ನು ಕತ್ತಲೆ ಕೋಣೆಯಲ್ಲಿ ಕಳೆದ ಫಣಿಯಮ್ಮ ಮೈನೆರೆತ ನಾಲ್ಕನೆಯ ದಿನವೇ ಮನೆಯ ಹೆಂಗಸರೆಲ್ಲ ಬೆಳಗಿನ ಜಾವಕ್ಕೇ ನಾಪಿತನನ್ನು ಹಲಸಿನ ಮರದ ಕೆಳಗೆ ಕೂರಿಸಿ ಸ್ವಲ್ಪ ಉದ್ದವಾಗಿ ಬೆಳೆದಿದ್ದ ಫಣಿಯಮ್ಮನ

---

1. ಎಂ. ಕೆ. ಇಂದಿರಾ 'ಫಣಿಯಮ್ಮ' ಪುಟ–42.
2. ಅದೇ ; ಪುಟ–43,

ಕೂದಲನ್ನು ದಯೆ, ದಾಕ್ಷಿಣ್ಯವಿಲ್ಲದೆ ಕರಕರಗೆ ಕತ್ತರಿಸಿ ನುಣ್ಣಗೆ ಬೋಳಿಸಿದರು. ಫಣಿಯಮ್ಮ ಕುರಿಯಂತೆ ತಲೆ ಬಗ್ಗಿಸಿ ಕುಳಿತು ಅಳುತ್ತಿದ್ದಳು.

ಫಣಿಯಮ್ಮ ಅಂದಿನ ಕ್ರೂರ ಸಮಾಜದ ಕುರುಡು ಕಟ್ಟಳೆಗಳಿಗೆ ಬಲಿಯಾದ ಸನ್ನಿವೇಶ ಅತ್ಯಂತ ದಾರುಣವಾದದ್ದು.

ಗುಡ್ಡೇಪಾಲು ಸೀತಾರಾಮನ ಮಗಳು ದಾಕ್ಷಾಯಿಣಿಯ ಗಂಡ ಸತ್ತಾಗ ಅವಳಿಗೆ ಕೇವಲ ಹದಿನಾರು ವರ್ಷ. ಫಣಿಯಮ್ಮನ ಕಾಲಕ್ಕೂ ದಾಕ್ಷಾಯಿಣಿ ಕಾಲಕ್ಕೂ ಸುಮಾರು ಎಪ್ಪತ್ತು-ಎಂಬತ್ತು ವರ್ಷಗಳ ಅಂತರವಿದ್ದರೂ ಸಮಾಜ ಇನ್ನೂ ಅದೇ ರೀತಿಯ ಜಿಡ್ಡುಗಟ್ಟಿದ ಸಂಪ್ರದಾಯಗಳನ್ನು ನಡೆಸಿಕೊಂಡು ಬರುವದರಲ್ಲಿ ಮಗ್ನವಾಗಿರುತ್ತದೆ.

ಅವಳು ವಿಧವೆಯಾದ ಹತ್ತನೆಯದಿನ ಊರ ಹಿರಿಯರು, ಮನೆಯ ಮುದುಕ ಮುದುಕಿಯರೆಲ್ಲ ಮಡಿ ಹಿಡಿಸಬೇಕೆಂದು ಹಟ ಹಿಡಿದರು. ಸೀತಾರಾಮ ಫಣಿಯಮ್ಮನನ್ನು ಮುಂದಿಟ್ಟುಕೊಂಡು ಕುಳಿತ. ದಾಕ್ಷಾಯಣಿ—

"ನಾನು ಈಗ್ಲೆ ಮಡಿಯಾಗುವದಿಲ್ಲ. ರಾತ್ರಿ ಹೊತ್ತು ಉಪವಾಸ ಮಾಡೋಕೆ ನನ್ಕೈಲಿ ಕೂಡಾಲ್ಲ ನಾಒಲ್ಲೆ"[1] ಎಂದು ಹಟ ಹಿಡಿದರೂ ದೂತರಾಗಿ ಬಂದ ಭಟ್ಟಯ್ಯನವರು—

'ಸೀತಾರಾಮ, ಯಂತದಯ್ಯ ನಿನ್ನ ಮಗಳ ಹಟ. ಅದೇ ಮನೀಗೆ ಹಿರೀ ಸೊಸೆ. ಪ್ರಾಯದ ಹುಡುಗಿ ಊರೋರ ಕಣ್ಣು ತಾಕೂ ಹಂಗದೆ. ಮಡಿ ಮಾಡ್ಸಿ ಒಂದ್ವರ್ಷನಾರ ಮನೆ ಒಳಗೆ ಮುಚ್ಚಿಟ್ರೆ ಮುಂದೆ ಹ್ಯಂಗಾರ ಸುಧಾರಿಸಬೋದು. ನಿಮ್ಮಜ್ಜಿ ಫಣಿಯಮ್ಮ ನೋಡಿ, ನಾನು ಹುಟ್ಟೋಕೆ ಮುಂಚಿಂದ ಅವರು ಹೀಂಗೆ ಅದಾರೆ. ಕೈಎತ್ತಿ ಮುಗಿಬೇಕು ಒಂಭತ್ತು ವರ್ಷಕ್ಕೆ ಗಂಡನ್ನ ಕಳಕೊಂಡು ಹದಿಮೂರು ವರ್ಷಕ್ಕೇ ಮಡಿ ಹಿಡಿದು ಅಷ್ಟು ವರ್ಷದಿಂದ ಶಬರಿ ಹಂಗಾದರೆ'[2] ಎಂದು ಫಣಿಯಮ್ಮನನ್ನು ಸಮರ್ಥಿಸುತ್ತ ಇದ್ದ ವ್ಯವಸ್ಥೆಯನ್ನೇ ವೈಭವೀಕರಿಸಿ ಮುಂದುವರೆಸುವ ಪುರೋಹಿತ ಶಾಹಿಯ ಕುತಂತ್ರವನ್ನು ಪ್ರತಿನಿಧಿಸುತ್ತಾನೆ.

ಫಣಿಯಮ್ಮ ಕಾಲಕ್ಕೆ ತಕ್ಕಂತೆ ಬದಲಾಗುವ, ಮಾನವೀಯ ಮೌಲ್ಯಗಳಿಗೆ ತುಡಿಯುವ ಚೈತನ್ಯ ಹೀಗಿರುವದರಿಂದಲೇ ಭಟ್ಟಯ್ಯನವರ ಅಮಾನುಷ ಪ್ರವೃತ್ತಿಗೆ ಜಿಗುಪ್ಸೆಗೊಂಡು ಕಣ್ಣೊರೆಸಿಕೊಳ್ಳುತ್ತ—

"ಅಯ್ಯೋ ಭಟ್ಟೈನೋರೆ, ನಮ್ಮ ಕಾಲದ ಮಾತ ಯಾತಕ್ಕ ಹೇಳ್ತೀರಿ ? ನಂಗಂತೂ ಗಂಡನ ಮುಖ ನೋಡಿದ್ದೂ ನೆನಪಿಲ್ಲ. ನಾ ಹುಟ್ಟಿದ್ದೇ ಹೀಗನೋ

1. ಅದೇ ; ಪುಟ-88.
2. ಅದೇ ; ಪುಟ-88.

ಅನ್ನಿಸಿಬಿಟ್ಟಿದೆ. ಆಗ್ಯೂ, ಈಗ್ಯೂ ಕಾಲ ಯಾಪಾಟಿ ಬದಲಾಗ್ಯದೆ ಚೆಂದಾಗಿ ಉಂಡು–ತಿಂದು ಮಾಡೋ ಹುಡುಗಿ ಇದು"[1] ಎಂದು ಹೇಳಿದರೂ ಕೇಳದೆ ಭಟ್ಟಯ್ಯ ಹಾಗೂ ಊರು ಹಿರಿಯರಿಂದ ದಾಕ್ಷಾಯಿಣಿಗೆ ಸ್ವರ್ಗ–ನರಕ, ಪಾಪ–ಪುಣ್ಯ ಇತ್ಯಾದಿ ನೂರಾರು ಬೋಧನೆಗಳಾದವು. ಹುಚ್ಚಿಯಂತಾಗಿದ್ದ ದಾಕ್ಷಾಯಿಣಿ ಕತ್ತಲೆ ಕೋಣೆಯಲ್ಲಿ ನಿಂತು 'ಅಬ್ಬರ'ಹಾಕಿ ವಿಧಿಯಿಲ್ಲದೆ ವ್ಯವಸ್ಥೆಗೆ 'ತಲೆ ಕೊಟ್ಟುದರ' ಅರ್ಥವಾದದ್ದು ಎರಡು ವರ್ಷಗಳ ನಂತರ. ಮೈದುನನಿಂದಲೇ ಬಸಿರಾದಾಗ, ಮನೆಯವರೆಲ್ಲರೂ ಅವಳನ್ನು ತೌರಿಗೆ ಅಟ್ಟಬೇಕೆಂದು ಪ್ರಯತ್ನಪಟ್ಟರು. ಯಾರಿಗೂ ಜಗ್ಗದೇ 'ದಾಕ್ಷಾಯಿಣಿ' ಅತ್ತೆಯನ್ನೇ ಪ್ರತಿಭಟಿಸಿ.

"ನಿಮ್ಮ ಮಗನೇ ಬಸಿರು ತುಂಬಿದವನು. ನಾ ಯಾಕೆ ತೌರಿಗೆ ಹೋಗ್ಲಿ. ನೀವೇ ಬಾಣಂತನ ಮಾಡಿ. ಆ ಮಗನ ಬದ್ಲಿಗೆ ಈ ಮಗ ಇಷ್ಟೇ ಸೈಯಲ್ಲ."[2] ಎಂದು ಅದುವರೆಗಿನ ದಿಗ್ಬಂಧನಗಳಿಂದ ಹೊರಬಂದು ಪ್ರತೀಕಾರ ತೋರಿಸುತ್ತಾಳೆ. ಮತ್ತೇ ಊರ ಮುದುಕರೆಲ್ಲ ಪಂಚೆಕಟ್ಟಿ ಬಹಿಷ್ಕಾರದ ಹೆದರಿಕೆಯನ್ನು ತೋರಿಸಿದರು. ಆದರೂ ದಾಕ್ಷಾಯಣಿ, ನಡೀರಿ ನಾನು ಬರ್ತೀನಿ ಸ್ವಾಮಿಗಳ ಎದುರಿಗೆ ನೀವು ಮಾಡಿದ್ದೆಲ್ಲ ಹೇಳ್ತನಿ. ಅದು ಹ್ಯಾಂಗ ಬಹಿಷ್ಕಾರ ಹಾಕುತ್ತಾರೊ ನಾ ನೋಡ್ತನಿ, ಕಡಿಗೂ ಬಹಿಷ್ಕಾರ ಹಾಕಿದ್ರೆ ನಿಮ್ಮನ್ನೆಲ್ಲ ಮನಿಯಿಂದ ಅಟ್ಟಿ ನಾನೊಬ್ಳೇ ಇರ್ತನಿ ಏನ್ಮಾಡ್ತೀರಿ ? ಇನ್ನೂ ನೀವು ಮಿತಿ ಮೀರಿದ್ರೆ ಹೊಲೇರ್ನೆಲ್ಲ ಮನೆ ಒಳಗೆ ಕರ ಕಂಡು ಬರ್ತನಿ ಗೊತ್ತಾ?[3] ಎಂದು ಅಬ್ಬರ ಹಾಕಿ ವ್ಯವಸ್ಥೆಯನ್ನೇ ಪ್ರತಿಭಟಿಸಿ ನಿಂತ ದಾಕ್ಷಾಯಣಿ ಇಂದಿರಾ ಅವರ ಬಂಡಾಯ ಪ್ರವೃತ್ತಿಯ ಸಂಕೇತ. ಇಂದು ಸ್ತ್ರೀ ಸಮುದಾಯಕ್ಕೆ ಅತ್ಯಗತ್ಯವಾಗಿಬೇಕಾದ ಬಂಡಾಯದ ಪ್ರತೀಕ.

ದಾಕ್ಷಾಯಿಣಿಯ ಕಥೆ ಮಲೆನಾಡಿನ ಹಳ್ಳಿಗಳಿಗೆಲ್ಲ ಹರಡಿ ಅದೇ ಭಟ್ಟಯ್ಯನವರಿಂದಲೇ ತೀರ್ಥಹಳ್ಳಿಯಲ್ಲಿ ನಿಷ್ಠಾವಂತರಾಗಿದ್ದರೂ ಖಂಡಿತವಾದಿಗಳಾಗಿದ್ದ ಕಿಟ್ಟಪ್ಪನವರಿಗೂ ತಲುಪಿದಾಗ, ಅವರು 'ಕತ್ತೆಯೊದ್ದಂತೆ' ನಿರ್ಧಾರದ ಉತ್ತರ ಕೊಟ್ಟರು–

"ಹುಡುಗಿ ಛಲೋ ಕೆಲಸ ಮಾಡಿದ್ಲು. ಮೈದ್ನನ್ನೇ ಮಾಡ್ಕಂಡಳಲ್ಲ ಪುಣ್ಯ. ಇವರೇನು ದನಗಳೋ ಕತ್ತೆಗಳೋ ಅಲ್ಲಾ ಹದ್ನಾರು ವರ್ಷ ಪ್ರಾಯದ ಹೆಣ್ಣು ವಯಸ್ಸಾಗಿಲ್ಲ. ಮಕ್ಳಾಗಿಲ್ಲ, ಮರಿಯಾಗಿಲ್ಲ, ಸಂಸಾರದ ಕಷ್ಟಸುಖ ಕಂಡದ್ದಲ್ಲ. ಇನ್ನೂ ಆಟಾ ಆಡೂ ಹುಡುಗೀಗೆ ತಲೇ ಬೋಳ್ಸೋಕೆ ಏನು ಅವಸ್ರಾಗಿತ್ತು. ಇವರಿಗೆ ಈಗಿನ ಕಾಲದಾಗೆ ಮುದುಕೀರೆ ಮಡಿಯಾಗುಲ್ಲ ಸಮಾ ಮಾಡ್ತು ಹುಡುಗಿ. ಮಗು

1. ಅದೇ ; ಪುಟ–88
2. ಅದೇ ; ಪುಟ–83
3. ಅದೇ ; ಪುಟ

ಅವರ ಮನೇದೇ ಸೈಯಲ್ಲ"[1] ಎಂದು ದಾಕ್ಷಾಯಿಣಿಯನ್ನು ಸಮರ್ಥಿಸಿದಾಗ, ಭಟ್ಟಯ್ಯನಿಗೆ ಮುಖ ಭಂಗವಾದರೂ ಸೋಲದೆ ತನ್ನ ವಾದವೇ ಗೆಲ್ಲುವುದೆಂಬ ಹಟದಿಂದ—

"ಎಲ್ಲ ಸಮ ಕಿಟ್ಟಪ್ನೋರೆ. ನಿಮ್ಮ ಫಣಿಯಮ್ಮನಿಗೆ ಹದಿಮೂರು ವರ್ಷಕ್ಕೇ ಮಡಿ ಮಾಡಿಸಿದರಲ್ಲ ಯಾಕೇಂತಿನಿ" ಎಂದಾಗ ಕಿಟ್ಟಪ್ಪನವರು

"ಓಹೋ! ಬುಡ ಕೆದಕ್ತೀರಾ ನೀವು. ಹೇಳ್ತನಿ ಕೇಳಿ, ಫಣಿಗೂ ನಂಗೂ ಮೂರೇ ತಿಂಗ್ಳು ವ್ಯತ್ಯಾಸ! ಇಪ್ಪಾಗಿ ಅವಳಿದ್ದದ್ದು ಹೆಬ್ಬಲಿಗೇಲಿ. ನಾ ಇದ್ದದ್ದು ಹೀರೆ ತ್ವಾಟದಾಗ. ಎಂಬತ್ತು ವರ್ಷದ ಹಿಂದಿನ ಸುದ್ದಿ ಕೇಳ್ತಿರಲ್ಲ. ಈಗ್ಲೇ ಹೀಗಿರಬೇಕಾದರೆ ಇನ್ನು ಆಗಿನ ಕಾಲ ಹ್ಯಾಗಿತ್ತೋ ನೀವೇ ಯೋಚನೆ ಮಾಡಿ, ಇನ್ನು ಮುಂದೆ ಇನ್ನೂ ಹ್ಯಾಂಗಾಗುತ್ತ ನೀವೆ ನೋಡೋರಂತ್ಕೆ"[2]

ಈ ರೀತಿ ಮಾನವೀಯತೆಯಿಂದ ವ್ಯವಸ್ಥೆಯೊಡನೆ ಸೆಣಸಿದ ಬಂಡಾಯವನ್ನು ಎತ್ತಿ ಹಿಡಿಯುವದು ಲೇಖಕಿಯ ಧೋರಣೆ ಮಹತ್ವ ಪಡೆದಿದೆ.

ದಾಕ್ಷಾಯಿಣಿ ಬಸಿರಾದಾಗ, ಸಮಾಜವನ್ನು ಪ್ರತಿಭಟಿಸಿದಾಗ ಫಣಿಯಮ್ಮ ತೋರುವ ಪ್ರತಿಕ್ರಿಯೆ ಅತ್ಯಂತ ಅರ್ಥಪೂರ್ಣವಾದದ್ದು. ಅವಳ ತುಟಿ ಎರಡು ಮಾಡದ ಗಾಢ 'ಮೌನ' ಓದುಗರನ್ನು ದಟ್ಟವಾಗಿ ಆವರಿಸುತ್ತದೆ.

ಹಸಲರ ಬೈರಸ ಮಗಳು 'ಸಿಂಕಿ' ಹಾಗೂ ತಿಪ್ಪಾ ಜೋಯಿಸರ ಸೊಸೆ 'ಪುಟ್ಟಿ' ಇವರ ಹೆರಿಗೆಯ ಪ್ರಸಂಗಗಳಲ್ಲಿ ಫಣಿಯಮ್ಮ ತೋರಿದ ಮಾನವೀಯ ಅಂತಃಕರಣ, ಮಾನವ ಸಂಸ್ಕೃತಿಗೆ ನೀಡಿದ ಒಂದು ಮಹಾನ್ ಕೊಡುಗೆ.

ಹದಿನೈದು ವರ್ಷದ ಸಿಂಕಿ ಹೆರಿಗೆಯ ನೋವಿನಿಂದ ನರಳುತ್ತಿದ್ದಾಗ ನಟ್ಟ ನಡು ರಾತ್ರಿ ಮನೆಯವರೆಲ್ಲರ ಆಕ್ಷೇಪಕ್ಕೆ ಕಿವಿಗೊಡದೇ ಬೈರನ ಹಿಂದೆ ಹೊರಟುಬಿಡುವ ಸನ್ನಿವೇಶ; ಅತ್ಯಂತ ಮಾನವೀಯತೆಯಿಂದ ಕೂಡಿದ್ದು. ಸಮಾಜ ನಿರ್ಮಿತ ಜಾತಿ ಮತಗಳ ಕಟ್ಟನ್ನೂ ಲೆಕ್ಕಿಸದೆ ಎರಡು ಜೀವವನ್ನುಳಿಸಲು ಫಣಿಯಮ್ಮ ಹೊರಟು ಬಿಡುತ್ತಾಳೆ.

ಕಾದಂಬರಿಯುದ್ದಕೂ ಲೇಖಕಿ ಪುರುಷ–ಪ್ರಧಾನ ಸಮಾಜದಲ್ಲಿ ಪುರಾಣ ಪುಣ್ಯ ಕತೆಗಳಲ್ಲಿ ಸ್ತ್ರೀಯರನ್ನು ಕುರಿತು ಪಕ್ಷಪಾತ, ಅಸಂಗತೆಗಳು, ಅವೈಚಾರಿಕತೆ ಅವೈಜ್ಞಾನಿಕ ಸಂಗತಿಗಳನ್ನು ಫಣಿಯಮ್ಮನ ಮೂಲಕ ಪ್ರಶ್ನಿಸುತ್ತಲೇ ಹೋಗಿದ್ದಾರೆ. ರಾಮಾಯಣ, ಮಹಾಭಾರತಗಳ ಕಾಲದಲ್ಲಿ ಸ್ತ್ರೀಯರನ್ನು ನಡೆಸಿಕೊಂಡ ರೀತಿಯನ್ನು ಪ್ರಶ್ನಿಸುತ್ತ—

1. ಅದೇ ; ಪುಟ–94.
2. ಅದೇ ; ಪುಟ–94.

"ಶ್ರೀರಾಮನ ಕೈಹಿಡಿದ ಮಹಾತಾಯಿ ಸೀತಾದೇವಿ ಯಂತ ಸುಖಪಟ್ಟೆ! ಉದ್ದಕ್ಕೂ ಅಕೀಗೆ ಕಷ್ಟವೇ ಪ್ರಪಂಚಕೆಲ್ಲ ಬೇಕಾದ ದೇವರು ಆ ರಾಮಚಂದ್ರು. ಅಕೀನ ಬೆಂಕೀಗೆ ಹಾರಿಸ್ದ. ಬಸರಿ ಹೆಂಗ್ಸಿನ ಕಾಡಿಗೆ ಕಳಿಸ್ದ. ದ್ರೌಪದಿ ತುಸ ಕಷ್ಟ ಪಟ್ಟಳೇ? ಹೆತ್ತಯ್ಯ ಅರ್ಜುನನನ್ನು ಮಚತ್ತಯ್ಯ ದೇವೇಂದ್ರು ಮತ್ತೇ ಸೋದರ ಮಾವ ಕೃಷ್ಣನಿರುತಿರಲು ಸತ್ತನೇಕಯ್ಯ ಅಭಿಮನ್ಯು? ಅಂತ ಕೃಷ್ಣಕಾರಣ ಕತೆ ಓದಿ ದಾಗ ಕತೆ ಹೇಳ್ತಿದ್ದ. ಶ್ರೀಕೃಷ್ಣನ್ನ ಬಗಲಾಗೆ ಇಟ್ಕಂಡು ಪಾಂಡವರು ಪಡಬಾರದ ಪಾಡ ಪಟ್ರು. ಏಂಥ ಪುರಾಣವೋ ಪುಣ್ಯಕತೆಯೋ ಅಂತೂ ಮಾಡೂಕೆ ಕಸುಬಿಲ್ಲ ದೋರು ಬರೆದಿಟ್ರು ನಮ್ಮಂಥ ಸೋಮಾರಿಗಳು ಅದನ್ನ ನಂಬೂದು ಇಷ್ಟೇ ಸೈ"[1] ಎನ್ನುವ ಫಣಿಯಮ್ಮ ರಾಮ-ನಾಮ ಜಪ ಮಾಡುವುದು ಭಕ್ತಿಯಿಂದಲ್ಲ. ಅದು ಅವಳಿಗೊಂದು ಹವ್ಯಾಸ.

ಅದೇ ರೀತಿ ಪತಿವ್ರತೆ ಎಂಬುದರ ಅರ್ಥವನ್ನು ಒರೆಗೆ ಹಚ್ಚುವ ಫಣಿಯಮ್ಮ ಪುರಾಣ ಪುಣ್ಯ ಕತೆಗಳಲ್ಲಿ ಸ್ತ್ರೀ ಶೋಷಣೆಯನ್ನು ಸಮರ್ಥಿಸುವ ಅವೈಜ್ಞಾನಿಕ ವಿಚಾರ ಗಳನ್ನು ಖಂಡಿಸುತ್ತಾಳೆ.

"ರೇಣುಕ ನದಿಯ ನೀರಿನಲ್ಲಿ ಎದುರು ತೀರದಲ್ಲಿ ಕುಳಿತ ಸಂನ್ಯಾಸಿಯ ಮುಖ ನೋಡಿದ ಮಾತ್ರದಿಂದ ಅವಳ ಮರಳ ಕುಂಭ ಒಡೆದು ಹೋಯಿತಂತೆ, ಅದಕ್ಕೇ ಅವಳ ಶಿರಚ್ಛೇದ. ತನ್ನ ಗಂಡನ ರೂಪದಲ್ಲಿ ಬಂದ ದೇವೇಂದ್ರನನ್ನು ಕೂಡಿದ ಮಾತ್ರದಿಂದ ಅವಳು ಎಷ್ಟೋ ವರ್ಷ ಕಲ್ಲಾಗಿ ಬಿದ್ದಳು. ಗಂಡಸರು ಸಾವಿರ ಹೆಂಗಸರನ್ನು ಕೂಡಿದರೂ ಅವರು ಅಗ್ನಿಯಂತೆ ಶುದ್ಧರಂತೆ"[2] ಇತ್ಯಾದಿ.

ಕಚ್ಚಿ ಹರುಕ ಸುಬ್ಬನ ಡಾಂಭಿಕತೆಯನ್ನು ವ್ಯಂಗ್ಯವಾಗಿ ಟೀಕಿಸುತ್ತ—"ಏನಿದು? ವಿಚಿತ್ರ ಸಂಪ್ರದಾಯ ನಮ್ಮದು? ಗಂಡಸು ಹೊಲತಿಯನ್ನು ಮುಟ್ಟಿ ಬಂದರೂ ಸ್ನಾನ ಮಾಡಿ, ಜನಿವಾರ ಬದಲಾಯಿಸಿದರೆ ಶುದ್ಧ. ಹೆಂಗಸರು ಅಪ್ಪಿ-ತಪ್ಪಿ ಪುರುಷನನ್ನು ನೋಡಿದರೆ ಆಕೆ ಕುಂಟೆ" ಇತ್ಯಾದಿ ಧರ್ಮ ಶಾಸ್ತ್ರಗಳು ಪುರುಷನಿಗೆ ಸ್ತ್ರೀಯನ್ನು ಶೋಷಿಸಲು ಹೇಗೆ 'ಅನುಕೂಲಶಾಸ್ತ್ರ'ಗಳಾಗಿವೆ ಎಂಬುದನ್ನು ಟೀಕಿಸಿ, ಪುರುಷನ ಟೊಳ್ಳು ಪ್ರತಿಷ್ಠೆಯನ್ನು ಜಾಲಾಡಿದ್ದಾರೆ.

ಫಣಿಯಮ್ಮನ ಹುಡುಕಾಟ ನಿರಂತರವಾದುದು. ಮಡಿ-ಮೈಲಿಗೆಗಳಂತಹ ಕುರುಡು ಆಚರಣೆಗಳ ಬಗೆಗೆ ಅವಳ ವಿಚಾರಗಳು—"ನಮ್ಮ ಗರ್ಭದೊಳಗಿನದೇ ರಕ್ತ ಹೊರಗೆ ಬಂದಾಗ ಅದು ಹೆಂಗಸಿನ ಪಾಲಿಗೆ ಮೈಲಿಗೆ, ಮೂರು ದಿನ ಹೊರಗೆ ಕೂತಿರಬೇಕು. ನಾಲ್ಕನೆಯ ದಿನಕ್ಕೆ ಅದು ಶುದ್ಧಿ. ನಂತರ ಮಡಿ. ತಮ್ಮ ಕುಟುಂಬ

---

1. ಅದೇ ; ಪುಟ-97.
2. ಅದೇ ; ಪುಟ-78.

ದಲ್ಲೇ ಅನೇಕ ಹೆಂಗಸರಿಗೆ ಮುಟ್ಟು ನೀರು ಆದ ಮೇಲೂ ನಾಲ್ಕಾರು ದಿನ ಸೆರಗಿನ ಮೈಲಿಗೆ ಇರುತ್ತಿತ್ತು. ಆದರೂ ಅದು ಮಡಿ ತಿಂಗಳು ತಿಂಗಳೂ ಹಜಾಮನನ್ನು ಮುಟ್ಟಿಸಿಕೊಳ್ಳುವ ಮಡಿ ಹೆಂಗಸರು ಮಡಿ. ಯಾವ ಗಂಡಸಿನ ಸಂಪರ್ಕವೂ ಇಲ್ಲದ ಸಕೇಶಿಯರು ಯಾವ ಮಡಿ ಕೆಲಸಕ್ಕೂ ಬಾರದಷ್ಟು ಮೈಲಿಗೆ"[1] ಎಂಬಿತ್ಯಾದಿ ನೂರಾರು ವಿರೋಧಾಭಾಸಗಳ ಟೊಳ್ಳುತನವನ್ನು ಲೇಖಕಿ ಪ್ರಶ್ನಿಸುತ್ತ ತಮ್ಮ ವೈಚಾರಿಕತೆಯನ್ನು ಸ್ಪಷ್ಟಪಡಿಸಿದ್ದಾರೆ.

'ಸಿಂಕಿ'ಯ ಹೆರಿಗೆಯ ಪ್ರಸಂಗದಲ್ಲಿ ಫಣಿಯಮ್ಮ ನಡುರಾತ್ರಿ ಹಲಸರ ಕೇರಿಗೆ ಹೊರಟಾಗ ಮನೆಯ ಜನರೆಲ್ಲ ಆಕ್ಷೇಪಿಸಿದರೆ ಅಲ್ಲಿದ್ದವರೆಲ್ಲ ಭಯಾಶ್ಚರ್ಯಗಳಿಂದ ನಿಬ್ಬೆರಗಾಗುತ್ತಾರೆ. ಫಣಿಯಮ್ಮನ ಸೋದರ ಸೊಸೆ ಅತ್ತೆ ಹಸಲರ ಮನೆಗೆ ಹೋಗುವುದನ್ನು ಸಹಿಸದೆ—'ಸಾಯೂ ಕಡೇ ಕಾಲಕ್ಕೆ ಮಾಳಕ್ಕ ಮೀನು ತಿಂದು ಸತ್ಲು ಅನ್ನೂ ಹಂಗೆ ಅತ್ತೀಗೆ ಯಾಕೆ ಇಂಥ ಬುದ್ಧಿ ಬಂತೂಂತನಿ. ಯಾತ್ರೆ-ತೀರ್ಥ ಋಷಿ ಪಂಚಮಿ ಸತೀಗಾ ಮಾಡ್ಕಂಡು ಈಗ ಆ ಹೊಲಗೇರಿಗೆ ಹೋಗೂದಾ ?' ಕರೆದೋರು ಸಮ, ಹೋದೋರು ಸಮ, ಇನ್ನು ನಾಳೆ ಪಂಚಗವ್ಯದ ಪ್ರಾಯಶ್ಚಿತ ಆಗ್ಬೇಕು ಇವರಿಗೆ"[2] ಎಂದು ಮೂದಲಿಸುತ್ತಾಳೆ. ಇದು ಒಟ್ಟಾರೆ ನಮ್ಮ ಜಾತಿ ವ್ಯವಸ್ಥೆ. ಈ ಮೂಲಕ ತೋರುವ ಸಾಮೂಹಿಕವಾದ ಪ್ರತಿಕ್ರಿಯೆಯಾಗುತ್ತದೆ.

ಅದೇ ರೀತಿ ಹೆರಿಗೆಗೆ ಬಂದ ದಾದಿ ಕ್ರಿಶ್ಚಿಯನ್‌ರ ಪ್ರೇಮಬಾಯಿ ಬ್ರಾಹ್ಮಣ ಸಮಾಜದ ವಿಧವೆಯರ ಶಿರೋಮುಂಡನದ ಬಗೆಗೆ ಆಕ್ಷೇಪಿಸಿ, ಮರುವಿವಾಹದ ಬಗೆಗೆ ಮಾತನಾಡಿದರೆ ಅದನ್ನು ಸಹಿಸದ 'ಬಂಗಾರಮ್ಮ', ಕ್ರೈಸ್ತರನ್ನು ಹೀಯಾಳಿಸುತ್ತಾಳೆ.

"ಮನುಷ್ಯರಿಗೇಂತ ಭಗವಂತ ಯಾಪಾಟಿ ದವಸ ಧಾನ್ಯ ಹಣ್ಣು–ಹಂಪ್ಲ ತರಕಾರಿ ಎಲ್ಲ ಬೆಳೆಯೂದಿಲ್ವ? ಇಷ್ಟಾದರೂ ನಿಮ್ಮ ಜನ ಪಾಪ, ಒಬ್ಬರ ಸುದ್ದಿಗೂ ಬರದ ಸಾಧು ಪ್ರಾಣಿ. ಕುರಿ–ಕೋಳಿನೆಲ್ಲ ಯಲ್ಲಾನೂವೆ ಕೊಯ್ದು ತಿಂತೀರಲ್ಲ"[3] ಎಂದು ಪ್ರಶ್ನಿಸುವ ಬಂಗಾರಮ್ಮ ಮತಾಂಧತೆಯನ್ನು ಪ್ರತಿನಿಧಿಸುತ್ತಾಳೆ.

ಮೇಲ್ವರ್ಗದವರು ದಲಿತರನ್ನು ಶೋಷಣೆಗೀಡುಮಾಡುವ ರೀತಿಯೂ ಅತ್ಯಂತ ಸೂಕ್ಷ್ಮವಾದದ್ದು. ನಾಲ್ಕು ದಿನ ಮಳೆಯಲ್ಲಿ ದೋಣಿ ತಿರುಗಿಸಿದ ಅಂಬಿಗರು ತಮ್ಮ ದುಡಿಮೆಗೆ ಬರಬೇಕಾದ ಎರಡಾಣೆಗೆ ಕಾದು ಕುಳಿತುಕೊಳ್ಳಬೇಕಾಗುತ್ತದೆ.

"ಅಯ್ಯ, ನಮ್ಮ ರೊಕ್ಕ ಎಳ್ಡಾಣೆ ಕೊಡಿ. ಮತ್ತೆ ಇವರನ್ನು ಹೊಳೆ ದಾಟಿಸ್ಬಕಲ್ಲ, ಸೆಳೆವು ಮಳೆ ನೋಡಿ ಯಾಪಾಟಿ ಅದೆ" ಎಂದು ಗೋಗರೆದರೂ

1. ಅದೇ ; ಪುಟ–80.
2. ಅದೇ ; ಪುಟ–71.
3. ಅದೇ ; ಪುಟ–105.

ಪುಟ್ಟಿಯ ಮಾವ "ಹಡೆಬೆ ನನ್ಮಕ್ಳ; ಹೋಗ್ತಾ-ಬರ್ತಾ ಗೋಟಡಕೆ, ಯಲೆ ಹೊಗೆ ಸೊಪ್ಪು, ಕೇಳ್ತಿರಲ್ಲ ಅದೆಲ್ಲ ಯಂತದು ಪುಗಸಟ್ಟೆ ಬರತ್ತನ್ರು ಇರ್ಲಿ, ಇವತ್ತ ಇವರನ್ನು ಹೊಳೆದಾಟ್ಸಿ ಬನ್ನಿ. ನಾಮಕರಣ ದಿವ್ಸ ನಿಮಗೆ ಪಾಯ್ಸದ ಊಟ ಹಾಕಸ್ತಿನಿ"[1] ಎಂದು ಊಟದ ಆಸೆ ತೋರಿಸಿ ಜಾರಿಕೊಳ್ಳಲು ಪ್ರಯತ್ನಿಸಿದರೆ ಫಣಿಯಮ್ಮನಿಗೆ ಅವರ ಅಮಾನುಷ ವರ್ತನೆ ಕಂಡು ಜಿಗುಪ್ಸೆಯಾಯಿತು.

"ಲೇ ಸಂಕ, ಬುಡ್ನ ನಡೀರೋ ಲೇ ಪ್ರೇಮಬಾಯಿ ನೀನೂ ಹೊರಡು ಇನ್ನು ಹೊತ್ತಾಗುತ್ತೆ. ಮನೇಲಿ ನಾನು ಕೃಷ್ಣನ ಕೈಯಲ್ಲಿ ನಿಮಗೆಲ್ಲ ರೊಕ್ಕ ಕೊಡಸ್ತನಿ" ಎಂದರೆ ಶ್ಯಾನುಭೋಗ ಕಿಟ್ಟಪ್ಪನವರ ಹೆಸರು ಕೇಳಿದೊಡನೆ ಮನೆಯ ಯಜಮಾನನಿಗೆ ಗಾಬರಿಯಾಯ್ತು. ಮತ್ತೆ ಏನಾದರೂ ಕೆಲಸಕ್ಕೆ ಅವರಲ್ಲಿಗೆ ಹೋದರೆ ತನ್ನ ಜನ್ಮ ಜಾಲಾಡಿಯಾರು ಎಂದುಕೊಂಡು "ಛೆ ಊಟ ಫಣಿಯಮ್ಮ, ನಾ ಕೊಡ್ತನಿ ರೊಕ್ಕಾನ ಸುಮ್ಮಗೆ ಹಾಗಂದೆ"[2] ಎನ್ನುತ್ತ ವಿಧಿಯಿಲ್ಲದೆ ಪೆದಾರಿಯ ಬೀಗ ತೆಗೆದುಕೊಂಡು ಬಂದು ಅಂಬಿಗರಿಗೆ ಕರಾರುವಕ್ಕಾಗಿ...ಎರಡಾಣೆ ಕೊಟ್ಟು ಮತ್ತೆ ಅಡಿಗೆ ಮನೆ ಹೊಕ್ಕರು.

ಪುಟ್ಟಿಯ ಹೆರಿಗೆಗಾಗಿ ಮೂರು ದಿನದಿಂದ ಚಳಿಯಲ್ಲೇ ನಡುಗಿದರೂ ಪ್ರೇಮಾ ಬಾಯಿಗೆ 'ಒಂದ್ಪನಿ' ಕಾಫಿ ಕೊಡದೇ ಒದ್ದಾಡಿಸಿದ ಜೋಯಿಸರ ಮನೆಯವರು ದಲಿತರನ್ನು ಅವರ ದುಡಿಮೆಗೆ ತಕ್ಕ ಪ್ರತಿಫಲ ಕೊಡದೇ ಒದ್ದಾಡಿಸುವ ಅಧಿಕಾರಶಾಹಿಯ ಪ್ರತೀಕವಾಗಿದ್ದಾರೆ. ಅವರ ಒಳಗುದಿಯುನ್ನು ಇಂದಿರಾ ಬಹಳ ಸೂಕ್ಷ್ಮವಾಗಿ ಅರ್ಥೈಸಿಕೊಂಡಿದ್ದಾರೆ. ಮೇಲ್ವರ್ಗದವರು ದಲಿತರನ್ನು ಶೋಷಿಸುವ ರೀತಿಗೆ ಲೇಖಕಿ ಜಿಗುಪ್ಸೆ ಪಟ್ಟಿದ್ದಾರೆ.

'ಜಾತಕ-ಪಾತಕ'ಗಳ ಬಗೆಗೆ ಫಣಿಯಮ್ಮನ ಮೂಲಕ ಇಂದಿರಾ ಅವರು ವ್ಯಕ್ತ ಪಡಿಸುವ ವಿಚಾರಗಳು ಓದುಗರನ್ನು ಆಲೋಚನೆಗೊಳಪಡಿಸುತ್ತವೆ.

ಫಣಿಯಮ್ಮನ ತಾಯಿಗೆ ಹೆರಿಗೆ ನೋವು ಜೋರಾದಾಗ ಯಂಟಣ್ಣನವರು ಮಗು ಹುಟ್ಟುವ ಸಮಯವನ್ನು ಗಳಿಗೆ ಬಟ್ಟಲನ್ನಿಟ್ಟು ನೋಡುತ್ತ ಕುಳಿತಿದ್ದರು.

'ಯಂಟಣ್ಣಾ ಶಿರೋದಯ ಆತೂ' ಎಂದು ಕೂಗಿದರು. ಹೆರಿಗೆಗೆ ಕೂತಿದ್ದ ನಾಗಮ್ಮ, ವಯಸ್ಸಾದ ಯಂಟಣ್ಣನವರಿಗೆ ಕಿವಿಯೂ ಸ್ವಲ್ಪ ಮಂದವೇ ಹುಟ್ಟಿದ ಮಗು 'ಕಾವ್-ಕಾವ್-ಕಾವ್' ಎಂದು ಕಿರುಚಿದ ಕೂಡಲೇ ಯಂಟಣ್ಣ ತಟ್ಟನೆ ಕಣ್ಣರಳಿಸಿ ಗಳಿಗೆ ಬಟ್ಟಲು ನೋಡಿದರು. ಮುಳುಗಿ ಎಷ್ಟೊತ್ತಾಗಿತ್ತೋ? ಆದರೂ ಕೂಡಲೇ ಮಗು ಹುಟ್ಟಿದ ಸಮಯ ಬರೆದರು.

---

1. ಅದೇ ; ಪುಟ-102.
2. ಅದೇ ; ಪುಟ

'ತಿಪ್ಪೀ ಮಗು ಅಮೃತಗಳಿಗೇಲಿ ಹುಟ್ಟಿದೇ....ಎಂದು ತಂಗಿ ತಿಪ್ಪಮ್ಮನವರಿಗೆ ಕೂಗಿ ಹೇಳಿದರು.

ನಾಮಕರಣದ ದಿನ ಯಂಟಣ್ಣನೇ ಜಾತಕ ಬರೆದರು. ಹುಡುಗಿಗೆ ಪೂರ್ಣ ಯಸ್ಸು, ಅಖಂಡ ಸೌಭಾಗ್ಯವತಿ, ಶ್ರೀಮಂತ ಗಂಡನ ಕೈ ಹಿಡೀತಾಳೆ"[1] ಇತ್ಯಾದಿ. ಫಣಿಯಮ್ಮನ ಗಂಡ ಸತ್ತಾಗ ಜಾತಕದ ಅಖಂಡ ಸೌಭಾಗ್ಯ, ಹದಿನಾರು ಗುಣಗಳು, ಧೀರ್ಘ ಸೌಮಾಂಗಲ್ಯ, ಮಾಂಗಲ್ಯಕೂಟ, ಅಷ್ಟಪುತ್ರ ಸಂತಾನ ಎಲ್ಲಾ ನುಣ್ಣಗೆ ಅಳಿಸಿ ತೊಳೆದು ಈಗ ಅವಳು ಮೊದಲಿನ ಕನ್ಯಾಕುಮಾರಿಯೇ ಆಗಿದ್ದಳು.

ಅಜ್ಜ ಯೋಚಿಸಿದ್ದರು, "ನಾನು ಸಮನಾಗಿ ಜಾತಕ ನೋಡಿದ್ದೆ. ಹುಡುಗನ ಜಾತಕವನ್ನೇ ಬದಲಿಸಿದ್ದರೊ ಏನೋ ಯಾರಿಗೆ ಗೊತ್ತು ?"[2]

ಒಂದು ದಿನ ಫಣಿಯಮ್ಮನ ಚಿಕ್ಕ ಮಾವ ಹೆಬ್ಬಲಿಗೆಗೆ ಬಂದು ಜಗಳವಾಡಿ ಅಂಚೆ ಮನೆತನದವರು ಇಂಥ ಮೋಸ ಮಾಡುವರೆಂದು ಯಾರಿಗೆ ಗೊತ್ತಿತ್ತು ? ಇಲ್ಲ ದಿದ್ದರೆ ನಾವು ಈ ಸಂಬಂಧ ಮಾಡುತ್ತಲೇ ಇರಲಿಲ್ಲ. ಒಟ್ಟಾರೆ ಫಣಿಯಮ್ಮನ ಜಾತಕ ವಿಷಯ ಕಾದಂಬರಿಯಲ್ಲಿ ನಿಗೂಢವಾಗುತ್ತಲೇ ಹೋಗುತ್ತದೆ. ಸದಾನಂದ ಕೃತಿಯಲ್ಲಿ ಮಹಾದೇವ ಶಾಸ್ತ್ರಿಗಳು ಹೇಳಿದ ಜಾತಕದ ಭವಿಷ್ಯ ನಿಜವಾದರೆ ಈ ಕಾದಂಬರಿಯಲ್ಲಿ ಸುಳ್ಳಾಗುತ್ತದೆ.

ಫಣಿಯಮ್ಮ ತನ್ನ ಬದುಕಿನಲ್ಲಿ ಪರರಿಂದ ತೆಗೆದುಕೊಂಡದ್ದು ತೀರ ಕಡಿಮೆ. ಏನೂ ಇಲ್ಲವೆಂದರೂ ಸರಿಯೇ. ಆದರೆ ಪರರಿಗೆ ಅವಳು ತನ್ನ ಬದುಕಿನಿಂದ ಕೊಟ್ಟದ್ದು ಅಪಾರ.

"ಸಂಸಾರದಲ್ಲಿ ಸಾವಿರ ಒಡಕು ಇದ್ದರೂ ಪುಣ್ಯಕ್ಕೆ ಫಣಿಯಮ್ಮನ ಮೇಲೆ ಯಾರಿಗೂ ಯಾವ ವಿಷಯಕ್ಕೂ ಅಸಮಾಧಾನವಿರಲಿಲ್ಲ. ಕಾರಣ ಎಲ್ಲರ ಮರ್ಜಿ ಅನುಸರಿಸಿ ನಡೆಯುವ ಗುಣ ಒಂದು ಆಕೆಯದು. ಎಂತಹ ಕಹಿ ಪ್ರಸಂಗ ನಡೆದರೂ ಮಧ್ಯೆ ಬಾಯಿ ಹಾಕದೆ ತೆಪ್ಪಗಿರುವುದು ಒಬ್ಬರ ಮನಸ್ಸನ್ನು ನೋಯಿಸದ ಸಹನಾ ಮಯಮೃದು ಮಾತು. ಅಪ್ರಸಂಗಗಳನ್ನು ಕಂಡೂ ಕಾಣದಂತಿದ್ದು ಶಾಂತಂ ಪಾಪಂ ಎಂದು ಮೌನ ತಳೆಯುವಿಕೆ ಎಲ್ಲವನ್ನೂ ಪ್ರೀತಿಯಿಂದ ಅನುಕಂಪದಿಂದ ನೋಡುವುದು ಬೆಳಗಿನಿಂದ ಸಂಜೆಯವರೆಗೆ ಆ ಕೆಲಸ ಈ ಕೆಲಸ ಎಂಬ ತಾರತಮ್ಯವಿಲ್ಲದೇ ದುಡಿಯು ವುದು ಒಪ್ಪತ್ತೂಟ".[3] (ಎಪ್ಪತ್ತು ವರ್ಷಗಳ ನಂತರ ಒಪ್ಪತ್ತಿನ ಊಟವನ್ನೂ ನಿಲ್ಲಿಸುತ್ತಾಳೆ. ಆಕೆಯ ಜೀವನದಲ್ಲಿ ಬೇಕು ಎಂಬ ಮಾತೇ ಇಲ್ಲ.)

---

1. ಅದೇ ; ಪುಟ–12.
2. ಅದೇ ; ಪುಟ–42.
3. ಅದೇ ; ಪುಟ–55–56.

ಒಟ್ಟಿನಲ್ಲಿ ಅವಳು ನಿರ್ಲಿಪ್ತ ಸ್ವಭಾವದವಳು. ಫಣಿಯಮ್ಮ ತನ್ನ ಜೀವಿತದಲ್ಲಿ ನಡೆದ ನೂರಾರು ಘಟನೆಗಳಿಂದ ಹಂತ ಹಂತವಾಗಿ ಮೇಲೆರಿ ದೈವತ್ವಕ್ಕೇರಿ ನಿಲ್ಲುತ್ತಾಳೆ. ಮೂಢನಂಬಿಕೆ, ಕುರುಡು ಸಂಪ್ರದಾಯ, ಜಾತಿ-ಮತಗಳಲ್ಲಿ ತನ್ನ ನಂಬಿಕೆ ಕಳೆದುಕೊಳ್ಳುತ್ತಾಳೆ. ಗಟ್ಟಿಯಾದುದನ್ನು ಮಾತ್ರ ಸ್ವೀಕರಿಸುತ್ತಾಳೆ–ಫಣಿಯಮ್ಮ.

ಇಷ್ಟಾದರೂ ಲೇಖಕಿ ಕೆಲವು ಸಂದರ್ಭಗಳಲ್ಲಿ ಫಣಿಯಮ್ಮನ ನೈಜ ವ್ಯಕ್ತಿತ್ವವನ್ನು ಅವಳ ಅಂತರಂಗವನ್ನು ಮರೆಮಾಡಿಟಿದ್ದಾರೆಂದೆನಿಸುತ್ತದೆ.

ಅವಳ ತುಂಬ ತಾರುಣ್ಯದ ಇಪ್ಪತ್ತಮೂರನೆಯ ವಯಸ್ಸಿನಲ್ಲಿ 'ತುಂಗೆ ದನ ಗಬ್ಬಾಗವೇ ಇರುವುದಕ್ಕೆ ನಂಜೇಗೌಡನ ಹೋರಿ ಕೂಡಿಸಬೇಕೆಂದು ಮಾತಾಡಿಕೊಳ್ಳುತ್ತಿದ್ದುದನ್ನು ಕೇಳಿದರೂ ಅದರ ಬಗೆಗೆ ಹೆಚ್ಚು ಕುತೂಹಲ ತೋರದೆ ಸುಮ್ಮನಾಗುತ್ತಾಳೆ. ತನ್ನ ನಲವತ್ತನೆಯ ವಯಸ್ಸಿನಲ್ಲಿ ನಟ್ಟ ನಡುರಾತ್ರಿ ಗಂಡು–ಹೆಣ್ಣು ಜೋಡಿಯೊಂದು ಕೂಡಿದ್ದನ್ನು ಕಂಡಿದ್ದರೂ ಒಟ್ಟಾರೆ ಅವಳು ತನ್ನ ಇಡೀ ಆಯುಷ್ಯದಲ್ಲಿ ಒಂದು ಕ್ಷಣವಾದರೂ ಲೈಂಗಿಕವಾಗಿ ಆಸಕ್ತಿಯನ್ನು ಹೊಂದಲಿಲ್ಲ.

"ತಪಸ್ವಿನಿ ಋಷಿ ಎಂದೆಲ್ಲ ಗುಣವಾಚಕಗಳಿಗೆ ತಕ್ಕವರಾಗಿ ಬಾಳಿದ ಫಣಿಯಮ್ಮ ಅಂಥದ್ದೇ ಜನಗಳನ್ನು ಕಾಡಿದ ಹಾಗೂ ಷಂಡರ ಹೊರತಾಗಿ ಇನ್ನೆಲ್ಲರಿಗೂ ವಾಸ್ತವವಾದ ಲೈಂಗಿಕವಾಸನೆಯನ್ನು ಅನುಭವಿಸಿಯೇ ಇರಲಿಲ್ಲವೆಂಬುದು ಆಶ್ಚರ್ಯದ್ದಾಗುತ್ತದೆ...ಲೈಂಗಿಕ ಕೋಲಾಹಲಕ್ಕೆ ಒಂದುಗಳಿಗೆಯಾದರೂ ಥಕ್ಕಾಗಿ ಅಷ್ಟೇ ತ್ವರಿತಗತಿಯಲ್ಲಿ ಅದನ್ನು ಮೆಟ್ಟಿನಿಲ್ಲುವ ಸಾಮರ್ಥ್ಯದ ಫಣಿಯಮ್ಮ ನಿಜವಾಗಬಹುದಾದಷ್ಟು ಈ ಫಣಿಯಮ್ಮ ಆಗಲಾರಳು"[1] ಎಂಬುದು ಸರಿಯಾದದ್ದೇ.

ಕಥಾನಾಯಕಿಗೂ ಲೇಖಕಿಗೂ ಇರುವ ನಿಕಟ ಸಂಬಂಧ, ಹಾಗೂ ಧನ್ಯತಾಭಾವದಿಂದಾಗಿ ಲೇಖಕಿ ಒಮ್ಮೊಮ್ಮೆ ಭಾವನಾಶೀಲರಾಗಿ ಫಣಿಯಮ್ಮನಿಂದಲೇ ಅವಳ ವ್ರತ–ನೇಮಗಳ ಬಗೆಗೆ ವಿವರಿಸುತ್ತ—

"ಮೂರ್ ದಿನ ಉಪಾಸ ಮಾಡಿದ್ರೂ ಹೋಗುಲ್ಲ ಈ ಜೀವ. ಒಂದಪ ಗ್ರಹಣ ಮಾರನೇ ದಿನ ಏಕಾದಶಿ ಬಂತು ಮೂರು ದಿನ ಒಂದು ಬಾಳೇ ಹಣ್ಣನ್ನು ಸತಿಗಾ ಬಾಯಿಗೆ ಹಾಕಲಿಲ್ಲ" ಎಂದು ಹೇಳಿಸುತ್ತಾರೆ. ಗ್ರಹಣದ ಮರುದಿನ ಏಕಾದಶಿ ಬರಲು ಸಾಧ್ಯವಿಲ್ಲ. ಅದೇ ರೀತಿ ಫಣಿಯಮ್ಮನ ಮರಣ ವೈಕುಂಠ ಏಕಾದಶಿ ಎನ್ನುತ್ತಾರೆ. ಅದು ವೈಕುಂಠ ಚತುರ್ದಶಿ ಇರಬಹುದು.

---

1. ಶ್ರೀ ಶ್ರೀ ಕೃಷ್ಣ ಚೆನ್ನಂಗೋಡ್ (ಸಂ.) 'ಸ್ವರ್ಣ' ಶ್ರೀ ಎ. ಗ. ನಾಯಕ್ ಅವರ ಲೇಖನ 'ಫಣಿಯಂಮ್ಮ' ಪುಟ–26.

"ಕಾದಂಬರಿಕಾರ್ತಿ ಮೊದಲು ಈ ಕೃತಿಯನ್ನು 'ಕೂಪ' ಎಂದು ಕರೆದುದು ಫಣಿಯಮ್ಮ ಏಕಾಕಿ ಜೀವನವನ್ನು ಅಪ್ಪಿಕೊಂಡದ್ದನ್ನು ಧ್ವನಿಸುತ್ತದೆ"[1] ಜೊತೆಗೆ ಅಂದಿನ ಸಾಮಾಜಿಕ ಸ್ಥಿತಿಯನ್ನು ಸೂಚಿಸುತ್ತದೆ.

ಫಣಿಯಮ್ಮ ನೂರಾಹನ್ನೆರಡು ವರ್ಷದ ಸುದೀರ್ಘ ಜೀವನವನ್ನು ಸ್ವಾಗತಿಸುವ ರೀತಿ ಬದುಕನ್ನು ತಿಳಿಯಬೇಕೆಂಬ ಹಂಬಲ, ಜೀವನಶ್ರದ್ಧೆ ವಿಸ್ಮಯವನ್ನುಂಟು ಮಾಡುತ್ತದೆ.

"ಅವಳ ಲವಲವಿಕೆ ಆತ್ಮೀಯವಾಗುವ ಭಾವ ಈ ಎಲ್ಲದರ ಬಂಧ ಯಾವುದಿರ ಬಹುದೆಂದು ನಮ್ಮನ್ನು ಆಲೋಚನೆಗೆ ತೊಡಗಿಸುತ್ತದೆ".[2]

ಸಮಾಜದ ರೀತಿ-ನೀತಿಗಳನ್ನು ಪ್ರಶ್ನಿಸುವ ಫಣಿಯಮ್ಮ ಪ್ರತಿಯೊಂದು ಸಂದರ್ಭ ದಲ್ಲಿಯೂ ಆಂತರಿಕ ತುಮುಲಕ್ಕೀಡಾಗಿಯೇ ಕೊನೆಯ ನಿರ್ಧಾರಕ್ಕೆ ಬರುತ್ತಾಳೆ. ಆ ರೀತಿಯ ತುಮುಲದಿಂದ ಗಟ್ಟಿಗೊಂಡ ಕ್ರಾಂತಿ ಅರ್ಥಪೂರ್ಣವಾಗಿ ಉಳಿಯುತ್ತದೆ.

ಸಿಂಕಿಯ ಹೆರಿಗೆಯನ್ನು ಮಾಡಿದ ಫಣಿಯಮ್ಮನ ಮನಸ್ಸು ಎರಡುದಿನ ಸ್ಥಿಮಿತವನ್ನು ಕಳೆದುಕೊಂಡಿತ್ತು. ಜಪಕ್ಕೆ ಕುಳಿತಾಗ ತಟ್ಟನೆ ತಾನು ಜಪಮಣಿ ಜರುಗಿಸುತ್ತಿರುವ ಬೆರಳುಗಳು ಸಿಂಕಿಯ ಗರ್ಭ ಪ್ರವೇಶಿಸಿದ್ದವು.

"ಇದು ಮೈಲಿಗೆಯಲ್ಲವೇ ? ಪಂಚಗವ್ಯ ತೆಗೆದುಕೊಂಡ ಮಾತ್ರಕ್ಕೆ ನಾನು ಶುದ್ಧಿ ಯಾದೆನೇ ಎಂದು ಆತಂಕ ಪಟ್ಟಿತು. ಮತ್ತೆರಡು ದಿನದಲ್ಲಿ ಮೂಢ ತತ್ವಕ್ಕೆ ಅಂಟಿ ಕೊಂಡ ಮನಸ್ಸು ತನಗೆ ತಾನೇ ಸಮಾಧಾನ ಹೇಳಿಕೊಂಡಿತು."

"ಒಂದು ಹೆರಿಗೆ ಮಾಡಿದರೆ ಒಂದು ಸಾರಿ ಕಾಶೀಯಾತ್ರೆ ಮಾಡಿದ ಪುಣ್ಯ ಯಾರಾದರೇನು ಜೀವ ಅನ್ನೋದು ದೊಡ್ಡದಲ್ಲವೇ"[3] ಎಂಬ ಸಮಾಧಾನ ತಾಳುತ್ತಾಳೆ.

ಪ್ರತಿಯೊಂದು ಸಂಗತಿಯೂ ವೈಚಾರಿಕತೆ ಒರೆಗಲ್ಲಿನ ಮೇಲೆ ನಿಂತು, ಅವಳ ಜೀವನಾನುಭವದ ಮೂಸೆಯಲ್ಲಿ ಹಾಯ್ದು ಬರುತ್ತದೆ. ಹೀಗಿರುವುದರಿಂದಲೇ ಫಣಿಯಮ್ಮ ಸರ್ವರಿಗೂ ಮಾನ್ಯಳಾಗಿ, ಸಾರ್ವಜನಿಕ ವ್ಯಕ್ತಿಯಾಗಿ ಉದಾರತೆಯಿಂದ ಮನುಕುಲಕ್ಕೇ ಅಂತಃಕರಣದಿಂದ ನೀಡುವ ವ್ಯಾಖ್ಯಾನ ಸತ್ವಪೂರ್ಣವೂ ಶಕ್ತಿಪೂರ್ಣವೂ ಆಗಿರುತ್ತದೆ.

---

1. ಡಾ॥ ಹಾ. ಮಾ. ನಾ. ಸಿ. ಪಿ. ಕೆ. ವೆಂಕಟಾಚಲ ಶಾಸ್ತ್ರಿ (ಸಂ.) 'ಸ್ವಸ್ತಿ' ತ. ಸು. ಶಾಮರಾಯರ ಅಭಿನಂದನ ಗ್ರಂಥ 'ವಿಜಯಾ' ಅವರ ಲೇಖನ–ಪುಟ–86.
2. ಅದೇ ;
3. ಫಣಿಯಮ್ಮ – ಪುಟ–76.

"ಮಲೆನಾಡಿನ ಒಂದು ವರ್ಗದ ಜೀವಂತ ಚಿತ್ರಣವನ್ನು ಆ ವರ್ಗದ ಭಾಷೆಯ ಕಸುಬನ್ನು ಅಲ್ಲಲ್ಲಿ ಹಸಿಹಸಿಯಾಗಿಯೇ ಒಳಗೊಂಡಿದ್ದು, ನಮ್ಮ ವ್ಯವಸ್ಥೆಯ ವೈಪರೀತ್ಯಗಳಿಗೆ ಮೂಲಭೂತ ಪ್ರಶ್ನೆಗಳನ್ನಿಡುತ್ತ ಅನುಭವಗಳ ನೆಲೆಯಲ್ಲಿ ಅಂಥ ಹುಸಿ ಗೋಡೆಗಳನ್ನೊಡೆಯುವ ದಿಟ್ಟ ಪ್ರಯತ್ನವನ್ನಿಲ್ಲಿ ಕಾದಂಬರಿಕಾರ್ತಿ ನಡೆಸಿದ್ದಾರೆ."[1]

ಕಾದಂಬರಿಯಲ್ಲಿ ಕೊನೆ ಕೊನೆಗೆ ಫಣಿಯಮ್ಮನ ಅಂತರ್ಯ ತಾನಾಗಿ ಹೊರ ಬಂದಿರುವುದು ಗಮನಾರ್ಹ.

ಗಂಡನನ್ನು ಬಿಟ್ಟು ಬಂದ 'ಸುಬ್ಬಿ'ಯನ್ನು ಅವಳ ತಾಯಿ ಆಕ್ಷೇಪಿಸಿದಾಗ ಫಣಿಯಮ್ಮ ಸಮಾಧಾನದಿಂದ 'ಯಾಕೆ ಚಿಕ್ಕಮ್ಮ, ಅದನ್ನು ಬೈತಿ ? ಮದ್ಲೇ ನೊಂದದೆ. ಹೆಣ್ಣು, ನಂಗೆ ಗಂಡ ಇಲ್ಲ, ಅದರ ಪಾಲಿಗೆ ಇದ್ದೂ ಇಲ್ಲ'[2] ಎನ್ನುತ್ತಾಳೆ.

ಮತ್ತೊಮ್ಮೆ ಬೆಳಗಿನಿಂದ ಅಡಿಗೆ ಕೆಲಸ ಮುಗಿಸಿ ಬಾಯಿಗೆ ತುತ್ತು ತೆಗೆದು ಕೊಳ್ಳುವಷ್ಟರಲ್ಲಿ ಮಗುವೊಂದು ಅವಳನ್ನು 'ಮುಟ್ಟಿ'ದ ಕಾರಣ ಮಗುವಿನ ತಾಯಿ ಮಗುವನ್ನು ಉಸಿರು ಗಟ್ಟುವಂತೆ ಹೊಡೆಯುತ್ತಾಳೆ. ಈ ಕಾರಣಕ್ಕಾಗಿ ಫಣಿಯಮ್ಮ ತನ್ನ ಒಪ್ಪತ್ತಿನ ಊಟವನ್ನು ನಿಲ್ಲಿಸಿಬಿಡುತ್ತಾಳೆ. ಅವಳು ಉಪವಾಸ ಮಾಡುವುದೂ ಸಹ ತನ್ನ ದೇಹದಂಡನೆಗಾಗಿಯೇ, ಅವಳೇ ಹೇಳುವಂತೆ—

"ಇನ್ ಈ ಜನ್ಮದಾಗೆ ನಾ ಮುಸುರೆ ಬಾಯಿಗೆ ಹಾಕಲ್ಲ, ನಾ ಎಷ್ಟು ದಿನ ಇದ್ರೂ ಇಷ್ಟೇ ಸೈಯಲ್ಲ. ಚಟ್ಟ ಕಟ್ಟೋಕು ಬರದು, ಬುಟ್ಟಿ ಹೆಣೆಯೋಕು ಬರದು ಅಂಥ ಗೆದ್ಲ ತಿಂದ ಗಳು ನಾನು. ಯಾತಕ್ಕೆ ಪ್ರಯೋಜನ ಹೇಳು ? ಆದರೆ ನಾನಾಗೆ ಪ್ರಾಣ ಕಳಕೊಳುದಿಲ್ಲ"[3] ಇತ್ಯಾದಿ.

"ಇಲ್ಲೆಲ್ಲ ಫಣಿಯಮ್ಮನ ನಿರಾಶೆ ವ್ಯಥೆ ವ್ಯಕ್ತವಾಗಿದೆ. ಬಾಳು ಬದುಕು ನನ್ನ ಹಣೇಲಿ ಬರೆದಿಲ್ಲ"[4] ಎಂದು ವ್ಯಥೆಯನ್ನು ಹೊರಗೆ ಹಾಕಿದ್ದಾಳೆ.

"ಬನಶಂಕ್ರಿ ಇದೆಲ್ಲ ನಡೆದು ಎಷ್ಟೋ ದಿನಾತು ನೋಡು. ಆದರೆ ಅದ್ನೆಲ್ಲ ಮನಸ್ನಾಗೆ ತುಂಬ್ಕಂಡು ಮನಸ್ಸೆಲ್ಲ ಒಂದ್ಸಗೆ ಮೈಲ್ಗೆ ಅನ್ನಸ್ತಿತ್ತು. ನೀನು ಎಷ್ಟಾರ ಈಗ ತಿಳುವಳಿಕೆ ಬಂದ ಹುಡುಗಿ. ಗಂಡ ಮಕ್ಕಳು ಸಂಸಾರ ಕಂಡಿದ್ದಿ. ಅದಕ್ಕೇ ನಿಮ್ಮುಂದೆ ಹೇಳಿ ಮನಸ್ನ ಹಗರುವ ಮಾಡ್ಕಂಡೆ. ನನಗಿಂತ ಚಿಕ್ಕೋರೆಲ್ಲ ನನ್ನ

---

1. ಶ್ರೀ ಶ್ರೀಕೃಷ್ಣ ಚೆನ್ನಂಗೋಡ (ಸಂ.) 'ಸ್ವರ್ಣ' ಶ್ರೀ ವಿ. ಗ. ನಾಯಕ್ ಅವರ ಲೇಖನ 'ಫಣಿಯಮ್ಮ' ಪುಟ–20.
2. ಎಂ. ಕೆ. ಇಂದಿರಾ : ಫಣಿಯಮ್ಮ – ಪುಟ 55.
3. ಎಂ. ಕೆ. ಇಂದಿರಾ : ಫಣಿಯಮ್ಮ – ಪುಟ 63.
4. ಅದೇ ; ಪುಟ 87.

ಕಣ್ಮುಂವೆ ಹೋದ್ರು ಆ ಭಗವಂತ ಈ ಮೋಟು ಮರಾನ ಯಾತಕ್ಕನ್ನೂ ಉಳಿಸಿದಾನೋ ಏನೋ, ಹೋಗೂ ಹೊತ್ಗೆ ಮನಸ್ನಾಗೆ ಯಾವ ಕೊಳೆ-ಕೊಸರೂ ಇರಬಾರದು ಕಣೆ. ಇದು ಬಾಳ ಹಳೇ ಕಣ್ಣು ದಿನಕ್ಕೊಂಥರ ಹೊಸ ನೋಟ ನೋಡ್ತು. ಆದರೆ ಒಂದೂ ಛಂದಿಲ್ಲ. ಹೋಗ್ಲಿಬಿಡು, ನೀವೆಲ್ಲ ಒಳ್ಳೇ ಗಂಡನ ಮನೆ ಸೇರಿದ್ದೀರಿ ಒಳ್ಳೆ ಮಕ್ಳನ್ನ ಹಡದಿದ್ದೀರಿ. ನನ್ನ ಈ ಸುಡುಗಾಡು ಕರ್ಮದ ಕಥೆಯಾಕೆ ಹೇಳ್ಬೇಕೂ ಅಂತಿದ್ದೆ. ಯಾಕೋ ಇವತ್ತು ಎಲ್ಲ ಹೇಳ್ಬಿಟ್ಟೆ"[1] ಎನ್ನುವ ಫಣಿಯಮ್ಮನ ದಾರುಣ ಮೌನವ್ಯಥೆ, ಅವಳ ಸುಪ್ತ ಮನಸ್ಸು ಇಲ್ಲಿ ತೆರೆದುಕೊಂಡಿದೆ.

"ಈ ನೆಲದ ಬಾಳಿನಿಂದ ಮೇಲಕ್ಕೆದ್ದು ನಿಂತ ಚೇತನ ಫಣಿಯಮ್ಮ".[2] 'ಇಂದಿರಾ ಅವರು ಚಿತ್ರಿಸಿದ, ಫಣಿಯಮ್ಮನ ಪಾತ್ರ ಅಪೂರ್ವವಾಗಿದೆ'[3] ಫಣಿಯಮ್ಮನ ಸಂಪೂರ್ಣ ಜೀವನವನ್ನು ಹಂತ ಹಂತವಾಗಿ ಚಿತ್ರಿಸಿ ಅವರ ಅಪೂರ್ವ ವ್ಯಕ್ತಿತ್ವದ ಪರಿಚಯ ಮಾಡಿಸುವಲ್ಲಿ ಲೇಖಕಿ ಸಫಲರಾಗಿದ್ದಾರೆ.

ಫಣಿಯಮ್ಮ ಅಂದಿನ ಕಾಲದಲ್ಲಿ ಎಲ್ಲರಿಗಿಂತ ಭಿನ್ನಳಾಗಿ ಕಂಡವಳು. ಅಂದಿನ ವ್ಯವಸ್ಥೆಗೆ ಮುಗ್ಧಳಾಗಿ ತನ್ನನ್ನು ಒಪ್ಪಿಕೊಂಡರೂ, ಹೊಸ ಗಾಳಿಗೆ ತನ್ನನ್ನೊಡ್ಡಿ ಕೊಂಡಳು. ಸರ್ವರಿಗೂ ಬೇಕಾದ ಪವಿತ್ರ ಆತ್ಮದ ಸಂಕೇತವಾಗಿ ನಿಲ್ಲುತ್ತಾಳೆ; ಸಂಸ್ಕೃತಿಯ ಸ್ವರೂಪವಾಗಿ ನಿಲ್ಲುತ್ತಾಳೆ-ಫಣಿಯಮ್ಮ.

ಒಟ್ಟಿನಲ್ಲಿ ಕನ್ನಡ ಸಾಹಿತ್ಯದಲ್ಲೇ ಒಂದು ಚಿರಂತನ ಉನ್ನತ ಪಾತ್ರ ಫಣಿ ಯಮ್ಮನದು ಎಂಬುದರಲ್ಲಿ ಸಂದೇಹವಿಲ್ಲ.

ಈ ಕಾದಂಬರಿಯಲ್ಲಿ ಸ್ತ್ರೀ ಶೋಷಣೆಯ ವಿಕೃತ ಸ್ವರೂಪಗಳನ್ನು ಒಂದು ಮಿತಿಯಲ್ಲಿ ಚಿತ್ರಿಸಿದ್ದಾರೆ.

ಜಿಡ್ಡುಗಟ್ಟಿದ ಸಂಪ್ರದಾಯಶೀಲ ಸಮಾಜವ್ಯವಸ್ಥೆಯಲ್ಲಿ ತಮ್ಮ ಸ್ಥಾನಮಾನ ಗಳ ಪ್ರಜ್ಞೆಯೇ ಇಲ್ಲದೆ ವ್ಯವಸ್ಥೆಗೆ ಬದ್ಧರಾದ ಮಹಿಳೆಯರು ಬದ್ಧವಾಗಿಯೂ ಸಮಾಜವ್ಯವಸ್ಥೆಯನ್ನು ಒಪ್ಪಿಕೊಂಡ ಪಾತ್ರಗಳು, ಆಗದೆಯೇ ಹೊಸ ಗಾಳಿಗೆ ಮೈಯೊಡ್ಡಿಕೊಂಡ ಪಾತ್ರಗಳನ್ನು ಲೇಖಕಿ ಇಲ್ಲಿ ಸೃಷ್ಟಿಸಿದ್ದಾರೆ.[4]

---

1. ಎಂ. ಕೆ. ಇಂದಿರಾ : ಫಣಿಯಮ್ಮ – ಪುಟ–85.
2. ಹಾ. ಮಾ. ನಾ, ಟಿ. ವಿ. ವೆಂಕಟಾಚಲಶಾಸ್ತ್ರಿ, ಸಿ. ಪಿ. ಕೆ. (ಸಂ) 'ಸ್ವಸ್ತಿ'. ತ. ಸು. ಶಾಮರಾಯರ ಅಭಿನಂದನಗ್ರಂಥ, ವಿಜಯಾ ಅವರ ಲೇಖನ ಫಣಿಯಮ್ಮ ಪುಟ 706.
3. ಗೀತಾ ದೇಸಾಯಿ : ಸಂಯುಕ್ತ ಕರ್ನಾಟಕ, 30–10–1983.
4. ಶ್ರೀ ಶ್ರೀಕೃಷ್ಣ ಚೆನ್ನಂಗೋಡ (ಸಂ.) 'ಸ್ವರ್ಣ' ಶ್ರೀ ವಿ.ಗ. ನಾಯಕ್ ಅವರ ಲೇಖನ 'ಫಣಿಯಮ್ಮ' ಪುಟ–20,

ಮಕ್ಕಳಾಗದ ಕಾರಣ ಸುಬ್ಬಿಯನ್ನು ಕಡೆಗಣಿಸಿ ತೌರಿಗೆ ಅಟ್ಟುವುದು ಶೋಷಣೆಯ ಒಂದು ಮುಖವಾದರೆ, ಅವಳ ಬಂಜೆತನವನ್ನೇ ದುರುಪಯೋಗಪಡಿಸಿ ಅವಳನ್ನು ಭೋಗಿಸುವ ಪುಟ್ಟಾಜೋಯಿಸನ ಶೋಷಣೆ ಮತ್ತೊಂದು ವಿಕೃತಿ.

"ಲೈಂಗಿಕ ಸಂಬಂಧವಾಗಿಯೂ ಇಂದಿರಾರ ಧೋರಣೆ ಭಿನ್ನವಾದದ್ದೇ. ಶೂದ್ರ ಸ್ತ್ರೀಯನ್ನು ಇಂದಿರಾ ಕೂಡ ಇಲ್ಲಿ ಹಾದರಕ್ಕೆಳೆದದ್ದು ನಿಜವೆ. ಆದರೆ ಸಮಾಧಾನದ ಸಂಗತಿ ಎಂದರೆ ಅಂಥ ಅನೈತಿಕ ಕಸುಬಿಗಿಳಿದ ಗಂಡಸಿನ ಬಗ್ಗೆ ಕಾಂಪ್ರೈಮೆನ್ ಮಾಡಿ ಕೊಳ್ಳದ ಇಲ್ಲಿನ ನೈತಿಕ ನಿಷ್ಠೆ.[1]

ಈ ಸುಬ್ಬ ಬಲು ಕಚ್ಚ ಪರಕ. ಲಚ್ಚೀಗೆ ದಿನ ತುಂಬ್ತ ಬಂದಿವೆ. ಇನ್ನೂ ಅದಕ್ಕೆ ಹಿಂಸೆ ತಪ್ಪಿದ್ದಲ್ಲ. ಈಗ ಇವೇ ನನ್ನ ಹತ್ರ ಬರಬ್ಯಾಡಿ ಅಂದಿದ್ದೀತು.[2]

"ಇಲ್ಲೆಲ್ಲ ಒಬ್ಬ ಗಂಡಸು ತನ್ನ ಸ್ತ್ರೀಯೊಡನೆಯೇ ಆದರೂ ನಡೆಯಿಸುವ ಪೈಶಾಚಿಕ ಆಕ್ರಮಣದ ಬಗೆಗೆ, ಹೇಸಿದ ಸ್ತ್ರೀತ್ವವನ್ನು ಇಲ್ಲಿ ಅರ್ಥಮಾಡಿಕೊಳ್ಳಬೇಕು. ಹಾಗೆ ಅರ್ಥೈಸಿಕೊಳ್ಳುತ್ತ ಹೀಗೆ ಲೈಂಗಿಕವಾಗಿ ಇತರ ಸ್ತ್ರೀಯರನ್ನೂ ಬಳಸಿಕೊಳ್ಳು ವಲ್ಲಿನ ಶೋಷಣೆ ಇನ್ನೆಷ್ಟು ಭಯಂಕರವಾದದ್ದು ಎಂದು ಅನುಭವಿಸಬೇಕು."[3]

ಒಟ್ಟಾರೆ ನಮ್ಮ ಸಮಾಜವ್ಯವಸ್ಥೆ ಹುಸಿಗೋಡೆಗಳನ್ನು ಒಡೆಯುವ ದಿಟ್ಟ ಪ್ರಯತ್ನ ಫಣಿಯಮ್ಮ ಎಂಬುದರಲ್ಲಿ ಸಂದೇಹವಿಲ್ಲ.

"ತನ್ನ ಸಾತ್ವಿಕ, ತಾತ್ವಿಕ, ಹಾಗೆಯೇ ಧಾರ್ಮಿಕ ಮತ್ತು ಮಾನವಿಕ ವ್ಯಕ್ತಿತ್ವ ಗಳಿಂದ ಬಿಮ್ಮಗೆ ಅರಳಿಕೊಂಡು ತುಂಬಿನಿಂತ ಚೈತನ್ಯವೆಂಬುದು ದಿನವೂ ಬೆಳೆಯುತ್ತಾ ಸರ್ವಾದರಣೀಯಾಗಿ ಹೋಗುತ್ತ ಫಣಿಯಮ್ಮ ನಮ್ಮ ಸಾಹಿತ್ಯಕ್ಕೆ ಸಮಾಜಕ್ಕೆ ಲಭ್ಯ ವಾದ ಒಂದು ಮಹಾನ್ ಕೊಡುಗೆ.

'ಪರಂಪರೆಯನ್ನು ತಿರಸ್ಕರಿಸದ, ಸಂಪ್ರದಾಯವನ್ನು ಸಹಿಸದ ಒಂದು ಪ್ರಜ್ಞಾ ಪ್ರವಾಹ ಫಣಿಯಮ್ಮ.[4]

'ಸದಾನಂದ' ಕಾದಂಬರಿಯಿಂದ 'ಫಣಿಯಮ್ಮ'ದ ವರೆಗೆ ಲೇಖಕಿಯ ಬೆಳೆವಣಿಗೆ ಗಮನಾರ್ಹವಾಗಿವೆ. 'ಸದಾನಂದ' ಕೃತಿಯ ಅಲ್ಲಿಯೂ ಇಂದಿರಾ ಅವರ ಸಂಪ್ರ ದಾಯದ ವಿರೋಧ ವ್ಯಕ್ತವಾಗಿದ್ದು, ಈ ಕೃತಿಯಲ್ಲಿ ಅವರು ಸಂಪ್ರದಾಯ ಕಟ್ಟು ಪಾಡುಗಳಿಂದ ಸಂಪೂರ್ಣ ಹೊರಬಂದ ವ್ಯವಸ್ಥೆಯ ಪ್ರತಿಭಟನೆ ಸ್ಪಷ್ಟವಾಗಿ ಕಂಡು ಬಂದಿದೆ.

---

1. ಅದೇ ;ಪುಟ–25
2. ಎಂ. ಕೆ. ಇಂದಿರಾ : ಫಣಿಯಮ್ಮ ಪುಟ–80
3. ಶ್ರೀ ವಿ. ಗ. ನಾಯಕ್ 'ಸ್ವರ್ಣ' ಪುಟ–25
4. ಅದೇ ; ಪುಟ–26

ಅನುಭವ ವೈಚಾರಿಕತೆ ಇಲ್ಲಿ ಒಂದೇ ಮೂಲದಿಂದ ಉದ್ಭವಿಸಿದುದರಿಂದ ಈ ಕೃತಿಯ ಕಲಾಸಿದ್ಧಿ ಸಹಜವೂ ಅಪೂರ್ವವೂ ಆಗಿ ರೂಪುಗೊಂಡಿದೆ.

ಒಂದು ಕೃತಿಯ ಶ್ರೇಷ್ಠತೆಯನ್ನು ನಿರ್ಧರಿಸಲು ಕೇವಲ ಸಾಹಿತ್ಯಿಕ ಮಾನದಂಡಗಳಿಲ್ಲದೆ, ವೈಚಾರಿಕೆಯಂತಹ ಸಾಹಿತ್ಯೇತರ ಮಾನದಂಡಗಳೂ ಅಗತ್ಯವಾಗುತ್ತವೆ. ಈ ದೃಷ್ಟಿಯಿಂದ ಇಂದಿರಾ ಅವರ ಫಣಿಯಮ್ಮ ಕನ್ನಡ ಕಾದಂಬರಿಗಳಲ್ಲೇ ಮಹತ್ವದ, ವಿಶಿಷ್ಟ ಕೃತಿಯಾಗಿ ನಿಲ್ಲುತ್ತದೆ.

ಅಧ್ಯಾಯ - ನಾಲ್ಕು

ಕಥಾ ಸಂಕಲನಗಳು

೧. 'ನವರತ್ನ'

ಶ್ರೀಮತಿ ಇಂದಿರಾ ಅವರ ಪ್ರಥಮ ಕಥಾ ಸಂಕಲನ. ೧೯೬೦ರಲ್ಲಿ ರಾಜ್ಯ ಪ್ರಶಸ್ತಿಯನ್ನು ಪಡೆದಿದೆ. ಕಾದಂಬರಿ ಕ್ಷೇತ್ರಕ್ಕೆ ಉತ್ತಮ ಕಾದಂಬರಿಗಳನ್ನಿತ್ತ ಇಂದಿರಾ ಅವರು ಉತ್ತಮ ಸಣ್ಣ ಕತೆಗಳನ್ನು ಬರೆಯಬಲ್ಲರೆಂದು 'ನವರತ್ನ' ಕಥಾ ಸಂಕಲನದಿಂದ ತೋರಿಸಿಕೊಟ್ಟಿದ್ದಾರೆ. 'ನವರತ್ನ' ಕಥಾ ಸಂಕಲನ ೧೯೬೦ರಲ್ಲಿ ಪ್ರಥಮ ಮುದ್ರಣವಾಗಿದ್ದು, ೧೯೭೫ರಲ್ಲಿ ಮೂರನೆಯ ಮುದ್ರಣ ಕಂಡಿದೆ.

ನಾಡಿನ ಹಲವು ಪತ್ರಿಕೆಗಳಲ್ಲಿ ಪ್ರಕಟವಾದ ಕತೆಗಳೊಡನೆ ಎರಡು ಹೊಸ ಕತೆಗಳು ಸೇರಿ ಈ ಸಂಕಲನದಲ್ಲಿ ಒಟ್ಟು ಹನ್ನೆರಡು ಕತೆಗಳಿವೆ.

'ಹೆತ್ತೊಡಲು' :

ಈ ಸಂಕಲನದ ಮೊದಲನೆಯ ಕತೆ. ಇಂದಿರಾ ಅವರ ಮನೆಯಲ್ಲಿಯೇ ನಡೆದಿದ್ದು. ತಂದೆ-ತಾಯಿಗಳೊಡನೆ ಜಾತ್ರೆಗೆ ಹೋಗಿದ್ದ ಎಳೆಯ ಬಾಲಕ ನರಹರಿ ಗದ್ದಲದಲ್ಲಿ ತಪ್ಪಿಸಿಕೊಳ್ಳುತ್ತಾನೆ. ಕೋಟಿ ತೀರ್ಥದಲ್ಲಿ ಶವವೊಂದು ದೊರೆತಾಗ ಆ ಶವ ತಮ್ಮ ಮಗನದೆಂದೇ ತಿಳಿಯುತ್ತಾರೆ. ಆದರೆ ನರಹರಿ ಕಲ್ಕತ್ತೆಯನ್ನು ಸೇರಿ ಬಹುದೊಡ್ಡ ವ್ಯಾಪಾರಸ್ಥನಾಗಿ ಒಂದು ಕೆಲಸದ ನಿಮಿತ್ತ ಆಕಸ್ಮಿಕವಾಗಿ ತನ್ನ ಊರಿಗೆ ಬರುತ್ತಾನೆ. 'ಹೆತ್ತೊಡಲು' ನರಹರಿಯನ್ನು ತನ್ನ ಮಗನೆಂದು ಗುರುತಿಸುತ್ತದೆ. ಇದು ಲೇಖಕಿಯ ಮೆಚ್ಚಿನ ಕತೆಯೂ ಹೌದು. ಕತೆ ಅತ್ಯಂತ ಹೃದಯಸ್ಪರ್ಶಿಯಾಗಿ ನಿರೂಪಿತವಾಗಿದೆ.

'ತಂದೆ' :

ಹೃದಯಸ್ಪರ್ಶಿಯಾದ ವಸ್ತುವನ್ನುಳ್ಳ ಕತೆ. ಅಂತರ್ಜಾತೀಯ ವಿವಾಹದ ಕಾರಣಕ್ಕಾಗಿ ಪ್ರತಿಷ್ಠಿತರಾಗಿದ್ದ ಆನಂದರಾಯರು ತಮ್ಮ ಮಗ ಸೊಸೆಯನ್ನು ದೂರ ಮಾಡುತ್ತಾರೆ. ಹೆಂಡತಿಯನ್ನು ಕಳೆದುಕೊಂಡ ಆನಂದರಾಯರು ಏಕಾಕಿಯಾಗಿ ಉಳಿಯುತ್ತಾರೆ, ಮಗ ಸೊಸೆ ಅದೇ ಊರಿನಲ್ಲಿ ಬೇರೆ ಮನೆ ಮಾಡುತ್ತಾರೆ. ಮೊಮ್ಮಗನ ಸೆಳೆತ ಆನಂದರಾಯರಲ್ಲಿ ದಿನ ದಿನಕ್ಕೆ ಹೆಚ್ಚಾಗುತ್ತ, ಪಾರ್ಕಿನಲ್ಲಿ ಭೇಟಿಯಾಗುತ್ತಿದ್ದ ಮೊಮ್ಮಗ ಮೂರು ದಿನ ಕಾಣದಾದಾಗ ಮಗನ ಮನೆಗೆ ಧಾವಿಸುತ್ತಾರೆ, ಮಗು ಕಾಯಿಲೆಯಿಂದ ತೀರಿಹೋಗಿರುತ್ತದೆ. ಮೊಮ್ಮಗನ ಸಾವಿನಿಂದ ದೂರವಾದ ತಂದೆ–ಮಗ ಮತ್ತೆ ಒಂದಾಗುತ್ತಾರೆ.

'ಆತ್ಮನಿವೇದನೆ' :

ಪೌರಾಣಿಕ ಕತೆಯಿದು. ಒಬ್ಬ ಬಡ ಬ್ರಾಹ್ಮಣನ ಕರ್ತವ್ಯ, ಸಾಂಸಾರಿಕ ಜೀವನ ಶ್ರದ್ಧೆಗೆ ವಿಷ್ಣು ಒಲಿದ ಕತೆ.

'ಕಾಂತಿಮತಿ' :

ಐತಿಹಾಸಿಕ ಹಿನ್ನೆಲೆಯುಳ್ಳ ಕತೆ. ರಾಮದುರ್ಗದ ಸರದಾರನಾಗಿದ್ದ ಲಕ್ಷ್ಮಣ ಸಿಂಹನ ಕುಮಾರಿಯೇ ಕಾಂತಿಮತಿ, ಲಕ್ಷ್ಮಣಸಿಂಹ ಮಡಿದ ಸಮಯ ಸಾಧಿಸಿ ಕವಲೇದುರ್ಗದ ಸರದಾರ ಭೀಮಸಿಂಹ ಕಾಂತಿಮತಿಯನ್ನೂ 'ರಾಮಗಡ'ವನ್ನೂ (ರಾಮದುರ್ಗ) ಸುಲ್ತಾನರಿಗೆ ಒಪ್ಪಿಸುವ ಹವಣಿಕೆಯಲ್ಲಿರುತ್ತಾನೆ. ಇದನ್ನು ತಿಳಿದ ಭೀಮಸಿಂಹನ ಮಗ ತೇಜಸಿಂಹ ಅಶ್ವಸಿಂಹನೆಂದು ಹೆಸರು ಬದಲಾಯಿಸಿಕೊಂಡು ಕಾಂತಿಮತಿಯನ್ನು ರಕ್ಷಿಸುತ್ತಾನೆ. ಕಾಂತಿಮತಿ ತನ್ನ ಮಾನರಕ್ಷಣೆಗಾಗಿ ಸ್ವಾಭಿಮಾನ ದಿಂದ ತನ್ನ ಸುಖ–ಸಂಪತ್ತನ್ನು ತ್ಯಜಿಸಿ ತೇಜಸಿಂಹನನ್ನು ಹಿಂಬಾಲಿಸುತ್ತಾಳೆ.

'ಪಶ್ಚಿಮ ಕರಾವಳಿ' :

ಬೆಸ್ತರ ಜೀವನವನ್ನು ಹಿನ್ನೆಲೆಯಾಗುಳ್ಳ ಕತೆ. ಬೆಸ್ತರ ಯುವತಿಯ ಚೆಲುವಿಗೆ ಎಡಿನ್‌ಬ್ಯೂರೊ ಮರುಳಾಗುತ್ತಾನೆ, ಪದುಮಿಗೆ ಮಾದಕ ದ್ರವ್ಯ ಕುಡಿಸಿ, ತನ್ನ ಬಂಗಲೆಗೆ ಕರೆದೊಯ್ದು ಅವಳ ಶೀಲಹರಣ ಮಾಡುತ್ತಾನೆ. ಪದುಮಿ ತನ್ನ ಅಪವಿತ್ರ ಶರೀರವನ್ನು ತನ್ನ ಗಂಡನಿಗೆ ಒಪ್ಪಿಸಲು ನಿರಾಕರಿಸಿ, ಸಮುದ್ರದಲ್ಲಿ ತನ್ನ ಜೀವನವನ್ನು ಕೊನೆಗಾಣಿಸಿಕೊಳ್ಳುತ್ತಾಳೆ.

'ಹುಲಿಕೊಟ್ಟ ಶಾಲೆ' :

ಮಲೆನಾಡಿನ ದಟ್ಟವಾದ ಕಾಡಿನಲ್ಲಿ ಎದುರಾದ ಹುಲಿಯನ್ನು ಮಡಿ ಹೆಂಗಸ ರಿಬ್ಬರು ಕೊಲ್ಲುತ್ತಾರೆ. ಅವರ ಸಾಹಸ, ಧೈರ್ಯವನ್ನು ಲೇಖಕಿ ರಮ್ಯವಾಗಿ ಚಿತ್ರಿಸಿದ್ದಾರೆ.

'ನಾ ಕಂಡ ನರಕ' :

ವೈದ್ಯೆಯೊಬ್ಬಳ ವೃತ್ತಿ ಜೀವನದಲ್ಲಿ ಕಂಡ ಭೀಭತ್ಸಕರ ಜಾತ್ರೆಯ ಅನುಭವ. ಕೀಳುಜನರು ಹಳ್ಳಿಯಲ್ಲಿ ಮಾರಿ ಜಾತ್ರೆಯ ನೆಪದಲ್ಲಿ ನಡೆಸುವ ಪ್ರಾಣಬಲಿ ಹೆಣ್ಣು ಮಕ್ಕಳ ಮೇಲೆ ನಡೆಸುವ ಅತ್ಯಾಚಾರ ಅನಾಗರೀಕ ವರ್ತನೆ ಜೂಜು-ಕುಡಿತ, ಇವು ಗಳನ್ನು ಲೇಖಕಿ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ.

'ಬದಲಾದ ಬದುಕು' :

ಭೂತ ಕಥನ. ಮಲೆನಾಡಿನ ಹಳ್ಳಿಯಲ್ಲಿ ನಡೆದಿದ್ದು ಶ್ಯಾಮ ಜೋಯಿಸನ ಹೆಂಡತಿ ಯಂಟಜ್ಜಿ ರೋಗಿಷ್ಠೆ. ಜೋಯಿಸ ಒಮ್ಮೆ ಪೌರೋಹಿತ್ಯಕ್ಕಾಗಿ ಪಕ್ಕದ ಹಳ್ಳಿಗೆ

ಹೋಗಿರುತ್ತಾನೆ, ಮಲೆನಾಡಿನಲ್ಲಿ ಎಂಟು ದಿನಗಳಾದರೂ ಹಿಡಿದ ಮಳೆ ಬಿಡುವುದಿಲ್ಲ. ಜೋಯಿಸ ಊರಿಗೆ ಬರುವಷ್ಟರಲ್ಲಿ ಯಂಟಚ್ಚಿ ಸಂಪೂರ್ಣ ಬದಲಾಗಿರುತ್ತಾಳೆ. ತನ್ನ ಮೋಹಕ ಹಾವಭಾವ, ಚಟುವಟಿಕೆ ನಡೆನುಡಿಯಿಂದ ಗಂಡನ ಮನಸ್ಸನ್ನು ತನ್ನತ್ತ ಸೆಳೆದುಕೊಳ್ಳುತ್ತಾಳೆ. ಅದುವರೆಗೆ ನೀರಸವಾಗಿದ್ದ ಜೋಯಿಸನ ದಾಂಪತ್ಯ ಜೀವನ ಗೆಲುವು ಪಡೆಯುತ್ತದೆ. ಅಪರೂಪಕ್ಕೆ ಬಂದ ಜೋಯಿಸನ ಸೋದರ ಮಾವನಿಗೆ ತನ್ನ ಅಳಿಯನ ಸಾಂಸಾರಿಕ ಜೀವನದ ಬದಲಿಕೆ ವಾಸ್ತವವೆನ್ನಿಸದೆ ಮಂತ್ರವಾದಿಯನ್ನು ಕರೆಸುತ್ತಾನೆ. ಮಂತ್ರವಾದಿ ಮಂತ್ರತಂತ್ರದಿಂದ ಯಂಟಚ್ಚಿಯ ಬದುಕು ಬಯಲಾಗುತ್ತದೆ. ಮಳೆಗಾಲದಲ್ಲಿ ಒಂದು ದಿನ ಸತ್ತುಹೋದ ಯಂಟಚ್ಚಿಯ ಶರೀರದಲ್ಲಿ ಹೊಳೆಗೆ ಬಿದ್ದು ಸತ್ತ ಯುವತಿ ಲಚ್ಚಿ ಸೇರಿಕೊಂಡಿರುತ್ತಾಳೆ. ಇದೇ ಬಯಲಾದ ಬದುಕು.

'ಹರಿಶ್ಚಂದ್ರನ ನಾಡು' :

ಹರಿಶ್ಚಂದ್ರನ ನಾಡಾದ ಭಾರತೀಯರಲ್ಲಿರುವ ಪ್ರಾಮಾಣಿಕತೆ, ಹಾಗೂ ಸತ್ಯವಂತಿಕೆಯನ್ನು ಬ್ರಿಟಿಷ್ ದೊರೆ ಎಡ್ಸನ್ ಮೆಚ್ಚಿಕೊಳ್ಳುತ್ತಾನೆ. ಬ್ರಿಟಿಷ್ ಆಳ್ವಿಕೆಯಲ್ಲಿದ್ದ ಎಕ್ಸನರ್ ದೊರೆ ಮಲೆನಾಡಿನ ಮೂಡಲಗೆರೆ ಗ್ರಾಮದ ತಿಪ್ಪಯ್ಯನವರಿಗೆ ಕಾಫೀ ತೋಟವನ್ನು ಗುತ್ತಿಗೆ ಕೊಡುತ್ತಾನೆ. ತಿಪ್ಪಯ್ಯನವರ ನಂತರ ಅವರ ಮಗ ಗುಂಡಪ್ಪಯ್ಯ ಎಕ್ಸನರ್ ದೊರೆಯ ಮಗ ಎಡ್ಸನನಿಗೆ ಪ್ರತಿ ವರ್ಷವೂ ಗುತ್ತಿಗೆಯನ್ನು ಸಲ್ಲಿಸುತ್ತ ಬರುತ್ತಾರೆ. ಬರಗಾಲದಲ್ಲೂ ಹೆಂಡತಿಯ ಚಿನ್ನವನ್ನು ಮಾರಿ ಎಡ್ಸನನಿಗೆ ಹಣ ಕೊಡುತ್ತಾರೆ. ಬರಗಾಲದ ಕಾಫೀ ತೋಟವನ್ನು ಕಣ್ಣಾರೆ ಕಂಡ ಎಡ್ಸನ್‌ದೊರೆ ಗುಂಡಪ್ಪನವರ ಸತ್ಯಸಂಧತೆಯನ್ನು, ಪ್ರಾಮಾಣಿಕತೆಯನ್ನು ಮೆಚ್ಚಿಕೊಳ್ಳುತ್ತಾನೆ. ಹರಿಶ್ಚಂದ್ರನ ನಾಡಿನಲ್ಲಿ ಸತ್ಯವಂತರನ್ನು, ಸತ್ಯವಂತಿಕೆಯನ್ನು ಸಾರುವ ಕತೆಯಿದು.

'ಗರತಿ-ಗಣಿಕೆ' :

ವೇಶ್ಯೆಯೊಬ್ಬಳ ತ್ಯಾಗ ಹಿರಿಮೆಯನ್ನು ಸಾರುವ ಕತೆಯಿದು. ವನಜೆ 'ವೇಶ್ಯೆ' ಯಾದರೂ ತಮ್ಮಯ್ಯನವರೊಡನೆ ಮಡದಿಯಂತೆ ಬಾಳಿ, ಅವರ ಕಷ್ಟ-ಸುಖಗಳಲ್ಲಿ ಭಾಗಿಯಾಗುತ್ತಾಳೆ. ಅವರ ಕೈಹಿಡಿದ ಮಡದಿ ಸೀತಾಲಕ್ಷ್ಮಿಗೆ ತಂಗಿಯಾಗಿ, ಅವಳ ಮಕ್ಕಳಿಗೆ ತಾಯಿಯಾಗಿ, ಅವರ ಬದುಕಿಗೆ ಮಾರ್ಗ ತೋರಿಸುತ್ತಾಳೆ. ವೇಶ್ಯೆಯೊಬ್ಬಳ ಅಂತರಂಗದ ಸೌಂದರ್ಯವನ್ನು ಸಾರುತ್ತದೆ.

'ಲಕ್ಷ್ಮಿ ಬಂದಳು' :

ತಮ್ಮನ ಹಂಗಿನ ಮಾತುಗಳಿಂದ ಬೇಸತ್ತು ಮುರುಕು ಮನೆಯಲ್ಲಿ ಹೆಂಡತಿ ಮಕ್ಕಳೊಂದಿಗೆ ಕಷ್ಟದ ಜೀವನ ಕಳೆಯುತ್ತಿದ್ದ ನಂಜಪ್ಪನವರಿಗೆ ಆ ಮನೆಯಲ್ಲೇ ಧನ (ಲಕ್ಷ್ಮಿ) ಪ್ರಾಪ್ತಿಯಾಗುತ್ತದೆ.

'ನವರತ್ನ' :

ದಾಯಾದಿಗಳಿಗೆ ಮೋಸಮಾಡಿ ಮನೆಯನ್ನು ಕೊಂಡ ಸೀತಾರಾಮುವಿಗೆ ಆ ಮನೆಯನ್ನು ಅಗಿಸಿದಾಗ ದೊರೆತ ನವರತ್ನಗಳೆಂದರೆ ಇದ್ದಿಲುಚೂರು, ಅರಿಸಿನ ಬೇರು, ಕಲ್ಲು ಇಟ್ಟಿಗೆ ಚೂರು, ನಿಂಬೆಹಣ್ಣು, ಕರಟದ ಚೂರು, ಕವಡಿ, ಮಣ್ಣಿನ ದೊಂದು ಕುಡಿಕೆ. ದುರಾಸೆಗೆ ತಕ್ಕ ಪ್ರತಿಫಲವೆಂಬುದನ್ನು ಇಲ್ಲಿ ಕಾಣಬಹುದು.

೨. 'ನವ ಜೀವನ'

ಶ್ರೀಮತಿ ಎಂ. ಕೆ. ಇಂದಿರಾ ಅವರ 'ನವ ಜೀವನ' ಹದಿನೈದು ಕತೆಗಳ ಸಂಕಲನ. ಕನ್ನಡನಾಡಿನ ಹಲವು ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟವಾದ ಕತೆಗಳನ್ನೊಳಗೊಂಡ ೧೯೭೦ ರಲ್ಲಿ ಹೇಮಂತ ಸಾಹಿತ್ಯದಿಂದ ಪ್ರಥಮ ಮುದ್ರಣವಾಗಿದೆ. ೧೯೭೬ ರಲ್ಲಿ ಎರಡನೇ ಮುದ್ರಣವಾಗಿದೆ. ೧) ಅರ್ಜಿ, ೨) ಧನ್ವಂತರಿ, ೩) ವೇಗ ಯುಗ, ೪) ನಮ್ಮ ಮಕ್ಕಳು, ೫) ಕಾವ್ಯನಾಮ, ೬) ಎರಡು ನಾಲಿಗೆ, ೭) ನಾ ಒಲ್ಲೆ ಅಪ್ಪಯ್ಯ, ೮) ದಯೆ ಎಲ್ಲುಂಟು ಗೊತ್ತುಂಟ, ೯) ಪಾಪದ ಚೀಟಿ, ೧೦) ಗೆದ್ದಲು ತಿಂದ ಸಂಸ್ಥಾನ, ೧೧) ಕಾರಣ, ೧೨) ಕಲಾವಿದ, ೧೩) ನೇಮ, ೧೪) ರಾತ್ರಿ, ೧೫) ನವಜೀವನ—ಈ ಹದಿನೈದು ಕತೆಗಳು ಈ ಸಂಕಲನದಲ್ಲಿವೆ.

'ಕಲಾವಿದ' :

ಒಂದು ಕಾಲಕ್ಕೆ ರಂಗಭೂಮಿ ಹಾಗೂ ಚಿತ್ರರಂಗದಲ್ಲಿ ಶ್ರೇಷ್ಠ ನಟನೆಂದು ಹೆಸರುಪಡೆದ ಕಲಾವಿದನೊಬ್ಬ ಪರಿಸ್ಥಿತಿಯ ಒತ್ತಡಕ್ಕೆ ಸಿಕ್ಕು ದುರಂತ ಮರಣ ಹೊಂದುತ್ತಾನೆ. ತಾನು ನಟಿಸಿದ ಶ್ರೇಷ್ಠ ಚಿತ್ರ ಕೆಲ ವರ್ಷಗಳ ನಂತರ ಮತ್ತೆ ಪ್ರದರ್ಶಿತವಾಗುತ್ತಿದ್ದಾಗ ಬ್ಲಾಕ್ ಟಿಕೆಟ್ ಮಾರಿ ಜೀವನ ಕಳೆಯುತ್ತಾನೆ. ಸಮಾಜ ದಲ್ಲಿ ಕಲಾವಿದರಿಗೆ ಸಿಗುವ ಸ್ಥಾನಮಾನದತ್ತ ಕತೆ ಬೆರಳುಮಾಡಿದೆ.

'ನೇಮ' :

ಸಮಾಜದ ಅಜ್ಞಾನ ಮೂಢನಂಬಿಕೆಗಳನ್ನು ಚಿತ್ರಿಸುತ್ತದೆ. ಶ್ರೀಮಂತ ಕುಟುಂಬದ ಕರ್ಣೀಕರ ಹೆಂಡತಿ ಪದ್ಮಾವತಿ ಮೊದಲನೇ ಕೋಳಿ ಕೂಗಿದಾಗ ಅಶ್ವತ್ಥ ವೃಕ್ಷ ಸುತ್ತಿ ಮಕ್ಕಳನ್ನು ಪಡೆದಳೆಂದು ಜನ ನಂಬುವುದನ್ನು ಲೇಖಕಿ ಸೂಚ್ಯವಾಗಿ ನಿರೂಪಿಸಿದ್ದಾರೆ. ತೀರಾ ಕತ್ತಲಿರುವಾಗ ಅಶ್ವತ್ಥಕಟ್ಟೆಗೆ ಹೋಗುವ ಪದ್ಮಾವತಿ ಸರಿಯಾಗಿ ಸೇವೆ ನಡೆಸುತ್ತಾಳೆಯೇ ಎಂದು ಪರಿಕ್ಷಿಸಲು ಜೋಯಿಸರು (ಭಟ್ಟರು) ಕಿವಿಗೆ ಜನಿವಾರ ಸುತ್ತಿ ತಂಬಿಗೆ ಹಿಡಿದು ಗುಡ್ಡಕ್ಕೆ ಬರುವುದು ಅತ್ಯಂತ ಮಾರ್ಮಿಕ ವಾಗಿದೆ. ಪದ್ಮಾವತಿ ಮಕ್ಕಳನ್ನು ಪಡೆದ ರೀತಿಯನ್ನು ಸೂಚ್ಯವಾಗಿ ತೋರಿಸಿದ್ದಾರೆ.

'ರಾತ್ರಿ' :

ಎರಡು ಮುದ್ದಾದ ಮಕ್ಕಳನ್ನು ಕಳೆದುಕೊಂಡ ಕಂಗಾಲಿನಿಂದ ನಿರಾಶೆಯನ್ನು ಕತೆ ಚಿತ್ರಿಸುತ್ತದೆ. ಶಸ್ತ್ರಚಿಕಿತ್ಸೆಗೊಳಗಾದ ಪತಿಯಿಂದ ಇನ್ನು ತನಗೆ ಮಕ್ಕಳು ಇಲ್ಲ ವೆಂದು ತಿಳಿದು ಅಂಧಕಾರಮಯವಾದ ಭವಿಷ್ಯದಲ್ಲಿ ಏಕಾಕಿಯಾದ ಹೆಣ್ಣಿನ ಮನಸ್ಥಿತಿ ಯನ್ನು ಲೇಖಕಿ ಹೃದಯವಿದ್ರಾವಕವಾಗುವಂತೆ ಚಿತ್ರಿಸಿದ್ದಾರೆ.

'ನವಜೀವನ' :

ಎಕ್ಸ್-ರೇ ಫೋಟೋಗಳ ಬದಲಿಕೆಯಿಂದ ಕರುಳು ಹುಣ್ಣಿನಿಂದ ಇನ್ನು ಮೂರು ತಿಂಗಳಲ್ಲಿ ಸಾವು ಎಂದು ತಿಳಿದ ಎಂಜಿನಿಯರನು ಮತ್ತೆ ಪುನರ್ಜನ್ಮ ಪಡೆಯುತ್ತಾನೆ. ಕರುಳು ಹುಣ್ಣಿನ ಎಕ್ಸ್-ರೇ ಫೋಟೋ ಬೇರೆ ರೋಗಿಯದೆಂದು ಸತ್ಯಾಂಶ ಕತೆಯ ಕೊನೆಗೆ ತಿಳಿಯುತ್ತದೆ.

'ಅಜ್ಜಿ' :

ದಾಯಾದಿ ಮತ್ಸರದಿಂದ ಹೊತ್ತಿಕೊಂಡ ದ್ವೇಷದಲ್ಲಿ ತನ್ನ ಮಗ ಜೇಲುವಾಸ ದಲ್ಲಿದ್ದು ಮರುದಿನವೇ ಗಲ್ಲಿಗೇರಿಸಲ್ಪಡುತ್ತಾನೆಂದೂ ತಿಳಿದರೂ, ಮೊಮ್ಮಗನಿಗಾಗಿ ಬದುಕಲೇಬೇಕೆಂಬ ಛಲ ಮನೋಸ್ಥೈರ್ಯವುಳ್ಳ ಧೀಮಂತ ಮಹಿಳೆಯ ಚಿತ್ರಣ ಇಲ್ಲಿದೆ.

'ಧನ್ವಂತರಿ' :

ನಾರು, ಬೇರು, ಚೀಟಿ, ಔಷಧಿಯಿಂದಲೇ ರೋಗಗಳೆಲ್ಲ ವಾಸಿಯಾಗುತ್ತವೆಂದು ತಿಳಿದ ವೈದ್ಯ ಕತೆ. ಉಪಜೀವನಕ್ಕಾಗಿ ಬಹಳ ಹಿಂದೆ ಕಂಪೌಂಡರನಾಗಿದ್ದವನೊಬ್ಬ ಹಳ್ಳಿಗೆ ಬಂದು ಆಯುರ್ವೇದಿ ಡಾಕ್ಟರನಂತೆ ನಟಿಸುತ್ತಾನೆ. ಆದರೆ ಅವನು ಕೊಡು ತ್ತಿದ್ದ ಔಷಧಿಯಲ್ಲಿ ಆಲೋಪತಿ, ಮಾತ್ರೆಗಳು, ಅನಾಸಿನ್ ಆಸ್ಪ್ರೋ ಮೊದಲಾದವು ಗಳನ್ನು ರಾತ್ರಿಯೆಲ್ಲ ಕುಳಿತು ಪುಡಿಮಾಡಿ ಬೇರೆ ಬೇರೆ ಬಣ್ಣವನ್ನು ಬೆರೆಸಿ ಚೀಟಿ ಕಟ್ಟಿಕೊಡುತ್ತಿರುತ್ತಾನೆಂಬ ರಹಸ್ಯ ಕೊನೆಯಲ್ಲಿ ಬಯಲಾಗುತ್ತದೆ. ಕತೆ ಸ್ವಾರಸ್ಯ ಯುತವಾಗಿದೆ.

'ವೇಗ ಯುಗ' :

ಇಂದಿನ ವೈಜ್ಞಾನಿಕ ಯುಗದ ವೇಗವಾದ (ತೀವ್ರವಾದ) ಬದಲಾವಣೆಯನ್ನು ಚಿತ್ರಿಸುವ ಕತೆ. ಕತೆಯ ಓಟ ಅಷ್ಟೇ ತೀವ್ರ.

'ನಮ್ಮ ಮಕ್ಕಳು' :

ಬಡ ಕುಟುಂಬದ ಹುಡುಗಿಯ ವಿವೇಕ, ಬುದ್ಧಿವಂತಿಕೆ, ದಿಟ್ಟತನವನ್ನು ಈ ಕತೆಯಲ್ಲಿ ಕಾಣಬಹುದು.

'ಕಾವ್ಯನಾಮ' :

ಬರಹಗಾರರಿಬ್ಬರ ಸುಂದರ ಕಾವ್ಯನಾಮದ ಗುಟ್ಟನ್ನು ಕತೆ ರಟ್ಟು ಮಾಡುತ್ತದೆ.

'ಎರಡು ನಾಲಿಗೆ' :

ವ್ಯಕ್ತಿಗಳು ಬದುಕಿದ್ದಾಗ ಮೂದಲಿಸುವವರೇ ಅವರು ಸತ್ತಾಗ ಹೊಗಳುವ ಸಮಾಜದ ಜನರ ರೀತಿಯನ್ನು ಇಲ್ಲಿ ಕಾಣಬಹುದು.

'ನಾ ಒಲ್ಲೆ ಅಪ್ಪಯ್ಯ' :

ಮಲೆನಾಡಿನ ಹಳ್ಳಿಯಲ್ಲಿ ಹುಟ್ಟಿ ಬೆಳೆದು ವೃದ್ಧ ತಂದೆ, ರೋಗಿಯಾಗಿರುವ ತಮ್ಮನನ್ನು ಬಿಟ್ಟುಹೋಗಲು ಬಯಸದ ತ್ಯಾಗಮಯಿ ಯುವತಿಯ ಚಿತ್ರಣವಿದೆ. ಶಾರದೆಯ ಮುಕ್ತ ಮನಸ್ಸು ಹೃದಯ ಸಂಸ್ಕಾರ, ಜೀವನದ ಶ್ರದ್ಧೆಯಿಂದ ಓದುಗರ ಮನಸೆಳೆಯುತ್ತಾಳೆ.

'ದಯೆ ಎಲ್ಲುಂಟು ಗೊತ್ತುಂಟಾ' :

ತನ್ನ ಸಂಸಾರಕ್ಕಾಗಿ ಹಗಲಿರುಳು ದುಡಿದು, ಬದುಕನ್ನು ಪ್ರೀತಿಸುವ ಸಹನೆ, ಮನೋಸ್ಥೈರ್ಯವುಳ್ಳ ರಮಾಬಾಯಿಯ ಜೀವಂತ ಚಿತ್ರಣವಿದೆ. ಮನೆಯಲ್ಲಿನ ದನ, ಕರುಗಳನ್ನು 'ತನ್ನಂತೆಯೇ ಪರರನ್ನು ಬಗೆ' ಎನ್ನುವಂತೆ ಅವುಗಳ ಮೇಲೆ ಅವಳಿಗಿರುವ ಮಮತೆ ಅಪಾರ. ತನ್ನ ಎಮ್ಮೆಯನ್ನು ಕೊಂದುತಿನ್ನುವ 'ಕಿರುಬ'ನ ಮೇಲೆ ಕೂಡ ಕರುಣೆ ತೋರಿಸುವ ಮಾನವೀಯ ಹೃದಯದ ಮಹಿಳೆಯ ಧೀಮಂತ ಬದುಕಿನ ರೀತಿ ಯನ್ನು ಕತೆ ಚಿತ್ರಿಸುತ್ತದೆ.

ಪಾಪರಚೀಟಿ ಇದೊಂದು ಸಾಧಾರಣ ಕತೆ.

'ಗೆದ್ದಲು ತಿಂದ ಸಂಸ್ಥಾನ' :

ಹಳ್ಳಿಯ ಹಳೆಯ ಅವಿಭಕ್ತ ಕುಟುಂಬದಲ್ಲಿ ಲೇಖಕಿಗೆ ದೊರೆತ ಸಂಸ್ಥಾನ ವೊಂದರ ಕತೆ, ಕಾಲ, ಲೇಖಕರ ಹೆಸರು ಯಾವುದೂ ತಿಳಿಯದಂತೆ ಗೆದ್ದಲು ಹುಳುವಿಗೆ ಆಹಾರವಾದ ಗ್ರಂಥ ಲೇಖಕಿಯ ಕಣ್ಣಿಗೆ ಬೀಳುತ್ತದೆ. ಅದೇ ಗೆದ್ದಲು ತಿಂದ ಸಂಸ್ಥಾ ನದ ಕತೆ. (ಕಾಲಗರ್ಭದಲ್ಲಿ ನಶಿಸಿಹೋದ ಗ್ರಂಥ).

'ಕಾರಣ' :

ಶ್ರೀಮಂತರ ಮನೆಗೆ ಸೊಸೆಯಾಗಿಹೋದ ವಾಸಂತಿ ಅವಳ ತಮ್ಮ ಹೋದಾಗ, ಕಣ್ಣು ಮೂಗು ಒರೆಸಿಕೊಳ್ಳುತ್ತ ಹೊರಗೆ ಬಂದುದರ ಕಾರಣ ಕತೆಯ ಅಂತ್ಯದಲ್ಲಿ ಬಯಲಾಗುತ್ತದೆ. ಕತೆ ಸ್ವಾರಸ್ಯಯುತವಾಗಿದೆ.

'ಅಜ್ಜಿ' 'ನಾ ಒಲ್ಲೆ ಅಪ್ಪಯ್ಯ' 'ನೇಮ', 'ದಯೆ ಎಲ್ಲುಂಟು ಗೊತ್ತುಂಟಾ' ಇವು ಸಂಕಲನ ಉತ್ತಮ ಕತೆಗಳು.

೩. 'ಕವಲು'

ಶ್ರೀಮತಿ ಎಂ. ಕೆ. ಇಂದಿರಾ ಅವರ 'ಕವಲು' ಪ್ರಕಾಶ ಸಾಹಿತ್ಯದಿಂದ ೧೯೭೪ ರಲ್ಲಿ ಪ್ರಥಮ ಮುದ್ರಣವಾಗಿದೆ.

'ಕವಲು' ಎಂಬ ಹೆಸರಿನ ಸಣ್ಣಕತೆ ಹಾಗೂ 'ಕಲಾಸಂಗಮ' ನೀಳ್ಗತೆ ಇದರಲ್ಲಿವೆ. ಕಾದಂಬರಿಕಾರ್ತಿ ಮುನ್ನುಡಿಯಲ್ಲಿ 'ಕವಲು' ನೀಳ್ಗತೆಯೆಂದೂ 'ಕಲಾಸಂಗಮ' ಒಂದು ಕಿರುಕಾದಂಬರಿಯೆಂದೂ ಕರೆದಿದ್ದಾರೆ. 'ಕಲಾಸಂಗಮ' ಕಿರುಕಾದಂಬರಿ ಎನ್ನುವುದಕ್ಕಿಂತ 'ನೀಳ್ಗತೆ' ಎನ್ನಬಹುದು.

ಪದ್ಮ ಹಾಗೂ ವ್ಯವಸಾಯ ಕಾಲೇಜಿನ ಲೆಕ್ಚರರ್ (ಉಪನ್ಯಾಸಕ) ರಾಘವೇಂದ್ರ ಇಬ್ಬರ ವಿದ್ಯೆಯು ಬೇರು ಒಂದೇ ಆದರೂ ಅವರು ತಮ್ಮ ಜೀವನಕ್ಕೆ ಆರಿಸಿಕೊಂಡ ಮಾರ್ಗಗಳು ಭಿನ್ನವಾದವುಗಳು.

ಪದ್ಮ ವ್ಯವಸಾಯ ವಿಭಾಗವನ್ನು ಆರಿಸಿಕೊಂಡು ತನ್ನ ಜೀವನದಲ್ಲೂ ವ್ಯವಸಾಯ ದಲ್ಲೇ ತನ್ನ ಜೀವವನ್ನು ಇಟ್ಟುಕೊಂಡು ಹೊಲದಲ್ಲಿ ದುಡಿಯುವವನನ್ನೇ ಜೀವನ ಸಂಗಾತಿಯನ್ನಾಗಿ ಆರಿಸಿಕೊಳ್ಳುತ್ತಾಳೆ.

ರಾಘವೇಂದ್ರ ಪದ್ಮಳ ವ್ಯಕ್ತಿತ್ವವನ್ನು ಮೆಚ್ಚಿಕೊಂಡು ಮದುವೆಯಾಗಿ ಅವಳಿಗೆ ಪಟ್ಟಣದಲ್ಲೇ ಕೆಲಸ ಕೊಡಿಸಬೇಕೆಂದುಕೊಂಡಿರುತ್ತಾನೆ. ಪದ್ಮಳ ನಿರ್ಧಾರವನ್ನು ತಿಳಿದ ಮೇಲೆ ತನ್ನ ಹಾಗೂ ಪದ್ಮಳ ಅಭಿರುಚಿಯ ಭಿನ್ನ ಮಾರ್ಗವನ್ನು ಅರಿಯು ತ್ತಾನೆ.

'ಕಲಾಸಂಗಮ' :

ಪ್ರಚಾರವನ್ನು ಬಯಸದೆ ಆತ್ಮತೃಪ್ತಿಗಾಗಿ ಕಲೆಯನ್ನು ಪ್ರೀತಿಸುವ ಕಲಾವಿದರು ಜೀವನ ಸಂಗಾತಿಗಳಾಗುತ್ತಾರೆ. ಅದೇ 'ಕಲಾಸಂಗಮ' ನಿರೂಪಣೆ ನೀರಸವಾಗಿದೆ,

೪. 'ಸ್ಫೂರ್ತಿ'

ಶ್ರೀಮತಿ ಎಂ. ಕೆ. ಇಂದಿರಾ ಅವರ ಕಥಾಸಂಕಲನ 'ಸ್ಫೂರ್ತಿ' ೧೯೭೭ರಲ್ಲಿ ಪ್ರಕಟವಾಗಿದೆ. ಅದೇ ಹೆಸರಿನ ಕೊನೆಯ ಕತೆಯನ್ನೊಳಗೊಂಡು ಹನ್ನೆರಡು ಕತೆಗಳು ಈ ಸಂಕಲನದಲ್ಲಿವೆ.

ವಧುಬೇಕಾಗಿದೆ ಕತೆಯಲ್ಲಿ ಸಿಂಗ್ ಕಾಮತ್ ಇವರು ವರಮಾನ ತೆರಿಗೆಯ ಅಧಿಕಾರಿಗಳು ಎಂಬುದು ಕೊನೆಯವರೆಗೂ ತಿಳಿದು ಕತೆ ಅನಿರೀಕ್ಷಿತ ಮುಕ್ತಾಯ ಹೊಂದುತ್ತದೆ. ಸಿಂಗ್, ಕಾಮತ್, ಹಾಗೂ ಸ್ಟೆನೋಟೈಪಿಸ್ಟ್ 'ಹರಿಣಿ' ಮೂವರೂ ಕಳ್ಳಸಾಗಾಣಿಕೆದಾರ ಪ್ರಕಾಶನನ್ನು ಹಿಡಿಯುತ್ತಾರೆ,

'ಮಾರ್ಗದರ್ಶಿ' :

ಶ್ರೀಮಂತ ಕುಟುಂಬದ ಯುವತಿ ಅಶ್ವಿನಿ ತನ್ನನ್ನು ಮದುವೆಯಾಗ ಬಯಸಿದ ಅನಂತಮೂರ್ತಿಗೆ ತನ್ನ ಕಾಯಿಲೆಯನ್ನು ತಿಳಿಸಿ, ಅವನಿಗೆ ಯೋಗ್ಯ ಕನ್ಯೆಯನ್ನು ಮದುವೆಯಾಗುವಂತೆ ಮಾರ್ಗದರ್ಶನ ಮಾಡುತ್ತಾಳೆ.

'ಅವನನ್ನು ದೂರಮಾಡಿ ಅವನ ಮುಂದಿನ ಬಾಳಿಗೂ ಮಾರ್ಗದರ್ಶನ ಮಾಡುವ ಅವಳ ವ್ಯಕ್ತಿತ್ವ ಕಣ್ಣಿಗೆ ಕಟ್ಟುವಂತೆ ಚಿತ್ರಿತವಾಗಿದೆ. ಅವಳ ದಿಟ್ಟತನ ಚಾತುರ್ಯ ಬೆರಗುಗೊಳಿಸುತ್ತದೆ'[1]

'ಹೀನ ಸುಳಿ' :

ಸಂಸಾರಸ್ಥನಾದ ಶೇಷಪ್ಪ ದುಶ್ಚಟಗಳ ದಾಸನಾಗಿ ಊರುಬಿಟ್ಟು ಹೋಗುತ್ತಾನೆ. ಊರವರೆಲ್ಲ ಆತನ ನದಿಯಲ್ಲಿ ಮುಳುಗಿ ಸತ್ತನೆಂದು ಊಹಿಸಿದಾಗ ಅವನ ಹೆಂಡತಿ ವೆಂಕಮ್ಮ ಪರಊರನ್ನು ಸೇರಿ ಕೂಲಿನಾಲಿ ಮಾಡಿ ಜೀವನ ಸಾಗಿಸುತ್ತಾಳೆ. ಆವಳ ಜೀವನ ಒಂದು ನಿಲುಗಡೆಗೆ ಬಂದಾಗ ಕಾಶೀಯಲ್ಲಿ ತನ್ನ ಗಂಡನ ಶ್ರಾದ್ಧ ಮಾಡಿಸುತ್ತಾಳೆ, ಆದರೆ ಶೇಷಪ್ಪ ಅಲ್ಲಿ ಬದುಕಿದ್ದು ಪುನಃ ಕಾಣಿಸಿಕೊಳ್ಳುತ್ತಾನೆ. ಅವನ ಹೀನ ಬುದ್ಧಿ ಹಾಗೇ ಉಳಿದಿರುತ್ತದೆ.

ಶೇಷಪ್ಪ ಗಯೆಯಲ್ಲಿ ಕಾಣಿಸಿಕೊಳ್ಳಬಹುದೆಂದು ಸುಲಭವಾಗಿ ಊಹಿಸಬಹುದು.

'ಕೃತಜ್ಞತೆ' :

ದಾಯಾದಿಗಳ ಜಗಳದಿಂದ ಬೇಸತ್ತು ದಕ್ಷಿಣ ಕನ್ನಡ ಜಿಲ್ಲೆಯ ಅಪ್ಪಣ್ಣನವರು ಪರಸ್ಥಳದಲ್ಲಿ ದೊಡ್ಡವರ ಔದಾರ್ಯದ ನೆರಳಲ್ಲಿ ಆಶ್ರಯ ಪಡೆದು ಸ್ಥಿತಿವಂತರಾಗುತ್ತಾರೆ. ದೊಡ್ಡವರು ತೀರಿದನಂತರ ಅವರ ಮನೆಯಸ್ಥಿತಿ ಹದಗೆಟ್ಟು ಅವರ ಮಗ ವಿಷ್ಣು ಅಡ್ಡದಾರಿ ಹಿಡಿದಾಗ ಅಪ್ಪಣ್ಣನವರು ದೊಡ್ಡವರ ಉಪಕಾರಕ್ಕಾಗಿ ಕೃತಜ್ಞತೆಯಿಂದ ಅವರ ಮನೆತನದ ನೆರವಿಗೆ ನಿಲ್ಲುತ್ತಾರೆ. 'ಹೀನಸುಳಿ'ಯ ಶೇಷಪ್ಪ ಹಾಗೂ 'ಕೃತಜ್ಞತೆ'ಯ ವಿಷ್ಣು ಇಬ್ಬರಿಗೂ ಸ್ವಭಾವದಲ್ಲಿ ವ್ಯತ್ಯಾಸವಿಲ್ಲ.

'ಪಂಜು ಕಳ್ಳರು' :

ಮಲೆನಾಡಿನ ಎಳ್ಳಮವಾಸ್ಯೆ ಜಾತ್ರೆಗೆ ಸಮ್ಮಂಧಿಸಿದ ಕತೆ ಬಹಳ ವರ್ಷಗಳ ಹಿಂದೆ ತೀರ್ಥಹಳ್ಳಿಯ ಜಾತ್ರೆಯಲ್ಲಿ ನಡೆದ ಕಳ್ಳತನದ ಘಟನೆ. ಊರಿನ ಆಗರ್ಭ ಶ್ರೀಮಂತರಾದ ಗುಂಡುರಾಯರ ಮನೆಯಲ್ಲಿ ನಡೆದ ಕಳ್ಳತನದ ವರ್ಣನೆ ಭಯಾನಕವಾಗಿ ಚಿತ್ರಿತವಾಗಿದೆ.

---

1. ಹು. ರಾ. ಜಯದೇವ್ 'ಸಾಹಿತ್ಯ ವಾರ್ಷಿಕ' 1971. ಪುಟ 75

'ಸುಖಾಂತ' :

ರಾಮು. ಕಮಲೆ. ಒಬ್ಬರನ್ನೊಬ್ಬರು ಪ್ರೀತಿಸುತ್ತಿದ್ದರೂ ಮನೆಗಳ ಜಗಳದಿಂದ ದೂರವಾಗುತ್ತಾರೆ. ಇಬ್ಬರಿಗೂ ಬೇರೆ ಕಡೆ ಮದುವೆಯಾಗುತ್ತದೆ. ಅತೃಪ್ತ ಪ್ರೇಮಿಗಳು ಬಹಳ ವರ್ಷಗಳ ನಂತರ ಮತ್ತೆ ಒಂದಾಗಿ ನಿದ್ದೆ ಗುಳಿಗೆ ಸೇವಿಸಿ ತಮ್ಮ ಜೀವನವನ್ನು ಸುಖಾಂತರ ಮಾಡಿಕೊಳ್ಳುತ್ತಾರೆ.

'ಮೃತ್ಯುಂಜಯ' :

ಫ್ಯಾಕ್ಟರಿಯ ಕಾರ್ಮಿಕನೊಬ್ಬನಿಗೆ ಆಸ್ಪತ್ರೆಯಲ್ಲಿ ಹೆಚ್ಚು ಕ್ಲೋರೋಫಾರಂ ಕೊಟ್ಟಿರುತ್ತಾರೆ. ಹೃದಯ ದೌರ್ಬಲ್ಯವುಳ್ಳ. ಆತ ಸತ್ತೇ ಹೋಗಿರಬಹುದೆಂದು ವೈದ್ಯರು ಶವಾಗಾರದಲ್ಲಿ ಮಲಗಿಸುತ್ತಾರೆ. ಆದರೆ ಆತನಿಗೆ ನಿಧಾನವಾಗಿ ಪ್ರಜ್ಞೆ ಬರುತ್ತದೆ.

"ಮೃತ್ಯುಂಜಯ ಸುಂದರವಾದ ಕತೆ ಕತೆಯ ನಿರೂಪಣಾ ವಿಧಾನವೂ ಅಷ್ಟೇ ಚೆನ್ನಾಗಿದೆ. ಕತೆ ವ್ಯಂಗವಾಗಿ ಇಂದಿನ ಆಸ್ಪತ್ರೆಯ ಸ್ಥಿತಿಯನ್ನು ವರ್ಣಿಸುತ್ತದೆ.[1]

'ಸ್ವರ್ಗ ಸುಖವಿಲ್ಲ' :

ಸ್ವರ್ಗದಲ್ಲಿರುವ ರಂಭೆ, ಮೇನಕೆ, ತಿಲೋತ್ತಮೆ. ಊರ್ವಶಿ ಸ್ವರ್ಗದ ನೀರಸ ಜೀವನ ಬೇಸರವೆಂದು ಭೂಲೋಕದ ಜೀವನವೇ ಸುಖವೆಂದೂ ನಿರ್ಣಯಕ್ಕೆ ಬರುತ್ತಾರೆ. ಇದು ಒಂದು ಹರಟೆಯಂತಿದೆ.

"ವೈವಿಧ್ಯವಿಲ್ಲದ ಜೀವನ ಬೇಸರ ಅಗರ ಎಂಬುದನ್ನು ಕತೆ ಧ್ವನಿಸುತ್ತದೆ"[2]

'ಪೋಲಿಸು ಪುಟ್ಟಮ್ಮ' :

ಪೋಲೀಸು ಇಲಾಖೆಗೆ ಚಳ್ಳೆ ಹಣ್ಣು ತಿನ್ನಿಸುತ್ತಿದ್ದ ಕಿಕ್ಕೇರಿ ನಂಜನನ್ನು ಆರಸೀ ಕೆರೆಯ ಪೋಲೀಸ ಇನ್‌ಸ್ಪೆಕ್ಟರ್ ನರಸಿಂಹರಾಯರ ಹೆಂಡತಿ ಪುಟ್ಟಮ್ಮ ಹಿಡಿದ ಕತೆ' ಕತೆಯ ಪ್ರಾರಂಭದ ಬಹುಭಾಗ ಅನವಶ್ಯಕವಾದದ್ದು ಕಥೇರಿಯ ಶಿಲ್ಪ ಜಾಳು ಜಾಳಾಗಿದೆ'[3]

'ಪಶು ವಿಜ್ಞಾನ' :

ಮಲೆನಾಡಿನ ಗೋಪಾಲಕ ದೊಳ್ಳನಿಗೆ ಸಮ್ಮಂಧಿಸಿದ ಕತೆ, ದನಕರು ಪಶುಪಕ್ಷಿ ಕ್ರೂರ ಪ್ರಾಣಿಗಳ ಚಲನವಲನವನ್ನು ಇರುವಿಕೆಯನ್ನು, ಅವುಗಳ ಮನಸ್ಸನ್ನು

---

1. "ಹು. ಕಾ. ಜಯದೇವ್" ಸಾಹಿತ್ಯ ವಾರ್ಷಿಕ 1971. ಪುಟ–75.
2. ಅದೇ ; ಪುಟ–75
3. ಅದೇ ; ಪುಟ

ಗ್ರಹಿಸುತ್ತಿದ್ದ ಸಾಮಾನ್ಯ ದನಗಾಹಿಯೊಬ್ಬನ ಅಸಾಮಾನ್ಯ ಬುದ್ಧಿವಂತಿಕೆಯ ಚಿತ್ರಣ ಇಲ್ಲಿದೆ.

'ಮೌನ ಬಂಗಾರ' :

ಪುಟ್ಟತಾಯಮ್ಮ ಹಾಗೂ ತಮ್ಮಯ್ಯನವರ ಸಂಸಾರದಲ್ಲಿ ಪ್ರವೇಶಮಾಡಿದ ಅಂಬಚ್ಚಿಯನ್ನು ಮನೆಯಿಂದ ಓಡಿಸಿದ ರೀತಿ ಸ್ವಾರಸ್ಯವಾಗಿದೆ. ಸ್ಥಳ ಪಜ್ಞಳಂತೆ ಮೌನಗೌರಿಯಾಗಿದ್ದ ಪುಟ್ಟತಾಯಮ್ಮ ಚತುರತನ ಮೆಚ್ಚುಗೆ ಮೂಡಿಸುತ್ತವೆ.

'ಸ್ಫೂರ್ತಿ' :

ಕಮಲಾಕಾಂತ, ಉಮಾ, ಇಬ್ಬರೂ ಗೆಳೆಯರು. ಕತೆಗಾರರಾಗಬೇಕೆಂದು ಹಂಬಲಕಟ್ಟಿಕೊಂಡವರು. 'ಉಮಾ' ಬರೆದ 'ಸ್ಫೂರ್ತಿ'ಯನ್ನು ಮೆಚ್ಚಿಕೊಂಡ, ಕಮಲಾಕಾಂತ ಪತ್ರ ಬರೆಯುತ್ತಾನೆ. ಆದರೆ ಕತೆ ಬರೆದವರು ಗೆಳೆಯನಲ್ಲ, ಅವನ ಹೆಸರಿನಲ್ಲಿ (ಉಮಾ) ಅವನ ಹೆಂಡತಿಯೆಂದು ಕೊನೆಗೆ ತಿಳಿಯುತ್ತದೆ. ಪತ್ರ ರೂಪ ದಲ್ಲಿ ಕತೆ ನಿರೂಪಿತವಾಗಿದೆ. ಕತೆಯ ನಿರೂಪಣಾ ವಿಧಾನ ಚೆನ್ನಾಗಿದೆ.

'ದಶಾವತಾರ' :

೧೯೭೩ರಲ್ಲಿ ಹೇಮಂತ ಸಾಹಿತ್ಯದಲ್ಲಿ ಪ್ರಕಟವಾಗಿದೆ. ಇದರಲ್ಲಿ ಹತ್ತು ವಿಭಿನ್ನ ರೀತಿಯ ಕತೆಗಳಿವೆ.

'ಕಷ್ಟ-ಸುಖ' :

ಕೂಲಿಕಾರರ ಬದುಕಿನ ಹೋರಾಟದ ಚಿತ್ರಣವು ಇದರಲ್ಲಿದೆ.

'ಉಳುವವನಿಗೆ ಭೂಮಿ' :

ಸ್ವಾಭಿಮಾನಿ, ದಿಟ್ಟತನದ, ಪದ್ಮಾವತಿಯ ಪಾತ್ರ ಓದುಗರ ಮನದಲ್ಲಿ ನಿಲ್ಲುತ್ತದೆ. ಮಲೆನಾಡಿನ ಕತೆಯಿದು.

'ಟೋಪಿ' :

ಅಂತರ್ ಜಾತೀಯ ವಿವಾಹದ ಕತೆಯಿದು.

'ಸೊನ್ನೆ' :

ವಿಲಕ್ಷಣ ಸ್ವಭಾವದವಳೆಂದು ತಿಳಿದ ಯುವತಿ ಇಂದಿರಾಳನ್ನು ಅವಳ ಅಣ್ಣನ ಸ್ನೇಹಿತ ಮದುವೆಯಾಗುತ್ತಾನೆ. ಅವಳ ಸುಕೋಮಲ ಸ್ವಭಾವ ಮುಗ್ಧತೆಯನ್ನು ಮೆಚ್ಚಿಕೊಳ್ಳುತ್ತಾನೆ.

'ಕೊನೆಯ ಮನೆ' :

ಕೂಲಿಕಾರರ ಜೀವನದ ವಿಷಣ್ಣತೆಯನ್ನು ಚಿತ್ರಿಸುವ ಕತೆ, 'ಮಸಣಿ' ಕೂಲಿ ಮಾಡಿ ಜೀವಿಸುವ ಗಂಡನಿಂದ ಶೋಷಿತಳಾಗಿ ತನ್ನ ಕೇರಿಯಿಂದಲೂ ದೂರವಾಗಿ ಸ್ಮಶಾನದಲ್ಲಿ ಮನೆಯಲ್ಲಿ ತನ್ನ ಮಕ್ಕಳಿಗೋಸ್ಕರ ಬದುಕಿ ಉಳಿಯುತ್ತಾಳೆ. ಮಸಣಿಯ ಪಾತ್ರ ಜೀವಂತವಾಗಿದೆ.

'ಗುಡಿಸಲಿನ ಒಳಗೆ' :

ಬೆಂಗಳೂರಿನಂತಹ ದೊಡ್ಡ ದೊಡ್ಡ ನಗರಗಳಲ್ಲಿ ಕಾರ್ಮಿಕರ ಜೀವನವನ್ನು ಚಿತ್ರಿಸುತ್ತದೆ. ಅವರ ಬಂಡತನ, ಮೋಸ, ಅವಹೇಳನ, ಪ್ರತಿಭಟನೆ ಮಬ್ಕರ.

'ಖದೀಮ ಕೊಲೆಗಾರ' :

ಕೊಲೆಗಾರನೇ ರಹಸ್ಯವಾಗಿ ತಾನು ಕೊಲೆ ಮಾಡಿದವರ ವಿವರಣೆಯನ್ನು ತಿಳಿಸುತ್ತಾನೆ. ಪತ್ತೇದಾರಿ ಕತೆಯಂತಿದೆ.

'ಸ್ಮಾರಕ' :

ಪುನೀತ ಜೀವನದಿಂದ ಎಲ್ಲರ ಪ್ರೀತಿಗೌರವಗಳಿಗೆ ಪಾತ್ರರಾದ ವ್ಯಕ್ತಿಯ ಚಿತ್ರಣವಿದೆ.

'ಕುಳ್ಳ' :

ವಿಧವೆ ಶಾಮಲಳ ಅಚಲ ನಿರ್ಧಾರ, ತೀರಿ ಹೋದ ಪತಿಯ ಮೇಲಿನ ಅವಳ ಅಗಾಧ ಪ್ರೇಮದೆದುರು ಅವಳನ್ನು ವಿವಾಹವಾಗಬಯಸಿದ ಕಥಾನಾಯಕ ತಾನು ಅವಳ ವ್ಯಕ್ತಿತ್ವದೆದುರು ಸೋತೆನೆಂದು ಒಪ್ಪಿಕೊಳ್ಳುತ್ತಾನೆ.

'ದೇವರ ಮಕ್ಕಳು' :

ಭಿಕ್ಷುಕ ಮಕ್ಕಳ ಅನಾಥ ಜೀವನದ ಕರುಣಾ ಜನಕ ಕತೆ. ಭಿಕ್ಷುಕರನ್ನು ಅಮಾನುಷ ದೃಷ್ಟಿಯಿಂದ ನೋಡುವ ನಂಜಮ್ಮ ಸಮಾಜದ ಕುಹಕ ವ್ಯಕ್ತಿಗಳ ಪ್ರತಿನಿಧಿ.

೫. 'ಪೌರ್ಣಿಮೆ'

ಹದಿನೈದು ಕತೆಗಳ ಸಂಕಲನ ಪೌರ್ಣಿಮೆ .ಇಂದಿರಾ ಪ್ರಕಾಶನದಿಂದ ೧೯೮೦ರಲ್ಲಿ ಬೆಳಕಿಗೆ ಬಂದಿದೆ. ೧೯೭೩ರಲ್ಲಿ ಪ್ರಕಟವಾದ 'ದಶಾವತಾರ' ಕಥಾ ಸಂಕಲನ ಹತ್ತು ಕತೆಗಳೂ ಸೇರಿ ಮತ್ತೆ ಐದು ಹೊಸ ಕತೆಗಳೊಂದಿಗೆ 'ಪೌರ್ಣಿಮೆ' ಯಾಗಿದೆ.

ಕಷ್ಟಸುಖ, ಉಳುವವನಿಗೆ ಭೂಮಿ, ಟೋಪಿ, ಸೊನ್ನೆ, ಕೊನೆಯ ಮನೆ, ಗುಡಿಸಲಿನ ಒಳಗೆ, ಖದೀಮ ಕೊಲೆಗಾರ ಸ್ಮಾರಕ, ಕುಳ್ಳ, ದೇವರ ಮಕ್ಕಳು, ಈ ಕತೆಗಳ ಪರಿಚಯವನ್ನು 'ದಶಾವತಾರ' ಸಂಕಲನದಿಂದ ಮಾಡಿಕೊಳ್ಳಲಾಗಿದೆ.

ಪ್ರೇಮಿಗಳ ದುರಂತ ಡುಮ್ಮ್ಮಕ್ಕ ಜರೆ, ಕಾಮುಚ್ಚಿಯ ದೆವ್ವ, ನೀತಿ ಚಿಂತಾಮಣಿ ಇವು 'ಪೌರ್ಣಿಮೆ' ಯಲ್ಲಿ ಸೇರಿಸಲಾದ ಹೊಸ ಕತೆಗಳು.

'ಪ್ರೇಮಿಗಳ ದುರಂತ' :

ವ್ಯಾಪಾರಸ್ಥರ ಮಗನನ್ನು ಪ್ರೇಮಿಸಿದ ಹರಿಣಿ ಜಯಸಿಂಹನಿಂದ ವಂಚಿತಳಾಗುತ್ತಾಳೆ. ಸಾಮಾಜಿಕ ಅಂತಸ್ತು, ಹಾಗೂ ಜಾತಿ ವ್ಯವಸ್ಥೆಯಿಂದ ಅವರ ಜೀವನ ದುರಂತವಾಗುತ್ತದೆ.

'ಡುಮ್ಮ್ಮಕ್ಕ' :

ಇದು ಒಂದು ಹರಟೆಯಂತಿದೆ. ಸಂಭಾಷಣೆಯ ರೂಪದಲ್ಲಿರುವ 'ಡುಮ್ಮ್ಮಕ್ಕ' ಸ್ವಾರಸ್ಯಯುತವಾಗಿ ನಿರೂಪಿತವಾಗಿದೆ. ಲೇಖಕಿಯ ಹಾಸ್ಯಪ್ರವೃತ್ತಿ ಚೆನ್ನಾಗಿ ವ್ಯಕ್ತವಾಗುತ್ತದೆ.

'ಜರೆ' :

ವೃದ್ಧಾಪ್ಯದಲ್ಲಿ ಕಥಾನಾಯಕ ಹರೆಯದಲ್ಲಿ ದೇಶದ ಸ್ವಾತಂತ್ರ್ಯ ಹೋರಾಟ ಭಾಗವಹಿಸಿದ ಸನ್ನಿವೇಶವನ್ನು ನೆನಪಿಗೆ ತಂದುಕೊಳ್ಳುತ್ತಾನೆ.

'ಕಾಮುಚ್ಚಿಯ ದೆವ್ವ' :

ಇದು ಸೊಗಸಾದ ಕತೆ. ದೆವ್ವಗಳ ಬಗೆಗೆ ಪ್ರಚಲಿತವಿರುವ ನಂಬಿಕೆಗಳ ಬಗೆಗೆ ಕತೆ ಕನ್ನಡಿ ಹಿಡಿದಿದೆ. ಮಲೆನಾಡಿನ ಹೆಣ್ಣು ಮಕ್ಕಳ ಧೈರ್ಯ, ಚಾಣಾಕ್ಷಕತನ ಬುದ್ಧಿವಂತಿಕೆ ಕಾಮುಚ್ಚಿ ಒಂದು ಉತ್ತಮ ನಿದರ್ಶನ.

'ನೀತಿ ಚಿಂತಾಮಣಿ' :

ಉಪದೇಶವೆಲ್ಲ ಪರರಿಗೆ ಎಂದುಕೊಂಡ ಶಾಸ್ತ್ರಿಗಳನ್ನು ಲೇಖಕಿ ಈ ಕತೆಯಲ್ಲಿ ಲೇವಡಿ ಮಾಡಿದ್ದಾರೆ. ಕಷ್ಟಸುಖ, ಉಳುವವನಿಗೆ ಭೂಮಿ, ಕಾಮುಚ್ಚಿಯ ದೆವ್ವ, ದೇವರ ಮಕ್ಕಳು ಗುಡಿಸಲಿನ ಒಳಗೆ ಇದ್ದ ಇವು ಕಥಾ ಸಂಕಲನದ ಉತ್ತಮ ಕತೆಗಳು.

ಕಷ್ಟಸುಖ ದೇವರ ಮಕ್ಕಳು, ಗುಡಿಸಲಿನ ಒಳಗೆ ಬದುಕಿನ ವೈವಿಧ್ಯವನ್ನು ಚಿತ್ರಿಸುತ್ತವೆ.

೬. 'ಅಂಬರದ ಅಪ್ಸರೆ'

ಶ್ರೀಮತಿ ಎಂ. ಕೆ. ಇಂದಿರಾ ಅವರ 'ಅಂಬರದ ಅಪ್ಸರೆ' ಅದೇ ಹೆಸರಿನ ಕತೆಗಳನ್ನೊಳಗೊಂಡ ಹದಿನಾರು ಕತೆಗಳ ಸಂಕಲನ ೧೯೭೩ರಲ್ಲಿ ಬಾಲಾಜಿ ಪ್ರಕಾಶನದಿಂದ ಪ್ರಥಮವಾಗಿದೆ.

ಅಂಬರದ ಅಪ್ಸರೆಯು ಕಥಾನಾಯಕ ರಾಘವೇಂದ್ರ. ಅವರ ಚಿಕ್ಕಪ್ಪನ ಮಗಳು ಸುಂದರಿಯಾದ ಬರುಲೆಯನ್ನೆ ಅವರ ಸ್ವಂತ ತಂಗಿ ಹಾಡುಗಾತಿ ಕೋಕಿಲೆ ಎಂದು ತಪ್ಪಾಗಿ ಭಾವಿಸಿ ಅವಳನ್ನು ಮೆಚ್ಚಿಕೊಳ್ಳುತ್ತಾನೆ. ಆದರೆ ಮದುವೆಯ ದಿನವೇ ಕುರೂಪಿಯಾದ 'ಕೋಕಿಲೆ' ರಾಘವೇಂದ್ರ ಅವಳ ಸ್ವಂತ ತಂಗಿಯೆಂದು ತಿಳಿದು ಭ್ರಮನಿರಸನವಾಗಿದೆ.

'ಮೋಹಿನಿ' :

ಮೋಹಿನಿಯ ರೂಪ ವರ್ಣನೆಯನ್ನು ತಿಳಿದ ಯುವಕ ಒಂದು ದಿನ ನಟ್ಟನಡು ರಾತ್ರಿ ಕಾಡುದಾರಿಯಲ್ಲಿ ಬರುವಾಗ ಭಯಗೊಂಡು ಭ್ರಮಿತನಾಗುತ್ತಾನೆ. ಕೊನೆಗೆ ಸಾಧಾರಣ ರೂಪಿನ ಹಳ್ಳಿಯ ಹುಡುಗಿಯನ್ನು ಮೆಚ್ಚಿಕೊಳ್ಳುತ್ತಾನೆ,

ಕುರೂಪಿಯ ಆತ್ಮಹತ್ಯೆ :

ಸಮಾಜದ ತಾತ್ಸಾರಕ್ಕೆ ಗುರಿಯಾದ ಹೆಣ್ಣೊಬ್ಬಳು ಕಟುನುಡಿ, ಅವಹೇಳನವನ್ನು ಸಹಿಸಲಾರದೆ ಆತ್ಮಹತ್ಯೆಯಲ್ಲಿ ತನ್ನ ಬದುಕನ್ನು ಕೊನೆಗೊಳಿಸುತ್ತಾಳೆ.

'ನೀವೂ ಮದುವೆಯಾಗುವಿರಾ' ? :

ಮದುವೆಯಾಗಲಿರುವ ವಧೂ–ವರರು ತಮ್ಮ ಅಭಿರುಚಿ ಅಭಿಪ್ರಾಯಗಳನ್ನು ಪರಸ್ಪರ ತಿಳಿದುಕೊಂಡು ಮದುವೆಗೆ ಒಪ್ಪಿಕೊಳ್ಳುತ್ತಾರೆ.

'ಮೋಡ ಸರಿದು ಚಂದ್ರ ಬಂದ' :

ಶಾಲೆಯ 'ಇನ್ಸ್‌ಪೆಕ್ಟರ್' ಆಗಿ ಮಾವನ ಮನೆಗೆ ಬಂದ ಕಥಾನಾಯಕ ತಾನು ಅಳಿಯನೆಂದು ತಿಳಿಸದಂತೆ ತನ್ನ ಕೆಲಸ ಮುಗಿಸಿ ಹೋಗುತ್ತಾನೆ. ಕೊನೆಗೆ ಪತ್ರ ಬರೆದು ತಾನು ಅವರ ತಂಗಿಯ ಮಗನೆಂದೂ, ಅವರ ಮಗಳನ್ನು ಮದುವೆಯಾಗುವುದಾಗಿಯೂ ತಿಳಿಸುತ್ತಾನೆ.

'ಕತೆ ಮೊದಲಿನಿಂದ ರಹಸ್ಯಮಯವಾಗಿದ್ದು, ಕೊನೆಯಲ್ಲಿ ಸ್ಫೋಟವಾಗಿ ಕತೆಯ ಸ್ವಾರಸ್ಯವನ್ನು ಹೆಚ್ಚಿಸಿದೆ.[1]

'ಸೊಸೆ' :

ಯುವತಿಯೊಬ್ಬಳು ತಾನು ಒಲಿದ 'ಸುಂದರ' ಎಂಬ ಯುವಕ ಕಾಯಿಲೆಯಿಂದ ತೀರಿಕೊಂಡರೂ ಅವಿವಾಹಿತೆಯಾಗಿ ಅವನ ತಂದೆ–ತಾಯಿಗಳ ಸೇವೆಗೆ ನಿಲ್ಲುತ್ತಾಳೆ. ಆದರ್ಶವನ್ನು ಸಾರುವ ಕತೆಯಿದು.

---

1. ಹು. ಕಾ. ಜಯದೇವ್ : 'ಸಾಹಿತ್ಯವಾರ್ಷಿಕ' 1973, ಪುಟ–40,

'ಮಲೆನಾಡ ಮಲ್ಲಿಗೆ :

ಹಳ್ಳಿಯ ಜನರ ಬಗ್ಗೆ ತಾತ್ಸಾರವಿದ್ದ ತರುಣ ಮಲೆನಾಡಿನಲ್ಲಿದ್ದ ತನ್ನ ಮಾವನ ಮಗಳ ಮುಗ್ಧ ಚೆಲುವನ್ನು ಕಂಡು ತನ್ನ ವಿಚಾರವನ್ನು ಬದಲಿಸಿಕೊಳ್ಳುತ್ತಾನೆ. ಅವಳನ್ನು ಮದುವೆಯಾಗುತ್ತಾನೆ.

'ನಿಸರ್ಗಧರ್ಮ' :

ಈ ಸಂಕಲನದ ಉತ್ತಮ ಕತೆಗಳಲ್ಲಿ ಒಂದು ಅರವತ್ತು ವರ್ಷದ ವಿಧುರ ಅವಧಾನಿಗಳ ತಮ್ಮ ಮೊದಲ ಹೆಂಡತಿಯ ಮಾತಿನಂತೆ ಸಂತಾನಕ್ಕಾಗಿ ಹದಿನಾರು ವರ್ಷದ ಬಡವರ ಮನೆಯ ಹುಡುಗಿಯನ್ನು ಮದುವೆಯಾಗುತ್ತಾನೆ. ಕೊನೆಗೆ ಅವಳಿಗೆ ಮಗುವಾದದ್ದು ಅಡಿಗೆ ಯುವನಿಂದ ಎಂಬ ಕಟುಸತ್ಯ ತಿಳಿದಾಗ ಸ್ಥಿತಪ್ರಜ್ಞ ರಾದ ಅವಧಾನಿಗಳು ನಿಸರ್ಗ ಧರ್ಮವನ್ನು ಅರಿತು ನಿಶ್ಚಲರಾಗಿಯೇ ಉಳಿಯುತ್ತಾರೆ.

'ವಿರಕ್ತ' :

ಸಂಕಲನದ ಅತ್ಯುತ್ತಮ ಕತೆ. ಜೀವನದಲ್ಲಿ ಎಲ್ಲವನ್ನೂ ಕಳೆದುಕೊಂಡು ಎಲ್ಲ ಮಾನವರನ್ನೂ ಪಶು, ಪ್ರಾಣಿಗಳನ್ನು ಮಾನವೀಯ ಅನುಕಂಪದಿಂದ ನೋಡುತ್ತ ತನ್ನ ಬದುಕನ್ನು ಕಳೆಯುತ್ತಾನೆ. ಆತನ ವ್ಯಕ್ತಿತ್ವ ಚಿತ್ರಣ ಮೈತುಂಬಿಕೊಂಡಿದೆ.

'ಕಾಮಿ' :

ಮೂಕ ಪ್ರಾಣಿ ಕಾಮಿ (ಆಕಳು) ತನ್ನನ್ನು ಸಾಕಿ ಸಲಹಿದ ಒಡತಿ ತೀರಿ ಹೋದಾಗ ಅವಳ ಮಗುವನ್ನು ತನ್ನ ಮಗುವಿನಂತೆ ಕಂಡು ಹಾಲುಣಿಸಿ ಕಾಪಾಡುತ್ತದೆ. ಇದು ಕೂಡ ಒಂದು ಉತ್ತಮ ಕತೆ.

'ಸೋಲು' :

ಈ ಕತೆಗೂ 'ನಿಸರ್ಗ ಧರ್ಮ' ಕ್ಕೂ ಹೆಚ್ಚಿನ ವ್ಯತ್ಯಾಸವಿಲ್ಲ. ಮುದಿ ವಯಸ್ಸಿನಲ್ಲಿ ಬಡವರ ಮನೆಯ ತರುಣಿಯನ್ನು ಮದುವೆಯಾಗಿ ಸೋಲುತ್ತಾರೆ.

'ಬೀಗ' :

'ಬೀಗ' ಮತ್ತು 'ಅಂಬರದ ಅಪ್ಸರೆ' ಜಾನಪದ ಕಥೆಗಳನ್ನು ನೆನಪಿಗೆ ತರುತ್ತದೆ. ಜಾನಪದ ಕತೆಗಳಿಗೆ ಆಧುನಿಕ ರೂಪ ಕೊಟ್ಟಂತೆ ತೋರುತ್ತದೆ.[1]

'ನಾನು ನಾಟಕ ನೋಡಿದೆ' :

ಹಳ್ಳಿಗಳ ನಾಟಕದ ವೈಖರಿಯನ್ನು ವಿವರಿಸಲಾಗಿದೆ.

---

1. ಹಂ. ಕಾ. ಜಯದೇವ 'ಸಾಹಿತ್ಯ ವಾರ್ಷಿಕ' 1973, ಪುಟ–80.

'ಮುಗಿದ ಕತೆ' :

ತರುಣನ ಪ್ರೀತಿಯಿಂದ ವಂಚಿತಳಾದ ಯುವತಿ ಸಿನಿಮಾ ನಟನೇ ತನ್ನ ಪ್ರಿಯಕರ ಪಾಂಡು ಎಂದು ಭ್ರಮಿಸುತ್ತಾಳೆ. ಅವನು ಪಾಂಡುವಲ್ಲವೆಂದು ತಿಳಿದಾಗ ಶರಾವತಿಯಲ್ಲಿ ಧುಮುಕಿ ಜೀವನವನ್ನು ಕೊನೆಗೊಳ್ಳಿಸಿಕೊಳ್ಳುಸುತ್ತಾಳೆ.

'ತುಂಗೆಯ ನದಿಯಲ್ಲಿ'

ಕಥೆಯಲ್ಲಿ ಸುಮನಾಳ ಮಾನಸಿಕ ಪರಿವರ್ತನೆ ಇನ್ನಷ್ಟು ಕಾರಣಗಳು ಬೇಕು ಎನಿಸುತ್ತದೆ.[1]

'ಕುರುಡುಕಲೆ' :

ಕುಂಟನಾಗಿದ್ದ ದನಗಾಹಿಯೊಬ್ಬ ಮೋಟುಮರದಲ್ಲಿ ದೈವದತ್ತವಾಗಿ ಬಂದಿದ್ದ ಕಲೆಯಿಂದ ಮಾರುತಿಯನ್ನು ಕೆತ್ತುತ್ತಾನೆ. ಸಾಮಾನ್ಯ ದನಗಾಹಿ ಹುಡುಗನ ಅಸಾಮಾನ್ಯ ಕಲೆಯ ದರ್ಶನವಿದೆ.

ಇದೊಂದು ಒಳ್ಳೆಯ ಕಥಾ ಸಂಗ್ರಹ ಕುರುಡಕಲೆ, ಮಲೆನಾಡ ಮಲ್ಲಿಗೆ, ಕಾಮಿ ಮೋಹಿನಿ, ಇವೆಲ್ಲ ಮಲೆನಾಡಿನ ಕತೆಗಳು.

೭. 'ಕಲ್ಪನಾ ವಿಲಾಸ'

ಶ್ರೀಮತಿ ಇಂದಿರಾ ಅವರ ಕಥಾಸಂಕಲನ ಕಲ್ಪನಾ ವಿಲಾಸ ೧೯೭೪ರಲ್ಲಿ ಪ್ರಕಾಶ ಸಾಹಿತ್ಯದಲ್ಲಿ ಪ್ರಥಮ ಮುದ್ರಣವಾಗಿದೆ. ನಾಡಿನ ಪತ್ರಿಕೆಗಳಲ್ಲಿ ಆಗಾಗ ಪ್ರಕಟವಾದ ಕತೆಗಳನ್ನು ಸೇರಿಸಿ, ಕೆಲವು ಹೊಸ ಕತೆಗಳೊಂದಿಗೆ 'ಕಲ್ಪನಾ ವಿಲಾಸ' ವಾಗಿ ಬಂದಿದೆ.

ಕಲ್ಪನಾವಿಲಾಸ, ಎದುರು ಮನೆಯ ಹುಡುಗಿ, ಇದು ಭ್ರಮೆಯೇ, ಹೆದರಬೇಡಿ, ತಿದ್ದುಪಡಿ, ಶಿಲ್ಪ ಸತ್ಕಾರ ಕಲ್ಲುಮ್ಮೆ, ಹೂಮನ, ಪ್ರೇಮ ಕುರುಡಲ್ಲ, ವೀರಚಕ್ರ, ದುರ್ದಾನ, ದೇಶಾಂತರ ಸುಡುಗಾಡು ಮತ್ತು ಕೆರೆ ಒಟ್ಟು ಹನ್ನೆರಡು ಕತೆಗಳು ಈ ಸಂಕಲನದಲ್ಲಿವೆ.

ಯುವತಿಯರ ಕಲ್ಪನಾ ಲೋಕಕ್ಕೆ ಈ ಕತೆ ಸಂಬಂಧಿಸಿದೆ. ಸುಂದರ ರೂಪದ ತರುಣ ದಂಪತಿಗಳು ಮಹಡಿಯ ಮನೆಗೆ ಬಾಡಿಗೆ, ಬಂದಾಗ, ಅದೇ ಬೀದಿಯಲ್ಲಿ ವಾಸಿಸುವ ಕಾಲೇಜು ಯುವತಿಯರೆಲ್ಲ ಅವರ ಸೌಂದರ್ಯ, ಕೆಲಸ, ಇತ್ಯಾದಿಗಳ ಬಗೆಗೆ ನಾನಾ ರೀತಿಯ ಊಹೆ, ಕಲ್ಪನೆಗಳನ್ನು ಮಾಡಿಕೊಳ್ಳುತ್ತಾರೆ. ಆದರೆ ಅವರ ಮನೆಗೆ ತಾವಾಗಿಯೇ ಹೋಗಿ ಮಾತನಾಡಿಸಲು ಯುವತಿಯರಿಗೆ ಸ್ವಾಭಿಮಾನ ಅಡ್ಡ ಬರುತ್ತದೆ

---

1. ಅದೇ ; ಪುಟ–40.

ಅಂತೂ ಕೊನೆಗೆ ದಿಟ್ಟ ಸ್ವಭಾವದ ಬಾಲಿ ಮನೆಯೊಡತಿಯು ಗಂಡನಿಲ್ಲದ ವೇಳೆಯಲ್ಲಿ ಮನೆಗೆ ನುಗ್ಗುತ್ತಾಳೆ. ಮನೆಯಾಕೆಯ ಗಂಡ 'ಕಲ್ಪನಾವಿಲಾಸ' ಹೋಟೇಲಿನಲ್ಲಿ ಅಡಿಗೆ ಮಾಡುತ್ತಿರುತ್ತಾನೆಂದು ತಿಳಿದಾಗ ಇವರ ಕಲ್ಪನೆಯ ಲೋಕವೇ ಬೇರೆ, ವಾಸ್ತವ ಜಗತ್ತಿರುವದೇ ಬೇರೆ ಎಂಬುದು ಈ ಕತೆಯಲ್ಲಿದೆ.

'ಎದುರುಮನೆ ಹುಡುಗಿ' :

ತರುಣನೊಬ್ಬ ಎದುರುಮನೆಯಲ್ಲಿ ವಾಸಿಸುತ್ತಿದ್ದ ಸುಂದರ ತರುಣ ದಂಪತಿಗಳನ್ನು ಅಣ್ಣ ತಂಗಿಯರೆಂದು ಭಾವಿಸಿ ಅದರಲ್ಲಿ ತಂಗಿ ಎಂದುಕೊಂಡವಳಲ್ಲಿ ಆಕರ್ಷಿತವಾಗಿ ಕನಸು ಕಾಣುತ್ತಾನೆ. ಅವಳ ಅತ್ತೆಮಾವಂದಿರನ್ನು ತಂದೆ-ತಾಯಿ ಎಂದು ಭಾವಿಸುತ್ತಾನೆ. ಕಾರಣ ಅವರ ಚೆಲ್ಲಾಟ. ಅತ್ತೆಮಾವನೊಡನೆ ಸಲಿಗೆ, ಅರಿಷಿಣ ಕುಂಕುಮಕ್ಕೆ ಕರೆಯಲು ಬಂದಾಗ ಆ ಹುಡುಗಿಯೇ ತನ್ನ ಮದುವೆಯಾಗಿದೆ ಎಂದು ಹೇಳಿದಾಗ ಇವನ ಕಲ್ಪನಾ ಲೋಕದಿಂದ ವಾಸ್ತವ ಜಗತ್ತಿಗೆ ಬರುತ್ತಾನೆ.

'ಇದು ಭ್ರಮೆಯೆ' :

ಒಂದೇ ಕಚೇರಿಯಲ್ಲಿ ಕೆಲಸ ಮಾಡುವ ಸ್ನೇಹಿತರು ಯಶವಂತ ಹಾಗೂ ಕೀರ್ತಿ ಯಶವಂತ ತನ್ನ ಕಚೇರಿಯಲ್ಲಿ ಕೆಲಸ ಮಾಡುವ ವಾರಿಜಳನ್ನು ಪ್ರೀತಿಸುತ್ತಾನೆ. ಅವರು ಮದುವೆಯ ನಿರ್ಣಯಕ್ಕೆ ಬಂದಾಗ ಸ್ನೇಹಿತ ಕೀರ್ತಿ ಅವರಿಗೆ ಸಹಾಯ ಮಾಡುತ್ತಾನೆ.

ಕೀರ್ತಿಗೆ ವಾರಿಜಳ ಸದ್ಗುಣ, ನಂಬಿಕೆ ಧೈರ್ಯದ ಬಗೆಗೆ ಅಭಿಮಾನ, ಗೌರವವೂ ಇರುತ್ತದೆ. ಒಮ್ಮೆ ಮೂವರು ಹರಟುತ್ತಿದ್ದಾಗ ಕೀರ್ತಿ ವಾರಿಜಳಿಗೆ ನೀವು ಯಶವಂತನ ಮೇಲಿಟ್ಟಿರುವಷ್ಟೇ ನಂಬಿಕೆ, ನಿಮ್ಮಷ್ಟೆ ಧೈರ್ಯ ಇದ್ದರೆ ಸಾಕು. ಅಂತಹ ಕನ್ಯೆಯನ್ನು ಮದುವೆಯಾಗುತ್ತೇನೆಂದು ಹೇಳುತ್ತಾನೆ. ಈ ಮಾತು ದುರ್ಬಲ ಮನದ ಯಶವಂತನಲ್ಲಿ ಮೊಳೆತು ವಾರಿಜ ತನ್ನ ಹೆಂಡತಿಯೇ ಅಲ್ಲವೆಂದು ಭ್ರಮಿತನಾಗುತ್ತಾನೆ.

ಸ್ನೇಹಿತನ ಸ್ನೇಹ. ಸಲಿಗೆ ಇಲ್ಲಿ ದಾಂಪತ್ಯ ಜೀವನದ ವಿಫಲತೆಗೆ ಕಾರಣವಾಗುತ್ತದೆ.

'ಹೆದರಬೇಡಿ' :

ಮಲೆನಾಡಿಗೆ ಪ್ಲೇಗು ಬಂದಾಗ ನಡೆದ ಕತೆ ಇದು. ಚಿಬ್ಬಲುಗಡ್ಡೆ ಗ್ರಾಮದವರೆಲ್ಲ ಪ್ಲೇಗು ಬಂದಾಗ ಊರು ಬಿಟ್ಟು ಪರ ಊರಿಗೆ ಹೋಗಿ ನೆಲೆಸಿದರೂ ಅವನ ತಾಯಿ ಅಚ್ಚಂದಿ ಹಾಗೂ ತಮ್ಮಾಭಟ್ಟ ಇಬ್ಬರೂ ಭಂಡ ಧೈರ್ಯಮಾಡಿ ಊರಲ್ಲಿಯೇ ಉಳಿಯುತ್ತಾರೆ. ತಮ್ಮಾಭಟ್ಟನೂ ಪ್ಲೇಗಿಗೆ ಬಲಿಯಾದಾಗ ಉಳಿದವಳು ಅಚ್ಚಂದಿಯೊಬ್ಬಳೇ.

ಪ್ಲೇಗಿನಿಂದ ತೀರಿಕೊಂಡದ್ದರಿಂದ ಅವರ ಶವ ವಿಕಾರವಾದದ್ದನ್ನು ಕಂಡು ಚಿಬ್ಬಲುಗಡ್ಡೆಗೆ ಮರಳಿ ಬಂದು ಅಗ್ರಹಾರದವರೆಲ್ಲ ತಮ್ಮಾಭಟ್ಟ ದೆವ್ವವಾಗಿರುವನೆಂದು ಕಥೆ ಕಟ್ಟುತ್ತಾರೆ. ತಾನು ಕೈಯಾರೆ ಕೊಂದ ಸೊಸೆಯೇ ತನ್ನ ಮಗನ ಶವದಲ್ಲಿ ಪ್ರವೇಶವಾಗಿರಬಹುದೆಂದು ಭ್ರಮಿತಳಾಗುತ್ತಾಳೆ. ತಾನು ಮಾಡಿದ ತಪ್ಪನ್ನು ಅಚ್ಚಂದಿ ಕೊನೆಗಾಲದಲ್ಲಿ ತಾನೇ ಹೇಳಿಕೊಳ್ಳುತ್ತಾಳೆ.

ದೆವ್ವಗಳ ಕಲ್ಪನೆ ಕೇವಲ ಭ್ರಮೆ ಎಂಬುದನ್ನು ಲೇಖಕಿ ಈ ಕತೆಗಳು ಮೂಲಕ ಹೇಳಿದ್ದಾರೆ.

'ತಿದ್ದುಪಡಿ' :

ಕೃತ್ರಿಮ ಸೌಂದರ್ಯ ಸಾಧನಗಳಿಂದ ಆಗುವ ಅವಾಂತರವನ್ನು ಈ ಕತೆಯಲ್ಲಿ ಸ್ವಾರಸ್ಯಯುತವಾಗಿ ನಿರೂಪಿಸಿದ್ದಾರೆ.

'ಶಿಲ್ಪ' :

ಚಂದ್ರು–ರೋಹಿಣಿ ಪ್ರೇಮಿಗಳು. ರೋಹಿಣಿ ಮನೆಯ ಬಡತನದಿಂದಾಗಿ ಧನಿಕನೊಬ್ಬನ ಪತ್ನಿಯಾಗುತ್ತಾಳೆ. ಭಗ್ನ ಹೃದಯಿಯಾದ ಚಂದ್ರು ರೋಹಿಣಿಯನ್ನು ಮರೆಯಲು ಎಂಟು ವರ್ಷ ಶಿಲ್ಪಕಲೆಯನ್ನು ಅಭ್ಯಾಸಮಾಡಿ, ಆಕಸ್ಮಿಕವಾಗಿ ರೋಹಿಣಿಯ ಗಂಡ ಕಟ್ಟಿಸುತ್ತಿದ್ದ ದೇವಾಲಯದ ಕಾಮಾಕ್ಷಿಯ ವಿಗ್ರಹ ಕೆತ್ತಲು ಬರುತ್ತಾನೆ. ವಿಗ್ರಹವನ್ನು ನೋಡಲು ಬಂದಾಗ ಅದನ್ನು ಕೆತ್ತಿದವನು ಬೇರೆಯಾರೂ ಆಗಿರದೆ ಅದು ಚಂದ್ರು ಎಂಬುದು ರೋಹಿಣಿಗೆ ತಿಳಿಯುತ್ತದೆ. ಪ್ರೇಮಿಗಳು ಒಂದಾಗುತ್ತಾರೆ. ಅವರ ಅಮರ ಪ್ರೇಮದ ಸಾಕ್ಷಿಯಾಗಿಯೆ ಎಂಬಂತೆ ಚಂದ್ರು ರೋಹಿಣಿಯನ್ನೇ ಕಾಮಾಕ್ಷಿ ದೇವತೆಯನ್ನಾಗಿ ಕೆತ್ತಿರುತ್ತಾನೆ.

'ಸತ್ಕಾರ' :

ಪರ್ವತಾರೋಹಿಣಿಯೊಬ್ಬ ಹಿಮಾಲಯದ ಸಾವಿನ ದವಡೆಯಲ್ಲಿದ್ದಾಗ ಅಲ್ಲಿ ವಾಸವಾಗಿದ್ದ ಕಾಡು ಜನರು ಅವನನ್ನು ಬದುಕಿಸಿ ಉಪಚರಿಸುತ್ತಾರೆ. ಅವರ ಅತಿಥಿ ಸತ್ಕಾರದ ರೀತಿಯನ್ನು ಈ ಕತೆಯಲ್ಲಿ ಚಿತ್ರಿಸಿದ್ದಾರೆ. ಅತಿಥಿಗಳ ಬಗೆಗೆ ಅವರಿಗಿದ್ದ ಶ್ರದ್ಧೆ, ಮುಗ್ಧತನವನ್ನು ಇಲ್ಲಿ ಕಾಣುತ್ತೇವೆ.

'ಕಲ್ಲುಮನೈ ಹೂಮನ' :

ಅಡಿಗೆಯ ಮಹಾಬಲನ ಪರೋಪಕಾರವನ್ನು ಸಾರುವ ಕತೆ ಇದು. ಮದುವೆ ಮನೆಯಲ್ಲಿ ಗಂಡಿನವರು, ಹೆಣ್ಣಿನವರಿಂದ ಸಾಕಷ್ಟು ಹಣ ಕಿತ್ತುಕೊಳ್ಳುವದಕ್ಕಾಗಿ ವಧುವಿಗೆ 'ತೊನ್ನು' ಎಂದು ಕೂಗಾಡಲು ಪ್ರಾರಂಭಿಸುತ್ತಾರೆ. ಅವರ ಕುತಂತ್ರಕ್ಕೆ ರೋಸಿ ಮಹಾಬಲ, ವಧುವಿನ ಮನೆಯಲ್ಲಿ ವಾರನ್ನದಿಂದ ವಿದ್ಯಾಸಂಪನ್ನನಾದ ಒಬ್ಬ ಯುವಕನೊಂದಿಗೆ ಮದುವೆ ಏರ್ಪಾಟು ಮಾಡುತ್ತಾನೆ.

‘ಪ್ರೇಮ ಕುರುಡಲ್ಲ’ :

ಈ ಕಥೆಯಲ್ಲಿ ಲೇಖಕಿ ಪ್ರೇಮ ನಿಸರ್ಗ ಸಹಜ. ಅದು ವಿಶ್ವರೂಪಿ ಎಂಬುದನ್ನು ಭಿಕ್ಷುಕರಾಗಿದ್ದ ಕುಂಟಿ–ಕುರುಡರ ಕತೆಯ ಮೂಲಕ ಹೇಳಿದ್ದಾರೆ.

‘ವೀರಚಕ್ರ’ :

ರಣರಂಗದಲ್ಲಿ ಶೂರತನದಿಂದ ಕಾದಿ ವೀರಚಕ್ರ ಪಡೆದ ಶಿವಾಜಿ ತನ್ನ ಹಳ್ಳಿಗೆ ಹಿಂತಿರುಗಿ ಬರುತ್ತಾನೆ. ರಾತ್ರಿ ಮನೆಯಲ್ಲಿದ್ದ ಸೊಳ್ಳೆ, ತಗಣೆ, ಸುಂಡಿಲಿಗೆ ಹೆದರಿ ನಿದ್ರಿಸದೇ ಇದ್ದಾಗ ಅವನ ಮುದ್ದಿನ ಮಡದಿ ‘ಹೊನ್ನಿ’ ಸುಂಡಿಲಿಯನ್ನು ಕೈಯಲ್ಲಿ ಹಿಡಿದು ಬೀಸಾಕಿ ಗಂಡನ ಶೌರ್ಯವನ್ನು ಕುಚೋದ್ಯ ಮಾಡುವದನ್ನು ಲೇಖಕಿ ವೀರ ಚಕ್ರ ಕತೆಯಲ್ಲಿ ತಿಳಿಹಾಸ್ಯ ಶೈಲಿಯಲ್ಲಿ ಸ್ವಾರಸ್ಯಯುತವಾಗಿ ನಿರೂಪಿಸಿದ್ದಾರೆ.

‘ದುರ್ದಾನ’ :

ಮೂಢನಂಬಿಕೆಗೆ ಸಂಬಂಧಿಸಿದ ಕತೆ. ಎಳ್ಳು, ಎಣ್ಣೆ ಬೂದುಗುಂಬಳಕಾಯಿ ಕತ್ತಿ, ಕೊಡಲಿ, ಇವುಗಳನ್ನು ಒಬ್ಬ ಬ್ರಾಹ್ಮನಿಗೆ ದುರ್ದಾನ ಮಾಡಿದರೆ ಹಿಡಿದ ಕಾಯಿಲೆ ಪರಿಹಾರವಾಗುವುದೆಂದು ನಂಬಿ ಧನಿಕರೊಬ್ಬರು ಬ್ರಾಹ್ಮಣನಿಗೆ ದಾನ ಮಾಡುತ್ತಾರೆ.

ದುರ್ದಾನ ಸ್ವೀಕರಿಸಿದವರು ಕೆಲವೇ ದಿನಗಳಲ್ಲಿ ಸಾಯುತ್ತಾರೆಂಬುದು ನಂಬಿಕೆ. ಊರವರೆಲ್ಲರೂ ಅದನ್ನು ನಿರಾಕರಿಸಿದಾಗ ಹತ್ತು ಹನ್ನೆರಡು ಮಕ್ಕಳನ್ನು ಕಟ್ಟಿಕೊಂಡು ಬಡತನದಲ್ಲಿ ಬಾಳುತ್ತಿದ್ದ ತಮ್ಮಾಭಟ್ಟ ದುರ್ದಾನ ಸ್ವೀಕರಿಸಿ ನೆಮ್ಮದಿಯ ಜೀವನ ಕಳೆಯುತ್ತಾನೆ.

‘ದೇಶಾಂತರ ಸುಡುಗಾಡು ಮತ್ತು ಕೆರೆ’ :

ಸಂಸಾರದಲ್ಲಿ ವಿರಸವಿದ್ದರೂ ಗಂಡ–ಹೆಂಡತಿ ಬಾಳುವ ಕತೆ ದೇಶಾಂತರ ಸುಡುಗಾಡ ಮತ್ತು ಕೆರೆ.

೮. ‘ಪವಾಡ’

೧೯೭೭ರಲ್ಲಿ ಪ್ರಕಟವಾದ ಈ ಸಂಕಲನದಲ್ಲಿ ಹದಿನೈದು ಸಣ್ಣಕತೆಗಳಿವೆ. ಹಿಂದೆ ಪ್ರಕಟವಾದ ‘ಸ್ಫೂರ್ತಿ’ ಕಥಾಸಂಕಲನಕ್ಕೇ ಮತ್ತೆ ಮೂರು ಹೊಸ ಕತೆಗಳನ್ನು ಸೇರಿಸಿ ಅದನ್ನೇ ಪವಾಡ ಎಂದಿದ್ದಾರೆ—ಲೇಖಕಿ.

ವಧು ಬೇಕಾಗಿದೆ, ಮಾರ್ಗದರ್ಶಿ, ಹೀನಸುಳಿ, ಕೃತಜ್ಞತೆ ಪಂಜುಕಳ್ಳರು, ಸುಖಾಂತ, ಮೃತ್ಯುಂಜಯ, ಸ್ವರ್ಗದಲ್ಲಿ ಸುಖವಿಲ್ಲ, ಪೊಲೀಸು ಪುಟ್ಟಮ್ಮ, ಪಶು ವಿಜ್ಞಾನಿ, ಮೌನ ಬಂಗಾರ, ವಾರಂಟ್ ಫಲಹಾರ, ಪವಾಡ–ಈಕತೆಗಳು ಈ ಸಂಕಲನದಲ್ಲಿವೆ,

ವಾರಂಟ್, ಫಲಹಾರ, ಪವಾಡ ಇವು ಮೂರು ಈ ಸಂಕಲನದಲ್ಲಿ ಸೇರಿಸಿದ ಹೊಸ ಕತೆಗಳು.

'ವಾರಂಟ್' :

ಮಲೆನಾಡಿನ ಜನರ ಬದುಕನ್ನು ಕತೆಗಾರ್ತಿ ಇಲ್ಲಿ ಸ್ವಾಭಾವಿಕವಾಗಿ ಚಿತ್ರಿಸಿದ್ದಾರೆ, 'ಮೂಡಲಮನೆಯ ಸೀತಾರಾಮು'ನ ಕುಹಕತನ ಕಿತಾಪತಿ ಬುದ್ಧಿ, ಸಾಲಗಾರರಿಂದ ತಪ್ಪಿಸಿಕೊಳ್ಳುವದಕ್ಕಾಗಿ ಆಸ್ತಿ ಮಾರಾಟದ ಬಗ್ಗೆ ಸುಳ್ಳು ಪತ್ರ ಸೃಷ್ಟಿಮಾಡಿ, ಅದೇ ಮನೆಯಲ್ಲಿ ಇದ್ದು ಮಡಿ ಹೆಂಗಸಿನಂತೆ ವೇಷಮರೆಸಿಕೊಂಡು ಸಾಲಗಾರರ ಕಣ್ಣಿಗೆ ಮಣ್ಣೆರಚುವ ಮೋಸತನವನ್ನು ಸ್ವಾರಸ್ಯಯುತವಾಗಿ ಲೇಖಕಿ ನಿರೂಪಿಸಿದ್ದಾರೆ.

'ಫಲಹಾರ' :

ಇಂದಿಗೆ ಸುಮಾರು ಐವತ್ತು ವರ್ಷಗಳ ಹಿಂದೆ ಶಿವಮೊಗ್ಗೆಯಲ್ಲಿ ಲೇಖಕಿ ಕಂಡ ಒಂದು ಅವಿಭಕ್ತ ಕುಟುಂಬದ ಸಾಮರಸ್ಯ. ಸುಖ ಸಮೃದ್ಧಿಯ ಚಿತ್ರಣವನ್ನು ಕೊಟ್ಟಿದ್ದಾರೆ. ಆ ಕುಟುಂಬದ ಪೋಲಿಸ್ ಇನ್‌ಸ್ಪೆಕ್ಟರರ 'ಫಲಹಾರ'ದ ವೈಖರಿಯನ್ನು ಲೀಲಾ ಜಾಲವಾಗಿ ವರ್ಣಿಸಿದ್ದಾರೆ.

'ಪವಾಡ' :

ಈ ಸಂಕಲನದ ಹೆಸರಾದ ಕತೆ ಇದು ಬಾಲಿಶ ಬುದ್ಧಿಯ ಗಾಯಕನೊಬ್ಬ ಪಾನಕ ಕುಡಿದರೆ ತನ್ನ ಕಂಠ ಕೆಟ್ಟು ಹೋಗುತ್ತದೆ. ಎಂದು ಭಾವಿಸಿರುತ್ತಾನೆ. ಮಿತ್ರರೆಲ್ಲ ಸೇರಿ ಒಂದು ದಿನ ಬಲವಂತವಾಗಿ ಪಾನಕ ಕುಡಿಸಿದಾಗಿ ಅವನ ಕಂಠ ಒಡೆದು ಹೋಗುತ್ತದೆ. ಅಳುಕು ಮನಸ್ಸಿನ 'ಬಾನು' ಪಾನಕ ಕುಡಿದುದರಿಂದಲೇ ತನ್ನ ಕಂಠ ಕೆಟ್ಟು, ಹಾಡಲು ಸಾಧ್ಯವಾಗುತ್ತಿಲ್ಲ ಎಂದು ಮನಸ್ಸಿಗೆ ಹಚ್ಚಿಕೊಂಡು ಕೊರಗುತ್ತಾನೆ. ಆತ್ಮಹತ್ಯೆಗೂ ಸಿದ್ಧನಾಗುತ್ತಾನೆ.

ಅವನ ಮಿತ್ರ ರಾಘವೇಂದ್ರ ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕೆಂದು ನಿರ್ಧರಿಸಿ, ತನ್ನ ದೊಡ್ಡಮ್ಮನಿಂದ ಮಂತ್ರ ಹಾಕಿಸುವ ನಾಟಕವಾಡುತ್ತಾನೆ. 'ಬಾನು' ವಿನ ಕಂಠ ಸರಿಹೋಗುತ್ತದೆ. ಇದೇ ಪವಾಡ.

೯. 'ಮೋಹನ ಮಾಲೆ'

ಇದು ಶ್ರೀಮತಿ ಇಂದಿರಾ ಅವರ ಎಂಟನೆಯ ಕಥಾಸಂಕಲನ. ೧೯೮೦ರಲ್ಲಿ ಪ್ರಕಾಶ ಸಾಹಿತ್ಯದಿಂದ ಈ ಸಂಕಲನ ಹೊರಬಂದಿದೆ.

ಈ ಸಂಕಲನದಲ್ಲಿ ಚೆಲುವರಸ, ನ್ಯಾಯಾಲಯ, ಇದು ಕಥೆಯಲ್ಲ ವ್ಯಥೆ, ಕನಸಿನ ಲೋಕಕ್ಕೆ ಪಯಣ, ಉದಯಾಸ್ತ. ದೀಪಾವಳಿ, ಆಯುಸ್ಸಿದ್ದರೆ, ಜಾಣೆ, ಯಾತ್ರಿಕ ವಿಶೇಷ, ಹ್ರಾಂ, ಹ್ರೀಂ, ಹ್ರೂಂ, ಚಿಟ್ಟೆ ಇವೇ ಒಟ್ಟು ಹನ್ನೆರಡು ಕತೆಗಳಿವೆ.

'ಚೆಲುವರಸ' :

ಮಧ್ಯಮವರ್ಗದ ಕುಟುಂಬದ ಕನ್ನೆಯನ್ನು ವಿವಾಹವಾಗುವ ನಾಟಕವಾಡಿ ಅವರಿಂದ ಸಾಕಷ್ಟು ಹಣ ಕಿತ್ತುಕೊಳ್ಳುವ ಮೋಸಗಾರನ ಕತೆ ಇದು. ಸಮಾರು ಅರವತ್ತು ವರಗಳ ಮುಂದೆ ಕುಳಿತು ನಿರಾಶಳಾದ 'ಜಾನಕಿ' ಸುಂದರ ರೂಪದ ರಂಗಸ್ವಾಮಿ ಒಪ್ಪಿದಾಗ ವಿವಾಹ ಜೀವನದ ಸುಂದರ ಕನಸುಗಳನ್ನು ಹೆಣೆಯುತ್ತಾಳೆ. ರಂಗಸ್ವಾಮಿ ಸಾಕಷ್ಟು ಹಣ ಕಿತ್ತುಕೊಂಡು ಸುಳ್ಳುವಿಳಾಸ ಕೊಟ್ಟು ವಂಚಿಸಿ ಓಡಿ ಹೋಗುತ್ತಾನೆ. ಮಧ್ಯಸ್ಥಿತಿಕೆ ವಹಿಸಿದ ಮಂಜಪ್ಪನವರೂ ಸಹ ಈ ವಂಚನೆಯಲ್ಲಿ ಪಾಲುದಾರರಾಗುತ್ತಾರೆ.

'ನ್ಯಾಯಾಲಯ' :

ನ್ಯಾಯಾಲಯದಲ್ಲಿ ಸುಳ್ಳನ್ನು ಸತ್ಯಮಾಡುವ, ಸತ್ಯವನ್ನು ಸುಳ್ಳೆಂದು ಸಾಧಿಸುವ ನ್ಯಾಯಾಧೀಶರ, ಭ್ರಷ್ಟಾಚಾರವನ್ನು ಈ ಕತೆ ತೋರಿಸುತ್ತದೆ. ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಕೆಲಸಕ್ಕಿದ್ದ ಮರುಳಯ್ಯ ವಿದ್ಯುತ್ ಕರೆಗಂಟೆಯನ್ನು ಕದ್ದನೆಂಬ ಆಪಾದನೆಯ ಮೇರೆಗೆ ಪೋಲೀಸರ ವಶವಾಗುತ್ತಾನೆ. ಮರುಳಯ್ಯ ಆಕಸ್ಮಿಕವಾಗಿ ಲಾಟರಿಯಲ್ಲಿ ಬಂದ ದುಡ್ಡನ್ನು ನ್ಯಾಯಾಧೀಶನಿಗೆ ಕೊಟ್ಟು ತನ್ನ ಮೇಲಿನ ಆಪಾದನೆಯಿಂದ ಬಿಡುಗಡೆಯಾಗುತ್ತಾನೆ.

'ಇದು ಕತೆಯಲ್ಲ ವ್ಯಥೆ' :

ಇಬ್ಬರು ಸ್ನೇಹಿತೆಯರ ವಿಶ್ವಾಸಕ್ಕೆ ಸಂಬಂಧಿಸಿದೆ, ಸಾಗರಿ–ಲಾಲಿ ಇಬ್ಬರು ಸ್ನೇಹಿತೆಯರು. ಲಾಲಿಯ ಅಣ್ಣ ಜನಜಂಗುಳಿಯ ಗಲಭೆಯಲ್ಲಿ ಸಿಕ್ಕು, ನಿರಪರಾಧಿಯಾಗಿದ್ದರೂ ವಿನಾಕಾರಣ ಜೇಲು ವಾಸವನ್ನನುಭವಿಸುತ್ತಾನೆ. ಜೇಲಿನವರ ಅಮಾನುಷ ಚಿತ್ರಹಿಂಸೆಗೆ ಬಲಿಯಾದ ಲಾಲಿಯ ಅಣ್ಣನ ಕಣ್ಣುಗಳು ಹೋಗುತ್ತವೆ. ಲಾಲಿಯ ಕುಟುಂಬಕ್ಕೆ ಬಂದ ದುಃಖದಲ್ಲಿ ಪಾಲುದಾರಳಾಗಲು ಸಾಗರಿ ನಿರ್ಧರಿಸುತ್ತಾಳೆ. ಅದೇ ದಿನ ಮನೆಗೆ ಹಿಂದಿರುಗುವಾಗ ಸಾಗರಿ ಕಾರ್ ಅಪಘಾತದಲ್ಲಿ ದುರಂತ ಮರಣಕ್ಕೀಡಾಗುತ್ತಾಳೆ. ಇದು ಕಥೆಯಲ್ಲ–ವ್ಯಥೆ.

ಆದರೆ ಲಾಲಿಯ ಅಣ್ಣನನ್ನು ಕಂಡಕೂಡಲೇ ಸಾಗರಿ ಅವನನ್ನು ಮದುವೆಯಾಗಲು ತಟ್ಟನೆ ನಿರ್ಧರಿಸುವದು ಸಮಂಜಸವೆನಿಸುವದಿಲ್ಲ.

'ಕನಸಿನ ಲೋಕಕ್ಕೆ ಪಯಣ' :

ಸುಮಾರು ಮೂವತ್ತೈದು ವರ್ಷಗಳ ಹಿಂದೆ ಹಳ್ಳಿಗಳಲ್ಲಿ ಸಣ್ಣ ಸಣ್ಣ ಹಳ್ಳಿಗಳಲ್ಲಿ ನಾಟಕ ಕಂಪನಿಗಳ ಪ್ರಭಾವ ಜೋರಾಗಿದ್ದ ಕಾಲದಲ್ಲಿ ಈ ಕತೆ ನಡೆದದ್ದು. ಊರಿನ ಪ್ರತಿಷ್ಠಿತ ಅರವತ್ತು ವರ್ಷದ ಲಿಂಗರಾಯನ ಎರಡನೆಯ ಮಡದಿ, ರಾಧೆ

ಅತೃಪ್ತ ದಾಂಪತ್ಯ ಜೀವನದಲ್ಲಿ ನಿರಾಶೆ ಹೊಂದಿ, ನಾಟಕ ಕಂಪನಿಯ ನಾಯಕ ನಟನೊಡನೆ ಓಡಿ ಹೋಗುತ್ತಾಳೆ.

'ಉದಯೊನ' :

ತಾರುಣ್ಯದ ಅಮಲಿನಲ್ಲಿ ಕಂಡಕಂಡ ಯುವಕರ ಬೆನ್ನುಹತ್ತಿ ವಂಚಿತಳಾದ ಯುವತಿ 'ಮುನ್ನಾ', ಜೀವನ ಯೌವ್ವನೋದಯದಲ್ಲೇ ನಿರಾಶಳಾಗುತ್ತಾಳೆ. ಗಂಭೀರ ಸ್ವಭಾವದ ಬಾಧುರಿ ಒಳ್ಳೆಯ ವರನನ್ನು ಕೈಹಿಡಿದು ನೆಮ್ಮದಿಕಾಣುತ್ತಾಳೆ.

'ದೀಪಾವಳಿ' :

ಮುಸಲ್ಮಾನ ಗಾಯಾಳುವಿಗೆ ಶತ್ರುವಿಗೆ ಚಿಕಿತ್ಸೆಮಾಡಿ, ಆಶ್ರಯ ಕೊಟ್ಟದ್ದಕ್ಕಾಗಿ ಮೇವಾಡದ ದೊರೆ, ಕೌಶಿಕನಿಗೆ ಗಡೀಪಾರು ಶಿಕ್ಷೆ ವಿಧಿಸುತ್ತಾನೆ. ಬೇಟೆಯಾಡುತ್ತ ಬಂದ ಯುವರಾಜ ಆಕಸ್ಮಿಕವಾಗಿ ಕೌಶಿಕನ ಮನೆಗೆ ಬರುತ್ತಾನೆ. ಕೌಶಿಕನ ಪೂರ್ವಾ ಪರವನ್ನು ತಿಳಿದ ಯುವರಾಜ ಕೌಶಿಕನಲ್ಲಿ ಕ್ಷಮೆಕೋರಿ ಅವನ ಮಗಳು 'ದೀಪಾವಳಿ' ಯನ್ನು ಮದುವೆಯಾಗುತ್ತಾನೆ.

'ಆಯುಸ್ಸಿದ್ವರಿ' :

೧೯೨೪ರಲ್ಲಿ ಮಲೆನಾಡಿಗೆ ಮಳೆಗಾಲದಲ್ಲಿ ಪ್ರವಾಹ ಬಂದಾಗ ನಡೆದದ್ದು. ಪ್ರವಾಹ ಬಂದು ಮನೆ–ಮಠಗಳು ಕೊಚ್ಚಿಕೊಂಡು ಹೋದರು. ನೂರು ವರ್ಷವನ್ನು ದಾಟಿದ್ದರೂ ದುಗ್ಗಜ್ಜಿ ಬದುಕಿ ಉಳಿಯುತ್ತಾಳೆ. ದುಗ್ಗಜ್ಜಿಗೆ ಬದುಕನ್ನು ಕುರಿತು ಇರುವ ಮೋಹ ವಿಸ್ಮಯವನ್ನುಂಟು ಮಾಡುತ್ತದೆ. ಪ್ರವಾಹದಿಂದ ಒದಗುವ ಹಾನಿ ಕಷ್ಟ–ನಷ್ಟಗಳನ್ನು ಲೇಖಕಿ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ.

'ಜಾಣೆ' :

ಬಡ ಕುಟುಂಬದ ಕುರೂಪಿ ಯುವತಿ ಬಹಳ ವರ್ಷಗಳವರೆಗೆ ಅವಿವಾಹಿತಳಾಗಿ ಉಳಿಯುತ್ತಾಳೆ. ಕೊನೆಗೂ ಅವಳು ಅರವತ್ತು ವರ್ಷದ ಮುದುಕನ ನಾಲ್ಕನೆಯ ಹೆಂಡತಿಯಾದರೂ, ಹೇಗೆ ಎರಡು ಮಕ್ಕಳ ತಾಯಿಯಾಗಿ ಜಾಣೆಯಾದಳೆಂಬುದು ಈ ಕತೆಯಲ್ಲಿ ಮಾರ್ಮಿಕವಾಗಿ ವ್ಯಕ್ತಗೊಂಡಿದೆ.

'ಯಾತ್ರಿಕ' :

ದೀಪಾವಳಿ ಸಂದರ್ಭದಲ್ಲಿ 'ಯಾತ್ರಿಕ' ಪತ್ರಿಕೆಗೆ ಆ ಹಬ್ಬದ ವೈಶಿಷ್ಟ್ಯವನ್ನು ಕುರಿತು ಬರೆದದ್ದಾಗಿದೆ. ಹಿಂದಿನ ಕಾಲದಲ್ಲಿ ದೀಪಾವಳಿ ಹಬ್ಬ ಮದುಮಕ್ಕಳಿಗೆ ಹೇಗೆ ಮೋಜಿನ ಹಬ್ಬವಾಗಿತ್ತೆಂಬುದನ್ನು ನಿರೂಪಿಸಿದ್ದಾರೆ.

'ವಿಶೇಷ' :

ಶ್ರೀಮಂತ ಕುಟುಂಬಕ್ಕೆ ಸೇರಿದ ಕಾಲೇಜು ಯುವತಿಯೊಬ್ಬಳು ಎಲ್ಲರಂತೆ ಶ್ರೀಮಂತ ವರನನ್ನೇ ಬಯಸದೆ, ಮನನೊಂದ ವೇಶ್ಯಾಪುತ್ರನ ಕೈ ಹಿಡಿಯಲು ನಿರ್ಧರಿಸುತ್ತಾಳೆ. ಇದು ಈ ಕತೆಯ ವಿಶೇಷ.

'ಹ್ರಾಂ, ಹ್ರೀಂ, ಹ್ರೂಂ' :

ಶ್ರೀಮಂತ ಮನೆತನ ಅನಂತಯ್ಯನವರು ಹಾಗೂ ಅಪರ ಹೆಂಡತಿ ಮಕ್ಕಳಿಲ್ಲದ ಕಾರಣ ಮುಸಲ್ಮಾನರ ತಬ್ಬಲಿ ಮಗುವೊಂದನ್ನು ಕರೆತಂದು ಸಾಕಿ ಸಲಹುತ್ತಾರೆ. ಆದರೆ ಮಗು ಮುಸ್ಲಿಂರದೆಂದು ಸಮಾಜದಲ್ಲಿ ಎಂದಿಗೂ ಬಹಿರಂಗಪಡಿಸುವುದಿಲ್ಲ. ಅವನಿಗೆ ತಮ್ಮ ಮಗನ ಸ್ಥಾನಕೊಟ್ಟು ಮಮತೆಯಿಂದ ನೋಡಿಕೊಳ್ಳುತ್ತಾರೆ. ತಾಯ್ತನದ ಬಯಕೆಯ ಮುಂದೆ ಜಾತಿ–ಮತಗಳು ಕಟ್ಟುಪಾಡುಗಳು ಕೊಚ್ಚಿಕೊಂಡು ಹೋಗುತ್ತವೆ.

'ಚಿಟ್ಟೆ' :

ಪ್ರೇಮ, ಪ್ರಣಯಕ್ಕೆ ಸಂಬಂಧಿಸಿದ ಕತೆ ಇದು. ದುರ್ಬಲ ಮನಸ್ಸಿನ ತ್ರಿವಿಕ್ರಮ ತನ್ನ ಸಹಪಾಠಿ ಶ್ವೇತಾಂಬರಿಯನ್ನು ಪ್ರೀತಿಸುತ್ತಾನೆ. ಅವಳನ್ನು ಮದುವೆಯಾಗಲು ನಿರ್ಧರಿಸಿದ್ದರೂ ಸಹ, ತಂದೆ–ತಾಯಿಗಳ ಬಲವಂತಕ್ಕೆ ಕಟ್ಟುಬಿದ್ದು ಬೇರೆ ಕನ್ಯೆ ನೋಡಲು ಹೋಗುತ್ತಾನೆ. ಶ್ವೇತಾಂಬರಿಗಿಂತ ಅನುರೂಪಳಾದ ಕನ್ಯೆ 'ರಮ್ಯ'ಳನ್ನು ಕಂಡ ತಕ್ಷಣ ಅವನ ಮನಸ್ಸು ಸೋತು ಹೋಗುತ್ತದೆ. ಶ್ವೇತಾಂಬರಿ ತಾನು ಮೊದಲೇ ನಿರ್ಧರಿಸಿದ ಕೃಷಿಕನನ್ನು ಮದುವೆಯಾಗುತ್ತಾಳೆ.

೧೦. 'ಕನ್ಯಾಕುಮಾರಿಯರಿಗೆ'

ಅವಿವಾಹಿತ ಯುವತಿಯರಿಗೆ ಕಿವಿ ಮಾತಿನಂತಿರುವ ಈ ಕೃತಿ ೧೯೮೭ರಲ್ಲಿ ಹೇಮಂತ ಸಾಹಿತ್ಯದಿಂದ ಪ್ರಕಟವಾಗಿದೆ. ಇದನ್ನು ಒಂದು ನೀಳ್ಗತೆ ಎಂದರೆ ಹೆಚ್ಚು ಸೂಕ್ತ. ಇದರ ಜೊತೆಗೆ 'ಕಾಲಸೂಜಿ' 'ಹರಿಕಥೆ' 'ತಳಿ' ಯಜಮಾನರು, ಹೇಳಿದ್ದು ಎಂಬ ನಾಲ್ಕು ಕತೆಗಳೂ ಸೇರಿವೆ.

'ಕನ್ಯಾಕುಮಾರಿಯರಿಗೆ' :

ಈ ಕೃತಿಯಲ್ಲಿ ಕಥಾನಾಯಕ, ನಾಯಕಿ ಇಲ್ಲ, ದುಃಖ–ದುಗುಡಗಳಿಲ್ಲ. ಇಂದಿನ ನಮ್ಮ ಸಮಾಜದಲ್ಲಿ ತಾರುಣ್ಯದಲ್ಲಿ ವಿಹರಿಸುವ ಸ್ವಚ್ಛಂದ ಮನದ ಯುವತಿಯರ ಪ್ರಚಲಿತ ಸಮಸ್ಯೆಗಳನ್ನು ವಾಸ್ತವಿಕತೆಯನ್ನು ಬಿಟ್ಟುಕೊಡದೆ ಕಲ್ಪನಾ ಸೂತ್ರದಲ್ಲಿ ಹೆಣೆದಿದ್ದಾರೆ.

ವಿದ್ಯಾವಂತ ವರನ ಪ್ರತಿಷ್ಠೆಯ ತಾಯಂದಿರು ಹೆಣ್ಣು ಹೆತ್ತವರನ್ನು ಗೋಳು ಹೊಯ್ದುಕೊಳ್ಳುವ ರೀತಿ ಇಲ್ಲಿ ಕಾಣುತ್ತೇವೆ.

ಯುವತಿಯರು ವಿದ್ಯಾವಂತರಾದರೂ, ವರನಿಗಿಂತ ಅವನ ತಾಯಂದಿರೇ ತಮ್ಮ ಮಗನ ವಿದ್ಯೆ, ಮನೆತನದ ಅಂತಸ್ತು ಇವುಗಳನ್ನು ವರ್ಣಿಸಿ ಮಧ್ಯಮವರ್ಗದ ಗೃಹಸ್ಥರಿಗೆ ವರದಕ್ಷಿಣೆಯನ್ನು ಕೇಳುವದು ಇಂದು ಸರ್ವೇ–ಸಾಮಾನ್ಯ.

ಈ ಕೃತಿಯಲ್ಲಿಯೂ ಸಿಂಧೂಬಾಯಿ ದೌಲತ್ತಿನಿಂದ ಎಲ್ಲರ ಮೇಲೆ ತನ್ನ ಪ್ರತಿಷ್ಠೆಯ ಪ್ರಭಾವ ಬೀರಲು ಹವಣಿಸುವ ಅಜ್ಞಾನಗಳ ಸಂಕೇತ. ವಧು ಪರೀಕ್ಷೆಗೆ ಬಂದ ಯುವತಿಯರನ್ನು ನೂರೆಂಟು ತನಿಖೆಮಾಡಿ ಅವರ ಅಂಗಾಂಗಗಳನ್ನೆಲ್ಲ ಪರೀಕ್ಷಿಸಿ ತನಗೆ ಬೇಕಾದಷ್ಟು ವರದಕ್ಷಿಣೆ ಲಭ್ಯವಾಗದಿದ್ದರೆ ತನ್ನ ಮಗ ಕನ್ಯೆಯನ್ನು ಒಪ್ಪಿಲ್ಲ ವೆಂದು ಹೇಳುವ ಸಿಂಧೂಬಾಯಿಯಂತಹ ಮೂಢರನ್ನು ಲೇಖಕಿ ನಿರ್ದಾಕ್ಷಿಣ್ಯವಾಗಿ ವಿಡಂಬಿಸುತ್ತಾರೆ. ವರಪೂಜೆ, ವರದಕ್ಷಿಣೆಯಂತಹ ವಿಚಿತ್ರ ಸಂಪ್ರದಾಯಗಳ ಬಗೆಗೆ—

"ನೋಡ್ರಿ ನಾವು ನಾಲ್ಕು ಜನಕ್ಕೂ ಮದುವೆ ಆಗಿಲ್ಲ. ಅಂತೂ ಯಾವತ್ತಾ ದರೂ ಆಗಲೇಬೇಕು. ಯಾವೋನೇ ಆದರೂ ನಮ್ಮ ಅಮ್ಮ–ಅಪ್ಪ ಆ ಅಳಿಯನ ಕೊಳಕಲು ಪಾದ ತೊಳೆದು ನೀರನ್ನು ತಲೆಗೆ ಪ್ರೋಕ್ಷಿಸಿಕೊಳ್ಳಲೇಬೇಕು; ಇದು ನಮ್ಮ ಜನರ ಸಂಪ್ರದಾಯ"

—ಎಂದು ಅವಿವಾಹಿತ ಯುವತಿಯರಾದ ಮೀನಾ, ತಾರಾ, ಗೌರಿ, ಇವರ ಮೂಲಕ ಟೀಕಿಸಿದ್ದಾರೆ.

ತಮ್ಮ ಶ್ರೀಮಂತಿಕೆಗೆ ಮಣಿದು ಹೆಣ್ಣು ಹೆತ್ತವರು ತನ್ನ 'ಪಾದ'ಕ್ಕೆ ಬಿದ್ದು ಹೆಣ್ಣು ಕೊಡಬೇಕೆನ್ನುವವರನ್ನು ಸೂಕ್ಷ್ಮವಾಗಿ ತಿಳಿದಿದ್ದಾರೆ.

'ಹೆಣ್ಣು ಹೆತ್ತ ಮಾತ್ರಕ್ಕೆ ಅವರಿಗೆ ಮಾನ–ಮರ್ಯಾದೆ ಸ್ವಾಭಿಮಾನ ಇರೋ ದಿಲ್ಲವೆ ?' ಎಂದು ಪ್ರಶ್ನಿಸಿದ್ದಾರೆ.

ಶ್ರೀಮಂತರ ಮನೆಯ ವಿದ್ಯಾವಂತೆಯೂ, ರೂಪಸಿಯೂ ಆದ ಈ 'ತಾರಾ' ಸಿಂಧೂಬಾಯಿಗೆ ಆಸೆ ಹುಟ್ಟಿಸಿ, ಕೊನೆಗೆ ಅವಳ ಮಗನೇ ತನಗೆ ಒಪ್ಪಿಗೆಯಾಗಿಲ್ಲವೆಂದು ಅವಳ ಮುಂದೆಯೇ ಸ್ಪಷ್ಟವಾಗಿ ಹೇಳಿಬಿಡುತ್ತಾಳೆ.

ಇಲ್ಲಿಯ ತಾರಾ ಇಂದಿನ ಆಧುನಿಕ ಯುವತಿಯರಿಗೆ ಅವಶ್ಯವಾಗಿ ಇರಬೇಕಾದ ದಿಟ್ಟತನ, ಹಾಗೂ ಟೊಳ್ಳು ಸಂಪ್ರದಾಯಗಳನ್ನು ಮುರಿಯುವ ಪ್ರತಿಭಟನೆಯ ಸಂಕೇತ.

'ಕಾಲಸೂಚಿ' :

ಬಡ ಕೂಲಿಕಾರ ಹೆಣ್ಣು ಮಗಳೊಬ್ಬಳು ಸರಿಯಾದ ವೇಳೆಯನ್ನು ಬಿಸಿಲಿನ ಗುರುತಿನಿಂದ ಕಂಡು ಹಿಡಿಯುವ ಬುದ್ಧಿವಂತಿಕೆ ಈ ಕತೆಯಲ್ಲಿದೆ.

'ಹರಿಕಥೆ' :

ಬ್ರಹ್ಮನಿಂದ ಸೃಷ್ಟಿಯಾದ ಮೋಹಿನಿ ಇಂದು ತಂಬಾಕಿನ ಗಿಡವಾಗಿ ಹುಟ್ಟಿ ಬೀಡಿ ಸಿಗರೇಟಿನ ರೂಪ ಹೊಂದಿದಳು. ಅವಳ ಪ್ರಿಯಕರ 'ಅಗ್ನಿ' ಸಿಗರೇಟು ಸೇವನೆಗೆ ಬೆಂಕಿಯಾಗಿ ರೂಪಗೊಂಡ ಬಗೆ ಕಟ್ಟುಕತೆ ಮಾಡಿ ಸರ್ವೋತ್ತಮದಾಸರು ಹರಿಕಥೆ ಮಾಡಿ ಹೇಳುವ ರೀತಿಯನ್ನು ಸ್ವಾರಸ್ಯಮಯವಾಗಿ, ಹಾಸ್ಯಮಯವಾಗಿ ನಿರೂಪಿಸಿದ್ದಾರೆ.

'ತಳಿ' :

ಯೌವ್ವನದಲ್ಲೇ ವಿಧುರರಾದ ಶ್ರೋತ್ರಿಗಳು ಮರುಮದುವೆಯನ್ನು ನಿರಾಕರಿಸಿ, ಕಾಶಿಯಲ್ಲಿದ್ದು ವೇದಾಗಮಗಳನ್ನು ಅಭ್ಯಸಿಸಿ ಮರಳಿ ಊರಿಗೆ ಬರುತ್ತಾರೆ. ಆದರೂ ಸಹ ಅವರು ನಿಸರ್ಗದಿಂದ ಮುಕ್ತರಾಗಲಿಲ್ಲ, ಅವರ ತಳಿ ಮನೆಯ ಕೆಲಸಕ್ಕಿದ್ದ ನಾಗುವಿನಲ್ಲಿ ರಹಸ್ಯವಾಗಿ ಮುಂದುವರಿಯುತ್ತದೆ.

'ನಿರುದ್ಯೋಗಿ' :

ಮಧ್ಯಮವರ್ಗದ ವಿದ್ಯಾವಂತ ಯುವಕರು ಪ್ರತಿಭಾಶಾಲಿಗಳಾಗಿದ್ದರೂ ಅವರ ಪ್ರತಿಭೆಗೆ ತಕ್ಕ ಕೆಲಸವಿಲ್ಲದೆ ಕೊರಗುವುದನ್ನು ಈ ಕತೆಯಲ್ಲಿ ಹೇಳಿದ್ದಾರೆ.

ಯಜಮಾನರು ಹೇಳಿದ್ದು :

ಲೇಖಕಿಯ ಪತಿ ದಟ್ಟ ಕಾಡಿನಲ್ಲಿ ಕಿರಿದಾದ ರಸ್ತೆಯನ್ನು ಕಾಡಾನೆಯನ್ನು ಎದುರಿಸಿ ಪಾರಾಗಿ ಬಂದ ಸಾಹಸ, ಬುದ್ಧಿವಂತಿಕೆಯನ್ನು ಸಾರುತ್ತದೆ.

೧೧. 'ನಗಬೇಕು'

ಇದು ಹರಟೆಗಳ ಸಂಕಲನ. ಪ್ರಥಮ ಮುದ್ರಣ ೧೯೬೮, ದ್ವಿತೀಯ ಮುದ್ರಣ ೧೯೭೦. ಎಸ್. ಆರ್. ಪ್ರಕಾಶನ ಬೆಂಗಳೂರು ಇಲ್ಲಿ ಪ್ರಕಾಶನಗೊಂಡಿದೆ.

ಶ್ರೀಮತಿ ಎಂ. ಕೆ. ಇಂದಿರಾ ಅವರ ಲೇಖನಿ ಸಾಹಿತ್ಯದ ಎಲ್ಲ ಪ್ರಕಾಶನಗಳಲ್ಲೂ ಕೆಲಸ ಮಾಡಿದೆ. ಕಾದಂಬರಿಕಾರ್ತಿ ಎಂದೇ ಹೆಸರಾಗಿದ್ದರೂ ಸಣ್ಣ ಕತೆಗಳನ್ನು ಹರಟೆಗಳನ್ನೂ ಬರೆದಿದ್ದಾರೆ. ಲೇಖನ, ಪ್ರವಾಸಕಥನ, ರೇಡಿಯೋ ನಾಟಕಗಳನ್ನು ಬರೆದಿದ್ದಾರೆ. ಇತ್ತೀಚೆಗೆ ತರಂಗದಲ್ಲಿ ಮಿನಿಕತೆಗಳನ್ನು ಬರೆದಿದ್ದಾರೆ.

ಇಂದಿರಾ ಅವರ 'ನಗಬೇಕು' ಇದೊಂದು ಹರಟೆಗಳ ಸಂಕಲನ :

1) ವಾತಾಪಿ ಜೀರ್ಣೋಭವ, 2) ಸ್ಥೂಲ ಪುರಾಣ, 3) ಎಸ್.ಸಿ.ಸಿ., 4) ನನ್ನ ಪ್ರೀತಿ ಪಾತ್ರರು, 5) ಹಸಿರು ಗಾಜಿನ ಹಿಂದೆ, 6) ದೀಪಾವಳಿ ಮತ್ತು

ಮಿಾಸೆ, 7) ಅಡಗೂಲಜ್ಜಿ, 8) ಹಾಲ್ಃಖೋವ, 9) ಕಪ್ಪು ಕಸ್ತೂರಿ, 10) ಕಿಟ್ಟಣ್ಣನ ಕಥಾನಾಯಕಿ, 11) ಅಮಶಂಕೆಗೆ ಔಷಧಿ, 12) ಸಣ್ಣಯ್ಯನವರ ದೊಡ್ಡ ಗೊರಕೆ, 13) ನಿಶಾಚರರು, 14) ಬಾಳ ಸಂಜೀವಿನಿ ಹರಟೆ, 15) ಭಾಷಣ, 16) ಚೋರಕಲೆ, ಮೊದಲಾದ ಹದಿನೈದು ಹರಟೆಗಳನ್ನೊಳಗೊಂಡಿದೆ.

'ಚಿತ್ರ ಭಾರತ' :

ತರಂಗದಲ್ಲಿ ಹಲವು ಕಂತುಗಳಲ್ಲಿ ಪ್ರಕಟವಾಗುತ್ತಿದ್ದ ಚಿತ್ರಭಾರತ ಇತ್ತೀಚೆಗೆ (೧೯೮೫) ಹೇಮಂತ ಸಾಹಿತ್ಯದಿಂದ ಪುಸ್ತಕ ರೂಪದಲ್ಲಿ ಪ್ರಕಟವಾಗಿದೆ. ಶ್ರೀಮತಿ ಇಂದಿರಾ ಅವರು ತಾವು ಆರನೆಯ ವಯಸ್ಸಿನಿಂದ ತಮ್ಮ ಅರವತ್ತೆಂಟನೆಯ ವಯಸ್ಸಿನ ವರೆಗೆ, ಭಾರತೀಯ ವಿವಿಧ ಭಾಷೆಗಳ ಕನಿಷ್ಠ ಮೂರು ಸಾವಿರ ಚಿತ್ರಗಳನ್ನು ನೋಡಿರುವುದಾಗಿ ಹೇಳಿದ್ದಾರೆ.

ಚಲನಚಿತ್ರಗಳಲ್ಲಿ ಕಾಣಿಸಿಕೊಳ್ಳುವ ಕೆಮ್ಮು, ಬಡತನ, ಕೇಶಾಲಂಕರ, ಅಲಂಕಾರ, ನಾಯಕ, ನಾಯಕಿ, ದೇವರ ಪಾಡು, ತಾರೆಯಾಗುವ ಹಂಬಲ, ಚಿತ್ರದಲ್ಲಿ ಪ್ರೇಮ, ಹುಟ್ಟಿದ ಹಬ್ಬ, ಕ್ಯಾಮರಾದಲ್ಲಿ ಮುಖ, ಸಂಗೀತ, ಕಥೆ, ಸಹ ನಿರ್ದೇಶನ, ಹಿನ್ನೆಲೆ ಸಂಗೀತ, ಚಿತ್ರದ ಸೆಟ್, ಕ್ಯಾಮರಾ ಕಲಾವಿದ, ಅಲಂಕಾರಿಕ, ಸುಂದರ ನಟಿಯರು, ಚಲುವನಟರು, ಹಾಸ್ಯನಟರು, ಖಳನಾಯಕರು, ಮರಸುತ್ತು ನಿರ್ವಾಣಪರ್ವ, ಅಪ್ಪಾಲೆ-ತಿಪ್ಪಾಲೆ, ಜುಟ್ಟು, ಮಾರುವೇಷ, ಕ್ಯಾಬರೆ, ಈಜಾಟ, ಸಾಮೂಹಿಕ ನೃತ್ಯ, ಚೂಟಾದ ಶಿಶ್ಯುಂ, ಹುಚ್ಚು, ದುಃಖ, ಮಾನಭಂಗ, ಸಾವು, ಪವಾಡ, ವ್ಯಾಪಾರಿ ಚಿತ್ರಗಳು, ಪ್ರಯೋಗಾತ್ಮಕ ಚಿತ್ರಗಳು, ಮಕ್ಕಳ ಚಿತ್ರಗಳು, ಪ್ರಾಣಿ ಚಿತ್ರಗಳು, ಬೊಂಬೆ ಚಿತ್ರಗಳು, ದುರಂತ ಚಿತ್ರಗಳು, ಕಾದಂಬರಿ ಚಿತ್ರಗಳು ಈ ವಿಷಯಗಳನ್ನು ತಮ್ಮ ಅನುಭವದ ಕಣ್ಣುಗಳಿಂದ ಪರಿಶೀಲಿಸಿ, ಚಿತ್ರರಂಗದ ಲೋಪ ದೋಷಗಳನ್ನೂ, ಕಾಲಕಾಲಕ್ಕೆ ಆಗಿರುವ ಮಾರ್ಪಾಟುಗಳಲ್ಲಿ ಲೇವಡಿ ಲೇಪದಿಂದ ತೀರಾ ಜಾಲವಾಗಿ ನಿರೂಪಿಸಿದ್ದಾರೆ. ಚಿತ್ರರಂಗದ ನಿರ್ದೇಶಕರ ತೊಳಲಾಟ, ನಟ ನಟಿಯರು ಪಡುವ ಪಾಡು ಮೊದಲಾದವುಗಳನ್ನು ಸೂಕ್ಷ್ಮವಾಗಿ ನೋಡಿದ್ದಾರೆ. ಅದ್ಭುತ ಸ್ಮರಣ ಶಕ್ತಿಗೆ ಚಿತ್ರಭಾರತ ಉತ್ತಮ ನಿದರ್ಶನ.

ಚಿತ್ರಭಾರತಕ್ಕೆ ಬ್ಲರ್ಬ್ ಬರೆದಿರುವ ಚಿತ್ರರಂಗದ ರಾಜಕುಮಾರ ಅವರು ತಮ್ಮ ಸಂತಸವನ್ನು ವ್ಯಕ್ತಪಡಿಸಿದ್ದಾರೆ. ಚಿತ್ರಭಾರತದಲ್ಲಿ ಸಕಲವಿಚಾರಗಳೂ ಅಡಗಿವೆ. ಇದು ನಮ್ಮ ಜನಕೋಟಿಯಲ್ಲಿ ಹೆಚ್ಚು ಪ್ರಸಾರವಾಗಲಿ ಎಂದು ಹಾರೈಸಿದ್ದಾರೆ.

ಸಮಾಜದ ವಿವಿಧ ವ್ಯಕ್ತಿಗಳಲ್ಲಿ ಅವರ ಬದುಕನ್ನು ಲೇಖಕಿ ಇಂದಿರಾ ಅವರು ಸೂಕ್ಷ್ಮವಾಗಿ ನಿರೀಕ್ಷಿಸಿದ್ದಾರೆ. ಮಾಗಿದ ಅನುಭವ ವಿಷಯ ವೈವಿಧ್ಯ ಅವರ ಕತೆಗಳಲ್ಲಿ ಕಂಡುಬರುತ್ತದೆ. ಕಲ್ಪನಾ ವಿಲಾಸ, ಡುಮ್ಮಕ್ಕ, ಎದುರು ಮನೆಯ ಹುಡುಗಿ, ತಿದ್ದುಪಡಿ ಇಂತಹ ಸಾಮಾನ್ಯ ಕತೆಗಳೂ ಇಲ್ಲವೆಂದಲ್ಲ.

ಕಷ್ಟ–ಸುಖ, ದೇವರ ಮಕ್ಕಳು, ಗುಡಿಸಲಿನ ಒಳಗೆ ಈ ಕತೆಗಳಲ್ಲಿ ಕಡುಬಡತನದಲ್ಲೂ ಆ ಜನರು ಬದುಕನ್ನು ಸ್ವಾಗತಿಸುವ ರೀತಿ ನೀಡಿದೆ. ಎರಡು ನಾಲಿಗೆ, ನೀತಿ ಚಿಂತಾಮಣಿ ಈ ಕತೆಗಳಲ್ಲಿ ಡಾಂಭಿಕ ವ್ಯಕ್ತಿಗಳನ್ನು ಕುರಿತು ಲೇವಡಿ ಮಾಡಿದ್ದಾರೆ.

ಪೋಲಿಸು ಪುಟ್ಟಮ್ಮ, ಮೌನಬಂಗಾರ, ವೀರಚಕ್ರ, ಕಾಮುಚ್ಚಿಯ ದೆವ್ವ, ಮುಂತಾದ ಕತೆಗಳಲ್ಲಿ ಮಲೆನಾಡಿನ ಗ್ರಾಮೀಣ ಸ್ತ್ರೀಯರ ಜಾಣಾಕ್ಷತನ ಬುದ್ಧಿವಂತಿಕೆ, ಧೈರ್ಯ–ಸಾಹಸ ಇವುಗಳನ್ನು ಸುಂದರವಾಗಿ ಚಿತ್ರಿಸಿದ್ದಾರೆ.

'ನವರತ್ನ' ಕತೆಯಲ್ಲಿ ಮೋಸದ ಪ್ರತಿಫಲವಿದ್ದರೆ, ಲಕ್ಷ್ಮಿ ಬಂದಳು ಕತೆಯಲ್ಲಿ ಸಹನೆಯ ಫಲವಿದೆ. ಹೀನಸುಳಿ ಕತೆಯಲ್ಲಿ ಶೇಷಪ್ಪನ ಚಾಳಿಯಿಂದ ಅವನ ಸಂಬಂಧಿಸಿದವರೆಲ್ಲ ಅನುಭವಿಸುವ ಕಷ್ಟನಿಷ್ಠುರವಿದೆ. ವ್ಯಕ್ತಿಗಳ ನಡವಳಿಕೆಯ ಪರಿಣಾಮವಿದೆ.

ಸಮಾಜದ ಜನರ ಅಮಾನವೀಯ ವರ್ತನೆ ಪರರ ಬದುಕನ್ನು ಘಾಸಿಗೊಳಿಸುವುದನ್ನು ಕುರೂಪಿಯ ಆತ್ಮಹತ್ಯೆಯಂತಹ ಕತೆಗಳಲ್ಲಿ ಕಾಣುತ್ತೇವೆ. ಪುರುಷರ ವಂಚನೆಯಿಂದ ಸ್ತ್ರೀಯರ ಬದುಕಿನಲ್ಲಾಗುವ ವ್ಯಥೆ ನಿರಾಶೆಯನ್ನು ಚೆಲುವರಸ, ಉದಯಾಸ್ತ, ಮುಗಿದ ಕತೆ ಇವುಗಳಲ್ಲಿ ಕಾಣುತ್ತೇವೆ. ವ್ಯಕ್ತಿ ವ್ಯಕ್ತಿಗಳ ಸ್ನೇಹ ಒಮ್ಮೊಮ್ಮೆ ಜೀವನದಲ್ಲಿ ಕಹಿ ಅನುಭವವನ್ನು ತಂದು ಕೊಡುವುದನ್ನು 'ಇದು ಭ್ರಮೆಯೇ' 'ಕಥೆಯಲ್ಲ–ವ್ಯಥೆ' ಇವುಗಳಲ್ಲಿ ನಿರೂಪಿತವಾಗಿದೆ.

ನಿಸರ್ಗಧರ್ಮ ತಳಿ, ಸೋಲು, ನೇಮ, ಕನಸಿನ ಲೋಕಕ್ಕೆ ಪಯಣ ಈ ಕತೆಗಳು ಒಂದೇ ಗುಂಪಿಗೆ ಸೇರುತ್ತವೆ. ನಿಸರ್ಗ ಧರ್ಮದಿಂದ ವಂಚಿತರಾಗಿ, ಮಕ್ಕಳನ್ನು ಪಡೆಯುವ ಅದಮ್ಯ ಹಂಬಲ ಹಾಗೂ ನೈಸರ್ಗಿಕ ಪ್ರವೃತ್ತಿಗಳನ್ನು ಗೆಲ್ಲಲಾರದೆ, ಸೋತು ಶರಣಾದ ವ್ಯಕ್ತಿಗಳನ್ನು ಕಾಣುತ್ತೇವೆ. ವಿಷಮ ದಾಂಪತ್ಯದ ಪರಿಣಾಮಗಳನ್ನು ಈ ಕತೆಗಳಲ್ಲಿ ಚಿತ್ರಿಸಲಾಗಿದೆ.

ನಿರಪರಾಧಿಯಾದ ತನ್ನ ಮಗ ಗಲ್ಲಿಗೇರುವುದನ್ನು ತಿಳಿದರೂ, ತನ್ನ ಮೊಮ್ಮಗ ಹಗೆಗಳನ್ನು ಸದೆಬಡೆಯುತ್ತಾನೆಂದು ಜೀವನದಲ್ಲಿ ಭರವಸೆ ತಾಳುವ 'ಅಜ್ಜಿ' ಸಂಸಾರಕ್ಕಾಗಿ ಹಗಲಿರಳು ದುಡಿದು ಸಕಲ ಪ್ರಾಣಿಗಳಲ್ಲಿ ದಯೆ ತೋರುವ 'ದಯೆ ಎಲ್ಲುಂಟು ಗೊತ್ತುಂಟಾ? 'ಈ ಕತೆಯ' ರಮಾಬಾಯಿ 'ಆಯುಸ್ಸಿದ್ದರೆ' ಕತೆಯ ದುಗ್ಗಜ್ಜಿ' ಇವರಿಗೆ ಬದುಕಿನಲ್ಲಿರುವ ಶ್ರದ್ಧೆ ಓದುಗರಲ್ಲಿ ವಿಸ್ಮಯವನ್ನುಂಟು ಮಾಡುತ್ತದೆ.

ಮಲೆನಾಡಿನ ಮಲ್ಲಿಗೆ 'ಮೋಡ ಸರಿದು ಚಂದ್ರ ಬಂದ' ನಾ ಒಲ್ಲೆ ಅಪ್ಪಯ್ಯ ಈ ಮುಂತಾದ ಕತೆಗಳಲ್ಲಿ ಮಲೆನಾಡಿನ ಸುಸಂಸ್ಕೃತ ಯುವತಿಯರನ್ನು ಚಿತ್ರಿಸಿದ್ದಾರೆ. ಅವರ ಪಾತ್ರ ಚಿತ್ರಣ ಮಲೆನಾಡಿನ ನಿಸರ್ಗದಷ್ಟೇ ಮುಗ್ಧ ಹಾಗೂ ಚೇತೋಹಾರಿಯಾದುದು,

'ವಾರಂಟ್' 'ಹೆದರಬೇಡಿ' ಈ ಕತೆಗಳಲ್ಲಿ ಸ್ವಾರ್ಥಿಗಳನ್ನು ಕುಹಕ ಸ್ವಭಾವದವರನ್ನೂ ಚಿತ್ರಿಸಿದ್ದಾರೆ. ಇವು ಮಲೆನಾಡಿಗೆ ಸಂಬಂಧಿಸಿದ ಕತೆಗಳು.

ಮಲೆನಾಡಿನ ಬದುಕನ್ನು ಇಂದಿರಾ ಅವರು ತಮ್ಮ ಕತೆಗಳಲ್ಲಿ ಚೆನ್ನಾಗಿ ಚಿತ್ರಿಸಿದ್ದಾರೆ.

ಆತ್ಮನಿವೇದನೆ, ಕಾಂತಿಮಲೆ, ಹುಲಿಕೊಟ್ಟಿಶಾಲೆ, ಹರಿಶ್ಚಂದ್ರನನಾಡು, ದೊಡ್ಡವರು, ಗರತಿ–ಗಣಿಕೆ, ಮಾರ್ಗದರ್ಶಿ ಕುಳ್ಳಿ, ವಿಶೇಷ, ಇನ್ನೂ ಅನೇಕ ಕತೆಗಳಲ್ಲಿ ಲೇಖಕಿ ಕರ್ತವ್ಯ ಮಾನವೀಯಧರ್ಮ, ಸತ್ಯವಂತಿಕೆ, ಪ್ರಾಮಾಣಿಕತೆ, ತ್ಯಾಗ ಕೃತಜ್ಞತೆ, ಪ್ರೀತಿ, ಆದರ್ಶ, ಪರೋಪಕಾರ, ಮುಂತಾದ ಮಾನವೀಯ ಗುಣಗಳ ಹೃದಯ ಸಂಸಾರವುಳ್ಳ ವ್ಯಕ್ತಿಗಳನ್ನು ಚಿತ್ರಿಸಿದ್ದಾರೆ. ಇಲ್ಲೆಲ್ಲ ಲೇಖಕಿ ಇಂದಿರಾ ಅವರ ಮನೋಧರ್ಮ ಸ್ಪಷ್ಟವಾಗಿ ವ್ಯಕ್ತವಾಗಿರುವುದನ್ನು ಅವರ ಕಥಾಸಂಕಲನಗಳ ಸ್ಥೂಲ ಅವಲೋಕನದಿಂದ ತಿಳಿದುಕೊಳ್ಳಬಹುದಾಗಿದೆ.

೧೨. 'ಅನುಭವಕುಂಜ'

ಮೊದಲು 'ಯಾತ್ರಿಕ'ದಲ್ಲೆ ಹಲವು ಕಂತುಗಳಲ್ಲಿ ಪ್ರಕಟವಾದ 'ಅನುಭವ ಕುಂಜ' ಪ್ರವಾಸ ಕಥನ ೧೯೮೦ರಲ್ಲಿ ಹೇಮಂತ ಸಾಹಿತ್ಯದಿಂದ ಬೆಳಕಿಗೆ ಬಂದಿತು. ಶ್ರೀಮತಿ ಇಂದಿರಾ ಅವರು ಏಷ್ಯನ್ ಟ್ರಾವಲ್ಸ್ ಮಾಲೀಕರಾಗಿದ್ದ ದಿ. ಎಚ್. ವಿ. ನಾರಾಯಣ ಅವರ ಆಗ್ರಹ ಪೂರ್ವಕ ಒತ್ತಾಯದ ಮೇರೆಗೆ ಹದಿನೇಳು ದಿನ ದಕ್ಷಿಣ ಭಾರತದ ಪ್ರವಾಸ ಕೈಗೊಂಡರು. ಹದಿನೇಳು ದಿನಗಳ ಪ್ರವಾಸದ ಅನುಭವವೇ ಈ 'ಅನುಭವಕುಂಜ'

'ನನ್ನ ಪ್ರವಾಸದ ಅನುಭವವನ್ನು ಹಲವು ಕಂತುಗಳಲ್ಲಿ ಹೇಳಲು ಹೊರಟಿರುವ ಯಾತ್ರೆ–ತೀರ್ಥಗಳ ವಿಷಯವಲ್ಲ, ದೇವರು–ದಿಂಡರು ಸ್ಥಳ–ಪುರಾಣ ಎಲ್ಲರಿಗೂ ತಿಳಿದಿರುವುದೇ ನನ್ನ ದೃಷ್ಟಿಕೋನ ಬೇರೆ ನನ್ನ ಭಾವನಾ ಕುಂಜ ತೆರೆದಿಡುವೆ'[1] ಎಂದು ಲೇಖಕಿ ಹೇಳಿದ್ದಾರೆ.

'ಯಾತ್ರಿಕ' ಪತ್ರಿಕೆಯ ಸಂಪಾದಕರಾಗಿದ್ದ ದಿ. ಎಚ್. ವಿ. ನಾರಾಯಣ ಅವರೇ ಅದನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುವ ಯೋಚನೆಯಲ್ಲಿದ್ದಾಗಲೇ ಅವರು ದಿವಂಗತರಾದರು. ಅವರ ಆತ್ಮೀಯ ಗೆಳೆಯರೂ, ಹೇಮಂತ ಸಾಹಿತ್ಯದ ಪ್ರಕಾಶಕರೂ ಆದ ಎಂ. ವೆಂಕಟೇಶ ಅವರು ಅದನ್ನು 'ತಮ್ಮ ಪ್ರಕಾಶನದಿಂದ ಹೊರ ತಂದರು. ಇಂದಿರಾ ಅವರು ಈ ಕೃತಿಯನ್ನು ದಿ॥ ನಾರಾಯಣ್ ಅವರ ನೆನಪಿಗೆ ಅರ್ಪಿಸಿದ್ದಾರೆ.

---

1. ಎಂ. ಕೆ. ಇಂದಿರಾ 'ಅನುಭವಕುಂಜ' (ಸುಖಾಗಮನ)

"...ನನಗೆ ನವಿಲಿನಂತೆ ಸಾವಿರಕಣ್ಣು. ಪ್ರವಾಸದ ಒಂದೊಂದು ಹೆಜ್ಜೆಯ ಸಪ್ಪಳವೂ ನನ್ನ ಮೆದುಳಿನ ಟ್ರೆಜರಿಯಲ್ಲಿ ಬಂದು ಕುಳಿತಿದೆ. ಬಹಳ ಸ್ವಾರಸ್ಯಕರವಾದ ಪ್ರವಾಸ, ಮುಚ್ಚಿಡಬೇಕಾದ್ದನ್ನು ಮುಚ್ಚಿಟ್ಟು ಬಿಚ್ಚುಬಹುದಾದುದನ್ನು ನಿಮ್ಮ ಮುಂದೆ ಹರಡುತ್ತೇನೆ'[1] ಎಂದು ಸ್ಪಷ್ಟವಾಗಿ ಹೇಳಿಕೊಂಡಿದ್ದಾರೆ.

ಇಂದಿರಾ ಅವರಿಗೆ ನಿರೀಕ್ಷಣೆಯ ಕಣ್ಣಿಗೆ ತಾವು ಕಂಡದ್ದನ್ನೆಲ್ಲ ಸ್ವಾರಸ್ಯ ಪೂರ್ಣ ವಾಗಿ ವಿವರಿಸುವ ಕಲೆ ಅವರಿಗೆ ಹುಟ್ಟಿನಿಂದಲೇ ಬಂದಿದ್ದು.

ಅವರೇ ಹೇಳಿದಂತೆ ರಾಮಾಯಣ, ಮಹಾಭಾರತ, ಪುರಾಣ ಪುಣ್ಯಕತೆಗಳನ್ನು ಓದಿ ಮೂವತ್ತು ಮೂರುಕೋಟಿ ದೇವತೆಗಳ ಚಿತ್ರಪಟ, ಕಲ್ಲಿನ ವಿಗ್ರಹಗಳಿಗಿಂತ ಮನಸ್ಸಿಗೆ ಸಂತಸಕೊಡುವ ನಿಸರ್ಗವೆಂದರೆ ಎಲ್ಲಿಲ್ಲದ ಪ್ರೀತಿ.

ಹಲವು ಆತ್ಮೀಯ ಜೀವಿಗಳನ್ನು ಕಳೆದುಕೊಂಡು ಬೆಂದು ಬೇಗುದಿ ಪಡುತ್ತಿರುವ ಮನವನ್ನು ತಾತ್ಕಾಲಿಕವಾದರೂ ತುಸು ಸಾಂತ್ವನಗೊಳಿಸುವ ದಿವ್ಯ ಸಂಜೀವಿನಿ ಪ್ರಕೃತಿ ದೇವಿಗಿದೆ ಎಂದು ಅವರು ನಂಬಿದ್ದಾರೆ.

೧೯೬೧ರಲ್ಲಿ ಕನ್ಯಾಕುಮಾರಿಯಲ್ಲಿ ಸ್ವಾಮಿ ವಿವೇಕಾನಂದರ ಬೃಹದ್ ವಿಗ್ರಹ ನಿರ್ಮಾಣವಾಗಿದೆ ಎಂಬ ಸುದ್ದಿಯನ್ನು ಓದಿದಾಗಿನಿಂದ, ಯಾತ್ರಿಕರು ಪ್ರತ್ಯಕ್ಷವಾಗಿ ಕಂಡು ವರ್ಣಿಸಿದುದರಿಂದ ಕನ್ಯಾಕುಮಾರಿಯನ್ನು ನೋಡಬೇಕೆಂಬ ಹಂಬಲ ಲೇಖಕಿಗೆ ಮನದಲ್ಲಿ ಕಾಣಿಸಿಕೊಳ್ಳುತ್ತಿತ್ತು. ಅಲ್ಲದೆ ಬಾಲ್ಯದಿಂದಲೇ ಓದಿದ ರಾಮಕೃಷ್ಣ ಪರಮಹಂಸ, ಶಾರದಾದೇವಿ ಮೊದಲಾದ ಮಹಾನುಭಾವರ ಜೀವನ ಚರಿತ್ರೆಗಳಲ್ಲಿ ಆ ಮಹಾನ್ ವ್ಯಕ್ತಿಗಳ ಬಗೆಗೆ ಗೌರವ ಭಾವನೆಯೂ ಉಂಟಾಗಿತ್ತು.

ನಿಸರ್ಗದ ಜೊತೆಗೆ ಮಾನವ ನಿರ್ಮಿತ ಶಿಲ್ಪ, ದೇವಾಲಯ, ಗುಡಿ ಗೋಪುರ, ಅಣೆಕಟ್ಟುಗಳನ್ನು ನೋಡುತ್ತಲೇ ಇರಬೇಕೆಂಬುದು ಲೇಖಕಿಯ ಹಂಬಲ. ಆದರೆ ಸಂಸಾರದ ಜಂಜಡ ಇಷ್ಟಾದರೂ ಪ್ರಯಾಣಕ್ಕೆ ಹೊರಟಾಗ ನೂರುಬಾರಿ ವಿಘ್ನಗಳು ಬಂದರೂ, ಅವನ್ನು ತಿರುಗಿ ನೋಡದೆ ಇಂದಿರಾ ಅವರು ಪ್ರವಾಸಕ್ಕೆ ಹೊರಟರು. ಪ್ರವಾಸ ಕಾಲದಲ್ಲಿ ಮನೆಗೆ ದಿನಕ್ಕೊಂದು ಪತ್ರವನ್ನು ಬರೆಯುತ್ತಿದ್ದರು.

ಆದರೆ ಮನೆಯಲ್ಲಿ ಒಂದು ದೊಡ್ಡ ಕುತ್ತು ಬಂದು ಲೇಖಕಿ ಪ್ರವಾಸದಿಂದ ಹಿಂತಿರುಗುವಷ್ಟರಲ್ಲಿ ಪರಿಹಾರವಾಗಿತ್ತು. ಆದ್ದರಿಂದ 'ದೈವದ ಕರುಣೆಯ ವರದ ಹಸ್ತ ನನ್ನ ಮೇಲೆ ಇದ್ದಿತೇನೊ ?' ಎಂದಿದ್ದಾರೆ.

---

1. ಅದೇ ; ಪುಟ–14.

'ಆಡದಲೆ ಮಾಡುವವ ರೂಢಿಯೊಳಗುತ್ತಮು' :

ಲೇಖಕಿ ಪ್ರವಾಸ ಕೈಕೊಂಡ ಬಸ್ಸಿನಲ್ಲಿ ನಲ್ಲವತ್ತೆರಡು ಜನ ಪ್ರಯಾಣಿಕರು, ಸರಸಸ್ವಭಾವದ ಶ್ರಮಜೀವಿಗಳಾದ ಬಸ್ಸಿನ ಸಾರಥಿ, ಮತ್ತು ಕಂಡಕ್ಟರ್, ಮೂರು ಜನ ಅಡಿಗೆಯುವರು ಮ್ಯಾನೇಜರ್ ಹಾಗೂ ಗೈಡ್. ಒಟ್ಟು ಎಂಟು ಜನ ಸಿಬ್ಬಂದಿ ವರ್ಗದವರು ಯಾತ್ರಿಕರಲ್ಲಿ ಒಬ್ಬೊಬ್ಬರದು ಒಂದೊಂದು ಬಗೆಯು ಸ್ವಭಾವ. ಯಾತ್ರಿ ಕರಿಂದ ಬರುವ ಟೀಕೆಗಳನ್ನು ತುಟಿ ಎರಡು ಮಾಡದೆ ತಮ್ಮ ತಮ್ಮ ಪಾಲಿನ ಕರ್ತವ್ಯ ವನ್ನು ಶ್ರದ್ಧೆಯಿಂದ ಸಹನೆಯಿಂದ ನಿರ್ವಹಿಸುವ ಬಸ್ಸಿನ ಸಿಬ್ಬಂದಿ ವರ್ಗದವರ ಕರ್ತವ್ಯನಿಷ್ಠೆಯನ್ನು ಮೆಚ್ಚಿಕೊಂಡ ಇಂದಿರಾ ಅವರು 'ಆಡದಲೆ ಮಾಡುವವ ರೂಢಿ ಯೊಳಗುತ್ತಮು' ಎಂದಿದ್ದಾರೆ.

'ಪೋಂಡಾ ಪೋಂಡಾ ಇದು ನಿತ್ಯ ನಿಧಿ' :

ತಿರುಪತಿ ತಿಮ್ಮಪ್ಪ ದರ್ಶನಕ್ಕೆ ಭಕ್ತರು ಪಡುವ ಪಾಡನ್ನು ಇಲ್ಲಿ ಲೇಖಕಿ ವಿನೋದಪೂರ್ಣವಾಗಿ ವಿವರಿಸಿದ್ದಾರೆ.

'ಆ ಎರಡು ಕಾಲ ನಿಲುವು, ಒಂಟಿ ಕಾಲಿನ ನಿಲುವು ನರ್ತನ ಭಂಗಿ ಬದಲಾಯಿಸಿ ಮೈಯಲ್ಲಿ ನನ್ನ ಸ್ವಂತ ಆಸ್ತಿಯಾದ ನಾಲ್ಕು ಎಲುಬುಗಳು ಉದುರಿ ಬೀಳುವಂತಾ ಯಿತು' ಎಂದು ಹೇಳಿದ್ದಾರೆ.

ಅಂತೂ ಬಾಗಿಲು ತೆರೆದದ್ದೇ ತಡ. ಸಮುದ್ರ ಪ್ರವಾಹ ದುಮ್ಮುಕ್ಕಿತು... ನಾನೂ ಆ ಚಕ್ರಭೀಮನ ಕೋಟೆಯಲ್ಲಿ ಓಡಿದೆ, ಜಾರಿದೆ, ಬಿದ್ದೆ, ಎದ್ದೆ, ಕೂಚುಪುಡಿ ನೃತ್ಯ ಮಾಡಿದೆ. ಅಂತೂ ಹನ್ನೊಂದು ಗಂಟೆಗೆ ತಿಮ್ಮಪ್ಪನ ಸನ್ನಿದಿ ಮುಟ್ಟಿದೆ" ಎಂದು ಸ್ವಾರಸ್ಯಯುತವಾಗಿ ವಿವರಿಸಿದ್ದಾರೆ. ತಿಮ್ಮಪ್ಪನ ದರ್ಶನಕ್ಕೆ ಭಕ್ತಾದಿಗಳು ಎಂಟು ಹತ್ತು ತಾಸುಗಳವರೆಗೆ ಕಾದು ಸುಸ್ತಾಗಿದ್ದರೂ ಅರ್ಚಕರು 'ಪೋಂಡಾ ಪೋಂಡಾ' ಎಂದು ತಳ್ಳಿ ಬಿಡುವುದನ್ನು ಕಂಡು ಬೇಸರ ಪಟ್ಟಿದ್ದಾರೆ.

ಮಹಾಬಲಿಪುರದಲ್ಲಿ 'ಗೈಡ್' ಒಂದು ಗುಹೆಯನ್ನು ತೋರಿಸಿ 'ದಿಸ್ ಇಸ್ ಪಾಂಡವಾಸ್ ಬೆಡ್‌ರೂಂ' ಎಂದು ಹೇಳಿದಾಗ ಅಲ್ಲಿದ್ದವರೆಲ್ಲ ಬಿದ್ದು ಬಿದ್ದು ನಕ್ಕರಂತೆ. ಆದರೆ ಲೇಖಕಿ ಪಾಂಡವರು ಬಹುಶಃ ಮಳೆಗಾಲದಲ್ಲಿ ಮಲಗುತ್ತಿರಬಹುದೆಂದು ಹಾಸ್ಯ ಮಾಡಿದ್ದಾರೆ.

ಕಂಚಿಯಿಂದ ಪಾಂಡಿಚೇರಿಗೆ ಬಂದಾಗ ಅಲ್ಲಿಯ ಆಶ್ರಮದ ಪರಿಶುದ್ಧತೆ ಅರವಿಂದ ಹಾಗೂ ಮಾತಾಜಿಯುವರ ಆತ್ಮಸಿದ್ಧಿ ಸಾಧನೆಗಳು ಅಲ್ಲಿ ಮೈವೆತ್ತು ನಿಂತಿವೆ ಎಂದು ವರ್ಣಿಸಿದ್ದಾರೆ.

ಪಾಂಡಿಚೇರಿಯಿಂದ ಮುಂದೆ ಲೇಖಕಿಯು ಮನಸ್ಸಿಗೆ ನೋವನ್ನುಂಟುಮಾಡಿದ ಸಂಗತಿ ಎಂದರೆ ಚಂಡಮಾರುತದ ಹಾವಳಿ, ಅದರಿಂದಾದ ಸಾವು–ನೋವುಗಳು.

'ಚಂಡಮಾರುತದ ಅನಾಹುತದ ದೆಸೆಯಿಂದ ನದಿಗಳಿರುವ ಊರುಗಳಲ್ಲಂತೂ ಗುಡಿಸಲುಗಳು, ಮನೆಗಳು ತಾರಸಿ ಕಟ್ಟಡಗಳೂ ಸಹ ಕೊಚ್ಚಿಹೋಗಿ ಅವುಗಳ ಭೀಕರ ಅಸ್ಥಿಪಂಜರಗಳು ಮಾತ್ರ ನಿಂತು ಪ್ರಕೃತಿ ನಲಿದರೆ ನಾರಿ, ಮುನಿದರೆ ಮಾರಿ ಎಂಬ ಮಾತನ್ನು ಸತ್ಯವಾಗಿಸಿತ್ತು. ಈ ಅನಾಹುತದಲ್ಲಿ ಎಷ್ಟು ಸಹಸ್ರಜನ ಸತ್ತರೆಂಬ ಲೆಕ್ಕ ಇನ್ನೂ ಸಿಕ್ಕಿಲ್ಲ.

ಆಗರ್ಭ ಶ್ರೀಮಂತರೆಲ್ಲ ಬೀದಿಯ ಭಿಕಾರಿಗಳಾಗಿ, ಅಲ್ಲಲ್ಲಿಯ ದೇವಾಲಯ, ಛತ್ರಗಳಲ್ಲಿ ನೀಡುತ್ತಿದ್ದ ಧರ್ಮದ ಅನ್ನಕ್ಕೆ ಕೈಚಾಚಿ ಸಾಲು ಸಾಲಾಗಿ ಕುಳಿತಿರುತ್ತಿದ್ದರು. ಇರಲು ಸ್ಥಳವಿಲ್ಲ. ತೊಡಲು ಬಟ್ಟೆಯಿಲ್ಲ, ತಿನ್ನಲು ಅನ್ನವಿಲ್ಲದಂತಹ ಸ್ಥಿತಿ, ಅವರ ಕಂಗಾಲು ಮುಖಗಳನ್ನು ನೋಡುವಾಗ ನನಗೇನೋ ವಿಪರೀತ ಸಂಕಟವಾಗುತ್ತಿತ್ತು—ಎಂದು ಲೇಖಕಿ ತಮ್ಮ ಮನದ ವ್ಯಥೆಯನ್ನು ತೋಡಿಕೊಂಡಿದ್ದಾರೆ.

ಪಾಂಡಿಚೇರಿಯಿಂದ ಹೊರಟು ಮಧ್ಯಾಹ್ನ ಚಿದಂಬರಂನಲ್ಲಿ ನಟರಾಜನ ದೇವಾಲಯ, ಕುಂಭಕೋಣಂದಲ್ಲಿ ಮಹಾಮಾಟಕೊಳ, ದೇವಾಲಯಗಳು, ಹಾಗೂ ನಾನೂರು ಮೆಟ್ಟಿಲುಗಳ ಬೆಟ್ಟ ಎಲ್ಲವನ್ನೂ ನೋಡಿ, ಅಲ್ಲಿಂದ ಅವರು ಹೊರಟದ್ದು ತಾಂಜಾವೂರಿಗೆ.

ತಂಜಾವೂರಿನ ಬೃಹದೇಶ್ವರ ದೇವಾಲಯದ ಶಿಲ್ಪಕಲಾ ವೈಭವವನ್ನು ಕಂಡು ಲೇಖಕಿ ಬೆರಗಾಗಿದ್ದಾರೆ. ಶ್ರೀರಂಗಂ ಕಂಡಾಗ ಲೇಖಕಿಗೆ ಹಾಳು ಹಂಪೆಯಂತೆ ಕಂಡಿತು. ಅಲ್ಲಿ ಕುಸಿದು ಬಿದ್ದ ಮನೆಗಳು, ದಾರಿಯುದ್ದಕ್ಕೂ ರಸ್ತೆಯ ಬದಿಯಲ್ಲಿ ಸತ್ತು ಬಿದ್ದ ಹಾವುಗಳು, ಹಂದಿ, ನಾಯಿ, ಹೆಗ್ಗಣ, ಕೊಳೆತ ಹೆಣಗಳು.

ಯಾವುದೇ ಕ್ಷೇತ್ರಕ್ಕೆ ಹೋದರೂ ಅಲ್ಲಿಯ ನದಿಗಳಲ್ಲಿ ಸ್ನಾನ ಮಾಡಿದರೆ ಪುಣ್ಯವೆಂಬುದು ಭಾರತೀಯರ ನಂಬಿಕೆ. ಅದರಂತೆ ಕೊಳೆತ ಹೆಣಗಳು ನದಿಯಲ್ಲಿ ತೇಲಿ ಬರುತ್ತಿದ್ದರೂ ಅಲ್ಲಿಯೇ ಸ್ನಾನ ಮಾಡಬೇಕೆಂಬ ಮೂಢನಂಬಿಕೆಯನ್ನು ಲೇಖಕಿ ಗೇಲಿ ಮಾಡುತ್ತಾರೆ.

ಅವರು ನದಿಯಲ್ಲಿ ಸ್ನಾನ ಮಾಡದೇ ಇರುವುದನ್ನು ಕಂಡಾಗ ಯಾತ್ರಿಕರೆಲ್ಲ ಆಶ್ಚರ್ಯ ಪಡುತ್ತಿದ್ದರಂತೆ. ಏಕೆಂದರೆ ಯಾತ್ರೆಗೆ ಬಂದ ಅರವತ್ತು ವರ್ಷದ ಮುದುಕಿ ಸ್ನಾನಮಾಡುವುದಿಲ್ಲವಲ್ಲ ಎಂಬ ಅವರ ಮುಖ ನೋಡಿದ ತಕ್ಷಣ ತಿಳಿದು ಕೊಳ್ಳುತ್ತಿದ್ದರು.

ರಾಮೇಶ್ವರದ ದೇವಾಲಯದ ಅಮ್ಮನವರು ಅಂತಃಪುರದ ಶಯ್ಯಾ ಗೃಹಕ್ಕೆ ಹೊರಡುವ ವೈಭವ, ಸಡಗರವನ್ನು ವರ್ಣಿಸಿದ್ದಾರೆ. ಯಮ ಚಳಿಯಲ್ಲಿ ಕೈಲಾಸ ಪರ್ವತದಲ್ಲಿ ನಡುಗುತ್ತ ಜೀವನವನ್ನು ಕಳೆಯುವ ಶಿವ—ಪಾರ್ವತಿಯರು ನಿಜಕ್ಕೂ ಸಜ್ಜೆಗೃಹಕ್ಕೆ ಬಂದು ಕೆಲವು ವೇಳೆಯನ್ನು ಆನಂದದಿಂದ ಕಳೆಯುತ್ತಿರಬಹುದೆಂದು ಊಹಿಸುತ್ತಾರೆ. ಇಲ್ಲೆಲ್ಲ ಲೇಖಕಿಯ ಹಾಸ್ಯ ಸ್ವಭಾವವನ್ನು ಕಾಣುತ್ತೇವೆ.

ಬಸ್ಸಿನ ಸಾರಥಿ ಮುಸ್ಲಿಂ ಧರ್ಮದವನೆಂದು ಲೇಖಕಿಗೆ ಮೊದಲು ತಿಳಿದಿರಲಿಲ್ಲ. ಅವನು ಒಂದು ಸಣ್ಣ ಹಳ್ಳಿಯ ದಟ್ಟಡವಿಯಲ್ಲಿ ಇಳಿದು ನಮಾಜು ಸಲ್ಲಿಸಿದಾಗಲೇ ತಿಳಿದದ್ದು. ಅವರ ಪೂಜೆ, ಪ್ರಾರ್ಥನೆಗೆ ನಮ್ಮಂತೆ ದೈಹಿಕಶುದ್ಧಿ ಮಡಿ, ಮುಖ್ಯವಲ್ಲ. ಆತ್ಮಶುದ್ಧಿ ಮುಖ್ಯ ಎನ್ನುವ ದೈವಭಕ್ತಿಯನ್ನು ತತ್ತ್ವವನ್ನು ಮೆಚ್ಚಿಕೊಂಡಿದ್ದಾರೆ.

ಲೇಖಕಿ ಪ್ರವಾಸದುದ್ದಕ್ಕೂ ಕಂಡ ಇನ್ನೊಂದು ಸಂಗತಿ ಎಂದರೆ ಎಲ್ಲ ಕ್ಷೇತ್ರಗಳಲ್ಲೂ ಭಿಕ್ಷುಕರ ಹಾವಳಿ. ಅಂಗವಿಕಲ ಭಿಕ್ಷುಕರ ಜೊತೆಗೆ ಕೈಕಾಲು ನೆಟ್ಟಗಿದ್ದರೂ ಕೊಟ್ಟು ಕೈಕಾಲು ತಿರುವಿಕೊಂಡು ಭಿಕ್ಷೆ ಬೇಡಿ ಜೀವನ ಸಾಗಿಸುವುದು ಸರ್ವೇ ಸಾಮಾನ್ಯ. ಪ್ರತಿ ಕ್ಷೇತ್ರದಲ್ಲೂ ದೇವರ ತೀರ್ಥಕ್ಕೂ ದುಡ್ಡು ಕೊಡಬೇಕಾದುದನ್ನು ಖಂಡಿಸಿದ್ದಾರೆ.

ರಾಮೇಶ್ವರದಿಂದ ದೀರ್ಘ ಕಾಲದ ಪ್ರಯಾಣದ ನಂತರ ತಿರುಚೆಂದೂರು ತಲುಪಿದಾಗ ಅಲ್ಲಿಯ ಪ್ರಶಾಂತ ಸುಂದರ ವಾತಾವರಣ ಲೇಖಕಿಯ ಮನಸ್ಸಿಗೆ ಸಂತಸ ಕೊಟ್ಟಿತು.

ಕನ್ಯಾಕುಮಾರಿಯಲ್ಲಿ ವಿವೇಕಾನಂದರ ವಿಗ್ರಹವನ್ನು ಕಂಡು ದಿವ್ಯ ಚೈತನ್ಯಕ್ಕೆ ಮಣಿದಿದ್ದಾರೆ, ಶುಭೇಂದ್ರಂನಲ್ಲಿ ದತ್ತಾತ್ರೇಯ ದೇವಸ್ಥಾನವನ್ನು ಕಂಡಿದ್ದಾರೆ.

ಲೇಖಕರು ಸಹ ಪ್ರಯಾಣಿಕರೊಂದಿಗೆ ಆತ್ಮೀಯವಾಗಿ ನಡೆದುಕೊಳ್ಳುವ ಸ್ವಭಾವ ಅದರಲ್ಲೂ ಧಾರವಾಡದವರೊಬ್ಬರು ಲೇಖಕಿಗೆ ಹೆಚ್ಚು ಆತ್ಮೀಯತೆಯನ್ನು ಹೊಂದಿದ್ದರು, ಅವರ ಭಾಷೆ ಲೇಖಕಿಗೆ ಹೆಚ್ಚು ಪ್ರಿಯವಾಗುತ್ತದೆ.

ಕುರ್ಲಾಲಂನಲ್ಲಿ ಮಾತ್ರ ಲೇಖಕಿ ನದಿಯ ಸ್ನಾನವನ್ನು ತಪ್ಪಿಸಿಕೊಳ್ಳಲಿಲ್ಲ ಕಾರಣ ಆ ನದಿಯ ನೀರು ಸರ್ವರೋಗ ನಿವಾರಣೆ ಎಂಬ ಪ್ರತೀತಿ ಮತ್ತು ಸ್ಫಟಿಕದಂತೆ ಧುಮ್ಮಿಕ್ಕುವ ಜಲರಾಶಿಯ ರಮ್ಯ ಮನೋಹರ ದೃಶ್ಯ.

ಕೇರಳದ ಪ್ರಕೃತಿ ಸೌಂದರ್ಯವನ್ನು ಸವಿದ ಲೇಖಕಿ ತೆಕ್ಕಡಿಯಲ್ಲಿ ಜಲ ವಿಹಾರದ ಸಮಯದಲ್ಲಿ ಸಹಪ್ರಯಾಣಿಕರ ಅಸಹ್ಯಕರ ಭಾವನೆಗೆ ಬೇಸರ ಪಟ್ಟಿದ್ದಾರೆ.

ಬೆಂಗಳೂರು, ಕೋಲಾರ, ಮುಳಬಾಗಿಲು, ಮಂಗಾಪುರ, ತಿರುಪತಿ, ಕಾಳಹಸ್ತಿ, ಮದ್ರಾಸ್, ಮಹಾಬಲಿಪುರಂ, ಕಂಚಿ, ಪಾಂಡಿಚೇರಿ, ಚಿದಂಬರಂ, ಕುಂಭಕೋಣಂ, ತಂಜಾವೂರು ಶ್ರೀರಂಗಂ, ಮಂಟಪಂ, ರಾಮೇಶ್ವರ, ಮನ್ನಾರಕೊಲ್ಲಿ, ತಿರುಚೆಂದೂರು, ಕನ್ಯಾಕುಮಾರಿ, ಶುಬೇಂದ್ರ, ತಿರುವನಂತಪುರ, ಕುರ್ತಾಲಂ, ಮಧುರೆ, ಕೇರಳ, ಕಾಲಡಿ, ಗುರುವಾಯೂರು, ಪಳನಿ ಇವೆಲ್ಲ ಲೇಖಕಿ ಸಂದರ್ಶಿಸಿದ ಸ್ಥಳಗಳು.

ದೇವಸ್ಥಾನಗಳಲ್ಲಿ, ಪುಣ್ಯಕ್ಷೇತ್ರಗಳಲ್ಲಿ ದೇವರ ದರ್ಶನಕ್ಕೆ ಪಡುವ ಪಾಡು, ದೇವರ ಹೆಸರಿನಲ್ಲಿ ನಡೆಯುವ ಹಣದ ಸುಲಿಗೆ, ಕಳ್ಳತನ, ಡಾಂಭಿಕ ಭಕ್ತಿ, ಇವುಗಳನ್ನು ಕಂಡ ಲೇಖಕಿ ವ್ಯಂಗವಾಗಿ ಟೀಕಿಸಿದ್ದಾರೆ.

ಪ್ರವಾಸದುದ್ದಕ್ಕೂ ಕಂಡ ಚಂಡಮಾರುತದ ಹಾವಳಿ, ಸಾವುನೋವು ತಬ್ಬಲಿಯಾದ ಮಕ್ಕಳನ್ನು ಕಂಡು ಲೇಖಕಿ ಮರುಗಿದ್ದಾರೆ. ಪ್ರಕೃತಿ ಸೌಂದರ್ಯವನ್ನು ಕಂಡು ಮುಗ್ಧರಾಗಿದ್ದಾರೆ.

ಪುಣ್ಯಕ್ಷೇತ್ರಗಳ ಸ್ಥಳ–ಪುರಾಣ, ದೇವರು–ದಿಂಡರು ಎಂಬುದು ಎಲ್ಲಿಯೂ ಮುಗ್ಧರಾಗದೇ ಲೇಖಕಿ ತಮ್ಮ ಅನ್ನಿಸಿಕೆಗಳನ್ನು ಕೃತಿಯುದ್ದಕ್ಕೂ ಸಂಕೋಚವಿಲ್ಲದೆ ನೇರವಾಗಿ ಹೇಳಿದ್ದಾರೆ.

ಪ್ರವಾಸ, ಸಾಹಿತ್ಯಕ್ಕೆ ವಿಶಿಷ್ಟ ಅನುಭವದಿಂದ ಕೂಡಿದ ಈ 'ಅನುಭವಕುಂಜ' ಒಂದು ಉತ್ತಮ ಕಾಣಿಕೆ ಎಂದು ಹೇಳಬಹುದಾಗಿದೆ.

ಅಧ್ಯಾಯ - ಐದು

ಎಂ. ಕೆ. ಇಂದಿರಾ ಅವರ ಕಾದಂಬರಿಗಳಲ್ಲಿ ಮಲೆನಾಡಿನ ಜೀವನ ಚಿತ್ರ

ಸಾಹಿತಿ ಪರಿಸರದ ಕೂಸು ಬರಹಗಾರ ಬದುಕಿನ ದೇಶ, ಕಾಲ, ಸಮಾಜ ಇವು ಅವನ ಕೃತಿಗಳಲ್ಲಿ ಪ್ರತಿಬಿಂಬಿತವಾಗಿರುತ್ತವೆ. ತಾನು ಕಂಡ ಸಮಾಜದ ಜನಜೀವನ. ಅವರ ಕಷ್ಟ ಸಹಿಷ್ಣುತೆ, ಮನೋಧೈರ್ಯ, ಆಚಾರ–ವಿಚಾರ, ನಂಬಿಕೆ–ಸಂಪ್ರದಾಯ ಅವರು ತೋರುವ ಸ್ನೇಹ, ಸೌಹಾರ್ದ, ಪ್ರೇಮ, ಕಾರ್ಯ, ಆಶೆ–ನಿರಾಶೆ, ಅವರು ಎದುರಿಸುವ ಆರ್ಥಿಕ ಮತ್ತು ಧಾರ್ಮಿಕ ಸಮಸ್ಯೆಗಳು ಇವೆಲ್ಲ ಪ್ರಾದೇಶಿಕ ಸ್ಥಿತಿಗಳಿಂದ ಪ್ರಭಾವಿತವಾಗಿರುತ್ತವೆ. ಪ್ರದೇಶದಿಂದ ಪ್ರದೇಶಕ್ಕೆ ಅವುಗಳಲ್ಲಿ ಬಿನ್ನತೆಯೂ ಕಂಡುಬರುತ್ತದೆ.

ಸಾಹಿತ್ಯ ಪುಷ್ಟಿಯಾಗಿ ತೇಜಸ್ವಿಯಾಗಿರಬೇಕಾದರೆ, ಅದಕ್ಕೆ ಮಣ್ಣಿನ ವಾಸನೆ ಬರಬೇಕಾದರೆ ಪ್ರಾದೇಶಿಕತೆ ಅತ್ಯವಶ್ಯಕ.

ಶ್ರೀಮತಿ ಎಂ. ಕೆ. ಇಂದಿರಾ ಅವರು ಮಲೆನಾಡಿನ ಪ್ರಾತಿನಿಧಿಕ ಲೇಖಕಿ. ಅವರ ಮಲೆನಾಡಿನ ಪರಿಸರದಲ್ಲಿ ಕಳೆದ ಬಾಲ್ಯ ಜೀವನ ಇಂದಿನ ಸಾಹಿತ್ಯ ಸೃಷ್ಟಿಗೆ ಪ್ರೇರಕವಾಗಿದೆ. ಅವರ ಪ್ರಥಮ ಕಾದಂಬರಿ ತುಂಗಭದ್ರವನ್ನೊಳಗೊಂಡಂತೆ ಸದಾನಂದ, ಕಲಾದರ್ಶಿ, ಫಣಿಯಮ್ಮ, ತಗ್ಗಿನಮನೆ ಸೀತೆ, ಗಿರಿಬಾಲೆ, ಆತ್ಮಸಖಿ, ಜಾತಿ ಕೆಟ್ಟವಳು ಈ ಮೊದಲಾದ ಕಾದಂಬರಿಗಳು ಮಲೆನಾಡಿನ ಪರಿಸರ ಅಲ್ಲಿನ ಜನಜೀವನವನ್ನು ಚಿತ್ರಿಸುತ್ತವೆ. 'ಚಿದ್ವಿಲಾಸ' 'ಬ್ರಹ್ಮಚಾರಿ', 'ತಾಪದಿಂದ ತಂಪಿಗೆ', ಈ ಕಾದಂಬರಿಗಳಲ್ಲಿಯೂ ಮಲೆನಾಡು ಹಣಕುತ್ತದೆ.

ತುಂಗಭದ್ರ, ಸದಾನಂದ, ಕಲಾದರ್ಶಿ, ಫಣಿಯಮ್ಮ, ತಗ್ಗಿನಮನೆ ಸೀತೆ, ಈ ಕಾದಂಬರಿಗಳಲ್ಲಿ ಅಲ್ಲಿನ ನಿಸರ್ಗ, ಜನಜೀವನ, ಸಂಪ್ರದಾಯ, ಮೂಢನಂಬಿಕೆ, ದೆವ್ವ, ದೇವತೆ, ವೇಷಭೂಷಣ ಇವೆಲ್ಲವುಗಳ ಜೀವಂತ ಚಿತ್ರಣವಿದೆ.

"ಮಲೆನಾಡಿನ ಜನಜೀವನವನ್ನು ಚಿತ್ರಿಸುವವರು ನನ್ನ ವಿನಾ ಬೇರೆ ಯಾರೂ ಇಲ್ಲವಲ್ಲ ಎಂಬ ನನ್ನ ಕೊರಗು ನಿಮ್ಮಿಂದ ಮರೆಯಾಯಿತು. ಚೆನ್ನಾಗಿ ಬರೆಯುತ್ತಿದ್ದೀರಿ" ಎಂದು ಕುವೆಂಪು ಅವರು ಸಂತೋಷ ವ್ಯಕ್ತಪಡಿಸಿದ್ದಾರೆ.

"ಮಲೆನಾಡಿನ ಪರಸರದ ಚಿತ್ರಣವನ್ನು ಇವರು ಮಾಡಿದ ಹಾಗೆ ಮತ್ತೊಬ್ಬ ಬೇರೆ ಯಾವ ಮಹಿಳಾ ಸಾಹಿತಿಯಿಂದಲೂ ಸಾಧ್ಯವಿಲ್ಲ. ಅದಕ್ಕೊಂದು

ಉದಾಹರಣೆ 'ವನಿತಾ'ದಲ್ಲಿ ಧಾರಾವಾಹಿಯಾಗಿ ಬಂದ 'ತಗ್ಗಿನಮನೆ ಸೀತೆ' ಕಾದಂಬರಿ ಸೀತೆಯ ಗುಣ, ಮಲೆನಾಡಿನ ಆಡುಭಾಷೆ, ಪರಿಸರದ ಚಿತ್ರವನ್ನು ಚಿತ್ರಿಸಿದ ಬಗ್ಗೆ ಬರೆದ ನೂರಾರು ಮೆಚ್ಚಿಕೆಯ ಪತ್ರಗಳು 'ವನಿತಾ'ಕ್ಕೆ ಬಂದವು.

ಕಾದಂಬರಿಕಾರ್ತಿ ಇಂದಿರಾ 'ಫಣಿಯಮ್ಮ', 'ತುಂಗಭದ್ರ', 'ತಗ್ಗಿನಮನೆ ಸೀತೆ' ಈ ಕಾದಂಬರಿಗಳಲ್ಲಿ ಸ್ವಾತಂತ್ರ್ಯ ಪೂರ್ವದ ಬ್ರಿಟಿಷರ ಆಳ್ವಿಕೆಯಲ್ಲಿದ್ದ ಸಮಾಜದ ಸ್ಥಿತಿಗತಿಯ ಚಿತ್ರಣವಿದೆ. ಅದರಲ್ಲೂ ಬ್ರಾಹ್ಮಣ ಸಮಾಜದ ಸ್ಥಿತಿಗತಿಯ ಚಿತ್ರಣ ವಿದೆ. ಬ್ರಿಟಿಷರ ಆಗಮನದಿಂದ ಭಾರತೀಯ ಸಾಮಾಜಿಕ ಜೀವನದಲ್ಲಿ ಸೂಕ್ಷ್ಮ ಬದಲಾವಣೆಗಳಾಗುತ್ತಿದ್ದರೂ ಬ್ರಾಹ್ಮಣ ಸಮಾಜ (ಧರ್ಮಶಾಸ್ತ್ರಗಳಡಿಯಲ್ಲಿ ಬೆಳೆದ ಸಮಾಜ) ಎಷ್ಟು ಸಂಪ್ರದಾಯ ಜಡವಾಗಿತ್ತೆಂಬುದನ್ನು ನೋಡಬಹುದು.

ಸಮಾಜ :

ಬಾಲ್ಯ ವಿವಾಹ :— ತುಂಗಭದ್ರ ಈ ಶತಮಾನದ ಮೂರನೆಯ ದಶಕದ ಸುಮಾರಿನ ಬ್ರಾಹ್ಮಣ ಸಮಾಜ ಸ್ಥಿತಿಯನ್ನು ದಟ್ಟವಾಗಿ ಚಿತ್ರಿಸುತ್ತದೆ. ಹೆಣ್ಣು ಮಕ್ಕಳಿಗೆ ಸಾಮಾನ್ಯವಾಗಿ ಹನ್ನೆರಡು ವರ್ಷದೊಳಗಾಗಿ ಮದುವೆ ಮಾಡಲೇಬೇಕಾ ಗಿತ್ತು. ವರನ ವಯಸ್ಸು ಇಪ್ಪತ್ತರೊಳಗೇ ಇರುತ್ತಿತ್ತು. ಹೆಣ್ಣು ಮಕ್ಕಳಿಗೆ ಮೈ ನೆರೆತ ಮೇಲೆ ಮದುವೆ ಮಾಡಿದರೆ ಆ ಕುಟುಂಬಕ್ಕೆ ಶೃಂಗೇರಿ ಸ್ವಾಮಿಗಳಿಂದ ಬಹಿಷ್ಕಾರ ವಾಗುತ್ತಿತ್ತು. ಆದ್ದರಿಂದಲೇ ಕುರುಡಿಯರಾದ ತುಂಗಭದ್ರೆಯರ ಮದುವೆ ಆ ಕಾದಂಬರಿಯಲ್ಲಿ ಸಮಸ್ಯೆಯಾಗುತ್ತದೆ. ಕೃಷ್ಣಿಗೂ ಹದಿಮೂರು ವರ್ಷಕ್ಕೆ ಮದುವೆ ಮಾಡುತ್ತಾರೆ.

'ಫಣಿಯಮ್ಮ ಕಾದಂಬರಿಯಲ್ಲಿ ನೂರೈವತ್ತು ವರ್ಷಗಳ ಹಿಂದಿನ ಬ್ರಾಹ್ಮಣ ಸಮಾಜದ ಅಜ್ಞಾನ, ಮೂಢನಂಬಿಕೆ, ಅಂಧಶ್ರದ್ಧೆಯನ್ನು ದಟ್ಟವಾಗಿ ಚಿತ್ರಿಸುತ್ತದೆ.

'ಫಣಿಯಮ್ಮನ ಮದುವೆ ಒಂಭತ್ತು ವರ್ಷಕ್ಕೆ ನಡೆಯುತ್ತದೆ. ವರನ ವಯಸ್ಸು ಹದಿನಾಲ್ಕು ವರ್ಷವಾಗಿರುತ್ತದೆ. ಶೃಂಗೇರಿಯಲ್ಲಿ ನೃಸಿಂಹ ಭಾರತಿಸ್ವಾಮಿ ಗಳು ಪಟ್ಟದಲ್ಲಿದ್ದ ಕಾಲ. ಒಂಭತ್ತು ವರ್ಷಕ್ಕೆ ಮದುವೆ ಮಾಡದಿದ್ದರೆ ಬಹಿಷ್ಕಾರ ಹಾಕಲಾಗುತ್ತಿತ್ತು.'

'ತಗ್ಗಿನ ಮನೆ ಸೀತೆ' ಕಾದಂಬರಿಯಲ್ಲೂ 'ಸೀತೆ' 'ಅಚ್ಚಿ' ಇಬ್ಬರಿಗೂ ಬಾಲ್ಯ ದಲ್ಲೇ ವಿವಾಹವಾಗುತ್ತದೆ. ಸೀತೆಯ ಮಲತಾಯಿ ಮೋಟಮ್ಮ ಶಂಕರ ಭಟ್ಟ ರೊಡನೆ ಮಾತಾಡುತ್ತ ಒಮ್ಮೆ—"ಹುಡುಗಿ ಮೈ ನೆರೆಯಾಕೆ ಬಂತು ಕಂಡ್ರು ಭಟ್ರೆ; ಮತ್ತೇನಾರ ಹೆಚ್ಚು ಕಮ್ಮಿಯಾತೂಂದ್ರೆ ಶೃಂಗೇರಿ ಸ್ವಾಮಿಗಳು ಸುಮ್ಮನೆ ಬಿಟ್ಟಾರಾ ನಮ್ಮನ್ನ ? ಬಹಿಷ್ಕಾರ ಹಾಕಿ ಕೂರಸ್ತಾರೆ" ಎನ್ನುತ್ತಾಳೆ. 'ಸದಾನಂದ' ಕಾದಂಬರಿ ಯಲ್ಲಿ ಕಮಲನಿಗೂ ಬಾಲ್ಯ ವಿವಾಹವಾಗುತ್ತದೆ. ಅಂದಿನ ಸಮಾಜದಲ್ಲಿ ಬಾಲ್ಯ

ವಿವಾಹ ಸಾಮಾನ್ಯವಾಗಿತ್ತೆನ್ನಬಹುದು. ಬಾಲ್ಯ ವಿಧವೆಯರಿಗೆ ಮರು ಮದುವೆಯಾಗಲು ಅವಕಾಶವಿರುತ್ತಿರಲಿಲ್ಲ. ವಿಧವೆಯರು ; ಬಸಿರಾದರೆ ಅವರಿಗೆ ಮಾತ್ರ ಬಹಿಷ್ಕಾರ ಹಾಕಿ ಅವರನ್ನು ಜಾತಿಯಿಂದ ಹೊರಗಿಡಲಾಗುತ್ತಿತ್ತು. ಅವರು ಮಾಲೇರ ಜಾತಿಗೆ ಸೇರಲ್ಪಡುತ್ತಿದ್ದರು. ಬ್ರಾಹ್ಮಣರ ಮನೆಯಲ್ಲಿ ಅವರಿಗೆ ಪ್ರವೇಶವಿರುತ್ತಿರಲಿಲ್ಲ. 'ಜಾತಿ ಕೆಟ್ಟವಳು' ಕಾದಂಬರಿಯಲ್ಲಿ 'ಬುಳ್ಳಮ್ಮ' 'ನಾಗಮ್ಮ' ಇವರು ಬಹಿಷ್ಕೃತರಾಗಿ ಮಾಲೇರ ಜಾತಿಗೆ ಸೇರಿದುದನ್ನು ನೆನಪಿಸಿಕೊಳ್ಳಬಹುದು.

ವೇಶ್ಯಾ ಪದ್ಧತಿ ಬಹು ಪತ್ನಿತ್ವ, ಇವು ಸಮಾಜದಲ್ಲಿ ಶ್ರೀಮಂತ ಮನೆತನದಲ್ಲಿ ಸಾಮಾನ್ಯವಾಗಿದ್ದವು.

'ಜಾತಿ ಕೆಟ್ಟವಳು' ಕಾದಂಬರಿಯಲ್ಲಿ ಕರ್ಣೀಕರಿಗೆ ಇಬ್ಬರು ಪತ್ನಿಯರಿದ್ದರೆಂಬುದನ್ನು ನೋಡಬಹುದು. ಅಲ್ಲದೆ ವೇಶ್ಯೆಯರಿನ್ನಿಟ್ಟುಕೊಳ್ಳುವುದು ಶ್ರೀಮಂತರಲ್ಲಿ ಸಾಮಾನ್ಯ ಸಂಗತಿಯಾಗಿ 'ತುಂಗಭದ್ರ' ಕಾದಂಬರಿಯಲ್ಲಿ 'ತಗ್ಗಿನ ಮನೆ ಶಂಕ್ರಪ್ಪನವರ ಬಂಗಾರ ದರಸಿ ರಂಗು', 'ತಗ್ಗಿನಮನೆ ಸೀತೆ'ಯಲ್ಲಿ ಶ್ಯಾಮಯ್ಯನವರ ವೇಶ್ಯೆ ಶಾಂಭವಿ ಗಿರಿಬಾಲೆ ಕಾದಂಬರಿಯ ವೇಕಟೇಶನ ವೇಶ್ಯೆ, ಜಲಜೆ, ಇವರೆಲ್ಲ ಶ್ರೀಮಂತರ ವೇಶ್ಯೆಯರಾಗಿದ್ದುದನ್ನು ಗಮನಿಸಬೇಕು.

'ಮಕ್ಕಳಾಗಲಿಲ್ಲವೆಂಬ ನೆಪದಿಂದ ಮನೆಯಲ್ಲಿ ನಾಲ್ಕು ಐದು ಜನ ಹೆಂಡತಿಯರನ್ನೂ ತುಂಬಿಕೊಂಡ ಮಹಾನುಭಾವರಿದ್ದರು ಅವರಿಗೆ ಹೆಂಡತಿ ಬಂಜೆತನ ಕಣ್ಣಿಗೆ ಬಡಿಯುತ್ತಿತ್ತು. ನಿಜ, ಒಂದು ಪಕ್ಷ ಹೆಂಡತಿ ಬೇರೆಯವರಿಂದ ಮಕ್ಕಳನ್ನು ಪಡೆದರೆ ತಾನು ಹಸೆಯ ಮೇಲೆ ಕೂತು ಮಗುವಿಗೆ ನಾಮಕರಣ ಮಾಡುವಂಥ ಪೆದ್ದರೂ ಇದ್ದಾರೆ'[1]

ಇಲ್ಲೆಲ್ಲ ಲೇಖಕಿ ಅಂದಿನ ಜನರ ಅಜ್ಞಾನವನ್ನು ಗೇಲಿ ಮಾಡಿದ್ದಾರೆ. ಪಾಪ ಪುಣ್ಯ ಸ್ವರ್ಗ ನರಕ, ದಾನ ಧರ್ಮ, ಯಾತ್ರೆ, ತೀರ್ಥಗಳಲ್ಲಿ ಬಲವಾದ ನಂಬಿಕೆ ಇದ್ದಿತು.

ಸ್ತ್ರೀ ಸ್ವಾತಂತ್ರ್ಯವಿರಲಿಲ್ಲ. ಸ್ತ್ರೀ ಪುರುಷರಿಗೆ ಇಬ್ಬರಿಗೂ ಶಿಕ್ಷಣಕ್ಕೂ ಹೆಚ್ಚು ಮಹತ್ವ ಕೊಡುತ್ತಿರಲಿಲ್ಲ.

"ಮನೆಯ ಯಜಮಾನ ಹಾಕಿದ ಲಕ್ಷ್ಮಣ ರೇಖೆಯನ್ನು ಹೆಂಡತಿ ಮಕ್ಕಳು ಕಿರಿಯರು ದಾಟಿ ನಡೆಯುವಂತಿರಲಿಲ್ಲ. ಮನೆಗೊಬ್ಬ ಮಠಕ್ಕೊಬ್ಬ ಮತಕ್ಕೊಬ್ಬ ಹಳ್ಳಿಗೊಬ್ಬ ಊರಿಗೊಬ್ಬ ಯಜಮಾನ ಇದ್ದೇ ಇರುತ್ತಿದ್ದ. ಸ್ತ್ರೀಯರಿಗೆ ಅತ್ಯಂತ ಕಟ್ಟುನಿಟ್ಟುಗಳಿದ್ದವು."

---

1. ಶ್ರೀಮತಿ ಎಂ. ಕೆ. ಇಂದಿರಾ : 'ತಗ್ಗಿನಮನೆ ಸೀತೆ'–ಪುಟ–29–30.

"ಅಮಾಯಕವೇಯ ನಿಜ. ಅಲ್ಲಿಯೂ ಜಾಣರು, ಪೆದ್ದರು, ಚಾಣಾಕ್ಷರು, ಮುತ್ಸದ್ದಿಗಳು ಸೂರುಪಿ–ಕುರೂಪಿ; ಪಂಡಿತ–ಪಾಮರಸ ಜಾರ–ಚೋರ, ಪತಿವ್ರತೆಯರು ಕಳ್ಳ–ಕಾಕರೂ ಎಲ್ಲರೂ ಇದ್ದರೆ ಈ ದೊಡ್ಡ ಜಗತ್ತಿನೊಳಗಿನ ಬಹು ಪುಟ್ಟ ಜಗತ್ತು ಅದು."

'ಫಣಿಯಮ್ಮ' ತಗ್ಗಿನ ಮನೆಯ ಸೀತೆ' ತುಂಗಭದ್ರೆಯರು, ಮಂದಾಕಿನಿ ಒಂದೊಂದು ರೀತಿಯಿಂದ ತಮ್ಮ ವೈಶಿಷ್ಟ್ಯವನ್ನುಳಿಸಿಕೊಳ್ಳುತ್ತಾರೆ.

ಮದುವೆಯಾಗುವ ಹೆಣ್ಣು ಮಕ್ಕಳ ರೂಪ ಲಾವಣ್ಯಕ್ಕೆ ಹೆಚ್ಚಿನ ಮಹತ್ವ ಕೊಡುತ್ತಿರಲಿಲ್ಲ.

"ಹುಡುಗಿ ಗಟ್ಟಿಮುಟ್ಟಾಗಿ ಇದ್ದು ಮನೆಗೆಲಸ, ಪೂಜೆ, ಪುನಸ್ಕಾರ ಹಬ್ಬ ಹರಿದಿನ ಸರಿಯಾಗಿ ನಡೆಸಿಕೊಂಡು ಹೋದರಾಯ್ತು. ಮುಖ್ಯವಾಗಿ ಮಡಿ–ಹುಡಿ ನೇಮ ನಿಷ್ಠೆ ತಿಳಿದಿರಬೇಕು. ಒಳ್ಳೆ ಮನೆತನವಾದರಾಯ್ತು."

'ಮದುವೆಯಾಗುವ ಹುಡುಗನ ವಿದ್ಯೆಗೆ ಪ್ರಾಧಾನ್ಯತೆ ಇರಲಿಲ್ಲ. ಹುಡುಗ ಆರೋಗ್ಯವಂತನಾಗಿದ್ದು, ಹೊಲ ಗದ್ದೆಗಳಲ್ಲಿ ದುಡಿಯಲು ಗಟ್ಟಿಯಾಗಿದ್ದರೆ ಸಾಕು' ಎನ್ನುತ್ತಿದ್ದರು.

ಇಂದಿನಂತೆ ಹತ್ತಿಪ್ಪತ್ತು ಸಾವಿರದ ವರದಕ್ಷಿಣೆಯ ಪಿಡುಗು ಅಂದು ಇರಲಿಲ್ಲ ವೆಂಬುದು ತಿಳಿದುಬರುತ್ತದೆ.

ತಾಮ್ರದ ತಟ್ಟೆ, ಪಂಚಪಾತ್ರೆ, ಸಂಕಲ್ಕೆ ಪಂಜೆ, ಪೇಟ, ಕಾಶೀಯಾತ್ರೆ ಕೋಲು ಛತ್ರಿ ಮೆಟ್ಟು.

ಇವುಗಳು ವರದಕ್ಷಿಣೆ, ವರೋಪಚಾರವಾಗಿದ್ದವೆಂಬುದು 'ಫಣಿಯಮ್ಮ' ತಗ್ಗಿನ ಮನೆ ಸೀತೆ' ಎರಡೂ ಕಾದಂಬರಿಗಳಲ್ಲೂ ಕಾಣಬಹುದು.

ವಧುವಿಗೆ ಧಾರೆಯೆರೆಯುವಾಗ ಒಂದು ಜೊತೆ ಚಿನ್ನದ ಓಲೆ ಮಾಂಗಲ್ಯ ವನ್ನು ಇಡಲಾಗುತ್ತಿತ್ತು.

ಧಾರೆ ಕಳೆದ ನಂತರ ಸಾಹುಕಾರರ ಮನೆಯ ಮಧುಮಕ್ಕಳು, ಅದರಲ್ಲೂ ಅವಿಭಕ್ತ ಕುಟುಂಬದಲ್ಲಿದ್ದ ಒಂದು ಸೆಟ್ ಒಡವೆಗಳನ್ನು ಧರಿಸುವುದು ಸಂಪ್ರದಾಯ ವಾಗಿತ್ತು.

'ಅಡ್ಡಿಕೆ, ಸರಿಗೆ ಚಂದ್ರಹಾರ, ಜಡೆಬಂಗಾರ, ರಾಗಟೆ, ಸಾಗರತಿ, ರೂಪಿನ ಹೂವು, ಕುಚ್ಚು, ಮಲ್ಲಿಗೆಮೊಗ್ಗು. ಬುಗುಡಿ, ಚಳಿತುಂಬು, ಚಂದ್ರಮುರು, ಕುರುಡಿ ಭಾವುಲಿ, ತೋಳಬಂದಿ, ಗುಂಡಿನಸರ, ಕಾಸಿನಸರ, ಕಾಲಸರ, ಪಾಡಗಗಗ್ಗರ' ಈ ಒಡವೆಗಳು ಅವಿಭಕ್ತ ಕುಟುಂಬದಲ್ಲಿ ಇರುತ್ತಿದ್ದವು. ಮದುಮಗಳಿಗೆ ಸಾಧ್ಯ ವಾದಷ್ಟು ಒಡವೆಗಳನ್ನು ಹಾಕುತ್ತಿದ್ದರೂ ಫಣಿಯಮ್ಮನಿಗೂ ಇವುಗಳನ್ನು ಹಾಕಿದ್ದು ದನ್ನು ನೆನೆಯಬಹುದು.

ಮದುಮಗಳು ಮದುವೆಗೆ ಮೊದಲೇ ಉರುಟಣೆ, ಶಾಸ್ತ್ರ ಸಂಪ್ರದಾಯದ ಹಾಡುಗಳನ್ನು ಕಲಿತಿರುತ್ತಿದ್ದಳು. 'ತಗ್ಗಿನಮನೆ ಸೀತೆ'ಯಲ್ಲಿ ನಳಚರಿತ್ರೆ ಹಾಡನ್ನು ಅಚ್ಚಿಗೆ ಹೇಳುತ್ತಿದ್ದುದನ್ನು ನೆನೆಯಬಹುದು.

ಬೀಗರು ಕಮಾನುಗಾಡಿಗಳಲ್ಲಿ (ಎತ್ತಿನಗಾಡಿ) ಪ್ರಯಾಣ ಮಾಡುತ್ತಿದ್ದರು. ಮದುವೆ ಎಂಟು ದಿನಗಳವರೆಗೆ ವೈಭವದಿಂದ ನಡೆಯುತ್ತಿತು. ಎಂಟು ದಿನ ಸುತ್ತು ಮುತ್ತಲಿನ ಹಳ್ಳಿಗಳವರು ಅಡಿಗೆಗೆ ಒಲೆ ಹಚ್ಚುತ್ತಿರಲಿಲ್ಲ.

"ದೇವರ ಸಮಾರಾಧನೆ, ನಾಂದಿ ಧಾರೆ, ನಾಗೋಲೆ, ಉರುಟಣೆ ಉಯ್ಯಾಲೆ. ಓಕಳಿ, ಮನೆತುಂಬಿಸಿಕೊಳ್ಳುವದು, ಬೀಗರ ಔತಣ ಇತ್ಯಾದಿ. ಎಂಟು ದಿನಗಳ ವರೆಗೆ ಮದುವೆ ನಡೆಯುತ್ತಿತ್ತು. ಗಂಡಿನ ಬೀಗರು ಜಗಳವಾಡಬೇಕೆಂದು ಒಂದು ಸಂಪ್ರದಾಯವಾಗಿತ್ತು. ಸೀತೆಯ ಮದುವೆಯಲ್ಲಿ ಅವಳ ಅತ್ತೆ ರಾಮಕ್ಕ ಕೆಲವು ನೆವ ತೆಗೆದು ಬೀಗಿತ್ತಿಯ ಸಂಪ್ರದಾಯದಂತೆ ಜಗಳವಾಡಿದ್ದಳೆಂಬುದನ್ನು ಸ್ಮರಿಸ ಬಹುದು."

ಗಂಡನಿಗೆ ಗುಬ್ಬೆ ಹೊಡೆಯುವದು, ಹೆಸರು ಹೇಳು ಎಂದ ಕೂಡಲೇ ಬಾಗಿಲು ದಾಟಿ ನಡೆಯುವದು ಇವೆಲ್ಲವನ್ನು ವಧು ಸಂಪ್ರದಾಯಕವಾಗಿ ನಡೆಸುತ್ತಿದ್ದಳು. ತಗ್ಗಿನಮನೆ ಸೀತೆಯೂ ಗಂಡನಿಗೆ ಗುಬ್ಬೆ ಹೊಡೆಯುವಳು, ಬಾಗಿಲು ದಾಟಿ ನಡೆ ಯುವಳು. ಬೀಗರಿಗೆ ಮುಖ್ಯರಾದ ಹಿರಿಯರಿಗೆ ಶಲ್ಯಗಳನ್ನು ಹೆಂಗಸರಿಗೆ ಕೊರ ನಾಡು ಕಣಗಳನ್ನು ಕೊಡಲಾಗುತ್ತಿತ್ತು.

ವರನಾದವನು ಕಚ್ಚೆಪಂಚೆ ಪೇಟ, ಬಾಸಿಂಗಗಳನ್ನು ಧರಿಸುತ್ತಿದ್ದನು. ಮದುವೆ ಯಲ್ಲಿ ಉಂಡೆ, ಚಕ್ಕುಲಿ, ಕಾಯಿ ಹೋಳಿಗಿ, ಪಾಯಸ, ಹುಳಿಯನ್ನು ಮಾಡು ತ್ತಿದ್ದರು.

"ಮದುವೆಯಲ್ಲಿ ಡೋಲು ಬಾರಿಸುವವರಿಗೆ ಎಂಟು ದಿನ ಎರಡು ಹೊತ್ತು ಊಟ, ರಾಶಿ ರಾಶಿ ತಿಂಡಿ, ಕೊನೆಗೆ ಹೊರಡುವಾಗ ಹತ್ತು ಕೊಳಗ ಭತ್ತ, ಅಡಿಕೆ, ಬೆಲ್ಲ, ತೆಂಗಿನ ಕಾಯಿಗಳನ್ನು ಕೊಡುವದು ಪದ್ಧತಿ.

ಜಾತಕ, ಶಾಸ್ತ್ರಶಕುನ, ಹರಕೆಗಳಲ್ಲಿ ಮಲೆನಾಡಿನ ಜನರಿಗೆ ಇಂದಿಗೂ ಬಲ ವಾದ ನಂಬಿಕೆ. ಜೋಯಿಸರೆಂದರೆ ಮಲೆನಾಡಿನ ಜನರಿಗೆ ಸಾಕ್ಷಾತ್ ದೇವರೇ ಎಂದು ಭಾವಿಸುತ್ತಾರೆ.

'ಸದಾನಂದ' ಕಾದಂಬರಿಯಲ್ಲಿ ಶಾಸ್ತ್ರಿಗಳು ಕಮಲಳ ಜಾತಕ ನೋಡಿ 'ಕಮಲಳ ಜಾತಕದಲ್ಲಿ ಮಾಂಗಲ್ಯಕೂಟ ಸಮರ್ಪಕವಿಲ್ಲ' ಎನ್ನುತ್ತಾರೆ.

"ಹೇಮನಾಥೇಶ್ವರ ದುಂಡುಮಲ್ಲಿಗೆಗೆ ಪರದೈವವಾದಂತೆ ಅಲ್ಲಿಯ ಅರ್ಚಕರಾದ ಶಾಸ್ತ್ರಿಗಳೂ ಒಂದು ರೀತಿಯಲ್ಲಿ ಅಲ್ಲಿಯ ಸುತ್ತಮುತ್ತಲಿನ ಜನಾಂಗಕ್ಕೆ ಪರದೈವ".

ಶಾಸ್ತ್ರಿಗಳು ಮಾಡುವ ಯಂತ್ರ-ಮಂತ್ರ, ಬೂದಿ; ಚೀಟಿ ಇಂದ್ರಾಕ್ಷಿ ನವಗ್ರಹ ಜಪ ಇವುಗಳಲ್ಲಿ ಪರಿಣತರಾಗಿರುತ್ತಾರೆ. ರೋಗ-ರುಜಿನ ಬಂದರೆ ನಾರು-ಬೇರಿನ ಔಷಧಿಗಳನ್ನೂ ಕೊಡುತ್ತಾರೆ.

ಶಾಸ್ತ್ರಿಗಳು ಮಡಿಯಾಗಿ ಗುಡ್ಡಕ್ಕೆ ಹೋಗಿ ಅಲ್ಲಿ ಸಿಗುವ ಗಿಡ ಮೂಲಿಕೆ ಗಳನ್ನು ತಂದು ರೋಗ-ರುಜಿನಗಳಿಗೆ ಔಷಧಿಮಾಡಿಕೊಡುತ್ತಾರೆ. ಶಾಸ್ತ್ರಿಗಳ ಪತ್ನಿ ಕಾಡಮ್ಮ ಊರಿನ ಚಿಕ್ಕಮಕ್ಕಳಿಗೆಲ್ಲ ಕಿವಿ ಚುಚ್ಚುವದು, ಮೂಗುಚುಚ್ಚುವದು, ಬಂಜೆಯರಿಗೆ ಔಷಧಿ ಕೊಡುವದು.

ತುಂಗ-ಭದ್ರೆಯಲ್ಲಿ ಬಿಸ್ಲಮಾರಿ ಬಂತೆಂದು ಮುದ್ದುರಾಮು ಕೃಷ್ಣಿಗೆ ಹೆದರಿಸು ವನಲ್ಲ, ಅದೇ ರೀತಿ ಮದುವೆಯ ಮೊದಲ ರಾತ್ರಿ ಅಗಸೆ ಮರದಲ್ಲಿ ಕೊಳ್ಳಿ ದೆವ್ವ ವಿದೆ ಎಂದು ಹೆದರಿಸುತ್ತಾನೆ. ಸತ್ತವರು ದೆವ್ವವಾಗುತ್ತಾರೆಂಬುದು ಅವರಲ್ಲಿ ಸಾಮಾನ್ಯವಾದ ನಂಬಿಕೆ ಇವೆಲ್ಲ ದೆವ್ವಗಳನ್ನು ಕುರಿತಂತೆ ಮಲೆನಾಡಿನವರ ನಂಬಿಕೆಗಳು.

"ಸಣ್ಣ-ಸಣ್ಣ ವಿಷಯಕ್ಕೂ ದ್ವೇಷ ಬೆಳೆಸಿಕೊಳ್ಳುವದು; ಒಬ್ಬರೊಬ್ಬರ ಮೇಲೆ ಮಾಟ-ಕೂಟ ಮಾಡಿಸುವದು; ಮಾತೆತ್ತಿದ್ದರೆ ಗಾಜನೂರ ಅಮ್ಮನ ಆಣೆ, ಜಕಣಿ, ಧರ್ಮಸ್ಥಳದ ದೇವರ ಆಣೆ, ಯಾರಾದರೂ ಬಲವಾದ ಕುಳ ಇದ್ದರೆ ಅವರ ಜಬರ ದಸ್ತಿನಲ್ಲಿ ಕಟ್ಟೆ ಪಂಚಾಯತಿ ತೀರ್ಮಾನ ರಾಜಿ"[1]

-ಹೀಗೆ ಮಲೆನಾಡಿನಲ್ಲಿ ಒಳಗಿಂದೊಳಗೆ ಜಗಳ, ರಾಜಕೀಯವೂ ನಡೆಯುತ್ತಲೇ ಇರುತ್ತವೆ.

ತಗ್ಗಿನ ಮನೆಯವರಿಗೂ ಕಟ್ಟೆಮನೆಯವರಿಗೂ ಸಣ್ಣಕಾರಣಕ್ಕಾಗಿ ದೊಡ್ಡ ಜಗಳವಾಗಿ, "ನಾನಾಗೇ ನಿನ್ನ ಮನೆ ಹೊಸಲು ಮೆಟ್ಟಿದರೆ ಮಂಜುನಾಥೇಶ್ವರನ ಆಣೆ. ಆಗ್ಲೇ ನಾನು ರಕ್ತ ಕಾರ್‍ಕಂಡು ಸಾಯ್ತ್ನಿ. ನಮ್ಮ ವಂಶದಾಗೆ ಯಾರೂ ನಿಮ್ಮನೆ ಕಡೆ ಕಾಲು ಹಾಕ್ಬಾರ್‍ದು. ನೀವಾಗೆ ನಮ್ಮನೀಗೆ ಬಂದ್ರೂ ನಿಮಗೂ ಅದೇ ಗತಿ"[2] ಎಂದು ಆಣೆ ಪ್ರಮಾಣ ಹಾಕಿಕೊಂಡಿರುವದನ್ನು ಲೇಖಕಿ 'ತಗ್ಗಿನ ಮನೆ ಸೀತೆ'ಯಲ್ಲಿ ಉಲ್ಲೇಖಿಸಿದ್ದಾರೆ.

ಆಣೆ ಪ್ರಮಾಣವನ್ನು ಹಿಂದಕ್ಕೆ ತೆಗೆದುಕೊಳ್ಳಬೇಕಾದರೆ "ಎರಡು ಮನೆತನದ ವರೂ ಧರ್ಮಸ್ಥಳಕ್ಕೆ ಹೋಗಿ ನೇತ್ರಾವತಿ ನದಿಯಲ್ಲಿ ಸ್ನಾನಮಾಡಿ ಒದ್ದೆ ಬಟ್ಟೆಯಲ್ಲಿ ದೇವಸ್ಥಾನಕ್ಕೆ ಹೋಗಿ ಹಿರಿಯರು ಮಾಡಿದ ತಪ್ಪಿನ ಕಾಣಿಕೆ ನೀಡಿ, ಪೂಜೆ ಮಾಡಿಸಿ, ಪ್ರಸಾದ ತೆಗೆದುಕೊಂಡು ಇಟ್ಟ ಆಣೆಯನ್ನು ದೇವರ ಎದುರಿಗೆ ಹಿಂತೆಗೆದುಕೊಳ್ಳ ಬೇಕು."

---

1. ಎಂ. ಕೆ. ಇಂದಿರಾ : 'ಫಣಿಯಮ್ಮ' ಪುಟ-17.
2. ಎಂ. ಕೆ. ಇಂದಿರಾ : 'ತಗ್ಗಿನಮನೆ ಸೀತೆ' ಪುಟ-8.

ಆಣೆ ಹಿಂತೆಗೆದುಕೊಳ್ಳಬೇಕಾದರೆ ಮನೆಯಲ್ಲಿ ಯಾವ ಹೆಣ್ಣುಮಕ್ಕಳೂ ಮುಟ್ಟಾಗಿರಬಾರದು; ಹತ್ತು ದಿನದೊಳಗಿನ ಬಾಣಂತಿಯರು ಇರಬಾರದು. ಅವಿಭಕ್ತ ಕುಟುಂಬಗಳಲ್ಲಿ ಬಾಣಂತಿಯರು, ಮುಟ್ಟಾದ ಹೆಣ್ಣುಮಕ್ಕಳು, ಇದ್ದೇ ಇರುತ್ತಿದ್ದುದರಿಂದ ಆಣೆ ಪ್ರಮಾಣಗಳು ಹಾಗೆ ಮುಂದುವರಿಯುತ್ತಿದ್ದವು.

ಮಲೆನಾಡಿನ ಜನರು ಕಷ್ಟಸಹಿಷ್ಣುಗಳು. ಮನೋಸ್ಥೈರ್ಯವುಳ್ಳವರು ಮನೆಮಂದಿಯೆಲ್ಲ ಹೊಲಗದ್ದೆಗಳಲ್ಲಿ ಭೇದಭಾವವಿಲ್ಲದೆ ದುಡಿಯುತ್ತಾರೆ. ಹೆಣ್ಣುಮಕ್ಕಳು ಗೃಹಕೃತ್ಯದೊಂದಿಗೆ ದನಕರುಗಳನ್ನು ಪ್ರೀತಿಯಿಂದ ಸಾಕುತ್ತಾರೆ. ಕಷ್ಟ–ಸುಖಗಳಲ್ಲಿ ಅಂತರವನ್ನು ಅರಿಯರು. ತೀರಾ ಸರಳ ಉಡಿಗೆ–ತೊಡಿಗೆ ಅವರ ವೈಶಿಷ್ಟ್ಯ. ನಗರ ಜೀವನದ ಬಿಗುಮಾನ ಅವರಲ್ಲಿ ಕಾಣುವುದು ತೀರ ವಿರಳವೆಂದು ಹೇಳಬಹುದು. ನದಿ ಪ್ರವಾಹ, ರೋಗರುಜಿನ, ಬಡತನ ಇದ್ದರೂ ಅವರು ಜೀವನಕ್ಕೆ ಹೆದರದೆ ಹೋರಾಡುತ್ತಾರೆ. 'ತುಂಗಭದ್ರ' ಕಾದಂಬರಿಯಲ್ಲಿ ಪ್ರವಾಹ, ರೋಗ–ರುಜಿನ ಬಂದರೂ ಮಲೆನಾಡಿನ ಎರಡು ಸಂಸಾರಗಳೂ ಬದುಕಿನೊಂದಿಗೆ ಹೋರಾಡುವುದನ್ನು ಕಾಣುತ್ತೇವೆ. ಕಷ್ಟವೆಂಬುದು ಅವರಿಗೆ ಸುಖದಂತೆ.

ಬೇಸಿಗೆಯಲ್ಲಿ ಮನೆಗೆ ಬಂದ ಅತಿಥಿಗಳಿಗೆ ತಣ್ಣನೆಯ ನೀರಿನಿಂದ ಕಾಲು ತೊಳೆಯುತ್ತಾರೆ. ನೀರು ಮಜ್ಜಿಗೆ, ಬೇಲದ ಹಣ್ಣಿನ ಪಾನಕ, ಹುರಿಯಿಟ್ಟಿನ ಪಾನಕ ಕೊಟ್ಟು ಉಪಚರಿಸುತ್ತಾರೆ.

"ಮಳೆಗಾಲದಲ್ಲಿ ಹಂಡೆಯ ಬಿಸಿನೀರಿನಲ್ಲಿ ಕೆಸರಿನ ಕಾಲು ತೊಳೆದು ಮುರುವಿನ ಒಲೆ, ಹುರಳಿ ಒಲೆ, ಅಥವಾ ಅಡಿಕೆ ಬೇಯಿಸುವ ಒಲೆಯ ಮುಂದೆ ಕುಳಿತು ತಾಂಬೂಲ ಹಾಕುತ್ತಾರೆ. ಬಿಸಿ ಉಪಚಾರವೆಂದರೆ ಗೆಣಸು, ಹಪ್ಪಳ, ಹಲಸಿನ ಬೀಜ, ಗೇರು ಬೀಜ ಸುಟ್ಟು ತಿನ್ನುತ್ತಾರೆ. ಹಿತ್ತಿಲತೋಟದಲ್ಲಿ ತರಕಾರಿಗಳನ್ನು ಬೆಳೆಯುತ್ತಾರೆ. ಬಂದವರಿಗೆ ತಾವು ಉಣ್ಣುವದನ್ನೆ ನಿರ್ವಂಚನೆಯಿಂದ ಮಾಡಿ ಬಡಿಸುತ್ತಾರೆ.

ಮಳೆಗಾಲದಲ್ಲಿಯೂ ಅವರು ಕೆಲಸ ಮಾಡುತ್ತಾರೆ. ಕೊಡೆ, ಮೆಟ್ಟಗಳನ್ನು ಶ್ರೀಮಂತರು ಉಪಯೋಗಿಸಿದರೆ, ವಾಲೆ ಕೆಡೆಗಳನ್ನು ಬಡವರು ಉಪಯೋಗಿಸುತ್ತಾರೆ. ಕೆಸರು–ಕೊಚ್ಚೆ ಗುಂಡಿ ಗೊಟರು ಇದ್ದರೂ ಹಗಲು ರಾತ್ರಿಯನ್ನದೇ ಕಾಲು ನಡಿಗೆಯಿಂದ ಊರಿಂದೂರಿಗೆ ಪ್ರಯಾಣ ಮಾಡುತ್ತಾರೆ. 'ಕಾಫೀ' 'ಹಾಲು' ಮಲೆನಾಡಿನ ಜನರಿಗೆ ಪ್ರಿಯವಾದ ಪಾನೀಯ.

---

1. ನಾನು ಶ್ರೀಮತಿ ಎಂ. ಕೆ. ಇಂದಿರಾ ಅವರೊಡನೆ ಮಲೆನಾಡಿನ ಪ್ರವಾಸಕ್ಕೆ ಹೋದಾಗ ಅಲ್ಲಿನ ಜನರ ಸರಳತೆಯನ್ನು ಕಂಡಿದ್ದೇನೆ. ಅವರದು ಆತ್ಮೀಯ ಸರಳ ಅತಿಥಿಸತ್ಕಾರ.
2. ತಗ್ಗಿನಮನೆ ಸೀತೆ ಪುಟ–22–23

ಮಲೆನಾಡಿನ ಹಳ್ಳಿಗಳು ಸಾಮಾನ್ಯ ಒಂದು ಕೂಗಳತೆಯಲ್ಲಿರುತ್ತವೆ.* ಕಲಾದರ್ಶಿ ಕಾದಂಬರಿಯಲ್ಲಿ ಬರುವ ಹಿರೇತೋಟ ಗುಡ್ಡದಮಠ ಒಂದು ಕೂಗಳತೆಯ ಹಳ್ಳಿಗಳು.

ಮಲೆನಾಡಿನಲ್ಲಿ ಗುಡ್ಡ, ತೋಟಗಳ ನಡುವೆ ಮನೆಗಳಿರುತ್ತವೆ. ಮನೆಗಳು ದೊಡ್ಡದಾಗಿಯೇ ಇರುತ್ತವೆ. ಮನೆಯ ಮುಂದೆ ಅಡಿಕೆಯನ್ನು ಬೇಯಿಸಿ ಒಣಗಿಸಲು ಚಪ್ಪರಗಳನ್ನು ಹಾಕಿರುತ್ತಾರೆ. ದೊಡ್ಡ ದೊಡ್ಡ ಶ್ರೀಮಂತರ ಮನೆಗಳಲ್ಲಿ ವರ್ಷಕ್ಕಾಗಿ ಉಳಿದ ಭತ್ತವನ್ನು ಪಣತೆಗಳಲ್ಲಿ (ಪಣತ–ಕಣಜಕ್ಕಿಂತ ದೊಡ್ಡದಿರುತ್ತದೆ.) ಶೇಖರಿಸಿಡುತ್ತಾರೆ.

ಅಡಿಕೆ ಕೊಯಿಲಿನ ಸಮಯದಲ್ಲಿ ಮನೆಯ ಜನರೂ ಸೇರಿ ಸುಮಾರು ಮೂವತ್ತು –ನಲವತ್ತು ಜನ ಆಳುಕಾಳುಗಳು ಅಡಿಕೆಯನ್ನು ಮೆಟ್ಟು ಕತ್ತಿಯಿಂದ ಸುಲಿಯುತ್ತಾರೆ. ವೇಳೆ ಕಳೆಯಲು ರಾತ್ರಿ ಪ್ರಸಂಗಗಳನ್ನು ಹೇಳಿಸುತ್ತಾರೆ. ಅದು ಅವರಿಗೆ ಮನರಂಜನೆ, ಭಾಗವತರಾಟವೂ ನಡೆಯುತ್ತದೆ.

'ಕಲಾದರ್ಶಿ' ಕಾದಂಬರಿಯಲ್ಲಿ ಕಿಟ್ಟು ಬೆಂಗಳೂರಿನಿಂದ ಮಲೆನಾಡಿಗೆ ಹೋದಾಗ ಅವನ ಚಿಕ್ಕಪ್ಪ ನಾಗಪ್ಪಯ್ಯ—"ನೀನು ಪ್ರಸಂಗ ಕೇಳಿದಿಯೇನೋ ಕಿಟ್ಟು, ಮಲೆನಾಡು ದಕ್ಷಿಣ ಕನ್ನಡದ ಕಡೆಯವರು ಪೌರಾಣಿಕ ಕಥಾವಸ್ತು ತೆಗೆದುಕೊಂಡು ಹಾಡುತ್ತಾರೆ" ಎಂದು ರಾತ್ರಿ 'ಪ್ರಸಂಗ' ಹೇಳಿಸುವುದನ್ನು ನೋಡಬಹುದಾಗಿದೆ.

'ಫಣಿಯಮ್ಮ' ಕಾದಂಬರಿಯಲ್ಲಿಯೂ ಲೇಖಕಿ ಪ್ರಸಂಗದ ಬಗೆಗೆ ವಿವರಿಸಿದ್ದಾರೆ.

"ಗಂಡಸರು ಅಡಿಕೆ ಬೇಯಿಸಿ ಒಣಗಿಸುವದಾದರೆ ಆಳುಕಾಳುಗಳಲ್ಲದೆ ಮನೆ ಮಂದಿಯೆಲ್ಲ ಮೆಟ್ಟು–ಕತ್ತಿ ಹಾಡಿ ಅಡಿಕೆ ಸುಲಿಯಲು ಕೂರಬೇಕಾಗುತ್ತಿತ್ತು. ರಾತ್ರಿ ಒಂದು ಗಂಟೆಯವರೆವಿಗೂ ಅಡಿಕೆ ಸುಲಿದು ನಂತರ ಮಲಗುವುದು. ಅಲ್ಲಿಯವರೆಗೆ ಬೇಸರ ಕಳೆಯಲು ಅಲ್ಲಲ್ಲಿ ಹಳ್ಳಿಯ ಹತ್ತಾರು ರಸಿಕರು ಪ್ರಸಂಗದ ಕೂಟ ಮಾಡಿ ಕೊಂಡಿದ್ದು ಅಡಿಕೆ ಕೊಯ್ಲಿನ ದಿನಗಳಲ್ಲಿ ಮದುವೆ–ಮುಂಜಿಗಳಲ್ಲಿ ಪ್ರಸಂಗ ಹೂಡುವುದು, ಬಬ್ರುವಾಹನ ಕಾಳಗ, ಶ್ರೀಕೃಷ್ಣಪಾರಿಜಾತ, ರಾಮಾಂಜನೇಯ ಯುದ್ಧ ಇತ್ಯಾದಿ. ಆಗ ಶೃತಿ ಪೆಟ್ಟಿಗೆಯೂ ಇರಲಿಲ್ಲ. ಏಕನಾದ ತಾಳ, ಮದ್ದಲೆ, ಮೃದಂಗ, ಕೊಳಲು, ಇಂಥವೇ ವಾದ್ಯಗಳು. ಬಣ್ಣಬೇಡ, ವೇಷಬೇಡ, ವಿಸ್ತಾರವಾದ ಅಂಗಳದ ಮಧ್ಯೆ ಪ್ರಸಂಗದವರು ವೃತ್ತಾಕಾರವಾಗಿ ಕೂರುವುದು ಎಲ್ಲ ಗಂಡಸರೇ. ಹೆಣ್ಣು ಪಾತ್ರದ ಮಾತ್ರದ ಮಾತನ್ನೂ ಗಂಡಸರೇ ಆಡಬೇಕು."

ತಮ್ಮ ತಮ್ಮ ಪಾತ್ರದ ಮಾತುಗಳನ್ನು ಪ್ರವರ ಪೌರುಷ ಸಮೇತ ಹೇಳಿ 'ದಂ' ಎಂದು ಮದ್ದಲೆ ಬಡಿಸುವರು.

---

* ಒಂದು ಕೂಗಳತೆ ಎಂದರೆ ಒಂದು ಫರ್ಲಾಂಗ್,

ಒಟ್ಟಿನಲ್ಲಿ ಮಲೆನಾಡಿನ ಜನರು ಕಲಾವಿದರೂ, ಕಲಾಪ್ರೇಮಿಗಳೂ ರಸಿಕರೂ ಹೌದು.

ಮಲೆನಾಡಿನ ತೀರ್ಥಹಳ್ಳಿಯಲ್ಲಿ ನಡೆಯುವ ಎಳ್ಳಮಾಸೆ ಜಾತ್ರೆ ಸುಪ್ರಸಿದ್ಧ ವಾದುದು.

ಪರಶುರಾಮ ದೇವರು ಮಾತೃಹತ್ಯಾ ದೋಷದ ಪರಿಹಾರಾರ್ಥವಾಗಿ ಜಮದಗ್ನಿಯನ್ನುಕೇಳಿದಾಗ—

"ಪ್ರತಿಯೊಂದು ಕ್ಷೇತ್ರದ ನದಿನದಿಗಳಲ್ಲೂ ಈ ಕೊಡಲಿಯನ್ನು ಒಂದುಬಾರಿ ಉಜ್ಜಿ ತೊಳೆದು ಸ್ನಾನ ಮಾಡಿ ದೇವರ ದರ್ಶನ ಮಾಡಿ ಬಾ ಕಡೆಯದಾಗಿ ಎಲ್ಲರಕ್ತ ಪೂರ್ಣ ತೊಳೆಯುತ್ತದೋ ಅಲ್ಲಿಗೆ ನಿನ್ನ ಮಾತೃ ಹತ್ಯಾದೋಷ ಪರಿಹಾರವಾಗುತ್ತಿದೆ." ಎಂದು ಹೇಳಿ ಕಳಿಸಿದನಂತೆ.

ಪರಶುರಾಮ ಕರ್ನಾಟಕದ ಎಲ್ಲಾ ತೀರ್ಥಗಳಲ್ಲೂ ಮುಳುಗಿ ಎದ್ದನಂತೆ. ಕೊನೆಗೆ ಪುಷ್ಯ ಬಹುಳ ಅಮವಾಸ್ಯೆ, ರಾಮದೇವರು ಸ್ಥಾಪಿಸಿದ ತುಂಗಾತೀರದ ತೀರ್ಥಹಳ್ಳಿಯ ಪಾಪನಾಶಿನಿ ತೀರ್ಥದಲ್ಲಿ ಕೊಡಲಿಯನ್ನು ಅದ್ದಿದಾಗ ಎಳ್ಳುಕಾಳಿನಷ್ಟು ರಕ್ತವೂ ತೊಳೆದು ಪರಿಶುದ್ಧವಾಯಿತಂತೆ. ಪರಶುರಾಮನ ಪಾಪ ಪರಿಹಾರವಾದ್ದರಿಂದ ಆತ "ಈ ಅಮಾವಾಸ್ಯೆಯಲ್ಲಿ ಇಲ್ಲಿ ಸ್ನಾನ ಮಾಡಿದವರಿಗೆ ಎಲ್ಲ ಪಾಪಗಳೂ ಪರಿಹಾರವಾಗುತ್ತವೆ ಎಂದು ಸಾರಿದ್ದ ಕಾರಣ ಅಂದಿನಿಂದ ಇಂದಿನವರೆಗೂ ಜಾತ್ರೆ ನಡೆಯುತ್ತದೆ."

ಇದು ಪೌರಾಣಿಕ ಐತಿಹ್ಯ. ಎಳ್ಳಮವಾಸ್ಯೆ ಜಾತ್ರೆಯಲ್ಲಿ ಬಸವನಾಟ, ಭಾಗವತ, ದೊಂಬರಾಟ, ಯಕ್ಷಗಾನ, ಬಯಲಾಟ, ನಾಟಕ ನಡೆಯುತ್ತವೆ.

'ತುಂಗಭದ್ರ' ಕಾದಂಬರಿಯಲ್ಲಿ ಎಳ್ಳಮವಾಸ್ಯೆ ಜಾತ್ರೆಗೆ ನಾಟಕಗಳ ದಿಗ್ಗಜ ಎನಿಸಿದ ವರದಾಚಾರ್ಯರ ನಾಟಕ ಕಂಪನಿ ಬಂದಾಗ ಊರ ರಸಿಕರೆಲ್ಲ ನಾಟಕ ನೋಡಿ ಸಂತಸಪಟ್ಟು ವರದಾಚಾರ್ಯರಿಗೆ ಹಣದ ಹೊಳೆಯನ್ನೇ ಹರಿಸಿದುದನ್ನು ಇಲ್ಲಿ ನೆನೆಯಬಹುದು.

'ತಗ್ಗಿನಮನೆ ಸೀತೆ' ಯಲ್ಲೂ ಎಳ್ಳಮವಾಸ್ಯೆ ಜಾತ್ರೆಗೆ ಶಿರಹಟ್ಟಿ ಕಂಪನಿಯವರ ನಾಟಕವೂ ಬಂದಿತ್ತು–ಎಂಬುದನ್ನು ನೋಡಬಹುದು,

"ನಮ್ಮಲ್ಲಿ ಮಹಾ ಮಹಾ ರಸಿಕರಿದ್ದಾರೆ, ಕುಚೋದ್ಯಗಾರರಿದ್ದಾರೆ, ವಿನೋದಿಗಳಿದ್ದಾರೆ. ಕುಶಲಕಲೆ, ಲಲಿತಕಲೆಗಳಲ್ಲಿ ನುರಿತವರಿದ್ದಾರೆ. ಬದುಕಿನ ನಿರಂತರ ಹೋರಾಟದಲ್ಲೂ ಅವರು ಯಕ್ಷಗಾನ ಬಯಲಾಟ ಪ್ರಸಂಗ, ಹರಿಕಥೆಗಳಂತಹ ಕಾವ್ಯ ಕಲೆಗಳನ್ನು ಮೈಗೂಡಿಸಿಕೊಂಡು ವಿರಾಮ ವೇಳೆಗಳಲ್ಲಿ ಒಂದಾಗಿ ಕಲೆತು ದಿನದ ದುಡಿಮೆಯ ಆಯಾಸವನ್ನು ಮರೆಯುವ ಸಲುವಾಗಿ ಒಂದೊಂದು ಮನರಂಜನೆ ಮಾಡಿಕೊಂಡಿರುವುದುಂಟು"–ಎಂದು ಕಾದಂಬರಿಕಾರ್ತಿ ಮಲೆನಾಡಿನ ಕಲೆಯ ಬಗ್ಗೆ ಅಭಿಮಾನದಿಂದ ನುಡಿದಿದ್ದಾರೆ.

ಮನೆಯಲ್ಲಿ ಹಾಲು, ಹೈನು, ಸುಮೃದ್ಧವಾಗಿರುತ್ತದೆ. ತೋಟದ ತರಕಾರಿ, ಮನೆಯ ಭತ್ತ, ಅಡಿಕೆ, ಬಾಳೆ, ತೆಂಗು, ಹಲಸ, ಮಾವು ಇವುಗಳಿಗೆ ಕೊರತೆಯಿರುವುದಿಲ್ಲ. ಅವರು ಭೋಜನ ಸುಖಿಗಳು. ಮನೆಯ ಅಕ್ಕಿ, ತರಕಾರಿ, ಹಾಲು, ಹಣ್ಣು ಹಂಪಲಿನಿಂದ ರುಚಿ ರುಚಿಯಾದ ಖಾದ್ಯಗಳನ್ನು ಗೃಹಿಣಿಯರು ತಯಾರಿಸುತ್ತಾರೆ. ತೋಟದ ಕುಡಿಬಾಳೆ ಎಲೆಯಲ್ಲಿ ತೃಪ್ತಿಯಾಗುವಂತೆ ಮಾಡುತ್ತಾರೆ.

ದಿನನಿತ್ಯ ಅನ್ನ, ಹೊನಗನ್ನೆಸಾರು, ದಿಂಡಿನ ಕಾಯಿ ಗೊಜ್ಜು ಇತ್ಯಾದಿ ಅಡಿಗೆ ಮಾಡುತ್ತಾರೆ. 'ತಗ್ಗಿನ ಮನೆ ಸೀತೆ'ಯಲ್ಲಿ 'ದೋಟಿಸುಬ್ಬ' ಹಾಗೂ ಶಂಕರಭಟ್ಟರು ಗಡದ್ದಾಗಿ ಊಟ ಮಾಡುತ್ತಾರೆ. ಪಕಾಲಿ (ಒಂದು ಬಗೆಯ ಪಾತ್ರೆ) ಗಟ್ಟಲೆ ಕಾಫಿ ಕುಡಿಯುತ್ತಾರೆಂಬುದನ್ನು ನೆನೆಯಬಹುದು.

ಹಾಳಕುಂಟಿ (ಅಡಿಕೆಹಾಳೆ)ಯಿಂದ ಮನೆಯನ್ನು ಸಾರಿಸುತ್ತಾರೆ. ಕೆಸುವಿನ ಒಡೆ, ಮಜ್ಜಿಗ್ಗಡುಬು, ಹಾಲುಬಾಯಿ (ಗೋಧಿ ನೆನೆಸಿ ಅದರ ಹಾಲಿನಿಂದ ತಯಾರು ಮಾಡುವ ಸಿಹಿತಿಂಡಿ) ಹೊನಗನ್ನೆ ಸಾರು ಇತ್ಯಾದಿ ಮಲೆನಾಡಿನ ವಿಶೇಷ ತಿಂಡಿಗಳು, ಹೆಸರುಹಿಟ್ಟಿನ ಪಾನಕ, ಬೇಲದಹಣ್ಣಿನ ಪಾನಕ ಇವು ವಿಶೇಷ ಪಾನೀಯಗಳು.

ಮಲೆನಾಡಿನ ಮಕ್ಕಳ ಬಾಲ್ಯ ಜೀವನ ಮುಗ್ಧವಾದುದು. ಅಲ್ಲಿನ ಮಕ್ಕಳು ನಿಸರ್ಗದ ಹಕ್ಕಿಗಳಂತೆ. ತುಂಗಭದ್ರೆ, ಮುದ್ದುರಾಮ, ಮಂದಾಕಿನಿ ಇವರೆಲ್ಲರು ಬಾಲ್ಯ ಜೀವನ ಮುಗ್ಧರಾಗಿರುವರು. ಹೊಳೆದಂಡೆ, ರಾಮಮಂಟಪ, ಅಲ್ಲದೆ ಅಲ್ಲಿ ಸಿಗುವ ಅಮಟೆಕಾಯಿ ತಿನ್ನುವದು ಇವು ಅತ್ಯಂತ ಮುಗ್ಧವಾಗಿ ಚಿತ್ರಿತವಾಗಿವೆ.

ತಗ್ಗಿನಮನೆ ಸೀತೆ ಬಾಲ್ಯ ಜೀವನವೂ ನಿಸರ್ಗದಷ್ಟೇ ಮುಗ್ಧ ಸಹಜ ಸುಂದರವಾಗಿ ಚಿತ್ರಿತವಾಗಿದೆ.

ಪೇರಲಕಾಯಿ, ಬೆಮ್ಮಾರಲ, ಕಲ್ಲುಸಂಪೆ, ಕಾಕೆಹಣ್ಣುಗಳನ್ನು ಮಕ್ಕಳು ತಿನ್ನುತ್ತಾರೆ.

ಚನ್ನೆಮಣೆ, ಚೌಕಾಬಾರಾ, ಕವಡೆ, ಗಜ್ಜುಗ ಆಟಗಳನ್ನು 'ತುಂಗಭದ್ರೆ' ಹಾಗೂ 'ತಗ್ಗಿನಮನೆ ಸೀತೆ' 'ಫಣಿಯಮ್ಮ' ಕಾದಂಬರಿಗಳಲ್ಲಿ ಉಲ್ಲೇಖಿಸಿದ್ದಾರೆ.

ಗಜ್ಜುಗ ಆಡುವಾಗ

'ಓನಂದಿ, ಬಾನಂದಿ ಕೂಸುನೆರೆ' ಎಂದು ಹಾಡುತ್ತ ಕೃಷ್ಣ ತುಂಗಭದ್ರೆಯರು ಆಟ ಪ್ರಾರಂಭಿಸುತ್ತಾರೆ. ಅಲ್ಲದೆ—

'ತಟಿಕೆ ಮುಟಿಕೆ ತಾಳರದೇವಿ

ಕಣ್ಣಾಮುಚ್ಚೆ—ಕಾಡೆಕೂಡೆ

ಸಾರ್ ಭೋರ್‌ಭಂಗಿ—ಬಂಗಾರಕ್ಕನ ತಂಗಿ' ಇವೆಲ್ಲ ಆಟಗಳನ್ನು ಹಾಡುತ್ತ ಆಡುತ್ತಾರೆ.

ಜನರು ಹೆಸರುಗಳನ್ನು ಚುಟುಕಾಗಿ ಇಟ್ಟುಕೊಳ್ಳುತ್ತಾರೆ. ಮೋಟೆ, ಸಾವಿತ್ರಿ, ಸಾತಿ, ಪಾರ್ವತಿ—ಪಾತಿ, ಲಕ್ಷ್ಮಿದೇವಿ—ಅಚ್ಚಂದಿ, ಮೀನಾಕ್ಷಿ—ಮೀನಿ, ಬನಸಂಕರಿ —ಬಾನಿ, ಶ್ರೀಲಕ್ಷ್ಮಿ—ಶೀಲಕ್ಕಿ ಮಹಾಲಕ್ಷ್ಮಿ—ಮಾಚಿಕಾಮಾಕ್ಷಿ—ಕಾಮಚ್ಚಿ ಇವೆಲ್ಲ ಹೆಸರುಗಳು ಅವರ ಕಾದಂಬರಿಗಳಲ್ಲಿ ಕಂಡು ಬರುತ್ತವೆ. ಮನೆಯಲ್ಲಿ ಸಾಕಿದ ಪಶು ಪ್ರಾಣಿಗಳಿಗೂ ಅನ್ವರ್ಥನಾಮಗಳನ್ನಿಡುತ್ತಾರೆ.

"ಹುಳುಕ, ಕರಿಯ, ಕೆಂಚ, ಜೂಲ ಇವು ನಾಯಿಗಳ ನಾಮಧೇಯ. ಹಣೆಚಿಕ್ಕಿ ಹೂಬಾಲ ಹಂಡ, ದಾಸು, ಇತ್ಯಾದಿ ಎತ್ತಿನ ಹೆಸರುಗಳು. 'ಕೌಲಿ, ಕೆಂದಿ, ಕಾಳಿ, ದುಖಾ ಇತ್ಯಾದಿ ದನದ ಹೆಸರುಗಳು. ರೂಪ ಬಣ್ಣ ಗುಣಗಳ ಆಧಾರದ ಮೇಲೆ ಇಟ್ಟವು.

ಮಲೆನಾಡಿನ ಗೋಪಾಲಕರು ಧೀರರೂ, ಜಾಣರೂ ಆಗಿರುತ್ತಾರೆ. ಒಂದು ಕೊಳಕು ಲಂಗೋಟಿ, ಒಂದು ಹರಕಲು ಕಂಬಳಿಕುಪ್ಪೆ, ಒಂದು ಉದ್ದ ಬಿದಿರ್ ಕೋಲನ್ನು ಹಿಡಿದಿರುತ್ತಾರೆ. ಅವರದು ತೀರ ಬಡತನದ ಬದುಕು. ಕಾಡಿನಲ್ಲೇ ಓಡಾಡುವ ದನಗಾಹಿಗಳು ಕ್ರೂರ ಪ್ರಾಣಿಗಳಿಗೆ ಹೆದರುವುದಿಲ್ಲ. ಪ್ರತಿಯೊಂದು ಹಸುವಿಗೂ ಒಂದೊಂದು ಹೆಸರು ಇಟ್ಟಿರುತ್ತಾರೆ, ಹಸುಕಾಯುವ ಉದ್ಯೋಗವನ್ನು ಪ್ರೀತಿಯಿಂದ ಮಾಡುತ್ತಾರೆ.

"ಮಲೆನಾಡಿನ ಗೋಪಾಲಕರು ದಿಟ್ಟರು, ಕೆಚ್ಚೆದೆಯಾಳುಗಳು ! ಅಲ್ಲದೆ ಕಷ್ಟ ಸಹಿಷ್ಣುಗಳು. ಗಿರಿವನಗಳಲ್ಲಿ ಮಳೆ ಬಿಸಿಲೆನ್ನದೆ ಅಲೆದು ಅಲೆದು ಗಟ್ಟಿಮುಟ್ಟಾಗಿರು ವರು. ಅವರ ಉಡುಪೆಂದರೆ ಮೊಳಕಾಲು ಮೀರದ ಕೊಳಕಾದ ಪಂಚೆ, ಒಂದು ಯಾರಾದರೂ ಪುಣ್ಯಾತ್ಮರು ದಾನ ಮಾಡಿದ ಹರಕು ಅಂಗಿ ಒಂದು ; ಕಂಬಳಿಯೊಂದು ಮಾತ್ರ ಇದ್ದೇ ಇರುತ್ತದೆ. ಸೊಂಟಕ್ಕೆ ಒಡ್ಯಾಣವೆಂಬ ದಟ್ಟಿಯನ್ನು ಬಿಗಿಯುತ್ತಾರೆ. ಒಡ್ಯಾಣ ಅವರ ಸ್ವಂತ ತಯಾರಿ. ಅದಕ್ಕೆ ಹಿಂಭಾಗದಲ್ಲಿ ಒಂದು ಕಬ್ಬಿಣದ ಕೊಂಡಿ ಯನ್ನಿಡುವರು. ಆ ಕೊಂಡಿಯಲ್ಲಿ ಅವರು ಸದಾ ತಮ್ಮ ಕೆಲಸದ ಕತ್ತಿಯನ್ನು ಸಿಕ್ಕಿಸಿ ಕೊಂಡೇ ಇರುತ್ತಾರೆ. ಅದಿಲ್ಲದೇ ಅವರು ಹೊರಡುವುದೇ ಇಲ್ಲ. ಬಣ್ಣದಲ್ಲಿ ಅವರು ಸ್ವಲ್ಪ ಕಪ್ಪು ಮೊಂಡಾದ ಅವರ ದೇಹ ಅವರ ಜೀವನದ ಕಾಠಿಣ್ಯವನ್ನು ತೋರ್ಪಡಿ ಸುವುದು. ಆದರೂ ಅವರ ನಡೆನುಡಿಯಲ್ಲಿ ಬಹಳ ವಿನಯರು ಗರ್ವವಿಲ್ಲ...ಅಂಥ ಸೌಜನ್ಯ ಅವರಿಗೆ ಗೋವುಗಳ ಸಹವಾಸದಿಂದ ಬಂದಿದೆಯೋ ಏನೋ ಗೊತ್ತಾಗುವು ದಿಲ್ಲ"[1] ಎಂದು ಮಲೆನಾಡಿನ ಬದುಕಿನಲ್ಲಿ ಹಾಸು ಹೊಕ್ಕಾಗಿ ಬೆಳೆದ ರಾಷ್ಟ್ರ ಕವಿ ಕುವೆಂಪುರವರು ಗೋಪಾಲಕರ ಬಗೆಗೆ ಪ್ರೇಮದಿಂದ ನುಡಿದಿದ್ದಾರೆ.

"ಆಗಲೇ ಹೇಳದಂತೆ ಮಲೆನಾಡಿನ ಹಳ್ಳಿಗೆ ಒಂದೊಂದೇ ಮನೆಗಳಿರುತ್ತದೆ. ಉಳಿದವು ಹೊಲಗದ್ದೆಗಳಲ್ಲಿ ಕೆಲಸ ಮಾಡುವ ಗೌಡರು ಅದೂ ಹೊಲೆಯರ

1. ತಪ್ಲೆ, ಕಲ್ಮುರಿಗೆ, ಬಾಳಿ, ಬಳ್ಳಿ ಕೊಳಗ, ಕೈಬಟ್ಲ.

ಗುಡ್ಡ್ಲುಗಳು"[1] ಬೇರೆ ಕಲಾದರ್ಶಿ ಕಾದಂಬರಿಯಲ್ಲಿರುವ ಹೀರೇತೋಟ, ಗುಡ್ಡದ ಮಠ, ಇವೆಲ್ಲ ಒಂದೊಂದೇ ದೊಡ್ಡ ಮನೆಗಳನ್ನು ಹೊಂದಿರುವ ಹಳ್ಳಿಗಳು. ಮಲೆನಾಡಿನ ನಿಸರ್ಗದಂತೆ ಅಲ್ಲಿಯ ಜೀವನವೂ ಅತ್ಯಂತ ಮುಗ್ಧ ಹಾಗೂ ಶಾಂತವಾದುದು.

ಕುವೆಂಪು ಅವರು ಹೇಳುವಂತೆ :

"ನಗರಗಳಲ್ಲಿರುವಂತೆ ಧ್ರುತಪದ ಸಂಚಾರವಿಲ್ಲ. ಮೋಟಾರು, ಮೊದಲಾದ ಆತುರದ ಯಾನಗಳ ಗಡಿಬಿಡಿಯಿಲ್ಲ. ಸಿನಿಮಾ, ನಾಟಕ ಶಾಲೆಗಳ ಉದ್ವೇಗವಿಲ್ಲ. ಚಿತ್ರ ವಿಚಿತ್ರವಾದ ವರ್ತಮಾನ ಸಂಕುಲದಿಂದ ಸವಿಚ್ಛನ್ನುವಾಗಿ ಶಾಂತಿ ಭಂಗ ಕಾರಿಗಳಾಗಿರುವ ಚಿತ್ರಗುಪ್ತನ ದಪ್ತರದಂತಿರುವ ಪತ್ರಿಕೆಗಳ ಗಲಭೆಯಂತೂ ತೀರ ಕಡಿಮೆ. ಅಲ್ಲಿರುವುದು ಕೇವಲ ಶಾಂತಿ ವನ್ಯವಾದರೂ ಅನಾಗರಿಕವಲ್ಲದ ಶಾಂತಿ."

ಇಂದಿರಾ ಅವರ ಕಲಾದರ್ಶಿ, ತುಂಗಭದ್ರೆ, ತಗ್ಗಿನ ಮನೆ ಸೀತೆ, ಇನ್ನಿತರ ಮಲೆನಾಡಿನ ಕಾದಂಬರಿಗಳ ನಿಸರ್ಗವು ಅತ್ಯಂತ ರಮಣೀಯವಾಗಿ ಕಾಡಿನ ಪ್ರತಿಯೊಂದು ವೃಕ್ಷವೂ ಮೌನ ತಪಸ್ವಿನಿಯಂತೆ ಗಂಭೀರವಾಗಿದೆ. ಹಕ್ಕಿ-ಪಕ್ಷಿಗಳ ಕಲರವರೊಂದಿಗೆ ಕೊಟ್ಟಿಗೆಯ ಕರುಗಳ 'ಅಂಬಾ' ಎಂಬ ಧ್ವನಿಯಿಂದ ಮನೆಯ ಹೆಂಗಳೆಯರು ಎಚ್ಚತ್ತು ತಮ್ಮ ಕೆಲಸ ಪ್ರಾರಂಭಿಸುತ್ತಾರೆ. ಗೃಹಿಣಿಯರ ದೈನಂದಿನ ಕಾರ್ಯಕಲಾಪಗಳನ್ನು ಅವರು ಚಿತ್ರಿಸಿದ್ದಾರೆ. (ಪುಟ-೪, ತ. ಸೀ.) ಹಾಳೆಕುಂಟ ಸಗಣಿ ಈಚಲ ಹಿಡಿ, ನೀರ, ಹಿಡಿದು ಹೊರಟಳೆಂದರೆ ಮುಂದಿನ ದೊಡ್ಡ ಜಗುಲಿಯನ್ನು ಪೂರ್ತಿ ಹಾಳೆ ಕುಂಟಿನಲ್ಲಿ ಸಾರಿಸಿ ರಂಗವಲ್ಲಿ ಇಡಬೇಕು. ಅದೆಲ್ಲ ಆಗಿನ ಹುಡುಗಿಯರಿಗೆ ಕೆಲಸವೇ ಅಲ್ಲ. ನಂತರ ದನ ಕರೆದು, ಮಜ್ಜಿಗೆ ಕಡೆದು ಮನೆಯೆಲ್ಲ ಗುಡಿಸುವುದು. ಗಡಿಯಾರವಿಲ್ಲದ ಹೆಂಚಿನ ಬಿಸಿಲುಕೋಲು ದೇವರ ಗುಡಿಗೆ ಬಿದ್ದಾಗ ಒಂಬತ್ತು ಗಂಟೆ ಎಂದು ಲೆಕ್ಕ. ಮಳೆಗಾಲದ ದೂರದ ಹೊಲೆಯರ ಹಟ್ಟಿಯ ಕೋಳಿಗಳು ಕೂಗಬೇಕು. ಎಳೆಗರುಗಳು ಎದ್ದು ನಿಂತು ಅಂಬಾ ಎಂದು ಕೂಗಿದರೆ ಐದು ತಾಸಾಗಿರಬಹುದೆಂದು ಅಂದಾಜು. ಹೀಗೆ ಅವರ ದೈನಂದಿನಗಳ ಕಾರ್ಯಗಳು ಮುಂದುವರಿಯುತ್ತದೆ. ತುಂಗಭದ್ರೆ (ಪುಟ-೨೩).

ಬೆಳಗಿನ ಜಾವದಲ್ಲಿ ತಾಯಿ ಏಳುವ ಮೊದಲೇ ತುಂಗಭದ್ರೆಯರಿಗೆ ಎಚ್ಚರವಾಗುತ್ತಿತ್ತು. ಅವರಿಬ್ಬರೂ ಒಂದೇ ಹಾಸಿಗೆಯಲ್ಲಿ ಒಂದೇ ಕಂಬಳಿಯಲ್ಲಿ ಮಲಗುತ್ತಿದ್ದದ್ದರಿಂದ ಒಟ್ಟಿಗೆ ಎದ್ದು ಕುಳಿತುಕೊಳ್ಳುವದು. ಹೊರಗಿನ ವಾತಾವರಣ ಗಾಳಿ, ಹಕ್ಕಿ-ಪಕ್ಷಿಗಳ ಕಲರವದಿಂದ ಇಷ್ಟೇ ಹೊತ್ತಾಗಿದೆ ಎಂದು ಅವರು ಊಹಿಸುತ್ತಿದ್ದರು. ಸ್ವಲ್ಪ ಹೊತ್ತಿನಲ್ಲೇ ಮೂಕಮ್ಮ ಏಳುವರು.

---

1. ನಾನು ಮಾರ್ಚ್ 25-1984ರಂದು ಕಾದಂಬರಿಕಾರ್ತಿ ಇಂದಿರಾ ಅವರೊಡನೆ ಮಲೆನಾಡಿನ ಪ್ರವಾಸಕ್ಕೆ ಹೋದಾಗ ಅಲ್ಲಿನ ಶೀಣವಾಗಿ ಹಳ್ಳಿಯಲ್ಲಿಯೂ ನಾನು ಮೇಲೆ ವಿವರಿಸಿದಂತೆಯೇ ಇದೆ.

ಈಗ ಐದು ಗಂಟೆ ಅಲ್ವೇನೆ ತುಂಗ ಕೇಳುವಳು. "ಓ ಆಗದೆ ಏನು ? ದೇವಸ್ಥಾನದ ಗಂಟೆ ಕೆಳಸ್ಸುತ್ತೆ ನೋಡು. ಈಗ ಐದ್ಗಂಟೆ ಪಾಪ ಸಿಂಗಾಬಟ್ರು ಹ್ವಳೇಳಿ ಮೈ ತ್ವಾಳದ ಬಂದು ಪೂಜೆ ಮಾಡ್ತಾರಂತೆ....

ಎಳೆ ಬಿಸಿಲ ತಂಗಾಳಿ ಸ್ವಚ್ಛಂದ ವಾತಾವರಣ ಹುಡುಗರಿಂದ ಮುದುಕರವರೆಗೆ ಎಲ್ಲರೂ ಅಲ್ಲಿ ಸೇರುವರು. ನಾನಾ ವಿಧದ ಸಂಭಾಷಣೆ, ಈಜುವ ಸದ್ದು, ಹೆಂಗಸರು ಪಾತ್ರೆ ತೊಳೆಯುವ ಸದ್ದು, ಬಟ್ಟೆ ಒಗೆಯುವ ಸದ್ದು....

ಸಾಯಂಕಾಲ ರಾಮೇಶ್ವರ ದೇವಸ್ಥಾನ, 'ಸುಬ್ಬಾಭಟ್ಟನ ವೀಣೆ' ಮತ್ತೆ ರಾತ್ರಿ 'ರಾಮಸ್ಕಂದಂಹನುಮಂತಂ' ಎಂದು ಹೇಳಿ ಮಕ್ಕಳ ಕಂಬಳಿ ಮುಸುಕು ಹಾಕುವರು."

ಒಟ್ಟಿನಲ್ಲಿ ತುಂಗಭದ್ರೆ ಕಲಾದರ್ಶಿ, ಮೊದಲಾದ ಕಾದಂಬರಿಗಳ ಜನಜೀವನ, ದೈನಂದಿನ ಚಟುಪಟಿಕೆಗಳು ಮನಕ್ಕೆ ಮುದಕೊಡುತ್ತವೆ.

"ಮಲೆನಾಡಿನ ಮನೆಗಳೆಂದರೆ ಪುಟ್ಟ ಕೋಟೆಗಳಂತೆ ಇರುವವು. ದೊಡ್ಡ ಹೆಬ್ಬಾಗಿಲು ದಪ್ಪವಾದ ಸುತ್ತುಗೋಡೆ ಸ್ವಲ್ಪ ಸ್ಥೂಲವಾಗಿ ಹೇಳುವುದಾದರೆ ನಾಜೂಕಿನ ದೃಷ್ಟಿಗಿಂತ ಬಲದ ದೃಷ್ಟಿಯೂ ಹೆಚ್ಚು. ಏಕೆಂದರೆ ಆ ಕಾಡಿನಲ್ಲಿ ಆ ಮಳೆಯಲ್ಲಿ ಆ ಬಿರುಗಾಳಿಯಲ್ಲಿ ಆ ಸಿಡಿಲು ಮಿಂಚುಗಳರುದ್ರವಾದ ನಲಿದಾಟದಲ್ಲಿ ಮನೆಗಳು ಭೀಮಾಕಾರವಾಗಿರದಿದ್ದರೆ ಬಹಳ ಕಾಲ ಬಾಳುವುದಿಲ್ಲ.*"

ಮನೆಗಳಲ್ಲಿ ಅಡಿಕೆ ಬೇಯಿಸುವ ಒಲೆಗಳೇ ಬೇರೆಯಾಗಿರುತ್ತವೆ. ಕಲಾದರ್ಶಿಯಲ್ಲಿ ಕಿಟ್ಟು "ಮನೆಯೊಳಗೆ ಕಾಲಿಟ್ಟಾಗ ಹೊರಹಟ್ಟಿಯ ಮೂಲೆಯಲ್ಲಿ ಅಡಿಕೆ ಒಲೆ ಧಗ ಧಗ ಉರಿಯುತ್ತಿತ್ತು. ನನ್ನ ಚಿಕ್ಕಪ್ಪ ಅಂದರೆ ನನ್ನ ತಾಯಿಯ ತಂಗಿಯ ಗಂಡ ನಾಗಪ್ಪಯ್ಯ ಉದ್ದವಾದ ತೋಡು ಗೋಲಿನಿಂದ ಅಡಿಕೆಯ ಹೊಗರನ್ನು ಒಲೆಯ ಮೇಲಿನ ಹಂಡೆಗೆ ತೋಡುತ್ತಿದ್ದರು"[1] ಎಂದು ಆಗಾಗ ಅಡಿಕೆ ಬೇಯಿಸುವ ವಿಧಾನವನ್ನು ಹೇಳುತ್ತಾನೆ,

ಹಲಸಿನ ಹಣ್ಣಿನಿಂದ ವಿವಿಧ ಖಾದ್ಯಗಳನ್ನು ತಯಾರಿಸುತ್ತಾರೆ. ಹಲಸಿನ ಮುಳಕು ವಿಶೇಷ ತಿಂಡಿ.

---

* ಗುಡ್ಡದ ಮಠದಲ್ಲಿರುವ ಮನೆ ಬಹಳ ಗಟ್ಟಿಮುಟ್ಟಾದದ್ದು ಮತ್ತು ಪರಿಶುಭ್ರವಾದದ್ದು ಸುಂದರವಾದದ್ದು ಆಗಿತ್ತು. ಹಿತ್ತಲಿನಲ್ಲಿ ಅಬ್ಬೆ ನೀರು ಹರಿದು ತೋಟಗಳಿಗೆ ಹೋಗುತ್ತಿತ್ತು. ಮನೆಯ ಮುಂದೆ ವಿಶಾಲ ಚಪ್ಪರವನ್ನು ಹಾಕಲಾಗಿತ್ತು. ಸುಮಾರು ಇನ್ನೂರು ಜನ ಒಮ್ಮೆಲೆ ಊಟಕ್ಕೆ ಕುಳಿತುಕೊಳ್ಳಬಹುದಾದಷ್ಟು ದೊಡ್ಡ ಊಟದ ಮನೆಗಳು. ಗಟ್ಟಿಮುಟ್ಟಾದ ಕಂಬಗಳು ಹೆಚ್ಚಿನ ಸಾಮಾನುಗಳನ್ನು ಸಂರಕ್ಷಿಸಲು ಅಟ್ಟ.

1, ಕಲಾದರ್ಶಿ, ಪುಟ–13,

ತಂಗಭದ್ರೆ ಕಾದಂಬರಿಯಲ್ಲಿ 'ದೋಣಿಮಿಾಂಯಾ'ದ ಉಲ್ಲೇಖವಿದೆ. ಫಣಿಯಕ್ಕನೆಂದರೆ ಮುದ್ದುರಾಮನಿಗೆ ಅತೀ ಸಲಿಗೆ. ಅನೇಕಬಾರಿ ಆಕೆಗೆ ಹೊಡೆದುದೂ ಉಂಟು. ಸ್ಕೂಲಿನ ದಿನಗಳಲ್ಲಿ ಭಾನುವಾರ ಅವನು ಹುಣಸೇ ಕೊಪ್ಪಲಿಗೆ ಹೋಗುತ್ತಿದ್ದ. ಅವನು ಹೋಗುತ್ತಿದ್ದುದು ಹಣ್ಣು, ಹಂಪಲುಗಳಿಗಾಗಿ. ಅವೆರಡೂ ಧಾರಳವಾಗಿ ಸಿಗುತ್ತಿತ್ತು. ಜತೆಗೆ ಫಣಿಯಕ್ಕನ 'ಮಿಾಂಯಾ' ಸಿಗುತ್ತಿತ್ತು.

'ಆ ಭಾವಿ ನೀರಾಗೆ ಬಾಗಮ್ಮ ಯಂತ ಮಿಾಯಾಡ ಮಾಡಸ್ತಾಳ ಬಾರ ಮುದ್ದೂ ತುಸ ಯಣ್ಣೆ ಮಿಾಯಾ ಮಾಡಸ್ತನಿ' ಎನ್ನುತ್ತ ಮುದ್ದುರಾಮನ ರಟ್ಟೆ ಹಿಡಿದು ತಲೆ, ಮೈತುಂಬ ಎಣ್ಣೆ ಹಂಡೆ ಕುದಿ ನೀರು ಸುರಿದು ಮಿಾಯಾ ಮಾಡಿಸುವಳು.[1]

ಮಲೆನಾಡಿನಲ್ಲಿ 'ದೋಣಿಮಿಾಂಯಾ'* ವಿಶೇಷವಾದುದು 'ಒಂದೇ ನಿಮಿಷ', 'ರಸವಾಹಿನಿ' 'ತಾಪದಿಂದ ತಂಪಿಗೆ' 'ಕೂಚುಭಟ್ರ' 'ತಾಳಿದವರು' 'ಟುಲೆಟ್' 'ಮನೆಕೊಟ್ಟುನೋಡು' 'ಗೆಜ್ಜೆಪೂಜೆ' ಈ ಮೊದಲಾದ ಕೆಲವು ಕಾದಂಬರಿಗಳನ್ನು ಬಿಟ್ಟರೆ ಉಳಿದ ಕಾದಂಬರಿಗಳಲ್ಲಿ ಮಲೆನಾಡಿನ ಪರಿಸರವೇ ಚಿತ್ರಿತವಾಗಿದೆ.

ಸದಾನಂದದಲ್ಲಿ ಚಿಕ್ಕಮಗಳೂರು, ದುಂಡುಮಲ್ಲಿಗೆ, ತುಂಗಭದ್ರದಲ್ಲಿ ತೀರ್ಥ ಹಳ್ಳಿ, 'ಫಣಿಯಮ್ಮ' ಹೆಬ್ಬಲಿಗೆ ಅಲ್ಲದೆ ಕಾದಂಬರಿಯಲ್ಲಿ ಮಾಳೂರ, ಹೀರೆಸಾವೆ, ಗುಡ್ಡದಮಠ, ಶೀಕೆ, ಕೋಣಂದೂರು ಮಾದೂರ ಗುಡ್ಡೆಪಾಲು, ಬಾಳಗಾಡು, ಬಾಂಡ್ಯ, ಕುಕ್ಕೆ, ಕಸಗಾರು, ಕಲ್ಲಹಳ್ಳಿ, ಹೆದ್ದೂರ ಅಗರಮೇಗರವಳ್ಳಿ, ಭೀಮನಕಟ್ಟೆ, ವಿರೂಪಾಕ್ಷಿ, ದೇವಂಗಿ. ಕುಪ್ಪಳ್ಳಿ ಅಂಬುತೀರ್ಥನಗರ, ಚಂದನಮಕ್ಕಿ. (ಫಣಿಯಮ್ಮ, ಪುಟ–೧೭–೧೮)

ಸಿಂಬಾವಿ, ಸೀತೂರು, ಲಕ್ಕುಂದ, ಕಾಲೆದುರ್ಗ, ಕಲ್ಲೂರು, ಕೋಣಾರು, ಹಳೆಮನೆ, ಹೂವಳ್ಳಿ,

ಅಕ್ಲಾಪುರ, ದೇವಲಾಪುರ, ಸೋಲಾಪುರ, ಹೊಸ ಆಗ್ರಹಾರ, ತೀರ್ಥ ವತ್ತೂರ, ಅಲ್ಲತ್ತಿ, ಕಿತ್ತೊಂದೂರು, ನಿಜಗೂರು.

ಕುರುವಳ್ಳಿ, ತೆಂಗಣಬೈಲು, ಮೇಳಿಗೆ, ನಂಬಳ, ಲಕ್ಷ್ಮೀಪುರ, ಗೋಪಾಲ ಪುರ, ಚಿಬ್ಬಲುಗುಡ್ಡೆ, ಅಂದಗೇರಿ, ಹಾರೋಕೊಪ್ಪಾ, ಮಹಿಷಿ, ಗುಡ್ಡೆಪಾಲು.

ಮುಂಡಗದ್ದೆ, ಸೀತೂರು, ಹುಮುಚ ಸಿಂಧಘಟ್ಟ...ಇಂದಿರಾ ಸುಮಾರು ಐವತ್ತೆರಡು ಮಲೆನಾಡಿನ ಹಳ್ಳಿಗಳನ್ನು ಹೆಸರಿಸಿದ್ದಾರೆ.

---

1. 'ತುಂಗಭದ್ರ', ಪುಟ–80.

* ಹೆಚ್ಚಿನ ವಿವರಣೆಗಾಗಿ ಕುವೆಂಪುರವರ 'ಮಲೆನಾಡಿನ ಚಿತ್ರಗಳು' ಎಂಬ ಪುಸ್ತಕವನ್ನು ನೋಡಿ.

ಕಾದಂಬರಿಕಾರ್ತಿ ಇಂದಿರಾ ಅವರ ಕಾದಂಬರಿಗಳಲ್ಲಿ ಚಿತ್ರಿತವಾದ ಮಲೆನಾಡು ವಾಸ್ತವವಾಗಿ ಮೂಡಿದೆ. ನಿಸರ್ಗ ರಮ್ಯ ಚೇತೋಹಾರಿಯಾಗಿದೆ. ಭಾಷೆ ಸಹಜ ಸುಂದರವಾಗಿದೆ. ಅಂದಿನ ಸಮಾಜದ ಮೂಢನಂಬಿಕೆ, ಅಜ್ಞಾನ, ವಿದ್ಯೆ ಸ್ತ್ರೀ ಸ್ವಾತಂತ್ರ್ಯವಿರಲಿಲ್ಲ. ಇಲ್ಲಿನ ಜನರು ಕಷ್ಟವನ್ನು ಸುಖದಂತೆ ಸ್ವೀಕರಿಸುವರು. ದುಡಿಮೆಗಾರರು. ಅತಿಥಿ ಸತ್ಕಾರಕ್ಕೆ ಹೆಸರಾದವರು. ರಸಿಕರು, ಕಲಾವಿದರು, ಕಲಾಪ್ರೇಮಿಗಳು, ಕುಟುಂಬ ವತ್ಸಲರು. ಅವಿಭಕ್ತ ಕುಟುಂಬದಲ್ಲಿ ಶ್ರದ್ಧೆಯುಳ್ಳವರು. ಧೈರ್ಯಶಾಲಿಗಳು. ರೋಗರುಜಿನ, ಪ್ರವಾಹ ಸಾವು, ನೋವುಗಳಿಗೆ ಅಂಜದೆ ಧೈರ್ಯದಿಂದ ಜೀವನವನ್ನು ಎದುರಿಸಿದವರು ಸರಳ ಜೀವಿಗಳು.

ದೇವರು, ದೆವ್ವ ಜಕಣಿ, ಕವಡಿ, ಕಣಿ ಭೂತ, ಜೋತಿಷ್ಯ ಮಾಟ–ಕೂಟ ಆಣೆ ಪ್ರಮಾಣ, ಮೊದಲಾದವುಗಳಲ್ಲಿ ಬಲವಾದ ನಂಬಿಕೆ. ಸಂಪ್ರದಾಯಪ್ರಿಯರು. ಕಷ್ಟ–ಸುಖಗಳಲ್ಲಿ ಪರಸ್ಪರ ಭಾಗಿಯಾಗುವ ಸ್ವಭಾವವುಳ್ಳವರು. ಹಾಗೆಯೇ ಮನೆತನದಲ್ಲಿ ಹಳೆಯ ಜಗಳ ರಾಜಕೀಯಗಳೂ ಇವೆ.

ಎಂ. ಕೆ. ಇಂದಿರಾ ಅವರ ಕಾದಂಬರಿಗಳಲ್ಲಿ ಚಿತ್ರಿಸಿದ ಮಲೆನಾಡು ವಾಸ್ತವವಾಗಿ ಮೂಡಿದೆ.

ಅಧ್ಯಾಯ – ಆರು

ಇಂದಿರಾ ಅವರ ಕಾದಂಬರಿಗಳ ಪಾತ್ರಗಳು

'ಪಾತ್ರಗಳಿಲ್ಲದೆ ಕಾದಂಬರಿಯಿಲ್ಲ. ಏಕೆಂದರೆ ಘಟನೆಗಳು ತಾವಾಗಿಯೆ ಆಗಲಾರವು. ಘಟನೆಗಳು ವ್ಯಕ್ತಿಗಳ ಜೀವನದಲ್ಲಿಯೇ ರೂಪುಗೊಳ್ಳಬೇಕು. ಆದುದರಿಂದ ಕ್ರಿಯೆಯೇ ಮುಖ್ಯವಾದ ಕಾದಂಬರಿಗೆ ಕೂಡ ಪಾತ್ರಗಳು ಅನಿವಾರ್ಯ.'[1]

ಪ್ರತಿಭಾವಂತನಾದ ಕಾದಂಬರಿಕಾರ ತನ್ನ ಸುತ್ತಲಿನ ಜಗತ್ತಿನ ವ್ಯಕ್ತಿಗಳನ್ನು ತನ್ನ ವಿಶಿಷ್ಟ ದೃಷ್ಟಿಯಿಂದ ಕಾಣುತ್ತಾನೆ. ವ್ಯಕ್ತಿಗಳ ಹೃದಯವನ್ನು ಒಳಹೊಕ್ಕು ನೋಡುತ್ತಾನೆ. ಅವರ ಹೃದಯದ ಭಾವನೆ, ನಡೆ–ನುಡಿ, ಆಶೆ–ನಿರಾಶೆಗಳನ್ನು ಅರ್ಥಮಾಡಿಕೊಂಡು ಅನುಕಂಪದಿಂದ ಕಾಣುತ್ತಾನೆ. ತಾನು ಕಂಡುದನ್ನು ಇತರರಿಗೆ ಕಾಣಿಸಲು ಯತ್ನಿಸುತ್ತಾನೆ. ಕಾದಂಬರಿ ಒಂದು ಕಲಾಕೃತಿ. ಆದ್ದರಿಂದ ಕಾದಂಬರಿಕಾರ ಸೃಷ್ಟಿಸುವ ಪಾತ್ರಗಳು, ಸುತ್ತಮುತ್ತಲಿನ ವ್ಯಕ್ತಿಗಳಿಗೆ ಹೋಲಿಕೆಯನ್ನು ಹೊಂದಿದ್ದರೂ ಅವನು ತನ್ನ ಕಲ್ಪನಾಶಕ್ತಿಯಿಂದ ಪ್ರತಿಸೃಷ್ಟಿಯ ಕಾರ್ಯವನ್ನು ಸಾಧಿಸುತ್ತಾನೆ.

ಕಾದಂಬರಿಕಾರ್ತಿ ಇಂದಿರಾ ಅವರ ಕಾದಂಬರಿಗಳನ್ನು ಈ ದೃಷ್ಟಿಯಿಂದ ನೋಡಿದಾಗ ಪಾತ್ರಸೃಷ್ಟಿಯಲ್ಲಿ ಅವರು ವಿಶೇಷ ಪ್ರತಿಭೆಯನ್ನೇ ತೋರಿಸಿದ್ದಾರೆ. ಅವರ ಕಾದಂಬರಿಗಳಲ್ಲಿ ಚಿತ್ರಿತವಾದ ಹಲವಾರು ಪಾತ್ರಗಳನ್ನು ಇಲ್ಲಿ ನೋಡಬಹುದು.

ಅವರ ಪ್ರಥಮ ಕಾದಂಬರಿ 'ತುಂಗಭದ್ರ'ದಲ್ಲಿ ಪಾತ್ರಗಳ ಸಂಖ್ಯೆ ನಿಬಿಡವಾಗಿದೆ. ಈ ಕಾದಂಬರಿಯ ನಾಗಾಭಟ್ಟರು, ದುಗ್ಗಾಭಟ್ಟರು, ಭಾಗ್ಯಮ್ಮ, ಮೂಕಮ್ಮ. ಗೋದುಬಾಯಿ, ಫಣಿಯಮ್ಮ, ಗಂಗಮ್ಮ ಈ ಪಾತ್ರಗಳು ಕಾದಂಬರಿಯ ಆರಂಭದಲ್ಲಿಯೇ ಓದುಗರ ಮನಸ್ಸಿನಾಳಕ್ಕೆ ಇಳಿಯುತ್ತವೆ. ಇವರು ಬದುಕಿನುದ್ದಕ್ಕೂ ಹೋರಾಡಿದ ಧೀಮಂತ ವ್ಯಕ್ತಿಗಳು.

ಇದೇ ಕಾದಂಬರಿಯಲ್ಲಿ ನಾಯಕ 'ಮುದ್ದುರಾಮು', ನಾಯಕಿ 'ಕೃಷ್ಣವೇಣಿ', ಮಂದಾಕಿನಿ, ತುಂಗಭದ್ರೆ ಇವರೆಲ್ಲ ಕಾದಂಬರಿಯ ಆರಂಭದಲ್ಲಿ ಎಳೆಯುವರು. ಆದರೆ ಕಾದಂಬರಿಯ ಅಂತ್ಯಕ್ಕೆ ಬದುಕಿನ ಮೂಸೆಯಲ್ಲಿ ಪುಟಗೊಂಡ ಪ್ರಬುದ್ಧ ವ್ಯಕ್ತಿಗಳು ಮತ್ತೊಬ್ಬರ ಜೀವನದ ಶ್ರೇಯಸ್ಸಿಗಾಗಿ ಹಂಬಲಿಸುವ ಹೃದಯವಂತ ಜೀವಿಗಳು.

---

1. ಶ್ರೀ ಎಲ್. ಎಸ್. ಶೇಷಗಿರಿರಾವ್ : 'ಕಾದಂಬರಿ ಸಾಮಾನ್ಯ ಮನುಷ್ಯ' ಪುಟ–67.

ಇದೇ ಮಾತನ್ನು ಸದಾನಂದ ಕಾದಂಬರಿಯ 'ಗೌರಿ', 'ರಾಜು' ಇವರಿಗೂ ಹೇಳಬಹುದು.

'ಸದಾನಂದ' ಕಾದಂಬರಿಯ ಹಿರಿಯ ವ್ಯಕ್ತಿಗಳಾದ ರಾಮಣ್ಣನವರು, ತಮ್ಮಯ್ಯನವರು, ದೇಶಮುಖರು, ಗೋವಿಂದರಾಯರು, 'ಕಲಾದರ್ಶಿ' ಕಾದಂಬರಿಯ ಶೇಷಪ್ಪಯ್ಯ 'ಶಾಂತಿಧಾಮ' ಕಾದಂಬರಿಯ ಶ್ರೀನಿವಾಸರಾಯರು, 'ಸೂತ್ರಧಾರಿ' ಕಾದಂಬರಿಯ ಬಾಲಾಜಿ, ಬಾಳ ಸಂಜೆಯ ಹಿರಿಯ ವ್ಯಕ್ತಿಗಳು. ಜೀವನದ ನಾನಾ ರೀತಿಯ ಕಷ್ಟ ಕೋಟಲೆಗಳಿಗೆ ತುತ್ತಾದ ಅನುಭವಿಕ ಪಾತ್ರಗಳು.

'ಕಲಾದರ್ಶಿ'ಯ ಫಣಿಯಮ್ಮ, ನಾಗಪ್ಪಯ್ಯ 'ಜಾತಿ ಕೆಟ್ಟವಳು' ಕಾದಂಬರಿಯಲ್ಲಿ ಈಶ್ವರಭಟ್ಟರು, 'ಹೂಬಾಣ'ದ ಭಟ್ಟರು, ಮಂಜಯ್ಯನವರು ನಮ್ಮ ಜೀವನಕ್ಕೆ ಅತ್ಯಂತ ಹತ್ತಿರವಾಗಿ ನಿಲ್ಲುವ ಪಾತ್ರಗಳು. ಗೆಜ್ಜೆಯಪೂಜೆಯ 'ಗುಂಡಮ್ಮ' ಸದಾನಂದ ಕಾದಂಬರಿಯ 'ಯಂಟತ್ತೆ' ವಾತ್ಸಲ್ಯದಿಂದ ಚಿರಕಾಲ ನಿಲ್ಲುವ ಪಾತ್ರ. ಇದೇ ಕಾದಂಬರಿಯ 'ಅಚ್ಚಮ್ಮ' 'ಪುಟ್ಟಮ್ಮ' 'ಶಾಂತಿಧಾಮ'ದ 'ಪದ್ಮಮ್ಮ' ನರಸು, ಇವರೆಲ್ಲ ವಾತ್ಸಲ್ಯ, ಔದಾರ್ಯ ಹಿರಿತನದಿಂದ ಬೆಳಗುವ, ಗಮನ ಸೆಳೆವ ಜೀವಂತ ಪಾತ್ರಗಳು.

'ಗೆಜ್ಜೆಪೂಜೆ'ಯ ಚಂದ್ರ, ಅಪರ್ಣ ಇವರು ಬದುಕಿನಲ್ಲಿ ಸಮಸ್ಯೆಯ ಸುಳಿಗೆ ಸಿಕ್ಕು ಓದುಗರ ಅನುಕಂಪಕ್ಕೆ ಪಾತ್ರರಾಗುತ್ತಾರೆ. ಸಮಾಜ ವ್ಯವಸ್ಥೆಯ ಹಿಡಿತಕ್ಕೆ ಸಿಲುಕಿದವರು. ಪುರುಷಶೋಷಣೆ ಸಿಕ್ಕು ನಲುಗಿದ ಹೆಣ್ಣಿನ ಆಕಾಂಕ್ಷೆಯು, ನಾಗು. ತಗ್ಗಿನ ಮನೆಯ ಸೀತೆಯ 'ಅಚ್ಚಿ' 'ಮನೋಮಂದಿರ'ದ ಮಾಲೀರ ಚಿನ್ನಮ್ಮ 'ಜಾತಿ ಕೆಟ್ಟವಳು' ಕಾದಂಬರಿಯ 'ನಾಗು' ಬುಳ್ಳಮ್ಮ 'ಹೂಬಾಣ'ದ ವೇದ ಇವರನ್ನೆಲ್ಲ ಹೆಣ್ಣಿನ ದೃಷ್ಟಿಯಿಂದ ಇಂದಿರಾ ಅವರು ಚಿತ್ರಿಸಿದ್ದಾರೆ.

'ಮನೋಮಂದಿರ'ದ ಚಿನ್ನ 'ಗಿರಿಬಾಲೆ' ಕಾದಂಬರಿಯ ಶಂಕರಿ, ಹಿರಿತನದ ತ್ಯಾಗ ಜೀವಿಗಳು. ಇದೇ ಕಾದಂಬರಿಯ ಹಿರಿಯರಾದ 'ಗಿರಿಯಮ್ಮ' 'ಶೇಷಮ್ಮ' 'ದುಗ್ಗಜ್ಜಿ', ಹೂಬಾಣ ಕಾದಂಬರಿಯ 'ಬಂದಮ್ಮ' ಇವರು ವೃದ್ಧರು ಕಿರಿಯರ ಬಾಳಿಗಾಗಿ ಅವರ ಸುಖಕ್ಕಾಗಿ ಹೋರಾಡುವವರು.

'ಗಿರಿಬಾಲೆಯ' ಜಲಜೆ, ತಗ್ಗಿನಮನೆ ಸೀತೆಯ 'ಶಾಂಭವಿ' 'ತುಂಗಭದ್ರ'ದ ರಂಗಲಕ್ಷ್ಮಿ ಇವರೆಲ್ಲ ವೇಶ್ಯಾಕುಲದವರು. ಸಮಾಜದ ವ್ಯವಸ್ಥೆಯನ್ನು ಒಪ್ಪಿಕೊಂಡವರು. ಆದರೆ ಅವರಲ್ಲಿ ಮಾನವೀಯತೆಗೆ ಕೊರತೆ ಬಂದಿಲ್ಲ. ಶಂಕರಿಗೆ ವೇಶ್ಯೆಯಾದ ಜಲಜೆ 'ಅಮ್ಮ' ಎನ್ನುತ್ತಾಳೆ. 'ತಗ್ಗಿನಮನೆ ಸೀತೆ'ಯಲ್ಲಿ ಶಾಂಭವಿ ಶ್ಯಾಮಣ್ಣನವರು ತುಂಬು ಪ್ರವಾಹದಲ್ಲಿ ಹೆಂಡತಿ ಅನ್ನಪೂರ್ಣಮ್ಮನವರ ಅಂತ್ಯ ದರ್ಶನಕ್ಕೆ ಹೊರಟಾಗ ಶ್ಯಾಮಯ್ಯನವರನ್ನು ಅನುಸರಿಸುವ ವೇಶ್ಯೆ ಶಾಂಭವಿ ಯಾವ ಮಡದಿಗಿಂತಲೂ ಕಡಿಮೆಯಿಲ್ಲ.

ತಗ್ಗಿನಮನೆ ಸೀತೆಯ 'ಸೀತೆ', ತುಂಗಭದ್ರ 'ಫಣಿಯಮ್ಮ' ಹೆಣ್ಣಿನ ಆಕಾಂಕ್ಷೆಯ 'ಪಾತಮ್ಮ' ಪೂರ್ವಾಪರದ 'ಚಿಕ್ಕಮ್ಮ', ಶಾಂತಿಧಾಮದ 'ಬೆಳ್ಳಮ್ಮ' ಈ ಹಿರಿಯರು ಬಾಲವಿಧವೆಯರು. ಪರೋಪಕಾರಿಗಳು.

'ಫಣಿಯಮ್ಮ' ಕಾದಂಬರಿಯ ಕಥಾನಾಯಕಿ. 'ಫಣಿಯಮ್ಮ' ಸಾಹಿತ್ಯಲೋಕದ ಅಪೂರ್ವ ಪಾತ್ರಗಳಲ್ಲಿ ಒಂದು. ಸಮಾಜದ ಕಪಿಮುಷ್ಟಿಯಲ್ಲಿ ಸಿಲುಕಿ, ಅನಿವಾರ್ಯ ವಾಗಿ ತನ್ನ ಜೀವನವನ್ನು ನಾಲ್ಕು ಗೋಡೆಗಳ ನಡುವೆ ಕಳೆದರೂ ಪರೋಪಕಾರಿ ಯಾಗಿ. ಅದಕ್ಕಿಂತಲೂ ಹೆಚ್ಚಾಗಿ ಮಾನವೀಯತೆಯಿಂದ ಪೂಜ್ಯಳಾದ ವ್ಯಕ್ತಿ.

'ತಗ್ಗಿನಮನೆ ಸೀತೆ' ಕನ್ನಡ ಕಾದಂಬರಿಯ ವೈಶಿಷ್ಟ್ಯಪೂರ್ಣವಾದ ಪಾತ್ರ, ಮಲತಾಯಿಯ ಕೈಯಲ್ಲಿ ಬಾಲ್ಯವನ್ನು ಕಳೆದ, ಘಟವಾಣಿ ಅತ್ತೆಯ ಕೈಯಲ್ಲಿ ಜೀವನವನ್ನು ಕಳೆದು ಮಾನವೀಯ ಮೌಲ್ಯಗಳನ್ನು ನಂಬಿ ಬಾಳಿದ ಪರೋಪಕಾರಿ ಧೀಮಂತ ಮಹಿಳೆ.

'ಚಿದ್ವಿಲಾಸ'ದ ಭಾವನಾ, 'ಬಿದಿಗೆ ಚಂದ್ರಮ ಡೊಂಕು' ಕಾದಂಬರಿಯ ಬೃಂದಾ 'ಬ್ರಹ್ಮಚಾರಿ' ಕಾದಂಬರಿಯ ಗಿರಿಜೆ, ಹುಟ್ಟಿದ ಮನೆಯ, ಒಡಹುಟ್ಟಿದವರ ಸುಖಕ್ಕಾಗಿ ಸ್ವಾರ್ಥ ತ್ಯಾಗ ಮಾಡಿದ ವಿವೇಕಯುತ ಆದರ್ಶ ಯುವತಿಯರು.

ಶಾಂತಿಧಾಮ ಕಾದಂಬರಿಯ 'ವಾಸಂತಿ' 'ಹೂ ಬಾಣದ' ಮತ್ತು ಸದಾನಂದ ಕಾದಂಬರಿಯ ಜಾನಕಿ ಹೂ ಮಾರುವ 'ಕಲಾದರ್ಶಿ'ಯ ಪಾಪಚ್ಚಿ ಇವರು ಮುಗ್ಧ ಕೋಮಲೆಯರು.

'ಚಿದ್ವಿಲಾಸ'ದ ರೂಪಾ, 'ಬಿದಿಗೆ ಚಂದ್ರಮಡೊಂಕು' ಕಾದಂಬರಿಯ 'ಗೋದಾವರಿ' 'ಹಸಿವು' ಕಾದಂಬರಿಯ ಕಥಾ ನಾಯಕಿ ಇವರೆಲ್ಲ ತಮ್ಮ ಜೀವನ ವನ್ನು ತಾವೇ ರೂಪಿಸಿಕೊಂಡ 'ದಿಟ್ಟ ಯುವತಿಯರು, ನಾಗವೀಣಾ ಕಾದಂಬರಿಯ 'ನೀಲವೇಣಿ' ಹೂಬಾಣ ಕಾದಂಬರಿಯಲ್ಲಿ ಮುತ್ತುನ ತಾಯಿ, ಇದರೆಲ್ಲ ಸ್ವೇಚ್ಛೆ ಯಾದ ಜೀವನವನ್ನು ಅರಸಿ, ಅನೈತಿಕ ಬದುಕನ್ನು ಅಪ್ಪಿಕೊಂಡ ಸ್ತ್ರೀಯರು.

ತಪೋವನದಲ್ಲಿ ಕಾದಂಬರಿಯ 'ಗಾಯತ್ರಿ' ಮೂಢನಂಬಿಕೆಗೆ ಬಲಿಯಾದ, ಸ್ತ್ರೀಪಾತ್ರ. ಜಾತಿಕೆಟ್ಟವಳು ಕಾದಂಬರಿಯ 'ಕರ್ಣೀಕರು' 'ತುಂಗಭದ್ರೆ'ಯ ತಗ್ಗಿನ ಮನೆ ಶಂಕ್ರಪ್ಪನವರು, 'ತಗ್ಗಿನಮನೆ ಸೀತೆಯ' ಶ್ಯಾಮಯ್ಯನವರು ಶ್ರೀಮಂತಿಕೆಯ ದೌಲತ್ತನ್ನು ಮರೆಯದ ಚಪಲದವರು. ಇವರೆಲ್ಲ ಸಮಾಜದಲ್ಲಿ ಕಾಣುವ ವ್ಯಕ್ತಿಗಳೇ.

'ಜಾತಿಕೆಟ್ಟವಳು' ಕಾದಂಬರಿಯ ಕರ್ಣಿಕರ ಇಬ್ಬರು ಪತ್ನಿಯರು ಸವತಿ ಮಾತ್ಸರ್ಯವಿಲ್ಲದೆ ಬಾಳಿದವರು. ಇದೇ ಮಾತನ್ನು 'ತುಂಗಭದ್ರ'ದ ಗಂಗಮ್ಮನಿಗೂ ಅನ್ವಯಿಸುತ್ತದೆ.

ಕಲಾದರ್ಶಿಯ ಕಿಟ್ಟುವಿನ 'ಚಿಕ್ಕಮ್ಮ' ಅತ್ತಿಗೆ, ಶಾಂತಿಧಾಮದ ಪದ್ಮಮ್ಮ, ನರಸು, ಇವರೆಲ್ಲ ಉತ್ತಮ ಗೃಹಿಣಿಯರು. ಈ ಸ್ತ್ರೀ ಪತ್ರಗಳೆಲ್ಲ ಔದಾರ್ಯಕ್ಕೆ ಹೆಸರಾದವರು.

'ಜಾತಿಕೆಟ್ಟವಳು' ಕಾದಂಬರಿಯಲ್ಲಿ 'ಬುಳ್ಳಮ್ಮ'ನ ಬಸಿರಿಗೆ ಕಾರಣರಾಗಿ ಅವಳನ್ನು ಸಮಾಜದ ತಿರಸ್ಕಾರಕ್ಕೆ ಗುರಿ ಮಾಡಿದ್ದ 'ಜೋಯಿಸ ಮುಸುಕು' ಕಾದಂಬರಿಯ 'ವಿಧವೆ'ಯ ಅಧಃಪತನಕ್ಕೆ ಕಾರಣನಾದ ಪುರುಷ ಇವರೆಲ್ಲ ಕಾಮುಕರು, ಹೆಣ್ಣಿನ ಜೀವನವನ್ನು ಹಾಳು ಮಾಡಿದವರು. 'ಫಣಿಯಮ್ಮ' ಕಾದಂಬರಿಯ ಪುಟ್ಟಾ ಜೋಯಿಸ, 'ಸುಬ್ಬು' ಇವರು ಕಾಮುಕ ಪುರುಷರು ತಮ್ಮ ಸ್ವಾರ್ಥಕ್ಕಾಗಿ ಸ್ತ್ರೀಯನ್ನು ಶೋಷಿಸಿದವರು.

'ಗೆಜ್ಜೆಪೂಜೆ' ಕಾದಂಬರಿಯ 'ಸೋಮು' ಚಂದ್ರಶೇಖರ, ಇವರ ವೇಶ್ಯಾ ಕುಲದ ಚಂದ್ರ, ಅಪರ್ಣ ಇವರನ್ನು ಪ್ರೀತಿಸಿದರೂ ಮದುವೆಯಾಗಲು ಹಿಂಜರಿದ ಸಂಪ್ರದಾಯಶೀಲರು.

ಹೂಬಾಣದ 'ಮಧುಕರ, 'ಕಲಾದರ್ಶಿಯ' 'ಕಿಟ್ಟು' 'ಸದಾನಂದ'ದ ರಾಜು, 'ಮನೋಮಂದಿರ'ದ ಶಾಂತಾರಾಮ, 'ಪೂರ್ವಾಪರ'ದ 'ನಾಗೇಂದ್ರ' ಮನತುಂಬಿದ ಮಡದಿ'ಯ ಸುರೇಶ. 'ಹೆಣ್ಣಿನ ಆಕಾಂಕ್ಷೆ'ಯ ಮುರಳಿ, ಮೃದು ಸ್ವಭಾವದ ವಿವೇಕ ಶೀಲ ಯುವಕರು.

'ಸದಾನಂದ' ಧೀರೋದಾತ್ತ ಪಾತ್ರ, 'ಸದಾನಂದ'ದ ಬಚ್ಚ, ಕಲಾದರ್ಶಿಯ ಗುಂಡ, ಹಿರಣ್ಣಿ, ಶೀನಿ ಇವರೆಲ್ಲ ತುಂಟಾಟದ ಬಾಲಕರು.

ಇನ್ನು ಹೆಗ್ಗಡಿಯರು, ಬೂಬಿ, ದುಡಿಯುವ ರೈತರು ಕಾದಂಬರಿಗಳಲ್ಲಿ ಸನ್ನಿವೇಶಕ್ಕೆ ಅನುಗುಣವಾಗಿ ಚಿತ್ರಿತವಾಗಿದ್ದಾರೆ.

'ಆತ್ಮಸಖಿ' ಕಾದಂಬರಿಯ 'ಅನಂತ ಶರ್ಮ'ರು, 'ಸಾವಿತ್ರಿ ಇವರು ತಾವು ನಂಬಿದ ಆದರ್ಶಗಳಿಗಾಗಿ ಹೋರಾಡಿದ ಧೀಮಂತ ವ್ಯಕ್ತಿಗಳು.

'ಹೂಬಾಣ'ದ ಮುತ್ತೂ, 'ಸದಾನಂದ'ದ ಗೌರಿ, ಕಮಲ, ಜಾನಕಿ ತಾಪದಿಂದ ತಂಪಿಗೆಯಲ್ಲಿ 'ಗಂಗೆ' 'ತುಂಗಭದ್ರೆ'ಯ 'ಕೃಷ್ಣವೇಣಿ' ಮಲೆನಾಡಿನ ಸಹಜ ಸೌಂದರ್ಯದ, ಮುಗ್ಧ ಸ್ವಭಾವ, ಕೊಂಕು ಕಪಟವನ್ನರಿಯದ ಇಂದಿರಾ ಅವರ ಮಾತಿನಲ್ಲಿ ಹೇಳುವುದಾದರೆ 'ಅಮಾಯಕ' ಪಾತ್ರಗಳು.

ಇನ್ನು ಒಂದೇ ಬಗೆಯ ಸ್ವಭಾವವನ್ನು ಕೆಲವು ಪಾತ್ರಗಳಲ್ಲಿ ಇಂದಿರಾ ಅವರು ಚಿತ್ರಿಸಿದ್ದಾರೆ. ಇವೆಲ್ಲ ಸರಳ ಪಾತ್ರಗಳು. ಉದಾಹರಣೆ, 'ತಾಳಿದವರು' 'ರಸವಾಹಿನಿ' ಈ ಕಾದಂಬರಿಯ ಪಾತ್ರಗಳನ್ನು ನೋಡಬಹುದು.

ಒಟ್ಟಾರೆ ಪಾತ್ರ ವೈವಿಧ್ಯ ಅವರ ಕೃತಿಗಳಲ್ಲಿ ಮೂಡಿಬಂದಿವೆ. ದಟ್ಟವಾದ ಜೀವನಾನುಭವ, ಸೂಕ್ಷ್ಮ ನಿರೀಕ್ಷಣೆ, ಬದುಕನ್ನು ಕುರಿತು ತಾಳುವ ಒಲವು ನಿಲವುಗಳನ್ನು ಅವರ ಕಾದಂಬರಿಯಲ್ಲಿ ಚಿತ್ರಿತವಾದ ಪಾತ್ರಗಳಲ್ಲೂ ಗುರುತಿಸಬಹುದಾಗಿದೆ. ವಿವಿಧ ಸ್ವಭಾವದ, ನಡೆ-ನುಡಿಗಳನ್ನು ಹೊಂದಿದ ವ್ಯಕ್ತಿಗಳು ಅವರ ಕಾದಂಬರಿಗಳಲ್ಲಿ ಚಿತ್ರಿತರಾಗಿದ್ದಾರೆ.

ಬದುಕಿನೊಂದಿಗೆ ಹೋರಾಡಿ, ಪ್ರಾಮಾಣಿಕರಾಗಿ ಬಾಳಿದವರನ್ನು ಇಂದಿರಾ ಅವರು ಚಿತ್ರಿಸಿದ್ದಾರೆ. ಇಂತಹ ವ್ಯಕ್ತಿಗಳೆಲ್ಲ ಬದುಕಿನ ಕುಲುಮೆಯಲ್ಲಿ ಪುಟಗೊಂಡವರು. ಜೀವನದಲ್ಲಿ ಎಂತಹ ಸಮಸ್ಯೆಗಳು ಬಂದರೂ ಅವರು ತೋರುವ ಪ್ರತಿಕ್ರಿಯೆ ಒಂದೇ. ಅದೇ ಮನೋಸ್ಥೈರ್ಯ, 'ಸದಾನಂದ'ದ ರಾಮಣ್ಣನವರು, ತಮ್ಮಯ್ಯನವರು, ತುಂಗಭದ್ರದ ನಾಗಪ್ಪ, 'ಹೆಣ್ಣಿನ ಆಕಾಂಕ್ಷೆ'ಯ ಅನಂತಯ್ಯನವರು. ಕಲಾದರ್ಶಿಯ ಶೇಷಪ್ಪಯ್ಯನವರಂತಹ ವ್ಯಕ್ತಿಗಳನ್ನು ಇಲ್ಲಿ ಮತ್ತೇ ನೆನೆಯಬಹುದು. ಎಂತಹ ಕಷ್ಟ ನಿಷ್ಠೂರಗಳು ಬಂದರೂ ಇವರ ಸಹನೆ, ಹಾಗೂ ಅಂತರಂಗದ ಐಶ್ವರ್ಯ, ಬದುಕನ್ನು ಸಹನೀಯವಾಗಿಸುತ್ತದೆ. ಇಂತಹ ಪಾತ್ರ ಚಿತ್ರಣದಲ್ಲಿ ಇಂದಿರಾ ಅವರ ಅನುಭವದ ಪರಿಪಾಕಮೂರ್ತಿ ರೂಪ ತಾಳಿದೆ.

ಪ್ರೀತಿ, ತ್ಯಾಗ, ಸೌಹಾರ್ದ, ಮುಂತಾದ ಕೌಟುಂಬಿಕ ಮೌಲ್ಯಗಳು, ಏರು-ಪೇರಾಗಿ, ಹೊಸ ಜನಾಂಗದ ವ್ಯಕ್ತಿನಿಷ್ಠ ವಿಚಾರಧಾರೆಗೆ ತಮ್ಮನ್ನು ಒಪ್ಪಿಸಿಕೊಳ್ಳಲಾಗಿದೆ ಬದುಕಿನಲ್ಲಿ ತತ್ತರಿಸಿ, ನೋವು—ವ್ಯಥೆ ಅನುಭವಿಸಿದ 'ಶಾಂತಿಧಾಮ'ದ ಶ್ರೀನಿವಾಸರಾಯರು, ಸೂತ್ರಧಾರಿ'ಯ ಬಾಲಾಜಿಯಂತಹ ದುಃಖಿಗಳೂ ಇದ್ದಾರೆ.

ಆದರ್ಶ, ವಿವೇಕ, ಧೈರ್ಯವುಳ್ಳ ಯುವಕ ಯುವತಿಯರೂ ಇಂದಿರಾ ಅವರ ಕೃತಿಗಳಲ್ಲಿದ್ದಾರೆ. ಸದಾನಂದ, ರಾಜು, 'ಹೂಬಾಣದ ಮಧುಕರ ತುಂಗಭದ್ರದ ಮುದ್ದು ರಾಮು' 'ಕಲಾದರ್ಶಿ'ಯ ಕಿಟ್ಟು, ತುಂಗಭದ್ರದ ಮಂದಾಕಿನಿ ಬಿದಿಗೆ ಚಂದ್ರಮ ಡೊಂಕು ಕಾದಂಬರಿಯ 'ಬೃಂದಾ' ಚಿದ್ವಿಲಾಸದ ಸದಾನಂದ'ದ ಭಾವನಾ' ಇಂತಹ ಯುವಕ, ಯುವತಿಯರು ತಮ್ಮ ತಿಳುವಳಿಕೆಯಿಂದ ಪರರ ನೆಮ್ಮದಿಯ ಜೀವನಕ್ಕೆ ಆಧಾರವಾಗಿ ನಿಲ್ಲುತ್ತಾರೆ. ಹೃದಯ ಸಂಸ್ಕಾರದಿಂದ ಮಿನುಗುತ್ತಾರೆ.

ಸ್ವಾರ್ಥಿಗಳನ್ನು ಇಂದಿರಾ ಅವರು ಕೃತಿಗಳಲ್ಲಿ ಚಿತ್ರಿಸಿದ್ದಾರೆ. ಶಾಂತಿಧಾಮದ ಸತ್ಯ, ಕಾಶೀಪತಯ್ಯ, ಪುಟ್ಟತಾಯಮ್ಮ ಕೇಶವ ತಾಳಿದವರು ಕಾದಂಬರಿಯ ದೊಡ್ಡಮ್ಮ, 'ಗೆಜ್ಜೆಪೂಜೆ'ಯ ಸಂಗವ್ವ, ಮುಂತಾದ ವ್ಯಕ್ತಿಗಳು ತಮ್ಮ ದುಷ್ಟ ವರ್ತನೆಯಿಂದ ಪರರ ಜೀವನದಲ್ಲಿ ಪ್ರವೇಶಿಸಿ ಅವರ ಜೀವನದಲ್ಲಿಯೇ ಸಮಸ್ಯೆಗಳನ್ನು ತಂದೊಡ್ಡುವುದನ್ನು ಕಾಣಬಹುದು.

ಸಂಪ್ರದಾಯಕ್ಕೆ ಬದ್ಧರಾಗಿಯೂ ಸಮಾಜವನ್ನು ಪಶ್ನಿಸುವ, ಹಾಗೂ ಪ್ರತಿಭಟಿಸುವ ಮಹಿಳೆಯರನ್ನು ಇಂದಿರಾ ಅವರ ಕಾದಂಬರಿಗಳಲ್ಲಿ ಕಾಣುತ್ತೇವೆ, 'ತಗ್ಗಿನ

ಮನೆ ಸೀತೆ' ಫಣಿಯಮ್ಮ, ದಾಕ್ಷಾಯಣಿ, ಬುಳ್ಳಮ್ಮ, ಚಿನ್ನಮ್ಮ, ಪಾರ್ವತಮ್ಮ, ಇವರೆಲ್ಲ ಸಮಾಜದ ರೀತಿ ನೀತಿಗಳನ್ನು ಪ್ರಶ್ನಿಸಿದ್ದಾರೆ. ದಾಕ್ಷಾಯಣಿಯಂತೂ ಬಂಡು ಖೋರಳೇ ಆಗಿದ್ದಾಳೆ.

ಪಾತಮ್ಮ, ಫಣಿಯಮ್ಮ, ಬೆಳ್ಳಮ್ಮ ಯಂಟತ್ತೆ, ಈ ಹಿರಿಯರು ಬಾಲ ವಿಧವೆಯರಾಗಿ ನಿಸ್ವಾರ್ಥದಿಂದ ದುಡಿದು 'ಪರರಿಗಾಗಿಯೇ ತಮ್ಮ ಜೀವನವನ್ನು ಸವೆಸಿದರು.

'ಗಿರಿಬಾಲೆ'ಯ ಶಂಕರಿ, ಗಿರಿಯಮ್ಮ, ಶೇಷಮ್ಮ, ಶಾಂತಿಧಾಮದ ಪದ್ದಮ್ಮ ಇವರೆಲ್ಲ ಕರ್ತವ್ಯ, ಬದುಕಿನಲ್ಲಿ ಸಹಿಸಿ, ಹಿರಿತನ ತ್ಯಾಗದಿಂದ ಬೆಳಗುವ ಪಾತ್ರಗಳು. ಇವರೆಲ್ಲ ಸಾಕ್ಷಿಯಾಗಿ ಬಾಳಿದವರು. ಅವರಿಗೆ ಜೀವನದಲ್ಲಿ ಸೋಲುಂಟಾದರೂ ಸಹನೆ ಯಿಂದ ಗೆಲುವನ್ನೇ ಹೊಂದಿದ್ದಾರೆ.

ಬದುಕಿನಲ್ಲಿ ಪ್ರಾಮಾಣಿಕತೆ, ಎಂತಹ ಕಷ್ಟ ನಿಷ್ಠುರಗಳಿಗೂ ಬತ್ತಿಹೋಗದ ಹೃದಯದ ಒಲುಮೆ ಪರೋಪಕಾರ, ಸಹನೆ, ಔದಾರ್ಯ ಕರ್ತವ್ಯ ನಿಷ್ಠೆ ತ್ಯಾಗ, ಅಂತಃ ಕರಣ, ಜೀವನದ ಬಗೆಗೆ ಗೌರವವುಳ್ಳ ಕ್ರಿಯಾಶೀಲ ಮನಸ್ಸು ಇಂದಿರಾ ಅವರ ಪಾತ್ರಗಳ ಹಿಂದೆ ಕೆಲಸ ಮಾಡುವುದನ್ನು ಕಾಣುತ್ತೇವೆ.

ಅಧ್ಯಾಯ - ಏಳು

ಶೈಲಿ

'ಆಲೋಚನೆಯ ಉಡಿಗೆಯೇ ಶೈಲಿ'[1]

'ಕವಿಯಂತೆ ಶೈಲಿ'[2]

'ಶೈಲಿ ಮಾನವನ ಆತ್ಮ'[3] ಎಂದು ಮುಂತಾದ ಅಭಿಪ್ರಾಯಗಳನ್ನು ಆಂಗ್ಲ ವಿದ್ವಾಂಸರು ಮಂಡಿಸಿದ್ದಾರಾದರೂ 'ಕವಿಯೇ ಶೈಲಿ ಎಂಬುದು ಸರ್ವಸಮ್ಮತ ಅಭಿಪ್ರಾಯ' ವಾಗಿದೆ.

'ಒಬ್ಬ ಬರಹಗಾರನ ಅಭಿವ್ಯಕ್ತಿಯಲ್ಲಿ ಸ್ಪಷ್ಟವಾಗಿ ವ್ಯಕ್ತವಾದ ವಿಲಕ್ಷಣ ಹಾಗೂ ಸ್ವಭಾವ ವೈಚಿತ್ರ್ಯಗಳನ್ನು ಒಟ್ಟಾರೆ ಅವನ ಶೈಲಿ ಎಂದು ಕರೆಯಬಹುದು'[4]

ತನ್ನದೇ ಆದ ಶೈಲಿಯನ್ನು ಹೊಂದಿದ ಲೇಖಕ ನಿಜವಾಗಿಯೂ ಪ್ರತಿಭಾವಂತನೇ ಆಗಿರುತ್ತಾನೆ. ಒಳ್ಳೆಯ ಶೈಲಿ, ಸರಳ ಸುಂದರವಾಗಿ ವ್ಯಾಕರಣ ಶುದ್ಧವಾಗಿ ಆಳವಾದ ಅರ್ಥವನ್ನು ಸ್ಪಷ್ಟವಾಗಿ ಸ್ಫುರ್ಥಿಸುವಂತಿರಬೇಕು.

ಕನ್ನಡ ಸಾಹಿತ್ಯದಲ್ಲಿ ಕಾದಂಬರಿಕಾರ್ತಿ ಇಂದಿರಾ ಅವರು ತಮ್ಮದೇ ಆದ ಶೈಲಿಯಿಂದ ಪ್ರಸಿದ್ಧರಾಗಿದ್ದಾರೆ. ಖ್ಯಾತ ಸಾಹಿತಿ ದಿ॥ ಶ್ರೀರಂಗರು ಹೇಳಿದಂತೆ "ಬರೀ ಅನುಭವದಿಂದಲೇ ಪಡೆಯಲಾಗದ ಶೈಲಿಯನ್ನು ಶ್ರೀಮತಿ ಇಂದಿರಾ ಅವರು ಪಡೆದುಕೊಂಡೇ ಕಾದಂಬರಿ ಲೇಖನಕ್ಕೆ ತೊಡಗಿದುದು ಅವರ ಪ್ರಗತಿಪರ ಬೆಳವಣಿಗೆಯ ಸೂಚಕವಾಗಿದೆ"[5] ಹಾಗೆಯೇ ಇಂದಿರಾ ಅವರು ಬರೆದ ಮೊಟ್ಟಮೊದಲಿನ ತುಂಗಭದ್ರ ಹಾಗೂ ಸದಾನಂದ ಕೃತಿಗಳನ್ನು ಅವರು ಮೆಚ್ಚಿಕೊಂಡು 'ಶೈಲಿಯ ಸೊಗಸು' ಎಂದು ಪ್ರಶಂಸಿರುವುದು ಯಥಾರ್ಥವಾಗಿದೆ.

"ನಿಜವಾದ ಪ್ರತಿಭಾವಂತ ಲೇಖಕನಿಗೆ ಈ ಶೈಲಿ ಒಂದು ಸಮಸ್ಯೆಯೇ ಆಗಿರುವುದಿಲ್ಲ. ಆತನ ಪ್ರತಿಭೆಗೆ ಹೊಳೆದ ಕಥಾವಸ್ತು ತಕ್ಕರೂಪ ಪರಿಕರಗಳೊಂದಿಗೆ ಅವನಿಗೆ ಹೊಳೆದಿರುತ್ತದೆ. ಉತ್ತಮವಾಗಿ ಯೋಚಿಸಿದುದು ಅಥವಾ ಭಾವಿಸಿದುದು

---

1. ಶ್ರೀ ಎಸ್. ವಿ. ರಂಗಣ್ಣ, ಶೈಲಿ–1, 2, 3, ಪುಟ 6.
2–3 —ಅದೇ— ಪುಟ 6.
4. J. Middleton Murry 'The Problem of Style'—Page 5.
5. 'ಪ್ರಜಾವಾಣಿ' 17–10–1965 ಪುಟ 10.

ಅಷ್ಟೇ ಉತ್ತಮವಾಗಿಯೇ ನಿರೂಪಿತವಾಗಿರುತ್ತದೆ. ನಿರೂಪಣಾ ಶೈಲಿ ಸನ್ನಿವೇಶಕ್ಕೆ ತಕ್ಕಂತೆ ಭಿನ್ನ ಭಿನ್ನವೂ ಆಗಬಹುದು. ಅದುವೇ ಸಹಜ ಶೈಲಿ"[1]

ಇಂದಿರಾ ಅವರು ತಮ್ಮ ಸಹಜ ಶೈಲಿಯಿಂದ, ಮಲೆನಾಡಿನ ಆಡುನುಡಿಯ ಬಳಕೆ, ನಿರರ್ಗಳವಾಗಿ ಹರಿಯುವ ನಿರೂಪಣೆ, ಪಾತ್ರಸೃಷ್ಟಿ, ಸನ್ನಿವೇಶ ನಿರ್ಮಾಣದ ಕೌಶಲ್ಯ, ಇವುಗಳಿಂದಾಗಿ ಕನ್ನಡ ಸಾಹಿತ್ಯದಲ್ಲಿ ವೈಶಿಷ್ಟ್ಯಯುತವಾದ ಸ್ಥಾನವನ್ನು ಗಳಿಸಿ ಜನಮನವನ್ನು ಗೆದ್ದಿದ್ದಾರೆ.

ಮೊದಲು ಶ್ರೀಮತಿ ಇಂದಿರಾ ಅವರ ಕಾದಂಬರಿಗಳಲ್ಲಿ ಸ್ತ್ರೀ ಲೇಖನಿಗೆ ವಿಶಿಷ್ಟವಾದ ಕೆಲವು ವರ್ಣನೆಗಳು ಸನ್ನಿವೇಶಗಳು ಅತ್ಯಂತ ಸ್ವಾಭಾವಿಕವಾಗಿ ಮೂಡಿ ಬಂದಿರುವುದನ್ನು ನೋಡಬಹುದು.

'ತಗ್ಗಿನಮನೆ ಸೀತೆ' ಕಾದಂಬರಿಯಲ್ಲಿ ಕಥಾನಾಯಕಿ ಸೀತೆ, ನೆರೆಮನೆಯ ಅನ್ನಪೂರ್ಣಮ್ಮನ ಕೋರಿಕೆಯನ್ನು ಈಡೇರಿಸಲು ತುಂಬಿ ಬಂದ ಪ್ರವಾಹವನ್ನು ಲೆಕ್ಕಿಸದೆ ಸೂಳೆ ಮನೆಯಲ್ಲಿದ್ದ ಶ್ಯಾಮಯ್ಯನವರನ್ನು ಕರೆತರಲು ಹೊರಡುತ್ತಾಳೆ. ಮಳೆಯಲ್ಲಿ ತೋಯಿಸಿಕೊಂಡ ಸೀತೆಯ "ಬೆಲ್ಲದಲ್ಲಿ ಕಲಸಿಟ್ಟುಕೊಂಡಿದ್ದ ಕಂಚಿ ಕುಂಕುಮ ಪೂರಾ ಕರಗಿ ಹೋಗಿದೆ. ಮೈ ಪೂರಾ ಹೊಳೆಯಲ್ಲಿ ಮುಳುಗಿ ಎದ್ದು ಬಂದಂತಿದೆ. ಬೆಳ್ಳಗಿನ ದುಂಡು ಮೈಗೆ ಸೀರೆ ಮೆತ್ತಿಕೊಂಡಿದೆ. ದಪ್ಪಗಿನ ಕಾಲುಬಳೆ ಬೆಳ್ಳಿಪಟ್ಟೆ, ಕೆಂಪುಸಾಣೆ, ಬಳೆ, ತಲೆಯಲ್ಲಿ, ಮುಡಿದ ಮಲ್ಲಿಗೆ ದಂಡೆ ಕೆನ್ನೆಯಲ್ಲಿ ಹಚ್ಚಗೆ ಅರಿಸಿನ, ಹಾಲು ತುಂಬಿದ ಎದೆ ಲಕ್ಷಣವಾಗಿ ತುಂಬಿಕೊಂಡಿದ್ದ ಹಿಂಬದಿಯ ದಿಂಡು" ಇಲ್ಲಿ ಒಬ್ಬ ಬಾಣಂತಿಯ ಸೌಂದರ್ಯ ಅವಳ ವೇಷ-ಭೂಷಣದ ವರ್ಣನೆ ಅತ್ಯಂತ ಸುಂದರವಾಗಿದೆ ಮುಗ್ಧವಾಗಿದೆ. (ಪುಟ ೫೧-೫೨)

ಬಾಣಂತಿಯ ಕೋಣೆಯನ್ನು ಇಂದಿರಾ ಅವರು ಸೊಗಸಾಗಿ ಚಿತ್ರಿಸಿದ್ದಾರೆ. (ತಗ್ಗಿನಮನೆ ಸೀತೆ ಪುಟ-೧೩೬)

"ಖಾರ, ಮೆಣಸು, ಕಾಯು, ಶುಂಠಿ, ಅರಿಸಿನ, ಲೋಭಾನ, ಎಲೆಯಡಿಕೆಯ ವಾಸನೆಗಳ ಜೊತೆಗೆ ಎಳೆ ಮಗುವಿನ ಹೇಲು - ಉಚ್ಚೆ ಬಟ್ಟೆಗಳ ವಾಸನೆಯೂ ಸೇರಿದ್ದರಿಂದ ಬಾಣಂತಿಯ ಕೋಣೆಯ ವಾಸನೆ ಒಂದು ರೀತಿಯಲ್ಲಿ ಶುಭದಾಯಕ ವಾಗಿತ್ತು."

ಇಲ್ಲಿ ಬಾಣಂತಿಯ ಔಷಧಿಗಳ ವಿವರಣೆ ಹಾಗೂ ಕೋಣೆಯಲ್ಲಿ ಹರಡುವ ಲೋಭಾನದ ವಾಸನೆ ಮೂಗಿಗೆ ಬಡಿದಂತಾಗುತ್ತದೆ. ಬಾಣಂತಿಯ ಕೋಣೆಯನ್ನು ಓದುಗರು ಪ್ರವೇಶಿಸಿದಂತಾಗುತ್ತದೆ.

---

1. ಡಾ॥ ಕೃಷ್ಣಮೂರ್ತಿ ಕಿತ್ತೂರ 'ಗಳಗನಾಥರು ಮತ್ತು ಅವರ ಕಾದಂಬರಿಗಳು' ಪುಟ-334.

ಇದೇ ಕಾದಂಬರಿಯಲ್ಲಿ ಸೀತೆ ಒಂದು ಮಗುವಿನ ತಾಯಿಯಾದರೂ, ಅವಳ ಸಮವಯಸ್ಸಿನ 'ಅಚ್ಚಿ' ಮದುವೆಯಾಗಿದ್ದರೂ ಮೈನೆರೆಯುವುದಿಲ್ಲ. ಚಿಂತಿತಳಾದ ಅಚ್ಚಿ ತನ್ನ ವ್ಯಥೆಯನ್ನು ಸೀತೆಯಲ್ಲಿ ತೋಡಿಕೊಳ್ಳುತ್ತಾಳೆ. 'ರಕ್ತವಾಳದ ಔಷಧಿ' ಯನ್ನು ಕೊಟ್ಟ ಸೀತೆ ಕಿವಿಯಲ್ಲಿ ಕೇಳಿದಳು. (ಪುಟ–೧೩೧)

"ನೆರೆಯೂದು ಅಂದ್ರೆ ಯಂತದೂಂತ ಗೊತ್ತದೇನೇ ಅಚ್ಚಿ ?"

"ಗೊತ್ತು ಕಣೆ ಮಂಜಿ ಹೆಗ್ಗಡಿತಿ ಹೇಳಿತ್ತ ?" ಎಂದಳು. ಇಬ್ಬರೂ ತೋಟ ದಲ್ಲಿ ಸದ್ದಿಲ್ಲದೆ ಕೆಲಸ ಮುಗಿಸಿ ಮನೆಗೆ ಬಂದರು. ಆ ದಿನ ರಾತ್ರಿ ಅಚ್ಚಿಗೆ ಊಟ ಮಾಡಲಾಗಲಿಲ್ಲ. ಹೊಟ್ಟೆ ತೊಳಸು, ಹೇಗೋ ಸಹಿಸಿಕೊಂಡಳು. ಆ ರಾತ್ರಿ ಸೀತೆಯ ಪಕ್ಕವೇ ಮಲಗಿದಳು.

ಫಕ್ಕನೆ ಬೆಳಗಿನ ಜಾವಕ್ಕೆ ಎಚ್ಚರವಾಯ್ತು. ಸೀತೆಗೆ ಗಡದ್ದು ನಿದ್ದೆ. ಅಚ್ಚಿ ಹಿತ್ತಲಿನ ಬಾಗಿಲಿನಿಂದ ಮನೆಗೆ ಓಡಿದಳು. ಯಾಕೋ ಅವಳಿಗೆ ಹೆದರಿಕೆ. ಹಿತ್ತಲ ಅಂಗಳದಲ್ಲಿ ನಿಂತು ಬಿಕ್ಕಿ ಬಿಕ್ಕಿ ಅತ್ತಳು.

"ಸದಾನಂದ ಕಾದಂಬರಿಯಲ್ಲಿ ಬಾಲವಿಧವೆಯಾದ ಕಮಲಳ ಸೌಂದರ್ಯ ವರ್ಣನೆ : ಕಮಲಿಗೀಗ ಹದಿನೆಂಟು ವರ್ಷ ನಡೆಯುತ್ತಿದೆ. 'ಪ್ರಕೃತಿ ಕಮಲಳ ಅಮಂಗಲ ಚಿತ್ರವನ್ನು ತನ್ನ ಸುಪ್ತ ವರ್ಣಗಳ ಕೈ ಕುಂಚದಿಂದ ತಿದ್ದತೊಡಗಿದಳು. ತನ್ನ ಕೈ ಚಾಣಾಕ್ಷದಿಂದ ಅವಳ ಅಂಗಾಂಗಳ ಮೇಲೆಯೂ ಕುಸುರಿ ಚಿತ್ರ ಕೊರೆದಳು. (ಪುಟ–೨೫)

ವಿಧಿ ಕುಗ್ಗಿಸಿದ, ಪ್ರಕೃತಿ ಹಿಗ್ಗಿಸಿದಳು, ಈ ಇಬ್ಬಗೆಯ ಎಳೆದಾಟದಲ್ಲಿ ಸಿಲುಕಿ ಬೇಯುತ್ತಿದ್ದಳು ಕಮಲ.

ಇಲ್ಲಿ ಬಾಲವಿಧವೆಯೊಬ್ಬಳ ನಿಸರ್ಗ ಸಹಜವಾದ ಚೆಲುವಿನ ಬೆಳವಣಿಗೆಯ ವರ್ಣನೆ ಅನುಕಂಪದಿಂದ ಕೂಡಿದ್ದು ಭಾವ ಕಾವ್ಯಾತ್ಮಕವಾಗಿದ್ದು ಮೃದು ಭಾವನೆ ಗಳನ್ನು ತಟ್ಟೆಬ್ಬಿಸುತ್ತದೆ.

"ದಾಕ್ಷಾಯಣಿಗೆ ಮದುವೆಯಾಗಿ ನಾಲ್ಕು ವರ್ಷವಾಗಿತ್ತು. ಅಲ್ಲಿಯೇ ಚಿಬ್ಬಲ ಗುಡ್ಡೆ ಅವಳ ಗಂಡನ ಮನೆ. ದಾಕ್ಷಾಯಣಿ ಬಲು ಲಕ್ಷಣವಾದ ಹೆಣ್ಣು, ಹಾಗೇ ಶರೀರದಾರ್ಢ್ಯವೂ ಹೆಚ್ಚು, ಸ್ವಲ್ಪ ಗಂಡಸು ಗಂಡು ಬೀರಿತನವೂ ಇತ್ತು...ಹದಿನಾರು ತುಂಬ ಪ್ರಾಯದ ಹೆಣ್ಣು, ನೋಡಿದವರ ಕಣ್ಣು ಸಿಡಿಯುವಂಥ ಪದ್ಮಿನೀ ಜಾತಿಯ ಹುಡುಗಿ" (ಫಣಿಯಮ್ಮ ಪುಟ–೮೭)

ದಾಕ್ಷಾಯಣಿಯಂಥ ತುಂಬುಯವ್ವನದ ಹೆಣ್ಣನ್ನು ಪದ್ಮಿನೀ ಜಾತಿಗೆ ಸೇರಿಸಿರು ವುದು ಔಚಿತ್ಯಪೂರ್ಣವಾಗಿದೆ.

ಇಂದಿರಾ ಅವರ ಕಾದಂಬರಿಗಳಲ್ಲಿ ಆಧುನಿಕ ವೇಷಭೂಷಣ (ಮಿನಿ—ಮ್ಯಾಕ್ಸಿ) ಅಲಂಕರಿಸಿಕೊಳ್ಳುವ ಹೆಣ್ಣು ಮಕ್ಕಳು ಕಾಣುವುದಿಲ್ಲ.

ತಗ್ಗಿನ ಮನೆಯ ಸೀತೆಯು 'ಸೀತೆ' 'ಕೆನ್ನೆಗೆ ಬಳಿದ ಅರಸಿನ ಹಚ್ಚಿಗೆ ಎದ್ದು ಕಾಣುವಂಥ ಬಣ್ಣ, ಮೋಟಾದರೂ ದಪ್ಪ ಜಡೆ, ತನ್ನಗಟ್ಟಿತನವನ್ನು ಬಿಚ್ಚಿ ತೋರಿಸುವ ಕಣ್ಣುಗಳು ಆರೋಗ್ಯ ಸುಘಟಿತ ಶರೀರ ಜಟಿಲತೆಗೆ ಜಗ್ಗದ ನಿರ್ಭಯ ರೀತಿ" (ಪುಟ–೧೨)

ಇದು ಸೀತೆಯ ವ್ಯಕ್ತಿತ್ವದ ವೈಶಿಷ್ಟ್ಯ. "ಬಗಿದು ಹೆಣೆದು ಜಡೆ, ಕೊರನಾಡು ಸೀರೆ ಕುಬುಸ, ಸೀತೆಯ ತಾಯಿಯ ಬೆಳ್ಳಿ ಪಟ್ಟಿಯಾಗಿತ್ತು. ಹದಿನಾರು ಮೊಳದ ಕೊರನಾಡು, ಸೀರೆಯನ್ನು ದಪ್ಪ ಬಾಳೆಕಾಯಿ ಹಾಕಿ ಉಟ್ಟು ಹುರಿ ಬಿಗಿಯುವಳು ಎಂದು ಸುಮಾರು ಎಪ್ಪತ್ತು ವರ್ಷದ ಹಿಂದೆ ಹೆಣ್ಣು ಮಕ್ಕಳು (ದೊಡ್ಡವರಾಗಲಿ ಸಣ್ಣವರಾಗಲಿ ಒಂಬತ್ತು ವರ್ಷಕ್ಕೆ ಸೀರೆಯುಡುತ್ತಿದ್ದರು.) ವೇಷಭೂಷಣ ತೊಡುವ ರೀತಿಯನ್ನು ಸಹಜವಾಗಿ ವಿವರಿಸಿದ್ದಾರೆ.

"ಮುದ್ದುರಾಮು ಬಹಳ ದಿನಗಳಿಂದ ಅವಳನ್ನು (ಕೃಷ್ಣಿ) ಹತ್ತಿರದಿಂದ ನೋಡಿಯೇ ಇರಲಿಲ್ಲ. ಅವನು ತನಗೇ ಅರಿಯದ ಅಚ್ಚರಿಯಿಂದ ಅವಳ ಮುಖ ನೋಡಿದ ಅವಳು ಮೈತೊಳೆಯುವಾಗ ಕೈಕಾಲು ಕೆನ್ನೆಗಳಿಗೆ ಧಾರಾಳವಾಗಿ ಬಳಿದ ಅರಿಸಿನ ಅವಳ ಕೇದಗೆ ವರ್ಣಕ್ಕೆ ಮತ್ತೂ ಮೆರಗು ಕೊಟ್ಟಿತ್ತು. ಹೊಂಬಣ್ಣದ ಕೆನ್ನೆಗಳಿಗೆ ಕುಂಕುಮರಾಗ ಲೇಪನವಾಗಿತ್ತು. ಕಿಶೋರತೆಯ ಹೀಚುತನ ಕಳೆದು ಅವಳು ದೋರೆಗಾಯಿಯಾಗಿದ್ದಳು." ಅದೇ ತಾನೇ ತಾರುಣ್ಯದ ಹೊಸ್ತಿಲಲ್ಲಿ ಕಾಲಿಡು ತ್ತಿದ್ದ ಮುಗ್ಧ ಕನ್ಯೆಯ ವರ್ಣನೆ ಅತ್ಯಂತ ಸುಂದರವಾಗಿದೆಯಲ್ಲದೆ ಅವಳ ಕನ್ಯಾಸಹಜ ಲಜ್ಜೆಯನ್ನು ಕೆನ್ನೆಯಲ್ಲಿ ಕುಂಕುಮರಾಗ ಹೊಂಬಣ್ಣದ ಕೆನ್ನೆ, ದೋರೆಗಾಯಿ, ಇವೆಲ್ಲ ಅತ್ಯಂತ ಸಹಜ ಹೋಲಿಕೆಯಿಂದ ಮುಗ್ಧ ಕನ್ಯೆಯ ಸೌಂದರ್ಯ. ನಾಚಿಕೆಯನ್ನು ತಿಳಿಸು ವಲ್ಲಿ ಸಾರ್ಥಕವಾಗಿದೆ. (ತುಂಗಭದ್ರದಲ್ಲಿ ಪುಟ–೪೧)

ಶ್ರೀಮತಿ ಇಂದಿರಾ ವೇಶ್ಯೆಯರನ್ನೂ ಅವರ ಮನೆಯನ್ನೂ ಚೆನ್ನಾಗಿಯೇ ವರ್ಣಿಸಿ ದ್ದಾರೆ. "ಸೀತೆ ನಡುಗುತ್ತ ನಿಂತೇ ಸುತ್ತಲೂ ನೋಡಿದಳು. ಒಬ್ಬ ಸೂಳೆಯ ಮನೆಯನ್ನು ಮೊದಲಬಾರಿಗೆ ನೋಡುತ್ತಿದ್ದಾಳೆ. ಚಿತ್ರ ಕಟ್ಟಿನ ನಾಲ್ಕು ಬಾಗಿಲು ಗಳಿಗೂ ಗಾಜಿನ ಕೊಳವೆ ಸರದ ಗುಂಡುಗಳ ತೋರಣ, ಸುತ್ತಲೂ ಒಳ್ಳೊಳ್ಳೆಯ ಪುಟಗಳು; ಹಸಿರು ಕೆಂಪು, ನೀಲಿಯ ದಪ್ಪ ದಪ್ಪ ರಸದ ಗುಳುಪುಗಳನ್ನು ಅಲ್ಲಲ್ಲಿ ತೂಗು ಹಾಕಿದ್ದಾರೆ. ಗಂಧದ ಕಡ್ಡಿಯ ಪರಿಮಳ ಮನೆಯಲ್ಲಿ ತುಂಬಿದೆ. ಅಲ್ಲಲ್ಲಿ ಕರೀಮರ ಸುಖಾಸನಗಳು ಒಂದು ಬದಿಗೆ ಉಯ್ಯಾಲೆ ಉಪ್ಪರಿಗೆಗೆ ಹೋಗುವ ಮರದ ಮೆಟ್ಟಿಲುಗಳು." (ಪುಟ–೧೫೨–೧೫೩)

"ಸೀತೆ ಶಾಂಭವಿಯ ಕಡೆ ನೋಡಿದಳು. ಹೆಚ್ಚು ರೂಪವತಿಯಲ್ಲದಿದ್ದರೂ ಮೈ ತುಂಬ ನಗ, ಕಂಚಿ ಸೀರೆ, ಮುಡಿ ತುಂಬಾ ಹೂವು, ದಪ್ಪ ಸೊಂಟಕ್ಕೆ ಚಿನ್ನದ ಪಟ್ಟಿ ಹಾಕಿಕೊಂಡು ಸುಂದರಿಯಾಗಿ ಕಾಣುತ್ತಿದ್ದಳು."

ಇಲ್ಲೆಲ್ಲ ಕಾದಂಬರಿಕಾರ್ತಿ ವೇಶ್ಯೆಯರ ಮನೆಯ ಚಿತ್ರಣದಲ್ಲಿ ಅವರ ವೈಭೋಗ ವಿಲಾಸವನ್ನು ತೋರಿಸುವುದಕ್ಕೂ ಅವರ ವೇಷಭೂಷಣವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ.

ಇಂದಿರಾ ಅವರಿಗೆ ತೀರಾ ಸರಳವಾದ ಉಡಿಗೆ ತೊಡಿಗೆ ನಿರಾಭರಣ ಸೌಂದರ್ಯವೆಂದರೆ ಮೆಚ್ಚುಗೆ ಅದನ್ನು ಅವರ ಅನೇಕ ಪಾತ್ರಗಳಲ್ಲಿ ಚಿತ್ರಿಸಿದ್ದಾರೆ.

ಕಾಲೇಜಿನಲ್ಲಿ ಓದುತ್ತಿರುವ ಗೆಜ್ಜೆಪೂಜೆ ಚಂದ್ರ, ವೇಶ್ಯೆಯಾದರೂ ಕೂಡ ನಿರಾಭರಣ ಸುಂದರಿ.

"ಒಂದು ಮುತ್ತಿನ ಸರ, ನಾಲ್ಕು ರೇಷ್ಮೆ ಬಳೆ, ಅಚ್ಚಬಿಳಿಯ ವಾಯಿಲ್ ಸೀರೆ ಇವೇ ಅವಳ ಸಕಲಾಭರಣ ಜಡೆ ಹೆಣೆದು ಹಣೆಗೆ ಬೊಟ್ಟಿಟ್ಟು ಒಂದು ಕೆಂಗುಲಾಬಿ ಮುಡಿದರೆ ಮುಗಿಯಿತು ಅವಳ ಅಲಂಕಾರ." (ಪುಟ–೪೭)

"ಮಾರುದ್ದ ಜಡೆ ಬಳುಕಿಸುತ್ತ ನಗುನಗುತ್ತ ಮೆಲ್ಲಡಿಯಿಟ್ಟು ಬರುವಳು" ಇವೆಲ್ಲ ಕೋಮಲೆಯ ಸರಳ ಸೌಂದರ್ಯ ಮೆಚ್ಚುಗೆ ಮೂಡಿಸುತ್ತದೆ.

ಅಟ್ಟಹಾಸದ ನಗು, ತೇಪೆಯ ಅಲಂಕಾರಗಳಿಗಿಂತ ಇಂದಿರಾ ಅವರು ಮಿತ ಭಾಷೆಯ, ಮೃದು ಮಧುರ ಸ್ವಭಾವದ ಸರಳ ಮನಸ್ಸಿನವರನ್ನು ತುಂಬಾ ಮೆಚ್ಚಿಕೊಳ್ಳುತ್ತಾರೆ. ಅದನ್ನು ಅವರು ಚಿತ್ರಿಸಿದ ಸ್ತ್ರೀ ಪಾತ್ರಗಳಲ್ಲಿಯೂ ಕಾಣಬಹುದು.

"ಸರಳವಾದ ಉಡಿಗೆ–ತೊಡಿಗೆ, ಯಾವ ತಾಪೆಯ ಕೃತಕ ಅಲಂಕಾರವಿಲ್ಲದ ಸಹಜ ಸೊಬಗು...ಒಬ್ಬಿಬ್ಬರು ಮಿತವಾದ ಗೆಳತಿಯರೊಡನೆ ಲೈಬ್ರರಿಗೆ ಬರುವಳು. ಬೇಕಾದ ಪುಸ್ತಕ ಹುಡುಕಿ ಒಂದು ಮೂಲೆಗೆ ಕೂತು ಓದುವುದು ಯಾರೊಡನೆಯೂ ಅತಿ ಸಲುಗೆಯಿಲ್ಲ. ಚಲ್ಲುತನವಿಲ್ಲ. (ಮನೋಮಂದಿರ–ಪುಟ–೭೯)

"ಅವಳ ಪಾದಗಳ ಹಿಮ್ಮಡಿ ಕಾಣಿಸಿತು, ಶಾಂತಾರಾಮನಿಗೆ ಶುಭ್ರವಾದ ಕೆಂಪಗಿನ ಹಿಮ್ಮಡಿ, ಬಿಚ್ಚಿದ ಕೂದಲು ಬಳ್ಳಿಗಳು ಹೊರೆಯಂತೆ ತೊಡೆಯವರೆಗೆ ಇಳಿದಿದೆ. ಸದ್ದಿಲ್ಲದ ಪಾದ ಚಲನೆ ಅದು ಮಾತ್ರ ಅವನಿಗೆ ಬಹಳ ಇಷ್ಟ" ಎಂದು ಇಂದಿರಾ ಅವರು ಅಲ್ಲಲ್ಲಿ ತಮ್ಮ ಪಾತ್ರ ಸ್ವಭಾವವನ್ನು ಅವರ ನಡೆ–ನುಡಿಗಳಲ್ಲಿ ಬಿಂಬಿಸಿದ್ದಾರೆ.

ಇದೇ ಕಾದಂಬರಿಯ ಶಾಂತಾರಾಮ ಡಾಕ್ಟರೇಟ್ ಮಾಡುತ್ತಿದ್ದರೂ ವಿದ್ಯೆ ವಿನಯ ಸಂಪನ್ನನೂ ಗಂಭೀರ ಸ್ವಭಾವದವನೂ ಆಗಿದ್ದಾನೆ.

"ದೇವರ ಮನೆಯ ಬೆಳ್ಳಿ ಕಟ್ಟಿನ ಮನೆಯ ಮೇಲೆ ಧರ್ಮಾವರಂ ಸೀರೆಯುಟ್ಟು, ಮುಡಿತುಂಬ ಹೂವು ಮುಡಿದು ಅರಿಸಿನ-ಕುಂಕುಮ ಸರ್ವಾಭರಣ ಭೂಷಿತೆಯಾಗಿ ಕುಳಿತಿರುವ ಜಯಮ್ಮನವರೇ ಅವಳ ಕಣ್ಣಿಗೆ ಪ್ರತ್ಯಕ್ಷ ಲಕ್ಷ್ಮಿಯಾಗಿ ಕಂಡರು." (ಅದೇ ಪುಟ-೧೫)

"ಶ್ರೀಮಂತ ಸಂಪ್ರದಾಯಸ್ಥ ಕುಟುಂಬದ ಗೃಹಿಣಿಯ ಚಿತ್ರ ಇಲ್ಲಿದೆ. ಮುಗ್ಧ ಸುಂದರಿಯರನ್ನು ಚಿತ್ರಿಸಿರುವ ಇಂದಿರಾ ಅವರು ಸಾಧಾರಣ ರೂಪದ ಸ್ತ್ರೀಯರನ್ನು ಚಿತ್ರಿಸಿದ್ದಾರೆ. ಗಿರಿಬಾಲೆಯ ಶಂಕರಿ 'ಕೆದರಿದ ತಲೆ ಮಾಸಲು ಕೆಂಪಿನ ಹರಕು ಸೀರೆ ಅಸಡ್ಡಾಳ ಇರಿಸರಿಕೆಯ ಸಾದುಗಪ್ಪಿನ ಹುಡುಗಿ"

ಅವರ ಕಾದಂಬರಿಗಳಲ್ಲಿ ಕುರೂಪಿಯರು ಇದ್ದಾರೆ. ತಗ್ಗಿನಮನೆ ಸೀತೆಯ 'ಅಚ್ಚಿಯದು ಕುದುರೆಮುಖ, ಕಪ್ಪುಬಣ್ಣ, ಸಣ್ಣಕಣ್ಣು ಇಲಿಬಾಲದ ಜಡೆ, ಉಬ್ಬು ಹಲ್ಲು ಸೊಣಕಲು ಕೈಕಾಲುಗಳು' (ಪುಟ-೧೪)

ಪುನೀತ ಜೀವನ ಶ್ರದ್ಧೆಯ ಮಂಗಳಾಲಂಕೃತೆಯರಾದ ಮುತ್ತೈದೆಯರ ವ್ಯಕ್ತಿತ್ವವನ್ನು ಕಾದಂಬರಿಕಾರ್ತಿ ಮನದಲ್ಲಿ ಗೌರವ ಭಕ್ತಿ ಹುಟ್ಟುವಂತೆ ಚಿತ್ರಿಸುತ್ತಾರೆ.

'ಸದಾನಂದದಲ್ಲಿ ಮುತ್ತೈದೆ ಕಾಡಮ್ಮನವರು ಗಂಡ ಎಷ್ಟು ಕಪ್ಪೋ ಅಷ್ಟೇ ಹೆಂಡತಿ ಗೌರವವರ್ಣ, ಮೂರಿಂಚು ಅಡ್ಡ ಕುಂಕುಮ, ಪಟ್ಟೆಯರಿಸಿನ, ಕೈ ತುಂಬ ಹಸಿರು ಬಳೆ ಅಷ್ಟು ಕೂದಲಿನ ಎಣೆಗಂಟಿನ ಮೇಲೆ ಸದಾ ಮಂಗಳ ಗೌರಿಯ ಪ್ರಸಾದದ ಹೂವು" (ಪುಟ-೫೭).

ಇಲ್ಲಿ ಮುತ್ತೈದೆಯ ಮಂಗಳ ಚಿತ್ರ ಕಣ್ಮುಂದೆ ತೇಲಿ ಬರುತ್ತದೆ. ಸಮಾಜದ ಅಜ್ಞಾನ ಮೌಢ್ಯವನ್ನು ಕಂಡಾಗ ಲೇಖಕಿಯ ಲೇಖನಿ ಒಮ್ಮೊಮ್ಮೆ ವ್ಯಂಗ್ಯವಾಗಿ ಚುಚ್ಚುತ್ತದೆ. ಒಮ್ಮೊಮ್ಮೆ ನೇರ ನಿರೂಪಣೆಯಿಂದಲೂ ಒಮ್ಮೊಮ್ಮೆ ಪಾತ್ರಗಳ ಮುಖಾಂತರವೋ ಅವರ ವ್ಯಂಗ್ಯನೋಟವನ್ನಿಲ್ಲಿ ಕಾಣಬಹುದು.

'ಜಾತಿಕೆಟ್ಟವಳು' ಕಾದಂಬರಿಯಲ್ಲಿ ಬ್ರಾಹ್ಮಣನಿಂದಲೇ ಬಸಿರಾಗಿದ್ದರೂ ವಿಧವೆ ಬುಳ್ಳಮ್ಮನಿಗೆ ಬಹಿಷ್ಕಾರ ಹಾಕಿರುತ್ತಾರೆ. ಅದನ್ನು ಅವಳಿಂದ—ಎಂತಾಜಾತಿಯೋ ಎಂತಾ ಕುಲವೋ ದೇವರೇ ಬಲ್ಲ.' (ಪುಟ-೩೯)

ನಾನು ಹುಟ್ಟಿದ್ದು ಬ್ರಾಹ್ಮಣಂಗೆ ನಾನೂ ಅದೇ ಕುಲ. ಆದರೆ ನಂಗೆ ಬಹಿಷ್ಕಾರ ಹಾಕಿದ್ರು. ಇದರ ತುದಿ ಬುಡ ನಂಗೆಂತದು ತಿಳಿಯುತ್ತೆ. ನನ್ನ ಹಾಳ್ಮಾಡಿದ ಜೋಯ್ಸ ಕಡೇತನಕ ಶುದ್ಧಾಗಿದ್ದ ನಾನು ನನ್ನ ಮಕ್ಕಳು ವಂಶಪೂರ್ತಿ ಬಹಿಷ್ಕಾರ...ಈ ಚೋದ್ಯ ಕಂಡ್ರೆ ನಂಗೆ ನಗು ಬರತ್ತಪ್ಪ.

ಇಲ್ಲೆಲ್ಲ ಸಮಾಜದ ಅವೈಚಾರಿಕತೆಯನ್ನು ಕಂಡು ಲೇಖಕಿ ವ್ಯಂಗ್ಯವಾಗಿ ಟೀಕಿಸಿ ಗೇಲಿ ಮಾಡುತ್ತಾರೆ.

ಮಲೆನಾಡಿನ ಲೇಖಕಿಯಾದ ಇಂದಿರಾ ಅವರು ನಿಸರ್ಗಪ್ರಿಯೆ. ಮಲೆನಾಡಿನ ಗಿರಿವನ, ಗಿಡ ಗಂಟೆ, ತೋಟ, ಗದ್ದೆ, ತುಂಗಾನದಿ, ರಾಮಮಂಟಪ, ಕಲ್ಲುಸಾರ, ಒಂದೊಂದೂ ಅವರ ಸಾಹಿತ್ಯ ಸೃಷ್ಟಿಗೆ ಸ್ಫೂರ್ತಿಯನ್ನಿತ್ತಿವೆ.

ಅವರ ಕಾದಂಬರಿಗಳಲ್ಲಿ ನಿಸರ್ಗ ಅತ್ಯಂತ ಸಹಜ ಸುಂದರವಾಗಿ ಮುಗ್ಧವಾಗಿ ಚಿತ್ರಿತವಾಗಿದೆ. ಕಾಣುವ ಕಣ್ಣಿಗೆ ಚೇತೋಹಾರಿಯಾಗಿದೆ. ಅವರ 'ಕಲಾದರ್ಶಿ', 'ತಗ್ಗಿನಮನೆ ಸೀತೆ', 'ತುಂಗಭದ್ರ', 'ಗಿರಿಬಾಲೆ', 'ಡಾಕ್ಟರ್', 'ಹೂಬಾಣ', ಮೊದಲಾದ ಕಾದಂಬರಿಗಳಲ್ಲಿ ಮಲೆನಾಡ ನಿಸರ್ಗ ಸಹಜವಾಗಿ ಕಲಾತ್ಮಕವಾಗಿ ಮೈತಾಳಿ ನಿಂತಿದೆ. ಇದಲ್ಲದೆ ಅವರ ಇನ್ನಿತರ ಕಾದಂಬರಿಗಳಲ್ಲಿಯೂ ನಿಸರ್ಗದ ವರ್ಣನೆ ಸನ್ನಿವೇಶಕ್ಕೆ ಅನುಗುಣವಾಗಿ ಕಾಣಿಸಿಕೊಳ್ಳುತ್ತದೆ,

"ಮಾಗಿಯ ಚಳಿಗೆ ಹೆದರಿ ಗೂಡುಗಳಲ್ಲಿ ಮರದ ಪೊಟರೆಗಳಲ್ಲಿ ಅಡಗಿ ಮುದುರಿ ಕುಳಿತ ಪಕ್ಷಿ ಸಂಕುಲಗಳು ಈಗ ಎಳೆ ಬಿಸಿಲಿಗೆ ಹಿತ ಪಡೆದು ಗೂಡುಗಳಿಂದ ಹೊರ ಬಂದು ಚಿಲಿಪಿಲಿ ಕಲ–ಪಲ ಮಾಡತೊಡಗಿದ್ದವು." (ಗಿರಿಬಾಲೆ ಪುಟ–೨)

"ದನಕರುಗಳು ಆಗಲೇ ಕೊಟ್ಟಿಗೆಯಿಂದ ಹೊರಟು ಅಲ್ಲಲ್ಲಿ ಮೇಯುತ್ತಾ ನಿಧಾನವಾಗಿ ಗುಡ್ಡದ ಕಡೆಗೆ ಕಾಲು ಹಾಕುತ್ತಿದ್ದವು. ದನಕಾಯುವ ಮುದಿ ಬದ್ದ ಗೂರಲು ಕೆಮ್ಮುತ್ತ, ಕಂಬಳಿ ತುಪ್ಪೆ ಹೊತ್ತು ಕೋಲೂರುತ್ತ ಅವುಗಳ ಹಿಂದೆ ನಡೆದಿದ್ದ."

ಇದು ಇಂದಿರಾ ಅವರು ಕೊಟ್ಟ ಬೆಳಗಿನ ಚೈತನ್ಯಮಯುದೊಂದು ದೃಶ್ಯ.

'ಶಂಕರಭಟ್ಟರು, ಮೋಟಿ, ಮಹಾಬಲಯ್ಯ, ಬೀಗರ ಮನೆಗೆ ಹೋದಾಗ ಸೀತೆ ಭಟ್ಟರ ಎರಡನೆಯ ಸೊಸೆ ಸಂಕುವಿನೊಡನೆ ಮನೆಯ ಹಿತ್ತಲಿಗೆ ಬಂದು ಕೆಳಗೆ ನೋಡಿದಳು.'

ಭಟ್ಟರ ಮನೆ ಕುರುವಳ್ಳಿ ಗುಡ್ಡದ ಮೇಲೆ, ಅದಕ್ಕಿಂತ ಕೆಳಗೆ ಅಗ್ರಹಾರ. ಸುತ್ತಿಗೆ ಮಾ, ರಾಮಕ್ಕನ ಮನೆ ಇಲ್ಲಿರುವದು. ಸಂಜೆಯ ಹೊಂಬಿಸಿಲಿನಲ್ಲಿ ಕೆಳಗಿನ ಅಗ್ರಹಾರ ! ಅದಕ್ಕೂ ಕೆಳಗೆ ಹರಿಯುತ್ತಿರುವ ತುಂಗೆಹೊಳೆ, ರಾಮಮಂಟಪ, ಪಾಪನಾಶಿನಿ, ಅರೆಕಲ್ಲು, ಬಂಡೆ, ಅದರಾಚೆ ದೂರದಲ್ಲಿ ಜಾರುಬಂಡೆ, ಅರಳೀ ಮರ ಗಳು ಭೀಮನ ಬುತ್ತಿಕಲ್ಲು, ಅಂತಯ್ಯನ ಅಗ್ರಹಾರದ ಕಡೆಯ ದಿಬ್ಬದ ಮೇಲೆ ಒಂದೆರಡು ವರ್ಷಗಳ ಹಿಂದೆ ಎದ್ದು ನಿಂತ ಮಂಗಳೂರು ಹೆಂಚು, ಹೊದಿಸಿದ ವಿಸ್ತಾರವಾದ ಮುಸಾಫಿರಖಾನೆ, ಇತ್ತ ರಾಮೇಶ್ವರ ದೇವಾಲಯದ ಹಿತ್ತಾಳೆಯ ಶಿಖರ ! ಎಲ್ಲವೂ ಅಪೂರ್ವ ದೃಶ್ಯವಾಗಿ ಕಂಡವು ಸೀತೆಗೆ. ...ಧುಮ್ಮಿಕ್ಕಿ ಹರಿದು, ಮುಂದೆ ಮುಂದೆ ಜುಳು ಜುಳುನೆ ಹರಿವ ಪ್ರವಾಹ... ನದೀ ದಂಡೆಯಲ್ಲಿ ಬೆಳ್ಳಕ್ಕಿ, ತೆನೆ ಹಕ್ಕಿಗಳು, ಕಾಣಿಸಿಕೊಂಡವು. ಉದ್ದಗರಿಯ ಪಿಕರಾಳಗಳು ಬಂಡೆಗಳ ತುದಿ ಯಲ್ಲಿ ಕೂತು ಗರಿ ತೂಗಿ ಉಲ್ಲಾಸಪಟ್ಟವು. ಕೋಗಿಲೆ ಕಾಜಾಣಗಳು, ಸೊಕ್ಕಿನಿಂದ

ಹಾರಾಡುತ್ತಿದ್ದವು. ಇವೆಲ್ಲವನ್ನು ಸೀತೆ ತಗ್ಗಿನಮನೆಯ ತೋಟ, ಕೆರೆಗಳಲ್ಲಿ ಕಂಡಿದ್ದಳಾದರೂ ಅವೇ ಹಕ್ಕಿಗಳು ಈ ನದೀ ತಟಾಕಗಳಲ್ಲಿ 'ಕುಹೂ ಮಾಡಿದಾಗ ಅದಕ್ಕೆ ಏನೋ ಮಹತ್ವ ಕಂಡಿತು.' (ತಗ್ಗಿನಮನೆ ಸೀತೆ ಪುಟ–೯೧–೯೨)

ಇಂದಿರಾ ಅವರು ತೀರ್ಥಹಳ್ಳಿಯ ತುಂಗಾದಡದ ಸೌಂದರ್ಯವನ್ನು ಕಣ್ಮುಂದೆ ತೇಲಿಬರುವಂತೆ ಚಿತ್ರಿಸುತ್ತಾರೆ. ಈ ದೃಶ್ಯ ಬಲು ಆಪ್ಯಾಯಮಾನವಾಗಿದೆ.

ಬೆಳದಿಂಗಳ ದಿನಗಳಲ್ಲಿ ಮುಂದೆ ಕಡೆ ಜಗುಲಿಯಲ್ಲಿ ಕೂತರೆ ಆಯ್ತು. ಆಗಿನ ವಾತಾವರಣ ದಿನದ ಆಯಾಸವನ್ನು ಮರೆಸುತ್ತಿತ್ತು. ತಿಂಗಳ ರಾತ್ರಿಯಲ್ಲಿ ಹೊಳೆಯ ನಡುವಿನ ಬಂಡೆಗಳ ಮೇಲೆ ಅಲ್ಲಲ್ಲಿ ಕೂತು ಹಾರಾಡುವ ಬೆಳ್ಳಕ್ಕಿ–ಹಾಲಕ್ಕಿಗಳು, ಕೋಗಿಲೆ ಕಾಜಾಣಗಳ ಇಂಚರ ಸುಮ್ಮಾನದಿಂದ ಧುಮ್ಮಿಕ್ಕುವ ತುಂಗೆ, ಪುತ್ತಿಗೆ ಮಠದ ಬದಿಯ ಅರಳಿಮರ ತೊಗಟೆಯಲ್ಲಿ ಕೂತು.

'ಕುಕ್ಕರಶೆಟ್ಟಿ ಕುರ್ರೊ ಕುರ್ರೊ ಕುರ್ರೊ'

ಎನ್ನುವ ಮರುಕುಟಕ ಹಕ್ಕಿಗಳ ಯಕ್ಷಗಾನ, ಕಾವಕ್ಕಿ ತೆನೆಗಳ ಚೀರ್ ಚೀರ್ ಚೀಕಲಾಟ, ನಾನಾ ಬಗೆಯ ಖೇಚರಗಳ ಸಾಮೂಹಿಕ ಗಾನ"

ನಿಸರ್ಗದ ಪಕ್ಷಿಗಳ ಕಲರವ ಉಲ್ಲಾಸವನ್ನು ತುಂಬುತ್ತವೆ. ಇಂದಿರಾ ಅವರ ಕಾದಂಬರಿಗಳಲ್ಲಿ ನಿಸರ್ಗ ಒಮ್ಮೊಮ್ಮೆ ರುದ್ರಭೀಕರವಾಗಿಯೂ ಕಾಣಿಸಿಕೊಳ್ಳುತ್ತದೆ. ಉದಾಹರಣೆಗೆ ಮಲೆನಾಡಿನಲ್ಲಿ ಮಳೆಗಾಲದಲ್ಲಿ ತುಂಗಾನದಿಗೆ ಬರುವ ಮಹಾಪೂರದ ವರ್ಣನೆಗಳಲ್ಲಿ ಇದನ್ನು ಕಾಣುತ್ತೇವೆ (ತುಂಗಭದ್ರ ಪುಟ–೧೪೦).

"ಶ್ರಾವಣ ಮಾಸದ ದಿನಗಳು, ಹದಿನೈದು ದಿನಗಳಿಂದ ಮುಸಲಧಾರೆ ಕಣ್ಣುಮುಚ್ಚಿಕೊಂಡು ಸುರಿಯುತ್ತದೆ...ಸಾಮಾನ್ಯವಾಗಿ ಪ್ರತಿವರ್ಷವೂ ಮಳೆಗಾಲದಲ್ಲಿ ತೀರ್ಥಹಳ್ಳಿಯ ಹೊಳೆ ತುಂಬಿ ಹರಿಯುತ್ತದೆ. ರಾಮಮಂಟಪದ ಗೋಪುರದ ಕಲಶ ಮುಳುಗಿತೆಂದರೆ ಜನ ಹೆದರುತ್ತಿದ್ದರು.

...ಶಿವಮೊಗ್ಗೆಯಲ್ಲಿ ನೆರೆಯ ಹಾವಳಿಯಿಂದ ದೊಡ್ಡ ಬ್ರಾಹ್ಮಣರ ಕೇರಿ ಚಿಕ್ಕ ಬ್ರಾಹ್ಮಣರ ಕೇರಿಯ ಮನೆಗಳ ಜನರೆಲ್ಲ ದುರ್ಗಿಗುಡಿಗೆ ಬಂದು ತುಂಬಿಕೊಂಡು ಕಂಗೆಡುತ್ತಿದ್ದಾರೆಂದು ವರ್ತಮಾನ ಬಂದಿತು. ಸುಮಾರು ಈಗ ಹದಿಮೂರು ವರ್ಷಗಳಿಗೆ ಮೊದಲು ಇಂತಹ ಪ್ರವಾಹ ಬಂದಿತ್ತೆಂದು ಜನರಾಡಿಕೊಂಡರು. ಈಗ ಈ ಗಂಡಾಂತರ ತೀರ್ಥಹಳ್ಳಿಗೂ ತಪ್ಪಿದ್ದಲ್ಲವೆಂದು ಎಲ್ಲರಿಗೂ ಖಚಿತವಾಯಿತು. ಇದರಿಂದ ಹೊಳೆಯ ದಂಡೆಯಲ್ಲಿದ್ದ ನೂರಾರು ಮನೆಗಳಿಗೆ ಅಪಾಯವಿತ್ತು. ಆದರೂ ಪ್ರಕೃತಿಯ ಪ್ರಕೋಪಗಳಿಗೆ ಮೈಯೊಡ್ಡಿ ಹೋರಾಡುವ ಜನರೇ ಮಾರಿ ಮೋಜನ್ನು ನೋಡಲು ಕುತೂಹಲಿಗಳಾಗಿ ಕುಳಿತರು.

ಪ್ರವಾಹ ಜಾರುಬಂಡೆಯನ್ನು ಏರಿ, ಅರಳೀಕಟ್ಟೆಯನ್ನು ದಾಟಿ ಮೇಲಿನ ರಸ್ತೆಯನ್ನು ಮುಳುಗಿಸಿತು. ರಾಮಮಂಟಪ ಎಂದೋ ಮುಳುಗಿ ಹೋಗಿತ್ತು. ಬೆಳಗಿನಿಂದಲೇ ಪ್ರವಾಹ ಏರುತ್ತಲೇ ಬಂದಿತು. ಕುರುವಳ್ಳಿ ಮೈಲಾರೇಶ್ವರನ ಪಾದ ತೊಳೆದಳು ತುಂಗೆ. ಕಾರ್ಮೋಡ ಕವಿದೇ ಇತ್ತು. ಮಳೆ ಧಾರಾಕಾರವಾಗಿ ಸುರಿದೇ ಸುರಿಯಿತು.

...ಕಣ್ಣು ಕಾಣುವವರೆಗೂ ಪ್ರವಾಹವೇ ಪ್ರವಾಹ. ಕಿವಿ ಸೆಟೆಯುವಂತೆ ತುಂಗೆಯ ಭೋರ್ಗರೆತ ಕೇಳಿಬರುತ್ತಿತ್ತು. ಮಳೆ ಸುರಿಯುತ್ತಲೇ ಇತ್ತು. ಕಿಟಕಿಯಲ್ಲಿ ನೋಡಿದ ಕೃಷ್ಣವೇಣಿ ಕೂಗಿಕೊಂಡಳು. "ಅಯ್ಯೋ ಅಲ್ನೋಡಿ ಮೂಕತ್ತೆ ಮನೆ ಒಳಗೆ ನೀರ್ ನುಗ್ಗಿದ್ದೀತೆ, ಸಾಮಾನೆಲ್ಲ ಇಲ್ಲಿಗೆ ತರ್‍ತಾರೆ ಬನ್ನಿ ಎಂದೆನ್ನುತ್ತ ಮಂಚದಿಂದ ಧುಮುಕಿ ಧಡಧಡನೆ ಮಹಡಿ ಇಳಿದು ಓಡಿದಳು... ಹುಚ್ಚು ಮಳೆ ಸುರಿಯಿತು, ಕಾರ್ಗತ್ತಲು ಕವಿಯಿತು, ಆ ಗಾಢಾಂಧಕಾರದಲ್ಲಿ ಜಗತ್ತೇ ಕುರುಡಾಯಿತು".

ಪ್ರವಾಹದ ರೌದ್ರ ಸೌಂದರ್ಯ ಭೀಕರತೆ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. ತುಂಗಾನದಿಯ ಭೋರ್ಗರೆತ ಕಿವಿಗೆ ಸ್ಪಷ್ಟವಾಗಿ ಕೇಳಿದಂತಾಗುತ್ತದೆ.

'ಫಣಿಯಮ್ಮ' ಕಾದಂಬರಿಯಲ್ಲಿ ಭೀಕರ ಪ್ರವಾಹದಲ್ಲೂ ಒಂದು ಹೆರಿಗೆಗೆ ಹೊರಟ ಸಂದರ್ಭ, ಲೇಖಕಿ ಎಂಟು ವರ್ಷಗಳಿದ್ದಾಗ ಕಂಡಿದ್ದು :

"ಶ್ರಾವಣಮಾಸದ ಮಳೆ ತುಂಗೆಯ ಹೊಳೆ ತುಂಬಿ ಹರಿಯುತ್ತಿತ್ತು. ರಾಮಮಂಟಪದ ಶಿಖರ ಮಾತ್ರ ಕಾಣುತ್ತಿತ್ತು. ಎಂದಿನಂತೆ ಅಂಚೆ ಅತ್ತೆ ತಮ್ಮ ಬಿಳೀ ಸೀರೆ ಕಂಕಳಲ್ಲಿಟ್ಟು ಬೆಳಗಿನ ಜಾವಕ್ಕೆ ಹೊಳೆಗೆ ಸ್ನಾನಕ್ಕೆ ಹೊರಟಿದ್ದಾರೆ. ಆಕಾಶವೆಲ್ಲ ಮೋಡ ತುಂಬಿದೆ. ಜಿಟಿ ಜಿಟಿ ಮಳೆ ಸುರಿಯುತ್ತಿದೆ. ಆ ಹೊತ್ತಿನಲ್ಲಿ ಯಾರು ತಾನೇ ಮನೆ ಬಿಟ್ಟು ಹೊರಡುತ್ತಾರೆ. ಹೊಳೆ ತುಂಬಿದ್ದರಿಂದ ನೀರು ಅರಳೀ ಕಟ್ಟೆಯ ಪಾದ ತೊಳೆಯುತ್ತಿತ್ತು, ಅಂಚೆ ಅತ್ತೆ ಅರಳೀಮರದ ಬುಡದ ಕಲ್ಲಿನ ಮೇಲೆ ಕೂತಾಗ ಎದುರುಗಡೆಯಿಂದ ಸೆಳವಿನ ಪ್ರವಾಹದಲ್ಲಿ ಒಂದು ದೋಣಿ ಇತ್ತ ಕಡೆಗೆ ಬರುತ್ತಿರುವುದು ಕಾಣಿಸಿತು. ತೀರಾ ಮಬ್ಬು ಬೆಳಕಾದರೂ ಅಂಚೆ ಅತ್ತೆಗೆ ಕಣ್ಣಿನ ಪಟುತ್ವ ಚೆನ್ನಾಗಿತ್ತು. ಅದು ಕುರುವಳ್ಳಿಯ ದೋಣಿ. (ಫಣಿಯಮ್ಮ ಪುಟ–೯೭)

"ಬಿಡ್ರೋ ದೋಣೀನ ಹ್ಯಂಗಾರ ತುಸ ಬ್ಯಾಗ ಹುಟ್ಟುಹಾಕಿ ಅಂದರು. ಎದೆ ನಡುಗಿಸುವ ಪ್ರವಾಹದ ನಡುವೆ ಅತ್ತಿತ್ತ ಹಾಯುತ್ತ ದೋಣಿ ಸಾಗಿತು... ಪ್ರವಾಹ ಬಂದ ಸನ್ನಿವೇಶವನ್ನು ಇಂದಿರಾ ತುಂಗಾನದಿಯ ಪ್ರವಾಹವನ್ನು ಕಣ್ಮುಂದೆ ತೇಲಿ ಬರುವಂತೆ ಚಿತ್ರಣ ಮಾಡುತ್ತಾರೆ."

ಇಂದಿರಾ ಅವರ ಕಾದಂಬರಿಗಳಲ್ಲಿ ಆಧುನಿಕ ಜೀವನಕ್ಕೆ ಮಾರುಹೋದ ಯುವಕರು ಮಲೆನಾಡಿನ (ಹಳ್ಳಿಯ ವೇಷಭೂಷಣ ಯುವತಿಯರಿಗೂ ಪಟ್ಟಣದ ಯುವತಿ

ಯರಿಗೂ ಆಗಾಗ ಹೋಲಿಸಿ ನೋಡುತ್ತಾರೆ.) ಇದೂ ಅವರ ಕಾದಂಬರಿಗಳ ವೈಲಕ್ಷ್ಯಣಗಳಲ್ಲಿ ಒಂದೆಂದೂ ಪರಿಭಾವಿಸಬಹುದು.

ತುಂಗಭದ್ರಾ ಕಾದಂಬರಿಯಲ್ಲಿ ಸುಮಾರು ಎರಡನೆಯ ಮೂರನೆಯ ದಶಕದಲ್ಲಿ ಆಧುನಿಕತೆ ಅದೇ ತಾನೇ ಹೊಸದಾಗಿ ಕಾಲಿಡುತ್ತಿತ್ತು. ಅಂದಿನ ಯುವಕರು ಆಧುನಿಕ ಜೀವನಕ್ಕೆ ಮಾರುಹೋಗುತ್ತಿದ್ದುದೂ ಸ್ವಾಭಾವಿಕ. ವೇಷ-ಭೂಷಣದಲ್ಲಿ ಅದನ್ನು ಅನುಕರಿಸುತ್ತಿದ್ದರು.

ವಾತ್ಸಲ್ಯಮಯಿ ಇಂದಿರಾ ಅವರು ಕಾದಂಬರಿಗಳಲ್ಲಿ ವಾತ್ಸಲ್ಯಭಾವವನ್ನು ಮನಮುಟ್ಟುವಂತೆ ನಿರೂಪಿಸಿದ್ದಾರೆ.

ತುಂಗಭದ್ರ ಕಾದಂಬರಿಯಲ್ಲಿ ಮುದ್ದುರಾಮು, ಹಾಗೂ ರಾಘು ಇಬ್ಬರೂ ಹೈಸ್ಕೂಲ್ ಶಿಕ್ಷಣಕ್ಕಾಗಿ ಶಿವಮೊಗ್ಗೆಗೆ ಹೊರಟಿದ್ದಾರೆ. ಅದೂ ಮೊಟ್ಟ ಮೊದಲ ಬಾರಿ ಹುಟ್ಟಿ ಬೆಳೆದ ಊರು. ಗೆಳೆಯರು, ಅತ್ತೆ, ಅಕ್ಕ, ತಂದೆ, ಮಂದಾಕಿನಿ, ಕೃಷ್ಣ, ತುಂಗಭದ್ರ ಇವರನ್ನೆಲ್ಲ ಅಗಲಿ ಊರಿಗೆ ಹೊರಟಾಗ—(ಪುಟ-೨೫-೨೯)

"ಹೊರಡುವ ತಯಾರಿ ಭರದಿಂದ ನಡೆಯಿತು. ಹೊಸ ಬಿಟ್ಟೆಬರೆಗಳಾದವು, ಪುಸ್ತಕಗಳಾದವು, ತಿಂಡಿ ತೀರ್ಥಗಳಾದವು. ನಾಗಭಟ್ಟರು ಗಾಡಿ ಸಿದ್ಧಗೊಳಿಸಿದರು. ಅವರೇ ಸ್ವತಃ ಬಿಟ್ಟು ಬರುವವರಾಗಿದ್ದರು. ಭಾಗಮ್ಮ ಅಳುತ್ತಳುತ್ತ ತಿಂಡಿ ಮಾಡಿದರು.

ಭಾಗಮ್ಮನಿಗೆ ಮುದ್ದುರಾಮನ ವಿಷಯದಲ್ಲಿ ಮೂರು ಬಗೆಯ ವಾಂಛಲ್ಯ ಎಳೆಯುತ್ತಿತ್ತು. ಒಡಹುಟ್ಟಿದ ತಮ್ಮ, ತೌರಿನ ಒಂದೇ ಕುಡಿ. ಮುಂದೆ ಅಳಿಯ ನಾಗುವ ಹುಡುಗ. ಇನ್ನು ಮೂರು ವರ್ಷ ಬಿಟ್ಟಿರಬೇಕಲ್ಲ "ಶಿವರಾಮ ಭಟ್ಟರ ಹೆಂಡತಿ ಕಾವೇರಮ್ಮ ಒಳ್ಳೆ ಹೆಣ್ಣು. ಅವಳಿಗೂ ಮೂರು ನಾಲ್ಕು ಮಕ್ಕಳು ಇವನನ್ನು ಹೇಗೆ ನೋಡಿಕೊಳ್ಳುತ್ತಾಳೊ ಏನೊ ಎಂಬ ಶಂಕೆ."

ಹೊರಡುವ ಹಿಂದಿನ ದಿನ ಎಣ್ಣೆಹಚ್ಚಿ ಎರೆದಾಯಿತು. ಪಾಯಸ ಮಾಡಿ ಯಾಯಿತು.

...ಮುದ್ದುರಾಮ ಗಾಡಿ ಹತ್ತಿದ. ಮೂಕಮ್ಮ ಮುಳ ಮುಳ ಅತ್ತರು. ದುಗ್ಗಾಭಟ್ಟರು ಬಿಗಿ ಕಂಠದಿಂದ 'ಹುಷಾರು ಕಣೊ ಮುದ್ದ' ಎಂದರು. ಹೂಂ ಎಂದ ಮುದ್ದರಾಮ."

ಗಾಡಿ ಹೊರಟರೂ ಗಾಡಿಯ ಹಿಂದೆ ಭಾಗಮ್ಮ, ಗೋದುಬಾಯಿ ಹೊರಟರು; ಎಚ್ಚರಿಕೆ ಹೇಳುತ್ತ ಹೊರಟರು. ಭಾಗಮ್ಮ ಮುದ್ದುರಾಮನಿಗೆ "ಸಮನಾಗಿ ಓದ್ಕಳ್ಳೊ ಮುದ್ದಾ, ಹ್ವಳಿಗೆ ಈಜಾಕೋಗಬ್ಯಾಡ ಶೀಮುಗ್ಗಿ ಹೊಳೆ ಕಳ್ಳ ಹೊಳೆ, ಬಾನ್ವಾರಾ ಬಾನ್ವಾರಾ ನೀನೆ ಯಣ್ಣೆ ಹಚ್ಚಿ ಯರಕಳ್ಳಾ..."

ಭಾಗವ್ಮನವರ ಉಪದೇಶ ನಡದೇ ಇತ್ತು. ಈಗ ಗೋದಾಬಾಯಿ ಭಾಗವ್ಮ ಮತ್ತೊಂದು ಸುರುವು ಅತ್ತು ಸೆರಗು ತುಂಬಾ ಸಿಂಬಳ ಮಾಡಿಕೊಂಡರು."

ಮಕ್ಕಳನ್ನು ಪರ ಊರಿಗೆ ಕಳಿಸುವಾಗ ತಾಯ್ತನದ ಹೃದಯಕ್ಕಾಗುವ ಅಗಲಿಕೆಯ ವ್ಯಥೆ, ಅವರು 'ಸುರುಬುಸು' ಅಳುವ ಚಿತ್ರ ಕಣ್ಮುಂದೆ ಕಟ್ಟುತ್ತದೆ.

ಸದಾನಂದ ಕಾದಂಬರಿಯುದ್ದಕ್ಕೂ ವಾತ್ಸಲ್ಯ, ಕರುಣೆ, ಅನುಕಂಪ, ಔದಾರ್ಯದ ಹೊನಲೇ ಹರಿದಿದೆ.

ಸದಾನಂದದಲ್ಲಿ ದೇಶಮುಖರು ಬೀಗರಿಗೆ ತಮ್ಮ ಮಗಳ ಬಗೆಗೆ ಹೇಳುತ್ತ– "ಕೂಸಂದ್ರೆ ಕೂಸೇ ನೋಡ್ರಿ ನಮ್ಮ ಮುಕ್ತಾ... ಏನಂದ್ರೆ ಏನೂ ತಿಳಿಯೋಣಿಲ್ಲ. ಕಾಲೇಜ್ ಮೆಟ್ಟ ಹತ್ತಿದಾಳ ಮಾತ್ರ ಬಾಯಾಗ ಬೆರಳಿಟ್ರೆ ಚೀಪತಾಳ ನೋಡ್ರಿ, ನೀವು ದೊಡ್ಡ ಮನಸ್ಮಾಡಿ ಮಡೀಲಾಗ ತುಂಬಿಕೊಳ್ಬೇಕ್ ನೋಡ್ರಿ" ಎಂದು ತಮ್ಮ ವಾತ್ಸಲ್ಯ ಭಾವವನ್ನು ತೋರಿಸುತ್ತಾರೆ. (ಪುಟ–೧೪೭)

ಸಮಸ್ಯೆಗೆ ಸಿಕ್ಕ ವ್ಯಕ್ತಿಗಳ ಮಾನಸಿಕ ಹೋರಾಟವನ್ನು ಚಿತ್ರಿಸುವಲ್ಲಿ ಇಂದಿರಾ ಅವರ ಲೇಖನಿ ಅತ್ಯಂತ ಸಮರ್ಥವಾಗಿ ಕೆಲಸ ಮಾಡುತ್ತದೆ.

ಸದಾನಂದ ಕಮಲಳ ಬಗೆಗೆ ಬರೆಯುತ್ತ—"ಅವಳ ಬದುಕಿಗೆ ವೈಧವ್ಯ ಬಂದಿತು. ಆದರೆ ಅವಳ ಶರೀರಕ್ಕಲ್ಲ, ಆದು ಕಾಣುವುದರ ಚೇತೋಹಾರಿಯಾಗಿ ಕಾಣುತ್ತಿತ್ತು." (ಪುಟ–೪೫-೪೬)

"ಕಮಲ ತಿಳುವಳಿಕೆಯಿಲ್ಲದ ಹುಡುಗಿಯಲ್ಲ. ಪ್ರಪಂಚದ ಆಗು–ಹೋಗುಗಳೆಲ್ಲ ಅವಳಿಗೆ ಚೆನ್ನಾಗಿ ಅರ್ಥವಾಗುವುದು. ಕತೆ ಕಾದಂಬರಿ ಪತ್ರಿಕೆಗಳು ಎಲ್ಲವನ್ನೂ ಓದುವಳು. ನಿತ್ಯ ಜೀವನದಲ್ಲಿ ನಡೆಯುವ ಅಚ್ಚರಿ ಅದ್ಭುತಗಳನ್ನು ದಿನದಿನ ಕಾಣುವಳು, ಚಿಂತನೆ ಮಾಡುವಳು ನಿಡುಸುಯ್ಯುವಳು.

ಅವಳು ಸುಖವಾಗಿದ್ದಳು. ಅವಳ ಒಳಚೇತನ ಯಾವುದೋ ಅಪೂರ್ಣತೆಯಿಂದ ಬೇಗುದಿಗೊಳ್ಳುತ್ತಿತ್ತು. ಕತೆ ಕಾದಂಬರಿಗಳನ್ನೋದುವಾಗ ಯಾವುದಾದರೂ ಪ್ರಣಯ ಶೃಂಗಾರದ ವರ್ಣನೆ ಬರುವುದು ಆಗ ಅವಳು ತಟ್ಟನೆ ಪುಸ್ತಕ ಮುಚ್ಚಿ ಹತ್ತು ನಿಮಿಷ ಕಣ್ಣು ಮುಚ್ಚಿ ಮಲಗುವಳು ತನ್ನ ಗಂಡನ ನೆನೆಪು ಬರುವುದು."

ಈ ಚಿಂತನೆ ನಡೆದಾಗ ಅವಳ ಮುಖ ಬೆವರುತ್ತಿತ್ತು. ಅದೇ ಅವಳಿಗೊಂದು ಸಮಾಧಾನ.

ಇಲ್ಲೆಲ್ಲ ಕಂಗಾಲಿನಿಯಾದ ತಾರುಣ್ಯದ ವಿಧವೆ ಮಾನಸಿಕ ವೇದನೆಯನ್ನು ಇಂದಿರಾ ಅವರು ಸೂಕ್ಷ್ಮವಾಗಿ ಕಂಡಿದ್ದಾರೆ.

'ಗೆಜ್ಜೆಪೂಜೆ'ಯಲ್ಲಿ ಚಂದ್ರ ತಾನು ಪ್ರೀತಿಸಿದ ಯುವಕ ಸೋಮುವಿನೊಂದಿಗೆ ತನ್ನ ತಂಗಿಯ ಮದುವೆ ನಡೆದುದನ್ನು ತಿಳಿದರೂ ಯಾರಿಗೂ ಹೇಳದಂತಹ ಅಸಹಾಯಕ ಸ್ಥಿತಿಯಲ್ಲಿ ಸಿಕ್ಕಿರುತ್ತಾಳೆ. ಅಂದು ರಾತ್ರಿ ತನ್ನ ಪ್ರಿಯಕರನೊಂದಿಗೆ ತನ್ನ

ಸ್ವಂತ ತಂಗಿಯು ಪ್ರಥಮ ರಾತ್ರಿಯ ಸಮಾಗಮ. ಶಯ್ಯಾಗೃಹವನ್ನು ನೋಡುತ್ತ– "ಚಂದ್ರು ಮೆಲ್ಲಡಿ ಇಟ್ಟು ಒಳಹೋದಳು. ಅವಳ ಮೈಮನ ಉಯ್ಯಾಲೆಯಾಡಿತು, ತಾನು ತಂದಿದ್ದ ಎರಡು ದಿಂಬಿನ ಕವರುಗಳನ್ನು ಹಾಗೇ ದಿಂಬಿನ ಮೇಲೆ ಹಾಸಿದಳು. ಮತ್ತೊಮ್ಮೆ ಸುತ್ತಲೂ ಕಣ್ಣಾಡಿಸಿದಳು. ದಿಂಬಿನ ಕವರಿನ ಮೇಲೆ ತಾನೇ ಹಾಕಿದ ಕಸೂತಿ. (ಪುಟ ೧೭೦–೧೭೧.)

ಜಯಲಕ್ಷ್ಮಿಗೆ ಎಂತಹ ಭವ್ಯ ಸ್ವಾಗತ! ತನಗೋ ಅದೇ ಆ ಕಡುಕತ್ತಲೆಯಲ್ಲಿ ಆ ಬೇವಿನ ಮರದ ಕೆಳಗೆ ಆ ಕಸದ ರಾಶಿಯಲ್ಲಿ! ಕಳ್ಳತನದ ಕೂಡುವಿಕೆ.

ಒಂದು ಗಳಿಗೆ ಭದ್ರವಾಗಿ ತಲೆ ಹಿಡಿದುಕೊಂಡು ಕಣ್ಣು ಮುಚ್ಚಿದಳು ಇನ್ನಲ್ಲಿ ನಿಲ್ಲುವದಾಗಲಿಲ್ಲ, ಮೆಲ್ಲಮೆಲ್ಲನೆ ಹೊರಬಂದಳು.

"ತೂರಾಡುತ್ತ ಬಂದು ಮಂಚದಲ್ಲಿ ಉರುಳಿದಳು. ಬೆಂಕಿಯಲ್ಲಿ ಬಿದ್ದ ಹುಳು ವಂತೆ ಮಿಲಿ ಮಿಲಿ ಒದ್ದಾಡಿದಳು."

ಇಲ್ಲಿ ಇಂದಿರಾ ಅವರು ಭಗ್ನಪ್ರೇಮಿಯ ಹತಾಶೆ ಭಾವನೆಯನ್ನು ಹೃದಯಂಗಮ ವಾಗಿ ನಿರೂಪಿಸಿದ್ದಾರೆ.

ಗಡಿಯಾರ, ಗ್ರಾಮಾಫೋನು, ಪೆಟ್ರೋಮ್ಯಾಕ್ಸ್, ಬ್ಯಾಟರಿ ಇತ್ಯಾದಿಗಳೆಲ್ಲ ಆಧುನಿಕ ಯುಗದ ನವನಾಗರಿಕತೆಯ ಸಂಕೇತಗಳಾಗಿ ಬರುತ್ತವೆ. ಕಮಾನುಗಾಡಿ ಕುದುರೆಗಾಡಿ, ಮೋಟಾರ್, ವಾಹನ, ಸೈಕಲ್ಲು, ರೈಲು, ಆಸ್ಪತ್ರೆ, ಮಿಡ್ಲ್‌ಸ್ಕೂಲು, ಕಂಪನಿ ನಾಟಕಗಳು, ಸಿನೇಮಾಗಳಂ, ಮುಂತಾದವು ಆಧುನಿಕತೆಯನ್ನು ಸೂಚಿಸು ತ್ತದೆ.

ತಗ್ಗಿನಮನೆ ಸೀತೆ, ತುಂಗಭದ್ರ, ಫಣಿಯಮ್ಮ ಮುಂತಾದ ಕೃತಿಗಳಲ್ಲಿ ನಾವು ಇವುಗಳ ಉಲ್ಲೇಖವನ್ನು ಕಾಣುತ್ತೇವೆ. ಕಾಲುದೀಪ, ಚಿಮಣಿ ಎಣ್ಣೆಯ ಗಾಜಿನ ಬುರುಡೆ, ದೀಪ, ಇತ್ಯಾದಿಗಳು ಸಹ ಸಮಾಜದಲ್ಲಿ ನಾಗರೀಕತೆಯ ಪ್ರವೇಶವನ್ನೇ ಸೂಚಿಸುತ್ತಂತೆ. ಇದು ಇಂದಿರಾ ಅವರ ಕಾದಂಬರಿಗಳಲ್ಲಿ ಕಂಡುಬರುವ ವೈಶಿಷ್ಟ್ಯವೇ ಆಗಿದೆ.

ವ್ಯಕ್ತಿಗಳ ಗುಣಸ್ವಭಾವವನ್ನು ಒಮ್ಮೊಮ್ಮೆ ಅವರ ರೂಪ, ವೇಷ–ಭೂಷಣ ಗಳಲ್ಲಿ ಕಾಣುವಂತೆ ಚಿತ್ರಿಸುವದೂ ಇಂದಿರಾ ಅವರ ವೈಶಿಷ್ಟ್ಯ.

"...ನರಸಯ್ಯನ ಪಕ್ಕದಲ್ಲೇ ಸದಾನಂದರು ಕುಳಿತಿದ್ದಾರೆ. ಅವರು ಚಿಕ್ಕ ಪ್ರಾಯದವರು ಮೂವತ್ತು ಮೂವತ್ತೆರಡರಲ್ಲೇ ಅವರ ವಯಸ್ಸು. ಮಂಗಳೂರಿ ನವರಂತೆ ಕೂದಲನ್ನೆಲ್ಲ ಹಿಂದೆ ಬಾಚಿದ್ದಾರೆ. ದವಡೆಯಲ್ಲಿ ತಾಂಬೂಲ ಒತ್ತರಿಸಿ ದ್ದಾರೆ. ಹೆಣ್ಣು ಮಕ್ಕಳಂತೆ ಕೆಂಪಗಿನ ತುಟಿ, ಮೀಂಚಿನ ಮರಿಗಳಂತೆ ಚಕ ಚಕನೆ ಸರಿದಾಡುವ ಹೊಳಪಿನ ಕಣ್ಣುಗಳು. ತಾಜಾ ಹೊಂಗೇದಗೆಯ ಬಗ್ಗೆ ಎಡಗೈಯಲ್ಲಿ ಚಿನ್ನದ ಚೈನಿನ ರಿಸ್ಟ್‌ವಾಚು, ಹರಳಿನ ಉಂಗುರ ಅವರು ಮಾತಾಡುವಾಗ ಕೈ

ಅಚ್ಚಿ ಸೀತೆಗೆ "ಕಿರಿಸ್ತಾನ್ರು ಡೇವಿಡ್ನಪ್ಪ ಫೋಟಾಪೆಟ್ಗೆ ತಂದ ದಾನವ ದುಂಡಗದ್ದೇಲಿ. ಅಲ್ಲೊಂದು ದೊಡ್ಡ ಆಸ್ಪತ್ರೆ ಅಂದೆಯುಂತಲ್ಲ ಅಲ್ಲಿ ಮಕಕ್ಕೆ ಕರೀ ಬಟ್ಟೆ ಮುಚ್ಗಂಡ ಫೋಟಾ ತೆಗೀತಾನಂತೆ ಛೂಮಂತ್ರ ಗಾಳೀ ಮಾಡ್ತಾನಾದೀತು ಫೋಟಾ ತೆಗಿಸ್ಕಂಡಾರ್ಗೆ ತುಸನಾರೇ ನೋವೇ ಆಗಲ್ಲಂತೆ" ಎಂದು ಹೇಳುವುದನ್ನು ನೋಡಿದಾಗ ಅಂದಿನ ಜನರ ಮುಗ್ಧತೆ ಬಾಲಕಿಗೆ ಫೋಟೋದ ಬಗೆಗೆ ಇರುವ ತಿಳಿವಳಿಕೆ ವಿಸ್ಮಯ ಭಾವವನ್ನುಂಟುಮಾಡುವದರ ಜತೆಗೆ ತಿಳಿಹಾಸ್ಯವನ್ನುಕ್ಕಿಸುತ್ತದೆ.

ಇಂದಿರಾ ಅವರ ನವದಂಪತಿಗಳ ಶೃಂಗಾರ ಸಂಭಾಷಣೆಗಳು ಶೃಂಗಾರಮಯ ಸನ್ನಿವೇಶಗಳು ಆಕರ್ಷಕವಾಗಿವೆ; ಅತ್ಯಂತ ಸಂಯಮಶೀಲವಾಗಿವೆ, ಮುಗ್ಧವಾಗಿವೆ.

ರಜನೀಕಾಂತ ದೀಪದ ಮಹತ್ ಪ್ರಕಾಶ ಸಜ್ಜೆಗೃಹವನ್ನು ಬೆಳಗಿತ್ತು. ಎರಡು ಬೆಂಚುಗಳ ಮೇಲೆ ಅಂದೋಜೀ ಸಾಮಾನುಗಳು ಲಡ್ಡುಗೆ, ಉಂಡೆ, ಚಕ್ಕುಲಿ, ಸಕ್ಕರಿ ಸಾಮಾನು, ಹಣ್ಣು ಹಂಪಲು, ಹಾಲು ಕಾಯಾಲು, ಗಂಧದ ಕಡ್ಡಿ, ಏನೇನಿರಬೇಕೋ ಎಲ್ಲಾ ಇತ್ತು. ಒಂದು ಸೊಳ್ಳೆ ಪರದೆಯೂ ಬಂದಿತ್ತು.

ರಾಜಾ ರವಿವರ್ಮನ ಮೋಹಿನಿ ದಮಯಂತಿ, ತಾರೆ, ವಿಶ್ವಾಮಿತ್ರ, ಮೇನಕೆ ಎಲ್ಲರೂ ಗೋಡೆಯ ಮೇಲೆ ಸಾಲು ಸಾಲಾಗಿ ವಿರಾಜಮಾನರಾಗಿದ್ದರು. ಯಾರ ಯಾರ ಮನೆಯವೋ ಕಸೂತಿ ಚೌಕಗಳು, ಮಣಿಪಠಗಳು, ದೊಡ್ಡ ದೊಡ್ಡ ಬಣ್ಣದ ಗಾಜಿನ ಗುಳುಪಗಳೂ ಬಂದು ಕುಳಿತು ಮುದ್ದುರಾಮ, ಕೃಷ್ಣವೇಣಿಯರನ್ನು ಸ್ವಾಗತಿಸಿದವು....ಮುದ್ದುರಾಮ 'ಕೃಷ್ಣಾ' ಎಂದು ಕರೆದ ರಾಶಿ ರಾಶಿ ಹೂವು ಮುಡಿದ ಕೃಷ್ಣಾ ಎತ್ತಲಾರದೆ ಮೆಲ್ಲನೆ ತಲೆ ಎತ್ತಿದವು. "ನಾ ಒಂದು ಮಾತು ಹೇಳ್ತಿನಿ ಕೇಳ್ತಿಯಾ ?"

"ಓ ನಂಗೆಲ್ಲ ಗೊತ್ತು, ಮೂಕತ್ತೆ ಹೇಳಿದಾರೆ." ಮುದ್ದುರಾಮನಿಗೆ ಬಲು ಅಚ್ಚರಿಯಾಯಿತು. ಕೊತೂಹಲದಿಂದ ಕೇಳಿದ —

"ಏನ್ ಹೇಳಿದಾರೆ ಮೂಕತ್ತೆ ನಿನ್ಕೈಲಿ ?"

"ಹಣ್ಣು ತಿನ್ಬಕು, ಹಾಲ್ ಕುಡಿಬಕು, ಎಲಡ್ಕೆ ಹಾಕ್ಕಬಕು, ಗಂಡಯ್ಯ ಹೇಳ್ದಾಗೆ ಕೇಳ್ಬಕು, ಗಲಾಟೆ ಮಾಡ್ಬಾರ್ದು ಅಳಬಾರ್ದೂಂತ, ಏನೆಸೆಲ್ಲ ಹೇಳಿದ್ರು"

"ಅವನು ಅವಳ ಮಾತಿನ ಕಡೆಗೆ ಗಮನ ಕೊಡಲಿಲ್ಲ. ಅವಳ ರಸ ತುಂಬಿದ ತುಟಿಯ ಕಡೆಗೆ ನೋಡುತ್ತ ತನ್ನೆರಡು ತೋಳುಗಳಿಂದ ಅವಳನ್ನು ಕೋಮಲವಾಗಿ ಸೆಳೆದುಕೊಂಡ. ಅವಳು ಹಿರಿಯರ ಮಾತನ್ನು ಪರಿಪಾಲಿಸಿ ಸೋತು ಅವನ ಯಾವ ಆಚರಣೆಗೂ ಅಡ್ಡಿ ಮಾಡಲಿಲ್ಲ. ಎಂದೂ ಅನುಭವಿಸದ ಒಂದು ವಿಚಿತ್ರ ಆನಂದದ ತೆರೆಯಲ್ಲಿ ಅವಳು ಅರೆಗಣ್ಣು ಮುಚ್ಚಿ ತೋಳ್ಸೆರೆಯಲ್ಲಿ ಅಡಗಿದಳು."

ಏ.ಸೂ.: ತುಂಗಭದ್ರ, ಪುಟ–54 ರಿಂದ 69.

ಶೃಂಗಾರ, ಸಮಾಗಮದ ವರ್ಣನೆ ಸಂಯಮದಿಂದ ಆಕರ್ಷಿತವಾಗಿದೆ. ನೇರ ನಿರೂಪಣೆಯ ಆಡುನುಡಿಯಿಂದಾಗಿ ಕಾದಂಬರಿಗಳು ಓದುಗರಿಗೆ ಆತ್ಮೀಯವಾಗುತ್ತವೆ.

'ಫಣಿಯಮ್ಮ' ಕಾದಂಬರಿಯ ಆರಂಭದಲ್ಲಿ ಲೇಖಕಿ ಸುಮಾರು ೧೬೪೦ನೇ ಇಸವಿಯ ಸುಮಾರಿನಲ್ಲಿ ಇರಬಹುದು. ಇಂಥದೇ ಸಂವತ್ಸರ ಎಂಬುದು ಸರಿಯಾಗಿ ಈಗ ಯಾರಿಗೂ ಗೊತ್ತಿಲ್ಲ. ಆಗ ಆಷಾಢದ ರಾತ್ರಿಯಲ್ಲಿ ಹೆಬ್ಬಲಿಗೆ ಅಂಚೆ ತಮ್ಮಯ್ಯ ನವರ ಪತ್ನಿ ಸಣ್ಣಮ್ಮನವರಿಗೆ ಹೆರಿಗೆ ನೋವು ಕಾಣಿಸಿಕೊಂಡಿತು. ಒಮ್ಮೆಲೆ ಓದುಗ ರನ್ನು ಆಗ ಎಂದು ಹೇಳುತ್ತ ೧೮೪೦ನೇ ಇಸವಿಯ ಸುಮಾರಿಗೆ ಎಳೆದೊಯ್ಯುತ್ತಾರೆ.

ಸದಾನಂದದ ಆರಂಭ "ಒಂದು ವಸಂತಋತುವಿನ ನವೋದಯ ಎನ್ನಬಹುದು. ದುಂಡುಮಲ್ಲಿಗೆಯಲ್ಲಿ ಮಲ್ಲಿಗೆಯ ಮೆರೆದಾಟ ಹತ್ತೆಂಟು ಮೈಲಿಯವರೆಗೂ ಮಲ್ಲಿಗೆಯ ಘಮ ಘಮ" ಎಂದು ಬೆಳಗಿನ ಚೈತನ್ಯದೊಂದಿಗೆ ಆರಂಭವಾಗುವ ಕಾದಂಬರಿಯ ಅಂತ್ಯ ಸದಾನಂದ ವಿಧವೆ ಕಮಲಳ ಮದುವೆಯ ಮೊದಲರಾತ್ರಿಯ ಮೂರನೆಯ ದಿನ "ಕರೆಯದೇ ಅಂದು ತೋತಾರಾಮ ನಸುಕಿನಲ್ಲಿಯೇ ಬಂದು ಅವರು ಮಲಗಿದ್ದ ರೂಮಿನ ಕಿಟಕಿಯ ಪರದೆ ಸರಿಸಿ ಒಳಸೇರಿತು. ಕೂಡಲೇ ಒಳಗೆಲ್ಲ ಕಮಲಳ ಬಾಳನ್ನು ಬೆಳಗುವ ಬೆಳಕು ತುಂಬಿಬಂದಿತು."

ಸುಖಾಂತ ಚೈತನ್ಯಮಯ ಬೆಳಗಿನೊಂದಿಗೆ ಕೊನೆಗೊಳ್ಳುತ್ತದೆ. 'ತುಂಗಭದ್ರ' 'ತಗ್ಗಿನಮನೆ ಸೀತೆ' ಬಾಲಕ–ಬಾಲಕಿಯರ ಸಂಭಾಷಣೆಯಿಂದ ಆರಂಭವಾಗುತ್ತದೆ.

ಮೂಕಮ್ಮನ ದಪ್ಪ ಕಾಲುಂಗುರ ಕಿಣಿ–ಕಿಣಿ ಸದ್ದು ಗಜ್ಜುಗದ 'ಟೊಕಪಕ' ಸದ್ದು, ಪಕ್ಷಿಗಳ ಕಲರವ, ಹೊಳೆಯ ಸೊಸ ಸೊಳ ಶಬ್ದ, ಮಹಡಿ ಹತ್ತುತ್ತಿದ್ದ ಕೃಷ್ಣಿಯ ಕಾಲು ಬಳೆ, ಚೈನಿನ ಕುಣು ಕುಣು ಸದ್ದು, ಭಾವಿ ರಾಟೆಯ 'ಗಡ ಗಡ' ಸಪ್ಪಳ ದಡ್ದು ಬಡ್ದು ಭತ್ತ ಕುಟ್ಟುವ ಸದ್ದು ಕಿವಿಗಳಿಗೆ ಸ್ಪಷ್ಟವಾಗಿ ಕೇಳಿಸುತ್ತವೆ,

ಕಾದಂಬರಿಯಲ್ಲಿ ಮುಂದೆ ಸಂಭವಿಸಬಹುದಾದ ಒಳಿತು ಕೆಡುಕುಗಳ ಸೂಚನೆ ಯನ್ನು ಶಕುನಗಳ ಮೂಲಕ ಸಾಂಕೇತಿಕವಾಗಿ ಸೂಚಿಸುವುದು ಇಂದಿರಾ ಅವರ ಕಾದಂಬರಿಗಳಲ್ಲಿ ಕಂಡು ಬರುವ ವೈಶಿಷ್ಟ್ಯವಾಗಿದೆ.

'ಗಿರಿಬಾಲೆ' ಕಾದಂಬರಿಯಲ್ಲಿ ಶೀನನೊಂದಿಗೆ ವೆಂಕಟೇಶ ಶಂಕರಿಯನ್ನು ನೋಡಿ ಬರಲು ಗೊತ್ತಿಲ್ಲದೆಯೇ ಶ್ರಾದ್ಧಕ್ಕೆ ಕರೆಯಲು ಹೋದಾಗಲೇ ಹೊರಡುವುದು ಅವರ ಮುಂದಿನ ದಾಂಪತ್ಯ ಜೀವನದ ಅಪಶಕುನವನ್ನು ಸೂಚಿಸುತ್ತದೆ.

ಇದೇ ಕಾದಂಬರಿಯಲ್ಲಿ ಸುಬ್ಬಯ್ಯನವರು ಊರ ಹಿರಿಯರೊಂದಿಗೆ ಮನೆಯ ಜಗುಲಿಯಲ್ಲಿ ವೆಂಕಟೇಶನ ಮದುವೆ ವಿಷಯ ಎತ್ತುತ್ತಿದ್ದಂತೆಯೇ ನರಸಿಂಗರಾಯರ

ವಿ.ಸೂ. : 'ಸದಾನಂದ'—ಪುಟ 366

ವೊಮ್ಮಗ ಒಂಟಿ ಸೀನು ಸೀನಿದಾಗ ಅಲ್ಲಿದ್ದವರೆಲ್ಲ ಅದನ್ನು ಅಪಶಕುನವೆಂದೇ ಭಾವಿಸುತ್ತಾರೆ. ಮುಂದೆ ಅದರಂತೆಯೇ ನಡೆಯುತ್ತದೆ.

'ಫಣಿಯಮ್ಮ' ಕಾದಂಬರಿಯಲ್ಲಿ ಜಾತ್ರೆಯಂದು ಹೆರಳು ಬಂಗಾರ ಸಹಿತ ಫಣಿಯಮ್ಮನ ಜಡೆ ಕತ್ತರಿಸಲ್ಪಡುವುದು ಮತ್ತು ಅರಿಸಿನ ಕುಂಕುಮದ ಪಂಚವಾಳ ಮುಗುಚಿ ಬೀಳುವುದು ಇವೆಲ್ಲ ಫಣಿಯಮ್ಮನ ಭವಿಷ್ಯದ ದುರಂತವನ್ನು ಸೂಚಿಸುತ್ತವೆ.

'ಶಾಂತಿಧಾಮ' ಕಾದಂಬರಿಯಲ್ಲಿ ಆನಂದನ ಅಕಾಲ ಮರಣದ ಸಮಯದಲ್ಲಿ ದೇವರ ಮುಂದಿನ ದೀಪ ಆರುವುದು. ವಾಸಂತಿಯ ಮದುವೆಯ ಸಮಯದಲ್ಲಿ ವೆಂಕಟರಮಣಸ್ವಾಮಿಯ ಫೋಟೋ ಒಡೆದು ಹೋಗುವುದು, ಪದ್ದಮ್ಮನವರ ಕೈಯಲ್ಲಿನ ಪ್ರಸಾದದ ದೊನ್ನೆಯನ್ನು ಹದ್ದು ಕಚ್ಚಿಕೊಂಡು ಹೋಗುವುದು ಮುಂದೆ ನಡೆಯುವ ದುರ್ಘಟನೆಗಳನ್ನು ಸಾಂಕೇತಿಕವಾಗಿ ಸೂಚಿಸುತ್ತದೆ.

"ಸದಾನಂದ" ಕಾದಂಬರಿಯಲ್ಲಿ ತಮ್ಮಯ್ಯನವರು ಗೌರಿ ಹಾಗೂ ಮೂರ್ತಿಯ ಮದುವೆಯ ಬಗೆಗೆ ಯೋಚಿಸುತ್ತಿರವಾಗಲೇ ಅವರ ಪಕ್ಕದಲ್ಲಿ ನಡೆದು ಬರುತ್ತಿದ್ದ ಜವರ, ಬೈರ, ಸ್ವಂತದ ಯಾವುದೋ ವಿಷಯವನ್ನು ಮಾತಾಡುತ್ತ—

"ಇದು ಆಗಾದಲ್ಲ, ಹೊಗಾದಲ್ಲ ತಗಿಯಲೆ," ಎನ್ನುತ್ತಾರೆ. ಅದೇ ರೀತಿ ಗೌರಿ, ಮೂರ್ತಿಯ ಮದುವೆ ಮುರಿದುಬೀಳುವ ಸೂಚನೆ (ಅದೇ ಪುಟದಲ್ಲಿ) ದೇವಸ್ಥಾನ ದಲ್ಲಿ ತೀರ್ಥ, ಪ್ರಸಾದ ಕೊಡುತ್ತಿದ್ದಾಗ ಪ್ರಸಾದ ಕೆಳಗೆ ಬೀಳುವುದು. ತಮ್ಮಯ್ಯ ನವರು ಇದೇ ಯೋಚನೆಯಲ್ಲಿ ಮನೆಯಲ್ಲಿ ಕಾಲಿಟ್ಟಾಗ, ಗೌರಿ, ಹಚ್ಚಿದ ಗೋಡೆಯ ಲ್ಯಾಂಪ್ ಆರಿ ಹೋಗುವುದು, ಇವೆಲ್ಲ ಗೌರಿ ಮೂರ್ತಿಯ ಮದುವೆ ಬಗೆಗೆ ಸಾಂಕೇತಿಕವಾಗಿ ನೀಡುವ ಮುನ್ಸೂಚನೆಗಳಾಗಿವೆ.

'ಗೆಜ್ಜೆಪೂಜೆ' ಕಾದಂಬರಿಯಲ್ಲೂ ಆರಂಭದ ದೃಶ್ಯ ಸಂಪೂರ್ಣವಾಗಿ ಕಾದಂಬರಿಯ ಮುಂದಿನ ಕತೆಯನ್ನು ಸಾಂಕೇತಿಕವಾಗಿ ಸೂಚಿಸುತ್ತದೆ.

ಇವು ಕೂಡ ಇಂದಿರಾ ಅವರ ಕಾದಂಬರಿಗಳ ಶೈಲಿಯ ಲಕ್ಷಣಗಳಲ್ಲಿ ಒಂದಾಗಿವೆ ಎನ್ನಬಹುದು.

ಫಣಿಯಮ್ಮ ಕಾದಂಬರಿಯಲ್ಲಿ ಒಮ್ಮೆ ಯಾರೋ ಫಣಿಯಮ್ಮನ ವಯಸ್ಸನ್ನು ಕೇಳಿದಾಗ—

"ಅಯ್ಯೋ, ನಾಯಿಗೆ ವಯಸ್ಸಾದರ ಅಜ್ಜ ಅನ್ನಿಸಿಕೊಳ್ಳುತ್ತೆನ್ರೋ?" ನನ್ನ ವಯಸ್ಸು ನಂಗೆಂತದು ಗೊತ್ತದೆ ಅದನ್ನು ಕಟ್ಕಂಡು ಏನ್ಮಾಡಬೇಕಾಗಿವೆ ಈಗ? ನಂಗೆಂತದು ಮದುವೆಯಾ ಮುಂಜಿಯಾ, ಹುಟ್ಟಿದ ಹಬ್ಬವಾ? ಆಗಿದ್ದೀತು ಹೊಳೆ ದಂಡೆ ಅರಳೀ ಮರಕ್ಕಾದಷ್ಟು ವಯಸ್ಸು. ನನ್ನ ಕಣ್ಣ ಮುಂದೆ ಮನೆಯೋರೆಲ್ಲ ನುಣ್ಣಗೆ ಹೋದ್ರು. ಈಗ ನನ್ನ ವಯಸ್ಸು ಗೊತ್ತಿದ್ರೆ ಕೃಷ್ಣಗೆ ಮಾತ್ರ. ಯಾಕೆಂದರೆ

ಅವಗಿಂತ ಮೂರ್ತಿಂಗ್ಳಿಗೆ ಸಣ್ಣೋಳು ನಾನು ಹೂವು–ಹಣ್ಣು, ಕಾಯಿ ಕೊಡದೇ ಇರೋ ಮರದ ಹಂಗೆ ನಾನು."

ಇಲ್ಲಿ ಅಡಿಗೆ ಮನೆಯಲ್ಲಿ ತನ್ನ ಬಾಳನ್ನು ಕಳೆದ ಬಾಲವಿಧವೆ ಫಣಿಯಮ್ಮನ ವ್ಯಥೆ, ಅವಳ ಸಂಸ್ಕೃತಿಯು ತನ್ನ ಬಾಳನ್ನು ನಾಯಿಗೆ, ಬೋಳುಮರಕ್ಕೆ ಹೋಲಿಸಿ ಕೊಳ್ಳುವುದು ಪರಿಣಾಮಕಾರಿಯಾಗಿ ಭಾಷೆಯಲ್ಲಿ ನಿರೂಪಿತವಾಗಿದೆ. ಇಂದಿರಾ ಅವರು ಇಲ್ಲೆಲ್ಲ ಸಮರ್ಥವಾದ ಭಾಷೆಯನ್ನು ಬಳಸುವಲ್ಲಿ ಯಶಸ್ವಿಯಾಗುತ್ತಾರೆ.

ತಗ್ಗಿನ ಮನೆ ಸೀತೆ ಕಾದಂಬರಿಯಲ್ಲಿ ಗಂಡನ ಮನೆಗೆ ಬಂದ ಸೀತೆ, ನೆರೆಮನೆಯ ಕಾಳಿಂಗಯ್ಯನವರ ಮಗಳು ಅನ್ನಪೂರ್ಣೆಯೊಡನೆ ಹೊಳೆಗೆ ಬರುತ್ತಾಳೆ. ಅನ್ನಪೂರ್ಣೆ ಸೀತೆಯೊಡನೆ ಹರಟುತ್ತಿರುವಾಗ ಗಮನ ತಪ್ಪಿ ಕೊಡ ಹೊಳೆಯಲ್ಲಿ ತೇಲಿ ಹೋಗು ತ್ತದೆ. ಅದನ್ನು ಕಂಡ ಸೀತೆ ಹಿಂದೆ ಮುಂದೆ ಯೋಚಿಸದೆ ಕೊಡವನ್ನು ಹಿಡಿದು ತರಲು ಹೊಳೆಗೆ ಧುಮುಕುತ್ತಾಳೆ. ಒದ್ದೆ ಸೀರೆಯಲ್ಲಿ ಸೀತೆ ಮನೆಗೆ ಬಂದಾಗ ಅವಳ ಅತ್ತೆ ರಾಮಕ್ಕ ಕೈಯಲ್ಲಿ ಕಟ್ಟಿಗೆ ತುಂಡು ಹಿಡಿದು ಸೀತೆಯ ಜುಟ್ಟು ಹಿಡಿದು—

"ಪರದೇಶಿ ರಂಡೇ ಕುರದೇ ಅವರ ಮನೇ ಕೊಡಪಾನ ಹಿಡಿಯೋಕೆ ನೀನು ಹೊಳೆಯಲ್ಲಿ ಈಜಬಿದ್ಯಾ, ಒಲೆಗುಪ್ಪಿನ ಹಾಗೆ ಮಾಲೆ ಬಿಟ್ಕಂಡು ಒದ್ದೆ ಮೈಯ್ಯಾಗ ನಿಂತಿದ್ಯಾ ಅಪಾಟಿ ಗಂಡಸ್ರು ಎದುರಿಗೆ ನಿಂಗೇನಾರ ನಾಚ್ಕೆ ಅದ್ಯನೇ ?"[1] ಎಂದು ಜೋರು ಮಾಡುತ್ತಾಳೆ. ಘಟವಾಣಿ ಅತ್ತೆಯ ಸಂಸ್ಕೃತಿ ವ್ಯಕ್ತವಾಗುತ್ತದೆ. ಗ್ರಾಮ್ಯ ಆಡುನುಡಿ ಯೊಂದಿಗೆ ತುಂಬು ತಾರುಣ್ಯದ ಯುವತಿ ಒದ್ದೆ ಬಟ್ಟೆಯಲ್ಲಿ ನಿಂತಾಗ ಅವಳ ತಾರುಣ್ಯದ ಸೌಂದರ್ಯವನ್ನು ಒಲೆನುಪ್ಪಿಗೆ ಹೋಲಿಸಿದ ಸಾದೃಶ್ಯ ಅತ್ಯಂತ ಸಹಜ ವಾಗಿದೆ.[2] ರಾಮಕ್ಕ ಹೆಣ್ಣು ಮಕ್ಕಳು ಮೇಲಿಂದ ಮೇಲೆ ತೌರುಮನೆಗೆ ಬಂದರೆ ಅವರನ್ನೂ ತರಾಟೆಗೆ ತೆಗೆದುಕೊಂಡು—

'ಎಡಗೈ ಕುಂಡೆಗೆ ಹತ್ರಾಂತ ಗಾದೆ ತೌರುಮನೆ ಹತ್ರಾಂತ ಮಕ್ಳುಮರಿ ಕಟ್ಕೊಂಡು ಬರೂದು ಯಂತ ಚಂದವೇ ?'

ಇಲ್ಲಿ ಬಳಸುವ ಗಾದೆಮಾತು ಸಂದರ್ಭೋಚಿತವಾಗಿ ನಿರಾಯಾಸವಾಗಿ ಮೂಡಿದೆ. ಸದಾನಂದ ಕಾದಂಬರಿಯಲ್ಲಿ ದೇಶಮುಖರ, ಬೀಗರಾದ ರಾಮಣ್ಣನವರ ಮನೆಗೆ ತಮ್ಮ ಮಗಳ ಮದುವೆಯ ಪ್ರಸ್ತಾಪ ಮಾಡಲು ಬಂದಿರುತ್ತಾರೆ. ಯಂಟತ್ತೆ ಬೀಗರಿಗಾಗಿ ಇಡ್ಲಿಚಟ್ನಿ, ಖಾರದ ಚಟ್ನಿ, ಕೆನೆಮೊಸರು ತಯಾರಿಸಿ ಬಡಿಸಿದಾಗ ಆ ಉಪಾಹಾರದ ವೈಖರಿ, ಇಡ್ಲಿ ಚಟ್ನಿಯ ರುಚಿಯನ್ನು ಚಪ್ಪರಿಸಿ ಬಾಯಿತುಂಬ ಹೊಗಳುತ್ತ ಯಂಟತ್ತೆಗೆ—

1. ತಗ್ಗಿನಮನೆ ಸೀತೆ ಪುಟ 117.
2. ಅದೇ ಪುಟ 119

"ಅಜ್ಜವ್ನೋರೆ, ನಿಮ್ಮ ಇಡ್ಲಿ ದುಂಡುಮಲ್ಲೆ ದಂಡಿ ಇದ್ದಂಗದೆ ನೋಡ್ರಿ! ನಿಮ್ಮ ತಿಂಡಿಗೆ ನಾವು ಏನು ಕೊಟ್ಟರೆ ಮುಗಿದೀತು. ನಮ್ಮ ಅಡಿಗಿಯಾಕಿ ಇಡ್ಲಿ ಮಾಡಿ ಇಡ್ತಾಳೆ ನೋಡ್ರಿ, ಥೇಟ್ ಕೊಕ್ರೆ ಪಿಷ್ಠಿ ಇದ್ದಾಗ ಇರತದ, ನಮ್ಮ ಕರ್ಮ ಏನಂಬೋಣ, ಅಕಿ ಕೊಟ್ಟದ್ದು ನಾವು ತಿಂದದ್ದು"[1] ಇಲ್ಲೆಲ್ಲ ಅಲಂಕಾರಿಕ ಭಾಷೆ ಸಮರ್ಥವಾಗಿ ಗಮನಸೆಳೆಯುತ್ತದೆ.

ಇದೇ ಕಾದಂಬರಿಯಲ್ಲಿ ಮೂರ್ತಿಗೆ-ಮುಕ್ತಾಳನ್ನೇ ತಂದುಕೊಳ್ಳಬೇಕೆಂದು ನಿರ್ಧರಿಸಿದ್ದ ಸಂಗತಿಯನ್ನು ಮೂರ್ತಿ ಮುಕ್ತಾ ಇವರ ಮದುವೆಯ ನಂತರ ತಿಳಿದಾಗ ಗೋವಿಂದರಾಯರು ನಾದಿನಿ ಉಷಾಬಾಯಿ "ನಿನ್ನ ಅಂಬೋಣ ಖರೇ ಅದ ಉಷಾ, ಅದ ಆಮುಂದಿ ಸೇವಾದಾಗ ಜೇರಿಗಿ ಅಷ್ಟು ಕಸ, ಕಾಣೋಣೆಲ್ಲ ಹ್ಯಾಂಗ ನಮಗ ತಿಳಿಬೇಕು ?"

ಈ ಮಾತನ್ನು ಕೇಳುತ್ತ ನಿಂತಿದ್ದ ಮಧುಕರ ಪ್ಯಾಂಟಿನ ಜೇಬಿನೊಳಗೆ ಕೈ ತುರುಕಿ ಮುಖಬಾಗಿ ಮೆಲ್ಲ ಮೆಲ್ಲನೆ ಅಲ್ಲಿಂದ ಎದ್ದು ನಡೆದಾಗ ಗೋವಿಂದರಾಯರು—

"ಈ ಮೆತ್ತನ್ನ ಮನಸಿನ ಬಾಳಾ ಎಷ್ಟು ಲಗೂನ ಇಂಥ ಸಂಗ್ತಿ ಮನಸಿನಾಗ ತಗೋತಾನಂತಿ ? ಹಾಂಗ ಹಾಂಗ ಬಹಳೇ ಭೋಳೇ ಮನುಷ್ಯ ಆಗ್ತಾನಿವ."

ಪುಣೆ ಆಡುನುಡಿ ಇಲ್ಲಿ ಅತ್ಯಂತ ಸ್ವಾಭಾವಿಕವಾಗಿ ಮೂಡಿದೆ. ಇದೇ ಕಾದಂಬರಿ ಮಂಗಳೂರು ಕಡೆಯ ಕನ್ನಡದ ಆಡು ನುಡಿಯನ್ನು ಹೃದ್ಯವಾಗಿ ಬಳಸಿದ್ದಾಳೆ 'ಮಧುವನ'ದಲ್ಲಿ ಇದನ್ನು ನೋಡಬಹುದು.

ಮೊಟ್ಟ ಮೊದಲ ಬಾರಿಗೆ ರಾಮಣ್ಣನವರ ಮನೆಗೆ ಬಂದ ಸದಾನಂದರು ರಾಜುವನ್ನು ಪರಿಚಯಿಸಿಕೊಳ್ಳುತ್ತ ಅವನ ಭುಜದ ಮೇಲೆ ಕೈಹಾಕಿ ರಾಜಣ್ಣ "ಬೆಳಿಗ್ಗೆ ಅತ್ತಕಡೆ ಬರಲೀಕಾಂಟಲ್ಲ"[3] ಎನ್ನುತ್ತಾರೆ.

ಮಧುವನಕ್ಕೆ ಹೋದಾಗ ರಾಜುವಿಗೆ ತಂತ್ರಿಯನ್ನು ಪರಿಚಯಿಸಿ "ಇದೆಲ್ಲ ನನ್ನ ಅಪ್ಪನ ಕಿತಾಪತಿ, ನೋಡಿ ಈ ಅಂಬಕ್ಕನ ತಂತ್ರಿಗೆ ಗಂಟು ಹಾಕಿದ್ದು ನನ್ನ ಅಪ್ಪನಂತೆ ಆಗಿನಿಂದ ಇವ ನಮ್ಮ ಸಾಮ್ರಾಜ್ಯದ ಮಂತ್ರಿಯಾದ, ಮಹಾಪ್ರಪಂಚ ತಲೆ ಇವನದು. ಖಟ್ಲೆ, ಕಾನೂನೆಲ್ಲ ಅರಿದು ನುಂಗಿದವ. ಅವನಿಗೆ ಬರದ ಕೆಲಸವಿಲ್ಲ. ಬರದ ಭಾಷೆ ಇಲ್ಲ, ನಮ್ಮ ಚಿಕ್ಕಮಗಳೂರು ತಲೆ ಕೆಳಗ ಮಾಡಿದವ. ಇವನೇ ಯಕ್ಷಗಾನದಲ್ಲಿ ವೇಷ ಕಟ್ತಾನೆ, ಪ್ರಸಂಗ ಕೂಗ್ತಾನೆ. ಮತ್ತೊಂದು ಗಳಿಗೇಲಿ ನನ್ನ ಅಜ್ಜಿ ಆಗ್ತಾನೆ...."

---

1. ಸದಾನಂದ ಪುಟ 114
2. " 159
3. " 232-233

ಮಂಗಳೂರು ಆಡುನುಡಿ ಸುಲಲಿತವಾಗಿ ಹರಿದ. ಮಂಗಳೂರು ಆಡುನುಡಿ ಬೇರೆ ಬೇರೆ ಉಪಭಾಷೆಗಳನ್ನು ಇಂದಿರಾ ಅವರು ಸಮಯೋಚಿತವಾಗಿ ಪಾತ್ರಗಳ ಮೂಲಕ ಪರಿಚಿಯಿಸುತ್ತಾರೆ.

ಕೆಲವರ್ಗದ ಜನರ ಭಾಷೆಗೆ ಉದಾಹರಣೆಯನ್ನು ನೋಡಬಹುದು ಸದಾನಂದ ಪೆದ್ದ 'ಬಾಗೂರ'ನೊಡನೆ ನಡೆಸುತ್ತ.

ಸದಾ "ನಿನ್ನ ಲಗ್ನ ಆಗಿ ಎಷ್ಟ್ ದಿನ ಆತೊ ?"

ಬಾಗೂರ : "ಹ್ಹಿ, ಹ್ಹಿ ನೆಪ್ಪಿಲ ಅಯ್ಯ"

ಸದಾ "ಬೆಪ್ ಸೂಳೆ ಮಗನೇ ಒಂದ್ವರ್ಷ ನಾಕ್ತಿಂಗ್ಳು ಆಗಲಿಲ್ಲವೇನೋ" ಎಂದಾಗ—

ಬಾಗೂರ : "ತಮಗ್ಗೊತ್ತುಂಟಯ್ಯ"[1]

— ಹೀಗೆ ಇಂದಿರಾ ಆಯಾ ಮಲೆನಾಡಿನ ಬೇರೆ ಬೇರೆ ವರ್ಗದ ಜನರ ಭಾಷೆಯನ್ನು ಸನ್ನಿವೇಶಕ್ಕೆ ತಕ್ಕಂತೆ ಬಳಸಿ ಕಲಾವಂತಿಕೆಯನ್ನು ಮೆರದಿದ್ದಾರೆ.

ಕಾದಂಬರಿಕಾರ್ತಿ ಇಂದಿರಾ ಅವರು ಮಲೆನಾಡಿನ ಗ್ರಾಮ್ಯಭಾಷೆಯ ಆಡು ನುಡಿಯ ಕಲಾತ್ಮಕ ಉಪಯೋಗದಿಂದ ಪ್ರಾದೇಶಿಕತೆಯ ಪರಿಚಯವಾಗುವದರ ಜೊತೆಗೆ ಸಹಜತೆಯಿಂದ ಮನಸೆಳೆಯುತ್ತವೆ.

ತುಂಗಭದ್ರ ಕಾದಂಬರಿಯಲ್ಲಿ ತನಗೀಗಲೆ ಮದುವೆ ಬೇಡವೆಂದು ತನ್ನ ಅತ್ತೆ (ಮೂಕತ್ತೆ)ಯ ಮುಂದೆ ರಗಳೆ ಮಾಡಿದಾಗ ಮೂಕತ್ತೆ ಖಡಾಖಂಡಿತವಾಗಿ — "ನಾಚಿಕ್ಕೇಡು ಹೋಗಾ, ಯಾರಾರ ನಕ್ಕಾರು. ದುಗ್ಗಣ್ಣಯ್ಯ ಸುಮ್ನಿದ್ದಾನಾ. ನಿನ್ನ ಐಲಾಟ ಕಂಡ್ರೆ ? ಮದ್ವೆ ಮಾಡ್ಕಂಡು ಕಾಲೇಜ್ಗಾರ ಹೋಗು, ಗೀಲೆಜ್ಗಾರ ಹೋಗು ನಿನ್ನ ಯಾರ್ಬೇಂದಾರು ?"[2] ಎನ್ನುತ್ತಾಳೆ. ಮೂಕತ್ತೆಯ ಸಂಸ್ಕೃತಿ ಅವಳ ಮಾತಿನಲ್ಲಿ ವ್ಯಕ್ತವಾಗುತ್ತದೆಯೋ ಅಲ್ಲಿ ವಾತ್ಸಲ್ಯ ಭಾವವೂ ಇದೆ.

ಮುದ್ದುರಾಮನ ಮದುವೆಯಾದಾಗ ಗೋದುಬಾಯಿಗೆ ರಾಘುವಿಗೊಂದು ಬೇಗನೆ ಮದುವೆ ಮಾಡಬೇಕೆಂಬ ಬಯಕೆ. ಸಿಡುಕು ಸ್ವಭಾವದ ತನ್ನ ಅಣ್ಣನಿಗೆ ಆಗಾಗ... "ಅಪ್ಪಣ್ಣ ರಾಘೂಗೆ ಆಗ್ಲೆ ಇಪ್ಪತ್ಮೂರು ವರುಷಾತು ಮದವೀ ಮಾಡಬ್ಯಾಡ ಏನೋ ? ಓದಿದ್ದಾತು ಕೆಲಸಾತು, ಎಲ್ಲಾರ ಒಳ್ಳೆ ಸಂಬಂಧ ನೋಡಬೇಕಪ್ಪಾ ಕಮಲಾಬಾಯಿ ಹೋಗಿ ಹನ್ನೆರೊಡರಷಾತು. ಮನೀಗೆ ಮುತ್ತೈದೇರು ಬಂದ್ರೆ ಕುಂಕುಮದ ಬಟ್ಲ್ ಕೊಡೋರಿಲ್ಲಪ್ಪ ನಾನೊಬ್ಬಳು ಮುದಿ ಮುಂಡೆ ಎಷ್ಟ್ ಕಾಲ

1. 'ಸದಾನಂದ' ಪುಟ–238.
2. 'ತುಂಗಭದ್ರ' ಪುಟ–40

ಹಾಕೋದಪ್ಪ ? ಅವನಿಗೊಂದು ಮದವೀ ಆದ್ರೆ ಮುಗೀತ ನೋಡು, ನಾನು ರಾಮ ಕೃಷ್ಣಾಂತ ಕಾಲ ಕಳದೇನು ?"[1]

ಇಲ್ಲಿ ರಾಘುವಿನ ಮದುವೆ ಬಗೆಗೆ ಆಕೆಗಿರುವ ಚಿಂತೆ ಅದನ್ನು ತನ್ನ ಅಣ್ಣನಿಗೆ ತಿಳಿಸುವಲ್ಲಿ ಅವಳ ದೈನ್ಯತೆ ಮನಮುಟ್ಟುವಂತೆ ನಿರೂಪಿತವಾಗಿದೆ. ತನ್ನನ್ನು ತಾನೇ 'ಮುದಿಮುಂಡೆ' ಮನೆಗೆ 'ಕುಂಕುಮದ ಬಟ್ಲ ಕೊಡಲು' ಮುತ್ತೈದೆ ಬೇಕು ಎನ್ನುವ ಅವಳ ಸಂಸ್ಕೃತಿ ಅತ್ಯಂತ ಮಾರ್ಮಿಕವಾಗಿದೆ.

'ಸದಾನಂದ' ಕಾದಂಬರಿಯಲ್ಲಿ ಮೂರ್ತಿ ತನ್ನ ಅತ್ತೆಯ ಮಗಳು ಗೌರಿಯನ್ನು ಬಿಟ್ಟು ಬೆಂಗಳೂರಿನ ಮುಕ್ತಾಳನ್ನು ಮದುವೆಯಾಗಲು, ನಿರ್ಧರಿಸುವನೆಂಬ ಸುದ್ದಿ ತಿಳಿದಾಗ ಯಂಟತ್ತೆ[2] 'ಜಾತ್ಕ-ಪಾತ್ಕ ಒಂದೂ ನೋಡೋ ತಂಟಿಲ್ವೆನೋ ರಾಮು' 'ಇದು ಯಾವ್ನಿಮೇ ಮದ್ವೆನೋ' ಸಂಪ್ರದಾಯಶೀಲ ಹಿರಿಯ ಮಹಿಳೆಯ ಭಾವನೆಗಳು ಇಲ್ಲಿ ವ್ಯಕ್ತವಾಗಿವೆ.

ಕಾದಂಬರಿಗಳಲ್ಲಿ ಶ್ರೀಮತಿ ಎಂ. ಕೆ. ಇಂದಿರಾ ಅವರ ಆಡುನುಡಿಯಲ್ಲಿ ನಡು-ನಡುವೆ ಗಾದೆಮಾತು-ಪಡೆನುಡಿಗಳನ್ನು ಹೇರಳವಾಗಿ ಬಳಸುತ್ತಾರೆ.

ತುಂಗಭದ್ರ ಕೃಷ್ಣಮಣಿ ತನ್ನ ಗಂಡ ಮುದ್ದರಾಮ ಕೂದಲು ಬೆಳೆಸಿರುವದನ್ನು ನೋಡುತ್ತ—

'ಯಂತದಿದು ಜಟೆ ಕಟ್ಟತೀರಾ ಹ್ಯಾಂಗೇಂತಿನಿ ಯಾಕೀ ಪಾಟಿ ಕೂದ್ಲ ಬೆಳಸಿರಾದು' ಎಂದಾಗ ಮುದ್ದುರಾಮ ಹೆಂಡತಿಯನ್ನು ಛೇಡಿಸಿ 'ಏ ಹೋಗೆ ಅತ್ಲಾಗೆ' ಹೆಂಗಸರಿಗ್ಯಾಕೆ ಗಂಡ್ಸನ ದುಕ್ಕಾಂತ'[3] ಎನ್ನುತ್ತಾನೆ.

"ದನತಿನೋರ್ಗೆ ಗೊಬ್ಬರಾದಾಣೇಂತ" ಶಾಸ್ತ್ರ ಸಂಪ್ರದಾಯದಲ್ಲಿ ಬಿಟ್ಹೋರ್ಗೆ ಅದೆಲ್ಲ ಯಾತಕ್ಕೆ ?" (ಸದಾನಂದ ಪುಟ-೨೩)

"ಹೂವೆಂದು ಮುಟ್ಟಿದ್ದು ಹಾಗಾಗಬೇಕೆ ?" (ಅದೇ ಪುಟ-೮೪)

"ಆ ಇಂಗುಪಂಗು ಇದ್ದರೆ ಮಂಗಮಾಳಿ ಅಟ್ಟಾಳೂಂತ" (೨೨೮)

"ಕಂಡರೆ ಮಣಿ, ಉಂಡರೆ ಗೋಣಿ" (೨೩೪)

'ಕಟ್ಟದ ಕಲ್ಲು ಕಟ್ಟಕ್ಕೆ ಸೇರ್ತು' (೩೫೫)

'ಬದುಕಿದ್ರೆ ಬಾಯಬಡಕೋತಾರೆ ಕೆಟ್ರೆ ಅಂಡ್ಬಕೊತಾರೆ' (೩೫೫)

'ಮನೆದೇವರ ಮೂಟೆ ಕಟ್ಟಿ ಕೋಟೆ ದೇವರ ಜಾತ್ರೆಗೆ ಹೋದ್ರೂಂತ' (೨೮೩)

---

1. 'ತುಂಗಭದ್ರ'-ಪುಟ-49
2. 'ಸದಾನಂದ'-ಪುಟ-82
3. 'ತುಂಗಭದ್ರ'-ಪುಟ-122

'ಕುರುಡನಿಗಿಂತ ಮೆಳ್ಳ ಶ್ರೇಷ್ಠ' (ಅನುಭವಕುಂಜ ಪುಟ-೫೮)

'ಹಣ್ಣು ಹಂಚಿ ತಿನ್ನು, ಹೂವ್ನ ತೊಟ್ಟು ಮುಡೀಂತ ಗಾದೆ' (ತಗ್ಗಿನಮನೆ ಸೀತೆ ೧೬)

'ಕೊಟ್ಟ ಹೆಣ್ಣು ಕುಲಕ್ಕೆ ಹೊರಗ' (೧೩೮)

'ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲ ಅಂತ' (ಜಾತಿ ಕೆಟ್ಟವಳು ಪುಟ-೪೧)

'ನೊಣ ತಿಂದು ವ್ರತ ಕೆಡಿಸ್ಗಂಡ್ರು' (ಅದೇ)

'ಸಾಯೂ ಕಡೇ ಕಾಲಕ್ಕ ಮಾಳಕ್ಕ ಮೀನು ತಿಂದು ಸತ್ಲೂಂತ' (ಫಣಿಯಂಮ್ಮ)

'ಬಾವಿ ಆಳ ಇಳದ್ನೋಡು, ಮನುಷ್ಯನ ಗುಣ ಇದ್ದು ನೋಡುಂತ' (ಗೆಜ್ಜೆಪೂಜೆ ಪುಟ-೩೦)

'ಹದ ತಪ್ಪಿಕುಟ್ಟಿದರೆ ನುಚ್ಚಲ್ಲದೆ ಅಕ್ಕಿಯಲ್ಲಿ (ನೀತಿಮಾತು)' (ಹೂಬಾಣ ೩)

'ಹುಚ್ಚು ಬಿಟ್ಟ ಹೊರತು ಮದಿವ್ಯಾಗುಲ್ಲ, ಮದಿವ್ಯಾದ ಹೊರತು ಹುಚ್ಚು ಬಿಡಲ್ಲ' (ರೂಢಿಮಾತು) (ಹೂ ಬಾಣ ೮೬)

'ಕ್ವಾಣನ ಮುಂದೆ ಕಿಂದ್ರಿ ಬಾರಿಸಿದಾಂಗೆ' (ರೂಢಿಮಾತು) (ಅದೇ ೧೧೮)

'ಕೂಸು ಹುಟ್ಟಲಿಕ್ಕೆ ಮಂಚಿ ಕುಲಾವಿ ಹೊಲಿಸಿಟ್ಟಂತೆ' (ಮಾಧವನ ಪುಟ-೬೦)

'ಹಲವು ದೇವರನ್ನು ನಂಬಿ ಹಾರುವಯ್ಯ ಕೆಟ್ಟ' (ಗುಂಡ ಪುಟ-೧)

'ಹತ್ತು ಕಟ್ಟೊ ಅಲ್ಲಿ ಒಂದು ಮುತ್ತು ಕಟ್ಟು' (ಅದೇ ಪುಟ-೧೫)

"ಒಳ್ಳೆಯ ಕೆಲಸಕ್ಕೆ ದಾರಿ ಸುಗಮ" (ಅದೇ ಪುಟ-೨೧)

"ಅನಾಥೋದೇವ ರಕ್ಷಣ್ಯ"

"ಛತ್ರದ ಊಟ ಚಾವಡಿ ನಿದ್ದೆ" (ಅದೇ ಪುಟ-೧೦೨)

"ತಾಳಿದವರು ಬಾಳಿಯಾರು" (ತಾಳಿದವರು ಪುಟ-೫೧)

"ಗೋವಿನ ಹೊಟ್ಟೆಯಲ್ಲಿ ನಾಯಿ ಹುಟ್ಟಿದಂತೆ" (ಅದೇ ಪುಟ-೬೩)

"ಮೌನಂ-ಕಲಹಂ-ನಾಸ್ತಿ" (ಅದೇ ಪುಟ-೮೯)

"ಹಾಗಲ ಕಾಯಿಗೆ ಬೇವಿನ ಕಾಯಿ ಸಾಕ್ಷಿಯಂತೆ" (ಗುಂಡ ಪುಟ-೧೧೩)

"ಹೇಳದೆ ಹೋಗೋ ಪರಮಾತ್ಮ" (ಅದೇ ಪುಟ-೬೩)

"ವಿದ್ಯಾಹೀನ ಪಶು" (ಅದೇ ಪುಟ-೧೬)

"ಹಾವು ಹೊಡೆದು ಹದ್ದಿಗೆ ಎಸೆಯುವ ಕೆಲಸ" (ಸದಾನಂದ ಪುಟ-೨೪೯)

"ಆಚಾರ ಹೇಳಲಿಕೆ ಬದನೇಕಾಯಿ ತಿಂಬಲೀಕೆ" (ಅನುಭವ ಕುಂಜ ಪುಟ-೪೧)

"ಆಳು ನೋಡಿದರೆ ಆಕಾರ ಬಾಳುನೋಡಿದರೆ ಬಡಕೊಂಡ್ರು"

(ಅದೇ ಪುಟ-೭೦)

"ಸರಿಮನೆಯುವಳು ಸರಿಗೆ ಹಾಕಿಕೊಂಡ ಮೇಲೆ ನೆರೆಮನೆಯುವಳು ನೇಣನ್ನಾದರೂ ಹಾಕಿಕೊಳ್ಳಲೇ ಬೇಕಂತೆ" (ಅದೇ ಪುಟ-೮೪)

"ಕೊಂಕಣಿಗರ ಎಮ್ಮೆಗೆ ಕೊಡತಿಯಪೆಟ್ಟು" (ಅದೇ ಪುಟ-೧೨೦)

"ಇಂದಿರಾ ಅವರು ಅನುಭವದ ಮಾತುಗಳನ್ನು ರೂಢಿ ಮಾತುಗಳನ್ನೂ ಗಾದೆ ಮಾತುಗಳನ್ನು ಹೇರಳವಾಗಿ ಬಳಸಿರುವುದರಿಂದ ಅವರ ಕಾದಂಬರಿಯ ಗದ್ಯ ಭಾಷೆ ಅತ್ಯಂತ ಶಕ್ತಿ ಸಂಪನ್ನವಾಗಿ ಓದುಗರ ಹೃದಯವನ್ನು ಸೆರೆಹಿಡಿಯುತ್ತದೆ.

"ಅಪಾಟಿ, ಇಪ್ರೀತ, ಉಭಶುಭ, ಶೀಂಗಳೀಕ, ಬಯೋಸ್ಕೋಸ ಸೋಬಲೆ, ಲೊಂಗೂಲೊಸಕು, ಗುಂಡಗೋವಿ, ಕಕಮುಕ ಭರಭರ ಹ್ಯಾಪಮುಖ, ಇಲುಪ್ಪೈಲು, ಐದು ದೋಣಿನಾಯಕ ಭಿಮ್ಗೆ, ಭದ್ದಗು (ಹ್ಯಂಗೂ ನಿಜ) ಬದಗ (ಕತ್ತೆಚಾಕರಿ, ವ್ಯರ್ಥ, ದುಡಿತ, ಸುಪನಾತಿ, ಮಂಗ್-ಮಲಕು, ದಿಂಡೆತನ."[1] ಈ ಮೊದಲಾದ ಗ್ರಾಮ್ಯಪದಗಳು ಇಂದಿರಾ ಅವರ ಕಾದಂಬರಿಗಳಲ್ಲಿ ಅಸಂಖ್ಯಾತವಾಗಿವೆ. ಅಲ್ಲದೆ ಅವುಗಳನ್ನು ಅವರು ಮೇಲಿಂದ ಮೇಲೆ ಉಪಯೋಗಿಸುತ್ತಾರೆ. ಇಂದಿರಾ ಅವರಿಗೆ ಇವು ಅತ್ಯಂತ ಪ್ರಿಯವಾದ ಪದಗಳು.

ರಂಡೆ, ಕುಂದೇ, ಹುಚ್ಚಗೈನೆ, ಮುಂಡೆದೇ ಹುಚ್ಮುಂಡೆ, ಮುಂಡೇಗಂಡ, ಮಂಗ ರಂಡಿ ಇತ್ಯಾದಿ ಬೈಗುಳಗಳನ್ನು (ಹೆಚ್ಚಾಗಿ ಸ್ತ್ರೀ ಪಾತ್ರ) ಸಂದರ್ಭಕ್ಕೆ ಅನುಗುಣವಾಗಿ ಆಯಾ ಪಾತ್ರಗಳ ಮುಖಾಂತರ ಆಡಿಸುತ್ತಾರೆ.

ಮಲಮಗಳನ್ನು ಏನಾದರೂ ನೆಪಮಾಡಿ ಹೊಡದಾಗ ಸೀತೆಯ ಅಜ್ಜಿ ತನ್ನ ಸೊಸೆ ಮೋಟಿಯನ್ನು ತರಾಟೆಗೆ ತೆಗೆದುಕೊಂಡು—

"ಯಾಕೇ ಮೋಟಿ, ಆ ಪಾಟಿ (ಅಷ್ಟು) ಹೊಡೆದಿದ್ದಿ ಮಗನ್ನ ? ತಬ್ಬಲಿ ಮುಂಡೇದು, ಅ‌ಂಥಾ ಚಂದಾಗಿ ಕೆಲ್ಸ ಮಾಡತ್ತೆ ಅದರ ಅಮ್ಮ ಸತ್ತೋದ್ಲು ಬದ್ಧ (ನಿಜ) ನಾನು ಮಾಬಲ ಬದ್ಕಿದೀವಿ ಇನ್ನೂ, ಇನ್ನಾಕ್ದಿನ ಸೈ ಅಮ್ಯಾಲೆ ಅದರ ಮನೀಗೆ ಹೋಗತ್ತೆ ಅದು. ತಿಳೀದೆ ಯಂತದಾರ ತಪ್ಮಾಡಿದ್ರೆ ಹೇಳ್ಬಕು. ಆ ಬೆಳ್ಳನೆ ತ್ವಡಿ ನೀಲಿಗಟ್ಟೋ ಹಂಗೆ ಹೊಡಿಯೂದನೆ ನಿನ್ನ ಮಕ್ಳಿಗೆ ಹ್ವಡಿ ನೋಡಾಣ,

---

1. 'ಮಂಗ್'-ಮಲಕು; 'ಸುಪ್ನಾತೀಳ', ಎಂಬ ಪದಗಳನ್ನು ಎಂ. ಎಸ್. ಪುಟ್ಟಣ್ಣನವರ ನಂತರ, ಎಂ. ಕೆ. ಇಂದಿರಾ ಅವರೇ ಬಳಸಿದರೆಂದು, ಪುಟ್ಟಣ್ಣನವರ ಬಗೆಗೆ ಸಂಶೋಧನೆ ಮಾಡಿದ ಡಾ॥ ಎಚ್. ಎಸ್. ಸುಜಾತಾ ಅವರು ಇಂದಿರಾ ಅವರಿಗೆ ದಿನಾಂಕ 8-3-1977 ರಂದು ಬರೆದ ಪತ್ರದಲ್ಲಿ ಅಭಿಪ್ರಾಯ ಪಟ್ಟಿದ್ದಾರೆ.

ಕಂಡ್ಕನಾ ಮಾಬಲಾ ? ಈ ತಾಟ್ಕಿ ಕೆಲ್ಸಾನ... ಸೈ ನಿನ್ನತ್ರ ಹೇಳೂದು ಒಂದೇ ಆ ಹಲಸಿನಮರದ ಹತ್ರ ಹೇಳೂದು ಒಂದೆ."[1]

ಮೋಟಮ್ಮ ತನ್ನ ಅತ್ತೆಯ ಮೇಲಿನ ಸಿಟ್ಟಿನಿಂದ ತನ್ನ ಮಕ್ಕಳನ್ನು ಹೊಡೆದು ಗಂಡನ ಮೇಲೆ ಹರಿಹಾಯುತ್ತ

"ಈಗ್ಲಾರ ತೃಪ್ತಿಯಾತ ನಿಮ್ಗೆ ? ಈ ಕುರ್ದೆ (ಹೊಲಸು ಹುಡುಗಿ) ದಿಂಡೆತನ ಯಾರ್ಕಣ್ಗೂ ಕಾಣೂದಿಲ್ಲ. ನಾ ಹೊಡದ್ದು ಊರು ಹೊಲಗೇರಿಗೆ ಗೊತ್ತಾಗುತ್ತೆ ಅಜ್ಜಿ ಗುಣ ಪೂರಾ ಹೊತ್ಗಂಡದೆ ಕತ್ತೆಗೈಸೆ".[2]

ಇಲ್ಲೆಲ್ಲ ಗ್ರಾಮ್ಯ ಭಾಷೆ ಬೈಗುಳ, ಮೊಮ್ಮಗಳ ಮೇಲಿನ ವಾತ್ಸಲ್ಯ, ಮೋಟಿಗೆ ಮಲಮಗಳ ಮೇಲಿನ ಅಸಮಾಧಾನ ಅತ್ಯಂತ ಸಹಜವಾಗಿವೆ.

ಇಂದಿರಾ ಅವರ ಸೂಕ್ಷ್ಮ ನಿರೀಕ್ಷಣಾ ದೃಷ್ಟಿಗೆ ಒಂದೆರಡು ಉದಾಹರಣೆ ಕೊಡಬಹುದು.

ಗೌರಿಯ ಬೆಳವಣಿಗೆಯನ್ನು ವರ್ಣಿಸುತ್ತ—

"ಗೌರಿಯ ಮುಂದಿನ ಸಸಿಯಂತೆ ಮಣ್ಣು ಸೀಳಿ ಒಮ್ಮೆಲೆ ಎತ್ತರ ಬೆಳೆದಿದ್ದು (ಒಂದು ಹಿತ್ತಾಳೆಯ ಪಾತ್ರೆಯಲ್ಲಿ ಮಣ್ಣು, ನೀರು ಹಾಕಿ ಗೋದಿ ಹೆಸರು ಮೊದಲಾದ ಕಾಳುಗಳನ್ನು ಸಸಿಗಳನ್ನು ಬೆಳೆಸಿ ಚೈತ್ರಮಾಸದಲ್ಲಿ ಗೌರಿಯ ಮುಂದೆ ಇಡುತ್ತಾರೆ.) (ಸದಾನಂದ ಪುಟ–೫೦)

ಕತ್ತಲೆ ಕೋಣೆಯಲ್ಲಿ ನಾಲ್ಕು ವರ್ಷಗಳನ್ನು ಕಳೆದ ಹದಿನಾಲ್ಕು ವರ್ಷದ ಫಣಿಯಮ್ಮ "ಕೇದಗೆ ವರ್ಣದಲ್ಲಿ ಸೊಂಪಾಗಿ ಬೆಳೆದಿದ್ದಳು." (ಪುಟ–೪೫)

ಹೀಗೆ ಇಂದಿರಾ ಅವರ ಸೂಕ್ಷ್ಮ ನಿರೀಕ್ಷಣಾ ದೃಷ್ಟಿಯನ್ನು ಕಾಣಬಹುದು. ವರ್ಣನೆಗಳು ಭಾವಪೂರ್ಣವಾಗಿವೆ.

'ಇಂದಿರಾ ಅವರದು ಪಾರದರ್ಶಕ ಶೈಲಿ'[3]... ಸಂಭಾಷಣ ಶೈಲಿಯ ಸೊಸು, ಪಾತ್ರಗಳ ಪರಿಸರಕ್ಕೆ ತಕ್ಕುದಾದ ಆಡುನುಡಿಯನ್ನು ಬಳಸಿ ಇಂದಿರಾ ಅವರು ಸಾಹಿತ್ಯದ ದೃಷ್ಟಿಯಿಂದ ವಿಶಿಷ್ಟಸ್ಥಾನ ಗಳಿಸಿದ್ದಾರೆ. ಅದೆಂದರೆ ವಾತಾವರಣದ ನಿರ್ಮಾಣ, ಆ ವಾತಾವರಣದ ನಿರ್ಮಾಣಕ್ಕಾಗಿ ಶ್ರೀಮತಿಯವರು ಚಿತ್ರಿಸಿದ ಘಟನೆಗಳು ಕೂಡ ಅತ್ಯಂತ ಸಹಜವೆನ್ನಿಸುವವು,[4] ಎಂದು ಶ್ರೀರಂಗರು ಇಂದಿರಾ

1. 'ತಗ್ಗಿನ ಮನೆ ಸೀತೆ' ಪುಟ–78
2. 'ತಗ್ಗಿನ ಮನೆ ಸೀತೆ' ಪುಟ–79
3. ನಿಸ್ಸಾರ್ ಅಹಮ್ಮದ್ 7–10–84 ರಂದು 'ಸೂತ್ರಧಾರಿ' ಕಾದಂಬರಿಯ ಬಿಡುಗಡೆ ಸಮಾರಂಭದಲ್ಲಿ ಮಾತನಾಡುತ್ತ ಹೇಳಿದರು.
4. 'ಪ್ರಜಾವಾಣಿ' 17–10–1965. ಪುಟ–10.

ಅವರ್ ಶೈಲಿಯನ್ನು ಕುರಿತು ಹೇಳಿದ ಮಾತುಗಳು ಅವರ ಸಾಹಿತ್ಯಿಕ ಯಶಸ್ಸಿನ ಗುಟ್ಟನ್ನೇ ಬಚ್ಚಿಡುತ್ತವೆ.

ಇಂದಿರಾ ಅವರ ಕಥನ ಕೌಶಲ್ಯದಿಂದ ಪಾತ್ರ ಪರಿಪೋಷಣೆಯಿಂದ ರಂಜಕ ಹಾಗೂ ಕುತೂಹಲಕಾರಿ ಸನ್ನಿವೇಶಗಳಿಂದ ಮೃದು ಭಾವನೆಗಳನ್ನು ತಟ್ಟೆಬ್ಬಿಸುವ ನಯವಾಗಿ ಭಾಷೆಯ ಬಳಕೆಯಿಂದ ಗ್ರಾಮ್ಯ ಅಲಂಕಾರಿಕ ಶೈಲಿಯಿಂದ ಓದುಗರ ಮನಸ್ಸನ್ನು ಆಕರ್ಷಿಸುತ್ತದೆ.[1]

ಮುಗ್ಧ ಸರಳ, ನಿರಾಡಂಬರ, ಆತ್ಮೀಯ ಶೈಲಿಯಿಂದ ಅವರು ಅಪಾರ ಜನ ಪ್ರಿಯತೆಯನ್ನು ಗಳಿಸಿದ್ದಾರೆ,

---

1. ಶಕುಂತಲಾ ಸಿದ್ದರಾಮು ದುರಗಿ 'ಆಧುನಿಕ ಕನ್ನಡದಲ್ಲಿ ಮಹಿಳಾ ಸಾಹಿತ್ಯ' ಪುಟ–195 (ಅಪ್ರಕಟಿತ) 1982

ಅಧ್ಯಾಯ - ಎಂಟು

ಎಂ. ಕೆ. ಇಂದಿರಾ ಅವರ ಜೀವನ ದೃಷ್ಟಿ

"ಒಂದು ಕಾದಂಬರಿ ಕಾದಂಬರಿಕಾರನ ಜೀವನದರ್ಶನದ ನಿರೂಪಣೆ ಕಾವಂಬರಿಕಾರ ಜೀವನದರ್ಶನವನ್ನು ಕಾದಂಬರಿಯ ಮೂಲಕ ನಿರೂಪಿಸಲು ಪ್ರಯತ್ನಿಸುತ್ತಾನೆ. ಜೀವನವನ್ನು ಒಬ್ಬೊಬ್ಬ ಕಾದಂಬರಿಕಾರ ಒಂದೊಂದು ರೀತಿಯಲ್ಲಿ ಕಾಣುತ್ತಾನೆ. ಆದರೆ ಜೀವನ ದರ್ಶನವನ್ನು ತನ್ನ ಪಾತ್ರಗಳು ಅವುಗಳ ಮೂಲಕ ಚಿತ್ರಿಸುತ್ತಾನೆ.[1]

ಒಟ್ಟಿನಲ್ಲಿ ಕಾದಂಬರಿಕಾರಿ ತಾನು ಜೀವನದಲ್ಲಿ ಕಂಡುಂಡ ಅನುಭವವನ್ನು, ಕಂಡ ಸತ್ಯವನ್ನು ತನ್ನ ಜೀವನ ದರ್ಶನವನ್ನು ತನ್ನ ಕಾದಂಬರಿಗಳಲ್ಲಿ ಸೂಚ್ಯವಾಗಿ ನಿರೂಪಿಸುತ್ತಾನೆ. ಕಾದಂಬರಿಕಾರನ ಜೀವನದೃಷ್ಟಿ, ಅದನ್ನು ಆಯ್ದುಕೊಳ್ಳುವ ವಸ್ತು, ಅವನ ಧೋರಣೆ, ಪಾತ್ರ ಸೃಷ್ಟಿ ಮೊದಲಾದವುಗಳು ಇಲ್ಲಿ ವ್ಯಕ್ತವಾಗಿರುತ್ತದೆ. ಚಿಂತನಶೀಲ ಲೇಖಕರು ಬದುಕನ್ನು ಕುರಿತು ಆಳವಾಗಿ ವಿಚಾರಮಾಡಿರುತ್ತಾರೆ. ಸುತ್ತಲಿನ ಸಮಾಜಕ್ಕೆ, ಪರರ ಕಷ್ಟ ಸುಖಗಳಿಗೆ ಸ್ಪಂದಿಸುತ್ತಾರೆ. ಸಮಾಜವನ್ನು ತಿದ್ದುವುದಕ್ಕಾಗಿಯೇ ಅವರು ಕಾದಂಬರಿಗಳನ್ನು ಬರೆಯದಿದ್ದರೂ ಬದುಕಿನ ಬಗ್ಗೆ ಅವರ ಕಾಳಜಿ ಅನುಕಂಪದೃಷ್ಟಿ, ಉದಾರ ಹೃದಯ, ಸಮಾಜ ಬದಲಾವಣೆಗಾಗಿ ಅವರ ತುಡಿತ ಕಾದಂಬರಿಯಲ್ಲಿ ಕಲಾತ್ಮಕವಾಗಿ ಮೂಡಿರುತ್ತದೆ. ಒಟ್ಟಿನಲ್ಲಿ ಹೇಳುವುದಾದರೆ ಪ್ರತಿಭಾವಂತ ಮಾನವೀಯ ಹೃದಯದ ಚಿಂತನಶೀಲ ಲೇಖಕರ ಕಾದಂಬರಿಗಳು (ಸಾಹಿತ್ಯ ಕೃತಿಗಳು) ಕಾದಂಬರಿಗಳನ್ನು ಓದಿದ ಮೇಲೆ ಗಹನ ಪರಿಣಾಮವನ್ನು ಬೀರಿ ಓದುಗರ ಜೀವನ ದೃಷ್ಟಿಯನ್ನು ವಿಶಾಲ ಗೊಳಿಸುತ್ತವೆ.

"ಓದುಗನ ಸಹಾನುಭೂತಿಯನ್ನು ಶಕ್ತಗೊಳಿಸುವ ಅದಕ್ಕೆ ಮಾರ್ಗದರ್ಶನ ಮಾಡುವ ಸಾಧನೆ ಕಾದಂಬರಿಕಾರನಿಗೆ ಸಾಧ್ಯವಾಗುವುದು. ಅವನಿಗೆ ಪ್ರಕೃದತ್ತವಾದ ದೃಷ್ಟಿಯಿಂದ ಇತರರ ಕಣ್ಣು ಕಾಣದುದನ್ನು ಅವನ ಕಣ್ಣು ಕಾಣುತ್ತದೆ. ಮನುಷ್ಯ ಹೃದಯವನ್ನು ಒಳಹೊಕ್ಕು ಅದನ್ನು ಅರ್ಥಮಾಡಿಕೊಳ್ಳುವ ಶಕ್ತಿ ಅವನಿಗಿದೆ. ತಾನು ಕಂಡ ಸತ್ಯವನ್ನು ಪರಿಣಾಮಕಾರಿಯಾಗಿ ನಿರೂಪಿಸುವ ಶಕ್ತಿ ಅವನಿಗಿದೆ.[2]

---

1. ಶ್ರೀ. ಎಲ್. ಎಸ್. ಶೇಷಗಿರಿರಾವ್ ; 'ಕಾದಂಬರಿ ಮತ್ತು ಸಾಮಾನ್ಯ ಮನುಷ್ಯ' (ಪ್ರಥಮ ಮುದ್ರಣ—1957), ಪುಟ–97.
2. ಅದೇ ; ಪುಟ–141–142.

ಎಂ. ಕೆ. ಇಂದಿರಾ ಅವರು ಬರೆದಿರುವ ಕಾದಂಬರಿಗಳೆಲ್ಲ ಸಾಮಾಜಿಕ ಸಮಸ್ಯೆಗಳನ್ನು ಸಾಮಾಜಿಕ ಕೌಟುಂಬಿಕ ಕಥಾವಸ್ತುಗಳನ್ನೊಳಗೊಂಡಿದ್ದು ಆಗಿರುವುದು. ಇದು ಇಂದಿರಾ ಅವರ ಮನೋಧರ್ಮವನ್ನೇ ಸೂಚಿಸುತ್ತದೆ.

"ಜಗತ್ತನ್ನು ತಿದ್ದುವ ಸಾಹಸ ಯಾರದೂ ಅಲ್ಲ. ಆದರೂ ಸಮಾಜದ, ರಾಷ್ಟ್ರದ ಈ ಸಂದಿಗ್ಧ ಸಂಕಷ್ಟ ಸಮಯದಲ್ಲಿ ಇಂದಿನ ಮುಂದಿನ ಹೊಸ ಪೀಳಿಗೆಯ ಪ್ರಜಾ ಕೋಟಿಯ ಒಳಿತಿಗಾಗಿ ಉತ್ಕರ್ಷಕ್ಕಾಗಿ ಉತ್ತಮ ಸಾಹಿತ್ಯವನ್ನು ರಚಿಸಬೇಕಾದುದು ಪ್ರತಿಯೊಬ್ಬ ಸಾಹಿತಿಯ ಆದ್ಯ ಕರ್ತವ್ಯವಾಗಿದೆ. 'ಅಳಿಲು ಭಕ್ತಿಗೆ ಮಳಲ ಸೇವೆ' ಈ ಮಾರ್ಗದಲ್ಲಿ ಕಡೆಯುಸಿರಿರುವ ತನಕವೂ ಶ್ರಮಿಸುವ ಸಂಕಲ್ಪ"[1] ತಮಗಿದೆಯೆಂದು ಇಂದಿರಾ ಅವರು ಸಾಹಿತ್ಯ ಕ್ಷೇತ್ರದ ತಮ್ಮ ಸತ್‌ಸಂಕಲ್ಪವನ್ನು ಇಟ್ಟುಕೊಂಡಿದ್ದಾರೆ. ಸಮಾಜದ ಒಳಿತಿಗಾಗಿ ಉತ್ತಮ ಸಾಹಿತ್ಯವನ್ನು ಬರೆಯುವುದು ತಮ್ಮ ಕರ್ತವ್ಯವೆಂದು ನಂಬಿಕೊಂಡಿದ್ದಾರೆ.

ಮಲೆನಾಡಿನ ನಿಸರ್ಗ ರಮ್ಯ ಪರಿಸರದಲ್ಲಿ ಸುಸಂಸ್ಕೃತ ಸಂಪ್ರದಾಯ ಕುಟುಂಬದಲ್ಲಿ ಹುಟ್ಟಿ ಬೆಳೆದ ಇಂದಿರಾ ಅವರು ಇಂದಿಗೆ ಸುಮಾರು ಎಪ್ಪತ್ತು ಎಂಬತ್ತು ವರ್ಷಗಳ ಹಿಂದಿನ ಮಲೆನಾಡಿನ ಸಾಮಾಜಿಕ, ಜೀವನವನ್ನು ಅದರಲ್ಲೂ ಬ್ರಾಹ್ಮಣ ಸಮಾಜದ ಡಾಂಭಿಕತೆ, ಮೂಢನಂಬಿಕೆ, ಅಜ್ಞಾನವನ್ನು ತುಂಗಭದ್ರ, ಸದಾನಂದ, ತಗ್ಗಿನಮನೆ ಸೀತೆ, ಇನ್ನೂ ಹಲವಾರು ಕಾದಂಬರಿಗಳಲ್ಲಿ ಚಿತ್ರಿಸಿದ್ದಾರೆ.

ಬಾಲ್ಯವಿವಾಹ ಅದರಿಂದಾಗುವ ಅನರ್ಥಗಳು, ವ್ಯಕ್ತಿ ಕುಟುಂಬ, ಸಮಾಜದ ಮೇಲಾಗುವ ದುಷ್ಪರಿಣಾಮಗಳನ್ನು ಇಂದಿರಾ ಅವರು ಕಂಡಿದ್ದಾರೆ.

ಸ್ವಾತಂತ್ರ್ಯ ಪೂರ್ವದಲ್ಲಿ ಸಮಾಜದಲ್ಲಿ ಪ್ರಚಲಿತವಾಗಿದ್ದ ಬಾಲ್ಯ ವಿವಾಹ, ವೇಶ್ಯಾಪದ್ಧತಿ ಇವುಗಳನ್ನು ಖಂಡಿಸಿದ್ದಾರೆ.

೧೨ ವರ್ಷಕ್ಕೆ ಮದುವೆಯಾದ ಇಂದಿರಾ ಅವರು ಸುತ್ತಮುತ್ತಲಿನ ಬಾಲ್ಯ ವಿವಾಹವನ್ನು ಪ್ರತಿಭಟಿಸಿದ್ದಾರೆ. ಸುತ್ತುಮುತ್ತಿನ ಸಮಾಜದಲ್ಲಿ ಬದುಕಿನ ಸುಖದಿಂದ ವಂಚಿತರಾದ ಬಾಲವಿಧವೆಯರನ್ನು ಕಂಡಿದ್ದರೆ ಧರ್ಮ ಶಾಸ್ತ್ರಗಳ ಹೆಸರಿನಲ್ಲಿ ಸ್ತ್ರೀಶೋಷಣೆ ವೇಶ್ಯಾಪದ್ಧತಿ, ಅಂದಿನ ಜನರ ಅಜ್ಞಾನ, ಅವೈಚಾರಿಕತೆಯನ್ನು ಕಂಡಿದ್ದಾರೆ. ಅಲ್ಲದೆ ಕೌಟುಂಬಿಕ ಜೀವನದ ಸ್ವಾಸ್ಥ್ಯಕ್ಕೆ ಸ್ತ್ರೀ ಪುರುಷರು ಇಬ್ಬರೂ ರಥದ ಗಾಲಿಗಳಂತೆ ಎಂದು ನಂಬುತ್ತಾರೆ. ಸ್ವಾರ್ಥತ್ಯಾಗ, ಔದಾರ್ಯ, ಅನುಕಂಪ, ಈ ಮೊದಲಾದ ಮಾನವೀಯ ಮೌಲ್ಯಗಳನ್ನು ಇಂದಿರಾ ಅವರು ಜೀವನದಲ್ಲಿ ಅಳವಡಿಸಿಕೊಂಡಿದ್ದಾರೆ.

---

1. ಎಂ. ಕೆ. ಇಂದಿರಾ : 'ಕಸ್ತೂರಿ' ವಸಂತ ಸಂಚಿಕೆ ಮೇ–1966. ಪುಟ–112.

ಅವರ ಪ್ರಥಮ ಕಾದಂಬರಿ 'ತುಂಗಭದ್ರ' ತುಂಗಭದ್ರೆಯರ ಕುರುಡುತನ ಬಾಲ್ಯವಿವಾಹ ಕಡ್ಡಾಯವಾಗಿದ್ದ ಅಂದಿನ ಸಮಾಜಿಕ ಹಿನ್ನೆಲೆಯಲ್ಲಿ ಕುರುಡು ಸಹೋದರಿಯರಿಗಾಗಿ ಆ ಕುಟುಂಬದವರು ಮಾಡುವ ತ್ಯಾಗ, ತೋರುವ ಔದಾರ್ಯ ಅನುಕಂಪ ಇವುಗಳಲ್ಲಿ ಅವರ ಭಾವನಾ ದೃಷ್ಟಿ ವ್ಯಕ್ತವಾಗಿದೆ.

ಬದುಕಿಗೆ ಇಂದಿರಾ ಅವರು ಅಂಜುವುದಿಲ್ಲ. ಏನೇ ಬಂದರೂ ಎದುರಿಸಬೇಕು. ನೋವನ್ನು ನುಂಗಿ ನಗೆಯನ್ನು ಹಂಚಬೇಕು. ಬದುಕಿನ ಬಗೆಗೆ ಅವರಿಗೆ ಅಪಾರ ಶ್ರದ್ಧೆ. ಅದನ್ನು 'ತುಂಗಭದ್ರೆ' ಕಾದಂಬರಿಯ ಪ್ರತಿಯೊಂದು ಪಾತ್ರ ಪರಿಪೋಷಣೆ ನಾಗಭಟ್ಟ, ದುರ್ಗಾಭಟ್ಟ, ಫಣಿಯಮ್ಮ, ಮೂಕಮ್ಮ, ಕೃಷ್ಣವೇಣಿ, ಭಾಗಮ್ಮ ಈ ಎಲ್ಲ ಪಾತ್ರಗಳಲ್ಲಿಯೂ ಕಾಣಿಸಿದ್ದಾರೆ. ಅಲ್ಲದೆ ಶಾಲೆಯ ಶಿಕ್ಷಣಕ್ಕಿಂತ ಜೀವನದಿಂದ ಪಡೆದ ಶಿಕ್ಷಣವೇ ಬದುಕಿಗೆ ಅಗತ್ಯವೆಂದು ಇಂದಿರಾ ಅವರು ತಮ್ಮ ಜೀವನಾನುಭವದಿಂದ ತಿಳಿದುಕೊಂಡಿದ್ದಾರೆ. ಅವರ ಕಾದಂಬರಿಗಳ ಅಸಂಖ್ಯಾತ ಪಾತ್ರಗಳಲ್ಲಿ ಕಾಣುತ್ತಾರೆ. ತುಂಗಭದ್ರ ಕಾದಂಬರಿಯ ಕೃಷ್ಣವೇಣಿಯಲ್ಲೂ ಅದನ್ನು ನೋಡಬಹುದು. 'ತುಂಗಭದ್ರೆಯರ ಸಮಸ್ಯೆ ಬಗ್ಗೆ ಅವಳು ಹೇಳುವ ಮಾತುಗಳು ಕೃಷ್ಣವೇಣಿ ತುಂಗಭದ್ರೆಯರನ್ನು ನಾಟಕಕ್ಕೆ ಕರೆದೊಯ್ಯುತ್ತೇನೆಂದು ಹೇಳಿದಾಗ ಮುದ್ದುರಾಮ, ಕಣ್ಣಿಲ್ಲದವರು ನಾಟಕಕ್ಕೆ ಬಂದೇನು ಮಾಡುತ್ತಾರೆ ಎಂಬ ಕುಚೋದ್ಯ ಮಾಡಿದಾಗ —

"ನಿಮ್ಮ ಜಂಬಕ್ಕಷ್ಟು ಕಲಹ ಬಡೀತು, ಅವಕ್ಕೆ ಕಣ್ ಇಲ್ದಿದ್ರೆ ಕಿವಿ ಇಲ್ವಾ? ಬ್ಯಾಂಡೂ ಹಾರ್ಮಣಿ ಪದಯಲ್ಲ ಕೇಳ್ತಾ ಕೂತಿರ್‍ತಾವೆ ಮಾತಾಡದೆಲ್ಲ ಕೇಳ್ತಸ್ತಲ್ಲ ಪಾಪ, ನಾವೆಲ್ಲ ನೋಡ್ಕಂಬಂದು ಅವೆರಡನ್ನು ಬಿಟ್ಬಿಡದಾ?" ಎಂದು ಅನುಕಂಪ ತೋರುತ್ತಾಳೆ, ಅಲ್ಲದೆ ಅವರ ಮದುವೆಯ ಬಗ್ಗೆ ಮುದ್ದುರಾಮನೊಡನೆ ಮಾತಾಡುತ್ತ —

ಹ್ಯಂಗಾರ ಆಗ್ಲಿ, ಆ ಮಕ್ಕನ್ ನೀವು ಕೈ ಬಿಡಬಾರ್ದು. ತಿಳೀತಾ? ನಮ್ಮಂಗೆ ಅಲ್ವೆನು ಅವು. ಶಂಭು ನೋಡಿ. ಹಂಗಾಗದಾನೆ ಮಕ್ಳನ್ನ ಬೆಳಸೇ ಬೇಸೇ ಹಂಗೆ ಬಿಟ್ಕಂಡಿದ್ರೆ ಚಂದ್ವಾ?"

....ಸೈ ಸೈ ನಿಮಗ್ಮಾತ್ರಾ ಹೆಂಡ್ತಿ ಬೇಕು, ಅವಕ್ಕೆ ಬ್ಯಾಡ ಅಲ್ವಾ... ಎನ್ನುತ್ತಾಳೆ.

ಇಲ್ಲೆಲ್ಲ ಇಂದಿರಾ ಅವರು ಮಾನವೀಯ ದೃಷ್ಟಿ. ಬದುಕಿನ ಬಗೆಗೆ ಪ್ರೀತಿ ವ್ಯಕ್ತವಾಗುತ್ತದೆ, ಹೃದಯವೆಂಬುದು, ಆಶೆ ಆಕಾಂಕ್ಷೆ ಎಲ್ಲರಿಗೂ ಒಂದೇ ಆದ್ದರಿಂದ ಮಾನವೀಯ ದೃಷ್ಟಿಯಿಂದ ನೋಡಬೇಕು. ಅವರಿಗೂ ಹೊಸ ಬಾಳನ್ನು ಕೊಡಬೇಕಾದ ಅಗತ್ಯವನ್ನು ಇಂದಿರಾ ಅವರು ತುಂಗಭದ್ರ, 'ಹಸಿವು' (ಶಾರದೆ ದಿವಾಕರ) 'ಬಿದಿಗೆ ಚಂದ್ರಮ ಡೊಂಕು' (ವಸಂತ) ಮೊದಲಾದ ಕಾದಂಬರಿಗಳಲ್ಲಿ ವ್ಯಕ್ತಪಡಿಸಿದ್ದಾರೆ.

ಕಾಲ ಬದಲಾದಂತೆ, ಸಮಾಜ ಬದಲಾದಂತೆ ವ್ಯಕ್ತಿಯೇ ಬದಲಾಗಬೇಕು. ಎಂಬುದನ್ನು ಇಂದಿರಾ ಅವರು ತಮ್ಮ ಅನೇಕ ಕಾದಂಬರಿಗಳಲ್ಲಿ ಸಾಂಕೇತಿಕವಾಗಿ ಸೂಚಿಸಿದ್ದಾರೆ.

ಸಂಪ್ರದಾಯಸ್ಥ. ಅವಿಭಕ್ತ ಕುಟುಂಬದ ಗೃಹಸ್ಥರಾದ ರಾಮಣ್ಣನೋ ತಮ್ಮ ದಾಂಪತ್ಯ ಜೀವನದ ಹೊಸತರಲ್ಲಿ ಹಗಲು ಹೊತ್ತಿನಲ್ಲಿ ಹೆಂಡತಿಯ ಮುಖವನ್ನು ಕೂಡ ನೋಡಿದವರಲ್ಲ. ಮದುವೆಯಾಗಿ ಒಂದು ವರುಷದ ನಂತರ ಹೆಂಡತಿಯ ಮುಖ ಕಂಡವರು. ಧರ್ಮ, ಅರ್ಥಕಾಮ, ಮೋಕ್ಷ, ಈ ಪುರುಷಾರ್ಥಗಳಲ್ಲಿ ನಂಬಿಕೆಯಿಟ್ಟು ತುಂಬು ಜೀವನವನ್ನು ಬದುಕಿದವರು. ಸಂಕ್ರಮಣಾವಸ್ಥೆಯಲ್ಲಿ ಬದಲಾಗುತ್ತಿರುವ ಸಮಾಜದಲ್ಲಿ ತಮ್ಮ ಮಗ ಮೂರ್ತಿ ಬೆಂಗಳೂರಿನ ಮನೆಯಲ್ಲಿ ತಂಗಿಯ ಮಗಳನ್ನು ಬಿಟ್ಟು ತನ್ನ ಸಹಪಾಠಿಯನ್ನು ಮದುವೆಯಾಗಲು ನಿರ್ಧರಿಸಿರು ವುದನ್ನು ತಿಳಿದಾಗ ಮನಸ್ಸಿನಲ್ಲಿ ನೋವಾದರೂ ತಮ್ಮ ವಿಚಾರಗಳನ್ನು ಬದಲಿಸಿ ಕೊಂಡು "ನೋವು ನಮಗೆ ಇರಲಿ. ಬಳ್ಳಿ ನಲಿದು ಬೆಳೆಯಲಿ" ಎಂಬ ಸಿದ್ಧಾಂತಕ್ಕೆ ಬರುತ್ತಾರೆ. ತಾವೇ ನಿಂತು ಮಗಳ ಮದುವೆಯ ಸಿದ್ಧತೆ ನಡೆಸುತ್ತಾರೆ.

ಇದೇ ರೀತಿ ಬಾಲವಿಧವೆ ಕಮಲಳ ಪುನರ್‌ವಿವಾಹಕ್ಕೆ ಮೊದಲು ಅಳುಕಿದರೂ ಅವಳ ಬದುಕನ್ನು ಸುಂದರವಾಗಿಸಲು ಪರಿಪೂರ್ಣಗೊಳಿಸಲು ಒಪ್ಪಿಕೊಳ್ಳುತ್ತಾರೆ.

ಮಾನವ ಜೀವನದಲ್ಲಿ ವಿಧಿಯ ಕೈವಾಡವಿದೆಯೆಂಬುದನ್ನು ಇಂದಿರಾ ಅವರು ನಂಬಿದ್ದಾರೆ. ಅದನ್ನು ಕಾದಂಬರಿಗಳಲ್ಲಿ ಆಗಾಗ ವ್ಯಕ್ತಪಡಿಸಿದ್ದಾರೆ.

"ವಿಧವೆ ಕಮಲಳ ಮದುವೆ ಸದಾನಂದನೊಂದಿಗೆ ಕುಂಟಿ ಗೌರಿಯ ಮದುವೆ, ರಾಜುವಿನೊಂದಿಗೆ" ಹೀಗೆ ತಾವು ಅಂದುಕೊಂಡಿದ್ದೆಲ್ಲ ತಿರುವು ಮುರುವಾದಾಗ ರಾಮಣ್ಣ ನವರು ಯೋಚಿಸುತ್ತ —

"ದೈವದಾಟವೇ ಆಟ, ಹೇಗೆ ಹೇಗೆ ಸುತ್ತಿ ಈಗ ಎಲ್ಲಿಗೆ ಬಂದು ನಿಂತಿದೆ" ಎಂದುಕೊಳ್ಳುತ್ತಾರೆ. ಪುರಾಣಗಳಲ್ಲಿ ವರ್ಣಿಸಿದ ಶಂಖ, ಚಕ್ರ, ಗಧಾ, ಪದ್ಮಧಾರಿ ದೇವರ ಕಲ್ಪನೆಗಳನ್ನು ವಾಸ್ತವವಾದಿಯಾದ ಇಂದಿರಾ ಅವರು ನಂಬುವುದಿಲ್ಲ. ಆಡಂಬರದ ಪೂಜೆ, ತೋರಿಕೆಯ ಭಕ್ತಿ ಇವೆಲ್ಲವುಗಳಿಂದ ಇಂದಿರಾ ಅವರು ದೂರ 'ಅನುಭವ ಕುಂಜ'ದಲ್ಲಿ 'ಕಾಡದೆ, ಬೇಡದೆ, ಕರೆಯದೆ ತನ್ನ ಪಾಡಿಗೆ ತಾನು ಕೂತು ಮಾನವರು ಕೊಡುವ ಹಿಂಸೆಗಳನ್ನೆಲ್ಲ ಬಾಯಿಮುಚ್ಚಿಕೊಂಡು ಸಹಿಸುತ್ತಿರುವ ಸಾವಿರಾರು ದೇವರುಗಳನ್ನು ನಾವಾಗಿಯೇ ಹುಡುಕಿಕೊಂಡು ಹೋಗಿ ಆ ದೇವರ ಹೆಸರಿ ನಲ್ಲಿ ಬದುಕುತ್ತಿರುವ ಸಾವಿರಾರು ಮಂದಿ ಅರ್ಚಕರಿಗೆ ದಕ್ಷಿಣೆ ತೆತ್ತು, ಪ್ರದಕ್ಷಿಣೆ ಹಾಕಿ ಪುಣ್ಯದ ಮೂಟೆ ಹೊತ್ತು ಬರುವ ಮಾನವರು ನಾವು, ತಿನ್ನುವ ದೇವರೇ ಬಂದು ಕೈಯೊಡ್ಡಿ ಬೇಡಿದರೂ ಕೊಡಲಾರೆವು..."

ಕಲ್ಲಿನ ದೇವರುಗಳಿಗೂ ನನಗೂ ಯಾವುದೇ ರೀತಿಯ ಲೇವಾದೇವಿಯಿಲ್ಲ" ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಅಗೋಚರ ಶಕ್ತಿಯೊಂದಿದೆ ಎಂಬುದು ಅವರ ನಂಬಿಕೆ.

ಬಾಲ್ಯದಲ್ಲೇ ವಿಧವೆಯರಾಗಿ ತಾವು ನಂಬಿದ ಮೌಲ್ಯಗಳಿಗೆ ಬದ್ಧರಾಗಿ ಪರೋಪಕಾರಕ್ಕಾಗಿಯೇ ಜೀವನವನ್ನು ತೇಯ್ದ ಹಿರಿಯ ವ್ಯಕ್ತಿಗಳನ್ನು ಇಂದಿರಾ ಅವರು ಗೌರವಿಸುತ್ತಾರೆ. (ಈ ದೃಷ್ಟಿಯಿಂದ ಇಂದಿರಾ ಅವರು ಶಿವರಾಮಕಾರಂತರನ್ನು ಹೋಲುತ್ತಾರೆ. ಅವರೂ ಕೂಡ ತಾವು ನಂಬಿದ ಮೌಲ್ಯಗಳಿಗೆ ಬದ್ಧರಾಗಿ ಬಾಳಿದ ಮುದುಕಿಯರನ್ನು ಗೌರವಿಸುತ್ತಾರೆ). ಅವರ ಬಹುಪಾಲು ಎಲ್ಲ ಕಾದಂಬರಿಗಳಲ್ಲೂ ಇಂತಹ ವೃದ್ಧೆಯರೂ ಇದ್ದೇ ಇದ್ದಾರೆ. ಸದಾನಂದ 'ಯಂಟತ್ತೆ' 'ಫಣಿಯಮ್ಮ' ಪೂರ್ವಾಪರದ 'ಚಿಕ್ಕಮ್ಮ' 'ಶಾಂತಿಧಾಮ' ಕಾದಂಬರಿಯ 'ಬೆಳ್ಳಮ್ಮ' ಸೂತ್ರಧಾರಿ ಕಾದಂಬರಿಯಲ್ಲಿ 'ಮೋಟಮ್ಮ' ಇತ್ಯಾದಿ ಅನೇಕ ಪಾತ್ರ ದೃಷ್ಟಿಯಲ್ಲಿ ಇದನ್ನು ಗುರುತಿಸುತ್ತೇವೆ. ಅವರ ಜೀವನ ಶ್ರದ್ಧೆಯಲ್ಲಿ ಕಾದಂಬರಿಕಾರ್ತಿ ತಮ್ಮ ಜೀವನ ಶ್ರದ್ಧೆಯನ್ನೆ ಮೆರದಿದ್ದಾರೆ.

ಇತ್ತೀಚಿನ 'ಫಣಿಯಮ್ಮ' ಕಾದಂಬರಿಯಲ್ಲಿ ಇಂದಿರಾ ಸಮಾಜದ ಬದಲಾವಣೆಗಾಗಿ ಸ್ಪಂದಿಸಿದ್ದಾರೆ. ಒತ್ತಾಯಿಸಿದ್ದಾರೆ. ಸಂಪ್ರದಾಯದಿಂದ ಸಂಪೂರ್ಣವಾಗಿ ಬಿಡಿಸಿಕೊಂಡಿರುವುದನ್ನು ದಾಕ್ಷಾಯಿಣಿಯ ಪಾತ್ರ ಚಿತ್ರಣದಲ್ಲಿ ನೋಡುತ್ತೇವೆ.

ವಿಧವೆ ಬಸಿರಾದಾಗ ಬಹಿಷ್ಕಾರ ಹಾಕಿ ಅವಳನ್ನು ಮಾಲೇರ ಜಾತಿಗೆ ಸೇರಿಸುತ್ತಿದ್ದುದನ್ನು ಇಂದಿರಾ ಅವರು ಬಾಲ್ಯದಲ್ಲಿ ಕಂಡಿದ್ದಾರೆ. ಅವೈಚಾರಿಕತೆ, ಜಾತಿ ಪದ್ಧತಿಯಲ್ಲಿ ಅವರಿಗೆ ನಂಬಿಕೆಯಿಲ್ಲ.

ಜೀವನದಲ್ಲಿ ಬದುಕಿರುವವರೆಗೆ ತಮ್ಮ ಕರ್ತವ್ಯವನ್ನು ತಪ್ಪದೇ ಮಾಡಬೇಕು. ಎನ್ನುವುದು ಇಂದಿರಾ ಅವರ ಸಿದ್ಧಾಂತ. ಕಾಡಮ್ಮನವರು ತಮ್ಮ ಸತ್ತ ಮಕ್ಕಳ ಬಗೆಗೆ ಹೇಳಿಕೊಂಡಾಗ ಸ್ಥಿತಪ್ರಜ್ಞರಾದ ಶಾಸ್ತ್ರಿಗಳು —

"ಹುಟ್ಟಿದ ಮಕ್ಳು, ಬಿತ್ತಿದ ಬೆಳಿಯಲ್ಲಿ ನಮ್ಮ ಕೈಗೆ ಸಿಕ್ಕಾದಲ್ಲ ಕಳೆದು ಉಳದದ್ದೆ ನಮ್ಮದು" ಎಂದು ಸಮಾಧಾನ ಹೇಳುತ್ತಾರೆ. ನಾಲ್ಕು ಮಕ್ಕಳನ್ನು ಕಳೆದುಕೊಂಡು ಇಂದಿರಾ ಈ ರೀತಿಯ ಸಮಾಧಾನ ಕಂಡುಕೊಳ್ಳುತ್ತಾರೆ.

ಜೀವನದಲ್ಲಿ ಬಂದುದನ್ನು ಒಪ್ಪಿಕೊಂಡು ನಡೆಯುವ 'ಜಾತಿ ಕೆಟ್ಟವಳು' ಕಾದಂಬರಿಯಲ್ಲಿ ಈಶ್ವರ ಭಟ್ಟರಂತಹ ವ್ಯಕ್ತಿಗಳನ್ನು ಇಂದಿರಾ ಗೌರಿವಿಸುತ್ತಾರೆ. ಇದೇ ರೀತಿ ಬದಲಾದ ಯಮುನಮ್ಮ "ವಾಸುದೇವ ಮಾಲೇರ ಜಾತಿಯ ನೀರಜಳನ್ನು ಮದುವೆಯಾದಾಗ ಅವಳ ಕೈಹಿಡಿದ್ಮ

"ಇಕಾ ಹೆಣ್ಣೆ.' ನೀನು ನಮ್ಮ ವಾಸುದೇವನ್ನ ಲಗ್ನ ಆದ ಮ್ಯಾಲೆ ನಮ್ಮ ಹುಡುಗೀನೆ ಆಗಿಬಿಟ್ಟೆಲ್ಲ" ಎನ್ನುವಲ್ಲಿ ಕಾಣಬಹುದು.

ಕುಟುಂಬ ವತ್ಸಲೆ ಇಂದಿರಾ ಅವರ ಪತಿ ಇಬ್ಬರೂ ತಿಳುವಳಿಕೆಯುಳ್ಳವರೂ, ವಿಶಾಲ ಮನೋಭಾವನೆಯುಳ್ಳವರೂ ಇದ್ದರೆ ಬದುಕಿನಲ್ಲಿ ಎಲ್ಲ ಕಷ್ಟಗಳನ್ನು ಸಹನೆಯಿಂದ ಸ್ವೀಕರಿಸಲು ಸಾಧ್ಯವಾಗುತ್ತದೆಂಬ ಅಭಿಪ್ರಾಯನ್ನು ಹೊಂದಿದವರು.

ಎಂ. ಕೆ. ಇಂದಿರಾ ಅವರ ಜೀವನವೇ ಇದಕ್ಕೆ ಒಂದು ನಿದರ್ಶನ ಕಿರಿಯ ವಯಸ್ಸಿನಲ್ಲಿ ಗೃಹಿಣಿಯಾಗಿ, ತಾಯಿಯಾಗಿ ಈಗ ಅಜ್ಜಿಯಾಗಿ (ಏಳು ಜನ ಮೊಮ್ಮಕ್ಕಳು) ಇಂದಿರಾ ಅವರಿಗೆ ಬರವಣಿಗೆಗೆ ತೊಡಗುವುದಕ್ಕೆ ಮೊದಲು ಆರ್ಥಿಕ ಸ್ಥಿತಿ ತುಂಬಾ ಪ್ರತಿಕೂಲವಾಗಿತ್ತು. ಆದರೂ ಕೂಡ ಅವರ ಪತಿ ದಿ॥ ಕೃಷ್ಣರಾವ್ ಇವರ ಸಹನೆ, ಕೌಟುಂಬಿಕ ಪ್ರೀತಿ, ಇದ್ದುದರಿಂದ ಎಲ್ಲವನ್ನೂ ಎದುರಿಸಿದರು. ಅವರು ದಿವಂಗತರಾದ ಮೇಲೆಯೂ ಇಂದಿರಾ ಅವರು ಒಬ್ಬ ಮಗನನ್ನು ಕಳೆದುಕೊಂಡರು. ತಮ್ಮನೂ ಅವರಿಂದ ಅಗಲಿದರು. ಮೇಲಿಂದ ಮೇಲೆ ಸಂಸಾರಿಕ ಜೀವನದಲ್ಲಿ ಕಷ್ಟಗಳ ಸರಮಾಲೆಯನ್ನೇ ಎದುರಿಸುವುದು ಅನಿವಾರ್ಯವಾಯಿತು. ಮನೋಸ್ಥೈರ್ಯದಿಂದ ಎಲ್ಲವನ್ನೂ ಒಂದೇ ರೀತಿಯಿಂದ ಸ್ವೀಕರಿಸಬೇಕೆಂಬ ಮನೋಭಾವನೆ ಇವರದು.

'ರಸವಾಹಿನಿ' ಕಾದಂಬರಿಯಲ್ಲಿ 'ವೇಣು'ವಿನ ಮುಖಾಂತರ ಹೇಳಿಸಿದ್ದಾರೆ. "ನಾವು ಒಂದು ಮಾವಿನ ಸಸಿಯನ್ನು ನೆಡುತ್ತೇವೆ...ಅದು ಒಂದು ದೊಡ್ಡ ಮರವಾಗಿ ನಮಗೆ ಸಿಹಿ ಸಿಹಿಯಾದ ಫಲಗಳನ್ನು ಕೊಡಲಿ ಎಂಬ ಉದ್ದೇಶ ನಮಗಿರುತ್ತದೆ. ಅದು ಬೆಳೆದು ದೊಡ್ಡದಾಗುವವರೆಗೆ ಆದಕ್ಕೆ ನೀರು ಗೊಬ್ಬರ ಹಾಕಿ ಬೆಳೆಸುವದು ನಮ್ಮ ಕರ್ತವ್ಯ...ಅದರ ಫಲಗಳು ಒಗರೋ, ಹುಳಿಯೋ, ಹುಳಕೊ, ಸಿಹಿಯೋ ನಿರ್ಣಯಿಸಲು ನಮಗೆ ಸಾಧ್ಯವೇ ? ಆದರೆ ಒಳ್ಳೆಯ ಫಲ ಬಿಡಲಿ ಎಂದೇ ನಾವು ಬಯಸಬೇಕು. ಒಂದು ಪಕ್ಷ ಹಾಗಾಗದಿದ್ದರೆ ಮುಂದೆ ಅದಕ್ಕಾಗಿ ನಾವು ದುಃಖಿಸ ಬಾರದು. ಒಳ್ಳೆಯದು, ಕೆಟ್ಟದ್ದು ಎರಡನ್ನೂ ಸಮಭಾವದಿಂದ ಸ್ವೀಕರಿಸುವುದನ್ನು ಕಲಿಯಬೇಕು. ಒಳ್ಳೆಯದನ್ನು, ಆಡುವುದು ಮಾಡುವುದು ನೋಡುವುದು ನಮ್ಮ ಕೆಲಸ. ಪ್ರತಿಫಲ ಬಯಸುವುದು ಬೇಡ. ಪ್ರತಿಫಲ ಒಳ್ಳೆಯದಾದರೆ ಅದರಲ್ಲಿ ಎಲ್ಲರಿಗೂ ಸಮಪಾಲು"—ಎನ್ನುವ ಇಂದಿರಾ ಅವರು ಜೀವನದ ಬಗೆಗೆ ಇಲ್ಲಿ ತಮ್ಮ ಮನೋ ಧರ್ಮವನ್ನೇ ಪ್ರತಿಬಿಂಬಿಸಿದ್ದಾರೆ. (ಪುಟ–೧೫೭ ರಲ್ಲಿ)

ದೇವರ ಬಗೆಗೆ ಇಂದಿರಾ ಅವರು ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ. ಮೇಲಿಂದ ಮೇಲೆ ಅವರ ಕಾದಂಬರಿಗಲ್ಲಿ ಈ ವಿಚಾರಗಳನ್ನು ವ್ಯಕ್ತಪಡಿಸುತ್ತಲೇ ಇದ್ದಾರೆ. "ನಮ್ಮ ದೇವರುಗಳು ತೆಂಗಿನಕಾಯಿ, ಬಾಳೆ ಹಣ್ಣುಗಳಿಗೆ ಕಾದು ಕೂತಿರುವುದಿಲ್ಲ. ಪೂಜೆ ಪ್ರಾರ್ಥನೆ ತಪ್ಪಲ್ಲ. ತಕ್ಕಷ್ಟು ಮಾಡಬೇಕು. ನಿಜವಾದ ನಮ್ಮ ದೇವರುಗಳೆಂದರೆ ನಮ್ಮ ಹಿರಿಯರು, ಹಿತಚಿಂತಕರು ಆತ್ಮೀಯರು ನಿಜವಾಗಿ ಹೇಳಬೇಕೆಂದರೆ ನಮ್ಮ ಸಂಸಾರದ ಅರ್ಧಪಾಲಾಗಿರುವ ಮೋಟಮ್ಮ ನಮ್ಮ ದೇವರು.

ಇಷ್ಟೆಲ್ಲ ಮತ್ತೊಬ್ಬರ ಸುಖಕ್ಕಾಗಿ ದುಡಿದು ಜೀವನವನ್ನು ತೇಯುವ ಕಷ್ಟ-ಸುಖವನ್ನು ಸ್ಥಿತಪ್ರಜ್ಞೆಯಂತೆ ಸ್ವೀಕರಿಸುವವರನ್ನು ಎಂ. ಕೆ. ಇಂದಿರಾ ಅವರು ದೇವರೆಂದೇ ಭಾವಿಸುತ್ತಾರೆ.

ಪುರಾಣ-ಪುಣ್ಯ ಕತೆಗಳಲ್ಲಿ ಬಣ್ಣಿಸಿರುವ ಕಣ್ಣಿಗೆ ಕಾಣದ ಸ್ವರ್ಗ-ನರಕಗಳನ್ನು ವಾಸ್ತವವಾದಿ, ವಿಚಾರವಂತೆ ಇಂದಿರಾ ಅವರು ನಂಬುವುದಿಲ್ಲ. ಅನೇಕ ಕಾದಂಬರಿಗಳಲ್ಲಿ ಅವರು ಈ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ.

"ಸ್ವರ್ಗದಲ್ಲಿ ಯಂತದಿದೆಯೋ ಏನ್ಕತೆಯೋ ಯಾರಿಗೆ ಗೊತ್ತು ಹೇಳು, ಪುರಾಣ, ಹರಿಕತೆಯೋರು ಹೇಳಿದ ಮಾತ್ನ ನಾವು ನಂಬ್ಕಂಡಿರೋದು"

"ಇದೇ ನಾನು ಅನ್ನೂದು ಸ್ವರ್ಗಕ್ಕಾಗಲಿ, ನರಕಕ್ಕಾಗಲಿ ಹೋಗಿ ನಾಲ್ಕುದಿನ ಅಲ್ಲಿದ್ದು ವಾಪಸ್ ಬಂದೋರು ಯಾರಾದ್ರೂ ಹೇಳಿದ್ರೆ ಏನಾದ್ರೂ ನಂಬಬೋದಾಗಿತ್ತು." ಇದೇ ರೀತಿಯ ವಿಚಾರಗಳನ್ನು ಫಣಿಯಮ್ಮ ಕಾದಂಬರಿಯಲ್ಲಿ ಕಾಣುತ್ತೇವೆ.

ಒಳ್ಳೆಯ ಮನಸ್ಸು, ಮನಸ್ಸಿಗೆ ಸಂತೋಷಕೊಡುವ ನಿಸರ್ಗ, ಸಂಗೀತ ನೃತ್ಯ ಶಿಲ್ಪ, ನಮ್ಮಕಣ್ಣಿಗೆ ಕಾಣುವ ಸತ್ಯ ಸುಂದರವಾದುದು ದೇವರೆಂಬ ಭಾವನೆ.

ಸದ್ದುಗದ್ದಲವಿಲ್ಲದೆ, ಕೆಲಸ ಮಾಡುವ ಶಾಂತ ಗಂಭೀರ ಸ್ವಭಾವದವರನ್ನು ಇಂದಿರಾ ಮೆಚ್ಚುತ್ತಾರೆ. ಮನೋಮಂದಿರ ಕಾದಂಬರಿಯ ಶಾಂತಾರಾಮ. 'ಹೂಬಾಣದ 'ಮಧುಕರ' 'ಸದಾನಂದ' ಇದೇ ಕಾದಂಬರಿಯ 'ರಾಜು' ಇಂದಿರಾ ಅವರಿಗೆ ಮೆಚ್ಚುಗೆ ಗಳಿಸುತ್ತಾರೆ.

ಕೊಂಕು-ಬಿಂಕ, ಕಪಟ-ಮೋಸವನ್ನರಿಯದ ನಿರ್ಮಲ ಹೃದಯದವರನ್ನು ಕಂಡರೆ ಇಂದಿರಾ ಅವರಿಗೆ ಸಂತಸ ಕೃಷ್ಣವೇಣಿ, ಗೌರಿ, ಇನ್ನೂ ಹಲವಾರು ಪಾತ್ರಗಳಲ್ಲಿ ಇಂತಹ ಸ್ವಭಾವವನ್ನು ಇಂದಿರಾ ಅವರು ಎರಕ ಹೊಯ್ದಿದ್ದಾರೆ.

ಕೌಟುಂಬಿಕ ಜೀವನದ ಸುಖಸಂತೋಷಕ್ಕೆ ತಿಳುವಳಿಕೆ, ಹೃದಯ ವೈಶಾಲ್ಯ ಸಹನೆ, ಕಾಲಕ್ಕೆ ತಕ್ಕಂತೆ ಹೊಂದಿಕೊಳ್ಳುವ ಮನೋಭಾವನೆ ಮುಖ್ಯವೆಂದು ಜೀವನಾನುಭವದಿಂದ ತಿಳಿದ ಹಿರಿಯರು ಇಂದಿರಾ.

ಜೀವನದುದ್ದಕ್ಕೂ ಪೆಟ್ಟಿನ ಮೇಲೆ ಪೆಟ್ಟು ತಿಂದರೂ ಇಂದಿರಾ ಅವರು ನೋವನ್ನುಂಡು ನಗೆಯನ್ನು ಹಂಚಬೇಕೆಂದು ತಿಳಿದು ಅದೇ ರೀತಿ ತಮ್ಮ ಜೀವನವನ್ನು ಕಳೆಯುತ್ತಿದ್ದಾರೆ.

'ನಗೆಯನ್ನು ಹಂಚಬಲ್ಲೆ, ನೋವನ್ನು ಹಂಚಲಾರೆ. ಸಾಧ್ಯವಾದ ಮಟ್ಟಿಗೆ ಬೇರೆಯವರಿಗೆ ತೊಂದರೆ ಕೊಡದೆ ಇರುವ ಅಲ್ಪ ಆಯುಷ್ಯವನ್ನು ಕಳೆಯಬೇಕೆಂದು ನನ್ನ ಸಂಕಲ್ಪ.

'ಕರ್ತವ್ಯವೇ ದೇವರು'

'ಈಸಬೇಕು ಇದ್ದು ಜೈಸಬೇಕು.

'ತಾಳಿದವರು ಬಾಳಿಯಾರು'

ಎಂಬುದು ಹಿರಿಯರೂ ಅನುಭವವೃದ್ಧೆಯೂ ಆಗಿರುವ ಖ್ಯಾತ ಕಾದಂಬರಿಕಾರ್ತಿ ಇಂದಿರಾ ಅವರ ಜೀವನದರ್ಶನವಾಗಿದೆ.

ವ್ಯಕ್ತಿಗಳ ವ್ಯಕ್ತಿತ್ವದ ವಿಕಾಸಕ್ಕೆ ಅಡ್ಡಿಯಾಗಬಲ್ಲ, ಧಾರ್ಮಿಕ ಕುರುಡು ಕಟ್ಟಳೆಗಳನ್ನು, ಮೂಢನಂಬಿಕೆಗಳನ್ನು ಇಂದಿರಾ ಅವರು ತಮ್ಮ ಕೃತಿಗಳಲ್ಲಿ ಖಂಡಿಸಿದ್ದಾರೆ. ತಮ್ಮ ಸ್ವಾರ್ಥಕ್ಕಾಗಿ ಪರರ ಬದುಕನ್ನೇ ಬಲಿ ತೆಗೆದುಕೊಳ್ಳುವ ಧೂರ್ತರನ್ನು ನಿರ್ದಾಕ್ಷಿಣ್ಯವಾಗಿ ಟೀಕೆ ಮಾಡಿದ್ದಾರೆ.

ನಿಸ್ವಾರ್ಥ ದುಡಿಮೆ, ಕರ್ತವ್ಯ ಶ್ರದ್ಧೆ, ಜೀವನ ಸಹನೆ, ಎಂತಹ 'ಕಷ್ಟ-ನಿಷ್ಠೂರ'ಗಳು ಬಂದು ಕಾಡಿದರೂ ಸೋಲದ ಮನೋಸ್ಥೈರ್ಯ ಬತ್ತದ ಹೃದಯದ ಒಲುಮೆ, ದಯೆ, ಅನುಕಂಪ ಔದಾರ್ಯ, ವಿಶಾಲ ಹೃದಯದ ತುಡಿತವನ್ನು ಇಂದಿರಾ ಅವರ ಕೃತಿಗಳಲ್ಲಿ ಗುರುತಿಸಬಹುದು.

ಮಾನವೀಯತೆ, ವಿಶಾಲ ಮನೋಭಾವನೆ, ಸ್ನೇಹ-ಸೌಹಾರ್ದಗಳಿಂದ ಕೂಡಿದ ಆರೋಗ್ಯಕರ ಸಮಾಜದಿಂದಲೇ ರಾಷ್ಟ್ರದ ಉನ್ನತಿ ಎಂಬುದನ್ನು ಅರಿತ ಇಂದಿರಾ ಅವರು ಅವಿಶ್ರಾಂತರಾಗಿ ಸಾಹಿತ್ಯರಂಗದಲ್ಲಿ ದುಡಿಯುತ್ತಲಿದ್ದಾರೆ.

ಅಧ್ಯಾಯ-ಒಂಭತ್ತು

ಸಮಾರೋಪ

ಸಾಹಿತಿಯಾಗಿ ಇಂದಿರಾ :

ಆಧುನಿಕ ಕಾಲದಲ್ಲಿ ಪಾಶ್ಚಾತ್ಯರ ಸಂಪರ್ಕದಿಂದ ಭಾರತೀಯ ಸಮಾಜದಲ್ಲಾದ ಸಮಗ್ರ ಬದಲಾವಣೆಯೇ ಸ್ತ್ರೀಯರ ಸ್ಥಿತಿಗತಿಯ ಸುಧಾರಣೆಗೂ ಕಾರಣವಾಯಿತು. ಸಮಾಜ ಸುಧಾರಕರ ಪ್ರಯತ್ನದಿಂದಾಗಿ ಬಾಲ್ಯವಿವಾಹ ನಿಷೇಧ, ವಿಧವಾ ವಿವಾಹಕ್ಕೆ ಪ್ರೋತ್ಸಾಹ ಸ್ತ್ರೀ ಶಿಕ್ಷಣಕ್ಕೆ ಉತ್ತೇಜನ ದೊರೆತ ಕಾರಣ ವಿದ್ಯಾಭ್ಯಾಸವು ಪ್ರಗತಿ ಹೊಂದತೊಡಗಿತು. ಗಾಂಧೀಜಿಯವರ ಮುಂದಾಳುತನದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರೂ ಭಾಗವಹಿಸಿದುದು ಗಮನಾರ್ಹ. ಸಮಾಜದಲ್ಲಿ ಸ್ಥಿತ್ಯಂತರಗಳು ಕಾಣಿಸಿಕೊಂಡವು. ಭಾರತೀಯರಲ್ಲಿ ನವಜಾಗೃತಿ ಉಂಟಾಯಿತು.

ಆಂಗ್ಲ ಸಾಹಿತ್ಯದ ಪ್ರಭಾವದಿಂದ ಭಾರತೀಯ ಸಾಹಿತ್ಯ ರಂಗದಲ್ಲೂ ಹೊಸತನ ಮೂಡಿತು. ಕತೆ, ಕಾದಂಬರಿಗಳು ಜನಪ್ರಿಯತೆಗಳಿಸಿದವು.

ಹೊಸಗನ್ನಡದ—ನವೋದಯ ಕಾಲದಲ್ಲೇ ಮಹಿಳೆಯರೂ ಕಾದಂಬರಿಗಳ ರಚನೆಗೆ ಕೈಹಾಕಿದರು. ಸ್ತ್ರೀ ಶಿಕ್ಷಣ, ವಿಧವೆಯರ ಸಮಸ್ಯೆ, ಕೌಟುಂಬಿಕ ಜೀವನದ ಸಿಹಿ–ಕಹಿಗಳನ್ನು ಸ್ವಾತಂತ್ರ್ಯ ಪೂರ್ವದಲ್ಲೆ ಲೇಖಕಿಯರು ತಮ್ಮ ಕತೆ, ಕಾದಂಬರಿಗಳಲ್ಲಿ ಚಿತ್ರಿಸಿದರು. ಸ್ವಾತಂತ್ರ್ಯಾನಂತರ ಸಮಾಜದಲ್ಲಿ ಮಹಿಳೆಯರ ಸ್ಥಾನಮಾನದಲ್ಲೂ ಬದಲಾವಣೆಗಳು ಕಾಣಿಸಿಕೊಂಡವು. ವಿಧವಾ ವಿವಾಹ, ವೇಶ್ಯಾ ಸಮಸ್ಯೆ, ಪ್ರೇಮ ವಿವಾಹ. ಉದ್ಯೋಗಸ್ಥ ಮಹಿಳೆಯರ ಸಮಸ್ಯೆ, ಮಧ್ಯಮ ವರ್ಗದ ಕುಟುಂಬ ಜೀವನ, ದಾಂಪತ್ಯ ಜೀವನದ ಸರಸ–ವಿರಸ, ಮುಂತಾದ ಸಮಸ್ಯೆಗಳು ಸ್ವಾತಂತ್ರ್ಯೋತ್ತರ ಬರಹಗಾರ್ತಿಯರ ಕತೆ, ಕಾದಂಬರಿಗಳ ವಸ್ತುವಾದವು.

ಸ್ವಾತಂತ್ರ್ಯ ನಂತರ ೧೯೫೦ರಲ್ಲಿ ತ್ರಿವೇಣಿಯವರು ಕಾದಂಬರಿ ಕ್ಷೇತ್ರವನ್ನು ಪ್ರವೇಶಿಸಿ ಅಲ್ಪಾವಧಿಯಲ್ಲೆ ಜನಪ್ರಿಯತೆಯನ್ನು ಗಳಿಸಿದರು. ಅವರಿಂದ ಕನ್ನಡದ ಜನತೆ ಇನ್ನೂ ಹೆಚ್ಚಿನದನ್ನು ನಿರೀಕ್ಷಿಸುತ್ತಿರುವಾಗಲೇ ಅವರು ಅಕಾಲ ಮರಣಕ್ಕೆ ತುತ್ತಾದರು. ಅವರ ಕೊನೆಯ ಕಾದಂಬರಿ ಹಾಗೂ ಇಂದಿರಾ ಅವರ ಮೊದಲ ಕಾದಂಬರಿ ಒಂದೇ ವರ್ಷ (೧೯೬೩) ಪ್ರಕಟವಾದವು.

ಲೇಖಕಿಯರ ಸಂಖ್ಯೆ ಬೆರಳೆಣಿಕೆಯಲ್ಲಿದ್ದಾಗ ಶ್ರೀಮತಿ ಎಂ. ಕೆ. ಇಂದಿರಾ ಅವರು ೧೯೬೩ರಲ್ಲಿ ಬರೆದ 'ತುಂಗಭದ್ರ' ಕಾದಂಬರಿಯಿಂದ ಸಾಹಿತ್ಯಕ್ಷೇತ್ರವನ್ನು ಪ್ರವೇಶಿಸಿದರು.

ಸ್ವಾತಂತ್ರ್ಯಾನಂತರ ಲೇಖಕಿಯರ ಸಂಖ್ಯೆ ದಿನದಿನಕ್ಕೆ ಬೆಳೆಯುತ್ತಿದ್ದರೂ ಸತ್ವಯುತ ಕೃತಿಗಳನ್ನು ಕೊಟ್ಟ ಲೇಖಕಿಯರ ಸಂಖ್ಯೆ ತೀರ ಕಡಿಮೆ. ಅಂತೆಯೇ ಇಂದಿರಾ ಅವರು ಕನ್ನಡ ಕಾದಂಬರಿಕಾರ್ತಿಯರಲ್ಲಿ ಗಟ್ಟಿಗರಾಗಿ ಉಳಿದಿದ್ದಾರೆ.

ಶ್ರೀಮತಿ, ಇಂದಿರಾ ಅವರು ಸುಸಂಸ್ಕೃತ, ಸುಪ್ರಸಿದ್ಧ ಸಾಹಿತಿಗಳ ಮನೆತನದವರು. ಮಕ್ಕಳ ಸಾಹಿತ್ಯಕ್ಕೆ ಅನುಪಮ ಕಾಣಿಕೆಯನ್ನಿತ್ತ ಹೊಯ್ಸಳರು ಇಂದಿರಾ ಅವರ ಅಜ್ಜ. ಇಂದಿರಾ ಅವರ ತಾಯಿ ಬನಶಂಕರಮ್ಮ ಸಾಹಿತ್ಯಾಭಿರುಚಿಯನ್ನುಳ್ಳವರು.

ಮಲೆನಾಡಿನ ನಿಸರ್ಗದೊಂದಿಗೆ ಇಂದಿರಾ ಅವರು ಒಂದಾಗಿ ಬೆಳೆದರು. ಸುಖ ಸಮೃದ್ಧಿಯ ಅವಿಭಕ್ತ ಕುಟುಂಬದಲ್ಲಿ ಬಾಲ್ಯವನ್ನು ಕಳೆದವರು.

ಶಾಲೆಯಲ್ಲಿ ಓದಿದ್ದು, ತಿಳಿದಿದ್ದು ಕಡಿಮೆಯಿದ್ದರೂ ಜೀವನ ರಂಗವೇ ಅವರಿಗೆ ಶಿಕ್ಷಣರಂಗವಾಗಿದೆ. ಸಂಪ್ರದಾಯ, ಅಂಧಶ್ರದ್ಧೆ ತುಂಬಿದ್ದ ಪರಿಸರದಲ್ಲಿ ಬೆಳೆದ ಇಂದಿರಾ ಅವರು, ವಿಚಾರವಂತೆಯಾದುದು ಪರಿಸ್ಥಿತಿಯ ಒತ್ತಡದಿಂದಲೇ. ಸಮಾಜದ ರೀತಿನೀತಿಗಳ ವಿರೋಧಿಯಾಗಬೇಕಾದುದೂ ಅವರಿಗೆ ಅನಿವಾರ್ಯವಾಯಿತು.

ಅಂದಿನ ಕಾಲದಲ್ಲಿ ಸುಪ್ರಸಿದ್ಧರಾಗಿದ್ದ ಬಿ ವೆಂಕಟಾಚಾರ್ಯ, ಗಳಗನಾಥ, ಮುಂತಾದವರ ಕಾದಂಬರಿಗಳು ಇಂದಿರಾ ಅವರಲ್ಲಿ ಓದುವ ಅಭಿರುಚಿಯನ್ನು ಬೆಳಿಸಿದವು ಯಕ್ಷಗಾನ, ಬಯಲಾಟ, ನಾಟಕ, ಪ್ರಸಂಗ; ಹಾಗೂ ಚಲನಚಿತ್ರಗಳು, ರಾಮಾಯಣ, ಮಹಾಭಾರತ, ಅಜ್ಜಿಯರಿಂದ ಕೇಳಿದ ನೂರಾರು ಕತೆಗಳು ಇಂದಿರಾ ಅವರ ಮನಸ್ಸಿನ ಮೇಲೆ ಪರಿಣಾಮ ಬೀರಿದವು.

ವಿವಿಧ ಪ್ರಾಂತಗಳ, ಸುತ್ತುಮುತ್ತಲಿನ ಹಳ್ಳಿಗಳನ್ನು ಸುತ್ತಾಡಿ ನಿಸರ್ಗದ ಚೆಲುವನ್ನು ಕಂಡು ಚೈತನ್ಯ ಪಡೆದವರು.

ಹನ್ನೆರಡನೆಯ ವರ್ಷಕ್ಕೇ ಹಿರಿಯರು ವಿವಾಹವನ್ನು ನಿಶ್ಚಯಿಸಿದಾಗ ಇಂದಿರಾ ಅವನ್ನು ವಿರೋಧಿಸಿದರು; ಆದರೂ ಹಿರಿಯರ ಮಾತನ್ನು ಒಪ್ಪಿಕೊಳ್ಳಬೇಕಾದುದು ಅನಿವಾರ್ಯವಾಗಿತ್ತು, ಹದಿನಾರನೆಯ ವರ್ಷಕ್ಕೆ ಗೃಹಿಣಿಯಾದರು. ಪತಿ ಕೃಷ್ಣರಾಯರೊಡನೆ ಸರಸ ಬಾಳ್ವೆ ಆಡಂಬರವಿಲ್ಲದ ಸರಳ ಜೀವನ, ಕೃಷ್ಣರಾಯರು ವಿಚಾರವಂತರು. ವಾಸ್ತವ ಜೀವಿ, ನಿರ್ಮಲ ಮನಸ್ಸಿನವರಾಗಿದ್ದರು.

ತ್ರಿವೇಣಿ ಹಾಗೂ ಇಂದಿರಾ ಆತ್ಮೀಯ ಸ್ನೇಹಿತೆಯರು. ತ್ರಿವೇಣಿಯವರಿಗೆ ಆಕರ್ಷಕ ಕಾವ್ಯನಾಮ ಸೂಚಿಸಿದವರು ಇಂದಿರಾ ಅವರೇ ಎಂಬುದನ್ನು ನೆನೆಯಬೇಕು.

ತ್ರಿವೇಣಿಯವರು ಇಂದಿರಾ ಅವರ ಬರವಣಿಗೆಯ ಶೈಲಿಯನ್ನು ಮೆಚ್ಚಿಕೊಂಡು ಬರೆಯಲು ಪ್ರೋತ್ಸಾಹ ನೀಡಿದ್ದರು. ೧೯೬೦ಳರಲ್ಲಿಯೇ ಇಂದಿರಾ ಅವರು

'ಹೆತ್ತೊಡಲು' ನೀಳ್ಗತೆಯನ್ನು ಬರೆದು ಇಟ್ಟಿದ್ದರು. ಪತ್ರಿಕೆಗೆ ಕಳಿಸಿದ ಮೊದಲ ಕತೆಯೋ ತಮ್ಮನಿಂದಲೇ ಹಿಂತಿರುಗಿ ಬಂದರೂ ೧೯೬೭ರಲ್ಲಿ 'ನವರತ್ನ' ಕಥಾ ಸಂಕಲನದಲ್ಲಿ ಮೊದಲ ಕತೆಯಾಗಿ ಸೇರಿ ರಾಜ್ಯಸಾಹಿತ್ಯ ಅಕಾಡೆಮಿಯ ಬಹುಮಾನ ಪಡೆಯಿತು.

೧೯೬೦ರಲ್ಲಿಯೇ ಇಂದಿರಾ ಅವರು 'ತುಂಗಭದ್ರ' ಕಾದಂಬರಿಯನ್ನು ಬರೆದರು. ಆ ಕಾದಂಬರಿಯ 'ಮಂದಾಕಿನಿ' ಪಾತ್ರದ 'ರಾಧಮ್ಮ' ಇಂದಿರಾ ಅವರಿಗೆ ತಮ್ಮ ಮನೆಯ ಕತೆ ಹೇಳಿ ಬರೆಯಲು ಪ್ರೇರೇಪಿಸಿದರು.

'ತುಂಗಭದ್ರ' ಕಾದಂಬರಿಯ ಹಸ್ತಪ್ರತಿ ಕಳೆದು ಹೋದಾಗ ನೆನಪಿನ ಆಧಾರದ ಮೇಲೆಯೇ ಕೃತಿಯನ್ನು ಪುನರ್‌ಸೃಷ್ಟಿಸಿದುದು ಸಾಹಿತ್ಯ ಚರಿತ್ರೆಯಲ್ಲಿ ಮರೆಯಲಾಗದ, ಸ್ವಾರಸ್ಯ ಘಟನೆ,—ಆ ಸಮಯದಲ್ಲಿ ಇಂದಿರಾ ಅವರು ತೋರಿದ ಸಹನೆ; ಮನೋಸ್ಥೈರ್ಯ ಅಚ್ಚರಿಗೊಳಿಸುವಂತವು.

ಇಂದಿರಾ ಅವರು ಸ್ನೇಹಜೀವಿ. ವಾತ್ಸಲ್ಯಮಯಿ, ನಿರ್ಲಿಪ್ತ ಸ್ವಭಾವ. ಮುಗ್ಧ ಮನಸ್ಸು, ಬದುಕನ್ನು ಕುರಿತ ಶ್ರದ್ಧೆ, ಪ್ರಾಮಾಣಿಕತೆ, ಅವಿಶ್ರಾಂತ ದುಡಿಮೆ, ಮಾನವೀಯ ಹೃದಯವಂತಿಕೆಯನ್ನುಳ್ಳ ಹಿರಿಯರು ಇಂದಿರಾ.

ಇಂದಿರಾ ಅವರ ಸಾಹಿತ್ಯಿಕ ಬಳಗ ದಿನ ದಿನಕ್ಕೆ ವಿಶಾಲವಾಗುತ್ತಿದೆ. ಅನಕೃ ಅವರಂತೆ ಕಿರಿಯರಿಗೆ ಉತ್ಸಾಹ ತುಂಬಿ, ಹಲವಾರು ಕಾದಂಬರಿಕಾರ್ತಿಯರನ್ನು ಬೆಳಕಿಗೆ ತಂದ ಶ್ರೇಯಸ್ಸು ಅವರಿಗಿದೆ.

ಇಂದಿರಾ ಅವರದು ನೋವುಂಡ ಬದುಕು. ನಾಲ್ಕು ಮಕ್ಕಳನ್ನು, ಪತಿಯನ್ನು, ಒಡಹುಟ್ಟಿದವರನ್ನು ಕಳೆದುಕೊಂಡ ನೊಂದಜೀವಿ.

ಮಹಾಕಾದಂಬರಿಯನ್ನು ಬರೆಯುವ ಸಂಕಲ್ಪವಿಟ್ಟುಕೊಂಡು ನಾಡು–ನುಡಿಯ ಸೇವೆಯಲ್ಲಿ ನಿರತರಾಗಿದ್ದಾರೆ. ತಮ್ಮ ಅರವತ್ತೆಂಟನೆಯ ವಯಸ್ಸಿನಲ್ಲೂ ಅವರು ಚಟುವಟಿಕೆಯಿಂದ ಕೆಲಸ ಮಾಡುತ್ತಾರೆ. ಸಾಹಿತ್ಯಿಕ ಚಟುವಟಿಕೆಗಳಲ್ಲಿ ಉತ್ಸಾಹದಿಂದ ಭಾಗವಹಿಸುತ್ತಾರೆ.

ಇಂದಿರಾ ಅವರು ಬದುಕಿನಲ್ಲಿ ಪಡೆದ ಸುದೀರ್ಘ ಜೀವನಾನುಭವವೇ ಅವರ ಸಾಹಿತ್ಯ ಸೃಷ್ಟಿಗೆ ಬಂಡವಾಳವಾಯಿತು. ಅವರ ಪ್ರಥಮ ಕಾದಂಬರಿ ತುಂಗಭದ್ರ ನಂತರದ 'ಸದಾನಂದ' ಈ ಕಾದಂಬರಿಗಳು ಶ್ರೀ ಕೆ. ಡಿ. ಕುರ್ತಕೋಟಿ, ಎಲ್. ಎಸ್. ಶೇಷಗಿರಿರಾವ್, ಶ್ರೀರಂಗರಂತಹ ಹಿರಿಯ ಸಾಹಿತಿಗಳಿಂದ ವಿಮರ್ಶಕರಿಂದ ಮೆಚ್ಚುಗೆ ಗಳಿಸಿದುದು ಅಚ್ಚರಿಯೇನಲ್ಲ.

ಮಲೆನಾಡಿನಲ್ಲಿ ಕಳೆದ ಬಾಲ್ಯಜೀವನವೇ ಇಂದಿರಾ ಅವರ ಇಂದಿನ ಸಾಹಿತ್ಯ ಸೃಷ್ಟಿಗೆ ಸ್ಫೂರ್ತಿ, ಗೃಹಿಣಿಯಾಗಿ ತಾಯಿಯಾಗಿ ಸಂಸಾರಮಾಡಿದ ಇಂದಿರಾ ಅವರು

ಮೊಮ್ಮಗಳನ್ನು ಕಂಡನಂತರ ತಮ್ಮ ನಲವತ್ತಾರನೆಯ ವಯಸ್ಸಿನಲ್ಲಿ ಕಾದಂಬರಿಕಾರ್ತಿಯಾಗಿ ಬೆಳಕಿಗೆ ಬಂದವರು. ಅವರ ಪರಿಪಕ್ವ ಜೀವನಾನುಭವವೇ ಅವರ ಕೃತಿಗಳಲ್ಲಿ ಕೆನೆಗಟ್ಟಿ ನಿಂತಿದೆ. ಇಪ್ಪತ್ತೆರಡು ವರ್ಷಗಳಲ್ಲಿ ಇದುವರೆಗೆ ಅವರು ೫೫ ಕೃತಿಗಳನ್ನು ರಚಿಸಿದ್ದಾರೆ. ಅದರಲ್ಲಿ ಕಾದಂಬರಿಗಳು ನಲವತ್ತು, ಹನ್ನೆರಡು ಕಥಾ ಸಂಕಲನಗಳು, ಮತ್ತಿತರ ಕೃತಿಗಳು ಮೂರು, ಕತೆ, ಲೇಖನ, ಪ್ರವಾಸ ಕಥನ, ಹರಟೆ ಮುಂತಾದ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಅವರು ಕೆಲಸ ಮಾಡಿದ್ದಾರೆ. ಕತೆ, ಕಾದಂಬರಿ ಕ್ಷೇತ್ರದಲ್ಲಿ ಅವರದು ಪ್ರಥಮ ವರ್ಗದ ಫಸಲು

ಇಂದಿರಾ ಅವರ ಮೊದಲ ಕಾದಂಬರಿಯೇ ಪ್ರಾದೇಶಿಕ ಪ್ರಶಸ್ತಿಯನ್ನು ಗಳಿಸಿತು. ಅದರ ಹಿಂದೆಯೇ 'ಸದಾನಂದ' ರಾಜ್ಯ ಸಾಹಿತ್ಯ ಅಕ್ಯಾಡೆಮಿಯ ಬಹುಮಾನ ಪಡೆಯಿತು. ಅವರ ಮೂರನೆಯ ಕೃತಿ 'ಗೆಜ್ಜೆ ಪೂಜೆ', ಪುಟ್ಟಣ್ಣ ಕಣಗಾಲರ ನಿರ್ದೇಶನ ಕಲ್ಪನಾ ಅವರ ಅಮೋಘ ಅಭಿನಯದಿಂದ ಚಲನ ಚಿತ್ರರಂಗದಲ್ಲಿ ಯಶಸ್ವಿಯಾಗಿ ರಾಷ್ಟ್ರಪ್ರಶಸ್ತಿಯನ್ನು ಪಡೆಯಿತು. ಇದರಿಂದ ಇಂದಿರಾ ಕೀರ್ತಿ ಹಾಗೂ ಪ್ರಸಿದ್ಧಿಯ ಪಟ್ಟವನ್ನೇ ಏರಿದರೆಂದರೆ ಅತಿಶಯೋಕ್ತಿಯಲ್ಲ. ಗೌರವ, ಕೀರ್ತಿ, ಪ್ರಶಸ್ತಿಗಳು ಒಂದರ ಹಿಂದೊಂದು ಅವರನ್ನು ಅರಸಿಕೊಂಡು ಬಂದವು.

೧೯೭೬ರಲ್ಲಿ 'ಫಣಿಯಮ್ಮ' ಕಾದಂಬರಿಗೆ ಅಕಾಡೆಮಿಯ ಪ್ರಶಸ್ತಿ ಶ್ರೇಷ್ಠ ಲೇಖಕಿ ಎಂಬ ಗೌರವವೂ ಸಂದಿತು. ೧೯೮೦ರಲ್ಲಿ ಸಾಹಿತ್ಯ ಪರಿಷತ್ತು ಮುಂತಾದ ಸಂಘ–ಸಂಸ್ಥೆಗಳಿಂದ ಸನ್ಮಾನ, ದಾವಣಗೆರೆ ಕಲಾರಂಗ ಸಂಸ್ಥೆಯಿಂದ ನೆರವೇರಿದ ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನದ ಅಧ್ಯಕ್ಷತೆ ವಹಿಸಿದ ಖ್ಯಾತಿ ಇಂದಿರಾ ಅವರದು.

ಅವರ ಕೃತಿಗಳು ಸಾಮಾನ್ಯ ಓದುಗನಿಂದ ಹಿಡಿದು, ವಿಶ್ವವಿದ್ಯಾಲಯದ ಮಟ್ಟದಲ್ಲಿಯೂ ಅಧ್ಯಯನಕ್ಕೆ ಮನ್ನಣೆ ಪಡೆದಿವೆ. ಅವರ ಮೊವ್ಮೊದಲಿನ ಕಾದಂಬರಿಯೇ ಈಗ ಬೆಂಗಳೂರು ವಿಶ್ವವಿದ್ಯಾಲಯ ಬಿ.ಕಾಂ. ಮೊದಲನೆಯ ವರ್ಷಕ್ಕೆ ಪಠ್ಯಪುಸ್ತಕವಾಗಿರುವುದು ಗಮನಾರ್ಹ. ಅದೇ ರೀತಿ 'ಫಣಿಯಮ್ಮ' ಕರ್ನಾಟಕ ವಿಶ್ವವಿದ್ಯಾಲಯದ ಬಿ.ಎ. ಮೊದಲನೆಯ ವರ್ಷಕ್ಕೆ ಪಠ್ಯಪುಸ್ತಕವಾಗಿ ಆಯ್ಕೆಗೊಂಡಿದೆ. 'ಗೆಜ್ಜೆ ಪೂಜೆ' ಎಂಟು ಮುದ್ರಣ ಕಂಡಿದೆ. ಕರ್ನಾಟಕ ಸರ್ಕಾರದ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಕಟನೆಯ ಮಾಲೆಯಲ್ಲಿ ಪ್ರಕಟವಾಗಿದೆ. ಎಂದರೆ ಅದರ ಜನಪ್ರಿಯತೆ ಎಷ್ಟೆಂಬುದನ್ನು ಮನಗಾಣಬಹುದು. ಸಾಮಾನ್ಯವಾಗಿ ಅವರ ಎಲ್ಲ ಕೃತಿಗಳೂ ಐದು, ಆರು ಮುದ್ರಣ ಕಂಡಿವೆ.

ಅವರ ಕಾದಂಬರಿಗಳ ಪ್ರಸಿದ್ಧಿ ಕೇವಲ ಕರ್ನಾಟಕಕ್ಕೆ ಮಾತ್ರವಲ್ಲ ಭಾರತೀಯ ಇತರ ಭಾಷೆಗಳಿಗೂ ಪಸರಿಸಿದೆ. 'ತುಂಗಭದ್ರ', 'ಗೆಜ್ಜೆ ಪೂಜೆ' ತೆಲುಗಿಗೆ ಅನುವಾದವಾಗಿದ್ದರೆ, 'ಫಣಿಯಮ್ಮ' ಮಲೆಯಾಳಿ ಭಾಷೆಗೆ ಅನುವಾದಗೊಂಡಿದೆ. ಈಗ 'ಗೆಜ್ಜೆ ಪೂಜೆ' ಗುಜರಾತಿ ಭಾಷೆಗೆ ಅನುವಾದಗೊಳ್ಳುತ್ತಲಿದೆ.

ಸಮಾಜದ ಅಂತರಂಗವನ್ನು ಒಳಹೊಕ್ಕು ನೋಡುವ ವಿಶ್ಲೇಷಿಸುವ ಸಾಮರ್ಥ್ಯ ಇಂದಿರಾ ಅವರಿಗಿದೆ. ಅವರು ಸೂಕ್ಷ್ಮ ಸಂವೇದನಾಶೀಲರು. ಅವರು ಬರೆದ ಎಲ್ಲಾ ಕೃತಿಗಳು ಸಾಮಾಜಿಕ, ಇದು ಇಂದಿರಾ ಅವರ ಮನೋಧರ್ಮವನ್ನು ಸುಸ್ಪಷ್ಟ ಗೊಳಿಸುತ್ತದೆ.

ಸಮಾಜದ ಗಂಭೀರ ಸಮಸ್ಯೆಗಳ ಮೇಲೆ ಅವರು ಬೆಳಕು ಬೀರಿದ್ದಾರೆ. ಸಾಮಾಜಿಕ ಪ್ರಜ್ಞೆ ಹಾಗೂ ಕಾಳಜಿ ಇವರ ಕೃತಿಗಳಲ್ಲಿ ಕಂಡು ಬರುತ್ತದೆ. ಜೀವನದಲ್ಲಿ ಕಂಡು ಕೇಳಿದ ಘಟನೆಗಳು, ಹಾಗೂ ವ್ಯಕ್ತಿಗಳು ಇವರ ಕೃತಿಗಳ ವಸ್ತು. ಅವರು ವಾಸ್ತವತೆಗೆ ನಿಷ್ಠರು.

ಬರವಣಿಗೆಯಿಂದಲೇ ಬದುಕನ್ನು ನಿರ್ವಹಿಸಬೇಕಾದ ಅನಿವಾರ್ಯತೆ ಇಂದಿರಾ ಅವರಿಗಿರುವದರಿಂದ ಒಮ್ಮೊಮ್ಮೆ ಸಾಧಾರಣ ದರ್ಜೆಯ ಕತೆ, ಕಾದಂಬರಿಗಳೂ ಅವರಿಂದ ಹೊರ ಬಂದಿರುವವು. ಪತ್ರಿಕೆಗಳ, ಪ್ರಕಾಶಕರ ಆಗ್ರಹವೂ ಇದಕ್ಕೆ ಕಾರಣವಾಗಿರಬೇಕು.

'ತುಂಗಭದ್ರ', 'ಸದಾನಂದ', 'ಗೆಜ್ಜೆ ಪೂಜೆ', 'ಗಿರಿಬಾಲೆ', 'ಶಾಂತಿಧಾಮ', 'ತಪೋವನದಲ್ಲಿ', 'ಆತ್ಮಸಖಿ', 'ಸೂತ್ರಧಾರಿ', 'ತಗ್ಗಿನಮನೆ ಸೀತೆ', 'ಫಣಿಯಮ್ಮ' ಇವು ಇಂದಿರಾ ಅವರ ಸಾಹಿತ್ಯಿಕ ಸಿದ್ಧಿಯ ಅತ್ಯುತ್ತಮ ಉದಾಹರಣೆಗಳು. ತುಂಗಭದ್ರ, 'ಫಣಿಯಮ್ಮ', 'ತಗ್ಗಿನಮನೆ ಸೀತೆ', ಇವು ವೈಶಿಷ್ಟ್ಯ ಪೂರ್ಣವಾಗಿವೆ.

ಕಪಟಸನ್ಯಾಸಿಗಳ ವಂಚನೆಯನ್ನು ಬಯಲಿಗೆಳೆದ ದಿಟ್ಟ ಪ್ರಯತ್ನ ಕೈಗೊಂಡ ಲೇಖಕಿಯರಲ್ಲಿ ಇಂದಿರಾ ಮೊದಲಿಗರೆಂದು ಕಂಡುಬರುತ್ತದೆ.

ವಿಚಾರವಾದಿಗಳನ್ನು, ಆದರ್ಶ ಪುರುಷರನ್ನೂ, ಆದರ್ಶ ಗೃಹಿಣಿಯರನ್ನು ದಿಟ್ಟ ಮಹಿಳೆಯರನ್ನು, ಪರೋಪಕಾರಿಗಳನ್ನು, ಕಲೆಗಾಗಿ ಬದುಕಿದ ವ್ಯಕ್ತಿಗಳನ್ನು ಅವರು ತಮ್ಮ ಕೃತಿಗಳಲ್ಲಿ ಚಿತ್ರಿಸಿದ್ದಾರೆ.

ಹಾಗೆಯೇ ತಮ್ಮ ವರ್ತನೆಯಿಂದ, ಇತರರ ಬದುಕಿನಲ್ಲೂ ವಿಷಾದವನ್ನು ತುಂಬಿದ ವ್ಯಕ್ತಿಗಳನ್ನೂ ಅವರ ವರ್ತನೆಗೆ ಕಾರಣಗಳನ್ನೂ ತಮ್ಮ ಕೃತಿಗಳಲ್ಲಿ ವಿಶ್ಲೇಷಿಸಿದ್ದಾರೆ.

ಸಮಾಜದಲ್ಲಾಗುತ್ತಿರುವ ಬದಲಾವಣೆ ಕುಟುಂಬ ಜೀವನದಲ್ಲೂ ಪರಿಣಾಮ ವನ್ನುಂಟುಮಾಡುತ್ತಿರುವುದನ್ನು ಅವರು 'ಶಾಂತಿಧಾಮ' ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ. ಕುಟುಂಬದ ಸಮಸ್ಯೆಗಳ ಹೊಡತಕ್ಕೆ ಸಿಲುಕಿ, ಮನೋಸ್ಥೈರ್ಯದಿಂದ ಕಷ್ಟ-ನಿಷ್ಠುರಗಳನ್ನು ಎದುರಿಸಿದವರನ್ನೂ ಅವರ 'ತಾಳಿದವರು', 'ಬ್ರಹ್ಮಚಾರಿ' ಈ ಕಾದಂಬರಿಗಳಲ್ಲಿ ಚಿತ್ರಿಸಿದ್ದಾರೆ. ಕುಟುಂಬದಲ್ಲಿರುವ ಕ್ಷುಲ್ಲಕ ಜಗಳ ವ್ಯಕ್ತಿಗಳ ಜೀವನದಲ್ಲಿ ಒದಗಬಹುದಾದ ದುರಂತ ಅವರ 'ಸುಖಾಂತ' ಕಾದಂಬರಿಯಲ್ಲಿದೆ.

ಬಾಲ್ಯವಿವಾಹ, ವಿಧವಾವಿವಾಹ ಸಮಸ್ಯೆ, ಅಂಗವಿಕಲರ ಸಮಸ್ಯೆ, ಸ್ತ್ರೀ ಶೋಷಣೆ, ವರದಕ್ಷಿಣೆ, ಜಾತಿಸಮಸ್ಯೆ. ವೇಶ್ಯಾಸಮಸ್ಯೆ, ಸುಲಭ ಶ್ರದ್ಧೆಯ ಮುಗ್ಧ ಜನರನ್ನು ವಂಚಿಸುವ ಕಪಟ ಸನ್ಯಾಸಿಗಳ ವಂಚನೆ, ಇವುಗಳನ್ನು ಶ್ರೀಮತಿಯವರು ತುಂಗಭದ್ರ, ಸದಾನಂದ, ಫಣಿಯಮ್ಮ, ಗೆಜ್ಜೆಪೂಜೆ, ಜಾತಿಕೆಟ್ಟವಳು, ತಪೋವನ ದಲ್ಲಿ, ಈ ಕಾದಂಬರಿಗಳಲ್ಲಿ ಚಿತ್ರಿಸಿದ್ದಾರೆ.

ನಗರ ಜೀವನದಲ್ಲಿ ಮಧ್ಯಮ ವರ್ಗದ ಪ್ರಜೆಗಳ ಬದುಕು ಹಾಗೂ ಅವರ ಸಮಸ್ಯೆಗಳನ್ನು ಕುರಿತು 'ಟುಲೆಟ್' 'ಮನೆಕೊಟ್ಟು ನೋಡು.' ಈ ಕಾದಂಬರಿಗಳಲ್ಲಿ ಚಿತ್ರಿಸಿದ್ದಾರೆ. ಸಮಾಜದ ಆಗುಹೋಗುಗಳನ್ನು ತಮ್ಮ ಕೃತಿಗಳಲ್ಲಿ ಬಿಂಬಿಸಿದ್ದಾರೆ.

ಇಂದಿರಾ ಅವರ ಕತೆಗಳಿಗೆ ಸಮಾಜದಲ್ಲಿ ನಡೆಯುವ ಘಟನೆಗಳು ವಸ್ತುವಾಗಿವೆ. ಬದುಕಿನ ವೈವಿಧ್ಯವನ್ನು, ಸಮಾಜದ ರೀತಿ–ನೀತಿಗಳನ್ನು ಅವರ ಕತೆಗಳಲ್ಲಿ ಚಿತ್ರಿಸಿದುದನ್ನು ಕಾಣುತ್ತೇವೆ. 'ಹೆತ್ತೊಡಲು', 'ತಂದೆ', 'ವಿರಕ್ತ', 'ಅಜ್ಜಿ', 'ಮೌನ ಬಂಗಾರ', 'ಮೃತ್ಯುಂಜಯ', 'ಕಾಮಚ್ಚಿಯ ದೆವ್ವ', 'ತಳಿ', 'ನೇಮ', ಹೀಗೆಯೇ ಅವರ ಉತ್ತಮ ಕತೆಗಳ ಪಟ್ಟಿಯನ್ನು ಬೆಳೆಸುತ್ತ ಹೋಗಬಹುದು. 'ನಗಬೇಕು' ಹರಟೆಗಳ ಸಂಕಲನದಲ್ಲಿ ಲೇಖಕಿಯ ಮಾತುಗಾರಿಕೆ, ಹಾಸ್ಯಪ್ರಜ್ಞೆ ಗೋಚರಿಸಿದೆ.

ಅನುಭವಕುಂಜ : ಪ್ರವಾಸ ಸಾಹಿತ್ಯಕ್ಕೆ ಒಂದು ಉತ್ತಮ ಕಾಣಿಕೆ.

ಚಿತ್ರಭಾರತ : ಚಲನ ಚಿತ್ರರಂಗದ ಸಮಗ್ರ ವಿಚಾರವನ್ನೊಳಗೊಂಡ ಒಂದು ವಿಶಿಷ್ಟ ಕೃತಿ.

'ತುಂಗಭದ್ರ', 'ಸದಾನಂದ', 'ಕಲಾದರ್ಶಿ', 'ತಗ್ಗಿನಮನೆ ಸೀತೆ', 'ಗಿರಿಬಾಲೆ,' 'ಆತ್ಮಸಖಿ', 'ಜಾತಿಕೆಟ್ಟವಳು', 'ಫಣಿಯಮ್ಮ' ಈ ಮುಂತಾದ ಕಾದಂಬರಿಗಳಲ್ಲಿ ಮಲೆನಾಡು ಅತ್ಯಂತ ಸ್ವಾಭಾವಿಕವಾಗಿ ಮೂಡಿದೆ. ನಿಸರ್ಗ ಚೇತೋಹಾರಿಯಾಗಿ ಚಿತ್ರಿತವಾಗಿದೆ.

ಮಲೆನಾಡಿನ ಜನಜೀವನ, ಅವರ ನಂಬಿಕೆ, ಜಗಳ, ಆಟಗಳು, ವೇಷ_ಭೂಷಣ, ತಿಂಡಿ–ತಿನಿಸು, ಅತಿಥಿ ಸತ್ಕಾರ ಮುಂತಾದವುಗಳ ಸ್ವಾಭಾವಿಕವಾಗಿ ನಿರೂಪಿತವಾಗಿವೆ.

ತೋಟ–ಪಟ್ಟಿ, ಗಿಡ–ಗಂಟಿ, ಗುಡ್ಡ–ಬೆಟ್ಟ, ತುಂಗಾನದಿ, ಕಲ್ಲುಸಾರ, ರಾಮ ಮಂಟಪ, ರಾಮೇಶ್ವರ ದೇವಸ್ಥಾನ, ಹನುಮನಕೊಂಡ, ಕುರುವಳ್ಳಿ ಇವು ಮೇಲಿಂದ ಮೇಲೆ ಕಾಣಿಸಿಕೊಂಡು ಓದುಗರನ್ನೂ ಭಾವಪರವಶರನ್ನಾಗಿ ಮಾಡುತ್ತವೆ.

ಲೇಖಕಿ ಇಂದಿರಾ ಅವರಿಗೆ ಸೂಕ್ಷ್ಮ ನಿರೀಕ್ಷಣೆಯ ಕಣ್ಣಿರುವುದರಿಂದಲೇ, ಅವರ ಕೃತಿಗಳಲ್ಲಿ ಪಾತ್ರ ವೈವಿಧ್ಯವಿದೆ,

ಬದುಕನ್ನು ಕುರಿತು ಇಂದಿರಾ ಅವರು ತಾಳುವ ಒಲವು-ನಿಲವುಗಳನ್ನು ಅವರು ಚಿತ್ರಿಸಿದ ಬಾಳ ಸಂಜೆಯ ಹಿರಿಯ ವ್ಯಕ್ತಿಗಳಲ್ಲಿ ಗುರುತಿಸಬಹುದು. ಜೀವನದ ಬಗೆಗೆ ಗೌರವ, ಸಹನೆ, ಅಂತರಂಗದ ಐಶ್ವರ್ಯವನ್ನು ಕಳೆದುಕೊಳ್ಳದೇ ಬದುಕಿಗೆ ಮೈಯೊಡ್ಡಿ ಹೋರಾಡಿದವರನ್ನು ಅವರು ತಮ್ಮ ಕೃತಿಗಳಲ್ಲಿ ಚಿತ್ರಿಸಿದ್ದಾರೆ.

ಸ್ತ್ರೀ ಲೇಖನಿಗೇ ವಿಶಿಷ್ಟವಾದ ವರ್ಣನೆಗಳೂ, ಕೆಲವು ಸನ್ನಿವೇಶಗಳನ್ನು ಇಂದಿರಾ ಅವರ ಕೃತಿಗಳಲ್ಲಿ ಕಾಣಬಹುದು. ಬಾಣಂತಿಯ ವರ್ಣನೆ. ಹೆರಿಗೆಯ ಸಂದರ್ಭ ಗಳು, ಬಾಣಂತಿಯ ಕೋಣೆಯ ಚಿತ್ರಗಳು, ಮೈನೆರೆಯುವ ಸಂದರ್ಭ ಮುಂತಾದವು ಗಳನ್ನು ಉದಾಹರಣೆಯಾಗಿ ಗಮನಿಸಬಹುದು.

ಕಾದಂಬರಿಯಲ್ಲಿ ಮುಂದೆ ನಡೆಯಬಹುದಾದ ಘಟನೆಗಳನ್ನೂ ಶಕುನಗಳ ಮೂಲಕ ಸೂಚಿಸುವದು ಇಂದಿರಾ ಅವರ ವೈಶಿಷ್ಟ್ಯ. ಉದಾ : ದೀಪ ಆರುವದು, ಸೀನುವದು, ಹಲ್ಲಿ ನುಡಿಯುವದು, ಮಂಗಳವಾದ್ಯ ನುಡಿಯುವದು, ಮುಂತಾದ ಜಾನಪದ ನಂಬಿಕೆಗಳು ಅವರ ಕೃತಿಗಳಲ್ಲಿ ಹೇರಳವಾಗಿವೆ. ಗಾದೆ ಮಾತುಗಳನ್ನು ಪಡೆನುಡಿಗಳನ್ನು ಇಂದಿರಾ ಅವರು ಬಳಸುವದರಿಂದ ಅವರ ಗದ್ಯ ಶಕ್ತಿ ಸಂಪನ್ನ ವಾದುದಾಗಿದೆ.

ಮಲೆನಾಡ ಆಡುನುಡಿಯ ಸೊಗಡು ಅವರ ಕೃತಿಗಳ ಮುಖ್ಯ ಆಕರ್ಷಣೆ. ಮಲೆನಾಡಿನ ಮಳೆಗಾಲ, ಮಹಾಪೂರದ ವರ್ಣನೆಗಳು ಕಣ್ಣಿಗೆ ಕಟ್ಟುವಂತೆ ಚಿತ್ರಿತವಾಗಿವೆ.

ಪಾತ್ರಗಳ ಗುಣ-ಸ್ವಭಾವಗಳನ್ನು ಅವರ ನಡೆ-ನುಡಿಗಳಲ್ಲಿ ಬಿಂಬಿಸುತ್ತಾರೆ. ಅನುಕಂಪ, ವ್ಯಂಗ್ಯ, ಸಹಾನುಭೂತಿಪರ ತಿಳಿಹಾಸ್ಯ, ಅವರ ಕೃತಿಗಳಲ್ಲಿ ಮಿಂಚಿವೆ. ಅವರ ಕಾದಂಬರಿಗಳಲ್ಲಿ ಶೃಂಗಾರ ಸನ್ನಿವೇಶಗಳು ಮುಗ್ಧವಾಗಿವೆ.

ಮುಗ್ಧ, ಸರಳ, ನಿರಾಡಂಬರ ಶೈಲಿಯಿಂದ ಅವರು ಓದುಗರಿಗೆ ಆತ್ಮೀಯ ರಾಗಿದ್ದಾರೆ.

ಶ್ರೀಮಂತಿ ಇಂದಿರಾ ಅವರು ಸಂಪ್ರದಾಯ ವಿರೋಧಿ ಸಾಮಾಜಿಕ ಕಾಳಜಿ ಹೊಂದಿರುವವರು. ಪ್ರಾಮಾಣಿಕರು, ಕರ್ತವ್ಯನಿಷ್ಠರು, ಪ್ರಗತಿಪರಧೋರಣೆಯುಳ್ಳ ವರು, ಮಾನವೀಯಹೃದಯವನ್ನು ಉಳ್ಳವರು. ಮಾನವರಲ್ಲೇ ದೇವರು, ದಾನ ವರನ್ನು ಗುರುತಿಸುತ್ತಾರೆ. ಅಗೋಚರ ದೈವಶಕ್ತಿಯಲ್ಲೂ ಅವರಿಗೆ ನಂಬಿಕೆ ಇದೆ.

ಮನರಂಜನೆಯೊಂದೇ ಅವರ ಕಾದಂಬರಿಗಳ ಉದ್ದೇಶವಲ್ಲ. ಓದುಗರ, ಮನಸ್ಸಿನ ಮೇಲೆ ಒಳ್ಳೆಯ ಪರಿಣಾಮ ಬೀರಿ, ಸಮಾಜದ ಸಮಸ್ಯೆಗಳ ಮೇಲೆ ಬೆಳಕು ಬೀರಿ; ಪರಿಹಾರ ಸೂಚಿಸುವದೇ ಅವರ ಸಾಹಿತ್ಯ ರಚನೆಯ ಉದ್ದೇಶ.

ಅವರ ಎಲ್ಲ ಕೃತಿಗಳಲ್ಲೂ ಸಮಾಜದ ವಿವಿಧ ಸಮಸ್ಯೆಗಳನ್ನು ಕುರಿತ ಗಂಭೀರ ಚಿಂತನೆ ಇದೆ. ಸಂಪ್ರದಾಯ, ಮಡಿವಂತಿಕೆಯ ಪರಿಸರದಲ್ಲೇ ಬಾಲ್ಯವನ್ನು ಕಳೆದ ಇಂದಿರಾ ಅವರು ಬ್ರಾಹ್ಮಣ ಸಮಾಜದ ಅಜ್ಞಾನ, ಅಂಧಶ್ರದ್ಧೆ ಕುರುಡು ಕಟ್ಟಳೆಗಳನ್ನು, ಅವೈಚಾರಿಕತೆಯನ್ನು ತಮ್ಮ ಕೃತಿಗಳಲ್ಲಿ ಟೀಕಿಸಿದ್ದಾರೆ. ಪುರುಷ ಸಮಾಜದ ಟೊಳ್ಳು ಪ್ರತಿಷ್ಠೆಯನ್ನೂ ಪ್ರಶ್ನಿಸುವ ದಿಟ್ಟ ಪ್ರಯತ್ನ ಅವರ ಕೃತಿಗಳಲ್ಲಿದೆ. ಮತ-ಮಾನ್ಯಗಳು ಸ್ತ್ರೀಯರ ಬಗೆಗೆ ತೋರಿದ ಪಕ್ಷಪಾತ ನೀತಿಯನ್ನು, ಅಮಾನುಷ ವರ್ತನೆಯನ್ನೂ ಅವರ ಡಾಂಭಿಕತೆಯನ್ನು ಟೀಕಿಸಿದ್ದಾರೆ. 'ಫಣಿಯಮ್ಮ' ಇಡಿಯಾಗಿ ನಮ್ಮ ಸಮಾಜ ವ್ಯವಸ್ಥೆಗೆ ತೋರಿದ ಪ್ರತಿಭಟನೆಯಾಗಿದೆ. ಕಾಲ ಬದಲಾದಂತೆ ಸಮಾಜ ಬದಲಾಗಬೇಕೆಂಬುದನ್ನು ಅವರು ಸೂಚಿಸಿದ್ದಾರೆ.

ಆರೋಗ್ಯಕರ ಸಮಾಜದ ಒಳಗುಟ್ಟನ್ನು ತಮ್ಮ ಕೃತಿಗಳ ಮೂಲಕ ಅರುಹಿದ್ದಾರೆ. ಸಾರ್ವತ್ರಿಕ, ಶಾಶ್ವತ ಮಾನವೀಯ ಮೌಲ್ಯಗಳನ್ನು ತಮ್ಮ ಕೃತಿಗಳಲ್ಲಿ ಬಿಂಬಿಸಿದ್ದಾರೆ. ತಮ್ಮ ಕಾದಂಬರಿಗಳಿಂದ ಅವರು ಕನ್ನಡ ಸಾಹಿತ್ಯಕ್ಕೆ ನೀಡಿದ ಕೊಡುಗೆ ಮಹತ್ವದ್ದಾಗಿದೆ. ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕಾದಂಬರಿಕಾರ್ತಿಯಾಗಿ ಅವರು ವಿಶಿಷ್ಟ ಸ್ಥಾನವನ್ನು ಗಳಿಸಿದ್ದಾರೆ.

"ತುಂಗಭದ್ರ, ಸದಾನಂದ, ಗೆಜ್ಜೆಪೂಜೆ, ಮುಂತಾದ ಉತ್ತಮ ಕಾದಂಬರಿಗಳನ್ನು ಕನ್ನಡಕ್ಕೆ ನೀಡಿರುವ ಇಂದಿರಾ ಅವರು ಮನಸ್ಸು ಮಾಡಿದರೆ ಏನು ಬೇಕಾದರೂ ಸಾಧಿಸಬಹುದು.

ಇಂದಿರಾ ಇಂದು ನಾಡಿನ ಎಲ್ಲ ಮೂಲೆಯಲ್ಲೂ ಪರಿಚಿತರು. ಆಶ್ಚರ್ಯವೆಂದರೆ ಅವರ ಪ್ರಥಮ ಕಾದಂಬರಿ ಪ್ರಕಟವಾದಾಗ ಅವರಿಗೆ ನಲವತ್ತಾರು ವರ್ಷ. ಅನೇಕ ಲೇಖಕರಿಗೆ ವಯಸ್ಸಾದಂತೆ ಸೃಜನಶಕ್ತಿ ಕುಂದುತ್ತಾ ಬರುತ್ತದೆ ಎನ್ನುವದು ವಾಡಿಕೆಯ ಮಾತು, ಈ ವಾಡಿಕೆಯ ಮಾತಿಗೆ ಅಪವಾದವಾಗಿ ಬರವಣಿಗೆಯನ್ನು ಪ್ರಾರಂಭಿಸಿದವರು ಎಂ. ಕೆ. ಇಂದಿರಾ" ಹೀಗೆ ಅವರು ಒಬ್ಬ ಆಶ್ಚರ್ಯಕಾರಕ ವ್ಯಕ್ತಿಯೇ ಆಗಿದ್ದಾರೆ. ಈ ಎಲ್ಲ ಪ್ರಶಂಸೆಗಳಿಗೂ ಹಿರಿಯ ಕಾದಂಬರಿಕಾರ್ತಿ ಇಂದಿರಾ ಅವರು ಅರ್ಹರೇ ಆಗಿದ್ದಾರೆ.

ಅವರ ಸಾರ್ಥಕ ಬದುಕಿನ ಉನ್ನತ ಸಾಧನೆಯ ಗುಟ್ಟು, ದುಡಿತ, ಪರಿಶ್ರಮ. ಪ್ರತಿಭಾವಂತ ಹಿರಿಯ ಲೇಖಕಿ, ಖ್ಯಾತ ಕಾದಂಬರಿಕಾರ್ತಿ ಎಂದು ಕನ್ನಡಿಗರ ಮನೆ ಮಾತಾಗಿರುವ ಇಂದಿರಾ ಅವರನ್ನು ನಮ್ಮ ನಾಡಿನ ಗಣ್ಯ ಸಾಹಿತಿಗಳು ಪ್ರಶಂಸಿಸುತ್ತಾರೆ. ಇದು ಅವರ ಸಾಧನೆಯ ಮಹತ್ವವನ್ನೇ ತೋರಿಸುತ್ತದೆ.

"ಶ್ರೀಮತಿ ಎಂ. ಕೆ. ಇಂದಿರಾ ಅವರಿಗೆ ದಟ್ಟವಾದ ಜೀವನಾನುಭವವಿದೆ. ಅಂತೆಯೇ ಅವರ ಕೃತಿಗಳು ಪಾತ್ರ ವೈವಿಧ್ಯಕ್ಕೂ ಹೆಸರಾಗಿದೆ. ಮಲೆನಾಡಿನ ಆಡು

ಭಾಷೆಯ ಸೊಗಡನ್ನು ಮೊದಲ ಬಾರಿಗೆ ಕನ್ನಡಿಗರು ಸವಿದದ್ದು ಇವರ ಕೃತಿಗಳ ಮೂಲಕವೇ.[1] ಎಂದು ಖ್ಯಾತ ಲೇಖಕಿ ಅನುಪಮಾ ನಿರಂಜನ ಅವರು ಅಭಿಮಾನ ದಿಂದ ಹೇಳುತ್ತಾರೆ.

"ಕನ್ನಡ ಲೇಖಕಿಯರಲ್ಲಿ ಕಾದಂಬರಿ ಕ್ಷೇತ್ರದಲ್ಲಿ ಶ್ರೀಮತಿ. ಎಂ. ಕೆ. ಇಂದಿರಾ ಅವರದು ಒಂದು ವಿಶಿಷ್ಟಸ್ಥಾನ ಶಾಲಾ ಶಿಕ್ಷಣಕ್ಕೆ ಸಮ್ಮಂಧಿಸಿದಂತೆ ಕೇವಲ ಮಾಧ್ಯಮಿಕ ಎರಡನೆಯ ತರಗತಿಯವರೆಗೆ ಮಾತ್ರ ಶಿಕ್ಷಣ ಪಡೆದಿರುವ ಇಂದಿರಾ ಜೀವನಾನುಭವದ ವಿಶ್ವವಿದ್ಯಾಲಯದಲ್ಲಿ ಡಾಕ್ಟರೇಟ್ ಪಡೆಯಬಲ್ಲ ಸಾಮರ್ಥ್ಯ ಹೊಂದಿದ್ದಾರೆ"[2] ಎಂಬ ಅಭಿಪ್ರಾಯಗಳೂ ಬಂದಿರುವುದು ಗಮನಾರ್ಹ.

"ನಿಸರ್ಗವು ಇಂದಿರಾ ಅವರ ಕೃತಿ ರಚನೆಗೆ ಸೌಂದರ್ಯವನ್ನು ಉಡಿ ತುಂಬಿದ್ದಾಳೆ. ಅವಳು ತಾಯಿಯಾಗಿ ಜೋಗಳ ಹಾಡಿದ್ದಾಳೆ.

ಇಂದಿರಾ ಅವರು ಪಟ್ಟ ಪಾಡುಗಳೇ ಕತೆಗಳಾಗಿ ಪರಿಣಮಿಸುವುದರಿಂದ ಈ ಕತೆಗಳಿಗೆ ಒಂದು ಶಕ್ತಿ ಬಂದಿದೆ. ಇವರ ಕಾದಂಬರಿಗಳ ಜನನದ ಗುಟ್ಟು ಇದೇ ಆತ್ಮ ಸಂವೇದನೆ"[3]

"ಇಂದಿರಾ ಅವರು ಕರ್ನಾಟಕದ ಲೇಖಕಿಯರಲ್ಲಿ ಮನ್ನಣೆಯ ಸ್ಥಾನವನ್ನು ತಮ್ಮ ಕತೆ, ಕಾದಂಬರಿಗಳ ಗುಣಮಟ್ಟದಿಂದ ಪಡೆದಿದ್ದ ಸುದೀರ್ಘವಾದ ಜೀವನಾನುಭವ ಮತ್ತು ಸಾಧನೆಗಳಿಂದ ಅವರು ತಮ್ಮ ಕಥನ ಕಲೆಯಲ್ಲಿ ಉತ್ತರೋತ್ತರ ಪ್ರಗತಿಯನ್ನು ಹೊಂದುತ್ತಲಿರುವುದು ಹೆಮ್ಮೆಯ ಸಂಗತಿ. ಫಣಿಯಮ್ಮನನ್ನು ಅವರು ಕೇವಲ ಶೋಕದ ಮೂರ್ತಿಯನ್ನಾಗಿ ಚಿತ್ರಿಸದೇ ಒಂದು ಸಮಾಜೋಪಕಾರಿಯಾದ, ಸಂಪ್ರದಾಯವಂತಿಕೆಯಿಂದ ಹೊರಟಿದ್ದ ಸ್ತ್ರೀ ಶಕ್ತಿಯ ಪ್ರತೀಕವಾಗಿ ಚಿತ್ರಿಸಿದ್ದು ಅವರ ಹೆಚ್ಚಿನ ಸಾಧನೆ"[4] ಎಂದು ಸುಪ್ರಸಿದ್ಧ ಹಿರಿಯ ಸಾಹಿತಿ ಡಾ. ರಂ. ಶ್ರೀ ಮುಗಳಿಯವರು ಅಭಿಪ್ರಾಯ ಪಟ್ಟಿದ್ದಾರೆ.

---

1. ಡಾ. ಅನುಪಮಾ ನಿರಂಜನ ಅವರು 13–10–1984ರಂದು ನನಗೆ ಪತ್ರದ ಮೂಲಕ ತಿಳಿಸಿದ್ದಾರೆ.
2. ಸುದಾರ್ಥಿ—'ದ್ರುವ' (ಪತ್ರಿಕೆ) ಆಗಸ್ಟ 1976 ಪುಟ–61.
3. ಕೃಷ್ಣಮೂರ್ತಿ ಪುರಾಣಿಕರು 11–10–1984ರಂದು ನನಗೆ ಪತ್ರದ ಮೂಲಕ ತಿಳಿಸಿದ್ದಾರೆ.
1. ಡಾ. ರಂ. ಶ್ರೀ. ಮುಗಳಿ ಅವರು 22–10–1984ರಂದು ಬರೆದ ಪತ್ರದಲ್ಲಿ ಮೇಲಿನಂತೆ ತಿಳಿಸಿದ್ದಾರೆ.

ಇಂದಿರಾ ಅವರ ನಾಡು–ನುಡಿಯ ಸೇವೆಗೆ ಹಲವಾರು ಸಂಘ–ಸಂಸ್ಥೆಗಳು ತಮ್ಮ ಗೌರವವನ್ನು ಸಲ್ಲಿಸಿವೆ. ಸನ್ಮಾನಿಸಿವೆ.[1] ಸನ್ಮಾನ ಪತ್ರದ ಕೆಲವು ಮಾತುಗಳನ್ನು ಉದ್ಧರಿಸಿ ಈ ಪ್ರಬಂಧವನ್ನು ಸಮಾರೋಪಗೊಳಿಸಬಹುದು.

"ಪ್ರಕೃತಿ ಸೌಂದರ್ಯದ ನೆಲೆವೀಡಾದ ಮಲೆನಾಡಿನ ತೀರ್ಥಹಳ್ಳಿಯಲ್ಲಿ; ಕನ್ನಡ ಮಾತೆಯ ಹೆಮ್ಮೆಯ ಮಗಳಾಗಿ ಜನಿಸಿ ನಮ್ಮ ಮಲೆನಾಡಿನ ಕ್ಷೇತ್ರವಾದ ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರದಲ್ಲಿ ಬೆಳೆದು, ವಿವಾಹದ ನಂತರ ಪತಿಯ ಊರಾದ ಮಂಡಗದ್ದೆ ಸೇರಿದಿರಿ. ಮಲೆನಾಡಿನಲ್ಲಿ ತಾವು ಹುಟ್ಟಿ ಬಯಲು ಸೀಮೆಯಲ್ಲಿ ಬೆಳೆದ" ಮಲ್ಲಿಗೆ ಬಳ್ಳಿಯಾಗಿದ್ದೀರಿ.

...ಅನುಭವ ಪರಿಪಕ್ವವಾದ ನಂತರ ಕೃತಿಗಳ ರಚನೆಗೆ ಕೈ ಹಾಕಿದಿರಿ. ಈಗ ನಿಮ್ಮ ಪ್ರತಿಯೊಂದು ಕೃತಿಯೂ ಸಾಹಿತ್ಯಾಭಿಮಾನಿಗಳನ್ನೂ ಜನಮನವನ್ನೂ ತಮ್ಮದೇ ಆದ ವೈಶಿಷ್ಟ್ಯತೆಯಿಂದ ಸೂರೆಗೊಂಡಿವೆ.

ಕನ್ನಡ ದೇಶದಲ್ಲಿ ಜನಿಸಿ, ಕನ್ನಡಾಭಿಮಾನಿಗಳಾಗಿ ಕನ್ನಡ ಸಾಹಿತ್ಯ ಸೇವೆಗೆ ತಮ್ಮ ಜೀವನವನ್ನು ಮುಡಿಪಾಗಿಟ್ಟ ಕೀರ್ತಿ ಯಶಸ್ಸನ್ನು ಸಂಪಾದಿಸಿರುವದು ಮಹತ್ತರ ಸಾಧನೆ.

ನವಲೇಖಕ, ಲೇಖಕಿಯರನ್ನು ಕಂಡರೆ ಅಪಾರ ಆನಂದ ಮತ್ತು ಉತ್ಸಾಹ, ಇದು ಔದಾರ್ಯದ ಮುಖ್ಯ ಕುರುಹು ಸರಳ ಸುಂದರ ಶೈಲಿ, ಸುಂದರ ಭಾಷೆಯು ನಿಮ್ಮ ಸಾಹಿತ್ಯ ಪಂಡಿತ ಪಾಮರರನ್ನು ತಣಿಸುವಂತದಾಗಿರುತ್ತದೆ. ತಮ್ಮ ಸಾಹಿತ್ಯ ಪ್ರತಿ ಹೆಜ್ಜೆಯಲ್ಲಿ ಅಪಾರ ಯಶಸ್ಸು ಕೀರ್ತಿ ತಮ್ಮದಾಗಲೆಂದು ಹಾರೈಸುತ್ತೇವೆ" ಎಂದು ಅಜ್ಜಂಪುರದ ನವಚೇತನ ಕನ್ನಡ ಕಲಾವೃಂದದವರು ೩೧–೫–೧೯೭೧ ರಂದು ಲೇಖಕಿ ಇಂದಿರಾ ಅವರನ್ನು ಗೌರವಿಸಿ ಪ್ರೀತಿಯಿಂದ ಸನ್ಮಾಸಿದರು.

"ಕನ್ನಡ ನಾಡಿನ ಮಹಿಳಾ ಬರಹಗಾರ್ತಿಯರಲ್ಲಿ ತಾವು ಹಿರಿಯರೂ, ಪ್ರಖ್ಯಾತರೂ ಮತ್ತು ಜನಪ್ರಿಯರು ಕನ್ನಡ ನಾಡಿನ ಶ್ರೇಷ್ಠ ಕತೆಗಾರ್ತಿಯಾಗಿ, ಪ್ರಬಂಧಕಾರ್ತಿಯರಾಗಿ ಹಾಸ್ಯ ಬರಹಗಾರ್ತಿಯರಾಗಿ ಸಾರಸ್ವತ ಲೋಕದಲ್ಲಿ ಎದ್ದು ಕಾಣಿಸಿಕೊಂಡಿದ್ದೀರಿ. ಉತ್ತಮ ಜೀವನವನ್ನು, ಜೀವನದ ಆದರ್ಶವನ್ನು, ಹೆಣ್ಣು–ಗಂಡುಗಳ ಹೊಣೆಯನ್ನು ಚಿತ್ರಿಸುವಲ್ಲಿ ತಾವು ಸಿದ್ಧ ಹಸ್ತರು, ನಿಮ್ಮ ಕಾದಂಬರಿಗಳಲ್ಲಿ ಹೇರಳವಾಗಿ ಮಲೆನಾಡಿನ ಪರಿಸರದ ವರ್ಣನೆ, ಜನ ಜೀವನದ ಪಡಿಅಚ್ಚು, ಕಷ್ಟ–ನಷ್ಟ, ಸುಖ–ಭೋಗಗಳನ್ನು ಕಾಣುತ್ತೇವೆ. ತಮ್ಮ ಕತೆಗಳಲ್ಲೂ ಬದುಕಿನ ನೈಜ ಅನುಭವಗಳು ಎದ್ದು ಕಾಣುತ್ತವೆ. ತಮ್ಮ ಕಥಾಸಂಗ್ರಹ ಹಾಗೂ ಕಾದಂಬರಿಗೆ

1. ಅಜ್ಜಂಪುರ ನವಚೇತನ ಕನ್ನಡ ಕಲಾವೃಂದ. ಶಿವಮೊಗ್ಗ ಜಿಲ್ಲಾ ಸಾಹಿತ್ಯ ಸಮ್ಮೇಳನ. ಕರ್ನಾಟಕ ನಾಗರಿಕ ಸೇವಾ ಸಮಿತಿ ಆದರ್ಶ ಯುವತಿಯರ ಸಂಘ ಮುಂತಾದವರು.

ರಾಜ್ಯ ಸಾಹಿತ್ಯ ಅಕಾಡೆಮಿಯ ಪುರಸ್ಕಾರ ಬಂದಿರುವುದು ನಮ್ಮ ಹೆಮ್ಮೆಯ ಸಂಕೇತ. ಈ ಕೀರ್ತಿ ನಿಮ್ಮದಾದರೂ ನಮ್ಮ ಜಿಲ್ಲೆಯದು," ಎಂದು ಶಿವಮೊಗ್ಗ ಜಿಲ್ಲಾ ಸಾಹಿತ್ಯ ಸಮ್ಮೇಳನದಂದು (೧೪–೧–೧೯೭೧) ಅಭಿಮಾನದಿಂದ ಸನ್ಮಾನಿಸ ಲಾಯಿತು.

"ಕನ್ನಡ ಕುಲಪುತ್ರಿಯರೇ—ಕರ್ನಾಟಕದ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ಯಲ್ಲಿ ಶ್ರೀ. ಟಿ. ಸೂರ್ಯ ನಾರಾಯಣರಾವ್ ಮತ್ತು ಶ್ರೀಮತಿ ಬನಶಂಕರಮ್ಮನವರ ಪುತ್ರಿಯಾಗಿ ದಿನಾಂಕ : ೫–೧–೧೯೧೭ರಲ್ಲಿ ಜನಿಸಿದ ತಾವು ತಮ್ಮ ಹುಟ್ಟು ಹಬ್ಬದ ಸ್ವರ್ಣಮಹೋತ್ಸವವನ್ನು ದಾಟಿರುವಿರಿ. ತಮ್ಮ ಜೀವನದಲ್ಲಿ ರಸ–ವಿರಸ, ನೋವು–ನಲಿವು. ಸಿಹಿ–ಕಹಿ, ಭೋಗ–ಯೋಗಗಳನ್ನು ಅನುಭವಿಸಿರುವ ತಾವು ಬಾಳೆಂಬ ಮೂಸೆಯಲ್ಲಿ ಪುಟವಿಟ್ಟ ಬಂಗಾರದಂತಿದ್ದೀರಿ.

ತಾವು ತಮ್ಮ ಪಾಂಡಿತ್ಯಪೂರ್ಣ ಲೇಖನಿಯಿಂದ ಕನ್ನಡ ಕಂಪನ್ನು ಕರ್ನಾಟಕಕ್ಕೆ ಮಾತ್ರವಲ್ಲದೇ ರಾಷ್ಟ್ರಮಟ್ಟದವರೆಗೂ ಹಬ್ಬಿಸಿದ್ದೀರಿ. ನಿಮ್ಮಂತಹ ಕುಲಪುತ್ರಿ ಯರನ್ನು ಪಡೆದ ಕನ್ನಡ ಮಾತೆ ಧನ್ಯಳು.

ತಮಗೂ, ತಮ್ಮ ಕುಟುಂಬಕ್ಕೂ ಕನ್ನಡ ತಾಯಿ ಭುವನೇಶ್ವರಿ ಸನ್ಮಂಗಳವನ್ನು ಕರುಣಿಸಿ ಇನ್ನೂ ಹೆಚ್ಚಿನ ಕೃತಿಗಳನ್ನು ಬರೆಯುವ ಶಕ್ತಿ–ಸಾಮರ್ಥ್ಯಗಳನ್ನು ಕರುಣಿಸ ಲೆಂದು ಕನ್ನಡಿಗರ ಪರವಾಗಿ ಪ್ರಾರ್ಥಿಸುತ್ತೇವೆ"[1] ಎಂಬ ಮಾತುಗಳೊಂದಿಗೆ ಈ ಪ್ರಬಂಧವನ್ನು ಸಮಾರೂಪಗೊಳಿಸಬಹುದು,

---

1. ಕರ್ನಾಟಕ ನಾಗರೀಕರ ಸೇವಾ ಸಮಿತಿ–ಅಲಸೂರು, ಬೆಂಗಳೂರು. ದಿನಾಂಕ : 28–11–1981.

ಅನುಬಂಧಗಳು

I ಇಂದಿರಾ ಅವರ ಜೀವನದ ಪ್ರಮುಖ ಘಟನೆಗಳು

೧೯೧೭ ಜನನ

೧೯೨೮ ಮಾಧ್ಯಮಿಕ ಎರಡನೆಯ ತರಗತಿಯಲ್ಲಿ ಪಾಸಾದರು.

೧೯೨೯ ಮದುವೆ.

೧೯೩೬ ಹಿರಿಯ ಮಗ ಸುಬ್ಬರಾವ್ ಜನನ.

೧೯೩೭ ಪಿತೃವಿಯೋಗ.

೧೯೪೩-೪೪ ಈ ನಡುವೆ ಲೋಲಾಕ್ಷಿ ಮತ್ತೊಂದು ಮಗು ಜನನ; ಅದೇ ವರ್ಷ ಮರಣ.

೧೯೪೮ ಪ್ರಥಮಾ ಹಿಂದೀ ಪರೀಕ್ಷೆ.

೧೯೪೪ ಮಧ್ಯಮಾ ಹಿಂದೀ ಪರೀಕ್ಷೆ.

೧೯೪೬ ರಾಷ್ಟ್ರಭಾಷಾ ಹಿಂದೀ ಪರೀಕ್ಷೆ.

೧೯೪೬ ಮಂಜುನಾಥನ ಜನನ.

೧೯೪೯ ಶಂಕರ ಜನನ.

೧೯೫೨ ನಾಗೇಂದ್ರ ಜನನ.

೧೯೫೭ ಅನ್ನಪೂರ್ಣ ಜನನ.

೧೯೬೩ ತುಂಗಭದ್ರ ಕಾದಂಬರಿ ಪ್ರಕಟ.

೧೯೬೪ ತ್ರಿವೇಣಿ ಕಥಾ ಸ್ಪರ್ಧೆಯಲ್ಲಿ ವಿಶೇಷ ಬಹುಮಾನ.

೧೯೬೫ ತುಂಗಭದ್ರಕ್ಕೆ ಪ್ರಾದೇಶಿಕ ಉತ್ತಮಕತೆ ಪ್ರಶಸ್ತಿ.

೧೯೬೫ ಮಾತೃವಿಯೋಗ.

೧೯೬೫ ಸದಾನಂದ ಕಾದಂಬರಿ ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಥಮ ಬಹುಮಾನ.

೧೯೬೫ ಸಾಹಿತ್ಯ ಪರಿಷತ್ತಿಗೆ ಸದಸ್ಯತ್ವ.

೧೯೬೯ ಪತಿ ಕೃಷ್ಣರಾವ್ ಇವರ ನಿರ್ಗಮನ,

೧೯೭೦ ನವರತ್ನ ಕಥಾ ಸಂಕಲನಕ್ಕೆ ರಾಜ್ಯ ಸರಕಾರದ ಬಹುಮಾನ.

೧೯೭೦ ಗೆಜ್ಜೆಪೂಜೆ ಚಲನಚಿತ್ರದ ೧೦೦ನೇ ದಿನದ ಸಮಾರಂಭದಲ್ಲಿ ರಾಜ್ಯಪಾಲರಿಂದ ಬಹುಮಾನ.

೧೯೭೦ ಮೈಸೂರಿನಲ್ಲಿ ಗೆಜ್ಜೆಪೂಜೆ ಚಿತ್ರ ಸಮಾರಂಭ

೧೯೭೦ ಲೇಖಕಿಯರ ಸಂಘದ ಕತೆಗಳನ್ನು ಓದಿ ತೀರ್ಪು ನೀಡಿದರು.

೧೯೭೦ ಕಥಾ ಮಂಜುಷ ಕಾರ್ಯಕ್ರಮದಲ್ಲಿ ಭಾಷಣ.

೧೯೭೦ ಕನ್ನಡ ಲೇಖಕಿಯರ ಸಂಘದ ಅಶು ಕಾದಂಬರಿಕಾರ್ಯ ಕ್ರಮದ ಉದ್ಘಾಟನೆ.

೧೯೭೦ ಗೆಜ್ಜೆಪೂಜೆಯಲ್ಲಿ ಅಮೋಘ ಅಭಿನಯ ನೀಡಿದ 'ಕಲ್ಪನಾ' ಅವರಿಗೆ ಚಿನ್ನದ ಉಂಗುರವನ್ನು ಕಾಣಿಕೆಯಾಗಿ ಕೊಟ್ಟರು.

೧೯೭೦ ಸಪ್ಟೆಂಬರ್ ತಿಂಗಳಲ್ಲಿ ಇಂದಿರಾ ಅವರು ವಿವಿಧ ಕಾರ್ಯಕ್ರಮ ಗಳಿಗೆ ಮುಖ್ಯ ಅತಿಥಿಗಳಾಗಿದ್ದರು. ಮಾಳೂರು ಹಾಯಸ್ಕೂಲ ಕಾರ್ಯಕ್ರಮ, ಪಿ. ಸಿ. ಜಾಬೇನ ಕಾಲೇಜು ಕಾರ್ಯಕ್ರಮ, ಹೊಸಹಳ್ಳಿ ಹಾಯಸ್ಕೂಲ ಕಾರ್ಯಕ್ರಮ, ಲೇಖಕಿಯರ ಸಂಘದ ಕಾರ್ಯಕ್ರಮ.

೧೯೭೧ ಶಿವಮೊಗ್ಗ ಕಮಲಾ ನೆಹರೂ ಸಂಘದ ಕಾರ್ಯಕ್ರಮ.

೧೯೭೧ ಹುಮದ ಜಿಲ್ಲಾ ಸಮ್ಮೇಳದ ಮಹಿಳಾಗೋಷ್ಠಿ ಅಧ್ಯಕ್ಷತೆ ಮತ್ತು ಸನ್ಮಾನ.

೧೯೭೧ ಅಜ್ಜಂಪುರ, ಭದ್ರಾವತಿ, ಚಾಮರಾಜ ಪೇಟೆ, ವಿದ್ಯಾಸಂಸ್ಥೆ, ಇನ್ನೂ ಮುಂತಾದ ಸ್ಥಳಗಳಲ್ಲಿ ಸಂಘ ಸಂಸ್ಥೆಗಳಲ್ಲಿ ಅತಿಥಿ.

೧೯೭೪ ಪುತ್ರ ನಾಗೇಂದ್ರನ ಆಕಸ್ಮಿಕ ಸಾವು.

೧೯೭೫ ಇಂದಿರಾ ಗಾಂಧಿಯವರಿಗೆ (ಮಾಜಿ ಪ್ರಧಾನಿ) ಮನವಿಪತ್ರ ಸಲ್ಲಿಸಿದ್ದು. ಅದೇ ವರ್ಷ ಕನ್ನಡ ಸಂಘ, ಕರ್ನಾಟಕ ಮಿತ್ರವೃಂದ, ಕನ್ನಡ ಪಕ್ಷ, ಜಯನಗರದ ಕನ್ನಡ ಸಂಘ, ಕರ್ನಾಟಕ ಸಾಹಿತ್ಯ, ಸಂಘ, ವಿವೇಕಾನಂದ ಕನ್ನಡ ಸಂಘ, ಯುವಕ ಸಂಘದ ಕಾರ್ಯಕ್ರಮಗಳಲ್ಲಿ.

೧೯೭೬ ಮೈಸೂರಿನ ಮಾನಸಗಂಗೋತ್ರಿ ಆಮಂತ್ರಣ.

೧೯೭೬ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ. ಶಾಲು, ಕಂಚಿನ ಪದಕ, ೩೦೦೦ ನಗದು ಬಹುಮಾನ. ಆ ವರ್ಷದ ಶ್ರೇಷ್ಠ ಲೇಖಕಿ ಎಂದು ಪ್ರಶಸ್ತಿ–ಸನ್ಮಾನ.

೧೯೭೭ ಸೋದರ ಟಿ. ಎಸ್. ರಾಮಚಂದ್ರರಾವ್ ನಿಧನ.

೧೯೭೭ ಸಾಹಿತ್ಯ ಪರಿಷತ್ತಿನ ವಜ್ರಮಹೋತ್ಸವದ ಕಾರ್ಯಕ್ರಮ.

೧೯೭೭ ದಕ್ಷಿಣ ಭಾರತದ ಪ್ರವಾಸ (ಹದಿನೇಳು ದಿನ).

೧೯೭೮ ಫಣಿಯಮ್ಮ ಚಲನ ಚಿತ್ರಕ್ಕೆ ಲೊಕೇಶನ್ ನೋಡಲು ಪ್ರೇಮಾ ಕಾರಂತರೊಡನೆ ಮಲೆನಾಡಿನ ಸಂಚಾರ (ಪ್ರವಾಸ).

೧೬೭೮ ಕರ್ನಾಟಕ ಸರಕಾರ ಕನ್ನಡ ಸಾಹಿತ್ಯ ಸೇವೆಗೆ (೨೦೦ ರೂಪಾಯಿ) ಮಾಸಿಕ ವೇತನ ಕೊಡಮಾಡಿತು.

೧೯೭೯ ಕರ್ನಾಟಕ ಲೇಖಕಿಯರ ಸಂಘದ ಕಾರ್ಯಕ್ರಮದ ಉದ್ಘಾಟನೆ (೨೬-೧೧-೧೯೭೯).

೧೯೭೯ ಧರ್ಮಸ್ಥಳದ ಸಮ್ಮೇಳನಕ್ಕೆ ವಿಶೇಷ ಆಮಂತ್ರಣ.

೧೯೮೦ ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನ 'ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಇವರ ಅನುಪಮ ಸಾಹಿತ್ಯ ಸೇವೆಗೆ ಸನ್ಮಾನ.

೧೯೮೧ ಚಿಕ್ಕಮಗಳೂರಿನಲ್ಲಿ ನಡೆದ ೫೩ ನೆಯ ಕನ್ನಡ ಸಾಹಿತ್ಯ ಸಮ್ಮೇಳನ ದಲ್ಲಿ ರಾಘವಾಂಕ ಪುಸ್ತಕದ ಬಿಡುಗಡೆ.

೧೯೮೧ ತೊರೆ ಹಳ್ಳಿಯಲ್ಲಿ 'ಫಣಿಯಮ್ಮ' ಚಿತ್ರ ಮೂಹರ್ತ ಇಂದಿರಾ ಅವರಿಂದ.

೧೯೮೧ ದಾವಣಗೆರೆ ಕಲಾರಂಗ ಸಂಸ್ಥೆಯ 'ಅಖಿಲ ಕರ್ನಾಟಕ ಲೇಖಕಿ ಯರ ಸಾಹಿತ್ಯ ಸಮ್ಮೇಳನದ' ಅಧ್ಯಕ್ಷೆ.

೧೯೮೧ ವಿಶ್ವಕನ್ನಡ ಸಾಹಿತ್ಯ ಸಮ್ಮೇಳನದ ಉಪಸಮಿತಿಗೆ ಸದಸ್ಯರನ್ನಾಗಿ ನೇಮಿಸಿತು.

೧೯೮೧ ಕರ್ನಾಟಕ ಸರಕಾರದಿಂದ ೫೦೦ ರೂ. ಮಾಸಿಕ ವೇತನ.

೧೯೮೨ ಗುಲ್ಬರ್ಗಾದಲ್ಲಿ ನಡೆದ ಲೇಖಕಿಯರ ಎರಡನೆಯ ಸಮ್ಮೇಳನದಲ್ಲಿ ಕಾದಂಬರಿ ಗೋಷ್ಠಿಗೆ ಅಧ್ಯಕ್ಷೆ.

೧೯೮೩ ಫಣಿಯಮ್ಮ ಚಿತ್ರಕತೆಗೆ ೪೦೦೦ ಬಹುಮಾನ (ಸರಕಾರದಿಂದ)

೧೯೮೩ ತೀವ್ರ ಅನಾರೋಗ್ಯ ಮತ್ತೆ ಚೇತರಿಸಿಕೊಂಡರು.

೧೯೮೪ (ಜೂನ್) ಲೇಖಕಿಯರ ಮೂರನೆಯ ಸಮ್ಮೇಳನದಲ್ಲಿ ಸನ್ಮಾನ

೧೯೮೪ (ಅಕ್ಟೋಬರ್) ಸೂತ್ರಧಾರಿ ಕಾದಂಬರಿಯ ಬಿಡುಗಡೆ ಸಮಾರಂಭ.

೧೯೮೫ ಸಹೋದರ ಟಿ. ಎಸ್. ಆನಂದರಾವ್ ನಿಧನ.

೧೯೮೫ ಮೊಮ್ಮಗಳ ಜನನ (ಅನ್ನಪೂರ್ಣ ಅವರಿಗೆ ಎರಡನೆ ಮಗಳು)

೧೯೯೧ ೭೫ನೇ ವರ್ಷದಲ್ಲಿ ಪ್ರವೇಶಿಸುತ್ತಿರುವ ಇಂದಿರಾ ಅವರಿಗೆ 'ಸುರಗಿ' ಅಭಿನಂದನ ಗ್ರಂಥ ಸಮರ್ಪಣೆ, ಹಾಗೂ "ಎಂ. ಕೆ. ಇಂದಿರಾ ಸಮಗ್ರ ಅಧ್ಯಯನ" ಪುಸ್ತಕ ಬಿಡುಗಡೆ.

ಶ್ರೀಮತಿ ಇಂದಿರಾ ಅವರ ದಿನಚರಿಯ ಆಧಾರದಿಂದ.

II ಕೃತಿಗಳು

(ಅವುಗಳ ಪ್ರಥಮ ಮುದ್ರಣದ ಕಾಲಾನುಕ್ರಮ ಪಟ್ಟಿ ಹೀಗಿದೆ)

(ಅ) ಕಾದಂಬರಿಗಳು

ಕೃತಿಯ ಹೆಸರು	ಪ್ರಕಟವಾದ ವರ್ಷ	ಪ್ರಕಾಶನ
೧. ತುಂಗಭದ್ರ	೧೯೬೩	ಮನೋಹರ ಗ್ರಂಥಮಾಲಾ, ಧಾರವಾಡ
೨. ಸದಾನಂದ	೧೯೬೫	" "
೩. ಗೆಜ್ಜೆ ಪೂಜೆ	೧೯೬೬	ಹೇಮಂತ ಸಾಹಿತ್ಯ, ಬೆಂಗಳೂರು
೪. ಮನೆತುಂಬಿದ ಮಡದಿ	೧೯೬೬	ಸುರೇಶ ಪ್ರಕಾಶನ, ಬೆಂಗಳೂರು
೫. ಬ್ರಹ್ಮಚಾರಿ	೧೯೬೭	ಗೀತಾ ಪಬ್ಲಿಕೇಶನ್ಸ್, ಬೆಂಗಳೂರು
೬. ಹೆಣ್ಣಿನ ಆಕಾಂಕ್ಷೆ	೧೯೬೮	ಹೇಮಂತ ಸಾಹಿತ್ಯ, ಬೆಂಗಳೂರು
೭. ತಾಪದಿಂದತಂಪಿಗೆ	೧೯೬೮	ಎಸ್. ಆರ್. ಪ್ರಕಾಶನ, ಬೆಂಗಳೂರು
೮. ಟುಲೆಟ್	೧೯೬೮	" "
೯. ತಪೋವನದಲ್ಲಿ	೧೯೬೮	ಗೀತಾ ಪಬ್ಲಿಕೇಶನ್ಸ್, ಬೆಂಗಳೂರು
೧೦. ಗಿರಿಬಾಲೆ	೧೯೬೯	ಎಸ್. ಆರ್. ಪ್ರಕಾಶನ, ಬೆಂಗಳೂರು
೧೧. ಡಾಕ್ಟರ್	೧೯೬೯	" "
೧೨. ಕಲಾದರ್ಶಿ	೧೯೬೯	ರಾಜಲಕ್ಷ್ಮಿ ಪ್ರಕಾಶನ, ಬೆಂಗಳೂರು
೧೩. ನಾಗವೀಣಾ	೧೯೬೯	ಹಂಸಧ್ವನಿ ಪ್ರಕಾಶನ, ಬೆಂಗಳೂರು
೧೪. ಬಿದಿಗೆ ಚಂದ್ರಮ ಡೊಂಕು	೧೯೬೯	ಪ್ರಕಾಶ ಸಾಹಿತ್ಯ, ಬೆಂಗಳೂರು
೧೫. ಮುಸುಕು	೧೯೭೦	" "
೧೬. ಆತ್ಮಸಖಿ	೧೯೭೧	" "
೧೭. ಚಿದ್ವಿಲಾಸ	೧೯೭೧	ಹೇಮಂತ ಸಾಹಿತ್ಯ, ಬೆಂಗಳೂರು
೧೮. ಯಾರು ಹಿತವರು	೧೯೭೨	ರವೀಂದ್ರ ಪುಸ್ತಕಾಲಯ, (ಕಾರ್ಗಲ್)

ಕೃತಿಯ ಹೆಸರು	ಪ್ರಕಟವಾದ ವರ್ಷ	ಪ್ರಕಾಶನ
೧೯. ಶಾಂತಿಧಾಮ	೧೯೭೨	ಸುದರ್ಶನ ಪ್ರಕಾಶನ,
೨೦. ಸುಖಾಂತ	೧೯೭೩	ವಾಸವಾಂಬಾ ಪ್ರಕಾಶನ, ಬೆಂಗಳೂರು
೨೧. ಜಾತಿಕೆಟ್ಟವಳು	೧೯೭೩	ಹೇಮಂತ ಸಾಹಿತ್ಯ, ಬೆಂಗಳೂರು
೨೨. ಕತೆಗಾರ	೧೯೭೪	ವಾಸವಾಂಬಾ ಪ್ರಕಾಶನ, ಬೆಂಗಳೂರು
೨೩. ಕೂಚುಭಟ್ಟ	೧೯೭೫	ಹೇಮಂತ ಪ್ರಕಾಶನ, "
೨೪. ವರ್ಣಲೀಲೆ	೧೯೭೫	ವಾಸವಾಂಬಾ ಪ್ರಕಾಶನ, "
೨೫ ಹಸಿವು	೧೯೭೫	ಇಂದಿರಾ ಪ್ರಕಾಶನ, "
೨೬. ಮಧುವನ	೧೯೭೬	ಹೇಮಂತ ಸಾಹಿತ್ಯ, ಬೆಂಗಳೂರು
೨೭. ಜಾಲ	೧೯೭೬	ಪ್ರಕಾಶ ಸಾಹಿತ್ಯ, ಬೆಂಗಳೂರು
೨೮. ಘಣೆಯಮ್ಮ	೧೯೭೬	ಮನೋಹರ ಗ್ರಂಥಮಾಲಾ, ಧಾರವಾಡ
೨೯. ಗುಂಡ	೧೯೭೭	ಪ್ರಕಾಶ ಸಾಹಿತ್ಯ, ಬೆಂಗಳೂರು
೩೦. ಮನೆ ಕೊಟ್ಟು ನೋಡಿ	೧೯೭೮	" "
೩೧. ಹೂಬಾಣ	೧೯೭೮	" "
೩೨. ಒಂದೇ ನಿಮಿಷ	೧೯೭೮	" "
೩೩. ಆಭರಣ	೧೯೭೯	" "
೩೪. ನೂರೊಂದು ಬಾಗಿಲು	೧೯೮೦	ಹೇಮಂತ ಸಾಹಿತ್ಯ, ಬೆಂಗಳೂರು
೩೫. ಅಮರಾವತಿ	೧೯೮೦	ಎಸ್. ಆರ್. ಪ್ರಕಾಶನ, "
೩೬. ರಸವಾಹಿನಿ	೧೯೮೦	ಪ್ರಕಾಶ ಸಾಹಿತ್ಯ, ಬೆಂಗಳೂರು
೩೭. ಪೂರ್ವಾಪರ	೧೯೮೧	ರವೀಂದ್ರ ಪುಸ್ತಕಾಲಯ, (ಕಾರ್ಗಲ್)
೩೮. ತಾಳಿದವರು	೧೯೮೨	ಹೇಮಂತ ಸಾಹಿತ್ಯ, ಬೆಂಗಳೂರು
೩೯. ತಗ್ಗಿನ ಮನೆ ಸೀತೆ	೧೯೮೩	ಪ್ರಕಾಶ ಸಾಹಿತ್ಯ, "
೪೦. ಮನೋಮಂದಿರ	೧೯೮೩	" "
೪೧. ಸೂತ್ರಧಾರಿ	೧೯೮೪	ಜೈಸು ಪ್ರಕಾಶನ, ಶಿಕಾರಿಪುರ

(ಬ) ಕಥಾಸಂಕಲನಗಳು ಮತ್ತು ಇತರ ಕೃತಿಗಳು

	ಕಥಾಸಂಕಲನಗಳು	ಪ್ರಕಟವಾದ ವರ್ಷ	ಪ್ರಕಾಶನ	
೪೨.	ನವರತ್ನ	೧೯೬೮	ಹೇಮಂತ ಸಾಹಿತ್ಯ,	ಬೆಂಗಳೂರು
೪೩.	ನಗಬೇಕು (ಹರಟೆಗಳು)	೧೯೬೮	ಎಸ್. ಆರ್. ಪ್ರಕಾಶನ	”
೪೪.	ಅಂಬರದ ಅಪ್ಸರೆ	೧೯೬೯	ಬಾಲಾಜಿ ಸಾಹಿತ್ಯ,	”
೪೫.	ನವಜೀವನ	೧೯೭೦	ಹೇಮಂತ ಸಾಹಿತ್ಯ,	”
೪೬.	ಸ್ಫೂರ್ತಿ	೧೯೭೧	ಪ್ರಕಾಶ ಸಾಹಿತ್ಯ,	”
೪೭.	ದಶಾವತಾರ	೧೯೭೩	ಹೇಮಂತ ಸಾಹಿತ್ಯ,	ಬೆಂಗಳೂರು
೪೮.	ಕಲ್ಪನಾ ವಿಲಾಸ	೧೯೭೪	ಪ್ರಕಾಶ ಸಾಹಿತ್ಯ,	”
೪೯.	ಸುಸ್ವಾಗತ	೧೯೭೬	”	”
೫೦.	ಪವಾಡ	೧೯೭೭	”	”
೫೧.	ಪೌರ್ಣಿಮೆ	೧೯೮೦	ಇಂದಿರಾ ಪ್ರಕಾಶನ,	”
೫೨.	ಮೋಹನ ಮಾಲೆ	೧೯೮೦	ಸುರೇಶ ಪ್ರಕಾಶ,	”
೫೩.	ಕವಲು	೧೯೮೦	ಪ್ರಕಾಶ ಸಾಹಿತ್ಯ,	ಬೆಂಗಳೂರು
೫೪.	ಅನುಭವ ಕುಂಜ (ಪ್ರವಾಸಕಥನ)	೧೯೮೧	ಹೇಮಂತ ಸಾಹಿತ್ಯ,	”
೫೫.	ಕನ್ಯಾಕುಮಾರಿಯವರೆಗೆ	೧೯೮೩	ಹೇಮಂತ ಸಾಹಿತ್ಯ,	”
೫೬.	ಚಿತ್ರಭಾರತ (ಚಲನಚಿತ್ರಚರಿತ್ರೆ)	೧೯೮೫	”	”
೫೭.	ಚಿತ್ರಶಿಲ್ಪಿ ಪುಟ್ಟಣ್ಣ ಕಣಗಾಲ	೧೯೮೬	”	”
೫೮.	ಹಂಸಗಾನ	೧೯೯೧	”	”

ಶ್ರೀಮತಿ ಇಂದಿರಾ ಅವರ ಇದುವರೆಗೆ ಬರೆದ ಕೃತಿಗಳ ಸಂಖ್ಯೆ ಒಟ್ಟು ೫೮ ಇರುತ್ತವೆ.

(ಕ) ಲೇಖನಗಳು

ಸತಿ ಅನಸೂಯಾ (ತ್ರಿವೇಣಿ) ಕಸ್ತೂರಿ ಅಕ್ಟೋಬರ್ ೧೯೬೩.

ಮರೆಯಲ್ಲಿ ನಿಂತ ಮಹಾನುಭಾವ (ಟಿ. ಎಸ್. ವೆಂಕಣ್ಣಯ್ಯ)
 'ಕಸ್ತೂರಿ'. ಎಪ್ರಿಲ್–೧೯೬೫.

ನಮ್ಮೆಲ್ಲರ ಪ್ರತಿನಿಧಿ (ತಿರುಮಲೆ ರಾಜಮ್ಮನವರನ್ನು ಕುರಿತು)
 ಎಚ್. ಎಸ್. ಪಾರ್ವತಿ (ಸಂ.) 'ಭಾರತಿ'
 (ತಿರುಮಲೆ ರಾಜಮ್ಮ ಸನ್ಮಾನ ಸಮಿತಿ)

ಲೋಕಪಾವನೆ (ಕೃಷ್ಣಮೂರ್ತಿ ಪುರಾಣಿಕರ ಪತ್ನಿ ಗಂಗಾಬಾಯಿ)
ವಿದ್ಯಾಪುರಾಣಿಕ (ಸಂ.) 'ಸೌಭಾಗ್ಯವತಿ'.
ನವಂಬರ್ ೧—ಯಾತ್ರಿಕ ಡಿಶೆಂಬರ್—೧೯೭೫.

ಮಲೆನಾಡ ಬದುಕು—'ಉತ್ಥಾನ' ಜನವರಿ—೧೯೭೦ ಸಂಕ್ರಾಂತಿ ಸಂಚಿಕೆ.

ಸಾಹಿತ್ಯಯಾತ್ರೆ (ಯಾತ್ರಿಕ ೧೯೭೨ ದೀಪಾವಳಿ ಸಂಚಿಕೆ)

ಕರ್ನಾಟಕ ಸಮೃದ್ಧಿಯನ್ನು ಕುರಿತು ನನ್ನ ಕನಸು.
('ಕರ್ನಾಟಕ ಸಮೃದ್ಧಿ ಪರಿಷತ್' ಪತ್ರಿಕೆ)

III ಸಾಹಾಯಕ ಸಾಹಿತ್ಯ

ಕೃಷ್ಣಮೂರ್ತಿ ಕೆ. ಎಸ್. (ಅನುವಾದಿತ) :
ಭಾರತೀಯ ಮಹಿಳೆಯರ ಮುನ್ನಡೆ (೧೯೬೦)
ಗೀತಾ ಬುಕ್ ಹೌಸ್, ಮೈಸೂರು.

ಕಾಮತ್ ಸೂರ್ಯನಾಥ (ಸಂ.) :
ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು ೧೯೭೭
ಗೀತಾ ಬುಕ್ ಹೌಸ್, ಮೈಸೂರು.

ಕಿತ್ತೂರ ಕೃಷ್ಣಮೂರ್ತಿ :
ಗಳಗನಾಥರು ಮತ್ತು ಅವರ ಕಾದಂಬರಿಗಳು ೧೯೭೮
ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

ಕುಲಶೇಖರ ಮತ್ತು ವೈ. ಕೆ. ಸಂಧ್ಯಾಶರ್ಮ (ಸಂ.) :
ನಮ್ಮ ಲೇಖಕಿಯರು ೧೯೮೨
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಕುವೆಂಪು :
ಮಲೆನಾಡಿನ ಚಿತ್ರಗಳು ೧೯೪೬
ಕಾವ್ಯಾಲಯ ಪ್ರಕಾಶನ ಮೈಸೂರು.

ಕುರ್ತಕೋಟಿ ಕೆ. ಡಿ. :
ಯುಗಧರ್ಮ ಹಾಗೂ ಸಾಹಿತ್ಯದರ್ಶನ ೧೯೬೨
ಮನೋಹರ ಗ್ರಂಥಮಾಲೆ, ಧಾರವಾಡ.

ಗಾಂಧಿ ಗ್ರಂಥಮಾಲೆ :
(ಗಾಂಧೀಜಿಯವರು ಮಹಿಳೆಯರನ್ನು ಕುರಿತು ಬರೆದ ಪತ್ರಗಳು) :
ಮಹಿಳೆಯರು ೧೦, ೧೯೬೯
ಗಾಂಧಿಸ್ಮಾರಕ ನಿಧಿ, ಕರ್ನಾಟಕ ಶಾಖೆ.

ಗಿರಡ್ಡಿ ಗೋವಿಂದರಾಜ :
ಕಾದಂಬರಿ ವಸ್ತು ಮತ್ತು ತಂತ್ರ ೧೯೭೬
ಬಾನೂ ಪ್ರಕಾಶನ, ಮೈಸೂರು ರಸ್ತೆ, ಬೆಂಗಳೂರು,

ಗುಲ್ವಾಡಿ ವೆಂಕಟರಾಯರು :
ಇಂದಿರಾಬಾಯಿ ೧೯೬೨
ಕನ್ನಡ ಪ್ರಪಂಚ ಪ್ರಕಾಶನ—ಕದ್ರಿ ಮಂಗಳೂರು.

ಚೆನ್ನಂಗೋಡ್ ಶ್ರೀಕೃಷ್ಣ (ಸಂ.) ಸ್ವರ್ಣ :
ಸ್ವರ್ಣ ಮಹೋತ್ಸವದ ಸ್ಮರಣ ಸಂಚಿಕೆ, ಸ್ವರ್ಣಮಹೋತ್ಸವ ಸಮಿತಿ, ಖಾಸಗಿ ಹಿರಿಯ ಪ್ರಾಥಮಿಕ ಶಾಲೆ, ಮುಚ್ಚೂರು ಪದವು—ದಕ್ಷಿಣ ಕನ್ನಡ.

ತ್ರಿವೇಣಿ :
'ಕಂಕಣ' ೧೯೭೪, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು

ತ್ರಿವೇಣಿ :
'ಹೂವುಹಣ್ಣು' ೧೯೬೯, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು

ನಾಗಭೂಷಣಸ್ವಾಮಿ ಓ. ಎಲ್. :
ವಿಮರ್ಶೆಯ ಪರಿಭಾಷೆ ೧೯೮೩
ಪರಿಸರ ಸಾಹಿತ್ಯ ಪ್ರಕಾಶನ, ಶಿವಮೊಗ್ಗ

ನಾಯಕ ಹಾ.ಮಾ., ಸಿ.ಪಿ. ಕೃಷ್ಣಕುಮಾರ,
ಟಿ.ವಿ. ವೆಂಕಟಾಚಲಶಾಸ್ತ್ರಿ (ಸಂ.) :
'ಸ್ವಸ್ತಿ' ತ.ಸು, ಶಾಮರಾಯರ ಅಭಿನಂದನ ಗ್ರಂಥ
೧೯೮೩ ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು.

ನಿರಂಜನ :
ರಂಗಮ್ಮನ ವಠಾರ ೧೯೭೬
ಪ್ರಕಾಶಕರು : ತೇಜಸ್ವಿನಿ ನಿರಂಜನ, ಕಥಾಸಾಹಿತ್ಯ
೫೧೫, ೭ನೇ ಮುಖ್ಯ ರಸ್ತೆ, ೫ನೇ ಬ್ಲಾಕ್, ಬೆಂಗಳೂರು.

ಪಾರ್ವತಿ ಹೆಚ್. ಎಸ್. :

ಭಾರತಿ, ತಿರುಮಲೆ ರಾಜಮ್ಮನವರ ಅಭಿನಂದನಗ್ರಂಥ

ಪುರಾಣಿಕ ವಿದ್ಯಾ (ಸಂ.) **:**

ಸೌಭಾಗ್ಯವತಿ ೧೯೭೮ ವಿದ್ಯಾಗೌರಿ ಪ್ರಕಾಶನ, ಗೋಕಾಕ.

ಭಟ್ಟ ಬಿ. ಎಸ್. :

ರಾಜಾರಾಮ ಮೋಹನರಾಯ ೧೯೭೬
ಭಾರತೀ ಪ್ರಕಾಶನ ಮೈಸೂರು.

ಮಹಿಷಿ ಸರೋಜಿನಿ :

ಕರ್ನಾಟಕ ಕವಯಿತ್ರಿಯರು ೧೯೬೫
ಎಂ. ಬಿ. ತುರಮರಿ ಕ. ಸ. ಸಾಹಿತ್ಯ ಸಂಘ ಲಿ. ಧಾರವಾಡ

ರಂಗಣ್ಣ ಎಸ್. ವಿ. :

ಶೈಲಿ ೧-೨-೩, ೧೯೭೧ ಕಾವ್ಯಾಲಯ ಪ್ರಕಾಶಕರು, ಮೈಸೂರು.

ರಘುಸುತ (ಸಂ.) **:**

ನಾಡಿಗೇರ ಸಂಭಾವನಾ ಗ್ರಂಥ ೧೯೭೨,
ಹೇಮಂತ ಸಾಹಿತ್ಯ, ಬೆಂಗಳೂರು.

ವಿಮಲ ಎಸ್. ವಿ. :

ತ್ರಿವೇಣಿ, ವ್ಯಕ್ತಿ ಮತ್ತು ಸಾಹಿತ್ಯ ೧೯೭೮
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಶಿವರುದ್ರಪ್ಪ ಜಿ. ಎಸ್. (ಸಂ.)

ಮಹಿಳೆ ಮತ್ತು ಕನ್ನಡ ಸಾಹಿತ್ಯ ೧೯೭೯
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು
ಸಾಹಿತ್ಯ ವಾರ್ಷಿಕ ೧೯೭೧ ಬೆಂ. ವಿ. ವಿ. ಬೆಂಗಳೂರು
" ೧೯೭೨ "
" ೧೯೭೪ "
" ೧೯೭೫ "
" ೧೯೭೬ "

ಶೇಷಗಿರಿರಾವ್ ಎಲ್. ಎಸ್.

ಕಾದಂಬರಿ ಮತ್ತು ಸಾಮಾನ್ಯ ಮನುಷ್ಯ
೧೯೫೭ ಸಾಹಿತ್ಯ ಪರಿಷತ್ತು, ಬೆಂಗಳೂರು
ಹೊಸಗನ್ನಡ ಸಾಹಿತ್ಯ ೧೯೭೫
ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ

ಸುಧಾರ್ಥಿ

ತ್ರಿವೇಣಿ ಕೃತಿಗಳ ಒಳನೋಟ (೧೯೭೩)
ಪ್ರತಿಭಾಕಲಾ ಪರಿಷತ್ತು, ಬೆಂಗಳೂರು

ಹಂಪನಾ (ಸಂ)

ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನ
೧೯೮೨ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಹಾವನೂರು ಶ್ರೀನಿವಾಸ

ಹೊಸಗನ್ನಡದ ಅರುಣೋದಯ ೧೯೭೪
ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು
ಮೈಸೂರು ವಿಶ್ವವಿದ್ಯಾಲಯ.

ಇಂಗ್ಲೀಷ ಗ್ರಂಥ

Jhon Middleton Marry

'Problem of Style' 1967
Oxford University Press, London

ಲೇಖನಗಳು

ಇಂದಿರಾ ಅವರನ್ನು ಕುರಿತ

ಅನುರಾಧ ಟಿ. ರಾವ್

ಇಂದಿರಾ ಎಂದರೆ ಇವರೇ ಎಂದಿರಾ ?
ಶಕ್ತಿ, ಜೂನ್ ೨೪, ೧೯೮೪

ಇಂದಿರಾ ಎಂ. ಕೆ.

ಪತ್ರಿಕೆ–ಸಂಬಂಧ–ಅನುಭವ
(ಪತ್ರಿಕೆ ಮತ್ತು ಸಾಹಿತ್ಯ ವಿಚಾರ ಸಂಕಿರಣ)
" ಸತಿ ಅನುಸೂಯಾ ಕಸ್ತೂರಿ, ಅಕ್ಟೋಬರ್ ೧೯೬೩
" ಮರೆಯಲ್ಲಿ ನಿಂತ ಮಹಾನುಭಾವ, ಕಸ್ತೂರಿ ಎಪ್ರೀಲ್ ೧೯೬೫
" ಸಿಂಧುವಿನಲ್ಲಿ ಬಿಂದು, ಕಸ್ತೂರಿ, ವಸಂತ ಸಂಚಿಕೆ ಮೇ ೧೯೬೬
" ಕನ್ನಡ ಕಾದಂಬರಿಕಾರ್ತಿಯರು, ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ, ಜೂನ–ಡಿಸೆಂಬರ ೧೯೬೮
" ಮಲೆನಾಡ ಬದುಕು ಉತ್ಥಾನ ಸಂಕ್ರಾಂತಿ, ಸಂಚಿಕೆ ೧೯೭೦
" ಸಾಹಿತ್ಯ ಯಾತ್ರೆ ಯಾತ್ರಿಕ, ಕನ್ನಡ ರಾಜ್ಯೋತ್ಸವ ೧೯೭೨
" ನನ್ನ ನಾ ಕಂಡಂತೆ ಸಂಯುಕ್ತ ಕರ್ನಾಟಕ ೧–೭–೧೯೭೩
" (ಸಿದ್ಧಗಂಗಾ), ಮಹಿಳಾ ವರ್ಷ ೧೯೭೫
" ತ್ರಿಕರಣ ಶುದ್ಧಿ ಯಾತ್ರಿಕ, ೧೯೭೬, ದೀಪಾವಳಿ ಸಂಚಿಕೆ.
ಕನ್ನಡ ನುಡಿ ವಿಶೇಷ ಸಂಚಿಕೆ ೧೪, ೧೫, ೧೯೮೦
" ಎಂ. ಕೆ. ಇಂದಾರ (ಉತ್ತರ) ತರಂಗ ಆಗಸ್ಟ್ ೭, ೧೯೮೩
" ಕನ್ನಡದ ಕಾಶ್ಮೀರ ಯಾತ್ರಿಕ. ಮೇ–ಜೂನ್ ೧೯೮೪

ಈಶ್ವರಚಂದ್ರ

ದೇಸಾಯಿ ಗೀತಾ

ಪ್ರಣಯ ಪ್ರೀತಿ ಅಕ್ಷಯ ಸ್ಫೂರ್ತಿ, ಸಂಯುಕ್ತ ಕರ್ನಾಟಕ ೧೨–೯–೧೯೮೨
ಕಾದಂಬರಿ ಕ್ಷೇತ್ರದಲ್ಲಿ 'ಸ್ತ್ರೀ ಸಾಹಿತ್ಯ ಪುರುಷ ಸಾಹಿತ್ಯ, ಕಸ್ತೂರಿ ವಸಂತ ಸಂಚಿಕೆ ಮೇ ೧೯೭೧

ನಾಯಕ ಹಾ. ಮಾ.

ಕನ್ನಡ ಕಾದಂಬರಿ ಕನ್ನಡ ನುಡಿ (ಸಂ) ೩೦ (ಸಂ.) ೧೧, ೧೯೬೭
" ೧೯೮೩ರ ಕನ್ನಡಕಾವ್ಯ, ಗ್ರಂಥಲೋಕ, (ಸಂ.) ೮ (ಸಂ.) ೬ ಜೂನ ೧೯೮೩

ಭಟ್ ಪ್ರೇಮಾ

ಮಲೆನಾಡ ಜೇಂಗೊಡ, ಸ್ತ್ರೀ ಮಾರ್ಚ, ೧೦, ೧೯೬೫

ವಿಜಯಶ್ರೀ ಕೆ.

ಇಂದಿರಾ ಅವರ ಕಾದಂಬರಿಗಳು, (ಒಂದು ಸಮೀಕ್ಷೆ) ಜೀವನ, (ಸಂ.) ೩೧ (ಸಂ.) ೧೯೭೧

ಶ್ರೀನಿವಾಸ (ಸಂಗ್ರಾಹಕ)

ಎಂ. ಕೆ. ಇಂದಿರಾ ಅವರ ಕಾದಂಬರಿಗಳನ್ನು ಕುರಿತ ಪ್ರಶ್ನೋತ್ತರ ಕಾರ್ಯಕ್ರಮ, ಕನ್ನಡನುಡಿ ಸಂ. ೨೯, (ಸಂ.) ೨, ೧೯೬೬

ಶ್ರೀರಂಗ

'ಶೈಲಿಯ ಸೊಗಸು' ಪ್ರಜಾವಾಣಿ ೧೭–೧೦–೧೯೬೫

ಶೇಷಗಿರಿರಾವ್ ಎಲ್. ಎಸ್.

'ಪ್ರತಿಫಲನ' ಶ್ರೀಮತಿ ಇಂಡಿರಾ ಅವರ ಸಂದರ್ಶನ ಕುರಿತು
ಧ್ರುವ, ನವಂಬರ್, ೧೯೭೬

ಸಂಪಾದಕೀಯ

ನೃತ್ಯಕಲೆಯ ಕಲಶಕ್ಕೆ ಹೊಸ ಮೆರುಗು, ಸಂಯುಕ್ತ ಕರ್ನಾಟಕ
೨೭–೧೨–೧೯೭೨

ಸುದಾರ್ಥಿ

ಎಂ. ಕೆ. ಇಂದಿರಾ ಅವರ ಅನಿಸಿಕೆಗಳು (ಸಂದರ್ಶನ)
ಧ್ರುವ. ಅಗಸ್ಟ ೧೯೭೬

ಸುಜಾತಾ ಎಚ್. ಎಸ್.

ಸಂಪುಟ–೬ ಸಂಚಿಕೆ–೭ ೧೯೮೨ (ಅನುಭವಕುಂಜ ಸಮೀಕ್ಷೆ)

ವರದಿ

ವಾತ್ಸಲ್ಯಮಯಿ ಎಂ. ಕೆ. ಇಂದಿರಾ ಅವರಿಗೆ ಸನ್ಮಾನ, ಪ್ರಜಾವಾಣಿ
೨೮–೧೨–೧೯೭೩

ಇಂಗ್ಲಿಷ ಲೇಖನಗಳು

C. H. P. R.

"The River of Life" (Mysindia. June 16, 1963)

Kurthkoti K. D.

"Two Novels by. M. K. Indira."
Paper presented in All India Seminar on
"Women writers of fiction and woman in fiction"
Mysore daily, on 18, 19, 20 Nov., 1984,
Conducted by Dhwanyloka, Manasagangotri, Mysore

Sheshgiri Rao L.S.
Inadequencies of Woman writers and M. K. Indira.
Indian Express, 1976.

ಪತ್ರಗಳು

ಅನುಪಮಾ ನಿರಂಜನ	೧೩-೧೦-೧೯೮೪
ಇಂದಿರಾ ಎಂ. ಕೆ.	೫-೨-೧೯೮೪
ಕುರ್ತಕೋಟಿ ಕೆ. ಡಿ.	೨೮-೧೨-೧೯೬೨
	೧೩-೩-೧೯೬೩
	೧೬-೧-೧೯೬೩
ಜೋಶಿ ಜಿ. ಬಿ.	೨೦-೧೨-೧೯೬೨ (ಎಚ್. ಕೆ. ರಂಗನಾಥರಿಗೆ ಬರೆದ ಪತ್ರ)
ನಾಯಕ ಹಾ. ಮಾ.	೨೬-೮-೧೯೮೩ (ಇಂದಿರಾ ಅವರಿಗೆ ಬರೆದ ಪತ್ರ)
ಪಂಕಜ ಎ.	೧೬-೧೦-೧೯೮೪
ಪುರಾಣಿಕ ಕೃಷ್ಣಮೂರ್ತಿ	೧೩-೧೦-೧೯೮೪
ಭಟ್ ಪ್ರೇಮಾ	೧೮-೧೦-೧೯೮೪
ಮುಗಳಿ ರಂ. ಶ್ರೀ.	೨೬-೧೦-೧೯೮೪
ವಾಣಿ	೨೮-೧೦-೧೯೮೪
ಸುಜಾತಾ ಎಚ್. ಎಸ್.	೮-೩-೧೯೭೨ (ಇಂದಿರಾ ಅವರಿಗೆ ಬರೆದ ಪತ್ರ)

ಭಾಷಣಗಳು

ಇಂದಿರಾ ಎಂ. ಕೆ.

೧೯೮೧ ಜುಲೈ ೨೫ರಂದು ದಾವಣಗೆರೆಯ ಕಲಾರಂಗ ಸಂಸ್ಥೆಯ ವತಿಯಿಂದ ನಡೆದ ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನದ ಅಧ್ಯಕ್ಷೀಯ ಭಾಷಣ (ಅಪ್ರಕಟಿತ ಹಸ್ತಪ್ರತಿಯ ಆಧಾರ)

ದೇಸಾಯಿ ಶಾಂತಿನಾಥ

೨೭-೨-೧೯೮೫ರಂದು ಕನ್ನಡ ಕಾದಂಬರಿಗಳನ್ನು ಕುರಿತು ಕರ್ನಾಟಕ ವಿಶ್ವವಿದ್ಯಾಲಯದ ವಿಶೇಷೋಪನ್ಯಾಸ ಮಾಲೆಯ ಭಾಷಣ,

ನಿಸ್ಸಾರ್ ಅಹಮ್ಮದ್

೭-೧೦-೧೯೮೪ರಂದು ಇಂದಿರಾ ಅವರ ಸೂತ್ರದಾರಿ ಕಾದಂಬರಿಯ ಬಿಡುಗಡೆ ಸಮಾರಂಭದಲ್ಲಿ ಮಾಡಿದ ಭಾಷಣ,

ಸನ್ಮಾನ ಪತ್ರಗಳು

ಕರ್ನಾಟಕ ನಾಗರಿಕ ಸೇವಾ ಸಮಿತಿ (ಅಲಸೂರು) ಬೆಂಗಳೂರು. ೨೮-೧೧-೧೯೮೧ರಂದು ಅರ್ಪಿಸಿದ ಸನ್ಮಾನಪತ್ರ.

ನವಚೇತನ ಕನ್ನಡ ಕಲಾವೃಂದ, ದಿನಾಂಕ ೩೧-೫-೧೯೭೧ರಂದು ಇಂದಿರಾ ಅವರಿಗೆ ಅರ್ಪಿಸಿದ ಸನ್ಮಾನಪತ್ರ.

ಹೊಸನಗರ ತಾಲ್ಲೂಕು ಕನ್ನಡ ಸಂಘ, ಶಿವಮೊಗ್ಗ ಜಿಲ್ಲಾ ಪ್ರಥಮ ಸಾಹಿತ್ಯ ಸಮ್ಮೇಳನದಂದು ಗೌರವಪೂರ್ವಕ ಅರ್ಪಿಸಿದ ಸನ್ಮಾನಪತ್ರ.

ಮಹಾಪ್ರಬಂಧ (ಅಪ್ರಕಟಿತ)

ಶಕುಂತಲಾ ದುರಗಿ ಆಧುನಿಕ ಕನ್ನಡದಲ್ಲಿ ಮಹಿಳಾ ಸಾಹಿತ್ಯ
೧೯೮೨ ಕಲ್ಬುರ್ಗಿ ವಿಶ್ವವಿದ್ಯಾಲಯ

ವಿ. ಸೂ. ಕಾಲಾನುಕ್ರಮ ಪಟ್ಟಿಯಲ್ಲಿ ಕೊಟ್ಟಿರುವ ಇಂದಿರಾ ಅವರ ಎಲ್ಲ ಕೃತಿಗಳನ್ನು ಅಭ್ಯಾಸಕ್ಕೆ ಸಹಾಯಕ ಸಾಹಿತ್ಯವನ್ನಾಗಿ ಬಳಸಿಕೊಳ್ಳಲಾಗಿದೆ.

ಅಕಾರಾದಿ ಸೂಚಿ

(ಅ)

ಅಂಜಲಿ–೨೪
ಅಂಬರದ ಅಪ್ಸರೆ–೨೬೦
ಅಂಬಿಲ್ ನರಸಿಂಹಯ್ಯಂಗಾರ–೧೫
ಅಕ್ಕನಾಗಲಾಂಬಿಕೆ–೨೪
ಅಕ್ಕಮಹಾದೇವಿ–೯
ಅಚ್ಚಮಾಂಬೆ–೨೪
ಅಚ್ಯುತದೇವರಾಯ–೧೦
ಅಜ್ಜಂಪುರ–೩೫
ಅಡವಿ ಹುಡುಗಿ–೩೮–೪೭
ಅದೇ ಊರು ಅದೇ ಮರ–೧೯
ಅನಂತಗೀತ–೨೬
ಅನಂತಮೂರ್ತಿ–೩೩
ಅನಂತಯ್ಯ–ಎ–೩೬
ಅಂನತಶರ್ಮ–೩೬, ೧೦೨, ೧೦೩,
೧೦೬, ೧೦೭
ಅನಸೂಯಾ–೫೨, ೫೩, ೫೪
ಅ್ಯನಿಬೆಸೆಂಟ್–೧೫
ಅನುಭವಕುಂಜ–೨೭೫
ಅಪಜಯ–೨೫
ಅಪಸ್ವರ–೨೫
ಅಬಲಾ ಸಚ್ಚರಿತ್ರಮಾಲಾ–೨೪
ಅಭಯಾಶ್ರಮ–೧೮
ಅಮರಾವತಿ–೮೭
ಅಮೃತಕೌರ್–೧೫
ಅಯ್ಯರ ಕೆ. ವಿ.–೭೮
ಅವಳ ಮಗಳು–೨೫
ಅಶ್ವಿನಿ–೨೭
ಅಹಲ್ಯಾ–೨೮
ಆಳಸಿಂಗಾಚಾರ್ಯ–೭೮

(ಆ)

ಆಕಾಶಗಂಗೆ–೨೬
ಆತ್ಮಸಖಿ–೧೦೧
ಆದರ್ಶ ಜೈನ ಮಹಿಳೆಯರು–೨೯
ಆಧುನಿಕ ಭಾರತದಲ್ಲಿ ನೃತ್ಯ–೨೯
ಆನಂದ–೫೫
ಆನಂದ ಮಠ–೫೫
ಆಭರಣ–೧೭೪
ಆಯ್ದಕ್ಕಿಲಕ್ಷ್ಮಮ್ಮ–೯
ಆರ್ಯಮಹಿಳಾ ಸಮಾಜ–೧೦
ಆರಾಧನೆ–೨೭
ಆರೋಗ್ಯದರ್ಶನ–೨೬
ಆಹುತಿ–೨೩

(ಇ)

ಇಂದಿರಾಬಾಯಿ–೧೨–೨೨
ಇಂದಿರೆ–೨೨
ಇದ್ದು ಹೋದ ಜೀವ–೭೭
ಇನಾಂದಾರ ವಿ. ಎಮ್.–೨೧

(ಈ)

ಈಚನೂರು ಜಯಲಕ್ಷ್ಮಿ–೨೭
ಈಚನೂರು ಶಾಂತಾ–೨೭

(ಉ)

ಉಚ್ಚವರ್ಣದ ಹಿಂದೂ ನಾರಿ–೧೪
ಉದಯರವಿ–
ಉದಯರಾಗ–೨೭
ಉದ್ದಾಲಕನ ಹಾಡು–೧೦
ಉಮಾದೇವಿ ಎಂ. ಆರ್.–೨೮

(ಎ)

ಎರಡು ಕನಸು–೨೪
ಎರಡು ಧ್ರುವ–೧೮
ಎರಡು ಮುಖ–೨೬
ಎಲೆ–೨೬

(ಒ)

ಒಂಟಿ ಮೋಡ–೨೭
ಒಡಲು–೨೬

(ಔ)

ಔದಾರ್ಯದ ಉರುಳಲ್ಲಿ–೧೯

(ಕ)

ಕಂಕಣ–೨೫, ೧೭೮, ೧೮೩
ಕಂತಿಹಂಪನ ಸಮಸ್ಯೆ–೯
ಕಂಬನಿ–೨೩
ಕಂಬನಿಯ ಕುಯಿಲು–೨೦
ಕಣವಿ ಶಾಂತಾದೇವಿ–೨೭
ಕಣ್ಮಣಿ–೨೬
ಕತೆಗಾರ–೧೫೩
ಕಥಾಂಜಲಿ–೪೭
ಕನಸಿನಮನೆ–೨೧
ಕನ್ನಡತಾಯಿ–೨೪
ಕನ್ನಡಿ–೨೩
ಕರ್ನಾಟಕ ನಂದಿನಿ–೨೩
ಕರ್ನಾಟಕ ಲೇಖಕಿಯರ ಸಂಘ–೨೯
ಕಪಾಲ ಕುಂಡಲಿ–೪೭
ಕಪ್ಪು–ಬಿಳುಪು–೨೬
ಕಮಲಾಂಬಾ ಶಿಖರಾಂಬಾ–೨೪
ಕಮಲಾ ಹಂಪನಾ–೨೫
ಕರವೀರಶೆಟ್ಟರ ಸಂಗಮ್ಮ–೨೮
ಕಲ್ಪನಾವಿಲಾಸ–೨೬೩
ಕಲಾದರ್ಶಿ–೫೯
ಕಲ್ಯಾಣಮ್ಮ ಆರ್.–೨೩, ೩೨
ಕವಲು–೨೫
ಕವಿಚಕ್ರವರ್ತಿ ಪೊನ್ನ–೨೮
ಕರ್ವೆ–೧೩
ಕಸ್ತೂರಬಾ–೧೫
ಕಸ್ತೂರಿ–೨೪
ಕೃಷ್ಣದಾನಾಮೃತ–೧೦
ಕೃಷ್ಣಲೀಲಾ–
ಕಾಖಂಡಕಿ ರೇಖಾ–೨೭
ಕಾರ್ನಾಡ ರಾಧ–೨೧
ಕಾನೂರು ಹೆಗ್ಗಡತಿ–೨೧, ೭೮
ಕಾಮತ್ ಎಂ. ಎಸ್.–೨೧
ಕಾಮಾಕ್ಷಮ್ಮ ಬಿ –೨೭
ಕಾರಂತ್ ಶಿವರಾಮ–೧೯
ಕಾಯಮ್ಮ–೯
ಕಾಲೇಜು ಸಸ್ಯ ವಿಜ್ಞಾನ–೨೭
ಕಾಳವ್ವೆ–೯
ಕಿಂಗಲಿಯರ್–೧೮
ಕೀಲುಗೊಂಬೆ–೨೫
ಕ್ಷಿತಿಜ–೨೯
ಕುಂಕುಮ ಬಲ–೨೪
ಕುಂದಾಪುರ ಉಮಾಬಾಯಿ–೨೧
ಕುರ್ತಕೋಟಿ ಕೆ. ಡಿ.–೫೯. ೬೦, ೬೧, ೬೨, ೧೪೧, ೧೬೨
ಕುಲಕರ್ಣಿ ಗೀತಾ–೨೬
ಕುಲಶೇಖರಿ–೨೯, ೬೬
ಕುವೆಂಪು–೨೧, ೪೫, ೨೮೧
ಕೆಂಪಮ್ಮನ ಮಗು–೨೬
ಕೆರೂರು ವಾಸುದೇವಾಚಾರ್ಯ–೨೨
ಕೆಳದಿ ಚೆನ್ನಮ್ಮ–೨೪
ಕೇಳು ಕಿಶೋರಿ–೨೬
ಕೊಡಗಿನ ಗೌರಮ್ಮ–೨೩, ೩೨
ಕೋಹಿನೂರು–೪೭
ಕೋಟೆ–೭೭
ಕೋಳಿವಾಡದ ಕೃಷ್ಣಾಬಾಯಿ–೨೮

(ಗ)

ಗಂಗವ್ವ ಮತ್ತು ಗಂಗಾಬಾಯಿ–೩೩
ಗಂಗಾಂಬಿಕೆ–೯
ಗಂಡಸರು–೨೭
ಗದಗಕರ–ಲ. ಭೀ–೧೫
ಗರಿಗೆದರಿ–೨೯
ಗಲಗಲಿ ಅವ್ವನವರು–೧೦
ಗವರ್ನಮೆಂಟ್ ಆ್ಯಕ್ಟ್–೧೩
ಗಳಗನಾಥ–೧೫
ಗೃಹಲಕ್ಷ್ಮಿ–೧೫
ಗಾಂಧೀಜಿ–೧೫
ಗ್ರಾಮಾಯಣ–೭೭
ಗಿರಿಧಾಮ–೨೬

ಗಿರಿಜಾ ಟಿ.–೨೭
ಗಿರಿನವಿಲು–೭೭
ಗಿರಿಬಾಲೆ–೯೫, ೨೯೭
ಗುಂಡ–೮೪
ಗುಡ್ಡವ್ವ–೯
ಗುಡಿಬಂಡೆ ಪೂರ್ಣಿಮಾ–೨೯
ಗುಳವಾಡಿ ವೆಂಕಟರಾಯ–೧೮, ೨೨
ಗೆಜ್ಜೆಪೂಜೆ–೩೪, ೧೫೧, ೨೦೯, ೩೧೮
ಗೆಜ್ಜೆಯ ಹೆಜ್ಜೆಯನುಡಿ–೨೮
ಗೋಕರ್ಣ ಮಹಾತ್ಮೆ–೧೦
ಗೋಕಾಕ ವಿ. ಕೃ.–೭೭
ಗೋಖಲೆ–೧೩

(ಚ)

ಚಂದನದಗೊಂಬೆ–೨೦
ಚಂದ್ರಿಕಾ–೨೮
ಚಂದ್ರಭಾಗದೇವಿ–೨೮
ಚಂದ್ರಹಾಸನ ಚರಿತ್ರೆ–೧೦
ಚಿಕ್ಕವೀರ ರಾಜೇಂದ್ರ–೨೦
ಚಿಗುರು–೨೩
ಚಿತ್ರಮೋಹನ–೨೬
ಚಿದ್ವಿಲಾಸ–೧೭೫
ಚಿಪ್ಪಿನೊಳಗಣಮುತ್ತು–೨೬
ಚೆಲುವಾಂಬಾ–೧೦
ಚೆಲ್ಲಮ್ಮ–೧೦
ಚೋಮನದುಡಿ–೧೯

(ಜ)

ಜಯಂತಿಬಾಯಿ–೨೭
ಜಯಗೀತ–೨೫
ಜಯಜಕ್ಷ್ಮಿದೇವಿ ಸಿ. ಎನ್.–೨೭
ಜಯಲಕ್ಷ್ಮಿ ಎಂ. ಕೆ.–೨೭
ಜರತಾರಿ ಜಗದ್ಗುರು–೨೦
ಜಾತ್ರೆಮುಗಿದಿತ್ತು–೨೭
ಜಬಾಲ–೨೭
ಜಾತಿಕಟ್ಟುವಳು–೨೦೫, ೨೯೮, ೨೯೯
ಜೀವನ ಜ್ವಾಲೆ–೨೭
ಜ್ವಾಲಾಮುಖಿಯ ಮೇಲೆ–೨೦

(ಟ)

ಟು–ಲೆಟ್–೧೮೫

(ಡ)

ಡಾಕ್ಟರ್–೧೭೪

(ತ)

ತಗ್ಗಿನ ಮನೆ ಸೀತೆ–೧೦೮. ೨೮೨, ೨೮೬, ೨೮೯, ೨೯೨
ತಪಸ್ವಿನಿ–೨೮
ತಪೋವನದಲ್ಲಿ–೧೯೭, ೨೯೮
ತರಂಗ ಲೀಲಾ–೨೮
ತಾಯಿನಾಡು–೫೩
ತಾಯಿಮಗು–೨೬
ತಾರಕ ತಂಬೂರಿ–೨೮
ತಾಳಿದವರು–೧೨೫
ತಿರುಮಲಾಂಬಾ–೨೨, ೨೩, ೩೨
ತಿರುಮಲೆರಾಜಮ್ಮ–೨೮
ತುಂಗಭದ್ರಾ–೩೩, ೬೨, ೬೩, ೬೪, ೧೩೯ ರಿಂದ ೧೪೯, ೩೨೧
ತ್ಯಾಗಪತ್ರ–೨೭
ತ್ರಿವೇಣಿ–೨೫, ೩೩, ೫೪, ೧೭೮, ೧೮೫
ತ್ರಿಶಂಕು–೨೧

(ದ)

ದಕ್ಷಕನ್ಯಾ–೨೩
ದರ್ಬಾರಿರಂಗ–೨೭
ದಾಸಪ್ಪಯಶೋಧರ–೨೭
ದೀಪಮಿಂಚಿತು–೨೬
ದ್ವಿವೇದುಲ ವಿಶಾಲಾಕ್ಷಿ–೩೨
ದುರ್ಗೇಶನಂದಿನಿ–೧೮, ೩೮
ದೂರದಬೆಟ್ಟ–೨೫
ದೇವಿಚೌಧುರಾಣಿ–೧೮, ೩೮

ದೇಶಭಕ್ತಿಗೀತೆಗಳು–೨೮
ದೇಶಮುಖ ದುರ್ಗಾಬಾಯಿ–೧೫

(ನ)
ನಕ್ಕಿತು ಹಾಲಿನ ಬಟ್ಟಲು–೨೮
ನಗಬೇಕು–೨೬೨
ನಗ್ನಸತ್ಯ–೧೯
ನಗುವನಂದ–೪೭
ನಗೆಗಡಲು–೪೭
ನಟಸಾರ್ವಭೌಮ–೧೯
ನಟಿ–೨೬
ನನ್ನ ಚಿಕ್ಕ ತಂದೆ–೨೧
ನನ್ನ ಚಿಕ್ಕ ತಾಯಿ–೨೧
ನನ್ನವಳು–೨೬
ನಭಾ–೨೨
ನಮ್ಮ ಹಿಂದೂಸ್ಥಾನ–೨೩
ನವಜೀವನ–೪೭
ನವರತ್ನ–೨೪೯
ನಳಚರಿತ್ರೆ–೧೦
ನಾಗರಾಜಯ್ಯ ಹಂಪ–೨೯
ನಾಗರಿಕ–೭೮
ನಾಗಲಾಂಬಿಕಾ–೯
ನಾನುಕೊಂದ ಹುಡುಗಿ–೪೮
ನಾಯಕ ಹಾ. ಮಾ.–೨೯, ೫೨
ನಾಯ್ಡು ಸರೋಜಿನಿ–೨೭
ನಾವು ಕಟ್ಟಿದ ಸ್ವರ್ಗ–೧೯
ನಿಜಗುಣಶಿವಯೋಗಿ–೨೭
ನಿರುಪಮಾ–೪೫
ನೀತಿಚಿಂತಾಮಣಿ–೪೦
ನೀರದಾ–೨೩
ನೀರಿಗೆ ನೈದಿಲೆ ಶೃಂಗಾರ–೨೬
ನೀಲಗಾರ ಶಾಂತಾಬಾಯಿ–೨೨
ನೀಲಾಂಬಿಕೆ–೯
ನೀಳಾದೇವಿ–೨೭
ನೂರೊಂದು ಬಾಗಿಲು–೧೬೦
ನೂಲವಿಣಿ–೨೬
ನೂಲುನೇಯ್ದ ಚಿತ್ರ–೨೬
ನೇಸರು ನೆಳಲು–೨೭

(ಪ)
ಪಂಕಜ–೨೮
ಪಂಚಕಜ್ಜಾಯ–೨೩
ಪಂಚಾಗ್ನಿ ಮಧ್ಯೆ–೨೯
ಪಂಜೆ ಮಂಗೇಶರಾಯ–೨೧
ಪಂಡಿತೆ ರಮಾಬಾಯಿ–೧೩
ಪಟ್ಟಣಶೆಟ್ಟಿ ಮಾಲತಿ–೨೨
ಪಟ್ಟಾಭಿ ಆರ್ಯಾಂಬ–೨೬
ಪಣಜೀಕರ ಕೃಷ್ಣಾಬಾಯಿ–೨೫
ಪ್ರತಾಪರುದ್ರದೇವ–೧೮
ಪರಿಸರದಲ್ಲಿ–೨೯
ಪದ್ಮನಯನೆ–೧೮
ಪದ್ಮಿನೀಕಲ್ಯಾಣ–೧೦
ಪವಾಡ–೨೬೭
ಪ್ರಮಿಳಾರ್ಜುನೀಯ–೧೮
ಪರ್ವ–೩೧
ಪ್ರಶ್ನೆ–೨೯
ಪಾದುಕಾ ಪಟ್ಟಾಭಿಷೇಕ–೪೬
ಪಾರ್ವತಿ ಎಚ್. ಎಸ್.–೨೭
ಪುಣೇಕರ ಶಂಕರಮೊಕಾಶಿ–೩೩
ಪುರಾಣಿಕ ಕೃಷ್ಣಮೂರ್ತಿ–೨೧, ೬೯
ಪುಷ್ಪಾ ಎಸ್. ರಾವ್–೨೭
ಪೂರ್ಣಕಲಾ–೨೩
ಪೂರ್ವಾಪರ–೧೭೭
ಪ್ರೇಮವಿವಾಹ–೨೩
ಪ್ರೇಮಚಂದ–೫೨
ಪ್ರೇಮಾಂಕುರ–೪೭
ಪೌರ್ಣಮಿ–೨೪೫
ಫಣಿಯಮ್ಮ–೪೬, ೨೩೧, ೨೮೨, ೨೮೮

(ಬ)
ಬಡತನದಲ್ಲಿ ಭಾಗ್ಯ–೩೫
ಬದಲಾದ ಪ್ರತಿಬಿಂಬ–೨೭
ಬದುಕಿನ ಬವಣೆಯಲ್ಲಿ–೨೬
ಬಯಲು ಆಲಯ–೨೭
ಬ್ರಹ್ಮಕೊರವಂಜಿ–೧೦

ಬ್ರಹ್ಮಚಾರಿ–೧೯೩
ಬಾಣ–೧೮
ಬಾಣಂತಿ–ಹಸ್ತ–೪೭
ಬಾ ಪರೀಕ್ಷೆಗೆ–೨೮
ಬಾಲಿಕಾ ಪಾಠಶಾಲೆ–೧೩
ಬಾಳುರಿ–೨೦
ಬಾಳೆಯ ನೆರಳು–೨೪
ಬಾಳ್ವೆ–೭೮
ಬಿಡುಗಡೆಯ ಬೇಡಿ–೨೦
ಬಿದಿಗೆ ಚಂದ್ರಮ ಡೊಂಕು–೧೫೯
ಬಿಳಿಯ ರಕ್ತ–೨೭
ಬೀದಿಗೆ ಬಿದ್ದವಳು–೨೦
ಬೀಸಿದ ಬಲೆ–೨೬
ಬೆಕ್ಕಿನ ಕಣ್ಣು–೨೫
ಬೆಳಗೆರೆ ಜಾನಕಮ್ಮ–೨೮
ಬೆಳ್ಳಿಮೋಡ–೨೬
ಬೊಂತಾದೇವಿ–೯
ಬೋಳಾರು ಬಾಬುರಾವ್–೧೮
ಭಕ್ತಧ್ರುವ–೪೫
ಭಕ್ತ ಪ್ರಹ್ಲಾದ–೪೫
ಭಕ್ತಿ ಗೀತಾವಳಿ–೨೩
ಭಕ್ತವಿಜಾರಾ–೨೩
ಭಟ್ಟ ಪ್ರೇಮಾ–೨೭, ೬೬, ೭೭
ಭಾಗಮ್ಮ–೧೦
ಭಾರತದ ಮಹಿಳೆ–೧೫
ಭಾರತಿ–೨೮
ಭೂಕೈಲಾಸ–೩೫

(ಮ)

ಮಂಗಳಸೂತ್ರ–೧೦
ಮಂಗಳಾ ಸತ್ಯನ್–೨೭
ಮಕ್ಕಳಕೂಟ–೨೩
ಮಕ್ಕಳ ಪುಸ್ತಕ–೪೭
ಮಣಿಮಾಲಾ–೨೩
ಮಧುವನ–೨೨೬
ಮನತುಂಬಿದ ಮಡದಿ–೧೧೫, ೨೯೭
ಮನ್ಮಥ ವಿಜಯ–೪೫
ಮನೆ ಕೊಟ್ಟು ನೋಡಿ–೧೯೦
ಮನೆ ಮಗಳು–೨೪
ಮನೋಮಂದಿರ–೧೫೫
ಮರಳಿ ಬಂದ ಮಮತೆ–೨೬
ಮರಳಿ ಮಣ್ಣಿಗೆ–೧೯
ಮರುವಿಚಾರ–೨೭
ಮಲೆಗಳಲ್ಲಿ ಮದುಮಗಳು–೨೧
ಮಸಣದ ಹೂ–೨೦
ಮಸಣಮ್ಮ–೯
ಮಹಾಕ್ಷತ್ರಿಯ–೨೦
ಮಹಾದೇವ ಗೋವಿಂದರಾನಡೆ–೧೨
ಮಹಾಸತಿ–೨೫
ಮಹಿಷಿ ಸರೋಜಿನಿ–೨೫
ಮಹಿಳೆಯರ ಅಲಂಕಾರ–೨೪
ಮಾಧವಿ–೨೩
ಮಾರುತಿ–ಸುಕನ್ಯಾ–೨೯
ಮಾಸಿದ ಸೆರಗು–೨೭
ಮಾಸ್ತಿ–೨೦
ಮ್ಯಾಕಬೆತ್–೧೮
ಮಾಳವಾಡ ಶಾಂತಾದೇವಿ–೨೪
ಮಿರ್ಜಿ ಅಣ್ಣಾರಾವ್–೨೧
ಮಿಡ್ ಸಮರ್ ನೈಟ್ ಡ್ರೀಮ್ಸ್–೧೮
ಮಿಶನರಿಗಳು–೧೪
ಮುಕ್ತಾಯಕ್ಕ–೯
ಮುಕ್ತಿ–೩೩
ಮುಗಳಿ ರಂ ಶ್ರೀ–೨೦
ಮುಸುಕು–೧೬೮
ಮೂಕಜ್ಜಿಯ ಕನಸುಗಳು–೧೯
ಮೂರ್ತಿ ನಳಿನಿ–೨೭
ಮೊಗ್ಗು–೨೪
ಮೊಗ್ಗೆಯ ಮಾಲೆ–೨೪
ಮೋರೆಗೆ ನೀರು ತಂದ ಹಾಡುಗಳು–೧೦
ಮೋಳಿಗೆ ರಾಣಿ ಮಹಾದೇವಿ–೯

(ಯ)

ಯಮುನಾ ಪರ್ಯಟನ–೧೮
ಯಾರು ಹಿತವರು ?–೧೬೪

(ರ)

ರಂಗನಾಯಕಮ್ಮ–೩೨
ರಂಗಮ್ಮನ ವಠಾರ–೨೦
ರಕ್ತರಾತ್ರಿ–೨೦
ರಣಕೇಸರಿ–೨೩
ರಮಾನಂದ–೨೩
ರಸಪಾಕ–೨೪
ರಸವಾಹಿನಿ–೧೧೫
ರಾಜವಾಡೆ ಸರಸ್ವತಿಬಾಯಿ–೨೪
ರಾಜಾರಾಮ ಮೋಹನರಾಯ–೧೨
ರಾಮರೆಡ್ಡಿ ಅನುಸೂಯಾ–೨೭
ರಾಮವರ್ಮ ಲೀಲಾವತಿ––೪೫
ರಾಮಯಣ ದರ್ಶನ–೭೮
ರಾಯಮ್ಮ–೯
ರಾವ್ ಕೆ. ವಿ.–೭೮
ರಾವ್ ಬಹಾದ್ದೂರ–೨೧,೭೭
ರುಕ್ಮಿಣೀ ಪರಿಣಯ–೧೦
ರೂವಾರಿಯ ಲಕ್ಷ್ಮಿ–೨೬
ರೇಚವ್ವೆ–೯
ರೆಮ್ಮವ್ವೆ–೯

(ಲ)

ಲವಕುಶರ ಕಾಳಗ–೧೦
ಲಕ್ಷ್ಮಮ್ಮ–೯
ಲಾರ್ಡ ವಿಲಿಯಂ ಬೆಂಟಿಂಕ್–೧೨
ಲಿಗಾಡೆ ಜಯದೇವಿ ತಾಯಿ–೨೫

(ವ)

ವಚನರಾಮಾಯಣ–೭೮
ವಜ್ರದಕಳ್ಳ–೪೭
ವರದಾಚಾರ್ಯ–೪೫
ವರದಾಂಬಿಕಾ ಪರಿಣಯ–೧೦
ವಸಂತಗಾನ–೨೫
ವಸ್ತ್ರದ ಶಶಿಕಾಲ–೨೮
ವರ್ಣಲೀಲೆ–೧೫೧–೧೫೨
ವಾಣಿ–೨೪
ವಾಗ್ದೇವಿ–೧೮
ವಾಲ್ಮೀಕಿ ರಾಮಾಯಣ–೭೮
ವಿಕಟ ಕವಿ–೨೩
ವಿಧವಾವಪನ ಅನಾಚಾರ ಮಂಡನ–೧೫
ವಿದ್ಯುಲ್ಲತಾ–೨೨
ವಿಮಲೆ–೨೪
ವಿರಹೋತ್ಸವ–೨೮
ವೀರಮ್ಮ–೯
ವಿರಾಗಿಣಿ–೨೨
ವೀರ ಕಂಪಣರಾಯ ಚರಿತ–೨೦
ವೀರೇಶ ಲಿಂಗಂ ಪಂತಲು–೩೧
ವಿವೇಕಾನಂದಾ ದೇವಿ–೩೨
ವಿಶ್ವನಾಥ ಟಿ.–೩೬
ವಿಶ್ವಾಮಿತ್ರನ ಸೃಷ್ಟಿ–೩೩
ವಿಷವೃಕ್ಷ–೪೭
ವೃತ್ತಾಂತ ಪತ್ರಿಕೆ–೪೭
ವೆಂಕಟಾಚಲ ಮಹಾತ್ಮೆ–೫
ವೆಂಕಟಾಚಾರ್ಯ ಬಿ.–೧೮,೩೮,೪೭
ವೈಶಾಖ–೨೦

(ಶ)

ಶಂಕರ ಗಂಡನ ಕಥೆಯ ಹಾಡು–೧೦
ಶನಿಸಂತಾನ–೧೯
ಶರಪಂಜರ–೨೫
ಶಾಂತಲಾ–೭೮
ಶಾಂತಿನಾಥ–೨೮
ಶಾಂತೇಶ್ವರ ವೀಣಾ–೨೭
ಶಾರದಾಸದನ–೧೩
ಶಾರದಾ ಸ್ತ್ರೀ ಸಮಾಜ–೨೩
ಶಾಸ್ತ್ರಿಹರ ಪ್ರಸಾದ–೧೫
ಶ್ರೀಕಂಠೇಶ ಗೌಡ–೧೮
ಶ್ರೀ ಕೃಷ್ಣಲೀಲಾ–೫೨
ಶ್ರೀ ನಿವಾಸ–೨೨
ಶ್ರೀರಂಗ–೩೩,೨೨೦
ಶುಕ್ರವಾರ ಶನಿವಾರದ ಹಾಡು–೧೬
ಶುಭಮಂಗಳ–೨೪

ಶೃಂಗಾರಮ್ಮ–೧೦
ಶೃಂಗಾರ ತಾರತಮ್ಯ–೧೦

(ಷ)

ಷಹಾಜಾನ್–೨೩

(ಸ)

ಸಂಕಲ್ಪ–೨೯
ಸಂಕೋಲೆಯೊಳಗಿಂದ–೨೬
ಸಂಗಮ–೨೭
ಸಂಜೆ ಗತ್ತಲು–೧೯
ಸಂಜೆ ಮಲ್ಲಿಗೆ–೨೭
ಸತಿ ಪದ್ಮಿನಿ–೨೩
ಸತಿ ಹಿತೈಷಿಣಿ–೨೪
ಸತ್ಯಹರಿಶ್ಚಂದ್ರ–೪೬
ಸದಾನಂದ–೨೧೬,೩೦೪,೩೧೨,೩೧೪,
ಸದಾರಮೆ–೪೫
ಸದ್ಗುಣಿ ಕೃಷ್ಣಾಬಾಯಿ–೨೨
ಸಂಧ್ಯಾರಾಗ–೧೯
ಸಂಧ್ಯಾಶರ್ಮ–೨೭
ಸಂಪೂರ್ಣರಾಮಾಯಣ–೪೬
ಸಂಬಂಧ–
ಸನ್ಮಾರ್ಗ–೨೩
ಸಮರಸವೇ ಜೀವನ–೨೦
ಸಮಸ್ಯೆಯ ಮಗು–೨೫
ಸರಸ್ವತಿ ದೇವಿ–೩೨
ಸರಸ್ವತಿ ಮಾಸ ಪತ್ರಿಕೆ–೨೩
ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ–೧೯
ಸರೋಜಾ ರಾವ್ ಕೆ.–೨೭
ಸ್ವಪ್ನಮಂದಿರ–೨೬
ಸವತಿಯ ನೆರಳು–೨೩
ಸರ್ವ ಮಂಗಳ–೨೯
ಸಸ್ಯಶಾಮಲಾ–೨೬
ಸಾಯಿಸುತೆ–೨೭
ಸ್ವಾಭಿಮಾನಿ ಬೆಳವಡಿ ರಾಣಿ–೨೪
ಸಿದ್ಧರಾಮಪುರಾಣ–೨೮
ಸೀತಾಕಲ್ಯಾಣ–೧೦
ಸೀತಾರಾಮ ವಿ.–೭೮
ಸಂಖಲತಾ–
ಸುಖಾಂತ–೧೫೭
ಸುಜಾತಾ ಎಚ್. ಎನ್–೨೮
ಸುದರ್ಶನ–೨೦
ಸುದಾಮನ ಹಾಡು–೧೦
ಸೂತ್ರಧಾರಿ–೮೯–೯೧
ಸ್ಫೂರ್ತಿ–೨೫೫
ಸುವರ್ಣೆಯ ಗ್ರೀನ್‌ರೂಂ–೨೬
ಸೂರ್ಯಕಾಂತ–೧೮
ಸೊಬಗಿನ ಮನೆ–೨೪
ಸೋತು ಗೆದ್ದವಳು–೨೫

(ಹ)

ಹಂಸಗೀತೆ–೨೦
ಹಡಪದ ಲಿಂಗಮ್ಮ–೯
ಹಣ್ಣೆಲೆ ಚಿಗುರಿದಾಗ–೩೨
ಹದಿಬದೆಯ ಧರ್ಮ–೧೦
ಹರಪನಹಳ್ಳಿ ಭೀಮವ್ವ–೧೦
ಹಸಿವು–೫೮
ಹಾಡಿನ ವೆಂಕಟಮ್ಮ–೨೮
ಹಾಡಿನ ಹುಚ್ಚಮ್ಮ–೨೮
ಹಾಲ್ಸ್ವಾಮಿ–೩೫
ಹಿಮದ ಹೂ–೨೬
ಹೂಬಾಣ–೧೭೧
ಹೂ ಬಿಸಿಲು–೨೪
ಹೂವು ಹಣ್ಣು–೩೩,–೨೧೫
ಹೆಣ್ಣಿನ ಆಕಾಂಕ್ಷೆ–೧೧೯
ಹೆಣ್ಣು ಹೃದಯ–೨೭
ಹೆತ್ತೊಡಲು–೭೨,೨೪೯
ಹೆಳವನ ಕಟ್ಟೆ ಗಿರಿಯಮ್ಮ–೧೦
ಹೇಮಾ–೨೮
ಹೆಳವನ ಕಟ್ಟೆ ಗಿರಿಯಮ್ಮ–೧೦
ಹೊಂಗನಸು–೨೬
ಹೋಂ ರೂಲ್–೩೫
ಹೊನ್ನಮ್ಮ–೧೦
ಹೊಯ್ಸಳ–೩೬
ಹೊಸ ಬೆಳಕು–೨೪

ಮಹಾ ಪ್ರಬಂಧ

5

Amount
117550
236301
597150
46662
1600
121925
63371
3680
2320
500000
17948
167499